# ಚಿಂತನ ಬಯಲು

ತ್ರೈಮಾಸಿಕ ISSN 2278-2192



ಸಂಪುಟ : 13, ಸಂಚಿಕೆ : 4 ಎಪ್ರಿಲ್–ಜೂನ್ 2025
Volume : 13, Issue : 4 April-June 2025

# ಚಿಂತನ ಬಯಲು

ಸಂಪಾದಕಿ
**ರೇಶ್ಮಾ ಜಿ. ಭಟ್**

ಸಂಪಾದಕೀಯ ಸಲಹೆ
**ಡಾ. ಅಜಕ್ಕಳ ಗಿರೀಶ ಭಟ್**
**ಡಾ. ಶ್ರೀಧರ್ ಹೆಚ್.ಜಿ.**
**ಡಾ. ವರದರಾಜ ಚಂದ್ರಗಿರಿ**
**ಡಾ. ಜಿ.ಬಿ. ಹರೀಶ**
**ಶ್ರೀ ಎಂ.ಎ. ಸುಬ್ರಹ್ಮಣ್ಯ**

**ಚಿಂತನ ಬಯಲು**
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574219

**CHINTHANA BAYALU**
Kannada Quarterly; A Peer Reviewed Journal ISSN: 2278-2192
Included in UGC - CARE List
Volume 13, Issue 4, April-June 2025

Edited, Published, Printed & Owned by
**Reshma G. Bhat**
Door No. 15-109, Modankapu Post
Bantwal Taluk, Dakshina Kannada - 574219
Karnataka
Mobile : 8217703698
Email : chinthanabayalu@gmail.com
website: www.chinthanabayalu.in

© : Reserved

Size : Dy 1/8

Paper Used : 70 GSM

Pages : 232

Price : Rs. 50

Cover Photo : **Girish Bhat**

Cover Design : **Kallur Nagesh**

Designed & Printed at :
**Aakrithi Prints**
Maximus Complex
Light House Hill Road
Mangaluru - 575 001
Tel. : 0824 2972002 / 7019225774

---

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

# ಪುಟನೋಟ

1. ಕರ್ನಾಟಕದಲ್ಲಿ ಬಾಹುಬಲಿಯ ಉಬ್ಬುಶಿಲ್ಪಗಳು

❖ **ಡಾ. ಅಪ್ಪಣ್ಣ ಎನ್. ಹಂಜೆ / 9**

2. ಮೊಗಸಾಲೆಯವರ ಕಾದಂಬರಿಗಳು

❖ **ಡಾ. ಬಿ. ಜನಾರ್ದನ ಭಟ್ / 16**

3. ಉದ್ಯೋಗಪರ್ವದಲ್ಲಿ ಶ್ರೀಕೃಷ್ಣನ ಪಾತ್ರದ ಪ್ರಾಮುಖ್ಯ

❖ **ಡಾ. ಟಿ.ಡಿ. ರಾಜಣ್ಣ ತಗ್ಗಿ / 24**

4. ಬುಡಕಟ್ಟುದೈವ ಕ್ಯಾತಪ್ಪನ ಜಾತ್ರಾ ಆಚರಣೆ ಮತ್ತು ಆಯಾಗಾರರ ಸೇವೆ

❖ **ಡಾ. ಚಿತ್ತಯ್ಯ ಕೆ. / 31**

5. ಮೊದಲ ತಲೆಮಾರಿನ ದಲಿತ ಚಿಂತಕ – ಕುಮಾರ ಕಕ್ಕಯ್ಯ ಪೋಳ

❖ **ಡಾ. ಮಹಾಂತಗೌಡ ಪಾಟೀಲ / 35**

6. ಕನ್ನಡ ಭಾಷೆ ಮತ್ತು ಸಂಸ್ಕೃತಿ ಬೆಳವಣಿಗೆಯಲ್ಲಿ ಹಲ್ಮಿಡಿ ಶಾಸನದ ಮಹತ್ವ

❖ **ಡಾ. ವಾಯ್.ವಾಯ್. ಕೊಕ್ಕನವರ** / 39

7. ಮತಾಂತರ ಮತ್ತು ಪರಿಶಿಷ್ಟರ ಮೀಸಲಾತಿ–ಒಂದು ವಿಮರ್ಶೆ

❖ **ಡಾ. ಪ್ರವೀಣ ಟಿ.ಎಲ್. ಮಂಜುನಾಥ / 44**

8. ಭಾಷಾ ಚಳವಳಿಯಲ್ಲಿ ಸಾಹಿತ್ಯದ ಪಾತ್ರ

❖ **ಚಂದ್ರಕಲ ಹೆಚ್.ಪಿ.**

❖ **ಡಾ. ಎಸ್. ಸಿದ್ದೇಗೌಡ / 52**

9. ಪಂಪನ ಆದಿಪುರಾಣ – ಕಾವ್ಯಧರ್ಮ ಒಂದು ವಿವೇಚನೆ

❖ **ಡಾ. ಮಾದಯ್ಯ ಮಾಕನಹಳ್ಳಿ / 59**

10. ಪಂಚತಂತ್ರದ ಇತಿಹಾಸ

❖ **ಡಾ ರೋಹಿಣಿ ಎನ್. ಹಿರೇಶೆಡ್ಡಿ / 63**

11. ಸಂಗೀತ ಚಿಕಿತ್ಸೆ

❖ **ಶ್ರೀವಿಜಯ / 70**

12. ಓ.ಎಲ್. ನಾಗಭೂಷಣಸ್ವಾಮಿ ಅವರ 'ಉಲಿವ ಮರ'ದೊಳಗೆ

❖ **ಡಾ. ಗುರುಸ್ವಾಮಿ ಹಿರೇಮಠ / 73**

13. ಕಂಬ ಮತ್ತು ಕುವೆಂಪು ರಾಮಾಯಣಗಳಲ್ಲಿ
ಸೀತಾ ರಾಮರ ಪ್ರೇಮವಿರಹ
❖ **ಡಾ. ಮಹೇಂದ್ರ ಟಿ.ಎಂ. / 80**

14. ಅಡಿಗರ 'ವರ್ಧಮಾನ' ಕವಿತೆಯಲ್ಲಿ ತಲೆಮಾರುಗಳ ತಳಮಳ
❖ **ಲೋಕೇಶ ಕೆ.ಪಿ. / 86**

15. ವಿಜ್ಞಾನ ಕಥಾಸಾಹಿತ್ಯ
❖ **ಡಾ. ಪರಶುರಾಮ ಮೂರ್ತಿ ಜಿ**
❖ **ಡಾ. ಕವಿತಾ ಎಂ.ಎನ್. / 91**

16. ಗುಹೇಶ್ವರ ಅಂಕಿತನಾಮಕ್ಕೆ ಉಪನಿಷತ್ ಪ್ರೇರಣೆ ನೀಡಿದೆಯೇ?
❖ **ಡಾ. ನಾ. ಮೊಗಸಾಲೆ / 96**

17. ಶ್ರೀ ಅವರ 'ಪ್ರಾರ್ಥನೆ' ಮತ್ತು ನ್ಯೂಮನ್ ಅವರ
'ಲೀಡ್, ಕೈಂಡ್ಲಿ ಲೈಟ್' ಕವನಗಳ ತೌಲನಿಕ ವಿಶ್ಲೇಷಣೆ
❖ **ಡಾ. ಮುರಳಿ ಕೆ.ವಿ.**
❖ **ಶ್ರೀನಿವಾಸ್ ಎಂ. / 101**

18. ಹಂಪಿ ಸಾಂಸ್ಕೃತಿಕ ಚರಿತ್ರೆ ಹಾಗೂ ಪ್ರವಾಸೋದ್ಯಮ
❖ **ಡಾ. ಕೆ. ಮಹೇಶ್ / 105**

19. ಜನಸಮುದಾಯಗಳ ಕುರಿತ ಸರ್ವಜ್ಞನ ಚಿಂತನೆಗಳು
❖ **ಡಾ. ಮಂಜುನಾಥ / 112**

20. ಕನ್ನಡ ವರ್ಣ ಮಾಲೆಯಲ್ಲಿ 'ಬಿಂದು'ವಿನ ಲಿಪಿಸ್ಥಾನ
ಒಂದು ಅವಲೋಕನ
❖ **ಜಿ. ವೀರಭದ್ರ ಗೌಡ / 117**

21. ಗಬಾಳ ಆತ್ಮಕಥೆ : ಸಾಮಾಜಿಕ, ಸಾಂಸ್ಕೃತಿಕ, ದಲಿತ ಸಂಕಥನ
❖ **ಡಾ. ಉಮೇಶ / 125**

22. ಕರುನಾಡ ಕೋಗಿಲೆ ರಾಜ್ಯ ಪ್ರಶಸ್ತಿ ವಿಜೇತ
ಮರೆಪ್ಪ ಮಾರೆಪ್ಪ ದಾಸರ್
❖ **ಡಾ. ತಿಮ್ಮಣ್ಣ ಭೀಮರಾಯ / 130**

23. ತಾಂಡ ಕಾದಂಬರಿಯಲ್ಲಿ ಲಂಬಾಣಿ ಸಂಸ್ಕೃತಿಯ ಚಿತ್ರಣ
❖ **ಡಾ. ಸೋಮಶೇಖರ ಎಂ. / 134**

24. ಸುಕುಮಾರಸ್ವಾಮಿ ಕಥೆಯಲ್ಲಿ ಶಿಕ್ಷಣ
❖ **ಶ್ರೀಪತಿ ಹಳಗುಂದ / 139**

25. ತುಳುನಾಡಿನ ಜನಜನಿತ ಪ್ರಸವಾದಿ ದೈವ ಮಾಯಂದಾಲ
❖ **ರತ್ನಮಾಲಾ / 145**

26. ಹಂಪೆಯ ಶಾಸನೋಕ್ತ ಬಾವಿಗಳು
❖ **ಡಾ. ಸರಸ್ವತಿದೇವಿ ಎಸ್. ಭಗವತಿ / 151**

27. ಆಧ್ಯಾತ್ಮದ ಮೇರು ಶಿಖರ ಕೂಡಲೂರು ಬಸವಲಿಂಗ ಶರಣರು
❖ **ಡಾ. ಶಿವಲಿಂಗಪ್ಪ ಆಯ್. ಭಂಡಾರಿ / 155**

28. ಕುವೆಂಪು ಅವರ ಕವಿತೆಗಳಲ್ಲಿ ವರ್ತಮಾನದ ತಲ್ಲಣಗಳ ಚಿತ್ರಣ
❖ **ಡಾ. ಪ್ರತಿಮಾ ಕೆ.ಪಿ. / 161**

29. ಸುಬ್ರಹ್ಮಣ್ಯ ಭಾರತಿಯಾರ್ ಮತ್ತು ಕುವೆಂಪು
❖ **ಡಾ. ಎಂ. ರಂಗಸ್ವಾಮಿ / 165**

30. ಒಗಟುಗಳ ಉಗಮ, ವಿಕಾಸ ಹಾಗೂ ಲಕ್ಷಣ
❖ **ಡಾ. ರಂಗಲಕ್ಷ್ಮಿ ಪಿ.ಎ. / 171**

31. ಶೋಷಣೆಯ ನೆಲೆ : ಪೆಣ್ಬುಯ್ಯಲ್ ಮತ್ತು ಮಹಾಸತಿ
❖ **ರಾಜೇಶ್ವರಿ ವಿ.ಪಿ. / 175**

32. ಕುವೆಂಪು ಕಥನ ವಾಙ್ಮಯ ದರ್ಶಿಸುವ ಮಹಿಳಾ ಜಗತ್ತು
❖ **ಪ್ರೊ. ಕವಿತಾ ರೈ / 180**

33. ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯದ ಸಾಂಸ್ಕೃತಿಕ ಅಧ್ಯಯನ
❖ **ಡಾ. ಕುಮಾರ ಬೆಳಲೆ**
❖ **ಡಾ. ಸುರೇಶ ಬಿ.ಸಿ.**
❖ **ಡಾ. ಮೋಹನ್ ಕೆ.ಎನ್. / 188**

34. 'ಮಿತಾಕ್ಷರ ಸಂಹಿತೆ'ಯಲ್ಲಿ ವಿಜ್ಞಾನೇಶ್ವರ ಖಾತ್ರಿಗೊಳಿಸಿರುವ ಮಹಿಳಾ ಹಕ್ಕುಗಳು
❖ **ಡಾ. ಕಾವ್ಯಶ್ರೀ ಜಿ. / 198**

35. ಕನ್ನಡದ ಲೋಹಿಯಾವಾದಿ ಸಾಹಿತ್ಯಕ್ಕೆ ಡಿ.ಎಸ್. ನಾಗಭೂಷಣರ ಕೊಡುಗೆ
❖ **ಗಂಗಾಧರ ಬಿ.ಎಂ. / 205**

36. ಹೌಸ್ ಆಫ್ ಬರ್ನಾಡಾ ಆಲ್ಬಾ ಅನುವಾದಿತ ನಾಟಕದ ಒಂದು ವಿಶ್ಲೇಷಣೆ
❖ **ಡಾ. ಚಂದ್ರಕಲಾ ಹೆಚ್.ಆರ್. / 210**

37. ಲಿಂಗಘನ ಘಟ್ಟಿಯಾದ ಶರಣ ಘಟ್ಟಿವಾಳಯ್ಯ
❖ **ಡಾ. ಗಿರೀಶ ದೇಸೂರ / 213**

38. ಕನ್ನಡ ಭಾಷಾ ಬೋಧನೆಯಲ್ಲಿ ಕಲಿಕಾ ಸಾಮಾಗ್ರಿಗಳ ಅಗತ್ಯತೆ
❖ **ಡಾ. ಲೋಕೇಶ ಆರ್**
❖ **ಡಾ. ಪ್ರವೀಣ್ ಕುಮಾರ್ ಎಸ್. / 220**

39. ಭಾರತೀಯ ಸಂಸ್ಕೃತಿ ಮತ್ತು ರಾಜಕೀಯ ವ್ಯವಸ್ಥೆಯ ಹಿನ್ನೆಲೆಯಲ್ಲಿ ಫೆಡರಲಿಸಂ ಕುರಿತಾದ ಚರ್ಚೆಗಳು : ಒಂದು ಸೈದ್ಧಾಂತಿಕ ವಿಶ್ಲೇಷಣೆ
❖ **ಯುವರಾಜ ಎಂ. ಹಿತ್ಲರ್**
❖ **ಡಾ. ಉದ್ದಗಟ್ಟಿ ವೆಂಕಟೇಶ / 225**

# ಸಂಪಾದಕೀಯ

ಇದೀಗ ಚಿಂತನ ಬಯಲು ಪತ್ರಿಕೆ ಹದಿನಾಲ್ಕನೇ ವರ್ಷದಲ್ಲಿದೆ. ಈವರೆಗಿನ ಸಂಚಿಕೆಗಳಲ್ಲಿಯೇ ಇದು ಅತಿ ಹೆಚ್ಚು ಲೇಖನಗಳನ್ನು ಒಳಗೊಂಡ ಸಂಚಿಕೆ; ಹಾಗಾಗಿಯೇ ಇದೊಂದು ವಿಶೇಷ ಸಂಚಿಕೆಯೂ ಹೌದು.

ಇಂತಹ ಪತ್ರಿಕೆಗಳಲ್ಲಿ ಪ್ರಕಟವಾಗುವ ಲೇಖನಗಳ ಬಗ್ಗೆ ವಿದ್ವಾಂಸರು, ಪ್ರಾಧ್ಯಾಪಕರು ಚರ್ಚೆಯನ್ನು ಬೆಳೆಸಬೇಕೆಂಬುದು ಸಾಮಾನ್ಯವಾಗಿ ಆಯಾ ಲೇಖಕರ ನಿರೀಕ್ಷೆಯಾಗಿರುತ್ತದೆ. ಆದರೆ ಸದ್ಯ ಕನ್ನಡದಲ್ಲಿ ಯಾವ ವಿದ್ವಾಂಸರೂ ವಿಮರ್ಶಾ ಲೇಖನಗಳಿಗೆ ಅಥವಾ ವೈಚಾರಿಕ ಲೇಖನಗಳಿಗೆ ಪ್ರತಿಕ್ರಿಯಿಸಲು ಹೋಗದಂತಹ ಒಂದು ವಿಚಿತ್ರ ಸ್ಥಿತಿಯಿದೆ. ಇನ್ನು ಪತ್ರಿಕೆಯಲ್ಲಿ ಸಂಶೋಧನ ಲೇಖನಗಳನ್ನು ಬರೆಯುವವರಾದರೂ ಅಷ್ಟೆ; ತಮ್ಮ ಲೇಖನ ಪ್ರಕಟವಾಗಬೇಕೆಂದು ಅಪೇಕ್ಷಿಸುತ್ತಾರೆ ಹೊರತು ಇತರರ ಲೇಖನಗಳನ್ನು ಓದಿ ಪ್ರತಿಕ್ರಿಯಿಸಬೇಕೆಂಬ ಧೋರಣೆಯನ್ನು ಹೊಂದಿಲ್ಲ. ನಮ್ಮ ಉನ್ನತ ಶಿಕ್ಷಣ ಕ್ಷೇತ್ರವು – ಅದರಲ್ಲೂ ಮುಖ್ಯವಾಗಿ ಸಾಹಿತ್ಯ ಮತ್ತು ಸಮಾಜವಿಜ್ಞಾನ ವಿಷಯಗಳ ಮಟ್ಟಿಗೆ – ಇವತ್ತು ದೊಡ್ಡ ಬಿಕ್ಕಟ್ಟನ್ನು ಎದುರಿಸುತ್ತಿದೆಯಾದರೆ ಅದಕ್ಕೆ ಆ ಕ್ಷೇತ್ರದಲ್ಲಿ ಕೆಲಸ ಮಾಡುವವರೂ ಕಾರಣವೆಂಬುದನ್ನು ಒಪ್ಪಿಕೊಂಡು ತಿದ್ದಿಕೊಳ್ಳಬೇಕಿದೆ. ವಿದ್ವತ್ ಕ್ಷೇತ್ರದಲ್ಲಿ ದುಡಿಯುವ ಪ್ರಾಧ್ಯಾಪಕ ವರ್ಗದವರು ಬೌದ್ಧಿಕ ಸಂವಾದಗಳಲ್ಲಿ ತೊಡಗದಿದ್ದರೆ ಜ್ಞಾನವು ಬೆಳೆಯದು.

**–ಸಂ.**

# ಕರ್ನಾಟಕದಲ್ಲಿ ಬಾಹುಬಲಿಯ ಉಬ್ಬುಶಿಲ್ಪಗಳು

**ಡಾ. ಅಪ್ಪಣ್ಣ ಎನ್. ಹಂಜೆ**
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಇತಿಹಾಸ ವಿಭಾಗ
ಶ್ರೀ ಕೆ.ಎಚ್. ಪಾಟೀಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹುಲಕೋಟಿ–582205

**1. ಪೀಠಿಕೆ**

ಜೈನ ಪರಂಪರೆಯ 1ನೆಯ ತೀರ್ಥಂಕರ ಆದಿನಾಥ ಮತ್ತು ಮರುದೇವಿ ದಂಪತಿಗಳ ಕಿರಿಯ ಮಗ ಬಾಹುಬಲಿಯ "ಅಹಿಂಸೆಯಿಂದ ಸುಖ, ತ್ಯಾಗದಿಂದ ಶಾಂತಿ, ಮೈತ್ರಿಯಿಂದ ಪ್ರಗತಿ, ಧ್ಯಾನದಿಂದ ಸಿದ್ಧಿ" ಎಂಬ ಸಾರ್ವಕಾಲಿಕ ಸಂದೇಶವು ಈತನ ಕುರಿತು ನೂರಾರು ಕೃತಿ–ಕಾವ್ಯಗಳ ರಚನೆಗೆ ಮತ್ತು ಶಿಲ್ಪಗಳ ಪ್ರತಿಷ್ಠಾಪನೆಗೆ ಪ್ರೇರಕವಾಗಿದೆ. ಈ ಎರಡೂ ಕಾರ್ಯಗಳು ಕರ್ನಾಟಕದಲ್ಲಿ ಪರಸ್ಪರ ಪ್ರಭಾವ ಬೀರುತ್ತ, ಒಂದನ್ನೊಂದು ವಿಶಿಷ್ಟವಾಗಿ ರೂಪಿಸುತ್ತ ಆಕರ್ಷಕವಾಗಿ ಬೆಳೆದು ಬಂದಿರುವುದು ವಿಶೇಷವಾಗಿದೆ. ಈ ನಾಡಿನಲ್ಲಿ ಕುಂದಕುಂದ ಆಚಾರ್ಯರು (ಕ್ರಿ.ಪೂ.108–12) ತಮ್ಮ 'ಭಾವಪಾಹುಡ' ಕೃತಿಯಲ್ಲಿ ಮಾನಕಷಾಯಕ್ಕೆ ಉದಾಹರಣೆ ರೂಪದಲ್ಲಿ ದಾಖಲಿಸಿರುವ ಬಾಹುಬಲಿಯ ಪ್ರಸ್ತಾಪವೇ ಪ್ರಪ್ರಥಮ ಸಾಹಿತ್ಯಿಕ ಉಲ್ಲೇಖವಾಗಿದೆ.[1] ಹಾಗೆಯೇ ಬನವಾಸಿ ಕದಂಬರ ರವಿವರ್ಮನ ಗುಡ್ನಾಪುರದ ಕ್ರಿ.ಶ. ಸುಮಾರು 5ನೆಯ ಶತಮಾನದ ಸ್ತಂಭಶಾಸನದಲ್ಲಿ ಉಲ್ಲೇಖಿತ ಕಾಮಜಿನಾಲಯವೇ ಬಾಹುಬಲಿಯ ಪ್ರಪ್ರಥಮ ಬಸದಿಯಾಗಿದೆ.[2] ಉತ್ತರ ಕರ್ನಾಟಕದಲ್ಲಿ ದೊರೆತ ಈಗ ಅಮೇರಿಕದ ನ್ಯೂಯಾರ್ಕ ಮೆಟ್ರೋಪಾಲಿಟನ್ ವಸ್ತುಸಂಗ್ರಹಾಲದಲ್ಲಿರುವ ಕುಶಾನರ ಕಾಲದ ಕ್ರಿ.ಶ. ಸುಮಾರು 4ನೆಯ ಶತಮಾನದ ಬಾಹುಬಲಿಯ ಪಂಚಲೋಹದ ಪ್ರತಿಮೆ ಪ್ರಸ್ತುತ ಲಭ್ಯವಿರುವ ಪ್ರಾಚೀನ ಪ್ರತಿಮೆಯಾಗಿದೆ.[3]

ಬಾಹುಬಲಿ ತನ್ನ ಹಿರಿಯ ಸಹೋದರ ಭರತನೊಂದಿಗೆ ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧಗಳಲ್ಲಿ ಸೆಣಸಿ ಜಯಶೀಲನಾಗುತ್ತಾನೆ. ಆದರೂ ಕೊನೆಯಲ್ಲಿ ರಾಜ್ಯವನ್ನು ತ್ಯಜಿಸಿ ಘೋರ ತಪಸ್ಸಿಗೆ ನಿಲ್ಲುತ್ತಾನೆ. ಈ ಸಂದರ್ಭದಲ್ಲಿ ಈತನ ಕಾಲುಗಳ ಇಕ್ಕೆಲಗಳಲ್ಲಿ ಹಾವಿನ ಹುತ್ತಗಳು ಬೆಳೆದು ಮಾಧವೀ ಲತೆಗಳು ಈತನ ಅಂಗಾಂಗಗಳನ್ನು ಬಳಸಿ ಮುಗಿಲೆತ್ತರಕ್ಕೆ ಬೆಳೆಯುತ್ತವೆ. ಆದರೂ ಈತನ ತಪಸ್ಸು ಅವಿಚಲವಾಗಿ ಮುಂದುವರೆಯುತ್ತದೆ. ಮುಗಿಲಲ್ಲಿ ಹೆಣೆದುಕೊಂಡಿರುವ ಮಾಧವೀ ಲತೆಗಳು ಆಕಾಶಮಾರ್ಗವಾಗಿ ಸಾಗುವ ವಿದ್ಯಾಧರ ದಂಪತಿಗಳಿಗೆ ತಡೆಯಾಗುತ್ತವೆ. ಇದನ್ನು ದಾಟಿ ಹೋಗುವಾಗ ಎಲ್ಲಿ ಬಾಹುಬಲಿಯ ತಪಸ್ಸು ಭಂಗವಾಗುತ್ತದೆಯೋ ಎಂದು ಅವರಿಗೆ ಭಯ. ಆದ್ದರಿಂದ ಅವರು ಆಗಾಗ್ಗೆ ಕೆಳಗಿಳಿದು ಬಂದು ಮಾಧವೀ ಲತೆಗಳನ್ನು ಬಿಡಿಸಿ ಈತನಿಗೆ ವಂದಿಸಿ ಹೋಗುತ್ತಾರೆ. ಈ ಕಥಾನಿರೂಪಣೆಯೇ ಬಾಹುಬಲಿಯ ಬಹುತೇಕ ಉಬ್ಬುಶಿಲ್ಪಗಳಲ್ಲಿ ಅಭಿವ್ಯಕ್ತವಾಗಿದೆ.

## 2. ಕರ್ನಾಟಕದಲ್ಲಿ ಬಾಹುಬಲಿಯ ಉಬ್ಬುಶಿಲ್ಪಗಳು

ಕರ್ನಾಟಕದಲ್ಲಿ ಬಾಹುಬಲಿಯ ಕಥಾನಿರೂಪಣೆಯನ್ನು ಉಬ್ಬುಶಿಲ್ಪಗಳ ರೂಪದಲ್ಲಿ ಕಂಡರಿಸುವ ಪರಂಪರೆ ಕ್ರಿ.ಶ. ಸುಮಾರು 6–7ನೆಯ ಶತಮಾನದಿಂದಲೂ ಗೋಚರಿಸುತ್ತದೆ. ಈ ಉಬ್ಬುಶಿಲ್ಪಗಳ ಕಾಲಮಾನ, ನಿರ್ಮಾತೃರು, ಪ್ರತಿಮಾ ಲಕ್ಷಣಗಳು ಇಂತಿವೆ.

### 2.1. ಬಾದಾಮಿ

ಬಾದಾಮಿ ಚಲುಕ್ಯರು ತಮ್ಮ ರಾಜಧಾನಿ ಪಟ್ಟಣ ಬಾದಾಮಿ ಬೆಟ್ಟದಲ್ಲಿ ಕ್ರಿ.ಶ. ಸುಮಾರು 7ನೆಯ ಶತಮಾನದಲ್ಲಿ ಕೊರೆಸಿರುವ ಜೈನ ಗುಹಾಲಯದ ವರಾಂಡದ ಬಲಬದಿಯ ಭಿತ್ತಿಯಲ್ಲಿ ಬಾಹುಬಲಿಯ ಉಬ್ಬುಶಿಲ್ಪವಿದೆ. ಇದರ ನಿರ್ಮಾತೃರ ಕುರಿತು ಸ್ಪಷ್ಟವಿಲ್ಲ. ಇದು ಏಳು ಅಡಿ, ಎಂಟು ಅಂಗುಲ ಎತ್ತರವಾಗಿದೆ. ಬಾಹುಬಲಿ ಪೀಠದ ಮೇಲೆ ನಿಂತಿದ್ದು, ಹಿನ್ನೆಲೆಯಲ್ಲಿ ಅರಣ್ಯದ ಚಿತ್ರಣವಿದೆ. ಕಾಲುಗಳ ಹತ್ತಿರ ಬೆಳೆದಿರುವ ಹುತ್ತಗಳಲ್ಲಿ ನಾಲ್ಕು ಸರ್ಪಗಳು ಹೆಡೆಗಳನ್ನೆತ್ತಿ ಹರಿದಾಡುತ್ತಿವೆ. ಜಡೆಗಟ್ಟಿರುವ ಕೇಶರಾಶಿ ಭುಜಗಳ ಪಾರ್ಶ್ವಗಳಲ್ಲಿ ಇಳಿಬಿದ್ದಿದೆ. ಕೈ–ಕಾಲುಗಳನ್ನು ಬಳಸಿರುವ ಮಾಧವೀ ಲತೆಗಳನ್ನು ಇಬ್ಬರು ವಿದ್ಯಾಧರಿಯರು (ಖೇಚರಿಯರು) ಬಿಡಿಸುತ್ತ ನಿಂತಿದ್ದಾರೆ. ಇನ್ನಿಬ್ಬರು ಪಾದದಡಿಯಲ್ಲಿ ಅಂಜಲಿಮುದ್ರಾಸಕ್ತರಾಗಿ ವೀರಾಸನದಲ್ಲಿ ಆಸೀನರಾಗಿದ್ದಾರೆ. ಈ ಉಬ್ಬುಶಿಲ್ಪದಲ್ಲಿ ಉತ್ತಮವಾದ ಕಲ್ಪನೆ ಮತ್ತು ಸ್ಫುಟವಾದ ಕೆತ್ತುವಿಕೆ ಕಾಣುತ್ತದೆ.[4]

### 2.2. ಐಹೊಳೆ

ಬಾದಾಮಿ ಚಲುಕ್ಯರು ತಮ್ಮ ಆಳ್ವಿಕೆಯ ಕಾಲದಲ್ಲಿ ಹುನಗುಂದ ತಾಲ್ಲೂಕಿನ ಐಹೊಳೆಯ ಬೆಟ್ಟದಲ್ಲಿ ಕ್ರಿ.ಶ. ಸುಮಾರು 7ನೆಯ ಶತಮಾನದಲ್ಲಿ ಕೊರೆಸಿರುವ ಜೈನ ಗುಹಾಲಯದ ವರಾಂಡದ ಬಲಬದಿಯ ಭಿತ್ತಿಯಲ್ಲಿ ಬಾಹುಬಲಿಯ ಉಬ್ಬುಶಿಲ್ಪವಿದೆ. ಇದು ಐದು ಅಡಿ, ಹತ್ತು ಅಂಗುಲ ಎತ್ತರವಾಗಿದೆ. ಪೊದೆಗಳ ಮಧ್ಯೆ ಪೀಠದ ಮೇಲೆ ನಿಂತಿರುವ ಬಾಹುಬಲಿಯ ಕಾಲುಗಳ ಪಾರ್ಶ್ವಗಳಲ್ಲಿ ಬಳ್ಳಿ, ಹುತ್ತ, ಸರ್ಪಗಳು ಮತ್ತು ಹಿನ್ನೆಲೆಯಲ್ಲಿ ವೃಕ್ಷಗಳನ್ನು ಚಿತ್ರಿಸಲಾಗಿದೆ. ಇಕ್ಕೆಲಗಳಲ್ಲಿ ತ್ರಿಭಂಗಿಯಲ್ಲಿ ನಿಂತು ಮಾಧವೀ ಲತೆಗಳನ್ನು ಬಿಡಿಸುವುದರಲ್ಲಿ ಮಗ್ನರಾಗಿರುವ ವಿದ್ಯಾಧರಿಯರು ಕಿರೀಟಮಕುಟ, ಗ್ರೈವೇಯಕಹಾರ, ಕರ್ಣಕುಂಡಲ, ಸ್ತನಸೂತ್ರ, ಕಂಕಣ, ಪಾದಸರ, ಕಟಿವಸ್ತ್ರ ಮೊದಲಾದ ವಸ್ತ್ರಾಭರಣಗಳನ್ನು ಧರಿಸಿ ಸರ್ವಾಲಂಕೃತರಾಗಿದ್ದಾರೆ. ಬಾಹುಬಲಿಗಿಂತ ಈ ವಿದ್ಯಾಧರಿಯರನ್ನು ಆಕರ್ಷಕವಾಗಿ ಕೆತ್ತಿರುವುದು ವಿಶೇಷವಾಗಿದೆ. ಆಕಾಶದಲ್ಲಿ ಇಬ್ಬರು ವಿದ್ಯಾಧರರು ತೇಲುತ್ತಿದ್ದಾರೆ. ಈ ಶಿಲ್ಪ ಸಂಕೀರ್ಣವು ಜಿನಸೇನಾಚಾರ್ಯರ 'ಪೂರ್ವಪುರಾಣ' ಕೃತಿಯಲ್ಲಿನ ಬಾಹುಬಲಿಯ ಕಥಾನಿರೂಪಣೆಯನ್ನು ನೆನಪಿಸುತ್ತದೆ.[5]

### 2.3. ಶ್ರವಣಬೆಳಗೊಳ

ಶ್ರವಣಬೆಳಗೊಳದ ಚಿಕ್ಕಬೆಟ್ಟದ ಮೇಲ್ಭಾಗದಲ್ಲಿ ದೋರಸಮುದ್ರದ ಹೊಯ್ಸಳರ ರಾಜಶ್ರೇಷ್ಠಿಗಳಾದ ಹೊಯ್ಸಳಸೆಟ್ಟಿ ಮತ್ತು ನೇಮಿಸೆಟ್ಟಿ ಸೇರಿಕೊಂಡು ತಮ್ಮ

ಮಾತೆಯರಾದ ಮಾಚಿಕಬ್ಬೆ ಮತ್ತು ಶಾಂತಿಕಬ್ಬೆಯರ ಪರೋಕ್ಷ ವಿನಯಾರ್ಥವಾಗಿ ಕ್ರಿ.ಶ.1117ರ ಮೇ 15ರಂದು ಬಾಹುಬಲಿ ಬಸದಿ ಮಾಡಿಸಿದ್ದಾರೆ.[6] ಇದರ ಮುಂಭಾಗದಲ್ಲಿ ತೇರಿನಾಕಾರದ ಆಕರ್ಷಕ ಮಂದಾರ ಇರುವುದರಿಂದ ಇದನ್ನು 'ತೇರಿನ ಬಸದಿ' ಎಂದು ಕರೆಯಲಾಗಿದೆ. ಗರ್ಭಗೃಹದಲ್ಲಿ ಐದು ಅಡಿ ಎತ್ತರವಾದ ಬಾಹುಬಲಿಯ ಉಬ್ಬುಶಿಲ್ಪವಿದೆ. ಇದು ಕಪ್ಪುಮಿಶ್ರಿತ ನೀಲಿಛಾಯೆಯ ಬಳಪದ ಶಿಲೆಯಲ್ಲಿ ಕಂಡರಿಸಲ್ಪಟ್ಟಿದೆ. ಬಾಹುಬಲಿಯ ಶಿರದ ಮೇಲೆ ಮುಕ್ಕೊಡೆಯಿದ್ದು, ಹಿಂಬದಿಯಲ್ಲಿ ಪ್ರಭಾಮಂಡಲವಿದೆ. ಕೈ-ಕಾಲುಗಳನ್ನು ಮಾಧವೀ ಲತೆಗಳು ಬಳಸಿವೆ. ಕೇಶರಾಶಿ ಭುಜಗಳ ಮೇಲೆ ಇಳಿಬಿದ್ದಿದೆ. ದೊಡ್ಡಬೆಟ್ಟದ ಮೇಲ್ಭಾಗದಲ್ಲಿ ಅಖಂಡ ಬಾಗಿಲಿನ ಬಲಬದಿಯಲ್ಲಿರುವ ಒಂದು ಅಂಕಣದ ಚಿಕ್ಕ ಬಸದಿಯಲಿ ಬಾಹುಬಲಿಯ ಉಬ್ಬುಶಿಲ್ಪವಿದೆ. ಇದನ್ನು ಮೂಲಸಂಘದ ದೇಶಿಯಗಣದ ಪುಸ್ತಕಗಚ್ಛ ಪರಂಪರೆಯ ಗಂಡವಿಮುಕ್ತ ಸೈದ್ಧಾಂತಿಕದೇವನ ಶಿಷ್ಯನೂ, ಹೊಯ್ಸಳರ ವಿಷ್ಣುವರ್ಧನನ ದಂಡನಾಯಕನೂ ಆದ ಭರತಮಯ್ಯನು ಕ್ರಿ.ಶ. ಸುಮಾರು 12ನೆಯ ಶತಮಾನದಲ್ಲಿ ಮಾಡಿಸಿದ್ದಾನೆ.[7] ಮೂಲ ಬಂಡೆಯಲ್ಲಿಯೇ ಕೆತ್ತಿರುವ ಈ ಉಬ್ಬುಶಿಲ್ಪವು ಐದು ಅಡಿ ಎತ್ತರವಾಗಿದೆ. ಬಾಹುಬಲಿಯ ಕೈ-ಕಾಲುಗಳನ್ನು ಮಾಧವೀ ಲತೆಗಳು ಬಳಸಿವೆ.

ದೊಡ್ಡಬೆಟ್ಟದ ಬಾಹುಬಲಿ ಶಿಲ್ಪದ ಸುತ್ತಲೂ ಹೊಯ್ಸಳರ ದಂಡನಾಯಕ ಗಂಗರಾಜನು ಕ್ರಿ.ಶ.1117ರಲ್ಲಿ ಮಾಡಿಸಿರುವ ಸುತ್ತಾಲಯದ ಅಂತ್ಯದಲ್ಲಿ ಗಣಧರ ಪಾದುಕೆಯ ಪಕ್ಕದಲ್ಲಿ ಐದು ಅಡಿ ಎತ್ತರವಾದ ಬಾಹುಬಲಿಯ ಉಬ್ಬುಶಿಲ್ಪವಿದೆ.[8] ಬಾಹುಬಲಿಯ ಪಾದಗಳ ಪಕ್ಕದಿಂದ ಹಬ್ಬಿರುವ ಮಾಧವೀ ಲತೆಗಳು ಶಿಲ್ಪದ ಸುತ್ತಲೂ ಪ್ರಭಾವಳಿ ರೀತಿಯಲ್ಲಿ ಹರಡಿಕೊಂಡಿವೆ. ಬಳ್ಳಿಯ ವೃತ್ತಾಕಾರದ ಅಲಂಕಾರಗಳಲ್ಲಿ ನವಿಲು, ದೇವತೆಗಳ ಚಿತ್ರಣಗಳಿವೆ. ಪಾರ್ಶ್ವಗಳಲ್ಲಿ ಇಬ್ಬರು ವಿದ್ಯಾಧರಿಯರು ಬಳ್ಳಿಯನ್ನು ಬಿಡಿಸುತ್ತ ನಿಂತಿದ್ದಾರೆ. ದೊಡ್ಡಬೆಟ್ಟದ ಮೇಲಿರುವ ಬಾಹುಬಲಿ ಶಿಲ್ಪದ ಮುಂಭಾಗದ ಪ್ರವೇಶದ್ವಾರದ ಮೇಲ್ಛಾವಣಿಯ ಬಲಬದಿಯ ಗೂಡಿನಲ್ಲಿ ಬಾಹುಬಲಿಯ ಗಾರೆಯ ಚಿಕ್ಕ ಉಬ್ಬುಶಿಲ್ಪವಿದೆ. ಬಾಹುಬಲಿಯ ಕೈ-ಕಾಲುಗಳನ್ನು ಮಾಧವೀ ಲತೆಗಳು ಬಳಸಿವೆ. ದೊಡ್ಡಬೆಟ್ಟದಲ್ಲಿ ಅಖಂಡ ಬಾಗಿಲಿನ ಬಲಗಡೆ ಸಿದ್ಧರಗುಂಡಿನಲ್ಲಿ ಬಾಹುಬಲಿಯ ಪರ್ಯಂಕಾಸೀನ ಎರಡು ಉಬ್ಬುಶಿಲ್ಪಗಳಿವೆ. ಇವು ಬಾಹುಬಲಿಯ ಪ್ರತಿಮಾ ಲಕ್ಷಣಗಳ ಅಧ್ಯಯನದ ದೃಷ್ಟಿಯಿಂದ ವಿಶೇಷವಾಗಿವೆ.[9]

### 2.4. ಹಳ್ಳೂರು

ಬಾಗಲಕೋಟ ತಾಲ್ಲೂಕಿನ ಹಳ್ಳೂರದ ಬೆಟ್ಟದ ಮೇಲ್ಭಾಗದಲ್ಲಿ ಮಳಖೇಡದ ರಾಷ್ಟ್ರಕೂಟರ ಅಮೋಘವರ್ಷ ನೃಪತುಂಗನ ಆಳ್ವಿಕೆ ಕಾಲದಲ್ಲಿ (ಕ್ರಿ.ಶ. ಸುಮಾರು 9ನೆಯ ಶತಮಾನ) ನಿರ್ಮಾಣವಾಗಿರುವ ಬಸದಿಯ ಮುಖಮಂಟಪದ ಹೊರಭಿತ್ತಿಯ ಮೇಲೆ ಬಾಹುಬಲಿಯ ನಾಲ್ಕು ಮತ್ತು ಕಾಯೋತ್ಸರ್ಗ ಪಾರ್ಶ್ವನಾಥನ ನಾಲ್ಕು ಉಬ್ಬುಶಿಲ್ಪಗಳಿವೆ. ಇವು ನಾಲ್ಕು ಅಡಿ ಎತ್ತರವಾಗಿವೆ. ಬಾಹುಬಲಿಯ ಎರಡು ಉಬ್ಬುಶಿಲ್ಪಗಳಲ್ಲಿ ಹುತ್ತದಿಂದ ಹೊರಬರುತ್ತಿರುವ ನಾಲ್ಕು ಸರ್ಪಗಳನ್ನು ತೋರಿಸಲಾಗಿದೆ. ಇನ್ನೆರಡು ಉಬ್ಬುಶಿಲ್ಪಗಳಲ್ಲಿ ಪಾದಗಳ ಪಾರ್ಶ್ವಗಳಲ್ಲಿ ಎರಡೆರಡು ಸರ್ಪಗಳನ್ನು ಚಿತ್ರಿಸಲಾಗಿದೆ. ಈ ನಾಲ್ಕೂ ಉಬ್ಬುಶಿಲ್ಪಗಳಲ್ಲಿ ಪಾದಗಳ ಮಧ್ಯದಿಂದ

ಏಕದಂಟಿನ ಮಾಧವೀ ಲತೆಗಳು ಹೊರಟು ತೊಡೆ ಮತ್ತು ಮೊಣಕಾಲು ಮಧ್ಯದಲ್ಲಿ ಟಿಸಿಲೊಡೆದು ತೊಡೆ ಮತ್ತು ಕೈಗಳನ್ನಾವರಿಸಿವೆ. ಎಲ್ಲ ಉಬ್ಬುಶಿಲ್ಪಗಳಲ್ಲಿ ಬಾಹುಬಲಿಯ ಶಿರದ ಹಿಂಭಾಗದಲ್ಲಿ ಪ್ರಭಾಮಂಡಲ ಮತ್ತು ಮೇಲ್ಭಾಗದಲ್ಲಿ ಮುಕ್ಕೊಡೆ ತೋರಿಸಲಾಗಿದೆ. ದಕ್ಷಿಣ ಭಾರತದಲ್ಲಿ ಕ್ರಿ.ಶ. ಸುಮಾರು 8–9ನೆಯ ಶತಮಾನದ ಪೂರ್ವದಲ್ಲಿ ಬಾಹುಬಲಿಯ ಉಬ್ಬುಶಿಲ್ಪಗಳಲ್ಲಿ ಭುಜಗಳ ಮೇಲೆ ನೀಳವಾದ ಕೇಶರಾಶಿ ಇಳಿಬಿದ್ದಿರುವುದನ್ನು ಚಿತ್ರಿಸಲಾಗಿದೆ. ನಂತರದ ಬಾಹುಬಲಿಯ ಉಬ್ಬುಶಿಲ್ಪಗಳು ಮತ್ತು ದುಂಡುಶಿಲ್ಪಗಳಲ್ಲಿ ಸುರುಳಿಯಾಕಾರದ ಗುಂಗುರು ಕೇಶಗಳನ್ನು ತೋರಿಸುವ ಸಂಪ್ರದಾಯ ಪ್ರಾರಂಭವಾಯಿತು.[10]

ಈ ಮೇಲಿನ ಎರಡು ಉಬ್ಬುಶಿಲ್ಪಗಳಲ್ಲಿ ಭುಜಗಳವರೆಗೆ ಇಳಿಬಿದ್ದಿರುವ ನೀಳವಾದ ಕೇಶರಾಶಿಯನ್ನು ಹಾಗೂ ಇನ್ನೆರಡು ಉಬ್ಬುಶಿಲ್ಪಗಳಲ್ಲಿ ಗುಂಗುರು ಕೇಶಗಳನ್ನು ತೋರಿಸಿರುವುದು ಗಮನಾರ್ಹವಾಗಿದೆ. ಕರ್ನಾಟಕದಲ್ಲಿ ಬಾಹುಬಲಿ ಶಿಲ್ಪಗಳ ಪ್ರತಿಮಾ ಲಕ್ಷಣಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಈ ನಾಲ್ಕೂ ಉಬ್ಬುಶಿಲ್ಪಗಳು ಬಾಹುಬಲಿಯ ಉದ್ದವಾದ ಕೇಶರಾಶಿ ಸುರುಳಿಯಾಕಾರದ ಗುಂಗುರು ಕೇಶಗಳಿಗೆ ಪರಿವರ್ತನೆಯಾಗಿರುವ ಒಂದು ಮಹತ್ವದ ಸಂಧಿಕಾಲವನ್ನು ಸೂಚಿಸುತ್ತವೆ. ಇಲ್ಲಿ ಸರ್ಪಗಳನ್ನು ಚಿತ್ರಿಸಿರುವ ರೀತಿ ಬಾದಾಮಿ ಮತ್ತು ಐಹೊಳೆಯ ಉಬ್ಬುಶಿಲ್ಪಗಳ ಪ್ರಭಾವವನ್ನು ಎತ್ತಿ ತೋರಿಸುತ್ತದೆ.

### 2.5. ಮುಳಗುಂದ

ಗದಗ ತಾಲ್ಲೂಕಿನ ಮುಳಗುಂದದ ಬೆಟ್ಟದ ಮೇಲಿರುವ ಪಾರ್ಶ್ವನಾಥ ಬಸದಿಯ ಹಿಂಭಾಗದಲ್ಲಿ ನಿಸರ್ಗದತ್ತವಾದ ಬೃಹತ್ ಬಂಡೆಯ ಮೇಲೆ ಹದಿನಾಲ್ಕು ಅಡಿ ಎತ್ತರವಾದ ಬಾಹುಬಲಿಯ ಅಪೂರ್ಣ ಉಬ್ಬುಶಿಲ್ಪವಿದೆ. ಶಿಲ್ಪಿ ಬಾಹುಬಲಿಯ ಪ್ರತಿರೂಪವನ್ನು ರೇಖಾವಿನ್ಯಾಸದಲ್ಲಿ ಬಿಡಿಸಿಕೊಂಡು ಮೇಲ್ಭಾಗವನ್ನು ಕೆತ್ತಿದ್ದಾನೆ. ಕೆಳಭಾಗ ರೇಖಾವಿನ್ಯಾಸದಲ್ಲಿಯೇ ಉಳಿದಿದೆ. ಅಂತರ–ಬಾಹ್ಯ ಪ್ರಮಾಣಗಳಿಂದ ಈ ಉಬ್ಬುಶಿಲ್ಪದ ಕಾಲಮಾನವು ಕ್ರಿ.ಶ. ಸುಮಾರು 10ನೆಯ ಶತಮಾನವೆಂದು ಖಚಿತವಾಗುತ್ತದೆ.

### 2.6. ಹೊಂಬುಜ

ಹೊಸನಗರ ತಾಲ್ಲೂಕಿನ ಹೊಂಬುಜದಲ್ಲಿ ಸಾಂತರರ ಆಳ್ವಿಕೆ ಕಾಲದಲ್ಲಿ (ಕ್ರಿ.ಶ. ಸುಮಾರು 7ನೆಯ ಶತಮಾನ) ಜೈನ ಬೋಗಾರರು (ಲೋಹಕಾರರು, ಕಂಚುಗಾರರು) ನೇಮಿನಾಥ ಬಸದಿ ನಿರ್ಮಿಸಿದ್ದಾರೆ. ಇದನ್ನು ಶಾಸನಗಳಲ್ಲಿ 'ಅಶೋಕವನ ಬಸದಿ', 'ಬೋಗಾರ ಬಸದಿ' ಎಂದೆಲ್ಲ ಕರೆಯಲಾಗಿದೆ.[11] ಈ ಬಸದಿಯ ನವರಂಗದ ಮಧ್ಯದಲ್ಲಿ ಬ್ರಹ್ಮಕಾಂತ ಪ್ರಕಾರದ ನಾಲ್ಕು ಸ್ತಂಭಗಳಿದ್ದು, ಒಂದು ಸ್ತಂಭದ ಕಾಂಡಭಾಗದ ಪ್ರತ್ಯೇಕ ಚೌಕಟ್ಟುಗಳಲ್ಲಿ ಆರು ಅಂಗುಲ ಎತ್ತರವಾಗಿರುವ ಬಾಹುಬಲಿ ಮತ್ತು ಪಾರ್ಶ್ವನಾಥನ ಉಬ್ಬುಶಿಲ್ಪಗಳಿವೆ. ಬಾಹುಬಲಿಯ ಕೈ–ಕಾಲುಗಳನ್ನು ಮಾಧವೀ ಲತೆಗಳು ಬಳಸಿವೆ. ಪಾರ್ಶ್ವಗಳಲ್ಲಿ ಇಬ್ಬರು ವಿದ್ಯಾಧರಿಯರು ದ್ವಿಭಂಗಿಯಲ್ಲಿ ನಿಂತು ಮಾಧವೀ ಲತೆಗಳನ್ನು ಬಿಡಿಸುತ್ತಿದ್ದಾರೆ. ಕೇಶರಾಶಿ ಭುಜದವರೆಗೂ ಇಳಿಬಿದ್ದಿದೆ. ಇಲ್ಲಿ ಕಾಯೋತ್ಸರ್ಗ

ಪಾರ್ಶ್ವನಾಥನ ಶಿರದ ಮೇಲೆ ಐದು ಹೆಡೆಗಳ ಸರ್ಪ ಚಿತ್ರಿಸಿರುವುದು ವಿಶೇಷವಾಗಿದೆ.

**2.7. ಮೇಳಿಗೆ**

ತೀರ್ಥಹಳ್ಳಿ ತಾಲ್ಲೂಕಿನ ಮೇಳಗಿಯಲ್ಲಿ ಪೆನುಗೊಂಡೆಯ ವೆಂಕಟಾಚಲಪತಿರಾಯನ ಆಶ್ರಯದಲ್ಲಿದ್ದ ರಾಜಶ್ರೇಷ್ಠಿ ವರ್ಧಮಾನನ ಮಗನೂ ಮತ್ತು ವಿಶಾಲಕೀರ್ತಿಮುನಿಯ ಶಿಷ್ಯನೂ ಆದ ಬೊಮ್ಮಣ್ಣಶ್ರೇಷ್ಠಿ ಕ್ರಿ.ಶ.1608ರಲ್ಲಿ ಅನಂತನಾಥ ಬಸದಿ ನಿರ್ಮಿಸಿದ್ದಾನೆ.[12] ಈ ಬಸದಿಯ ಮುಂಬದಿಯ ಮಾನಸ್ತಂಭದ ಕಾಂಡಭಾಗದಲ್ಲಿ ಬಾಹುಬಲಿಯ ಉಬ್ಬುಶಿಲ್ಪವಿದೆ. ಬಾಹುಬಲಿಯ ಕೈ-ಕಾಲುಗಳನ್ನು ಮಾಧವೀ ಲತೆಗಳು ಬಳಸಿವೆ.

**2.8. ಮಂದರಗಿರಿ**

ತುಮಕೂರು ನಗರದ ಪೂರ್ವಭಾಗದಲ್ಲಿರುವ ಮಂದರಗಿರಿಯ ಏಕಶಿಲಾ ಬೆಟ್ಟವು ಚಂದ್ರಪ್ರಭನಾಥನ ಕ್ಷೇತ್ರವಾಗಿ ಪ್ರಸಿದ್ಧವಾಗಿದೆ. ಚಂದ್ರಪ್ರಭನಾಥ ಬಸದಿ ಮತ್ತು ಪದ್ಮಾವತಿ ಹೆಸರಿನ ಕೆರೆಯ ಮಧ್ಯದಲ್ಲಿರುವ ಬೃಹತ್ತಾದ ಬಂಡೆಗಲ್ಲಿನ ದಕ್ಷಿಣಮುಖದಲ್ಲಿ ಬಾಹುಬಲಿಯ ಉಬ್ಬುಶಿಲ್ಪವಿದೆ. ಇದು ಆರು ಅಡಿ ಎತ್ತರವಾಗಿದೆ. ಇದನ್ನು ಕಾಲಾಂತರದಲ್ಲಿ ಕೆತ್ತಿ ನಾಶಪಡಿಸಲು ಪ್ರಯತ್ನಿಸಲಾಗಿದೆ. ಆದರೂ ಬಾಹುಬಲಿಯ ಚಿತ್ರಣವು ಸ್ಪಷ್ಟವಾಗಿ ಉಳಿದು ಬಂದಿದೆ.[13] ಅಂತರ-ಬಾಹ್ಯ ಪ್ರಮಾಣಗಳಿಂದ ಈ ಉಬ್ಬುಶಿಲ್ಪದ ಕಾಲಮಾನವು ಕ್ರಿ.ಶ. ಸುಮಾರು 10-11ನೆಯ ಶತಮಾನವೆಂದು ಖಚಿತವಾಗುತ್ತದೆ.

**2.9. ಧರ್ಮಸ್ಥಳ**

ಧರ್ಮಸ್ಥಳದ ನೆಲ್ಯಾಡಿ ಬೀಡಿನ ಹಿಂಭಾಗದ ಬೆಟ್ಟದ ಮೇಲೆ ಸ್ಥಳೀಯ ಹೆಗ್ಗಡೆಗಳು ಕ್ರಿ.ಶ. ಸುಮಾರು 14ನೆಯ ಶತಮಾನದಲ್ಲಿ ಪೂರ್ವಾಭಿಮುಖವಾಗಿ ಚಂದ್ರಪ್ರಭನಾಥ ಬಸದಿ ನಿರ್ಮಿಸಿದ್ದರು. ಅದು ಕಾಲಾಂತರದಲ್ಲಿ ಶಿಥಿಲವಾಗಿದ್ದರಿಂದ ಅದನ್ನು ಇಮ್ಮಡಿ ಮಂಜಯ್ಯ ಹೆಗ್ಗಡೆ ಅವರು ಕ್ರಿ.ಶ.1901ರಲ್ಲಿ ಜೀರ್ಣೋದ್ಧಾರ ಮಾಡಿಸಿದ್ದರು.[14] ಇದನ್ನು ಇಂದಿನ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರು 2001ರಲ್ಲಿ ಮೂಲ ವಾಸ್ತು ಸ್ವರೂಪದಲ್ಲಿಯೇ ಶಿಲಾಮಯವಾಗಿ ಜೀರ್ಣೋದ್ಧಾರ ಮಾಡಿಸಿದ್ದಾರೆ. ಬಸದಿಯ ಹೊರಸುತ್ತಿನ ಸಾಲಂಕೃತ ಸಾಲುಸ್ತಂಭಗಳಲ್ಲಿ ಬಾಹುಬಲಿಯ ಎರಡು ಉಬ್ಬುಶಿಲ್ಪಗಳಿವೆ. ಒಂದು ಸ್ತಂಭದ ಪಟ್ಟಿಕೆಯಲ್ಲಿರುವ ಉಬ್ಬುಶಿಲ್ಪದಲ್ಲಿ ತಪಸ್ಸಿಗೆ ನಿಂತಿರುವ ಬಾಹುಬಲಿಗೆ ಭರತನು ಶರಣಾಗತನಾಗುವ ಸಾಂದರ್ಭಿಕ ಚಿತ್ರಣವಿದೆ. ಮತ್ತೊಂದು ಸ್ತಂಭದ ಪಟ್ಟಿಕೆಯಲ್ಲಿರುವ ಉಬ್ಬುಶಿಲ್ಪದಲ್ಲಿ ಕಠಿಣ ತಪಸ್ಸಿನಲ್ಲಿ ನಿರತನಾಗಿರುವ ಬಾಹುಬಲಿಯ ಕೈ-ಕಾಲುಗಳನ್ನು ಮಾಧವೀ ಲತೆಗಳು ಬಳಸಿರುವ ಚಿತ್ರಣವಿದೆ. ಈ ಉಬ್ಬುಶಿಲ್ಪಗಳ ರಚನೆಯಲ್ಲಿ ಪ್ರಸಿದ್ಧ ಶಿಲ್ಪಿ ಕೆ. ದಕ್ಷಿಣಾಮೂರ್ತಿ, ಖ್ಯಾತ ಚಿತ್ರಕಲಾವಿದರಾದ ಪಿ. ಪುರುಷೋತ್ತಮ ಕಾರಂತ ಮತ್ತು ಕಲಾವಿದ ಗೋಪಾಲಕೃಷ್ಣ ಮೆನನ್ ಅವರ ಪಾತ್ರ ಪ್ರಮುಖವಾಗಿದೆ.

### 3. ಸಮಾರೋಪ

ಜೈನ ಪರಂಪರೆಯ ಪೂರ್ಣಶಿಲ್ಪ, ದುಂಡುಶಿಲ್ಪ ಇತ್ಯಾದಿ ವಿವಿಧ ತಾಂತ್ರಿಕ ಪ್ರಕಾರಗಳಲ್ಲಿ ಉಬ್ಬುಶಿಲ್ಪವೂ ಒಂದಾಗಿದೆ. ಯಾವುದಾದರೊಂದು ನಿರ್ದಿಷ್ಟ ರೂಪು ಅಥವಾ ವಿವರಣೆಯನ್ನು ಹಿನ್ನೆಲೆಯಿಂದ ಸ್ವಲ್ಪ ಮಾತ್ರ ಎದ್ದಿರುವಂತೆ ತೋರಿಸುವುದು ಉಬ್ಬುಶಿಲ್ಪದ ಪ್ರಧಾನ ತಂತ್ರವಾಗಿದೆ. ಚಪ್ಪಟೆಯಾದ ಹಿನ್ನೆಲೆಯಿಂದ ಮುಂದಕ್ಕೆ ಉಬ್ಬಿದಂತೆ ಕಾಣುವ ಶಿಲ್ಪವೆ ಉಬ್ಬುಶಿಲ್ಪವಾಗಿದೆ. ಇದನ್ನು ಎದುರಿನಿಂದ ಮಾತ್ರ ನೋಡಬಹುದು. ಶಿಲ್ಪ ಸಂಕೀರ್ಣದ ವಿವರಗಳೆಲ್ಲವೂ ಪೂರ್ಣವಾಗಿ ಹಿನ್ನೆಲೆಗೆ ಅಂಟಿರುತ್ತವೆ. ಬಾಹುಬಲಿಯ ಕಥಾನಿರೂಪಣೆ ಈ ಉಬ್ಬುಶಿಲ್ಪಗಳಲ್ಲಿ ಸೊಗಸಾಗಿ ಚಿತ್ರಿತವಾಗಿದೆ.

ಬಾಹುಬಲಿ ಅಹಿಂಸೆ, ತ್ಯಾಗ, ಮೈತ್ರಿ, ಧ್ಯಾನ ಮೌಲ್ಯಗಳಿಂದ ಸಾಹಿತ್ಯ ಮತ್ತು ಶಿಲ್ಪಗಳಲ್ಲಿ ಅತ್ಯುನ್ನತ ಸ್ಥಾನ ಪಡೆದು ಸಾರ್ವಕಾಲಿಕ ಗೌರವಕ್ಕೆ ಪಾತ್ರನಾಗಿದ್ದಾನೆ. ಹನ್ನೆರಡು ತಿಂಗಳು ಕಠಿಣ ತಪಸ್ಸಿನ ಮೂಲಕ 'ಕೇವಲಜ್ಞಾನ' ಸಂಪಾದಿಸಿ 'ಪ್ರಥಮ ಮೋಕ್ಷಗಾಮಿ' ಎಂದೆನಿಸಿ, ಜನಮಾನಸದಲ್ಲಿ 'ತೀರ್ಥಂಕರ'ನ ಸ್ಥಾನ ಪಡೆದಿದ್ದಾನೆ. ತೀರ್ಥಂಕರರಂತೆ ಈತನಿಗೂ ಗುಡ್ನಾಪುರ, ಹೊಂಬುಜ, ಶ್ರವಣಬೆಳಗೊಳ, ದಡಗ, ಉಳ್ಳಾಗಡ್ಡಿ ಖಾನಾಪುರ ಮುಂತಾದೆಡೆಯಲ್ಲಿ ಪ್ರತ್ಯೇಕ ಬಸದಿಗಳು ನಿರ್ಮಾಣವಾಗಿದ್ದವು. ಅವುಗಳಲ್ಲಿ ಶ್ರವಣಬೆಳಗೊಳದ ಬಸದಿಗಳು ಉಳಿದು ಬಂದಿವೆ. ಹೊಯ್ಸಳರ ವಿಷ್ಣುವರ್ಧನನ ರಾಜಶ್ರೇಷ್ಠಿಯಾದ ನೊಣಂಬಸೆಟ್ಟಿ ಮತ್ತು ದೇಮಿಕಬ್ಬೆ ದಂಪತಿಗಳು ಕೃಷ್ಣರಾಜಪೇಟೆ ತಾಲ್ಲೂಕಿನ ಕತ್ತರಿಘಟ್ಟದಲ್ಲಿ ಕ್ರಿ.ಶ.1118ರಲ್ಲಿ ತ್ರಿಕೂಟ ಬಸದಿ ನಿರ್ಮಿಸಿ, ಇದರ ಒಂದು ಗರ್ಭಗೃಹದಲ್ಲಿ ಬಾಹುಬಲಿ ಶಿಲ್ಪವನ್ನು ಪ್ರತಿಷ್ಠಾಪಿಸಿದ್ದರು. ಶ್ರವಣಬೆಳಗೊಳ, ಹಳ್ಳೂರು, ಹಂಪಿ ಮುಂತಾದೆಡೆಯ ಕೆಲವು ಶಿಲ್ಪಗಳಲ್ಲಿ ಬಾಹುಬಲಿಗೆ ಪ್ರಭಾಮಂಡಲ, ಮುಕ್ಕೊಡೆ ಪರಿಕರಗಳನ್ನು ತೋರಿಸಲಾಗಿದೆ. ಬೆಳಗಾವಿ ಜಿಲ್ಲೆಯ ನಿಪ್ಪಾಣಿಯ ನೇಮಿನಾಥ ಬಸದಿಯಲ್ಲಿ ಚೌವ್ವೀಸ ತೀರ್ಥಂಕರರ ಪ್ರಭಾವಳಿಯುಳ್ಳ ಬಾಹುಬಲಿಯ ಕ್ರಿ.ಶ. ಸುಮಾರು 16ನೆಯ ಶತಮಾನದ ಅಪರೂಪದ ಶಿಲ್ಪವಿದೆ. ಈ ಶಿಲ್ಪಗಳೆಲ್ಲವೂ ಬಾಹುಬಲಿ ತೀರ್ಥಂಕರರಿಗೆ ಸಮಾನವೆಂಬುದನ್ನು ಪ್ರತಿನಿಧಿಸುತ್ತವೆ.

ಕರ್ನಾಟಕದಲ್ಲಿ ಬಾಹುಬಲಿಯ ಉಬ್ಬುಶಿಲ್ಪಗಳು, ದುಂಡುಶಿಲ್ಪಗಳು ಇರುವೆಡೆಯಲ್ಲಿ ಪಾರ್ಶ್ವನಾಥನ ಉಬ್ಬುಶಿಲ್ಪಗಳು, ದುಂಡುಶಿಲ್ಪಗಳಿರುವುದೂ ವಿಶೇಷವಾಗಿದೆ. ಇದಕ್ಕೆ ಇವರಿಬ್ಬರ ಕಠಿಣ ತಪಸ್ಸು, ಸಂದೇಶ ಮತ್ತು ಜನಪ್ರಿಯತೆಯೇ ಪ್ರಧಾನವಾಗಿದೆ. ಕರ್ನಾಟಕದಲ್ಲಿರುವ ಈ ಮೇಲಿನ ಬಾಹುಬಲಿಯ ಉಬ್ಬುಶಿಲ್ಪಗಳಂತೆ ತಮಿಳುನಾಡಿನ ದಕ್ಷಿಣ ಆರ್ಕಾಟ ಜಿಲ್ಲೆಯ ಚಿತ್ತಮೂರು, ಕಳಗುಮಲೈ, ಉತ್ತರ ಆರ್ಕಾಟ ಜಿಲ್ಲೆಯ ತಿರುಮಲೈ, ಪೋಲೂರು ತಾಲ್ಲೂಕಿನ ಓದಲವಾಡಿ, ಕಾಂಜೀವರಂ ಜಿಲ್ಲೆಯ ನರಕೊಯಿಲ್, ಉತ್ತರ ಪ್ರದೇಶದ ಝಾಂಸಿ ಜಿಲ್ಲೆಯ ದೇವಗಡ, ಮಧ್ಯಪ್ರದೇಶದ ಖಜುರಾಹೋ, ಖಚಿದಾರಗಿರಿ, ಬಿಲಹರಿ, ಗ್ವಾಲಿಯರ, ಗುಜರಾತದ ಶತ್ರುಂಜಯ ತೀರ್ಥ ಮುಂತಾದೆಡೆಯಲ್ಲಿರುವ ಬಾಹುಬಲಿಯ ಉಬ್ಬುಶಿಲ್ಪಗಳೂ ಆಕರ್ಷಕವಾಗಿವೆ. ಭಾರತದಲ್ಲಿ ಸಿಂಧೂ ನಾಗರಿಕತೆಯ ಕಾಲದಿಂದಲೂ ನಿರಂತರವಾಗಿ ಆರಾಧನೆಗೊಳ್ಳುತ್ತ ಬಂದಿರುವ ಬಾಹುಬಲಿಯ ದಿವ್ಯ ಸಂದೇಶಗಳಲ್ಲಿ ಮಾನವಕುಲದ ಮನಸ್ಸನ್ನು ಸ್ಥಿರಗೊಳಿಸುವ ಉದ್ದೇಶದಿಂದ ಆತನ ಶಿಲ್ಪಗಳ ಪ್ರತಿಷ್ಠಾಪನೆ ಮತ್ತು ಆತನಿಗೆ

ವೈಭವದಿಂದ ಮಹಾಮಸ್ತಕಾಭಿಷೇಕ ಆಚರಿಸುವುದು ಸಾಂಗವಾಗಿ ಮುನ್ನಡೆದಿದೆ.

**ಅಡಿಟಿಪ್ಪಣಿಗಳು**

1. ವಸಂತರಾಜ ಎಂ.ಡಿ., 2000, "ಪ್ರಾಕೃತ ಕೃತಿ–ಕಾವ್ಯಗಳಲ್ಲಿ ಬಾಹುಬಲಿ", ಮಾನತುಂಗ (ಸ್ಮರಣ ಸಂಚಿಕೆ), ಪು. 15–27, ವೇಣೂರು.
2. ಗೋಪಾಲ್ ಬಾ.ರಾ., 1983, ಬನವಾಸಿ ಕದಂಬರು, ಶಾ.ಸಂ. 23.
3. ಹಂಪ ನಾಗರಾಜಯ್ಯ, 2006, "ಬಾಹುಬಲಿಯ ಅತಿ ಪ್ರಾಚೀನ ಪ್ರತಿಮೆ", ಪ್ರಗತಿ ಮತ್ತು ಜಿನವಿಜಯ ಸಂ. 100/10–12(ಭಗವಾನ್ ಗೋಮಟೇಶ ಬಾಹುಬಲಿ ಮಹಾಮಸ್ತಕಾಭಿಷೇಕ ವಿಶೇಷ ಸಂಚಿಕೆ), ಪು. 24–25, ದಕ್ಷಿಣ ಭಾರತ ಜೈನ ಸಭಾ, ಸಾಂಗಲಿ.
4. ಪಾಡಿಗಾರ ಶ್ರೀನಿವಾಸ, 2008, ಬಾದಾಮಿ ಚಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ, ಪು.69.
5. ಅದೇ, ಪು.74.
6. ಎ.ಕ. ಸಂ.II, ಶಾ.ಸಂ.170.
7. ಅದೇ, ಶಾ.ಸಂ.371 ಮತ್ತು 373.
8. ಅದೇ, ಶಾ.ಸಂ. 82, 154, 274, 277, 342, 355, 542.
9. ಹಂಪ ನಾಗರಾಜಯ್ಯ, 2017, "ಜೈನ ವಾಸ್ತು, ಶಿಲ್ಪ ವಿನ್ಯಾಸ : ವಿಹಂಗಮ ನೋಟ", ಜೈನ ವಾಸ್ತು ಮತ್ತು ಶಿಲ್ಪ, ಪು.16.
10. ರಾಜಶೇಖರ ಎಸ್., 1981, "ಕರ್ನಾಟಕದಲ್ಲಿ ಗೊಮ್ಮಟನ ಮೂರ್ತಿಶಿಲ್ಪ", ಬೆಳ್ವೊಲ (ಡಾ. ಆರ್.ಸಿ. ಹಿರೇಮಠ ಅವರ ಅಭಿವಂದನ ಗ್ರಂಥ), ಪು. 437, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
11. ಹಂಪ ನಾಗರಾಜಯ್ಯ, 1997, ಸಾಂತರರು : ಒಂದು ಅಧ್ಯಯನ, ಪು.200–204.
12. ಎ.ಕ. ಸಂ. Gಖಖ, ಶಾ.ಸಂ. 166.
13. ಪರಮಶಿವಮೂರ್ತಿ ಡಿ.ವಿ., 2018, "ಮಂದರಗಿರಿ ಮತ್ತು ಹೊಯ್ಸಳ ಹೆಗ್ಗಡತಿ ಮಾಚಿಯಕ್ಕಳ ನಿರ್ಮಾಣಗಳು", ವಜ್ರಪದ್ಮ (ಡಾ. ಎಸ್.ಪಿ. ಪದ್ಮಪ್ರಸಾದ–70 ಬದುಕು ಬರಹ), ಪು. 464, ಮಂಡ್ಯ.
14. ಶೆಟ್ಟಿ ಎಸ್.ಡಿ., 2001, "ಪುನರ್ನಿರ್ಮಾಣಗೊಂಡ ಚಂದ್ರನಾಥಸ್ವಾಮಿ ಬಸದಿಯ ವಾಸ್ತುಕಲೆ ಮತ್ತು ಅದರ ವೈಶಿಷ್ಟ್ಯಗಳು", ಚಂದ್ರನಾಥ (ಸ್ಮರಣ ಸಂಚಿಕೆ), ಪು.47, ಧರ್ಮಸ್ಥಳ.

❖❖❖

# ಮೊಗಸಾಲೆಯವರ ಕಾದಂಬರಿಗಳು

**ಡಾ. ಬಿ. ಜನಾರ್ದನ ಭಟ್**
ಬೆಳ್ಮಣ್ಣು, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ

ಭಾಗ–1

ಡಾ. ನಾ. ಮೊಗಸಾಲೆಯವರು ಕನ್ನಡದ ಸುಪ್ರಸಿದ್ಧ ಕಾದಂಬರಿಕಾರರು. ಅವರು 1965 ರಿಂದ ಇದುವರೆಗೆ, ಅರ್ಧ ಶತಮಾನಕ್ಕಿಂತ್ಲೂ ಹೆಚ್ಚಿನ ಕಾಲಾವಧಿಯಲ್ಲಿ 25 ವೈವಿಧ್ಯಮಯವಾದ ಕಾದಂಬರಿಗಳನ್ನು ಕನ್ನಡ ಸಾಹಿತ್ಯಲೋಕಕ್ಕೆ ಸಲ್ಲಿಸಿದ್ದಾರೆ. ಈ ಕಾದಂಬರಿಗಳಲ್ಲಿ ನಮ್ಮ ಕರಾವಳಿಯ ಬದುಕನ್ನು ಮತ್ತು ಮನುಷ್ಯನ ಸಾರ್ವಕಾಲಿಕ ತುಡಿತಗಳನ್ನು ದಾಖಲಿಸಿ, ಅರ್ಥೈಸಿಕೊಳ್ಳುವ ಸಾಂಸ್ಕೃತಿಕ ಜವಾಬ್ದಾರಿಯನ್ನು ಅವರು ನಿರ್ವಹಿಸಿದ್ದಾರೆ.

ಈ ಕಾದಂಬರಿಗಳ ವೈವಿಧ್ಯವನ್ನು ಗುಂಪುಗಳಾಗಿ ಗ್ರಹಿಸಲು ಎರಡು ಕ್ರಮಗಳನ್ನು ಬಳಸಿಕೊಂಡಿರುವೆ. ಮೊದಲನೆಯದು – ಕನ್ನಡ ಕಾದಂಬರಿ ಪ್ರಕಾರವು ಬೆಳೆದುಬಂದ ಬಗೆ ಮತ್ತು ಅದಕ್ಕೆ ಮೊಗಸಾಲೆಯವರು ಸ್ಪಂದಿಸಿದ ರೀತಿ.

ಎರಡನೆಯದು – ಮೊಗಸಾಲೆಯವರ ಬದುಕಿನ ಕಾಲಘಟ್ಟಗಳಿಗೂ ಆಗ ಸೃಷ್ಟಿಯಾದ ಕಾದಂಬರಿಗಳಿಗೂ ಇರುವ ಸಂಬಂಧ.

ಕನ್ನಡ ಕಾದಂಬರಿಗಳ ಬೆಳವಣಿಗೆಯಲ್ಲಿ 1930ರವರೆಗಿನ ಅವಧಿಯನ್ನು ಪ್ರಾರಂಭದ ಘಟ್ಟ ಎನ್ನುತ್ತಾರೆ. ಗುಲ್ವಾಡಿ, ಎಂ.ಎಸ್. ಪುಟ್ಟಣ್ಣ, ಗಳಗನಾಥ ಮುಂತಾದವರು ಬಂದ ಕಾಲಘಟ್ಟ ಇದು. 1930 ರಿಂದ 1965 ರವರೆಗೆ ವಾಸ್ತವವಾದೀ ಕಾದಂಬರಿಗಳ ನಿರ್ಮಾಣಶೀಲ ಘಟ್ಟ, ಇದರ ನಡುವೆಯೆ ಪ್ರಗತಿಶೀಲ ಕಾದಂಬರಿಗಳೂ ರಚಿತವಾಗಿವೆ. ಕಾರಂತರು, ಕುವೆಂಪು, ಅನಕೃ, ಕಟ್ಟೀಮನಿ, ನಿರಂಜನ, ವ್ಯಾಸರಾಯ ಬಲ್ಲಾಳ ಮುಂತಾದವರ ಕಾದಂಬರಿಗಳು ಬಂದ ಕಾಲ ಇದು. 1960ರ ದಶಕದ ಉತ್ತರಾರ್ಧದಲ್ಲಿ ಕನ್ನಡದ ಮಹತ್ವದ ನವ್ಯ ಕಾದಂಬರಿಗಳು ಬರಲಾರಂಭಿಸಿದವು. 1980ರ ನಂತರ ದಲಿತ, ಮುಸ್ಲಿಮ್ ಸಂವೇದನೆ, ಸ್ತ್ರೀವಾದಿ ಸಂವೇದನೆ, ಬಂಡಾಯ ಇತ್ಯಾದಿಗಳು ಬರಲಾರಂಭಿಸಿದವು. 1990ರ ದಶಕದ ನಂತರ ನವಚಾರಿತ್ರಿಕ ಕಾದಂಬರಿಗಳು ಬರಲಾರಂಭಿಸಿ, ಈಗ ಅದೇ ಮುಖ್ಯ ಧಾರೆಯಾಗಿದೆ.

ಮೊಗಸಾಲೆಯವರ ಬದುಕಿನ ಪ್ರಮುಖ ಘಟ್ಟಗಳು ಹೀಗಿವೆ: 1944– ಕಾಸರಗೋಡಿನ ಕೋಳ್ಯೂರಿನಲ್ಲಿ ಜನನ. 1961– ಮೆಟ್ರಿಕ್ಯುಲೇಶನ್. 1961–1965 ಉಡುಪಿಯಲ್ಲಿ ಆಯುರ್ವೇದ ವಿದ್ಯಾಭ್ಯಾಸ. ಈ ಕಾಲಘಟ್ಟದಲ್ಲಿ ಮೊಗಸಾಲೆಯವರಿಗೆ ಉಡುಪಿಯಲ್ಲಿ ನವ್ಯ ಸಾಹಿತಿಗಳ ಒಡನಾಟ ಸಿಕ್ಕಿತು; ಅಧ್ಯಯನಕ್ಕೆ ಗ್ರಂಥಾಲಯಗಳು ಸಿಕ್ಕಿದವು. ಕತೆ, ಕವನ, ಕಾದಂಬರಿಗಳ ರಚನೆಯನ್ನು ಪ್ರಾರಂಭಿಸಿದರು.

1965– ಕಾಂತಾವರಕ್ಕೆ ವೈದ್ಯಾಧಿಕಾರಿಯಾಗಿ ಆಗಮನ, ಕಾಂತಾವರವನ್ನೇ ತಮ್ಮ ನೆಲೆಯನ್ನಾಗಿ ಮಾಡಿಕೊಂಡರು. 1966– ಪ್ರೇಮಾ ಅವರನ್ನು ಮದುವೆಯಾದರು.

1966ರಲ್ಲಿ ಕಾಂತಾವರದ ರೈತ ಯುವಕ ಸಂಘವನ್ನೂ, 1976ರಲ್ಲಿ ಕಾಂತಾವರ ಕನ್ನಡ ಸಂಘವನ್ನೂ ಸ್ಥಾಪಿಸಿದರು. 2002 ರಲ್ಲಿ ನಿವೃತ್ತರಾದರು.

**ಪ್ರಾರಂಭದ ನಿರ್ಮಾಣಶೀಲ ಕಾದಂಬರಿಗಳ ಘಟ್ಟ: 1963 –1972**

ಇದು ಮೊಗಸಾಲೆಯವರ ಕಾದಂಬರಿ ಬರವಣಿಗೆಯ ಪ್ರಾರಂಭಿಕ ಘಟ್ಟ. ಆಗ ಬಂದ ಕಾದಂಬರಿಗಳು ಮೂರು. 1) ಮಣ್ಣಿನಮಕ್ಕಳು –1965(ಬರೆದದ್ದು 1963), 2)ಅನಂತ –1968, 3)ಕನಸಿನ ಬಳ್ಳಿ 1972 (ಬರೆದದ್ದು 1970ರಲ್ಲಿ).

ಈ ಹಂತದ ಕಾದಂಬರಿಗಳು ಕನ್ನಡದ ನಿರ್ಮಾಣಶೀಲ ಘಟ್ಟದ ಕಾದಂಬರಿಗಳ ಸಾಲಿಗೆ ಸೇರುತ್ತವೆ. ಆ ಮಾದರಿಯಲ್ಲಿ ಮೊಗಸಾಲೆಯವರು ತಮ್ಮ ಹಳ್ಳಿಯ ಬದುಕಿನ ಗತಿ – ಸ್ಥಿತಿ – ಸ್ಥಿತ್ಯಂತರವನ್ನು ದಾಖಲಿಸಿದ್ದಾರೆ.

**ಮಣ್ಣಿನ ಮಕ್ಕಳು**

'ಮಣ್ಣಿನ ಮಕ್ಕಳು' ಕಾದಂಬರಿಯಲ್ಲಿ ಕಾಸರಗೋಡಿನ ಕೋಳ್ಯೂರಿನ ಜಮಿನ್ದಾರ ಸಂಕಪ್ಪ ಶೆಟ್ಟಿಯ ಒಕ್ಕಲಾಗಿರುವ ಮಂಜಪ್ಪ ಸ್ವಾಮಿನಿಷ್ಠನಾಗಿ ಕಷ್ಟಪಟ್ಟು ದುಡಿಯುವಾತ. ಅವನ ಸ್ವಾಮಿನಿಷ್ಠೆ ಈ ಕಾದಂಬರಿಯ ಪ್ರಧಾನ ಆಶಯವಾಗಿ, ನಿರ್ಮಾಣಶೀಲಘಟ್ಟದ ಕಾದಂಬರಿಗಳ ಹಾಗೆ 'ಪ್ರಾಮಾಣಿಕತೆ'(ಸಿನ್ಸಿಯಾರಿಟಿ) ಯನ್ನು ಪ್ರಧಾನ ನೆಲೆಯಾಗಿ ಹೊಂದಿದೆ. ಸಂಕಪ್ಪ ಶೆಟ್ಟರು ಮಂಜಪ್ಪನ 'ಧರ್ಮ'ವನ್ನು ಶ್ಲಾಘಿಸುವುದು ಹೀಗೆ: ವಿಆದರೆ ನೀನು ಮಂಜು... ನಿನ್ನ ಧರ್ಮ ಬಿಟ್ಟು ನಡೆಯಲಿಲ್ಲ. ನಿನ್ನ ಧರ್ಮವೇ ಶ್ರೀರಕ್ಷೆ. ಅದು ಕಾಪಾಡಿಕೊಂಡು ಬರುತ್ತದೆ.ಹಿ

ಹಿರಿಯ ಮಗ ಚೋಮ ತಂದೆಗೆ ಸಹಾಯಕನಾಗಿ ದುಡಿಯುವವನು ಕಮ್ಯೂನಿಸ್ಟರ ಪ್ರಭಾವಕ್ಕೆ ಒಳಗಾಗಿ ರಾಜಕೀಯ ಪ್ರವೇಶಿಸುತ್ತಾನೆ. ಭೂಮಸೂದೆ ಜಾರಿಯಾಗಲಿರುವ ಆ ಕಾಲಘಟ್ಟದಲ್ಲಿ ಅಪ್ಪ ಧನಿಗಳ ಜಮೀನನ್ನು ಬಿಟ್ಟುಕೊಟ್ಟು ತನಗೆ ಮಂಜೂರಾಗಿರುವ ದರ್ಖಾಸ್ತು ಭೂಮಿಯಲ್ಲಿ ಮನೆಯನ್ನು ಕಟ್ಟಿ ಸ್ವಂತ ಕೃಷಿ ಭೂಮಿಯನ್ನು ಹೊಂದಿ ಅಲ್ಲಿ ದುಡಿಯುವುದು ಅವನಿಗೆ ಇಷ್ಟವಿಲ್ಲ. ಕೇರಳದಲ್ಲಿ ಆಗ 'ನ್ಯಾಯಗೇಣಿ'ಗಾಗಿ ಧನಿ ಒಕ್ಕಲುಗಳು ಕೋರ್ಟುಗಳಿಗೆ ಅಲೆದಾಡುತ್ತಾ ಸಂಬಂಧವನ್ನು ಕೆಡಿಸಿಕೊಂಡು ಇಬ್ಬಣಗಳಾಗಿದ್ದ ಕಾಲ. (ನ್ಯಾಯ ಗೇಣಿಗಾಗಿ ಕೋರ್ಟಿಗೆ ಹೋಗುವುದರ ಬಗ್ಗೆ ಮುಂದಿನ ಆವೃತ್ತಿಗಳಲ್ಲಿ ಟಿಪ್ಪಣಿ ಕೊಡಬೇಕಾಗುತ್ತದೆ). ಚೋಮ ಕಮ್ಯುನಿಸ್ಟ್ ಪಕ್ಷದಲ್ಲಿ ಪಂಚಾಯತ್ ಚುನಾವಣೆಗೆ ನಿಂತು ಕೊಲೆ ಮಾಡಿ ಜೈಲು ಸೇರುತ್ತಾನೆ.

ಕಾದಂಬರಿಯ ಪ್ರಾರಂಭ ಕೋಳ್ಯೂರು ಮಂಡಲಪೂಜೆಯ ಅಂದಿನ ಚಿತ್ರಣದೊಂದಿಗೆ. ದೇವಸ್ಥಾನದ ಬೆಡಿ ಮತ್ತು ಬೇಂಡುಗಳ ಶಬ್ದ, ದೀಪಗಳ ಸಡಗರ ಮುಗಿದ ಮೇಲೆ ಸೆಟ್ಟರು ಮತ್ತು ಅವರ ಭಾವ ಸೂಟೆ ಹಿಡಿದುಕೊಂಡು ಮನೆಗೆ ಹೋಗುವ ದಾರಿಯಲ್ಲಿ ಮಂಜಣ್ಣನ ಮನೆಯ ಚಿಮಣಿ ದೀಪ ಮತ್ತು 'ಊರೆಲ್ಲ ಲಾಗ ಹಾಕುವ' ಡಬೋ ಡಬೋ ಎಂಬ ಅವಲಕ್ಕಿ ಕುಟ್ಟುವ ಸದ್ದು ಎದುರಾಗುತ್ತವೆ. ಇಲ್ಲಿ ಒಂದು ಪಾರಂಪರಿಕ ಜಗತ್ತು ಮತ್ತು ಇನ್ನೊಂದು ಉದೀಯಮಾನವಾದ ಶ್ರಮಿಕ ಜಗತ್ತನ್ನು ಮೊಗಸಾಲೆಯವರು ಮುಖಾಮುಖಿಯಾಗಿಸುತ್ತಾರೆ.

ಕಾದಂಬರಿಯಲ್ಲಿ ರಾಜಕೀಯ ಚಿಂತನೆಯೂ ಇದೆ. ಆ ಕಾಲದಲ್ಲಿ ಸ್ವಾತಂತ್ರ್ಯ

ಹೋರಾಟದ ನೇತೃತ್ವ ವಹಿಸಿದ ಪಕ್ಷವೆಂದು ಜನಪ್ರಿಯ ಪಕ್ಷವಾಗಿದ್ದ ಕಾಂಗ್ರೆಸ್ ಪಕ್ಷವು ತನ್ನದೇ ಆದ ರೀತಿಯಲ್ಲಿ ಬಡವರ ಕಲ್ಯಾಣ ಸಾಧಿಸಲಿದೆಯೆಂಬ ಅಭಿಪ್ರಾಯವು ಕಾದಂಬರಿಯಲ್ಲಿ ಹೆಚ್ಚು ಖಚಿತವಾಗಿ ಕಾಣಿಸುತ್ತದೆ. (1963ರಲ್ಲಿ ಇದನ್ನು ಬರೆದಾಗ ಭಾರತದ ಮೊದಲನೆಯ ಪ್ರಧಾನ ಮಂತ್ರಿಗಳಾದ ಜವಾಹರಲಾಲ್ ನೆಹರೂ ಅವರೇ ಆಳುತ್ತಿದ್ದರು). ಕಮ್ಯುನಿಸ್ಟರು ಹಿಡಿದಿರುವ ದಾರಿ ವರ್ಗ ವೈಷಮ್ಯದ್ದು ಮತ್ತು ಹಿಂಸಾಚಾರದ್ದು, ಹಾಗಾಗಿ ಅದು ಬಡವರ ಬದುಕನ್ನು ಸುಧಾರಿಸಲಾರದು ಎನ್ನುವ ಅಭಿಪ್ರಾಯ ಕಾದಂಬರಿಯಿಂದ ಹುಟ್ಟುತ್ತದೆ. ಮುಂದೆ 'ಉಪ್ಪು' ಕಾದಂಬರಿಯಲ್ಲಿ ಮೊಗಸಾಲೆಯವರು ನಿಷ್ಠಾವಂತ ಹಾಗೂ ಪ್ರಾಮಾಣಿಕನಾದ ಕಮ್ಯೂನಿಸ್ಟ್ ನಾಯಕ ವಾಮನ ರಾವ್ ಹೊಳ್ಳ ಎಂಬ ಕಾಲ್ಪನಿಕ ಪಾತ್ರದ ಜೀವನಚಿತ್ರಣವನ್ನು ನೀಡಿದ್ದಾರೆ. ಇಂತಹ ನಿಷ್ಠಾವಂತ ಸಿದ್ಧಾಂತವಾದಿ ಕೂಡ ಭಾರತದ ರಾಜಕೀಯದಲ್ಲಿ ಪ್ರಭಾವವನ್ನು ಬೀರಲಾಗದಷ್ಟು ರಾಜಕೀಯ ಹೊಲಸಾಗುತ್ತಿದೆ ಎನ್ನುವ ಚಿಂತನೆಯನ್ನು ಅವರ ನಂತರದ ಕಾದಂಬರಿಗಳು ಅಭಿವ್ಯಕ್ತಿಸಿವೆ.

ಡಾ. ರವಿಶಂಕರ್ ಜಿ.ಕೆ. ಅವರು ಮೊಗಸಾಲೆಯವರ ಕಾದಂಬರಿಗಳ ಬಗ್ಗೆ ಹೇಳುವ ಈ ಮಾತುಗಳು ಗಮನಾರ್ಹವಾಗಿವೆ: 'ಮಣ್ಣಿನ ಮಕ್ಕಳು' ಕಾದಂಬರಿಯಲ್ಲಿ ಒಕ್ಕಲುತನದಿಂದ ಶೋಷಣೆಗೆ ಒಳಗಾಗುತ್ತಿದ್ದೇವೆ ಎಂಬುದಾಗಿ ಚೋಮ ವಾದಿಸುವಾಗ ಸ್ವಾಮಿನಿಷ್ಠೆ ಮತ್ತು ಭಾವನಾತ್ಮಕ ಸಂಬಂಧಗಳ ಪ್ರತಿನಿಧಿಯಾಗಿರುವ ಮಂಜಪ್ಪನ ಪಾತ್ರ ತನ್ನೊಳಗೆ ಆಡಿಕೊಳ್ಳುವ ಈ ಮಾತುಗಳನ್ನು ಮೊಗಸಾಲೆಯವರ ಮೊದಲ ಕಾದಂಬರಿ ಬರೆಯು ಹೊತ್ತಿಗಿದ್ದ ನಿಲುವಿಗೆ ಉದಾಹರಣೆಯಾಗಿಸಬಹುದು. "ಯಾಕೆ ಇದು ಹೀಗಾಯಿತು? ಸ್ವಾತಂತ್ರ್ಯ ಸ್ವಾತಂತ್ರ್ಯ ಅಂತ ಜನ ಅಂದು ಮುಂದೆ ಮುಂದೆ ನುಗ್ಗಿತು. ಕಡೆಗೆ ಸ್ವಾತಂತ್ರ್ಯ ಸಿಕ್ಕಿತು; ಆದರೆ ಅದರ ಅರ್ಥ ಮಾತ್ರ ಅವರಿಗೆ ಆಗಲಿಲ್ಲ. ಹತ್ತಾರು ಪಾರ್ಟಿಗಳು, ನೂರಾರು ಗುಂಪುಗಳು, ವಂಚನೆ, ಮೋಸ, ಜಾದೂ, ವಿದ್ಯೆಗಳು! ಎಲ್ಲ ಪಕ್ಷಗಳಂತೆ ಕಮ್ಯುನಿಷ್ಟ್ ಇದೂ ಒಂದು! ಯಾವುದೇ ಪಕ್ಷವಿರಲಿ ಅದರ ದೋಷ ಎಳ್ಳಷ್ಟೂ ಇಲ್ಲ. ಅದನ್ನು ಆಶ್ರಯಿಸಿದ ವ್ಯಕ್ತಿಗಳಂತೆ ಅದು ಹೋಗುತ್ತದೆ. ಚೂರಿಯಿಂದ ಜೀವ ಉಳಿಸಲೂಬಹುದು. ಅಳಿಸಲೂಬಹುದು. ಅದು ಉಪಯೋಗಿಸುವವನ ಹೊಂದಿಕೊಂಡಂತೆ!" ...ಇದಕ್ಕೆ ಪೂರಕವಾಗಿ ಸಂಕಪ್ಪ ಶೆಟ್ಟರ ಈ ಮಾತುಗಳನ್ನು ಆತ ನೆನಪಿಸಿಕೊಳ್ಳುತ್ತಾನೆ. "ಕಮ್ಯುನಿಸ್ಟಿನ ತತ್ವಗಳು ಬಹಳ ಒಳ್ಳೆಯವು ಮಂಜೂ. ನಾನೇನು ಅದನ್ನು ದ್ವೇಷಿಸುವುದಿಲ್ಲ ನೋಡು. ಆದರೆ ಈ ರಾಜಕೀಯ ಪುಡಾರಿಗಳಿಗೆ ಕಮ್ಯುನಿಷ್ಟಿನ ಅರ್ಥ ಕೂಡ ತಿಳಿಯೋಲ್ಲ.  ಇವರ ಧ್ಯೇಯ ಒಂದೇ. ಅದು ಬಡವರನ್ನು ನಂಬಿಸಿ ಮೋಸಗೊಳಿಸುವುದು. ಕೇವಲ ಸೋಗು".

ಈ ಕಾದಂಬರಿ ಮಂಜಪ್ಪನ ಕಿರಿಯ ಮಗ ಸುಂದರ ಮತ್ತೊಂದು ರೀತಿಯ ಜೀವನಮಟ್ಟದ ಸುಧಾರಣೆಗೆ ಪ್ರಯತ್ನಿಸಿ ವೈಯಕ್ತಿಕ ದೌರ್ಬಲ್ಯಕ್ಕೆ ಬಲಿಯಾಗಿ ನೆಲೆಯಿಲ್ಲದಂತಾದ ಕಥೆಯನ್ನೂ ಹೇಳುತ್ತದೆ. ಮಂಜಪ್ಪನ ತಂಗಿಯ ದುರಂತ, ಅವಳ ಜೀವನಪ್ರೀತಿ, ಕಾಯಕ ನಿಷ್ಠೆ ಇತ್ಯಾದಿ ಹಲವು ಆಯಾಮಗಳನ್ನು ಹೊಂದಿದೆ. ಇಲ್ಲಿ ಮಣ್ಣಿನ ಮಕ್ಕಳು, ಅಂದರೆ ಹಳ್ಳಿಗರ ಬದುಕಿನ ಆ ಕಾಲದ ಚಿತ್ರಣವನ್ನು ಈ ಕುಟುಂಬದ ಕಥೆಯ ಮೂಲಕ ಮಾಡುವುದು ಮೊಗಸಾಲೆಯವರ ಉದ್ದೇಶವಾಗಿರಬಹುದು. ಆ ಬಡ ಕುಟುಂಬದ ಏರುಪೇರು, ತಾಕಲಾಟಗಳ ಚಿತ್ರಣವು ಗಂಭೀರವಾದ

ಕಾದಂಬರಿಯೊಂದರ ವಸ್ತುವಾಗುವಂತೆ ಚಿತ್ರಿಸಿದ ಹದಿಹರೆಯದ ಮೊಗಸಾಲೆಯವರ ಸಾಧನೆ ಶ್ಲಾಘನೀಯವಾದದ್ದು.

**'ಅನಂತ' ಮತ್ತು 'ಕನಸಿನ ಬಳ್ಳಿ'**

ವಾಸ್ತವವಾದಿ ಅಭಿಜಾತ ಕಾದಂಬರಿಗಳಲ್ಲಿ ಗ್ರಾಮ ಸಮಾಜದ ವಾಸ್ತವವನ್ನು ದಾಖಲಿಸುವ ಕಾದಂಬರಿಗಳ ಧಾರೆಯ ಜತೆಗೆ ಕೌಟುಂಬಿಕ ಗಾಥೆಗಳನ್ನು ಮತ್ತು ವ್ಯಕ್ತಿ ಕೇಂದ್ರಿತ ಚರಿತ್ರೆಗಳನ್ನು ಕಾಣಬಹುದು. ಸಾಮಾಜಿಕ ವಾಸ್ತವಗಳನ್ನು ಗ್ರಹಿಸಲು ಕೂಡ ಕೆಲವೊಮ್ಮೆ ಎರಡು ಪ್ರಧಾನ ಕುಟುಂಬಗಳನ್ನು ಕೇಂದ್ರದಲ್ಲಿಟ್ಟುಕೊಂಡು ಸಮಾಜದ ಗತಿಸ್ಥಿತಿಗಳನ್ನು ಚಿತ್ರಿಸಲು ಸಾಧ್ಯವಿದೆ. ಕಾರಂತರ 'ಚೋಮನ ದುಡಿ' ಆ ರೀತಿಯ ಕಾದಂಬರಿ.

ಕಥಾನಾಯಕ – ನಾಯಕಿಯ ಬದುಕಿನ ಏರಿಳಿತ, ಗಂಡು–ಹೆಣ್ಣಿನ ಆಕರ್ಷಣೆ, ಮಾನಸಿಕ ತಾಕಲಾಟಗಳು, ಮಹತ್ವಾಕಾಂಕ್ಷೆಗಳನ್ನು ಚಿತ್ರಿಸುವ ಕಾದಂಬರಿಗಳ ಒಂದು ಪ್ರಧಾನ ಧಾರೆ ಪಾಶ್ಚಾತ್ಯರಲ್ಲಿಯೂ ಕನ್ನಡದಲ್ಲಿಯೂ ಇದೆ. ಬೆಳ್ಳೆ ರಾಮಚಂದ್ರ ರಾಯರ 'ಚಿರವಿರಹಿ' ಆ ಕಾಲದಲ್ಲಿ ಪ್ರಸಿದ್ಧವಾಗಿದ್ದ ಆ ಬಗೆಯ ಒಂದು ಅಭಿಜಾತ ಶೈಲಿಯ ಕಾದಂಬರಿ. ಮೊಗಸಾಲೆಯವರಿಗೆ ಆ ಬಗೆಯ ಕಾದಂಬರಿಗಳ ಮಾದರಿಗಳು ಎದುರಿಗಿದ್ದವು.

ಮೊಗಸಾಲೆಯವರು ಕಾಂತಾವರಕ್ಕೆ ಹೋದಮೇಲೆ ಬರೆದ ಎರಡು ಕಾದಂಬರಿಗಳು ಈ ಬಗೆಯ ವಾಸ್ತವವಾದಿ ನೆಲೆಯ ಕಾದಂಬರಿಗಳು. ಇವುಗಳಲ್ಲಿ ಯುವ ನಾಯಕನ ಮದುವೆ ಮುಖ್ಯ ವಸ್ತುವಾಗಿದೆ – ಅದು ಕ್ರಾಂತಿಕಾರಕವಾದದ್ದು ಮತ್ತು ಪ್ರೇಮ ವಿವಾಹವಾಗಿರುವುದು ಗಮನಾರ್ಹ ಅಂಶವಾಗಿದೆ. ಮೊಗಸಾಲೆಯವರು ಉಡುಪಿಯಲ್ಲಿ ವಿದ್ಯಾಭ್ಯಾಸ ಮುಗಿಸಿ, ಹಳ್ಳಿಗೆ ಹೋಗಿ ಸೇವೆ ಸಲ್ಲಿಸಲಾರಂಭಿಸಿದ್ದು ಮತ್ತು ಆ ಕಾಲದಲ್ಲಿ ಸಂಪ್ರದಾಯವಾದಿಗಳಿಗೆ ಒಪ್ಪಿಗೆಯಾಗದಿದ್ದ ಬ್ರಾಹ್ಮಣರ ಮತ್ತೊಂದು ಪಂಗಡವಾದ ಕೋಟ ಬ್ರಾಹ್ಮಣ ವಧುವನ್ನು ವಿವಾಹವಾದದ್ದು ಇದೇ ಕಾಲಘಟ್ಟದಲ್ಲಿ. ಹಾಗೆ ಸ್ವಾನುಭವವನ್ನು ಸಾರ್ವತ್ರೀಕರಣ ಮಾಡುವ ಒಂದು ವಿದ್ಯಮಾನ ಇಲ್ಲಿ ನಡೆದಿದೆ. 'ಕನಸಿನ ಬಳ್ಳಿ' ಮತ್ತು 'ಅನಂತ' ಎರಡೂ ಕಾದಂಬರಿಗಳ ನಾಯಕರು ವೈದ್ಯಶಾಸ್ತ್ರ ಓದಿದವರು. ಸಮಾಜ ಮತ್ತು ಕುಟುಂಬ ಒಪ್ಪದ ಹುಡುಗಿಯರನ್ನು ಅವರು ಪ್ರೀತಿಸುತ್ತಾರೆ; ಪ್ರೀತಿಸಿದವರನ್ನು ಮದುವೆಯಾಗಲು ಸಾಧ್ಯವಾಗುವುದಿಲ್ಲ. ಅದನ್ನು ಅವರಿಬ್ಬರು ಎದುರಿಸುವ ರೀತಿ ಭಿನ್ನವಾಗಿದೆ. 'ಅನಂತ' ಕಾದಂಬರಿಯ ನಾಯಕ ಅನಂತನು, ತಾನು ಮದುವೆಯಾಗಲು ಇಷ್ಟಪಟ್ಟಿದ್ದ ಅಕ್ಕನ ಮಗಳು ಭಾರತಿಯನ್ನು ವಿರೋಧದ ನಡುವೆಯೂ ಮದುವೆಯಾಗಲು ಸಿದ್ಧನಾಗುತ್ತಾನೆ. ಯಾಕೆಂದರೆ ಕರಾವಳಿಯ ಸಮುದಾಯಗಳಲ್ಲಿ ಅಕ್ಕನ ಮಗಳನ್ನು ಮದುವೆಯಾಗುವಂತಿಲ್ಲ. ಈ ಕ್ರಾಂತಿಕಾರಿ ಮದುವೆ ಆಗುವುದಿಲ್ಲ, ಯಾಕೆಂದರೆ ಅವಳೇ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಅನಂತ ನಂತರ ವಿರಕ್ತನಾಗಿ ಮೈಸೂರಿಗೆ ತೆರಳುತ್ತಾನೆ.

'ಕನಸಿನ ಬಳ್ಳಿ'ಯಲ್ಲಿ ನಾಯಕಿ, ವಿಧವೆ–ನರ್ಸ್ ವಸಂತಿಯನ್ನು ಮದುವೆಯಾಗಲು ಬಯಸುತ್ತಾನೆ. ಕುಟುಂಬದ ವಿರೋಧವಿದ್ದರೂ ಮದುವೆ ಆಗುವುದು ಖಚಿತವೆಂದಾದಾಗ ವಸಂತಿ ಹೃದಯಾಘಾತವಾಗಿ ಸತ್ತುಹೋಗುತ್ತಾಳೆ.

ಅವಳ ಮರಣದ ಬಳಿಕ ನಾಯಕ ಡಾ. ಸದಾನಂದ 'ವಿರಕ್ತನಂತೆ ಮೈಸೂರಿನಿಂದ ಕೋಳ್ಯೂರಿಗೆ' ಬರುತ್ತಾನೆ (ಇಲ್ಲಿ 'ಅನಂತ' ಕಾದಂಬರಿಯಲ್ಲಿ 'ವಿರಕ್ತನಂತೆ ಹಳ್ಳಿಯಿಂದ ಮೈಸೂರಿಗೆ ಹೋದದ್ದನ್ನು ಹೋಲಿಸಬಹುದು). ಕೋಳ್ಯೂರು ಎಂಬ ಹಳ್ಳಿಯಲ್ಲಿ ಕೃಷಿಕನಾಗಿ, ಕಾರಂತರ ಮಗಳು ಪಾರ್ವತಿಯನ್ನು ಮದುವೆಯಾಗುತ್ತಾನೆ ಎನ್ನುವ ಸೂಚನೆ ಕಾದಂಬರಿಯಲ್ಲಿದೆ. ಕೋಳ್ಯೂರಿಗೆ ಬಂದ ಸದಾನಂದ ಗೇಣಿದಾರರಾಗಿದ್ದ ಸುಬ್ರಾಯ ಕಾರಂತರ ಸಂಪೂರ್ಣ ಸಹಕಾರದಿಂದ ಕೃಷಿಯನ್ನು ಅಭಿವೃದ್ಧಿಪಡಿಸಿದ್ದಲ್ಲದೆ ಗ್ರಾಮೀಣ ಭಾಗದಲ್ಲಿ ಚಿಕಿತ್ಸೆಯನ್ನು ಆರಂಭಿಸಿ ಸಹಕಾರಿ ಸಂಘ, ಯಂಗ್ ಫಾರ್ಮರ್ಸ್ ಕ್ಲಬ್ ಮುಂತಾದವುಗಳನ್ನು ಸ್ಥಾಪಿಸಿ ಆದರ್ಶ ಗ್ರಾಮವನ್ನಾಗಿ ರೂಪಿಸುತ್ತಾನೆ. ಇಲ್ಲಿ ಮೊಗಸಾಲೆಯವರು ಕಾಂತಾವರದಲ್ಲಿ 1966ರಲ್ಲಿ ರೈತ ಯುವಕವೃಂದವನ್ನು ಸ್ಥಾಪಿಸಿದ್ದು, ವೈದ್ಯಕೀಯ ಸೌಲಭ್ಯವೇ ಇಲ್ಲದ ಕಾಂತಾವರದ ಆಸುಪಾಸಿನಲ್ಲಿ ಜನಸಾಮಾನ್ಯರ ಜನಪ್ರಿಯ ವೈದ್ಯರಾದದ್ದು ಓದುಗರಿಗೆ ನೆನಪಾಗಬಹುದು.

**ಎರಡನೆಯ ಘಟ್ಟದ ಕಾದಂಬರಿಗಳು**

'ವಾಸ್ತವವಾದಿ–ನವ್ಯ' ಕಾದಂಬರಿಗಳ ಘಟ್ಟ : 1965–1990

ಈ ಘಟ್ಟದ ಕಾದಂಬರಿಗಳು ಇವು: 4) ನನ್ನದಲ್ಲದ್ದು–1977, 5) ಪಲ್ಲಟ–1978, 6) ಹದ್ದು–1980, 7) ಪ್ರಕೃತಿ–1984, 8) ನೆಲಮುಗಿಲುಗಳ ಮಧ್ಯೆ–1985, 9) ದಿಗಂತ–1988, 10) ದೃಷ್ಟಿ–1991, 11) ಉಪ್ಪು–1995, 12) ತೊಟ್ಟಿ–1997, 13) ಪಂಥ–2002, 14) ಅರ್ಥ–2002.

ಮೊಗಸಾಲೆಯವರು ನವ್ಯ ಸಾಹಿತ್ಯದಿಂದ ಪ್ರಭಾವಿತರಾಗಿದ್ದಾಗ ಬರೆದ ಈ ಕಾದಂಬರಿಗಳನ್ನು 'ವಾಸ್ತವವಾದಿ–ನವ್ಯ' ಕಾದಂಬರಿಗಳೆಂದು ಕರೆಯಬಹುದು. ಮೊಗಸಾಲೆಯವರು ಕಾಂತಾವರದ ಒಬ್ಬ ಸಾಮಾಜಿಕ ಮುಂದಾಳುವಾಗಿ ಸಾಂಸ್ಕೃತಿಕ ಸಂಘಟನೆಗಳನ್ನು ಕಟ್ಟಿದ್ದು ಈ ಘಟ್ಟದಲ್ಲಿ. ಜೊಕ್ಕಾಡಿ, ರಾಮದಾಸ್ ಮುಂತಾದ ನವ್ಯ ಸಾಹಿತಿಗಳ ಒಡನಾಟದ ಮೂಲಕ ಮತ್ತು ನವ್ಯ ಸಾಹಿತ್ಯದ ಓದಿನಿಂದ ನವ್ಯ ಸಾಹಿತ್ಯದ ಒಲವನ್ನು ಬೆಳೆಸಿಕೊಂಡು, ನವ್ಯ ಸಾಹಿತಿಯಾಗಿ ಗುರುತಿಸಿಕೊಂಡದ್ದು ಇದೇ ಕಾಲದಲ್ಲಿ. ಆದರೆ ಅವರಿಗೆ ದಕ್ಕುತ್ತಿದ್ದ ಅನುಭವಲೋಕ ಗ್ರಾಮ ಸಮಾಜ ಮತ್ತು ಅಲ್ಲಿನ ಸಮಸ್ಯೆಗಳು. ಈ ಸಂದರ್ಭವನ್ನು ಅವರು ತಮ್ಮದೇ ಆದ ರೀತಿಯಲ್ಲಿ ನಿಭಾಯಿಸಿದರು. ಆಗ ಎರಡು ಬಗೆಯ ಕಾದಂಬರಿಗಳನ್ನು ಅವರು ಬರೆದರು.

ಒಂದು–ಗ್ರಾಮ ಸಮಾಜದ ವಾಸ್ತವವಾದಿ ಚಿತ್ರಣಕ್ಕೆ ನವ್ಯ ಸಾಹಿತ್ಯದ ಅಥೆಂಟಿಸಿಟಿ ಆಯಾಮವನ್ನು ಕೊಟ್ಟರು; ಅಂದರೆ ಪ್ರಾಮಾಣಿಕತೆ, ಭಾವನಾತ್ಮಕ ಆದರಶ ಸಂಬಂಧಗಳು ಮುಂತಾದ ಮೌಲ್ಯಗಳನ್ನು ಪ್ರತಿಪಾದಿಸದೆ ಗ್ರಾಮ ಸಮಾಜ ವ್ಯಕ್ತಿ ದೌರ್ಬಲ್ಯಗಳಿಂದ ಛಿದ್ರವಾಗುತ್ತಿರುವುದನ್ನು ತೋರಿಸಿದರು.

ಎರಡು–ನವ್ಯ ಸಾಹಿತ್ಯದಿಂದ ಪ್ರೇರಿತರಾಗಿ ವೈಯಕ್ತಿಕ ಇಂದ್ರಿಯಾನುಭವಗಳ ಅನ್ವೇಷಣೆಯ ಕಥಾನಕಗಳನ್ನು ಸೃಷ್ಟಿಸಿದರು. ಅಂದರೆ ವ್ಯಕ್ತಿಗಳು ಸಾಮಾಜಿಕ ಮೌಲ್ಯಗಳಿಗೆ ಬದ್ಧರಾಗದೆ ತಮಗೆ ಬೇಕಾದಂತೆ ಬದುಕುವ ಸ್ವಾತಂತ್ರ್ಯವನ್ನು ಪಡೆಯುವ ಕಥನಗಳನ್ನು ಕಟ್ಟಿದರು. ಈ ಸ್ವಾತಂತ್ರ್ಯ ಪಾತ್ರಗಳ ಲೈಂಗಿಕ ಸ್ವಚ್ಛಂದತೆಯ ಮೂಲಕ ವ್ಯಕ್ತವಾಯಿತು ಹೊರತು ಗಾಢವಾದ ಅಸ್ತಿತ್ವವಾದಿ ಅರಿವಿನಿಂದ ಅಲ್ಲ.

ಹೀಗೆ ಈ ಕಾಲಘಟ್ಟದಲ್ಲಿ ಎರಡು ಬಗೆಯ ಕಾದಂಬರಿಗಳು ಹುಟ್ಟಿದವು.

ಮೊದಲನೆಯ ಮಾದರಿಯಲ್ಲಿ 'ಪಲ್ಲಟ', 'ದಿಗಂತ', 'ಪಂಥ', 'ಅರ್ಥ'ದಂತಹ ಕಾದಂಬರಿಗಳು ಸೃಷ್ಟಿಯಾದರೆ ಎರಡನೆಯ ಮಾದರಿಯಲ್ಲಿ 'ನನ್ನದಲ್ಲದ್ದು', 'ಪ್ರಕೃತಿ', 'ನೆಲಮುಗಿಲುಗಳ ಮಧ್ಯೆ', 'ಹದ್ದು' ಮುಂತಾದ ಕಾದಂಬರಿಗಳು ಹುಟ್ಟಿದವು.

ಮೂರನೆಯ ಘಟ್ಟದಲ್ಲಿಯೂ ಈ ಎರಡು ಬಗೆಯ ಕಾದಂಬರಿಗಳ ಬರವಣಿಗೆ ಮುಂದುವರಿದಿದೆ. ಮೊದಲನೆಯ ಸಾಮಾಜಿಕ ಮಾದರಿಯಲ್ಲಿ 'ಭಾರತ ಕಥಾ', 'ಧರ್ಮಯುದ್ಧ'ದಂತಹ ಕಾದಂಬರಿಗಳು ಹುಟ್ಟಿದರೆ, ಇಂದ್ರಿಯಾನುಭವಗಳ ಅನ್ವೇಷಣೆಯ ವೈಯಕ್ತಿಕ ಚರಿತ್ರೆಗಳ ಕಥನಗಳ ಮಾದರಿಯಲ್ಲಿ 'ಧಾತು' ಮತ್ತು 'ನೀರಿನೊಳಗಿನ ಮಂಜು' ಕಾದಂಬರಿಗಳು ಹುಟ್ಟಿವೆ.

ನಿರ್ಮಾಣಶೀಲ ಅಥವಾ ನವೋದಯ ಕಾಲದ ವಾಸ್ತವವಾದಿ ಕಾದಂಬರಿಗಳಿಗೂ ನವ್ಯ ಸಂವೇದನೆಗೂ ಇರುವ ವ್ಯತ್ಯಾಸ: ಲಯನೆಲ್ ಟ್ರಿಲಿಂಗ್ ಇದನ್ನು 'ಸಿನ್ಸಿಯಾರಿಟಿ' – ಪ್ರಾಮಾಣಿಕತೆ ಮತ್ತು 'ಅಥೆಂಟಿಸಿಟಿ' – ಅಧಿಕೃತತೆ ಎಂಬ ಪರಿಕಲ್ಪನೆಗಳ ಮೂಲಕ ವಿವರಿಸಿದ್ದಾನೆ. ಈ ಬಗ್ಗೆ ಹೇಳುತ್ತಾ ಶಾಂತಿನಾಥ ದೇಸಾಯಿ ಅವರು, ವಿನವ್ಯ ಸಾಹಿತ್ಯ ನಿರ್ಮಾಣವಾಗುವ ತನಕ ಸಿನ್ಸಿರಿಟಿಯೇ ನಮ್ಮ ನೈತಿಕ ಜೀವನದ ಕೇಂದ್ರವಾಗಿತ್ತುಹಿ ಎಂದು ಅದನ್ನು ನಮ್ಮ ಸಾಹಿತ್ಯ ಸಂದರ್ಭಕ್ಕೆ ಅನ್ವಯಿಸಿದ್ದಾರೆ. ನವ್ಯ ಪೂರ್ವದ ಸಾಹಿತ್ಯದಲ್ಲಿ 'ಪ್ರಾಮಾಣಿಕತೆ' (ಸಿನ್ಸಿಯಾರಿಟಿ) ಒಂದು ಮುಖ್ಯ ಆಶಯವಾಗಿ, ನೈತಿಕತೆಯ ನೆಲೆಯಾಗಿತ್ತು. ಉದಾಹರಣೆಗೆ, ಕಾರಂತರ ಕಾದಂಬರಿಗಳಲ್ಲಿ ಪ್ರಾಮಾಣಿಕತೆಗೆ ಬೆಲೆ. ನವ್ಯ ಸಾಹಿತ್ಯದಲ್ಲಿ 'ಅಧಿಕೃತತೆ' (ಅಥೆಂಟಿಸಿಟಿ)ಯೆ ಪ್ರಮುಖ ಮೌಲ್ಯವಾಯಿತು. ಯಾವುದೇ ಪೂರ್ವ ನಿರ್ಧಾರಿತ ಮೌಲ್ಯಗಳನ್ನು ಒಪ್ಪದೆ ಪ್ರಶ್ನಿಸುವ ಮೂಲಕ, ಸ್ವಂತ ಅನುಭವ ಪ್ರಾಮಾಣ್ಯವನ್ನೇ ಮುಖ್ಯವೆಂದು ಪರಿಗಣಿಸುವ ಮೂಲಕ ಹಳೆಯದನ್ನು ತಿರಸ್ಕರಿಸುವ ಮನೋಭಾವ ಕಾಣಿಸಿಕೊಂಡಿತು. ಈ ಬದಲಾವಣೆಯನ್ನು ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಯಲ್ಲಿ ಕಾಣಬಹುದು. ಪ್ರಾಣೇಶಾಚಾರ್ಯರು ಮೊದಲು ಪ್ರಾಮಾಣಿಕತೆಯೇ ಪರಮ ಮೌಲ್ಯವೆಂದು ಬದುಕಿದ್ದವರು; ಚಂದ್ರಿಯ ಜತೆಗೆ ಆದ ಅನುಭವದ ನಂತರ ಅವರು ಸ್ವಂತದ ಹುಡುಕಾಟದ ಮೂಲಕ ಅಧಿಕೃತತೆಯನ್ನು ಪರಮ ಮೌಲ್ಯವಾಗಿ ಸ್ವೀಕರಿಸುತ್ತಾರೆ.

ಎರಡನೆಯ ಘಟ್ಟದಲ್ಲಿ ಮೊಗಸಾಲೆಯವರಿಗೆ ಸಿಕ್ಕಿದ ಅನುಭವಲೋಕ ಗ್ರಾಮ ಸಮಾಜವಾದುದರಿಂದ ತಮ್ಮ ಹೊಸ ಸಂವೇದನೆಗಳನ್ನು ಗ್ರಾಮ ಸಮಾಜದ ಸಮಸ್ಯೆಗಳ ಜತೆಗೆ ಬೆಸದು ಕಥಾನಕಗಳನ್ನು ಕಟ್ಟಿದರು. ಈ ಘಟ್ಟದ ಅವರ ಒಟ್ಟು ನಿಲುವು 'ಪಲ್ಲಟ' ಕಾದಂಬರಿಯಲ್ಲಿ ವ್ಯಕ್ತವಾಗಿದೆ.

ಹಾಗೆಯೇ ಕಾಮ ಸಂಬಂಧಗಳನ್ನು ಹೊಂದುವುದರಲ್ಲಿ ವ್ಯಕ್ತಿ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತಾ, ಸಾಮಾಜಿಕ ಕಟ್ಟುಪಾಡುಗಳನ್ನು ಉಲ್ಲಂಘಿಸುವ ನಾಯಕ ನಾಯಕಿಯರು ಓಡಾಡುವುದು ನಗರಗಳಲ್ಲಿ ಎನ್ನುವುದು ಗಮನಿಸಬೇಕಾದ ಸಂಗತಿ. 'ಹದ್ದು' ಕಾದಂಬರಿಯಲ್ಲಿ ಈ ಪ್ರವೃತ್ತಿಯನ್ನು ಗ್ರಾಮೀಣ ಹಿನ್ನೆಲೆಯಲ್ಲಿ ಅನ್ವೇಷಿಸಿರುವುದು ಕುತೂಹಲಕರವಾಗಿದೆ ಮತ್ತು ಅಧ್ಯಯನಯೋಗ್ಯವೂ ಆಗಿದೆ.

ಪಲ್ಲಟ: 1978ರಲ್ಲಿ ಪ್ರಕಟವಾದ 'ಪಲ್ಲಟ' ಕಾದಂಬರಿಯಲ್ಲಿ ಮಾರಪ್ಪ ಶೆಟ್ಟಿ ಮತ್ತು ರಂಗಪ್ಪ ಶೆಟ್ಟಿ ಪರಸ್ಪರ ವಿರೋಧಿಗಳು. ರಂಗಪ್ಪ ಶೆಟ್ಟಿ ತನ್ನ ಒಕ್ಕಲುಗಳ ಬಗೆಗೆ ನಿಜವಾಗಿಯೂ

ಕಾಳಜಿ ಹೊಂದಿದವನಾಗಿದ್ದು ಸದಾಚಾರವುಳ್ಳ ಜಮೀನುದಾರನಾಗಿದ್ದಾನೆ. ಮಾರಪ್ಪ ಶೆಟ್ಟಿ ರಾಜಕೀಯ ಪುಢಾರಿ, ದುಷ್ಟ. ಆತನ ಕಾಮಕ್ಕೆ ಮತ್ತು ಧನದಾಹಕ್ಕೆ ಬಲಿಯಾಗುವ ಕುಟುಂಬಗಳು ಅನೇಕ. ತನಗೆ ಬೇಕಾದ ಸಹಕಾರ ನೀಡದ ಸರಕಾರಿ ಅಧಿಕಾರಿಯ ಎದುರೇ ಅವರ ಹೆಂಡತಿಯನ್ನು ಸಾಮೂಹಿಕ ಅತ್ಯಾಚಾರ ಮಾಡಿಸುತ್ತಾನೆ. ರಂಗಪ್ಪ ಶೆಟ್ಟಿಯ ಒಕ್ಕಲಾಗಿರುವ ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿದ ಗಾಬ್ರು ಭೂಮಸೂದೆ ಬಂದರೂ ಧಣಿಯ ಆಸ್ತಿಗೆ ಡಿಕ್ಲರೇಶನ್ ಕೊಡುವುದಿಲ್ಲ. ರಂಗಪ್ಪ ಶೆಟ್ಟಿಯ ಮೇಲೆ ದ್ವೇಷ ಸಾಧಿಸಲು ಗಾಬ್ರುವಿನಿಂದ ಅವನ ಆಸ್ತಿಗೆ ಡಿಕ್ಲರೇಶನ್ ಕೊಡಿಸಬೇಕೆಂದು ಮಾರಪ್ಪ ಅವನನ್ನು ಒತ್ತಾಯಿಸುತ್ತಾನೆ. ಗಾಬ್ರುವಿನ ಜೊತೆ ಮಾತಿಗೆ ಮಾತು ಬೆಳೆದು ಅವನಿಗೆ ಹೊಡೆಯುತ್ತಾನೆ. ತನ್ನ ಕುತಂತ್ರದಿಂದ ಗಾಬ್ರುವಿನ ಮಗನಾದ ಒಚ್ಚನನ್ನು ತನ್ನ ಬಣ್ಣದ ಮಾತುಗಳ ಮೂಲಕ ಒಲಿಸಿಕೊಂಡು ಕಾಲೇಜು ಓದುತ್ತಿದ್ದವನನ್ನು ಹಾದಿ ತಪ್ಪಿಸುತ್ತಾನೆ. ಚೊಚ್ಚಲ ಬಸುರಿಯಾಗಿ ತಾಯಿ ಮನೆಗೆ ಬಂದಿದ್ದ ಮೇರಿಯನ್ನು ಕೂಡ ಗಾಬ್ರುವಿನ ವಿರುದ್ಧ ಎತ್ತಿಕಟ್ಟುತ್ತಾನೆ. ಅವಳನ್ನು ತನ್ನ ಕಾಮಕ್ಕೆ ಬಳಸಿಕೊಳ್ಳುತ್ತಾನೆ. ಮಾರಪ್ಪ ಶೆಟ್ಟಿಯೊಂದಿಗೆ ಮಗಳು ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವುದನ್ನು ನೋಡಿದ ಗಾಬ್ರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

**‘ಮಣ್ಣಿನ ಮಕ್ಕಳು’ – ‘ಪಲ್ಲಟ’ ಕಾದಂಬರಿಗಳ ಹೋಲಿಕೆ**

‘ಮಣ್ಣಿನ ಮಕ್ಕಳು’ ಕಾದಂಬರಿಯಲ್ಲಿ ಭೂಸುಧಾರಣೆಯಂತಹ ಕಾನೂನುಗಳಿಗಿಂತ ಧನಿ ಒಕ್ಕಲಿನ ಮಾನವೀಯ ಮತ್ತು ಭಾವನಾತ್ಮಕ ಸಂಬಂಧಗಳಿಗೆ ಬೆಲೆ ಕೊಟ್ಟು, ಅದು ತನ್ನ ಧರ್ಮ ಎಂಬ ನಿಲುವನ್ನು ತಾಳಿದ ಮಂಜಪ್ಪನ ಮತ್ತೊಂದು ರೂಪ ಎರಡನೆಯ ಘಟ್ಟದ ‘ಪಲ್ಲಟ’ ಕಾದಂಬರಿಯ ಒಕ್ಕಲು ಗಾಬ್ರು. ಅವನು ಕೂಡ ತನ್ನ ಧನಿಗಳ ಜಮೀನಿಗೆ ಡಿಕ್ಲರೇಶನ್ ಕೊಡುವುದಿಲ್ಲ. ಆದರೆ ಅದನ್ನು ಕಾದಂಬರಿಯಲ್ಲಿ ಎಲ್ಲರೂ ಸಂಶಯದಿಂದ ನೋಡುತ್ತಾರೆ. ಗಾಬ್ರುವಿಗೆ ಧನಿಯ ಹೆಂಡತಿಯ ಜತೆಗೆ ಅನೈತಿಕ ಸಂಬಂಧವಿದೆ; ಅದಕ್ಕಾಗಿ ಅವನು ಡಿಕ್ಲರೇಶನ್ ಕೊಡಲಿಲ್ಲ ಎಂಬ ಮಾತನ್ನು ಮಾರಪ್ಪ ಶೆಟ್ಟರು ಅವನ ಮಗನೊಡನೆಯೇ ಹೇಳುತ್ತಾರೆ! ಕಾನೂನಿಗೆ ಮೀರಿದ ಒಂದು ಮಾನವೀಯ ಮತ್ತು ಭಾವನಾತ್ಮಕ ಸಂಬಂಧವಿದೆ ಎನ್ನುವುದನ್ನು ಮೊಗಸಾಲೆಯವರ ಈ ಘಟ್ಟದ ಕಾದಂಬರಿಗಳ ಪಾತ್ರಗಳು ಒಪ್ಪುವುದಿಲ್ಲ. ಇದರ ಬದಲಿಗೆ ಸ್ವಾರ್ಥ, ಅಹಂಕಾರ ಮತ್ತು ಕಾಮಗಳಿಗೆ ದಾಸರಾಗಿ ಸಮಾಜದ ಸ್ವಾಸ್ಥ್ಯವನ್ನು ಕೆಡಿಸುವ ಕಥಾನಕಗಳನ್ನು ಮೊಗಸಾಲೆ ಎರಡನೆಯ ‘ವಾಸ್ತವವಾದಿ ನವ್ಯ’ ಕಾದಂಬರಿಗಳ ಘಟ್ಟದಲ್ಲಿ ಬರೆದರು.

ಸಮಾಜದ ಸ್ವಾಸ್ಥ್ಯ ಕೆಡಲು ಕಾರಣ ಗ್ರಾಮ ರಾಜಕೀಯ ಮತ್ತು ಸ್ಥಳೀಯ ಪುಢಾರಿಗಳು ಎನ್ನುವುದು ಮೊಗಸಾಲೆಯವರ ಕಾದಂಬರಿಗಳ ಕಾಣ್ಕೆ. ಈ ಪುಢಾರಿಗಳಿಗೆ ರಾಷ್ಟ್ರೀಯ ಪಕ್ಷಗಳ ಸಿದ್ಧಾಂತ, ತಾತ್ವಿಕತೆಗಳ ತಿಳಿವಳಿಕೆ ಇಲ್ಲ. ಇದನ್ನು ಮೊಗಸಾಲೆಯವರು ತಮ್ಮ ಕಾದಂಬರಿಗಳಲ್ಲಿ ಮತ್ತೆ ಮತ್ತೆ ಸ್ಪಷ್ಟಪಡಿಸಿದ್ದಾರೆ. ಹಳ್ಳಿಯ ಪುಡಾರಿಗಳು ತಮಗೆ ಬೇಕಾದಂತೆ ಮೇಲಿನ ಅಧಿಕಾರಸ್ಥರ ಬೆಂಬಲದಿಂದ ಮತ್ತು ರೌಡಿಗಳ ಮೂಲಕ ಬಲಪ್ರಯೋಗದಿಂದ ಗ್ರಾಮ ಸಮಾಜವನ್ನು ತಮ್ಮ ಅಂಕಿತದಲ್ಲಿ ಇಟ್ಟುಕೊಳ್ಳುತ್ತಾರೆ. ಪ್ರಾಮಾಣಿಕ ವ್ಯಕ್ತಿಗಳು ಇವರಿಗೆ ಎದುರಾಗಿ ಎದ್ದು ನಿಂತಾಗ ಈ

ಕಾದಂಬರಿಗಳ ಸಮಸ್ಯೆ ಹುಟ್ಟಿಕೊಳ್ಳುತ್ತದೆ.

ಮಾಜಿ ಉಗ್ರಾಣಿ ಗಾಬ್ರು ಹೇಳುವ ಮಾತುಗಳು ಉಲ್ಲೇಖನೀಯ. "ನಮ್ಮ ಸರಕಾರ ನಾವು ತಿಳಕೊಂಡಷ್ಟು ಖಂಡಿತಾ ಕೆಟ್ಟ ಸರಕಾರ ಅಲ್ಲ! ಅಲ್ಲ, ಈಗ ಎಂತೆಂತಹ ಜನೋಪಯೋಗಿ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದಾರೆ. ಆದರೆ ಎಲ್ಲ ಕಡೆಯೂ ಒಂದೇ. ಈ ಪುಡಾರಿಗಳು... ಏನು ಕತೆ, ಏನು ವೈವಾಟು ಅವರದ್ದು! ಯಾವ ಕಾನೂನು ಬರಲಿ, ಯಾವ ಹೊಸ ಕಾರ್ಯಕ್ರಮ ಜಾರಿಯಾಗಲಿ ಎಲ್ಲದರಲ್ಲೂ ಇವರು ಇದ್ದೇ ಇರುತ್ತಾರೆ. ಹಾಗೆ ನೋಡಿದರೆ ಇದು ನಮ್ಮೂರಲ್ಲಿ ಮಾತ್ರವಲ್ಲ, ಎಲ್ಲಾ ಊರೂ ಹೀಗೆ. ನಮ್ಮೂರು ಅಂದ್ರೆ ನಮ್ಮ ಇಂಡ್ಯಾದ ಸಂಕೇತ ಅನ್ನುತ್ತಾರಪ್ಪ ನಮ್ಮ ಡಾಕ್ಟ್ರು." (ಪಲ್ಲಟ)

ಡಾ. ಶಿವರಾಯರು ಹೇಳುವ ಈ ಮಾತುಗಳೂ ಮೊಗಸಾಲೆಯವರ ನಿಲುವನ್ನು ಸ್ಪಷ್ಟಪಡಿಸುತ್ತವೆ: "ಇಂದು ಈ ಎಲ್ಲರೂ ಕಾನೂನು ಕಾನೂನು ಅಂತಾರೆಯೇ ವಿನಾ ಮಾನವೀಯ ಸಂಬಂಧಗಳ ಕುರಿತು ಮಾತನಾಡುವವರೇ ಇಲ್ಲ! ಮನುಷ್ಯ ಅಂದರೆ ಕೇವಲ ಹಣ ಸಂಪಾದನೆಗಾಗಿ ಇರುವವನು, ಜೀವನದ ಪರಮಧರ್ಮ ಅಂದರೆ ದುಡ್ಡು ಮಾಡೋದು ಅಂತ ಈ ಜನರು ನಂಬಿದ್ದಾರೆ. ಇದರಿಂದ ನಮಗೆ ತಿಳಿಯದ ಹಾಗೆ ಪರಸ್ಪರ ಮನುಷ್ಯ ಸಂಬಂಧ ಹದಗೆಟ್ಟಿದೆ. ಒಬ್ಬರು ಇನ್ನೊಬ್ಬರನ್ನು ಸುಲಿಯಲು ಹಾತೊರೆಯತೊಡಗಿದ್ದಾರೆ. ಒಂದು ರೀತಿಯ 'ಕ್ಷಾಮ' ಈಗ ಬಂದಿದೆ.ಹಿ

ಗಾಬ್ರು ಹೇಳುವುದು ಹೀಗೆ: "ತಂದೆಗೆ ಮಗನಿಲ್ಲ; ಮಾವನಿಗೆ ಅಳಿಯನಿಲ್ಲ; ಅಣ್ಣನಿಗೆ ತಮ್ಮನಿಲ್ಲ; ಧಣಿಗೆ ಒಕ್ಕಲಿಲ್ಲ; ತಾಯಿಗೆ ಮಗಳಿಲ್ಲ; ಏನಿದು? ಎಲ್ಲೆಲ್ಲೂ ಸ್ವಾರ್ಥ, ಒಬ್ಬರಿಗೊಬ್ಬರು ತೀರ ಅಪರಿಚಿತರೇ, ಅಥವಾ ಶತ್ರುಗಳೇ. ಆರ್ಥಿಕವಾಗಿ ಮಾತ್ರ ಎಲ್ಲರೂ ಚಿಂತಿಸುವವರು. ಮಾನವೀಯ ದೃಷ್ಟಿಯಿಂದ ಎಲ್ಲರಿಗೂ ತಮ್ಮ ಹಾಗೆ ಹೃದಯ ಇದೆ ಎಂಬ ಮನೋಭಾವನೆಯಿಂದ ಯಾರೂ ಯಾಕೆ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವುದಿಲ್ಲ?" (ಪಲ್ಲಟ)

'ಪಲ್ಲಟ' ಕಾದಂಬರಿಯಲ್ಲಿ ಮೊಗಸಾಲೆಯವರು ಮೌಲ್ಯಗಳ ಪಲ್ಲಟವನ್ನು ಗುರುತಿಸುತ್ತಾರೆ. ಸ್ವತಃ ಅವರ ದೃಷ್ಟಿಕೋನದಲ್ಲಿಯೂ ಪಲ್ಲಟ ಸಂಭವಿಸಿದೆ ಎನ್ನುವುದನ್ನೂ ಗಮನಿಸಬಹುದು.

ಇನ್ನೊಂದು ಇಂತಹ ಕಾದಂಬರಿ 'ದಿಗಂತ'ದಲ್ಲಿ ಹಳ್ಳಿಯ ರಾಜಕೀಯದ ಬೇರೆ ಆಯಾಮಗಳನ್ನು ಮೊಗಸಾಲೆಯವರು ಚಿತ್ರಿಸಿದ್ದಾರೆ. ಈ ಕಾದಂಬರಿಯು ಮಂಗನ ಕಾಯಿಲೆಯ ಹಿನ್ನಲೆಯಲ್ಲಿ ಹಳ್ಳಿಯೊಂದರಲ್ಲಿ ನಡೆಯುವ ರಾಜಕೀಯ ಪಿತೂರಿ, ಸಂಚುಗಳನ್ನು ಬಿಚ್ಚಿಡುವ ಮೂಲಕ ಮನುಷ್ಯನ ಹುಳುಕುಗಳನ್ನು, ಸಣ್ಣತನಗಳನ್ನು ಬಯಲು ಮಾಡುವುದು ಮಾತ್ರವಲ್ಲದೆ ಧಾರ್ಮಿಕ ಮನೋಭಾವ ರಾಜಕೀಯದ ಧಾಳವಾಗುವ ಕುತಂತ್ರ ರಾಜಕಾರಣವನ್ನು ಚಿತ್ರಿಸುತ್ತದೆ.

(ಮುಂದುವರಿಯುವುದು)

❖❖❖

# ಉದ್ಯೋಗಪರ್ವದಲ್ಲಿ ಶ್ರೀಕೃಷ್ಣನ ಪಾತ್ರದ ಪ್ರಾಮುಖ್ಯ

**ಡಾ. ಟಿ.ಡಿ. ರಾಜಣ್ಣ ತಗ್ಗಿ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ
ಕಲಬುರಗಿ–585367

ಕುಮಾರವ್ಯಾಸ ಭಾರತದಲ್ಲಿ ಕುಮಾರವ್ಯಾಸನೇ ಹೇಳುವಂತೆ ಶ್ರೀಕೃಷ್ಣನದು ನಾಯಕನ ಪಾತ್ರ. ಈ ಕಾವ್ಯದಲ್ಲಿ ಶ್ರೀಕೃಷ್ಣನದು ಧರ್ಮಾಯತ್ತವಾದ ತೇಜೋಬಲ. ಈ ತೇಜೋಬಲವು ಲೋಕ ಕಲ್ಯಾಣಾರ್ಥಕ್ಕಾಗಿ ವಿನಿಯೋಗಗೊಂಡಿರುವಂಥದ್ದು. ಹಾಗಾಗಿಯೇ ಶ್ರೀಕೃಷ್ಣನು 'ಧರ್ಮಹಿಂಸಾ ತಥೈವಚಾ' ಎಂಬ ಮಾತಿನಂತೆ ದುಷ್ಟತ್ವದ ನಿಗ್ರಹಕ್ಕಾಗಿ ಬಾಲ್ಯದಿಂದಲೂ ಅನೇಕ ರಾಕ್ಷಸರನ್ನು ಕೊಂದದ್ದು, ಜರಾಸಂಧನನ್ನು ಕೊಲ್ಲಿಸಿದ್ದು, ಶಿಶುಪಾಲನನ್ನು ವಧಿಸಿದ್ದು, ಅಂತೆಯೆ ಶಿಷ್ಟರ ರಕ್ಷಣೆಯ ಅನುಗ್ರಹದ ಭಾರ ಹೊತ್ತದ್ದು... ಈ ಎಲ್ಲವೂ ತನ್ನ ಲೋಕಕಲ್ಯಾಣಾರ್ಥ ಜನ್ಮೋದ್ದೇಶಕ್ಕಾಗಿಯೇ. ಇಂಥ ಶ್ರೀಕೃಷ್ಣನದು ಕುಮಾರವ್ಯಾಸ ಭಾರತದಲ್ಲಿ ನಾಯಕನ ಪಾತ್ರವಾದರೂ ಆ ಪಾತ್ರದ ಪ್ರಾಮುಖ್ಯತೆ ಮತ್ತು ಆತನ ಬಹುಮುಖ್ಯ ನಡೆಗಳು ಕಂಡುಬರುವುದು ಮಾತ್ರ ಉದ್ಯೋಗ ಪರ್ವದಲ್ಲಿ.

ಕನ್ನಡದ ಕಾವ್ಯಗಳು ಶ್ರೀಕೃಷ್ಣನನ್ನು ಕಟ್ಟಿಕೊಟ್ಟಿರುವ ಬಗೆ ಭಿನ್ನವಾದುದು. ಕುಮಾರವ್ಯಾಸ ಭಾರತದ ಶ್ರೀಕೃಷ್ಣನು ಪಂಪ ಮತ್ತು ರನ್ನರ ಕಾವ್ಯಗಳ ಶ್ರೀಕೃಷ್ಣನಿಗಿಂತಲೂ ಬೇರೆಯಾಗಿಯೂ, ಉದ್ದೇಶಿತ ಕೆಲಸದಲ್ಲಿ ಸದಾ ನಿರತನಾಗಿರುವಂತೆಯೂ ಕಾಣಿಸುತ್ತಾನೆ. ಪಂಪ, ರನ್ನರ ಶ್ರೀಕೃಷ್ಣನ ಸ್ವಭಾವ ಒಂದು ಬಗೆಯಾದರೆ ವ್ಯಾಸ ಮತ್ತು ಕುಮಾರವ್ಯಾಸರ ಶ್ರೀಕೃಷ್ಣನ ಸ್ವಭಾವ ಮತ್ತೊಂದು ಬಗೆ. ವ್ಯಕ್ತಿ ಚಿತ್ರಣದಲ್ಲಿ ಭಿನ್ನ ಆಲೋಚನೆಗಳನ್ನು ತಂದಿದ್ದರೂ ಅವರೆಲ್ಲರೂ ಶ್ರೀಕೃಷ್ಣನನ್ನು ದೈವಪುರುಷನಾಗಿ ಚಿತ್ರಿಸುವಲ್ಲಿಯೂ ಭಿನ್ನತೆಯನ್ನು ಕಾಯ್ದುಕೊಂಡಿರುವುದು ವಿಶೇಷ. ಇವರಲ್ಲಿ ವ್ಯಾಸನು ಶ್ರೀಕೃಷ್ಣನನ್ನು ಧರ್ಮದ ಯುಗಪ್ರವರ್ತಕನಾಗಿ ಚಿತ್ರಿಸಿದರೆ, ಪಂಪನು ಶ್ರೀಕೃಷ್ಣನನ್ನು ಚರಿತ್ರೆಯ ವೀರಯುಗ ಪ್ರವರ್ತಕನಾಗಿ, ಕುಮಾರವ್ಯಾಸನು ಭಕ್ತಿಯುಗ ಪ್ರವರ್ತಕನಾಗಿ ಕಟ್ಟಿಕೊಟ್ಟಿರುವುದು ಕಂಡುಬರುತ್ತದೆ.

ಕುಮಾರವ್ಯಾಸ ಭಾರತದ ಶ್ರೀಕೃಷ್ಣನು ಪಂಪ ಮತ್ತು ರನ್ನರ ಶ್ರೀಕೃಷ್ಣನಂತೆ ಸಾಂದರ್ಭಿಕವಾಗಿ ದೈವಿಪುರುಷನಾಗಿ ಕಾಣಿಸದೆ, ಕಾವ್ಯದುದ್ದಕ್ಕೂ ದೈವಿಗುಣದ ವ್ಯಕ್ತಿಯಾಗಿಯೇ ಗೋಚರಿಸುತ್ತಾನೆ. ಹಾಗಾಗಿ ಶ್ರೀಕೃಷ್ಣನು ಪಾಂಡವರ ಮನಸ್ಸನ್ನು ಪ್ರೇರಿಸುವ ಸ್ವಭಾವ ಉಳ್ಳವನಾಗಿಯೂ, ಕ್ರೋಧಗಳನ್ನು ಹುರಿಗೊಳಿಸುವವನಾಗಿಯೂ, ತನ್ನ ಜನ್ಮದ ಕೈಂಕರ್ಯಕ್ಕೆ ಸಂದರ್ಭಗಳನ್ನು ತನಗೆ ಬೇಕಾದಂತೆ ಪರಿವರ್ತಿಸಿ ಕಾರ್ಯಪ್ರವೃತ್ತರಾಗುವಂತೆ ಮಾಡುವ ಗುಣ ಉಳ್ಳವನಾಗಿಯೂ. ಕೇವಲ ಲೋಕಕಲ್ಯಾಣಕ್ಕಾಗಿ ಮಾತ್ರ ಅಗತ್ಯ ವೈರತ್ವವನ್ನು ಬಿತ್ತಿ ಬೆಳೆಸುವವನಾಗಿಯೂ, ದುಷ್ಟತ್ವವನ್ನು ನಿರಂತರ ನಿರ್ನಾಮ ಮಾಡುವ ಹಾದಿಯಲ್ಲಿ ಸಾಗುವವನಾಗಿಯೂ ಕಂಡುಬರುತ್ತಾನೆ.

ಹಾಗಾಗಿ ಈ ಮೇಲೆ ತಿಳಿಸಿದ ಮೂರು ಕಾವ್ಯಗಳಲ್ಲಿ ವ್ಯಕ್ತವಾಗಿರುವ ಶ್ರೀಕೃಷ್ಣನನ್ನು ಏಕ ನೆಲೆಯಲ್ಲಿ ಅರ್ಥೈಸುವುದು ಕಷ್ಟ. ಹಾಗಾಗಿ ಈ ಲೇಖನದಲ್ಲಿ ಕೇವಲ ಕುಮಾರವ್ಯಾಸ ಭಾರತದ ಶ್ರೀಕೃಷ್ಣನನ್ನು ಮಾತ್ರವೇ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ. ಅದರಲ್ಲೂ ಉದ್ಯೋಗಪರ್ವದಲ್ಲಿ ಶ್ರೀಕೃಷ್ಣನು ಶಿಷ್ಟ ರಕ್ಷಣೆಯ ಮಹಲನ್ನು ನಿರ್ಮಿಸುವುದಕ್ಕೆ ದುಷ್ಟ ನಿಗ್ರಹಕ್ಕಾಗಿ ಹಾಕಿದ ಅಡಿಪಾಯಗಳು ಎಂಥವು ಅದರ ಪೂರ್ವತಯಾರಿ ಯಾವ ಬಗೆಯದು ಎಂಬುದನ್ನು ಪರಿಚಯಿಸುವ ಪ್ರಯತ್ನ ಇಲ್ಲಿಯದು.

ಮುಖ್ಯವಾಗಿ ಉದ್ಯೋಗಪರ್ವದಲ್ಲಿ ಶ್ರೀಕೃಷ್ಣ ಮೂರು ಭಿನ್ನ ಸಂದರ್ಭಗಳ ಮೂಲಕ ಶಿಷ್ಟರ ಅನುಗ್ರಹ ಮತ್ತು ದುಷ್ಟರ ನಿಗ್ರಹಕ್ಕೆ ಅಡಿಗಲ್ಲನ್ನು ಹಾಕುವ ಪ್ರಯತ್ನ ಮಾಡಿದ್ದಾನೆ. ಈ ಶ್ರೀಕೃಷ್ಣನು ಇಲ್ಲಿ ತಾನೇ ಸ್ವಯಂ ಆಗಿ ದುಷ್ಟರ ಸಂಹಾರಕ್ಕೆ ಸಿದ್ಧನಾಗುವುದಿಲ್ಲ. ಲೋಕಕಲ್ಯಾಣ ಕೈಂಕರ್ಯದಲ್ಲಿ ಹಿಂಸೆಯ ಮೂಲಕವಾದರೂ ಧರ್ಮ ಉಳಿಸಬೇಕು ಎಂಬ ಆಶಯದಂತೆ ಶ್ರೀಕೃಷ್ಣನು ಕುಮಾರವ್ಯಾಸ ಭಾರತದಲ್ಲಿ ಅನುಗ್ರಹ ಮತ್ತು ನಿಗ್ರಹಕ್ಕೆ ತನಗೆ ಅನುಕೂಲಕರವಾದ ವಾತಾವರಣವೊಂದನ್ನು ತಾನೇ ನಿರ್ಮಿಸಿಕೊಳ್ಳುತ್ತ ಹೋಗುತ್ತಾನೆ. ಈ ಅನುಕೂಲ ವಾತಾವರಣದಲ್ಲಿ ಪಾಂಡವರೂ ಪೂರಕ ವ್ಯಕ್ತಿಗಳಾಗಿ ಸೇರಿರುವುದು ವಿಶೇಷ. ಹಾಗಾಗಿಯೇ ವನವಾಸದಿಂದ ಹಿಂದಿರುಗಿದ ಪಾಂಡವರನ್ನು ಯುದ್ಧೋತ್ಸಾಹಿಗಳನ್ನಾಗಿ ಮಾಡುವುದು ಆತನ ಮೊದಲ ಕೆಲಸವಾಗುತ್ತದೆ. ಇಲ್ಲಿ ಪಾಂಡವರಿಗೆ ಒದಗಿದ ನೋವು, ಅವಮಾನ, ಅಪಮಾನ, ಸಂಕಟ, ದುಃಖಗಳನ್ನು ಮತ್ತೊಮ್ಮೆ ನೆನಪಿಸುತ್ತಲೇ ತಾನು ತಮ್ಮ ಅನುಗ್ರಹಕ್ಕೆ ನಿಲ್ಲುವೆನೆಂಬ ಭರವಸೆಯ ಮಾತುಗಳನ್ನಾಡುವುದು ಕಾಣಿಸುತ್ತದೆ.

ಅಜ್ಞಾತವಾಸದಿಂದ ಹಿಂದಿರುಗಿದ ಪಾಂಡವರಲ್ಲಿ ಕೌರವರ ವಿರುದ್ಧದ ಪ್ರತೀಕಾರಮನೋಭಾವ ಸಾಕಷ್ಟು ಉಳಿದಿರುವುದಿಲ್ಲ. ಇದನ್ನು ಅರಿತ ಶ್ರೀಕೃಷ್ಣ ಸಾಧ್ಯವಾದಷ್ಟು ಅವರ ಮನಸ್ಸನ್ನು ಯುದ್ಧೋತ್ಸಾಹದ ಕಡೆಗೆ ಸೆಳೆಯಲು ಯತ್ನಿಸುತ್ತಾನೆ. ಅವರ ಮನಸ್ಸು ಹಿಂದಿನ ಅನೇಕ ಅನ್ಯಾಯಗಳಿಗೆ, ಅಂದರೆ ದ್ರೌಪದಿಯ ಮಾನಭಂಗಕ್ಕೆ, ರಾಜ್ಯದಿಂದ ವಂಚಿತರಾದುದಕ್ಕೆ, ವಿನಾಕಾರಣ ಕಾಡಿನಲ್ಲಿ ಅಲೆಯಬೇಕಾದುದಕ್ಕೆ ಕಾರಣನಾದ ದುರ್ಯೋಧನನ ಮೇಲೆ ಕೆರಳಬೇಕು ಎಂಬ ಆಶಯದಿಂದಲೇ 'ಹಿಂದೆ ಜೂಜಿನ ವಿಲಗದಲಿ ಮನನೊಂದರಿವರಡವಿಯಲಿ ಧರೆಗಿನ್ನೆಂದು ಸೇರುವರೇನು' (ಕುಮಾರವ್ಯಾಸ ಭಾರತ ಸಂಗ್ರಹ, ಪುಟ 301) ಎನ್ನುವ ಮೂಲಕ ಮತ್ತೆ ನೆನಪಿಸುವ ಪ್ರಯತ್ನ ಮಾಡುತ್ತಾನೆ.

ನಂತರ, 'ಧರಣೀ ತಳವ ಬೇಡಿಸುವಲ್ಲಿ ಸಾಮವ ಬಳಸುವುದು... ನಯವಿಲ್ಲೆಂದೊಡಾಹವದೊಳಗೆ ಕೈದೋರುವುದು' (ಅದೇ,ಪು.301) ಆ ದುರ್ಯೋಧನನಿಗೆ ಸಾಮದಿಂದ ಹೇಳಿ, ಐದು ಊರುಗಳನ್ನು ಕೇಳಿ ನೋಡುವುದು, ಕೊಡದಿದ್ದರೆ ಇದ್ದೇ ಇದೆಯಲ್ಲ ದಂಡ ಎಂಬ ಮಾತನ್ನು ತಿಳಿಸುತ್ತಾನೆ. ಇದರ ಅರ್ಥ ಶ್ರೀಕೃಷ್ಣನಿಗೆ ಸಾಮಕ್ಕಿಂತಲೂ ದಂಡವನ್ನು ಉಪಯೋಗಿಸುವ ಅನಿವಾರ್ಯತೆ ಇದೆ.

ಇಲ್ಲಿ ಶ್ರೀಕೃಷ್ಣನಿಗೆ ಪಾಂಡವರಿಗೆ ಸಾಮ್ರಾಜ್ಯ ಕೊಡಿಸುವುಷ್ಟೇ ಮುಖ್ಯವಾಗುವುದಿಲ್ಲ. ಏಕೆಂದರೆ ಶಿಷ್ಟರನ್ನು ಕಾಪಾಡುವುದು ಒಂದು ಕ್ರಮವಾದರೆ, ಅದೇ ಸಂದರ್ಭದಲ್ಲಿ ದುಷ್ಟತ್ವವನ್ನು ನಾಶಪಡಿಸಬೇಕಾದ ಅನಿವಾರ್ಯತೆಯೂ ಶ್ರೀಕೃಷ್ಣನದೇ ಆಗಿರುತ್ತದೆ. ಹಾಗಾಗಿ ಪಾಂಡವರಿಗೆ ಸಾಮದಿಂದ ರಾಜ್ಯ ಕೊಡಿಸಿದರೆ ಎರಡನೇ ಕರ್ಮ

ಹಾಗೇ ಉಳಿದುಬಿಡುತ್ತದೆ. ಹಾಗಾಗಿ ದಂಡದ(ಹಿಂಸೆಯ) ಮೂಲಕ ಸಾಮ್ರಾಜ್ಯ ಪಡೆಯುವುದಾದರೆ ಇತ್ತ ಶಿಷ್ಟರಿಗೆ ಬೆಂಬಲವಾಗಿ ನಿಂತಂತೆಯೂ ಆಗುತ್ತದೆ. ಹಾಗಾಗಿ ಧರ್ಮರಾಯನ ಬಳಿಗೆ ಬಂದು 'ನಿಮ್ಮ ನೋವು, ದುಃಖ, ವನವಾಸ ಎಲ್ಲದರ ಅರಿವಿದೆ. ಈಗ ನಿಮಗೆ ಮರಳಿ ರಾಜ್ಯ ಕೊಡಿಸಬೇಕಿದೆ' ಎನ್ನುತ್ತಾನೆ; 'ಏನು ನಿನ್ನ ಅಭಿಮತವು ವರಸಂಧಾನವೊ ಸಂಗ್ರಾಮವೊ ನೀನೊಲಿದ ಹದನಾವುದದನೊಲಿದಾನು ಘಟಿಸುವೆನು...' (ಅದೇ, ಪುಟ 315) ಎಂದ ಶ್ರೀಕೃಷ್ಣನ ಮನಸ್ಸಿನಲ್ಲಿ ಧರ್ಮರಾಯ ಸಂಗ್ರಾಮವನ್ನು ಆರಿಸಿಕೊಳ್ಳಲಿ ಎಂಬ ಆಶಯವಿರುತ್ತದೆ. ಆದರೆ ಸೋದರ ವಧೆಯಿಂದ ಬರುವುದೇನು ಎಂಬ ಕಾರಣಕ್ಕೆ ಧರ್ಮರಾಯನಾಗಲಿ, ಭೀಮ, ಅರ್ಜುನ, ನಕುಲ ಯಾರೊಬ್ಬರೂ ಸಂಗ್ರಾಮಕ್ಕೆ ಆಸಕ್ತಿ ತೋರಿಸದೆ ಹೋಗುತ್ತಾರೆ. ಕೊನೆಗೆ ಸಹದೇವ ಮಾತ್ರ 'ದೇವ ಸೇರದು ಸಂಧಿ ಸಂಗರವೆಮಗೆ ಸೇರುವುದು'(ಅದೇ, ಪುಟ 318) ತನಗೆ ಸಂಧಾನಕ್ಕಿಂತಲೂ ಸಂಗ್ರಾಮವೇ ಇಷ್ಟ ಎಂದು ಸಾರುವುದು ಅವನಿಗಿದ್ದ ದಿವ್ಯಜ್ಞಾನದ ಬಲದಿಂದಲೇ ಹೊರತು ಸಹದೇವ ಮಹಾನ್ ಪರಾಕ್ರಮಿಯೆಂತಲೂ, ಯುದ್ಧೋತ್ಸಾಹಿಯೆಂತಲೂ ಪರಿಭಾವಿಸಬೇಕಿಲ್ಲ. ಸಹದೇವನಿಗೆ ಶ್ರೀಕೃಷ್ಣನ ಮುಂದಿನ ನಡೆಗಳೇನು ಎಂಬುದು ಅರಿವಿದ್ದ ಕಾರಣ ಮುಂದೆ ನಡೆಯಲಿರುವುದಕ್ಕೆ ತನ್ನ ಸಹಮತವನ್ನು ನೀಡುತ್ತಾನೆ.

ಆಗ ಶ್ರೀಕೃಷ್ಣ ನಗುಮುಖನಾಗುವುದರಲ್ಲಿ ತಾನು ಬಯಸ್ಸಿದ್ದು ಒಂದು ಸಿಕ್ಕಿತು ಎಂಬ ನಿರಾಳತೆ ಕಾಣಿಸುತ್ತದೆ. ಆದರೆ ಐವರಲ್ಲಿ ಕೇವಲ ಒಬ್ಬ ಮಾತ್ರ ಸಂಗ್ರಾಮವೆಂದು ಉಳಿದ ನಾಲ್ಕು ಜನ ಸಂಧಾನವೆಂದಿರುವ ಕಾರಣ ಸಂಗ್ರಾಮಕ್ಕೆ ಬೆಂಬಲ ಸಿಕ್ಕಂತಾಗುವುದಿಲ್ಲ ಎಂಬ ಪ್ರಜ್ಞೆಯಿಂದಲೇ ಮತ್ತೊಂದಿಬ್ಬರು ವ್ಯಕ್ತಿಗಳ ಬೆಂಬಲಕ್ಕಾಗಿ ಮತ್ತೂ ದ್ರೌಪದಿಯನ್ನು ಕರೆಸುವ ಮತ್ತು ಆಕೆಯ ಅಭಿಪ್ರಾಯವನ್ನು ಕೇಳುವ ಪ್ರಯತ್ನ ಮಾಡುತ್ತಾನೆ. ಏಕೆಂದರೆ ದ್ರೌಪದಿ ಎಂದಿಗೂ ಸಂಧಾನಕ್ಕೆ ಇಚ್ಛಿಸುವುದಿಲ್ಲ ಎಂಬ ನಂಬಿಕೆಯಿಂದ. ಸಂಧಾನಕ್ಕೆ ಸನ್ನದ್ಧರಾದ ಗಂಡಂದಿರನ್ನು ಕಂಡ ದ್ರೌಪದಿ 'ಪಾಪಿಗಳಿರಿದರೇ ಸತಿಯ...' (ಅದೇ, ಪುಟ 318) 'ತನ್ನವರು ಪತಿಗಳೇ ಪರಮವೈರಿಗಳು'(ಅದೇ, ಪುಟ 324) ಎಂದು ದುಃಖಿತಳಾಗಿ ಸಂಗ್ರಾಮದ ಹಂಬಲವನ್ನು ಹೇಳುತ್ತಾಳೆ ಅಲ್ಲದೆ ಭೀಮನನ್ನು ಪ್ರಚೋದಿಸುತ್ತಾಳೆ. ಇದೆಲ್ಲವೂ ಶ್ರೀಕೃಷ್ಣನ ತಂತ್ರಗಾರಿಕೆಯ ಭಾಗವೇ ಆಗಿರುತ್ತದೆ. ದ್ರೌಪದಿಯ ಅಭಿಪ್ರಾಯ ಕೇಳುವುದೆಂದರೆ ಇಬ್ಬರ ಬೆಂಬಲ ಖಚಿತ ಎನ್ನುವುದು ಶ್ರೀಕೃಷ್ಣನಿಗೆ ಗೊತ್ತಿರುವುದೇ. ಸಂಗ್ರಾಮಕ್ಕೆ ಬೆಂಬಲಿಸಿದಾಗ ದ್ರೌಪದಿಯ ಮೂಲಕ ಭೀಮನ ಮನಸ್ಸನ್ನು ಪರಿವರ್ತಿಸಿ ಭೀಮನನ್ನೂ ಸಂಗ್ರಾಮದ ಕಡೆಗೆ ವಾಲುವಂತೆ ಮಾಡುತ್ತಾನೆ. ಆಗ 'ಕೆಲರು ಸಂಪ್ರತಿಗೊಲಿವರಿದರೊಳು ಕೆಲರು ವಿಗ್ರಹಕೆಳಸಿದರು' (ಅದೇ, ಪುಟ 323) ಮೂವರು ಸಂಧಾನ ಮತ್ತು ಮೂವರು ಸಂಗ್ರಾಮ ಎಂಬ ಸಂಗತಿ ಬಂದುದು ಶ್ರೀಕೃಷ್ಣನಿಗೆ ಸ್ವಲ್ಪ ನಿರಾಳತೆಗೆ ಕಾರಣವಾಗುತ್ತದೆ.

ದ್ರೌಪದಿಗಾದ ಅವಮಾನ, ಕಷ್ಟ, ದುಃಖ ಇವೆಲ್ಲವೂ ಅಲ್ಲಿ ವ್ಯಕ್ತವಾದಾಗ ಅನಿವಾರ್ಯವಾಗಿ ಪಾಂಡವರು ಸಂಗ್ರಾಮದ ಕಡೆಗೆ ಮನಸ್ಸನ್ನು ವಾಲಿಸುತ್ತಾರೆ. ಶ್ರೀಕೃಷ್ಣನು ಸಹದೇವ, ದ್ರೌಪದಿ ಇವರ ಮೂಲಕ ಭೀಮನ ಮನಸ್ಸನ್ನು ಕೆರಳಿಸಿ ಸಂಗ್ರಾಮಕ್ಕೆ ಸೆಳೆದದ್ದು ಶ್ರೀಕೃಷ್ಣನ ಉಪಾಯವೇ ಆಗಿದೆ. ದ್ರೌಪದಿಗೆ ಹೇಳುವ ಮಾತಿನಲ್ಲೂ 'ನಾವು ಸಂಧಿಯ ನೆವದಲವದಿರ ಭಾವವನು ಕಲಿಮಾಡಿ ಕೋಪವ

ಕೀವು ಸಂಧಿಯ ಮುರಿದು ಬಹೆವಿದ ನಂಬು'(ಅದೇ, ಪುಟ 325) ಎಂದು ಹೇಳುವಲ್ಲಿ ಶ್ರೀಕೃಷ್ಣನೂ ಸಂಧಾನವನ್ನು ಇಷ್ಟಪಡುವವನಾಗಿ ಕಾಣಿಸುವುದಿಲ್ಲ.

ಸಂಧಾನಕ್ಕೆಂದು ಹೋದರೂ ಸಂಗ್ರಾಮವನ್ನೇ ಖಾತ್ರಿ ಮಾಡಿಕೊಂಡು ಬರುವೆ ಎಂಬ ಮಾತಿನಲ್ಲೂ ಶ್ರೀಕೃಷ್ಣನು ದ್ರೌಪದಿಗೆ ಭರವಸೆ ನೀಡುತ್ತಿರುವಂತೆ ಕಂಡರೂ ಅದು ತನ್ನ ಉದ್ದೇಶ ಸಾಧನೆಗೆ ಅನುಕೂಲವಾದ ಸಂದರ್ಭವನ್ನು ಸೃಷ್ಟಿ ಮಾಡಿಕೊಳ್ಳುವುದೇ ಆಗಿದೆ. ಇದರಲ್ಲಿ ಮೂರು ಬಗೆಯ ಸಂಗತಿಗಳು ನಮಗೆ ಸ್ಪಷ್ಟವಾಗಿ ಗೋಚರವಾಗುತ್ತವೆ.

ಒಂದು: ದುಷ್ಟತ್ವವನ್ನು ನಾಶ ಮಾಡಬೇಕೆಂದರೆ ಮೊದಲು ಶಿಷ್ಟರ ಶಕ್ತಿ ಸಾಮರ್ಥ್ಯಗಳಿಗೆ ಇಂಬುಕೊಡುವುದು ಮತ್ತು ಬಲ ನೀಡುವುದು. ಅಂತೆಯೆ ಅನುಗ್ರಹದ ಮೂಲಕ ಅವರನ್ನು ಯುದ್ಧಾಸಕ್ತರನ್ನಾಗಿ ಪ್ರಚೋದಿಸುವುದು. ಎರಡನೆಯದು: ದುಷ್ಟಕೂಟದಲ್ಲಿನ ಪ್ರತಿಯೊಬ್ಬರಿಗೂ ಒಂದೊಂದು ಬಗೆಯ ಭೀತಿ ಉಂಟು ಮಾಡುವುದು. ಮೂರನೆಯದು: ದುಷ್ಟಕೂಟದ ಒಂದೊಂದು ಶಕ್ತಿಗಳನ್ನು ಕುಗ್ಗಿಸುತ್ತ, ಇಲ್ಲವೆ ನಿವಾರಿಸುತ್ತ, ಇಲ್ಲವೆ ನಾಶ ಮಾಡುತ್ತ ಹೋಗುವುದು. ಈ ಮೂರು ಸಂಗತಿಗಳನ್ನು ಶ್ರೀಕೃಷ್ಣನು ಅನ್ಯರಿಗೆ ಅರಿವಿಗೆ ಬಾರದಂತೆ ಮಾಡುತ್ತ ಹೋಗುತ್ತಾನೆ. ಇಲ್ಲಿ ಪಾಂಡವರನ್ನು ಯುದ್ಧಕ್ಕೆ ಪ್ರಚೋದಿಸುವುದು ಅವರ ಕ್ಷೇಮವನ್ನು ಬಯಸಿ ಎಂದು ಅನ್ನಿಸಿದರೂ ಅದು ಮೇಲ್ಪದರ ಹೇಳಿಕೆಯಾಗುತ್ತದೆ. ಏಕೆಂದರೆ ಅದು ತನ್ನ ಅವತಾರದ ಉದ್ದೇಶದ ಈಡೇರಿಕೆಯ ಭಾಗವೂ ಆಗಿರುವುದನ್ನು ಗಮನಿಸಬೇಕು. ಇಲ್ಲಿ ಶ್ರೀಕೃಷ್ಣನು ಶಿಶುಪಾಲನನ್ನು ತಾನೇ ಸ್ವತಃ ಕೊಂದರೂ ಅದು ಸಂದರ್ಭಕ್ಕೆ ಒದಗಿದ ಅನಿವಾರ್ಯ ಭಾಗವೇ ಹೊರತು, ಮುಖ್ಯ ಉದ್ದೇಶವಲ್ಲ. ಮುಖ್ಯ ಉದ್ದೇಶವಿರುವುದೇ ದುಷ್ಟ ದುರ್ಯೋಧನನ ಅವಸಾನಕ್ಕಾಗಿ. ಆದರೆ ಶ್ರೀಕೃಷ್ಣನು ದುರ್ಯೋಧನನ ನೇರ ವಿರೋಧಿಯಲ್ಲ. ದುರ್ಯೋಧನನಿಗೂ ಶ್ರೀಕೃಷ್ಣನ ನಡುವೆ ಯಾವುದೇ ವೈಮನಸ್ಯ ಕಲಹಗಳಿಲ್ಲ. ಹಾಗಾಗಿ ಆತನನ್ನು ಸಂಹರಿಸಬೇಕೆಂದರೆ ಶ್ರೀಕೃಷ್ಣನಿಗಿರುವ ಏಕೈಕ ದಾರಿಯೆಂದರೆ ಪಾಂಡವರನ್ನು ಒಲಿಸಿಕೊಳ್ಳುವುದು ಮತ್ತು ಪಾಂಡವರ ಬೆಂಬಲಕ್ಕೆ ನಿಲ್ಲುವುದು.

ದುಷ್ಟ ಸಂಹಾರವೆನ್ನುವುದು ಶ್ರೀಕೃಷ್ಣನ ಪ್ರಧಾನ ಆಶಯವಾದರೂ ಅದನ್ನು ಪರೋಕ್ಷವಾಗಿಯೇ ನಿರ್ವಹಿಸಬೇಕಿದೆ. ಈಗಾಗಲೇ ಪಾಂಡವರನ್ನು ಯುದ್ಧಕ್ಕೆ ಪ್ರಚೋದಿಸುವ ಪ್ರಯತ್ನದಲ್ಲಿ ಸಫಲನಾದ ಶ್ರೀಕೃಷ್ಣ ದುಷ್ಟಕೂಟದಲ್ಲಿ ಭಯವನ್ನು ಉಂಟು ಮಾಡುವ ವಿಶ್ವರೂಪದ ಪ್ರದರ್ಶನವನ್ನೂ ಯಶಸ್ವಿಯಾಗಿ ಮಾಡಿರುತ್ತಾನೆ. ಆದರೆ ಭಯವೊಂದೇ ದುಷ್ಟ ಸಂಹಾರವಲ್ಲ ಎಂಬುದು ಶ್ರೀಕೃಷ್ಣನಿಗೆ ಅರಿವಿದೆ. ಹಾಗಾಗಿ ದುಷ್ಟಕೂಟದ ಶಕ್ತಿಯನ್ನು ಅಳೆಯುವ ಪ್ರಯತ್ನವನ್ನೂ ಮಾಡಿ ಆ ದುಷ್ಟಕೂಟದ ಬಲವನ್ನು ಒಂದೊಂದಾಗಿ ತುಂಡರಿಸಿದಾಗಲೇ ತನ್ನ ಉದ್ದೇಶಕ್ಕೆ ಜಯ ಎಂಬುದನ್ನು ಮನನ ಮಾಡಿಕೊಂಡಿರುತ್ತಾನೆ. ಹಾಗಾಗಿಯೇ ಶ್ರೀಕೃಷ್ಣನು ಆ ದುರ್ಯೋಧನನ ಬಲವೆನಿಸಿಕೊಂಡಿರುವ ಬಲರಾಮ, ಭೀಷ್ಮ, ಕರ್ಣ, ದ್ರೋಣ ಮುಂತಾದವರನ್ನು ಹೇಗೆ ನಿರ್ವೀರ್ಯರನ್ನಾಗಿ ಅಥವಾ ಅಸಹಾಯಕರನ್ನಾಗಿ ಮಾಡಬೇಕೆಂಬ ಆಲೋಚನೆ ಮೊದಲೆ ಸಿದ್ಧಗೊಳಿಸಿಕೊಂಡಿರುತ್ತಾನೆ.

ಬಲರಾಮನನ್ನು ಕೇವಲ ಒಂದು ಹಸುವಿನ ವಧೆಯ ಕಾರಣದಲ್ಲಿ ತೀರ್ಥಯಾತ್ರೆಗೆ ಕಳಿಸುವಲ್ಲಿ ಸಫಲನಾಗುತ್ತಾನೆ. ಇಲ್ಲಿ ಬಲರಾಮ ಮತ್ತು ಶ್ರೀಕೃಷ್ಣ ಅಣ್ಣತಮ್ಮಂದಿರಾದರೂ

ಬಲರಾಮನ ಹುಟ್ಟಿಗೆ ಯಾವುದೇ ಕಾರಣವಿಲ್ಲ. ಆದರೆ ಶ್ರೀಕೃಷ್ಣ ಅವತಾರಪುರುಷ, ಕಾರಣಜನ್ಮದವ. ತನ್ನ ಜನ್ಮ ಅಥವಾ ಅವತಾರಕ್ಕೊಂದು ಉದ್ದೇಶವಿದೆ. ಅದನ್ನು ಈಡೇರಿಸಬೇಕಾದರೆ ಕೆಲವೊಂದು ಉಪಾಯ, ತಂತ್ರಗಾರಿಕೆ ಅತ್ಯಗತ್ಯ ಎಂಬುದನ್ನು ಮನಗಂಡವನು. ಹೀಗೆ ಬಲರಾಮ ಎಂಬ ದುರ್ಯೋಧನನ ಬಲವೊಂದು ಮುರಿಯುವ ಮೂಲಕ ದುಷ್ಟ ಶಕ್ತಿಯನ್ನು ಕ್ರಮೇಣ ದುರ್ಬಲಗೊಳಿಸುತ್ತ ಹೋಗುತ್ತಾನೆ. ಅದರ ಮುಂದುವರಿಕೆಯಂತೆ ಶ್ರೀಕೃಷ್ಣನು ಹಸ್ತಿನಾಪುರಕ್ಕೆ ಸಂಧಾನಕ್ಕೆಂದು ಬಂದಾಗ ಚಕ್ರವರ್ತಿಯಾದ ದುರ್ಯೋಧನನ ಅರಮನೆಗೆ ಹೋಗದೆ ನೇರವಾಗಿ ವಿದುರನ ಮನೆಗೆ ಹೋಗುತ್ತಾನೆ. ಇದೂ ತಂತ್ರವೇ.

ಇಲ್ಲಿ ದುರ್ಯೋಧನನು ಶತ್ರುವಾದ ಕಾರಣ 'ಹಗೆಯನೊಳಗಿಡಲಾಗದು ವೈರಿಗಳ ನಿಳಯದಲನ್ನಪಾನಾದಿಗಳ ಕೊಳಲಾಗದು'(ಅದೇ, ಪುಟ 339) ಎನ್ನುವ ಶ್ರೀಕೃಷ್ಣನ ಮಾತುಗಳು ಕೇವಲ ಔಪಚಾರಿಕ ಮತ್ತು ಬಾಯತುದಿಯ ಮಾತುಗಳೇ ಹೊರತು, ಅವು ವಾಸ್ತವವಲ್ಲ. ಅಲ್ಲಿ ಶ್ರೀಕೃಷ್ಣನ ತಂತ್ರಗಾರಿಕೆ ಹೇಗಿದೆಯೆಂದರೆ ದಾಸಿ ಪುತ್ರನಾದ ವಿದುರನ ಮನೆಗೆ ಹೋದರೆ ದುರ್ಯೋಧನ ಸಹಜವಾಗಿಯೇ ಕೋಪಗೊಳ್ಳುತ್ತಾನೆ. ಶ್ರೀಕೃಷ್ಣನು ಚಕ್ರವರ್ತಿಯಾದ ತನ್ನ ಮನೆಗೆ ಬಾರದೆ ಯಕಃಶ್ಚಿತ್ ದಾಸಿಪುತ್ರನಾದ ವಿದುರನ ಮನೆಗೆ ಹೋದೆ ಎಂಬ ಅಪವಾದದ ಮಾತುಗಳಿಂದ 'ದೇವ ನಮ್ಮರಮನೆಗೆ ಬಾರದೆ... ಅವಿವೇಕಿ ತೊತ್ತಿನ ಮಗನ ಮನೆಯಲಿ ಹಸಿವ ನೂಕಿದಿರಿ'(ಅದೇ, ಪುಟ 338) ಎಂದು ವಿದುರನನ್ನು ಅಪಮಾನಕ್ಕೆ ಒಳಗು ಮಾಡುವುದು ಶ್ರೀಕೃಷ್ಣನಿಗೆ ಬೇಕಿರುತ್ತದೆ. ಇಂಥ ಮಾತುಗಳಿಂದ ಕೋಪಗೊಂಡು ವಿಧುರನು 'ಕಲಿಭೀಮ ನಿನ್ನಯ ತೊಡೆಗಳನು ಮುರಿವಾ ಸಮಯದೊಳು ತಡೆದು ನಿನ್ನನು ಕಾಯಬೇಕೆಂದುಳುಹಿದೆನು, ಕೆಡೆ ನುಡಿಸಿಕೊಂಡಿನ್ನು ಕಾವೆನೆ'(ಅದೇ, ಪುಟ 338) ಎಂದು ದುರ್ಯೋಧನನ ಮೇಲಿಟ್ಟಿದ್ದ ಅಭಿಮಾನ, ಅವನನ್ನು ಕಾಯುವ ಜವಾಬ್ದಾರಿಯಿಂದ ದೂರ ಸರಿಯುತ್ತಾನೆಂಬ ಉದ್ದೇಶದಿಂದಲೇ ಅಲ್ಲಿಗೆ ಹೋಗುವುದು ನಡೆಯುತ್ತದೆ. ಅಂತೆಯೆ ದುರ್ಯೋಧನನ ಅಪಮಾನದ ಮಾತುಗಳಿಗೆ ವಿದುರ ತನ್ನ ಬಿಲ್ಲನ್ನು ಮುರಿದು ಯುದ್ಧದಿಂದ ವಿಮುಖನಾಗುತ್ತಾನೆ. ಇದೂ ಶ್ರೀಕೃಷ್ಣನಿಗೆ ಅಗತ್ಯವಾಗಿ ಬೇಕಾದ್ದೆ. ಇದು ಒಡೆದು ಆಳುವ ನೀತಿಯಂತೆ ಅಥವಾ ಭೇದೋಪಾಯದಂತೆ ಕಾಣಿಸದಿದ್ದರೂ ಅಂತಹ ಸಂದರ್ಭವೇ ಆಗಿ ಕಾಣಿಸುತ್ತದೆ.

ಅಂತೆಯೆ ಸಂಧಾನಕ್ಕೆ ಹೋಗಿ ಅಲ್ಲಿನ ಧೃತರಾಷ್ಟ್ರ ಮತ್ತು ದುರ್ಯೋಧನ ಪರವಾದಿಗಳ ಮನಸ್ಸಿನಲ್ಲಿ ಒಂದು ಬಗೆಯ ಭೀತಿ ಅಥವಾ ಭಯವನ್ನು ಮೂಡಿಸುವುದೂ ಕೂಡ ದುಷ್ಟರ ನಿಗ್ರಹಕ್ಕೆ ಏರ್ಪಡಿಸಿಕೊಂಡ ಒಂದು ಯೋಜನೆಯೇ ಆಗಿ ಕಾಣಿಸುತ್ತದೆ. ದುರ್ಯೋಧನನು ಕೃಷ್ಣನನ್ನು ಕಟ್ಟಿಹಾಕಬೇಕೆಂದು ತೀರ್ಮಾನಿಸಿದಾಗ 'ಆಸ್ಥಾನದ ಘನತೇಜವದ ಲಹರಿ ಮಿಗಿಲಾಗೆ ಹರಿ ತೋರಿದನು, ನಿರುಪಮ ವಿಶ್ವರೂಪವನು... ಒಳಗೆ ತೊಳೆದನು ಬಾಹ್ಯದಲಿ ಪಜ್ಜಳಿಸಿದನು'(ಅದೇ, ಪುಟ 348) ಶ್ರೀಕೃಷ್ಣ ತೋರಿಸುವ ವಿಶ್ವರೂಪವು ಅಲ್ಲಿನವರನ್ನು ಭಯಪಡಿಸುವುದಕ್ಕಾಗಿ ಮತ್ತು ಕೆಟ್ಟದ್ದಕ್ಕೆ ಪ್ರಚೋದನೆ ನೀಡುತ್ತಿದ್ದ ದೃತರಾಷ್ಟ್ರನಲ್ಲಿನ ಆಲೋಚನೆಯನ್ನು ಸಾಯಿಸುವುದಕ್ಕಾಗಿ ಎಂಬುದು ಮಾತ್ರ ಸ್ಪಷ್ಟ. ಅದಕ್ಕಾಗಿಯೇ ಶ್ರೀಕೃಷ್ಣನು ಅಂಧನಾದ ಧೃತರಾಷ್ಟ್ರನಿಗೆ ಆ ಕ್ಷಣದಲ್ಲಿ 'ಕಂಗಳನು ಕರುಣಿಸಿದನಂಧನೃಪತಿಗೆ'(ಅದೇ, ಪುಟ 350) ಕಣ್ಣನ್ನು ನೀಡಿ

ಅದನ್ನು ನೋಡುವಂತೆ ಮಾಡುವುದು ಆ ಭಯಾನಕ ವಿಶ್ವರೂಪವನ್ನು ನೋಡಿದ ನಂತರವಾದರೂ ಧೃತರಾಷ್ಟ್ರ ತನ್ನ ಮಗನನ್ನು ಪ್ರಚೋದಿಸುವ ಮಾತುಗಳನ್ನು ನಿಲ್ಲಿಸುವುದಕ್ಕಾಗಿ ಎಂಬುದನ್ನು ಅರಿಯಬೇಕು.

ಬಹಳ ಮುಖ್ಯವಾಗಿ ದುರ್ಯೋಧನನ ಆಪ್ತ ಸಖನಾದ ಕರ್ಣನನ್ನು ದುರ್ಯೋಧನನಿಂದ ಬೇರ್ಪಡಿಸುವ ಉಪಾಯ. ಇದಂತೂ ಬಹಳ ಸಶಕ್ತ ಕಾರಣದಿಂದಲೇ ಮಾನಸಿಕವಾಗಿ ಬೇರ್ಪಡಿಸಿ ಸಫಲನಾಗುತ್ತಾನೆ. 'ಇನತನೂಜನ ಕೂಡೆ ಮೈದುನತನದ ಸರಸವನೆಸಗಿ'(ಅದೇ, ಪುಟ 353) ರಥದಲ್ಲಿ ಜೊತೆಗೆ ಪಯಣಿಸುತ್ತಲೇ ಕರ್ಣನಿಗೆ ಆತನ ಜನ್ಮ ರಹಸ್ಯ ತಿಳಿಸಿ, 'ಲಲನೆ ಪಡೆದ ಐದು ಮಂತ್ರಂಗಳಲಿ ಮೊದಲಿಗೆ ನೀನು'(ಅದೇ, ಪುಟ 354) ಪಾಂಡವರು ನಿನ್ನ ತಮ್ಮಂದಿರು ಎಂದು ಹೇಳುವುದರ ಮೂಲಕ ಕರ್ಣನ ಮಾನಸಿಕ ದೃಢತೆಗೆ ಪೆಟ್ಟುಕೊಡುತ್ತಾನೆ. ಅಂತೆಯೆ ರಾಜ್ಯದಾಸೆಯನ್ನು ಒಡ್ಡುವುದು, ದುರ್ಯೋಧನನ ದುಷ್ಟತ್ವವನ್ನು ಪ್ರತಿಪಾದಿಸುವ ಮೂಲಕ ಕರ್ಣನು ದುರ್ಯೋಧನನ ಅಣ್ಣನೆಂದು ಗೊತ್ತಾದರೂ ಸೇವಕನಂತೆ ನಡೆಸಿಕೊಂಡನೆಂಬಂತೆ ಚಿತ್ರಿಸುವುದೂ 'ದುರ್ಯೋಧನನ ಬಾಯ್ದಂಬುಲಕೆ ಕೈಯಾನುವರೆ'(ಅದೇ, ಪುಟ 355) ಎಂದೆಲ್ಲ ಹೇಳುವುದು ಕರ್ಣನನ್ನು ಮಾನಸಿಕವಾಗಿ ಬೇರ್ಪಡಿಸುವ ಪ್ರಯತ್ನವೇ ಆಗುತ್ತದೆ. ಇಲ್ಲಿ ಕರ್ಣನಿಗೆ ಜನ್ಮ ರಹಸ್ಯ ಹೇಳಿದ್ದಾಗಲಿ, ರಾಜ್ಯ ಕೊಡಿಸುವ ಭರವಸೆಯಾಗಲಿ ಕೇವಲ ಬಾಯುಪಚಾರದ ಮಾತುಗಳು ಎನ್ನುವುದಕ್ಕೆ ಮುಂದೆ ಶ್ರೀಕೃಷ್ಣನೇ 'ಬಂದೊಡೊಳ್ಳಿತು ಬಾರದಿದ್ದೊಡೆ...' ಎಂಬ ಮಾತುಗಳಲ್ಲಿ ಅರ್ಥವಾಗುತ್ತದೆ.

ಇದಿಷ್ಟರಿಂದಲೇ ಶ್ರೀಕೃಷ್ಣನಿಗೆ ಸಮಾಧಾನವಾಗುವುದಿಲ್ಲ. ಏಕೆಂದರೆ ಕರ್ಣನ ನನ್ನಿಯ ಬಗೆಗೆ ಮತ್ತು ಆತನ ದೃಢತೆಯ ಬಗ್ಗೆ ಅಪಾರ ನಂಬಿಕೆಯಿದೆ. ಹಾಗಾಗಿ ಕರ್ಣನ ಮನಸ್ಸಿನಲ್ಲಿ ದ್ವಂದ್ವತೆಯನ್ನು ಬಿತ್ತುವುದಕ್ಕೆ ಶ್ರೀಕೃಷ್ಣ ಮಾಡಿದ ಮತ್ತೊಂದು ಉಪಾಯದ ದಾಳವೇ ಕುಂತಿ. ಕರ್ಣನ ತಾಯಿಯಾದ ಕುಂತಿಯಿಂದಲೂ ಕರ್ಣನ ಮನಸ್ಸನ್ನು ಭೇದಿಸುವ ಪ್ರಯತ್ನ ಮಾಡುತ್ತಾನೆ. ಹಾಗಾಗಿ ಕುಂತಿಯೂ ತನ್ನ ಐವರು ಮಕ್ಕಳ ಮೇಲಿನ ಮೋಹದಿಂದ ಕರ್ಣನ ಬಳಿಗೆ ಬಂದು 'ಹೋದ ಬಾಣವ ಮರಳಿ ತೊಡದಿರು' (ಅದೇ, ಪುಟ 361) ಎಂದು ಹೇಳುವಂತೆ ಮಾಡುವುದು ಶ್ರೀಕೃಷ್ಣನ ತಂತ್ರದ ಭಾಗವಾಗಿಯೇ ಕಾಣಿಸುತ್ತದೆ.

ಒಟ್ಟಾರೆಯಾಗಿ ಶ್ರೀಕೃಷ್ಣ ಕುಮಾರವ್ಯಾಸ ಭಾರತದ ಉದ್ಯೋಗಪರ್ವದಲ್ಲಿ ದುಷ್ಟ ನಿಗ್ರಹವೇ ಪ್ರಧಾನೋದ್ದೇಶವಾಗಿ ಇಟ್ಟುಕೊಂಡು ಅದಕ್ಕೆ ಪೂರಕವಾಗಿ ಏನೆಲ್ಲ ಕೆಲಸಗಳನ್ನು ಮಾಡಬೇಕೊ ಅದನ್ನು ಅತ್ಯಂತ ಚಾಣಾಕ್ಷ ಬುದ್ಧಿಯಿಂದ ಮಾಡಿಕೊಂಡು ಹೋಗುತ್ತಾನೆ. ಆ ಮೂಲಕ ದುರ್ಯೋಧನನ ಬಲವನ್ನು ಕ್ಷೀಣಗೊಳಿಸಿದ್ದು ಮತ್ತು ಪಾಂಡವರ ಬಲವನ್ನು ಹೆಚ್ಚುವಂತೆ ಮಾಡಿದ್ದು ನಡೆಯುತ್ತದೆ. ಬಲವನ್ನು ಮಾತ್ರವೇ ನಂಬಿಕೊಂಡವನು ಎಂದೂ ಜಯಗಳಿಸಲಾರ. ಉಪಾಯಗಳ ಮೂಲಕ ಶತ್ರುವನ್ನು ನಿರ್ನಾಮ ಮಾಡಬೇಕೆಂಬ ಶ್ರೀಕೃಷ್ಣನ ಆಶಯ ಕುಮಾರವ್ಯಾಸ ಭಾರತದಲ್ಲಿ ಎದ್ದು ಕಾಣುವ ಅಂಶವಾಗಿದೆ.

**ಆಧಾರ ಗ್ರಂಥಗಳು**

1. ಕುಮಾರವ್ಯಾಸ ಭಾರತ ಸಂಗ್ರಹ, ಸಂ. ಎಂ.ವಿ. ಸೀತಾರಾಮಯ್ಯ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, 1990
2. ಕರ್ಣಾಟ ಭಾರತ ಕಥಾಮಂಜರಿ, ಸಂ. ಕೆ.ವಿ.ಪುಟ್ಟಪ್ಪ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಮೈಸೂರು ಸಂಸ್ಥಾನ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, 1958
3. ಕುಮಾರವ್ಯಾಸ ಭಾರತ ಸಾಂಸ್ಕೃತಿಕ ಮುಖಾಮುಖಿ, ಸಂ. ರಹಮತ್ ತರೀಕರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004
4. ಕುಮಾರವ್ಯಾಸನ ಕನ್ನಡ ಭಾರತ, ಸಂ. ಶ್ಯಾಮಸುಂದರ ಬಿದರಕುಂದಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2004
5. ಉದ್ಯೋಗಪರ್ವ, ಸಂ. ಆರ್. ಶಾಮಾಶಾಸ್ತ್ರಿ, ಮೈಸೂರು ಸರ್ಕಾರ ಮುದ್ರಾಣಾಲಯ, ಮೈಸೂರು, 1922

❖❖❖

ಕೊಳಲ ಉಲಿತಕೆ
ತೋಪು ನುಲಿಯಿತು
ಕೆರೆಯು ನಲಿಯಿತು ಅಲೆಯಲಿ।
ದಿನದ ದೇವನು
ತೇರನೆಳೆಯುತ
ತಮವ ಕಳೆದನು ಬೆಳಕಲಿ॥

# ಬುಡಕಟ್ಟುದೈವ ಕ್ಯಾತಪ್ಪನ ಜಾತ್ರಾ ಆಚರಣೆ ಮತ್ತು ಆಯಾಗಾರರ ಸೇವೆ

**ಡಾ. ಚಿತ್ತಯ್ಯ ಕೆ.**
ಕನ್ನಡ ಸಹ ಪ್ರಾಧ್ಯಾಪಕರು, ಎಚ್‌ಪಿಪಿಸಿ ಸರ್ಕಾರಿ ಪ್ರಥಮ ದರ್ಜೆ, ಕಾಲೇಜು ಚಳ್ಳಕೆರೆ

ಕಾಲಬದ್ಧ ಜನಪದ ಆಚರಣೆಗಳ ಹಿಂದೆ ಸಮಷ್ಟಿಪ್ರಜ್ಞೆ ಇರುತ್ತದೆ. ಅಲ್ಲದೆ ಪರಸ್ಪರ ಭಾಗವಹಿಸುವಿಕೆ ಪ್ರಮುಖವಾಗಿರುತ್ತದೆ. ಕಾಲ ಕಾಲಕ್ಕೆ ಜಾತ್ರೆ, ಉತ್ಸವಗಳನ್ನು ಆಚರಿಸುತ್ತ ಬಂದರೆ ಮಳೆ–ಬೆಳೆ ಸಮೃದ್ಧವಾಗಿ, ನಾಡಿನಲ್ಲಿ ಸುಖ, ಶಾಂತಿ ನೆಲೆಸುತ್ತದೆ ಎಂಬ ನಂಬಿಕೆ ಜನಪದರಲ್ಲಿದೆ. ಹಾಗಾಗಿ ಆಧುನೀಕರಣ, ಜಾಗತೀಕರಣದ ಭರಾಟೆಯ ನಡುವೆಯೂ ಹಬ್ಬ, ಹರಿದಿನ, ಆಚರಣೆ ಮತ್ತು ಸಂಪ್ರದಾಯಗಳು ನಿರಂತರವಾಗಿ ಗ್ರಾಮೀಣ ಭಾಗದಲ್ಲಿ ನಡೆಯುತ್ತ ಬರುತ್ತಿವೆ. ಹಲವು ಬಗೆಯ ಕ್ರಿಯಾಶೀಲ ಸಂಬಂಧ ಹೊಂದಿರುವ ಚಿತ್ರದುರ್ಗ ಜಿಲ್ಲೆಯ ಕಾಡುಗೊಲ್ಲ ಬುಡಕಟ್ಟು ಸಮುದಾಯದ ಕ್ಯಾತಪ್ಪ ದೈವದ ಜಾತ್ರಾ ಆಚರಣೆಗಳು ಕೇವಲ ಸಂಪ್ರದಾಯ, ಆಚರಣೆಯಾಗಿ ಉಳಿಯದೆ ಬಹಸಂಸ್ಕೃತಿಯ ಪ್ರಾತ್ಯಕ್ಷಿಕೆ ಎಂಬಂತೆ ಇದೆ.

ಸಾಮಾಜಿಕ ಜಾತಿ ಶ್ರೇಣಿಯನ್ನಾಧರಿಸಿ ಜಾತ್ರಾ ಕೆಲಸ ಕಾರ್ಯಗಳು ಹಂಚಿಕೆಯಾಗಿವೆ. ಬಯಲು ಸೀಮೆ ಪರಿಸರದ ಬುಡಕಟ್ಟು ಸಮುದಾಯದ ಸಾಂಸ್ಕೃತಿಕವೀರ ಕ್ಯಾತಪ್ಪ ದೈವದ ಜಾತ್ರೆಯಲ್ಲಿ ಅಯ್ಯಗಳು, ತಳವಾರರು, ಮಾದಿಗರು, ಮಡಿವಾಳರು, ಉಪ್ಪಾರರು, ಹೆಳವರು ಮುಂತಾದ ಶೂದ್ರವರ್ಗದವರು ಮತ್ತು ಪಂಚಮ ವರ್ಗದ ಹೊಲೆಯರು ದೈವದ ಆಚರಣೆಯಲ್ಲಿ ಸದಾ ಪಾಲ್ಗೊಳ್ಳುತ್ತಿರುತ್ತಾರೆ.ದೇವರ ಪೂಜಾಕಾರ್ಯ ಹೊರತುಪಡಿಸಿ ಜಾತ್ರೆಯ ಹೊರಭಾಗದಲ್ಲಿ ನಡೆಯುವ ಅಗತ್ಯವಾದ ಕೆಲಸ ಕಾರ್ಯಗಳನ್ನು ಕೆಳವರ್ಗದ ಆಯಗಾರರೇ ಪರಂಪರೆಯಿಂದ ಪೂರೈಸುತ್ತ ಬಂದಿದ್ದಾರೆ. ಹಾಗಾಗಿ ಈ ಜಾತ್ರೆಯು ಒಂದು ಸಾಮೂಹಿಕ ಆಚರಣೆಯಾಗಿ ರೂಪುಗೊಂಡ ಅರ್ಥ ಪಡೆದುಕೊಂಡಿದೆ. ಮತ್ತು ದೈವಗಳ ಆಚರಣೆ ಮತ್ತು ಸಮಾಜಕ್ಕೆ ನಿಕಟವಾದ ಸಂಬಂಧವಿದ್ದು ಅನೇಕ ಆಚರಣೆ, ನಂಬಿಕೆ ಮತ್ತು ಸಂಪ್ರದಾಯಗಳೆಲ್ಲವೂ ಸಮಾಜದ ಕ್ಷೇಮಕ್ಕಾಗಿ, ತಮ್ಮ ಬಂಧು–ಬಳಗದವರನ್ನು ಹತ್ತಿರ ತರುವುದಕ್ಕಾಗಿ ನಡೆಯುತ್ತಿರುತ್ತವೆ.

## ಜಾತ್ರೆಯಲ್ಲಿ ವಿವಿಧ ಆಯಗಾರರ ಸೇವಾನಿಷ್ಠ ಪರಂಪರೆ

ಜನಪದರ ಜೀವನ ಸುವ್ಯವಸ್ಥೆಯಿಂದ ಸಾಗುತ್ತಾ ಪರಂಪರೆಯಿಂದ ಹಲವಾರು ಸಾಮಾಜಿಕ ಕಟ್ಟು, ಕಟ್ಟಳೆ, ನೀತಿ–ನಿಯಮಗಳನ್ನು ಸೃಷ್ಟಿಸಿಕೊಂಡು ಬಂದಿದ್ದಾರೆ. ಆದ್ದರಿಂದ ಅವುಗಳು ಸಾಮಾಜಿಕ ಮತ್ತು ಆರ್ಥಿಕ ನೆರವು ನೀಡುವುದರ ಜತೆಗೆ ಜನರಲ್ಲಿ ಮಾನಸಿಕ ನೆಮ್ಮದಿ ನೆಲೆಸುವಂತೆ ಮಾಡುತ್ತಿವೆ. ಜೀವನಾವಶ್ಯಕತೆಗಳು, ಜೀವನ, ವಿಧಿ–ವಿಧಾನಗಳು ಸಾಮಾನ್ಯವಾಗಿ ಎಲ್ಲ ಹಳ್ಳಿಯಲ್ಲಿ ಒಂದೇ ರೀತಿಯಾಗಿರುತ್ತವೆ. ಊರಿನ ಮತ್ತು ದೈವದ ಸೇವಾ ಕಾರ್ಯಗಳಿಗೆ ನೆರವಾಗುವಂತ ಮಣೆಗಾರ, ಕುಂಬಾರ, ಬಡಗಿ, ಕಂಚುಗಾರ, ನೇಕಾರ, ತಳವಾರ, ಶ್ಯಾನುಬೋಗ, ಪೂಜಾರಿ,

ಪಾಟೇಲ ಮುಂತಾದ ಹಲವು ಜಾತಿಗಳಲ್ಲಿ ತಮ್ಮ ಸೇವಾನಿಷ್ಠೆಗೆ ತಕ್ಕಂತೆ ನೂರಾರು ಆಯಗಾರರು ಕಂಡು ಬರುತ್ತಾರೆ.

ಮಡಿವಾಳ–ಸಾಮಾಜಿಕ, ಧಾರ್ಮಿಕ ಸೇವೆಯಲ್ಲಿ ಮಡಿವಾಳ(ಅಗಸ)ನ ಕೆಲಸ ಪ್ರಮುಖವಾದುದು. ಗ್ರಾಮದೇವರ ಹರಕೆ, ಜಾತ್ರೆ, ಉತ್ಸವಗಳಲ್ಲಿ ದೇವರು ಗುಡಿಯಿಂದ ಹೊರ ಬರುವಾಗ ನಡೆಮುಡಿ ಹಾಸುವುದು, ಅವರು ಮಡಿಬಟ್ಟೆ ಹಾಸುತ್ತಾ ಹೋದಂತೆ ದೇವರು ಹೊತ್ತ ಪೂಜಾರಿಗಳು, ಕಳಸ ಹೊತ್ತವರು ಮಡಿಯ ಮೇಲೆ ನಡೆದು ಹೋಗುತ್ತಾರೆ. ಮೆರವಣಿಗೆಯಲ್ಲಿ ಬೆಳಕಿನ ವ್ಯವಸ್ಥೆಗೆ ಬಟ್ಟೆಯ ಪಂಜು ಹಿಡಿಯುವುದು, ಮಣೇವು ಹಾಕಲಿಕ್ಕೆ ಮಡಿಬಟ್ಟೆ ಒದಗಿಸುವುದು, ನಿಷ್ಠೆಯಿಂದ ಸೇವಾ ಕಾರ್ಯಗಳು ಕ್ಯಾತಪ್ಪನ ಜಾತ್ರಾಚರಣೆಯಲ್ಲಿ ಪ್ರತಿ ವರ್ಷ ಸಲ್ಲಿಸುತ್ತಾ ಬಂದಿದ್ದಾರೆ. ಕಾಡುಗೊಲ್ಲರ ಯಾವುದೇ ದೈವಗಳ ಆಚರಣೆಗಳು ಮಡಿವಾಳರ ನಡೆಮುಡಿ ಇಲ್ಲದೆ ಜರುಗುವುದಿಲ್ಲ. ಆದ್ದರಿಂದ ಕಾಡುಗೊಲ್ಲ ಹಾಗೂ ಮಡಿವಾಳ ಸಮುದಾಯದ ನಡುವೆ ಸಾಮರಸ್ಯವಿರುವುದನ್ನು ಕಾಣಬಹುದು.

ಮಣೆಗಾರ : ಆಯಗಾರರಲ್ಲಿ ಪ್ರಮುಖನಾದವನು ಮಣೆಗಾರ. ಮಣೆಗಾರರು ಸಾಮಾಜಿಕ, ಧಾರ್ಮಿಕ ಕೆಲಸ ಕಾರ್ಯಗಳಲ್ಲಿ ಅತಿ ಮುಖ್ಯವಾದ ಪಾತ್ರವಹಿಸುತ್ತಾರೆ. ಆಯದ ಕೆಲಸದವರು ಇವರನ್ನು 'ಮನೆಮಗ' ಎಂದು ಸಂಬೋಧಿಸುವುದುಂಟು. ಕ್ಯಾತೇದೇವರ ಜಾತ್ರಾಚರಣೆಯ ಸಂದರ್ಭದಲ್ಲಿ ಮಣೆಗಾರರು ಚರ್ಮದಿಂದ ಹೊಸ ಚಪ್ಪಲಿಗಳನ್ನು ಹೊಲಿದು ಕ್ಯಾತೇದೇವರ ಪಟ್ಟದ ಪೂಜಾರಿಗಳಿಗೆ ಅರ್ಪಿಸುವ ಪದ್ಧತಿ ಇಂದಿಗೂ ಇದೆ. ಜಾತ್ರೆಯ ಕೆಲಸದಲ್ಲಿ ಮಣೆಗಾರರನ್ನು ಅಣ್ಣ ತಮ್ಮಂದಿರಂತೆ, ಬಂಧುಬಂದವರಂತೆ ನಡೆಸಿಕೊಳ್ಳುತ್ತಾ ಬಂದಿದ್ದಾರೆ. ಹಬ್ಬ ಹರಿದಿನಗಳಲ್ಲಿ ತಮಟೆ ಬಾರಿಸುವ ಇವರು ಪ್ರಮುಖ ಪಾತ್ರವಹಿಸುತ್ತಾರೆ.

ತಳವಾರ ನಾಯಕ– ಕ್ಯಾತಪ್ಪನ ಆಚರಣೆಯಲ್ಲಿ 'ಒಳಮರ' ತರುವ ಜವಾಬ್ದಾರಿ ತಳವಾರ ನಾಯಕನ ಕೆಲಸವಾಗಿದೆ. ಒಳಮರ ಎಂದರೆ ದೇವರ ಮುಳ್ಳಿನ ಗುಡಿ ಒಳಭಾಗದಲ್ಲಿ ಅಡ್ಡವಾಗಿ ಮಲಗಿಸುವ ಅತ್ತಿಯ ಮರ. ಈ ಮರದ ದೊಡ್ಡದಾದ ತುಂಡಿನಲ್ಲಿ ಐದು ಕುಣಿ ಮಾಡಿ ಪಟ್ಟದ ಪೂಜಾರಿಗಳು, ಮುತ್ತೈದೆ ಹೆಣ್ಣುಮಕ್ಕಳು ಒನಕೆ ಹಿಡಿದು ಜಾತ್ರೆಯ ಸಂದರ್ಭದಲ್ಲಿ ನವಣೆ ಕುಟ್ಟುವ ಶಾಸ್ತ್ರದ ಆಚರಣೆ ನಡೆಸುತ್ತಾರೆ.

ಹೆಳವರು– ಕಾಡುಗೊಲ್ಲರ ಎಲ್ಲಾ ದೇವರಿಗೂ ಘಂಟೆ ಸೇವೆ ಸಲ್ಲಿಸುತ್ತಾರೆ. ಹೆಳವರನ್ನು ಹೆಳ ಮಗ, ನಮ್ಮ ಮನೆಯಮಗ ಎಂದು ಕರೆಯುತ್ತಾರೆ. ತಲೆಮೇಲೆ ಬಿಳಿಪೇಟ ಧರಿಸಿ ಕರಿಕಂಬಳಿ ಹೆಗಲಮೇಲೆ ಕೆಂಪುಶಾಲು ಹಾಕಿಕೊಂಡು ಕಪ್ಪು ಕೋಟು ಧರಿಸಿ ಬಲಗೈಲಿ ಕಂಚಿನ ಘಂಟೆ ಹಿಡಿದು ಹಾಡಿನೊಂದಿಗೆ ದೇವರನ್ನು ಹೊಗಳುತ್ತಿರುತ್ತಾರೆ.

ಚಲವಾದಿ– ದೇವರ ಹಬ್ಬ, ಹರಿದಿನ, ಉತ್ಸವ, ಜಾತ್ರೆಗಳಲ್ಲಿ ಚವಾದಿಗಳು ತಮ್ಮ ಬಳಿ ಇರುವ ಉರುಮೆ ಚರ್ಮದ ವಾದ್ಯವೊಂದನ್ನು ಬಡಿಯುವ ಮೂಲಕ ಜನರನ್ನು ಹುಚ್ಚೆದ್ದು ಕುಣಿಯುವಂತೆ ಮಾಡುತ್ತಾರೆ. ಇದನ್ನು ಕಾಡುಗೊಲ್ಲರು ಮತ್ತು ಮ್ಯಾಸಬೇಡರು ತಮ್ಮ ದೈವಗಳ ಆರಾಧನೆಯಲ್ಲಿ ಬಳಸುವಂತೆ ಇತರೆ ಜನಾಂಗದವರು ಕೂಡ ಈ ವಾದ್ಯವನ್ನು ಬಳಸುತ್ತಾರೆ. ವಿಶೇಷವಾಗಿ ಮಾರಿ, ದುರ್ಗಿಯರು ಸೇರಿದಂತೆ ಕಾಡುಗೊಲ್ಲರ ದೈವಗಳು ಬಹುತೇಕವಾಗಿ ಈ ವಾದ್ಯದಿಂದಲೇ ಗುರುತಿಸಲ್ಪಡುತ್ತಾರೆ. ದೇವರ ಉತ್ಸವಗಳಲ್ಲಿ ಉರುಮೆಯ ವಾದ್ಯವನ್ನು ಉಜ್ಜದೇ ಹೋದರೆ ತಮ್ಮ ವಂಶವೇ

ನಿರ್ವಂಶವಾಗುತ್ತದೆ ಎಂದು ತಿಳಿದ ವಾದ್ಯಗಾರರು ಕ್ಯಾತಪ್ಪನ ಜಾತ್ರೆಯಲ್ಲಿ ಉರುಮೆ ವಾದ್ಯ ಸೇವೆ ನೆರವೇರಿಸುತ್ತಾರೆ.

ಅಯ್ಯಗಳು(ಪುರೋಹಿತರು)– ಅಯ್ಯಗಳು ಅಥವಾ ಐನೋರು ದೇವರ ಹೊಳೆಪೂಜೆ ಕಾರ್ಯಗಳಲ್ಲಿ ಭಾಗವಹಿಸಿ ದೇವರಿಗೆ ಕಂಕಣಧಾರಣೆ, ಮಂತ್ರಶಾಸ್ತ್ರದ ಮೂಲಕ ದೇವರ ಶುದ್ಧಿ ಕಾರ್ಯ ಮಾಡುತ್ತಾರೆ. ನಂತರ ದೇವರಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ಹೀಗೆ ಸಮಾಜ ವ್ಯವಸ್ಥೆಯ ಸ್ತರಗಳಲ್ಲಿನ ನಿರ್ಬಂಧಗಳಿಗೆ ಅನುಗುಣವಾಗಿ ಜಾತ್ರಾ ಉತ್ಸವಗಳು ನಡೆಸುತ್ತಾ ಬಂದಿದ್ದಾರೆ.

ಚಿತ್ರದುರ್ಗ, ತುಮಕೂರು ಜಿಲ್ಲೆಯ ಕಾಡುಗೊಲ್ಲರು ಜುಂಜಪ್ಪ, ಕ್ಯಾತಪ್ಪ, ಎತ್ತಪ್ಪ, ಕರಿಯಣ್ಣ, ಸಿರಿಯಣ್ಣ, ಕುರುಬ ಜನಾಂಗದವರು ಬೀರಪ್ಪ, ಮ್ಯಾಸಬೇಡರು ಗಾದರಿಪಾಲನಾಯಕ, ಜಗಲೂರಜ್ಜನಿಗೆ ನಡೆದುಕೊಳ್ಳುತ್ತಾರೆ. ಬೇರೆ ಜಾತಿಯವರು ಈ ದೇವರುಗಳಿಗೆ ಬರಬಾರದೆಂಬ ನಿಯಮವಿಲ್ಲ. ಅಕಸ್ಮಾತ್ ಇವರುಗಳೇನಾದರೂ ಬಂದರೆ ಪವಾಡ, ಮಹಿಮೆ, ಭಯ, ಭಕ್ತಿಗಳು ಹೆಚ್ಚಿನ ಪ್ರಮಾಣದಲ್ಲಿರುವುದಿಲ್ಲ. ಹೀಗೆ ಒಂದೇ ಕಡೆ ಸೇರುವ ಜನತೆಯು ತಮ್ಮದೇ ಆದ ಸಂಪ್ರದಾಯ ಆಚರಣೆ, ರೂಢಿ, ನೀತಿ ನಿಯಮಗಳನ್ನು ದೈವಗಳ ಆಚರಣೆಯಲ್ಲಿ ಉಳಿಸಿ ಬೆಳೆಸಿಕೊಂಡು ಬರುತ್ತಾರೆ. ಇವರಲ್ಲಿ ತಾವೆಲ್ಲರೂ ಒಂದೇ ಎಂಬ ಭಾವನೆ ಮೂಡಿರುತ್ತದೆ. ಆಚರಣೆಗಳು ಜನಸಾಮಾನ್ಯರ ನಡುವೆ ಹುಟ್ಟಿ ಬೆಳೆದುದರಿಂದ ಜನಪದರ ಸಾಮಾಜಿಕ ಜೀವನಕ್ಕೆ ಇವು ಹತ್ತಿರವಾಗುತ್ತಿವೆ. ಈ ಹಿನ್ನೆಲೆಯಲ್ಲಿ ಕ್ಯಾತಪ್ಪನ ಸಂಪ್ರದಾಯ ಮತ್ತು ಆಚರಣೆಗಳಲ್ಲಿ ಕಂಡುಬರುವ ಸಾಮಾಜಿಕ ಜೀವನದ ಮುಖ್ಯಾಂಶಗಳನ್ನು ಗುರುತಿಸಬಹುದಾಗಿದೆ.

ಸಮಾಜದ ಮೇಲ್ಜಾತಿಯ ವಿಧಿವಿಧಾನಗಳು ಸಾಮಾನ್ಯವಾಗಿ ಕೆಳವರ್ಗದ, ಕೆಳಜಾತಿಯವರ ಆಚರಣೆಗಳ ಮೇಲೆ ಪ್ರಭಾವ ಬೀರುವ ಹಾಗೆ ಕಾಡುಗೊಲ್ಲ ಬುಡಕಟ್ಟು ಸಮುದಾಯದಲ್ಲಿ ಚಿತ್ತಮುತ್ತಿ, ಚಂದ್ರಮುತ್ತಿ ಹಾಗೂ ರಾಮೇಗೌಡನ ಕುಲ ಎಂಬ ಮೂರು ಪ್ರಧಾನ ಕುಲಗಳಿದ್ದು, ಅವುಗಳಲ್ಲಿ ಹಲವು ಬೆಡಗು ಮತ್ತು ಉಪ ಬೆಡಗುಗಳಿವೆ. ಕುಲ ಮತ್ತು ಬೆಡಗುಗಳ ಆಚರಣೆಗಳ ನಡುವೆ ಭಿನ್ನತೆ ಕಂಡುಬರುತ್ತದೆ. ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಆ ಕುಲ, ಬಳ್ಳಿ ಅಥವಾ ಬೆಡಗುಗಳೊಳಗೆ ಜಾತಿಯಷ್ಟೇ ಕಠಿಣ ನಿಲುವಿನ ಭಿನ್ನತೆ ಇದೆ. ನಮ್ಮ ಕುಲ, ಬೆಡಗು ಶ್ರೇಷ್ಠ, ನಿಮ್ಮದು ಕನಿಷ್ಠ ಎಂಬ ತಾರತಮ್ಯ ಭಾವನೆ ಅವುಗಳ ನಡುವೆಯೇ ಬೆಳೆದಿದೆ. ಸನ್ನೋರು, ಸೋಮನೋರು, ಕೋಣನೋರು, ಅಜ್ಜೇರ, ಸಜ್ಜೇರ, ಉಪಗೊಳ್ಳೋರು, ಮರವಾಯಿ, ಭೂಮಪ್ಪಗಳು, ಬೊಮ್ಮನೋರು, ದೇವರೋರು(ದ್ಯಾವರಾರು), ಬತವಿನವರು, ಗುಡಿಹಳ್ಳಿಯವರು, ಈರಗಾರರು, ದಳವಾಯಿಗಳು, ಡಮಗಿನೋರು, ಬಿಲ್ಲೂಡು ಕದರಿಗೋಗರು, ಹುಲ್ಲೋರೆ, ಕಟ್ಟಿಗೆರೆ, ಶಾಸೆದೋರು, ಹಳ್ಳೇರು ಈ ಎಲ್ಲಾ ಬೆಡಗಿನವರು ಕೇತಪ್ಪನ ಆರಾಧಕರೇ. ಇವರೆಲ್ಲೂ ಸೇರಿಕೊಂಡು ಜಾತ್ರಾ ಆಚರಣೆ ನೆರವೇರಿಸುತ್ತಾರೆ. ಪ್ರತಿ ಬೆಡಗಿಗೂ ಒಂದೊಂದು ಜವಾಬ್ಧಾರಿ ಕೆಲಸ ಕಾರ್ಯಗಳನ್ನು ವಹಿಸಿರುತ್ತಾರೆ. ಪ್ರತಿಯೊಬ್ಬರು ಕಾರ್ಯದಲ್ಲಿ ಪಾಲ್ಗೊಳ್ಳಲೇಬೇಕು. ಈ ಬೆಡಗುಗಳಲ್ಲಿ ಯಾವುದಾದರೂ ಒಂದು ಬೆಡಗಿನವರು ಪಾಲ್ಗೊಳ್ಳದಿದ್ದರೆ ಆ ವರ್ಷ ಜಾತ್ರಾ ಆಚರಣೆ ನಡೆಯುವುದಿಲ್ಲ.

ಇವರಲ್ಲಿ ಕರಡಿಗೊಲ್ಲರು, ತಾಳಿಕಟ್ಟದ ಗೊಲ್ಲರು, ಬೊಮ್ಮನಗೊಲ್ಲರು, ಕೋಣನಗೊಲ್ಲರು, ಶೀಲವಾಡಿಗೊಲ್ಲರು ಹೀಗೆ ಹಲವಾರು ಬೆಡಗುಗಳಿದ್ದು ಇವುಗಳನ್ನು

ಸುತ್ತುವರೆದಿರುವ ಐತಿಹ್ಯಗಳು ಕಂಡುಬರುತ್ತವೆ. ಆ ಬುಡಕಟ್ಟು ನಡೆದುಬಂದ ದಾರಿಯ ಹೆಜ್ಜೆ ಗುರುತುಗಳನ್ನು ತಮ್ಮ ಒಡಲೊಳಗೆ ಇಟ್ಟುಕೊಂಡಿರುವುದನ್ನು ಗಮನಿಸಿದರೆ ಇವು ಜನಪದ(ಬುಡಕಟ್ಟು) ಚರಿತ್ರೆಗೆ ಒಂದು ಹೊಸ ಆಯಾಮವನ್ನು ಒದಗಿಸುತ್ತವೆ. ಈ ಬೆಡಗು ಅಥವಾ ಪಂಗಡಗಳು ಪುರುಷ ಹಾಗೂ ಸ್ತ್ರೀಕೇಂದ್ರಿತ ಐತಿಹ್ಯಗಳನ್ನು ಹೊಂದಿರುವುದು ಕಂಡು ಬರುತ್ತವೆ. ಇವುಗಳ ಆಚಾರ ವಿಚಾರಗಳ ಹಿನ್ನೆಲೆಯಲ್ಲಿ ಕುಲ(ಬಳ್ಳಿ) ಸಂಬಂಧ ವಿಚಾರಗಳ ವೈವಿಧ್ಯತೆಗಳನ್ನು ಇಲ್ಲಿ  ಕಾಣಬಹುದಾಗಿದೆ.

ಕ್ಯಾತಪ್ಪ ಒಂದೇ ಬುಡಕಟ್ಟು ಸಮುದಾಯದ ಆರಾಧ್ಯ ದೈವವಾಗಿದ್ದರೂ ಜಾತ್ರೆಯ ದಿನ ವಿವಿಧ ಜಾತಿ–ಧರ್ಮದವರು ಜಾತ್ರೆಗೆ ಬಂದು ತಾವು ಮಾಡಿಕೊಂಡಿದ್ದ ಹರಕೆ ತೀರಿಸಿ ಪೂಜೆ ಸಲ್ಲಿಸುತ್ತಾರೆ. ಸಾಂಸ್ಕೃತಿಕ ವೀರ ಕ್ಯಾತಪ್ಪ ಜನರ ಬದುಕಿನ ಜಡತೆಯನ್ನು ಹೋಗಲಾಡಿಸಿ, ಅವರಲ್ಲಿ ಹೊಸ ಚೈತನ್ಯ ತುಂಬಿ ಕ್ರಿಯಾಶೀಲರನ್ನಾಗಿಸುವತ್ತ ಈ ಜಾತ್ರೆ ನೆರವಾಗುತ್ತದೆ. ಸಾಮಾಜಿಕ ವ್ಯವಸ್ಥೆಯ ಲಕ್ಷಣಗಳಲ್ಲಿ ಪ್ರಮುಖವಾದುದು ಎಂದರೆ 'ಜಾತಿ'. ಪ್ರತಿಯೊಂದು ಜಾತಿಯೂ ತನ್ನ ಉಗಮದ ಬಗ್ಗೆ ಕಥೆ, ಐತಿಹ್ಯಗಳನ್ನು ಹೊಂದಿದೆ. ಕೃಷಿಕರು, ಪಶುಪಾಲಕ ವಲಸೆಗಾರ ಬುಡಕಟ್ಟು ಸಮುದಾಯಗಳ ಮಧ್ಯೆ ಸಹಕಾರ, ಸಹಬಾಳ್ವೆಯು ಸ್ಥಿರವಾಗಿತ್ತು. ಇದೇ ಸಂದರ್ಭದಲ್ಲಿ ಪರಿವರ್ತನೆಯಾದ ಗ್ರಾಮ ಪಟ್ಟಣಗಳಲ್ಲಿ ಆರ್ಥಿಕ, ರಾಜಕೀಯ, ಸಾಮಾಜಿಕ ಸ್ಥಿತಿಗೆ ತಕ್ಕಂತೆ ದಲಿತರು, ಪೂಜಾರಿಗಳು, ಎಲ್ಲಾ ಜಾತಿ ಜನಾಂಗದವರು ಅವರವರ ಅಂತಸ್ತಿಗೆ ತಕ್ಕಂತೆ ಜಾತ್ರೆ–ಉತ್ಸವಗಳ ಸಂದರ್ಭದಲ್ಲಿ ಆಯಾಗಾರಿಕೆಯ ಹಕ್ಕುಬಾಧ್ಯತೆಯಲ್ಲಿ ಸ್ಥಾನಮಾನವನ್ನು ಹೊಂದಿರುತ್ತಾರೆ.

ಜಾತ್ರೆಗಳು ಗ್ರಾಮೀಣ ಜನತೆಯ ಹಿಂದಿನ, ನೋವು ನಲಿವುಗಳ ಹಿಂದಿನ ಸತ್ಯ ಸಂಗತಿಗಳಾಗಿ ರೂಪುಗೊಂಡಿದ್ದರೂ, ಜಾತಿ ವ್ಯವಸ್ಥೆಯನ್ನು ಎತ್ತಿಹಿಡಿಯುತ್ತಿವೆ. ಇದನ್ನು ಜಾತ್ರೆಯಲ್ಲಿ ಪ್ರದರ್ಶನಗೊಳ್ಳುತ್ತಿರುವ ಕಲಾಮೇಳಗಳಾದ ಹಲಗೆ ಬಡಿತ, ಮಣೇವು ಕುಣಿತ, ಕೋಲಾಟ, ಉರುಮೆ ಕುಣಿತ ಇನ್ನು ಮುಂತಾದವುಗಳು ಅಭಿವ್ಯಕ್ತಿಸುತ್ತವೆ. ಜಾತ್ರೆಯಲ್ಲಿ ನಡೆಯುವ ಆಚರಣೆಗಳನ್ನು ವಿಧಿ ವಿಧಾನಗಳನ್ನು ವೀಕ್ಷಣೆ ಮಾಡಿದಾಗ ಅಲ್ಲಿ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯ ಪ್ರತಿರೂಪವಾಗಿ ಕೂಡ ಗೋಚರಿಸುತ್ತವೆ.

**ಪರಾಮರ್ಶನ ಗ್ರಂಥಗಳು**


1. ರಾಜಶೇಖರನ್‌ಪಿ.ಕೆ. : ಜಾನಪದ ಸಂಭ್ರಮ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – 2003.
2. ಜವರೇಗೌಡ: ಜಾನಪದ ಅಧ್ಯಯನ, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು – 2015
3. ಸುಭಾಷಚಂದ್ರ ನಾಟೀಕಾರ : ಕರ್ನಾಟಕದಲ್ಲಿ ಸಿಡಿ ಸಂಪ್ರದಾಯ, ಲಕ್ಷ್ಮೀಶ್ವರ ಪ್ರಿಂಟರ್ಸ್ ಕೊಪ್ಪ, ಗುಲ್ಬರ್ಗ – 1998.
4. ನಾಗರಾಜ.ಓ: ತುಮಕೂರು ಜಿಲ್ಲೆಯ ಗ್ರಾಮ ದೇವತೆಗಳು, ತುಂಬೆ ಪ್ರಕಾಶನ, ತುಮಕೂರು –2010.
5. ಸತೀಶ ಎಚ್.: ನಾಯಕನಹಟ್ಟಿ ತಿಪ್ಪೇಸ್ವಾಮಿ ಸಾಂಸ್ಕೃತಿಕ ಅಧ್ಯಯನ, ಕುವೆಂಪು ವಿಶ್ವ ವಿದ್ಯಾಲಯ  ಶಿವಮೊಗ್ಗ – 2001.
6. ಮೀರಾಸಾಬಿಹಳ್ಳಿ ಪಿ.ಬಿ.ಶಿವಣ್ಣ: ಕಾಡುಗೊಲ್ಲರ ಸಂಸ್ಕೃತಿ, ಸಿವಿಜಿ ಪಬ್ಲಿಕೇಶನ್ ಬೆಂಗಳೂರು – 2004.


❖❖❖

# ಮೊದಲ ತಲೆಮಾರಿನ
# ದಲಿತ ಚಿಂತಕ–ಕುಮಾರ ಕಕ್ಕಯ್ಯ ಪೋಳ

**ಡಾ. ಮಹಾಂತಗೌಡ ಪಾಟೀಲ**
ಸಹಪ್ರಾಧ್ಯಾಪಕರು, ಕನ್ನಡ ವಿಭಾಗ
ದೇವನಾಂಪ್ರಿಯ ಅಶೋಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಸ್ಕಿ–584124

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಜಯಪುರ ಜಿಲ್ಲೆಯು ತನ್ನದೇಯಾದ ಸಾಹಿತ್ಯಿಕ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ನವೋದಯದ ಸಂದರ್ಭದಲ್ಲಿ 'ಗರತಿಹಾಡು' ತ್ರಿಪದಿ ಕೃತಿಯನ್ನು ಕನ್ನಡ ನಾಡಿನ ಜನತೆಗೆ ಪರಿಚಯಿಸಿದ ಮಧುರಚೆನ್ನರು ಹಾಗೂ ಅವರ ಸಂಗಡಿಗರಾದ ಪಿ.ದೂಲಾಸಾಹೇಬ, ರೇವಪ್ಪ ಕಾಪಸೆ, ಸಿಂಪಿ ಲಿಂಗಣ್ಣ ಮುಂತಾದವರು ವಿಜಯಪುರ ಜಿಲ್ಲೆಯವರಾಗಿದ್ದಾರೆ. ಆಧುನಿಕ ಸಾಹಿತ್ಯದ ಸಂದರ್ಭದಲ್ಲಿ ವಿಜಯಪುರ ಜಿಲ್ಲೆಯ ಕೊಡುಗೆಯನ್ನು ಮೆಲಕುಹಾಕುತ್ತಾ ಹೋಗುವಾಗ ನಮ್ಮೆ ಸ್ಮೃತಿಪಟಲದ ಮೇಲೆ ಬಂದು ನಿಲ್ಲುವ ಮತ್ತೊಂದು ಅದ್ಭುತ ಪ್ರತಿಭೆ ವೈಚಾರಿಕ–ಆಧುನಿಕ ವಚನ ಕ್ಷೇತ್ರದಲ್ಲಿ ಸಾಧನೆಮಾಡಿದ ಮೊದಲ ತಲೆಮಾರಿನ ದಲಿತ ಚಿಂತಕ ಕುಮಾರ ಕಕ್ಕಯ್ಯ (ಬಿ.ಎಸ್.ಪೋಳ) ಪೋಳ.

ಕರ್ನಾಟಕ ಚರಿತ್ರೆಯಲ್ಲಿ 1970ರ ದಶಕ ಹಲವು ತಲ್ಲಣಗಳಿಗೆ ಕಾರಣವಾಯಿತು. 1973ರಲ್ಲಿ ಬಿ. ಬಸವಲಿಂಗಪ್ಪನವರು 'ಕನ್ನಡ ಸಾಹಿತ್ಯ ಬೂಸಾ' ಎಂದು ಕರೆದ ಸಂದರ್ಭದಿಂದ ಸಾಹಿತ್ಯವಲಯದಲ್ಲಿ ಅನೇಕ ಕಂಪನಗಳಾದವು. ಇದಕ್ಕೂ ಮೊದಲೇ ಡಾ.ಅಂಬೇಡ್ಕರವರ ವಿಚಾರಗಳಿಂದ ಪ್ರಭಾವಿತರಾಗಿ ಶೋಷಿತರ ಪರ ಚಿಂತನೆಯನ್ನು ,ಹೋರಾಟಗಳನ್ನು ಸಾಹಿತ್ಯದ ಮೂಲಕ ಸಾಧಿಸಿದ ಮೊದಲ ತಲೆಮಾರಿನ ದಲಿತ ಚಿಂತಕ. ವೃತ್ತಿಯಿಂದ ಅಧಿಕಾರಿಯಾಗಿ ಪ್ರವೃತ್ತಿಯಿಂದ ಸಾಹಿತಿಯಾದ ಕುಮಾರ ಕಕ್ಕಯ್ಯ ಪೋಳ ಅವರ ಬದುಕೇ ಒಂದು ತೆರದ ಕ್ರಾಂತಿಯ ಪುಸ್ತಕ. ಸ್ವತಃ ಶೋಷಿತ ದಲಿತ ಕುಟುಂಬದಲ್ಲಿ ಜನಿಸಿ ಅವಮಾನಗಳ ನೋವುಂಡ–ನಂಜುಂಡ ಕುಮಾರ ಕಕ್ಕಯ್ಯ ಪೋಳ.

ಮೊದಲ ತಲೆಮಾರಿನ ದಲಿತ ಚಿಂತಕರಾದ ಕುಮಾರ ಕಕ್ಕಯ್ಯ ಪೋಳ ಅವರು ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಚಾಂದಕವಟೆಯಲ್ಲಿ ಡೋಹರ ಕುಲದ ಸಾಯಬಣ್ಣ–ರಾಯವ್ವ ದಂಪತಿಗಳಿಗೆ ದಿನಾಂಕ 28–07–1929 ರಂದು ಏಕೈಕ ಗಂಡು ಮಗುವಾಗಿ ಜನಿಸಿದರು. ಇವರ ಮೂಲ ಹೆಸರು ಬೀಮರಾವ್. ಪ್ಲೇಗಿನಂತ ಮಹಾಮಾರಿ ರೋಗಕ್ಕೆ ತುತ್ತಾಗಿ ಬೀಮರಾವ ಅವರ ತಂದೆ–ತಾಯಿಗಳು ಇಹಲೋಕ ತ್ಯೆಜಿಸಿದರು. ಬೀಮರಾವ ಅಜ್ಜ ತುಳಜರಾಮ ಮೊಮ್ಮಗನಿಗೆ ಹುಟ್ಟುರಾದ ಚಾಂದಕವಟೆಯಲ್ಲಿ ಶಾಲೆಗೆ ಸೇರಿಸಿದನು. 'ಭೀಮ್ಯಾ ಸಾಯಬ್ಯಾ ಢ್ವಾರ' ಎಂದು ಹೆಸರನ್ನು ಶಾಲಾ ದಾಖಲಾತಿಯಲ್ಲಿ ನೊಂದಾಯಿಸಿಕೊಳ್ಳುವುದರೊಂದಿಗೆ ಅವರ ಶಿಕ್ಷಣ ಆರಂಭವಾಯಿತು.

ಅಸ್ಪೃಶ್ಯತಾ ನಿವಾರಣಾ ನೆಪದಲ್ಲಿ ನಡೆದ ದುರ್ಘಟನೆಯಲ್ಲಿ ತನ್ನದಲ್ಲದ ತಪ್ಪಿಗೆ

ಭೀಮರಾವ ಅವರ ಮಾವ ಶಂಕರನು ಸವರ್ಣೀಯರಿಂದ ಒದೆತ ತಿನ್ನಬೇಕಾಯಿತು. ಮಾವನ ಬದುಕಿನಲ್ಲಿ ಜರುಗಿದ ದುರ್ಘಟನೆ ಬಾಲಕ ಭೀಮರಾವನ ಮೇಲೆ ಗಾಢವಾದ ಪ್ರಭಾವವನ್ನು ಬೀರಿತು. ಮುಂದೆ 1951 ರಲ್ಲಿ ಎಸ್.ಎಸ್.ಸಿ.ಯನ್ನು ಪಾಸುಮಾಡಿದರು. ಸೊಲ್ಲಾಪುರದ ದಯಾನಂದ ಕಾಲೇಜಿಗೆ ಪಿಯುಸಿಗೆ ಪ್ರವೇಶ ಪಡೆದ ಬಡತನದ ಕಾರಣಕ್ಕಾಗಿ ಕಾಲೇಜು ಶಿಕ್ಷಣವನ್ನು ಪೂರೈಸಲಾಗಲಿಲ್ಲ. ಮುಂದೆ 1953 ಫೆಬ್ರುವರಿಯ ನಾಲ್ಕರಂದು ಬಾದಾಮಿ ಕೋರ್ಟಿನಲ್ಲಿ ಅಫಿಡಿವೆಟ್ ಮಾಡಿಸುವ ಮೂಲಕ ಭೀಮರಾವ ಸಾಯಬಣ್ಣ ಪೋಳ ಎಂದು ತಮ್ಮ ಹೆಸರನ್ನು ಬದಲಿಸಿಕೊಂಡರು. ಅಂದಿನಿಂದ ಬಿ. ಎಸ್. ಪೋಳ ಎಂದು ತಮ್ಮ ಆರಂಭಿಕ ಕೃತಿಗಳಲ್ಲಿ ಉಲ್ಲೇಖಿಸಿಕೊಂಡಿರುವುದನ್ನು ಕಾಣುತ್ತೇವೆ. ನಂತರದಲ್ಲಿ ಶರಣ ಸಾಹಿತ್ಯ ರಚನೆ ಬಸವ ಧರ್ಮದ ಪ್ರಭಾವದಿಂದ ಕುಮಾರ ಕಕ್ಕಯ್ಯ ಪೋಳ ಎಂದು ಆಧುನಿಕ ವಚನಕಾರರಾಗಿ ಚಿರಪರಿಚಿತರಾಗಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅನೇಕ ಕೃತಿಗಳನ್ನು ನೀಡಿದ್ದಾರೆ. 1956ರಲ್ಲಿ ಸೊಲ್ಲಾಪುರದ ಆರೋಗ್ಯ ಇಲಾಖೆಯಲ್ಲಿ ಸೇವೆಗೆ ಸೇರಿದರು.

ಕುಮಾರ ಕಕ್ಕಯ್ಯ ಪೋಳ ಅವರದು ಬಹುಮುಖ ವ್ಯಕ್ತಿತ್ವ ಕತೆ, ಕಾದಂಬರಿ, ನಾಟಕ, ಪ್ರಬಂಧ, ವೈಚಾರಿಕ ಕ್ಷೇತ್ರವಲ್ಲದೆ ವಚನಕಾರರಾಗಿ, ಸಂಶೋಧಕರಾಗಿ, ಆತ್ಮಚರಿತ್ರೆಕಾರರಾಗಿದ್ದಂತೆ ಕವಿಗಳೂ ಆಗಿದ್ದರು. ನಾಡಿನ ಪ್ರತಿಷ್ಠಿತ ಪತ್ರಿಕೆಗಳಲ್ಲಿ ಅವರ ಕವನಗಳು ಪ್ರಕಟವಾಗಿವೆ. ಕನ್ನಡ, ಮರಾಠಿ, ಹಿಂದಿ, ಸಂಸ್ಕೃತ ಮತ್ತು ಇಂಗ್ಲಿಷ್ ಹೀಗೆ ಪಂಚ ಭಾಷಾಪ್ರವೀಣರಾಗಿದ್ದ ಕುಮಾರ ಕಕ್ಕಯ್ಯ ಪೋಳ ಅವರು ನೂರಾರು ಲೇಖನಗಳನ್ನು ಬರೆದಿದ್ದಾರೆ. ಸಿದ್ದಾಂತ ಶಿಖಾಮಣಿ ಗೀತೆಯ ನಕಲಲ್ಲವೇ?, ಬಸವ ಬಲಿದಾನ ಹುಸಿ ಹೋಗಬೇಕು?, ಕೇವಲ ತಾಳಿ(ಲಿಂಗ) ಕಟ್ಟಿಕೊಂಡರೆ ಆಯಿತ?, ಗೊಡ್ಡಾಕಳ ದಡ್ಡಮಗ, ಅಡ್ಡಪಲ್ಲಕ್ಕಿ, ಬಸವಣ್ಣ ಧರ್ಮ ಸ್ಥಾಪಕರಲ್ಲ ಎನ್ನುವ ಗತ್ತುಗಾರಿಕೆ ಏನು? ಜಂಗಮರ ಪ್ರಶ್ನೆ ವೀರಶೈವ, ಜಚನಿಯವರ ಪ್ರತಿಗಾಮಿತನ ಮುಂತಾದ ಪ್ರಮುಖ ಲೇಖನಗಳನ್ನು ರಚಿಸಿದ್ದಾರೆ. ಅಲ್ಲದೆ ನಾಟಕ, ಕಥೆ ಕಾದಂಬರಿಗಳನ್ನು ಕೂಡ ಪ್ರಕಟಿಸಿದ್ದಾರೆ.

1969ರಲ್ಲಿ ಪ್ರಕಟವಾದ 'ಸಮಾಜದ ತೊಡರಿಗೆ ಧರ್ಮದ ಕಗ್ಗಂಟು' ಕಥಾ ಸಂಕಲನವು ಒಟ್ಟು ಹದಿನಾರು ಕಥೆಗಳನ್ನು ಒಳಗೊಂಡಿದೆ. 'ನೊರೆಹಾಲಿನಂತಿದ್ದ ಧರ್ಮ ಇಂದು ಸಂಪ್ರದಾಯಗಳ ಸೋಗಿನಲ್ಲಿ ಗೊಡ್ಡು ಸಂಪ್ರದಾಯಗಳ ಕೊಂಪೆಯಾಗಿದ್ದರ ಕುರಿತು ವಿಷಾದ ವ್ಯಕ್ತಪಡಿಸುತ್ತಾರೆ. ಟಾಲ್ ಸ್ಟಾಯ್‌ರವರ 'ಕನ್‌ಫೇಶನ್, ಮಹಾತ್ಮ ಗಾಂಧಿಯವರ 'ಸತ್ಯಶೋಧನೆ' ಎಂಬ ಕೃತಿಗಳನ್ನು ಹೋಲುವ ಕಾದಂಬರಿ 'ನಿಯತಿ ಶಾಸನ'. ಇದು 1973ರಲ್ಲಿ ಪ್ರಕಟವಾಯಿತು. ಇದರಲ್ಲಿ ಟಾಕಾರಾಮನ ಬದುಕಿನ ಚಿತ್ರಣದ ಮೂಲಕ ಸಮಾಜದ ದುರಂತ ದುಸ್ಥಿತಿಗಳನ್ನು ತಿಳಿಸುತ್ತಾ ಬಸವಣ್ಣನವರ ಧರ್ಮತತ್ವಗಳ ಮಹತ್ವವನ್ನು ಸಾರಿ ಹೇಳುತ್ತಾರೆ. ಅಂಬೇಡ್ಕರವರ ವಿಚಾರಧಾರೆಗಳ ಪ್ರಭಾವದಿಂದ ದಲಿತ–ಶೋಷಿತರ ಸಮುದಾಯದ ವಾರಸುದಾರರ ಪ್ರತೀಕದಂತೆ ಪೋಳ ಅವರು ಕಾಣುತ್ತಾರೆ. ದಲಿತ–ಬಂಡಾಯ ಚಳುವಳಿಗಿಂತ ಪೂರ್ವದಲ್ಲಿಯೇ ಪೋಳ ಅವರು ಜನಪರ–ಜೀವಪರ ಚಿಂತನೆಗಳಿಗೆ ಅಸ್ತಿಬಾರ ಹಾಕಿದ ಮೊದಲ ತಲೆಮಾರಿನ ದಲಿತ ಚಿಂತಕ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸಾಮಾಜಿಕ ಸಂಗತಿಗಳ ಬಗ್ಗೆ ಚರ್ಚಿಸಿದ

ವಚನಗಳಿಗೆ ಬಹಳ ಪ್ರಾಮುಖ್ಯವಿದೆ. ಆಧುನಿಕ ಸಾಹಿತ್ಯದ ಸಂದರ್ಭದಲ್ಲಿಯೂ ಕೂಡ ವಚನಗಳನ್ನು ಶರಣರ ತತ್ವ ಸಿದ್ಧಾಂತಗಳನ್ನು ಮುಂದುವರಿಸಿಕೊಂಡು ಬಂದ ಕಾಡಸಿದ್ದೇಶ್ವರ, ತೊಂಟದ ಸಿದ್ಧಲಿಂಗೇಶ್ವರ, ಸ್ವತಂತ್ರ ಸಿದ್ದಲಿಂಗೇಶ್ವರರು, ಷಣ್ಮುಕ ಶಿವಯೋಗಿಗಳು, ಹರ್ಡೆಕರ ಮಂಜಪ್ಪ, ಡಾ. ಸಿದ್ದಯ್ಯ ಪುರಾಣಿಕ, ಮಹಾದೇವ ಬಣಕಾರರು ಪ್ರಮುಖರಾಗಿದ್ದಾರೆ. ಇಂತಹ ಪ್ರಮುಖರ ಸಾಲಿಗೆ ಸೇರುವ ಮತ್ತೊಂದು ಪ್ರಮುಖ ಹೆಸರು ಕುಮಾರ ಕಕ್ಕಯ್ಯ ಪೋಳ ಅವರದು. ಅವರು ಈ ನಿಟ್ಟಿನಲ್ಲಿ ಶರಣ ಸಂಸ್ಕೃತಿಯ ಆಶಯಗಳನ್ನು ತಮ್ಮ ವಚನಗಳಲ್ಲಿ ಸ್ಪಷ್ಟವಾಗಿ ನಿರೂಪಿಸಿದ್ದಾರೆ. 1979ರಲ್ಲಿ 'ಕುಮಾರ ಕಕ್ಕಯ್ಯ ಪೋಳ ಅವರ ವಚನಗಳು' ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಇವರ ವಚನಗಳ ಅಂಕಿತನಾಮ 'ಕುಮಾರ ಕಕ್ಕಯ್ಯ'. ಈ ಕೃತಿಯಲ್ಲಿ ನಾಲ್ಕುನೂರಾ ಹದಿನಾರು ವಚನಗಳಿವೆ. 'ಕುಮಾರ ಕಕ್ಕಯ್ಯನ ವಚನಗಳು' ಈ ಕೃತಿಯಲ್ಲಿ ಆರುನೂರಾ ಎಪ್ಪತ್ತೈದು ವಚನಗಳಿವೆ. 1993 ರಲ್ಲಿ 'ಕುಮಾರ ಕಕ್ಕಯ್ಯ ಪೋಳರವರ ವಚನಗಳನ್ನು 'ಪ್ರಗತಿಪರ ವಿಚಾರವಾದಿ ಕುಮಾರ ಕಕ್ಕಯ್ಯನ ವಚನಗಳು' ಎಂಬ ಸಂಕಲನದಲ್ಲಿ ಪ್ರಕಟಿಸಲಾಗಿದೆ. ಇದರಲ್ಲಿ ಸಾವಿರದ ಎರಡು ನೂರಾ ಮೂವ್ವೆತ್ತೈದು ವಚನಗಳಿವೆ. ಬಸವಾದಿ ಶರಣರ ಅನುಭಾವದ ಸೆಳೆತ, ಸಮಾಜ ಸುಧಾರಣೆಯ ಕಾಳಜಿ, ಜೀವನಾನುಭವದ ಕಟುಸತ್ಯ. ದಲಿತ ಪ್ರಜ್ಞೆ, ಸ್ವಾಭಿಮಾನ, ವೈಚಾರಿಕ ನೆಲೆಯ ಹಿನ್ನಲೆಯಲ್ಲಿ ವಚನಗಳನ್ನು ಅವರು ರಚಿಸಿದ್ದಾರೆ.

ದೀನ ದಲಿತರ ಪ್ರತಿಭಟನೆಯನ್ನು ಸಮರ್ಥಿಸಿಕೊಳ್ಳುವ ಪೋಳ ಅವರು ಸಮ-ಸಮಾಜದ ಆಶಯವನ್ನು ಕಾಣುತ್ತಾರೆ. ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಹೋರಾಡುವುದು ಮನುಷ್ಯನ ಸಹಜ ಧರ್ಮ. ಇಂದಿನ ಬಸವಣ್ಣನ ವಾರಸುದಾರೆಂದು ಹೇಳಿಕೊಳ್ಳುವವರು ಅವರ ತತ್ವ-ಚಿಂತನೆಗಳನ್ನು ನೆಲಸಮಗೊಳಿಸಿದ್ದಾರೆ ಎಂಬ ಕೊರಗು ಪೋಳ ಅವರದ್ದಾಗಿದೆ. ವಿಶ್ವಧರ್ಮವಾಗಬೇಕಾಗಿದ್ದ ಬಸವ ಧರ್ಮದ ಅವನತಿಗೆ ಕಾರಣರಾದವರ ಬಗ್ಗೆ ಪೋಳರವರಿಗೆ ನೋವಿದೆ.

ಪೋಳ ಅವರು ವೈಚಾರಿಕ ಕೃತಿಗಳನ್ನು ರಚಿಸಿದ್ದಾರೆ. ಧರ್ಮಕ್ರಾಂತಿ ಕೃತಿಯನ್ನು 1965ರಲ್ಲಿ ಹೊರತರುವ ಮೂಲಕ ದೇವರು-ಧರ್ಮವನ್ನು ಕುರಿತು ಕುಟುಕಿದ್ದಾರೆ. 'ಬಸವ ಧರ್ಮ ಯಾರ ಸೊತ್ತು' ಚಿಂತನಾಪರವಾದ ಕೃತಿಯಾಗಿ ಓದುಗರನ್ನು ವೈಚಾರಿಕತೆಯತ್ತ ಮುಖಮಾಡುವಂತೆ ಮಾಡುತ್ತದೆ. ದೇವರು ದರ್ಮ ಮತ್ತು ಜಾತೀಯತೆ ವಿಪರೀತವಾಗಿ ಮನುಷ್ಯ ಮಾನವೀಯತೆಯನ್ನು ಕಳೆದುಕೊಂಡಿದ್ದಾನೆ ಎಂಬ ಆತಂಕವನ್ನು ಹೊರಹಾಕುತ್ತಾರೆ. ಪ್ರಾಣಿ ಬಲಿಯಿಂದ ದೇವರನ್ನು ತೃಪ್ತಿಪಡಿಸುವುದು ಶುದ್ಧ ಮೂರ್ಖತನ ಎಂದು ತಿಳಿಸುತ್ತಾರೆ. ಅನಾಚಾರಿ ಕಾಲ್ಪನಿಕ ದೇವರುಗಳ ಆಚರಣೆಯನ್ನು ಕೈಬಿಡಲು ಆಗ್ರಹಿಸುತ್ತಾರೆ. ಬಸವಣ್ಣನವರ ತತ್ವ-ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಜಿಡ್ಡುಗಟ್ಟಿದ ಸಮಾಜವನ್ನು ಪರಿವರ್ತನೆಯ ಹಾದಿಗೆ ತರಲು ಶ್ರಮಿಸಿದರು. ನಡೆ-ನುಡಿ ಶುದ್ಧವಾಗಿ ಏಕತೆಯಿಂದ ಕೂಡಿದ್ದವು. ದಲಿತೋದ್ಧಾರದ ಕಳಕಳಿ ಅವರ ಜೀವನದಲ್ಲಿ ಎದ್ದುಕಾಣುತ್ತದೆ. ಮೇಲ್ಜಾತಿಯಲ್ಲಿ ಹುಟ್ಟುವುದು ಶ್ರೇಷ್ಠವಲ್ಲ, ಶ್ರೇಷ್ಠ ಗುಣಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಶ್ರೇಷ್ಠತೆಯನ್ನು ಮೆರೆಯಬೇಕು ಎಂದು ಅವರು ಪ್ರತಿಪಾದಿಸಿದರು. ಬುದ್ಧ, ಬಸವ, ಅಂಬೇಡ್ಕರ, ಪೆರಿಯಾರ್, ಲೋಹಿಯಾರವರ ವಿಚಾರಗಳನ್ನು ತಮ್ಮ

ಜೀವನದಲ್ಲಿ ಅರಗಿಸಿಕೊಂಡು ಅಳವಡಿಸಿಕೊಂಡ ಪೋಳರವರು ದಮನಿತರಿಗೆ ಧ್ವನಿಯಾಗಿದ್ದವರು. ವೈಚಾರಿಕ ಸ್ಪಷ್ಟತೆ ಅವರಿಗಿತ್ತು.

**ಆಕರ ಗ್ರಂಥಗಳು**


1. ಡಾ. ಎಚ್. ಟಿ ಪೋತೆ, 2002, 'ದಲಿತ ಸಾಹಿತಿ ಕುಮಾರ ಕಕ್ಕಯ್ಯ ಪೋಳ' ಸೆಪ್ಟಂಬರ 2002ರ ಹೊಸತು ಪತ್ರಿಕೆ' ನವ ಕರ್ನಾಟಕ ಬೆಂಗಳೂರು
2. ಡಾ. ಎಚ್. ಟಿ. ಪೋತೆ, 2006, 'ವ್ಯವಸ್ಥೆಯನ್ನು ಒರೆಗಲ್ಲಿಗೆ ಹಚ್ಚಿದ ಪೋಳ', ಸಂವಾದ ಮಾಸ ಪತ್ರಿಕೆ, ಸೆಪ್ಟಂಬರ್, 2006, ಬೆಂಗಳೂರು,
3. ಡಾ. ಎಚ್. ಟಿ. ಪೋತೆ, ಅವೈಧಿಕ ಚಿಂತನೆ, 2005 ತಿಪ್ಪಣ್ಣಂಬು ಪ್ರಕಾಶನ ಗುಲ್ಬರ್ಗಾ.
4. ಡಾ. ಬಿ. ಲಿಂಗಣ್ಣ, 2007 'ಕುಮಾರ ಕಕ್ಕಯ್ಯ ಪೋಳಃ ಬದುಕು ಬರಹ' ಅಪ್ರಕಟಿತ ಮಹಾ ಪ್ರಬಂಧ, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ


❖❖❖

ಮಲೆಯ ಗಾಳಿಯು
ಹೊಲಕೆ ತಂದಿದೆ
ಕೊಳಲಿನುಲಿಯನು ಜೊತೆಯಲಿ।
ಮೊಲ್ಲೆ ಮಲ್ಲಿಗೆ
ಸುರಗಿ ಕೇದಗೆ
ಕಂಪು ಬಂದಿದೆ ನಗುತಲಿ॥

# ಕನ್ನಡ ಭಾಷೆ ಮತ್ತು ಸಂಸ್ಕೃತಿ ಬೆಳವಣಿಗೆಯಲ್ಲಿ ಹಲ್ಮಿಡಿ ಶಾಸನದ ಮಹತ್ವ

**ಡಾ. ವಾಯ್. ವಾಯ್. ಕೊಕ್ಕನವರ**
ಸಹಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಜಮಖಂಡಿ

ಶಾಸನಗಳು ಕರ್ನಾಟಕದ ಪ್ರಾಚೀನ ಸಂಸ್ಕೃತಿಯ ಪ್ರತ್ಯಕ್ಷ ಸಾಕ್ಷಿಗಳು. ಅಶೋಕನ ಶಾಸನಗಳನ್ನು ಮೊದಲುಗೊಂಡು ಈ ನೆಲದಲ್ಲಿ ದೊರೆತ ಹಲವಾರು ಶಾಸನಗಳು ಇಲ್ಲಿಯ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಧರ್ಮ ರಾಜಮಹಾರಾಜರ ಇತಿಹಾಸ ಅವರು ಮಾಡಿದ ಕಾರ್ಯ ಮೊದಲಾದ ಸಂಗತಿಗಳ ಮೇಲೆ ಬೆಳಕು ಚೆಲ್ಲುತ್ತವೆ. ಎಂ.ಎಂ.ಕಲಬುರ್ಗಿಯವರು ಹೇಳುವಂತೆ 'ಅವುಗಳ ಅಧ್ಯಯನ ಅರಣ್ಯದಂತೆ ವೈವಿಧ್ಯಮಯ; ನಭೋಮಂಡಲದಂತೆ ಕುತೂಹಲಮಯ'. ಒಂದರ್ಥದಲ್ಲಿ ಐತಿಹಾಸಿಕ ಪುನರ್ ಸೃಷ್ಟಿಯಲ್ಲಿ ಶಾಸನಗಳ ಪಾತ್ರ ತುಂಬಾ ದೊಡ್ಡದು. ಇವು ಇತಿಹಾಸ ಸಂರಚನೆಯ ಪ್ರಥಮ ಆಕರಗಳು. ಅದರಲ್ಲೂ ಪ್ರಥಮ ಶಾಸನ ಎನಿಸಿಕೊಂಡ ಹಲ್ಮಿಡಿ ಶಾಸನವು ಸಾಹಿತ್ಯಿಕವಾಗಿ, ಭಾಷಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಐತಿಹಾಸಿಕವಾಗಿ ವಿಶೇಷ ಶಾಸನ ಎನಿಸಿದೆ.

ಹಲ್ಮಿಡಿ ಶಾಸನವನ್ನು ಮೈಸೂರು ಪುರಾತತ್ವ ಇಲಾಖೆಯ ಅಂದಿನ ಅಧಿಕಾರಿಯಾಗಿದ್ದ ಡಾ.ಎಂ.ಎಚ್.ಕೃಷ್ಣ ಎಂಬುವವರು ಸಂಶೋಧಿಸಿ ಆ ವರ್ಷದ ಅಂದರೆ ಕ್ರಿ.ಶ. 1936ರ ವಾರ್ಷಿಕ ವರದಿಯಲ್ಲಿ ಶಾಸನ ಪಾಠ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಪ್ರಕಟಿಸಿದರು. ಅವರ ಸಂಶೋಧನೆ ಹೇಳುವಂತೆ "ಇದು ಹದಿನಾರು ಸಾಲುಗಳನ್ನು ಹೊಂದಿದ ಶಾಸನ. ಮೊದಲ ಸಾಲಿನ ಸಂಸ್ಕೃತ ಶ್ಲೋಕವನ್ನು ಬಿಟ್ಟರೆ ಸಂಪೂರ್ಣ ಶಾಸನ ಕನ್ನಡ ಗದ್ಯದಲ್ಲಿದೆ. ಮರಳ ಶಿಲ್ಪದ ಮೇಲೆ ಕೆತ್ತಲಟ್ಟ ಇದು ಹಳಗನ್ನಡ ಹಾಗೂ ಬ್ರಾಹ್ಮೀ ಲಿಪಿಗಳನ್ನು ಹೋಲುವಂತಹ ಕನ್ನಡ ಭಾಷಾ ಶಾಸನ. ಕದಂಬ ವಂಶದ ಕಾಕುಸ್ಥವರ್ಮ ಬರೆಸಿದ ದತ್ತಿಶಾಸನ ಇದಾಗಿದ್ದು ಶತ್ರುರಾಜರ ಮೇಲೆ ಹೋರಾಡಿ ಗೆದ್ದ ವಿಜಯರಸ ಎಂಬ ಯೋಧನಿಗೆ ಪಲ್ಮಿಡಿ ಮತ್ತು ಮೂಳಿವಳ್ಳಿಯನ್ನು ದತ್ತಿಯಾಗಿ ಬಿಟ್ಟ ರಾಜಾಜ್ಞೆಯನ್ನು ಈ ಶಾಸನ ಪ್ರತಿಪಾದಿಸುತ್ತದೆ. ಹಲ್ಮಿಡಿ ಶಾಸನವು ಸಂಸ್ಕೃತ ಪ್ರಭಾವಕ್ಕೆ ಒಳಗಾಗಿದ್ದರೂ ಆ ಕಾಲದಲ್ಲಿ ಬಳಕೆಯಲ್ಲಿದ್ದ ಪ್ರೌಢ ಕನ್ನಡವನ್ನು ನಿರೂಪಿಸುತ್ತದೆ." ಎಂದು ಡಾ.ಎಂ.ಎಚ್.ಕೃಷ್ಣರವರು ತಮ್ಮ ಸಂಶೋಧನೆಯ ವಿಚಾರಗಳಲ್ಲಿ ತಿಳಿಸಿದ್ದಾರೆ.

### ಹಲ್ಮಿಡಿ ಶಾಸನದ ಮೂಲಪಠ್ಯ

ಜಯತಿ ಶ್ರೀ ಪರಿಷ್ವಙ್ಗ ಶ್ಯಾಙ್ಗ [ಮ್ಯಾನತಿ] ರಚ್ಯುತಃ ದಾನವಾಕ್ಷ್ಣೋರ್ಯುಗಾನ್ತಾಗ್ನಿಃ [ಶಿಷ್ಟಾನಾನ್ತು] ಸುದರ್ಶನಃ]

ನಮಃ ಶ್ರೀ ಮತ್ಕದಂಬಪನ್ತ್ಯಾಗ ಸಂಪನ್ನಕಲಭೋರ[ನಾ] ಅರಿ ಕ ಕುಸ್ಥಭಟ್ಟೋರನಾಳೆ ನರಿದಾವಿ[ಳೆ] ನಾಡುಳ್ ಮೃಗೇಶನಾಗೇನ್ದ್ರಾಭೀಳಭ್ಬಟಹ ’ರಪ್ಪೊರ್ ಶ್ರೀ ಮೃಗೇಶನಾಗಾಹ್ವಯರಿರ್ವ್ವರಾ ಬಟರಿಕುಲಾಮಲವ್ಯೋಮತಾರಾ ಧಿನಾಥನ್ನಳಪ ಗಣಪಶುಪತಿ ಮಾದಾಕ್ಷಿಣಾಪಥ ಬಹುಶತಹವನಾಹವದು[ಳ್]

ಪಶುಪ್ರದಾನ ಶೌರ್ಯ್ಯೋರ್ದ್ಯಮಭರಿತೋ[ನ್ದಾನ] ಪಶುಪತಿಯೆನ್ದು ಪೊಗಳೆಪ್ಪೊಟ್ಟಣ ಪಶುಪತಿ ನಾಮದೇಯನಾ ಸರಕ್ಕೆಲ್ಲಭಟರಿಯಾ ಪ್ರೇಮಾಲಯಸುತನ್ಗೆ ಸೇನ್ದ್ರಕಬಣೋಭಯದೇಶದಾ ವೀರಾಪುರುಷ ಸಮಕ್ಷದೆ ಕೇಕಯ ಪಲ್ಲವರಂ ಕಾದಿರಿದು ಪತ್ತೆಜಯನಾ ವಿಜಅರಸಂಗೆ ಬಾಳ್ಗಳ್ಚು ಪಲ್ಮಡಿಉಂ ಮೂಳಿವಳ್ಳಿಉಂ ಕೊಟ್ಟಾರ್ ಬಟಾರಿ ಕುಲದೊನಳುಕದಮ್ಬನ್ಕಳ್ದೋನ್ ಮಹಾಪಾತಕನ್ ಇರ್ವ್ವರುಂ ಸಳ್ಬಙ್ಗದರ್ ವಿಜಾರಸರುಂ ಪಲ್ಮಡಿಗೆ ಕುರುಮ್ಬಿಡಿವಿಟ್ಟಾರ್ ಅದಾನಳಿವೊನ್ಗೆ ಮಹಾಪಾತಕನ್ ಸ್ವಸ್ತಿ ಭಟ್ಟರ್ಗ್ಗೀ್ಳ್ದೆ ಒಡ್ಡಲಿ ಆಪತ್ತೊನ್ದಿವಿಟ್ಟಾರಕ

ಈ ರೀತಿ ಇರುವ ಈ ಶಾಸನದಲ್ಲಿ ಬರುವ ಕೆಲವೊಂದು ಪದಗಳನ್ನು ಅರ್ಥ ಸಹಿತ ಅವಲೋಕಿಸಿದಾಗ ಈ ಮೇಲಿನ ಮೂಲ ಪಠ್ಯವನ್ನು ಸುಲಭವಾಗಿ ಅರ್ಥೈಸಬಹುದು. ಪರಿಷ್ವರ್ಙ್ಗ–ಬಿಲ್ಲಿನ ಹೆಸರು, ಬಟರಿಕುಲ–ಬಟ ಎನ್ನುವ ವ್ಯಕ್ತಿಯ ವಂಶ, ವ್ಯೋಮತಾರಾಧಿನಾಥ–ಆಕಾಶ ಮತ್ತು ನಕ್ಷತ್ರಗಳಿಗೆ ಒಡೆಯನಾದ, ಅಳಪ–ಆಳೂಪ ವಂಶ, ಆಹವದುಳ್–ಯುದ್ದದಲ್ಲಿ, ಆಸರಕ್ಕೆಲ್ಲ–ಆಶ್ರಯಕ್ಕೆಲ್ಲ, ಬಟರಿಯ–ಕಾದು–ಹೋರಾಡು, 'ನರಿದಾವಿಳೆ ನಾಡು'–ಬೇಲೂರು ತಾಲೂಕಿನ ಉತ್ತರ ಭಾಗದ ಸುತ್ತಮುತ್ತಲಿನ ಪ್ರದೇಶ, ಇ(ಎ)ರಿದು–ಸಾಯಿಸು, ಸಳ್ಬಙ್ಗ–ಸಳ್ಬಂಗ>ಶಿವಮೊಗ್ಗ ಜಿಲ್ಲೆಯ ಉತ್ತರ ದಿಕ್ಕಿನಲ್ಲಿರುವ ಸಲ್ವಂಗ/ಸಳವಂಗ ಎಂಬ ಗ್ರಾಮ.(ಎಂ.ಎಚ್.ಕೃಷ್ಣ), ಸಳ್ಬಂಗ ಷಡ್ಭಾಗದ ತದ್ಭವ ರೂಪ. ಆದಾಯದ ಆರನೆಯ ಭಾಗ(ಎಂ.ಚಿದಾನಂಮೂರ್ತಿ), ಬಾಳ್ಗಚ್ಚು–ಬಾಳ್(ಖಡ್ಗ)+ಕರ್ಚ್ಚು(ತೊಳೆ)=ಕಾಳಗದಲ್ಲಿ ಹೋರಾಡಿದ ವೀರನ ಕತ್ತಿಯನ್ನು ಸಮಾರಂಭಪೂರ್ವಕ ತೊಳೆದು, ಬದುಕಿ ಬಂದ ಪಕ್ಷದಲ್ಲಿ ಆತನಿಗೆ, ವೀರಸ್ವರ್ಗ ಹೊಂದಿದ ಪಕ್ಷದಲ್ಲಿ ಆತನ ಕುಟುಂಬದವರಿಗೆ ಗೌರವಾರ್ಥ ಕೊಟ್ಟ ದಾನ. ಕುರುಂಬಿಡಿ–ಇದು ತೆರಿಗೆ ವಿನಾಯತಿ ಸೂಚಿಸುವ ಪದ. ಕುರುಂಬ ಎಂದರೆ ಕೋಟೆಯ/ದುರ್ಗದ ರಕ್ಷಕ. ಕುರುಂಬಿಡಿ ಎಂದರೆ ಕೋಟೆಯ ರಕ್ಷಕನಿಗೆ ಸಲ್ಲಿಸಬೇಕಾದ ಗೌರವ. ಪತ್ತೊನ್ದಿ–ಇದು ಧಾನ್ಯ ರೂಪದ ತೆರಿಗೆಯನ್ನು ಸೂಚಿಸುವ ಪದ. 1/10 ಇದರ ಸಾಮಾನ್ಯ ಅರ್ಥ. ಸಂಸ್ಕೃತದಲ್ಲಿ ಇದಕ್ಕೆ ದಶಬಂಧ ಎಂದು ಹೆಸರು. ಇದರ ತದ್ಭವ ರೂಪ ದಸವಂದ. ಮಹಾಪಾತಕ–ಮಹಾಪಾಪ ಒಡ್ಡಲಿ–ಗದ್ದೆಯ ಉತ್ಪನ್ನ,

ಇಲ್ಲಿಯವರೆಗಿನ ಸಂಶೋಧನೆಗಳ ಪ್ರಕಾರ ಇಂತಹ ಲಿಪಿಯಲ್ಲಿ ದೊರೆತಿರುವ ಕನ್ನಡದ ಅತ್ಯಂತ ಹಳೆಯ ಶಿಲಾಶಾಸನವೇ ಈ "ಹಲ್ಮಿಡಿ ಶಾಸನ" ಈ ಶಾಸನದ ಕಾಲವನ್ನು ಕ್ರಿ.ಶ.450 ಎಂದು ಅಂದಾಜಿಸಲಾಗಿದೆ. ಶಾಸನದಲ್ಲಿ ದೊರೆತಿರುವ ಕೆಲವು ಕನ್ನಡ ಮಾಹಿತಿಗಳ ಆಧಾರದಲ್ಲಿ ಈ ಕಾಲವನ್ನು ಹೇಳಲಾಗಿದ್ದು, ಇದು ಕನ್ನಡದ ಪ್ರಥಮ ಶಿಲಾಶಾಸನವೆಂಬ ಹಿರಿಮೆಗೂ ಪಾತ್ರವಾಗಿದೆ. ಈ ಶಾಸನವು ಕದಂಬರ ರಾಜ 'ಕಾಕುಸ್ಥ(ತ್ಸ)ವರ್ಮನ ಅಧಿಪತ್ಯವನ್ನು ಹೇಳುತ್ತದೆ. ಇದೊಂದು 'ವೀರಗಲ್ಲು' (Hero stone) ಎಂದೂ ಪರಿಗಣಿಸಲ್ಪಟ್ಟಿದೆ. ಇಲ್ಲಿನ ಕನ್ನಡ ಲಿಪಿಯು 'ಪಲ್ಲವ ಗ್ರಾಂಥಿಕ' (elongated scricpts) ರಚನೆಯನ್ನು ಹೋಲುವಂತಿದ್ದು ಇದು ಕದಂಬರ ಕಾಲದ ಕನ್ನಡ ಲಿಪಿಯೆಂದು ಹೇಳಲಾಗಿದೆ. ಲಿಪಿಯು ವಿಭಿನ್ನವಾಗಿದ್ದರೂ ಸಹ ಶಾಸನದಲ್ಲಿರುವ ವಿಷಯ ಮತ್ತು ನುಡಿಯು ಕನ್ನಡ ನಾಡಿನ ಹಿರಿಮೆಯನ್ನು ತಿಳಿಸುತ್ತದೆ.

ದಾಕ್ಷಿಣಾತ್ಯ ಬ್ರಾಹ್ಮೀ ಲಿಪಿಯಲ್ಲಿರುವ ಈ ಶಾಸನದ ಮೊದಲೆರಡು ಸಾಲುಗಳಲ್ಲಿ ಅಚ್ಯುತನ ಧ್ಯಾನವನ್ನು ಸಲಕ್ಷಣವಾದ ಅನುಷ್ಟುಬ್ ಶ್ಲೋಕದಲ್ಲಿ ಹೇಳಲಾಗಿದೆ.

"ಲಕ್ಷ್ಮಿಯೊಡನಿರುವ ಅಚ್ಯುತನು ಶ್ಯಾಙ್ಗವೆಂಬ ಬಿಲ್ಲನ್ನು ಬಗ್ಗಿಸಿ ಹಿಡಿದು ದಾನವರಿಗೆ ಪ್ರಳಯ ಕಾಲದ ಅಗ್ನಿಯಂತೆಯೂ ಸಜ್ಜನರಿಗೆ ಸುದರ್ಶನ ಚಕ್ರದಂತೆಯೂ ತೋರುತ್ತಾನೆ" ಎಂಬ ವರ್ಣನೆಯಿದ್ದು ನಂತರದ ಸಾಲುಗಳು ರಾಜನಿಗೆ ನಮನಗಳನ್ನು ಸಲ್ಲಿಸುವ ಮತ್ತು ಅಲ್ಲಿ ನಡೆದ ಘಟನಾವಳಿಯನ್ನು ತೆರೆದಿಡುತ್ತವೆ. "ತ್ಯಾಗಸಂಪನ್ನ ಮತ್ತು ಕಲಭೋರನ ಶತ್ರು ಎಂದೆನಿಸಿರುವ ಕದಂಬರಾಜ ಕಕುಸ್ಥ(ತ್ಸ) ಭಟ್ಟೋರಕನು 'ಕೀರ್ತಿಗೊಂಡ ಭಟರಿ' ವಂಶವೆಂಬ ನಿರ್ಮಲ ಆಕಾಶಕ್ಕೆ ಚಂದ್ರನಂತೆ ಹೊಳೆಯುವ ವಿಜಯರಸ ಎಂಬ ಹೆಸರಿನ ಈತನು ತನ್ನ ಆಳೂಪ ವಂಶದ ಸಮೂಹಕ್ಕೆ ಶಿವ(ಪಶುಪತಿ)ನಂತಿದ್ದ. ಪ್ರಸಿದ್ಧವಾದ ದಕ್ಷಿಣಾ ಪಥದಲ್ಲಿ ನೂರಾರು ಯುದ್ಧಗಳೆಂಬ ಯಜ್ಞ ಮತ್ತು ಬಲಿದಾನಗಳನ್ನು ಮಾಡಿ ಶೌರ್ಯ ತೋರಿದ್ದನು. ದಾನ ಪಶುಪತಿ ಎಂದು ಹೊಗಳಿಸಿಕೊಂಡಿದ್ದನು. ಇವನು 'ಸೇಂದ್ರಕರು' ಮತ್ತು 'ಬಾಣರ' ಸೈನ್ಯವನ್ನು ಸೇರಿಸಿಕೊಂಡು ಕೇಕಯ ಪಲ್ಲವರೆದುರು ಕದಂಬರ ಪರವಾಗಿ ಯುದ್ದ ಮಾಡಿ ಜಯ ತಂದುಕೊಟ್ಟ. ಅದಕ್ಕಾಗಿ 'ಸೇಂದ್ರಕ' ಮತ್ತು 'ಬಾಣ' ದೇಶದ ಜನರ ಸಮ್ಮುಖದಲ್ಲಿ ಪಲ್ಮಡಿ(ಹಲ್ಮಿಡಿ)ಯನ್ನೂ ಮೂಳವಳ್ಳಿ(ಇಂದಿನ ಮುಗುಳುವಳ್ಳಿ)ಯನ್ನೂ ಅವನ ಅಧೀನಕ್ಕೆ ಪ್ರೀತಿಪೂರ್ವಕವಾಗಿ ಕೊಡಲಾಯಿತು. ಇದು ವೀರನ ಕತ್ತಿ ತೊಳೆದು ವೀರದಾನ ಕೊಡುವ ಸಮಾರಂಭವಾಗಲು ನಾಡ ಅಧಿಕಾರಗಳಾದ ಶ್ರೀ ಮೃಗೇಶ ಮತ್ತು ನಾಗ ಅವರುಗಳು ಹಾಜರಿದ್ದು ಆ ದಾನಗಳನ್ನು ವಿಜಯಿಗೆ ನೀಡಿದರು. ಈ ದಾನವನ್ನು ಕದ್ದವನಿಗೆ ಪಾಪ ಬರುತ್ತದೆ. ಸೈನ್ಯದ ತೆರಿಗೆ ಅಧಿಕಾರಿಗಳಾಗಿದ್ದ ಮೃಗೇಶ ಮತ್ತು ನಾಗರು ಹಲ್ಮಿಡಿಯ ಕುರುಬರಿಗೆ ಪ್ರೀತಿಯಿಂದ ತೆರಿಗೆ ವಿನಾಯತಿಯಾದ ಕುರುಂಬಿಡಿಯನ್ನು ಬಿಟ್ಟಕೊಟ್ಟರು. ಇದನ್ನು ಕಡೆಗನಿಸಿದವನಿಗೂ ಕೂಡ ಮಹಾಪಾತಕ ಉಂಟಾಗುವುದು. ಮುಂದೆ ಶಾಸನದ ಎಡ ಪಕ್ಕದಲ್ಲಿ ಇಲ್ಲಿನ ಗದ್ದೆಯ ಉತ್ಪನ್ನದಲ್ಲಿ ಭಟ್ಟರಿಗೆ ಹತ್ತನೆಯ ಒಂದು ಭಾಗದ ತೆರಿಗೆ ವಿನಾಯತಿಯನ್ನು ಕೊಟ್ಟರು ಎಂದು ಬರೆಯಲಾಗಿದೆ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಹಾಗೂ ಇತಿಹಾಸದ ದೃಷ್ಟಿಯಿಂದ ಈ ಶಾಸನ ಬಹಳಷ್ಟು ಮಹತ್ವವನ್ನು ಪಡೆದುಕೊಂಡಿದೆ.

**1. ಭಾಷಿಕ ಮಹತ್ವ :**

ಕ್ರಿ.ಶ.450ರಲ್ಲಿ ನಮ್ಮ ಭಾಷೆಯ ಅವಸ್ಥೆ ಹೇಗಿತ್ತು ಎಂಬುವುದನ್ನು ಈ ಶಾಸನದಲ್ಲಿ ನಾವು ಕಾಣಬಹುದು. ಇಲ್ಲಿಯ ಭಾಷೆಯನ್ನು ಪೂರ್ವದ ಹಳಗನ್ನಡ ಎಂದು ನಿರ್ಧರಿಸಲಾಗಿದೆ. ಇಲ್ಲಿ 20 ರಿಂದ 25 ಕನ್ನಡ ಪದಗಳಿವೆಯೆಂದು ಎಂ.ಎಚ್. ಕೃಷ್ಣರವರು ಊಹಿಸಿದ್ದಾರೆ. ಬಳಕೆಗೊಂಡ ಕೆಲವು ಪದಗಳ ಆಧಾರದ ಮೇಲೆ ಆ ಕಾಲದ ಭಾಷಾವೈಶಿಷ್ಟ್ಯವನ್ನು ನಾವು ಅರಿಯಬಹುದಾಗಿದೆ. ಉದಾ:

ಭರಿತೋನ್, ಅರಿವೋನ್ – ಪ್ರಥಮ ಪುರುಷ ಏಕವಚನ ಕೊಟ್ಟಾರ್, ವಿಟ್ಟಾರ್ – ಪ್ರಥಮ ಪುರುಷ ಬಹುವಚನಅದಾನ್, – ದ್ವಿತಿಯಾ ದೀರ್ಘ ಭಟರಿಯಾ, ಕಲಬೋರನಾ – ಷಷ್ಠಿ ದೀರ್ಘಾದೇಶ ನಾಡುಳ್, ಆಹವದುಳ್ – ಹಳಗನ್ನಡ ಸಪ್ತಮಿ ವಿಭಕ್ತಿ ಎರಿದು – ಇ>ಎ ವ್ಯತ್ಯಾಸಪಲ್ಮಿಡಿಯುಂ, ಮುಳಿವಳ್ಳಿಯುಂ – ವಿಸಂಧಿ ಪೆತ್ತಜಯನ್ – ಅರಿಸಮಾಸ ಪೊಗಳೆಪ್ಪೊಟ್ಟಣ – ಕರ್ಮಣಿ ಪ್ರಯೋಗ ಒರ್, ಆರ್, ಓನ್, – ಆಖ್ಯಾತ ಪ್ರತ್ಯಯಗಳು

**2. ಸಾಹಿತ್ಯಿಕ ಮಹತ್ವ**

ಹಾಗೆ ನೋಡಿದರೆ ಈ ಹಲ್ಮಿಡಿ ಶಾಸನವು ಸಾಹಿತ್ಯದ ಅಂತಹ ಗಹನವಾದ ಲಕ್ಷಣಗಳನ್ನೇನೂ ಹೊಂದಿಲ್ಲವಾದರೂ ಇಲ್ಲಿ ಬಳಕೆಗೊಂಡ ಕೆಲವು ಪದಗಳು ಸಾಹಿತ್ಯದ ಕಂಪನ್ನು ಹೊಂದಿ ಮುಂದಿನ ಸಾಹಿತ್ಯದ ಸೃಷ್ಟಿಗೆ ಮುನ್ಸೂಚನೆಯಂತಿವೆ. ಕನ್ನಡದ ಎಳಮೆ ಸಂಸ್ಕೃತದ ಪ್ರೌಢಿಮೆ ಎದ್ದು ಕಾಣುವ ಈ ಶಾಸನದಲ್ಲಿ ಕೆಲವು ಸಾಹಿತ್ಯಿಕಾಂಶ ಹೊಂದಿರುವ ಪದಗಳನ್ನು ಹೀಗೆ ಗುರುತಿಸಬಹುದು. ಉದಾ:

- ನರಿದಾವಿಳೆ ನಾಡುಳ್
- ಕುಲಾಮಲವ್ಯೋಮತಾರಾಧಿನಾಥ
- ಸರಕ್ಕೆಲ್ಲಬಟರಿಯ
- ಪ್ರೇಮಾಲಯಸುತನ್
- ಮಹಾಪಾತಕಂ ಸ್ವಸ್ತಿ

ಇಲ್ಲಿ ಬರುವ 'ಪ್ರೇಮಾಲಯಸುತನ್' ಎಂಬ ಪದಪುಂಜವು ಉಳಿದ ಕನ್ನಡದ ಯಾವುದೇ ಶಾಸನದಲ್ಲಾಗಲಿ ಅಥವಾ ಕಾವ್ಯದಲ್ಲಾಗಲಿ ದೊರೆಯುವುದಿಲ್ಲ. ಇಲ್ಲಿ ಕೇವಲ 'ಸುತನ್' ಎಂದರೆ ಸಾಕಾಗಿತ್ತು. ಆದರೆ ಪ್ರೇಮಾಲಯ ಎಂಬುವುದು 'ತಂದೆಗೆ ಪ್ರೀತಿಯ ಮಗನು' ಎಂಬ ಅರ್ಥದಲ್ಲಿ ಬಂದಿರುವ ಸಾಧ್ಯತೆ ಇದೆ. "ಈ ಪದವನ್ನು ಪ್ರೇಮ+ಆಲಯ+ಸುತನ್ ಎಂದು ಬಿಡಿಸಬಹುದು. 'ಪ್ರೀತಿಯ ಮನೆಮಗ' ಎಂಬುವುದು ಇದರ ಅರ್ಥವಾಗುತ್ತದೆ. ವೇಳವಾಳಿ, ಲೆಂಕವಾಳಿ ಪದಗಳು ಕೂಡ ಇದೇ ಮಾದರಿಯ ಶಾಸನ ಪದಗಳು" ಎನ್ನುತ್ತಾರೆ ಎಂ.ಎಂ.ಕಲಬುರರ್ಗಿ(ಮಾರ್ಗ, ಸಂಪುಟ: 2, ಪು.ಸಂ:5) ಅವರು ಈ ಪದಕ್ಕೆ ಪುಷ್ಟಿ ಎಂಬಂತೆ ಬಾಣನ ಹರ್ಷಚರಿತೆಯಲ್ಲಿ ಬರುವ 'ಕುಲಪುತ್ರನ್' ಹಾಗೂ ಕುವರಲಕ್ಷಣ ಶಾಸನದಲ್ಲಿ ಬರುವ 'ಪ್ರಿಯಪುತ್ರನ್' ಎಂಬ ಪದಗಳನ್ನು ಪ್ರೇಮಾಲಯಸುತನ್ ಪದಕ್ಕೆ ಸಂವಾದಿಯಾಗಿ ಹೇಳುತ್ತಾರೆ.

**3. ಸಾಂಸ್ಕೃತಿಕ ಮಹತ್ವ**

ದಾನ ನಮ್ಮ ಸಂಸ್ಕೃತಿಯ ಬಹು ದೊಡ್ಡ ಮೌಲ್ಯ. 'ಕೇಳುವ ಕೈಗಿಂತ ಕೊಡುವ ಕೈ ಮೇಲು' ಎಂಬುವುದು ಈ ದಾನ ಮೌಲ್ಯವನ್ನು ಎತ್ತಿ ಹೇಳುವಂತಹ ಮಾತು. ಈ ದೃಷ್ಟಿಯಿಂದ ಹಲ್ಮಿಡಿ ಶಾಸನವು ಮೂರು ದಾನಗಳನ್ನು ಪ್ರತಿನಿಧಿಸುವ ಶಾಸನವಾಗಿದೆ. ಇದರಲ್ಲಿ ಮೂರು ದಾನಗಳು ವ್ಯಕ್ತವಾಗಿವೆ. 1 ರಿಂದ 13ನೆಯ ಸಾಲಿನವರೆಗೆ ಕೇಕೆಯ ಪಲ್ಲವರನ್ನು ಸೋಲಿಸಲು ಕದಂಬರರಿಗೆ ಸಹಾಯ ಮಾಡಿದ 'ಕೀರ್ತಿಗೊಂಡ ಭಟರಿ' ಕುಲದ ಆಳೂಪ ವಂಶದ ವಿಜಯರಸನಿಗೆ ಕದಂಬ ಸೈನ್ಯದ ಸೈನಿಕರಾದ ಮೃಗೇಶ ಮತ್ತು ನಾಗರು ಹಲ್ಮಿಡಿ ಮತ್ತು ಮೂಳಿವಳ್ಳಿ ಗ್ರಾಮಗಳನ್ನು ದಾನವಾಗಿ ನೀಡಿದ ಉಲ್ಲೇಖವಿದೆ. 14 ಮತ್ತು 15ನೆಯ ಸಾಲುಗಳಲ್ಲಿ ಮೃಗೇಶ ಮತ್ತು ನಾಗರ ಜೊತೆಗೆ ವಿಜಯರಸನು ಸೇರಿ ಕುರುಂಬಿಡಿಯನ್ನು ದಾನವಾಗಿ ನೀಡಿದ ಉಲ್ಲೇಖವಿದೆ. ಅದರಂತೆ ಕೊನೆಯ 16ನೇ ಸಾಲಿನಲ್ಲಿ ಅಂದರೆ ಶಾಸನದ ಎಡ ಪಕ್ಕದಲ್ಲಿ ಇಲ್ಲಿನ ಗದ್ದೆಯ ಉತ್ಪನ್ನದಲ್ಲಿ ಭಟ್ಟರಿಗೆ ಹತ್ತನೆಯ ಒಂದು ಭಾಗದ ತೆರಿಗೆ ವಿನಾಯತಿಯನ್ನು ಕೊಡಲಾಗುವುದು ಎಂದು ಬರೆಯಲಾಗಿದೆ. ಇದು ಭೌತಿಕ ದಾನದ ವಿಷಯವಾದರೆ ಕಾಳಗದಲ್ಲಿ ಹೋರಾಡಿದ

ವೀರನ ಕತ್ತಿಯನ್ನು ಸಮಾರಂಭಪೂರ್ವಕ ತೊಳೆದು, ಬದುಕಿ ಬಂದ ಪಕ್ಷದಲ್ಲಿ ಆತನಿಗೆ ವೀರಸ್ವರ್ಗ ಹೊಂದಿದ ಪಕ್ಷದಲ್ಲಿ ಆತನ ಕುಟುಂಬದವರಿಗೆ ಗೌರವಾರ್ಥ ಕೊಡುವ ದಾನವು 'ಬಾಳ್ಗಚ್ಚು' ಎಂದೆನಿಸಿಕೊಳ್ಳುತ್ತಿತ್ತು. ಹೀಗೆ ಕನ್ನಡದ ಪ್ರಥಮ ಶಾಸನ ಒಂದರಲ್ಲಿಯೇ ಮೂರು ದಾನದ ವಿಷಯಗಳು ಉಕ್ತವಾಗಿರುವುದನ್ನು ಮತ್ತು ವೀರನೊಬ್ಬನಿಗೆ ನೀಡುವ ಗೌರವವನ್ನು ಗಮನಿಸಿದರೆ ನಮ್ಮ ಹಿಂದಿನ ಜನ ದಾನದತ್ತಿಗಳಿಗೆ ಮತ್ತು ಯೋಧರಿಗೆ ಎಷ್ಟೊಂದು ಮಹತ್ವ ನೀಡುತ್ತಿದ್ದರೆಂಬುವುದು ನಮಗೆ ತಿಳಿಯುತ್ತದೆ.

**4. ಐತಿಹಾಸಕ ಮಹತ್ವ**

ಈ ಶಾಸನದಲ್ಲಿ ಕದಂಬ, ಕೇಕೆಯ ಪಲ್ಲವ, ಆಳೂಪ ವಂಶಗಳ ಉಲ್ಲೇಖವಿದೆ. ಜೊತೆಗೆ ಕಾಕುತ್ಸವರ್ಮ, ಮೃಗೇಶ, ನಾಗ ಮತ್ತು ವಿಜಯರಸ ಮೊದಲಾದ ಹೆಸರುಗಳು ಕೂಡ ಕಾಣಸಿಗುತ್ತವೆ. ಅಷ್ಟೇ ಅಲ್ಲದೆ ಕದಂಬರ ಕಾಕುತ್ಸವರ್ಮನ ಶೌರ್ಯ ಸಾಹಸಗಳನ್ನು ಕೂಡ ಗುಣಗಾನ ಮಾಡಲಾಗಿದೆ. ಆತ "ಲಕ್ಷ್ಮಿಯೊಡನಿರುವ ಅಚ್ಯುತನ ಹಾಗೆ. ಶ್ಯಾಜ್ಞವೆಂಬ ಬಿಲ್ಲನ್ನು ಬಗ್ಗಿಸಿ ಹಿಡಿದು ದಾನವರಿಗೆ ಪ್ರಳಯ ಕಾಲದ ಅಗ್ನಿಯಂತೆಯೂ ಸಜ್ಜನರಿಗೆ ಸುದರ್ಶನ ಚಕ್ರದಂತೆಯೂ ತೋರುತ್ತಾನೆ" ಅಂದರೆ ಆತ 'ಶಿಷ್ಟ ರಕ್ಷಕ; ದುಷ್ಟ ಪರಿಪಾಲಕ'ನಾಗಿದ್ದನೆಂಬ ಐತಿಹಾಸಿಕ ಸತ್ಯವನ್ನು ಶಾಸನ ಸಾರುತ್ತದೆ. ಜೊತೆಗೆ ಆತನನ್ನು 'ತ್ಯಾಗಸಂಪನ್ನ' ಎಂದೂ ಕೂಡ ಕರೆಯಲಾಗಿದೆ. ಇದರ ಜೊತೆಗೆ ಆಳೂಪ ವಂಶದ ಸಮೂಹಕ್ಕೆ ಶಿವನಂತಿದ್ದು ಪ್ರಸಿದ್ಧವಾದ ದಕ್ಷಿಣಾ ಪಥದಲ್ಲಿ ನೂರಾರು ಯುದ್ಧಗಳೆಂಬ ಯಜ್ಞ ಮತ್ತು ಬಲಿದಾನಗಳನ್ನು ಮಾಡಿ ಶೌರ್ಯ ತೋರಿದ ದಾನ ಪಶುಪತಿ ಎಂದು ಹೊಗಳಿಸಿಕೊಂಡಿದ್ದ ವಿಜಯರಸನೆಂಬುವನು 'ಸೇಂದ್ರಕರು' ಮತ್ತು 'ಬಾಣರ' ಸೈನ್ಯವನ್ನು ಸೇರಿಸಿಕೊಂಡು ಕೇಕಯ ಪಲ್ಲವರೆದುರು ಕದಂಬರ ಪರವಾಗಿ ಯುದ್ದ ಮಾಡಿ ಜಯ ತಂದುಕೊಟ್ಟನೆಂಬ ವಿಷಯ ಈ ಶಾಸನದಲ್ಲಿ ದೊರೆಯುವುದರಿಂದ ಇದು ಇತಿಹಾಸಕ್ಕೆ ಸಿಕ್ಕ ಮತ್ತೊಂದು ಮಹತ್ವದ ಮಾಹಿತಿ ಎನ್ನಬಹುದು. ಅಷ್ಟೇ ಅಲ್ಲದೆ ಕದಂಬರ ನಿಯತ್ತಿನ ಸೈನಿಕರಾದ ಮೃಗೇಶ ಮತ್ತು ನಾಗರು ವಿಜಯರಸನ ಹೋರಾಟವನ್ನು ಮೆಚ್ಚಿ ಆತನ ಸಹಾಯಾರ್ಥವಾಗಿ ಹಲ್ಮಿಡಿ ಮತ್ತು ಮೂಳವಳ್ಳಿ ಗ್ರಾಮಗಳನ್ನು ದಾನವಾಗಿ ನೀಡುವ ವಿಷಯ ಕೂಡ ಕದಂಬರ ಇತಿಹಾಸ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಹೀಗೆ ಕದಂಬ, ಆಳುಪ, ಸೇಂದ್ರಕ, ಬಾಣ, ಕೇಕೆಯ ಪಲ್ಲವ ರಾಜಮನೆತನಗಳ ನಡುವಣ ಸಂಬಂಧವನ್ನು ಈ ಶಾಸನ ತಕ್ಕಮಟ್ಟಿಗೆ ತಿಳಿಸಿಕೊಡುವ ಪ್ರಯತ್ನ ಮಾಡುತ್ತದೆ.

ಹೀಗೆ ಹಲ್ಮಿಡಿ ಶಾಸನವು ಹಲವು ದೃಷ್ಟಿಗಳಿಂದ ಮಹತ್ವಪೂರ್ಣ ಶಾಸನವೆನಿಸಿದೆ. ಆದರೆ ಈ ಶಾಸನ ಕುರಿತು ಕೆಲವೊಂದು ಗೊಂದಲಗಳು ಇಲ್ಲದಿಲ್ಲ. ಇದರ ಕಾಲವನ್ನು ಎಂ.ಎಚ್.ಕೃಷ್ಣರವರು ಕ್ರಿ.ಶ.450 ಎಂದು ತಿಳಿಸಿದರೆ ಗೋವಿಂದ ಪೈರವರು ಇದು 6ನೆಯ ಶತಮಾನದ ಶಾಸನ ಎನ್ನುತ್ತಾರೆ. ಜೊತೆಗೆ ಕೆಲವೊಂದು ಸಾಲುಗಳಿಗೆ ಮತ್ತು ಪದಗಳಿಗೆ ಸ್ಪಷ್ಟತೆ ಕೂಡ ಇಲ್ಲ. ಇತ್ತಿಚೀಗೆ ಭಾರತೀಯ ಪುರಾತತ್ವ ಇಲಾಖೆಯು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ತಾಳಗುಂದದಲ್ಲಿ ದೊರೆತ ಶಾಸನ ಕನ್ನಡದ ಅತೀ ಹಳೆಯ ಶಾಸನವೆಂದು ಪ್ರಕಟಿಸಿದ್ದು ಕೂಡ ಮತ್ತೊಂದು ಗೊಂದಲವೇ. ಏನೇ ಆದರೂ ಕನ್ನಡದ ಭಾಷೆ, ಪರಂಪರೆಯ ದೃಷ್ಟಿಯಿಂದ ಇದಕ್ಕೆ ಮಹತ್ತ್ವವಿದೆ.

# ಮತಾಂತರ ಮತ್ತು ಪರಿಶಿಷ್ಟರ ಮೀಸಲಾತಿ–ಒಂದು ವಿಮರ್ಶೆ

**ಡಾ. ಪ್ರವೀಣ ಟಿ. ಎಲ್** — ಸಹಾಯಕ ಪ್ರಾಧ್ಯಾಪಕರು
**ಮಂಜುನಾಥ** — ಸಂಶೋಧನಾ ವಿದ್ಯಾರ್ಥಿ
ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾಲಯ

**ಪೀಠಿಕೆ**

ಪಾಶ್ಚಾತ್ಯರು ಬರುವವರೆಗೂ ಭಾರತವು ಅನಾಗರಿಕತೆಯಿಂದ ಕೂಡಿತ್ತು ಎಂಬ ಗ್ರಹಿಕೆಯಿಂದ ಭಾರತೀಯರನ್ನು ನಾಗರಿಕರನ್ನಾಗಿಸುವ 'ಸಿವಿಲೈಸೇಶನ್ ಮಿಶನ್' ಎಂದು ಬ್ರಿಟಿಷರು ತಮ್ಮನ್ನು ಕರೆದುಕೊಂಡರು. ಅಲ್ಲಿ ನಡೆದದ್ದೆಲ್ಲಾ ಮಿಶನರಿಯ ಕೆಲಸವೇ ಆಗಿತ್ತು. ಭಾರತೀಯರನ್ನು ಮತಾಂತರ ಮಾಡುವ ಬಹುದೊಡ್ಡ ಯೋಜನೆಯು ಬ್ರಿಟೀಷ್ ಆಡಳಿತದ ಭಾಗವಾಗಿಯೇ ಬಂದಿದ್ದನ್ನು ಚಿಂತಕರು ಗುರುತಿಸಿದ್ದಾರೆ. ಮಿಶನರಿಗಳು ನಿರೀಕ್ಷಿತ ಯಶಸ್ಸು ಗಳಿಸದಿದ್ದಾಗ, ಶಿಕ್ಷಣ, ಸಾಹಿತ್ಯದ ಹೆಸರಿನಲ್ಲಿ ಕ್ರಿಶ್ಚಿಯನ್ ವಿಚಾರಧಾರೆಗಳನ್ನು ಭಾರತೀಯರಿಗೆ ದಾಟಿಸಿದ್ದು ಅಷ್ಟೇ ನಿಜ. ಆದರೆ ಆರಂಭದಿಂದಲೂ ಮತಾಂತರಕ್ಕೆ ಮುಖ್ಯವಾಗಿ ಬಲಿಯಾದವರು ದಲಿತ ಸಮುದಾಯಗಳು. ಈಗಲೂ ಅದು ಮುಂದುವರೆದಿರುವುದನ್ನು ಕಾಣಬಹುದು.

'ಹಿಂದೂ ಸಮಾಜವು ಭ್ರಷ್ಟಗೊಂಡಿದೆ; ದಲಿತರನ್ನು ಶತಮಾನಗಳಿಂದಲೂ ಶೋಷಣೆಗೆ, ದೌರ್ಜನ್ಯಕ್ಕೆ ಗುರಿಮಾಡಲಾಗಿದೆ' ಎಂಬ ಕಥನವು ಮತಾಂತರಕ್ಕಿರುವ ಪ್ರಮುಖ ಅಸ್ತ್ರ. ಕ್ರಿಶ್ಚಿಯಾನಿಟಿ, ಇಸ್ಲಾಂಗಳು 'ಸಮಾನತೆ'ಯನ್ನು ಸಾರುವ ರಿಲಿಜನ್‌ಗಳಾಗಿದ್ದು, ದಲಿತರ ತಾರತಮ್ಯ, ಶೋಷಣೆ, ದೌರ್ಜನ್ಯ ಮತ್ತು ಸಮಸ್ಯೆಗಳಿಗೆ ಪರಿಹಾರವೆಂದರೆ ಅವುಗಳಿಗೆ ಮತಾಂತರವಾಗುವುದು. ಹಾಗೆಯೇ ದಲಿತರ ಸಮಸ್ಯೆಗಳ ಪರಿಹಾರಕ್ಕಿರುವ ಇನ್ನೊಂದು ಮಾರ್ಗವೆಂದರೆ ಮೀಸಲಾತಿ. ಇಲ್ಲೊಂದು ಗಮನಿಸಬೇಕಾದ ಸಂಗತಿಯೊಂದಿದೆ: ದಲಿತರು ಮತಾಂತರಗೊಂಡ ನಂತರವೂ ಮೀಸಲಾತಿಯನ್ನು ಪಡೆದುಕೊಳ್ಳುವ ಪ್ರವೃತ್ತಿ ಈಗಾಗಲೇ ಇದೆ. ಅದನ್ನು ಶಾಸನಬದ್ಧಗೊಳಿಸಬೇಕೆಂಬ ಬೇಡಿಕೆಯನ್ನು ಪ್ರಭುತ್ವದ ಮುಂದಿಡಲಾಗಿದೆ. ಅದಕ್ಕೆ ಬಾಲಕೃಷ್ಣ ಸಮಿತಿಯನ್ನು ನೇಮಿಸಿ ವರದಿಯ ಸಲ್ಲಿಕೆಯ ಹಂತದಲ್ಲಿದೆ. ಈ ಸಂದರ್ಭದಲ್ಲಿ ಈ ಮತಾಂತರಗೊಂಡವರ ದಲಿತ ಮೀಸಲಾತಿ ಬೇಡಿಕೆಯ ಸುತ್ತಲಿನ ಚರ್ಚೆಯನ್ನು ಪರಾಮರ್ಶೆಗೆ ಒಳಪಡಿಸುವ ಸಣ್ಣ ಪ್ರಯತ್ನವೇ ಈ ಲೇಖನ.

**'ದಲಿತ' ಕ್ರಿಶ್ಚಿಯನ್ನರು; 'ದಲಿತ' ಮುಸ್ಲಿಮರು ಯಾರು?**

ಭಾರತ ಎರಡು ವಸಾಹತುಶಾಹಿಗೆ ಒಳಪಟ್ಟ ರಾಷ್ಟ್ರವೆಂದರೆ ತಪ್ಪಾಗಲಾರದು. ಒಂದು ಇಸ್ಲಾಂನ ಆಳ್ವಿಕೆ ಮತ್ತೊಂದು ಐರೋಪ್ಯರ ಆಳ್ವಿಕೆ. ಈ ಎರಡೂ ಸಂದರ್ಭಗಳಲ್ಲಿ ಭಾರತೀಯರನ್ನು ಅವ್ಯಾಹತವಾಗಿ ಮತಾಂತರಕ್ಕೊಳಪಡಿಸಿದ್ದನ್ನು ಕಾಣುತ್ತೇವೆ. ಮುಸ್ಲಿಂ ಆಳ್ವಿಕೆಯ ಕಾಲದಲ್ಲಿ ಭಾರತದ ಕಾಫೀರರನ್ನು ಇಸ್ಲಾಂಗೆ ಮತಾಂತರಿಸುವುದು ಪುಣ್ಯದ ಕೆಲಸವೆಂದು ಭಾವಿಸಿದರೆ, ಬ್ರಿಟೀಷ್ ಆಳ್ವಿಕೆಯು 'ಅಂಧಕಾರ'ದಲ್ಲಿರುವ

ಭಾರತೀಯ ಹಿಂದೂಗಳನ್ನು 'ಬೆಳಕಿ'ನೆಡೆಗೆ ಕರೆದೊಯ್ಯುವುದು ನಮ್ಮ ಕರ್ತವ್ಯವೆಂದು ತೀರ್ಮಾನಿಸಿದರು.

ಈ ಎರಡೂ ಸಂದರ್ಭಗಳಲ್ಲಿ ಭಾರತೀಯ ಸಮಾಜದ ಕುರಿತು, ಜಾತಿಗಳ ಕುರಿತು ಅತ್ಯಂತ ಕೆಟ್ಟ ನಿರೂಪಣೆಗಳನ್ನು ಸೃಷ್ಟಿಸಲಾಯಿತು. ಇಲ್ಲಿನ ಕೆಲವು ಸಮುದಾಯಗಳನ್ನು ಕೆಳಜಾತಿಗಳೆಂದು, ಅವರು ಐರೋಪ್ಯ ದೇಶಗಳಲ್ಲಿದ್ದ ಗುಲಾಮರಿದ್ದಂತೆ, ಹಿಂದೂ ಸಮಾಜವು ಅವರ ಮೇಲೆ ಹಿಂದಿನಿಂದಲೂ ಶೋಷಣೆ, ದೌರ್ಜನ್ಯಗಳನ್ನು ನಡೆಸುತ್ತಾ ಬಂದಿದೆ ಎಂದು ಹೇಳಿದರು. ಅವರನ್ನು ಉದ್ಧರಿಸುವ ಮಾರ್ಗವೇ ಮತಾಂತರ ಎಂದರು. ಇದು ವಸಾಹತು ಕಾಲಘಟ್ಟಕ್ಕೆ ಮಾತ್ರವೇ ಸೀಮಿತಗೊಳ್ಳದೇ, ಇಂದಿಗೂ ಮುಂದುವರೆಯುತ್ತಿರುವ ಸಂಗತಿಯೇ ಆಗಿದೆ. ಇಸ್ಲಾಂಗೆ, ಕ್ರಿಶ್ಚಿಯನಿಟಿಗೆ ದಲಿತ ಜಾತಿಗಳನ್ನು ಮತಾಂತರ ಮಾಡುವ ಪ್ರಕ್ರಿಯೆಗಳು ಜರುಗುತ್ತಿವೆ. ಅವರನ್ನು ಮತಾಂತರದ ನಂತರವೂ ಮಸ್ಲೀಮರು, ಕ್ರಿಶ್ಚಿಯನ್ನರು ಎನ್ನುವ ಬದಲು 'ದಲಿತ ಮಸ್ಲೀಮರು', 'ದಲಿತ ಕ್ರಿಶಿಯನ್ನರು' ಎಂದು ಕರೆಯಲಾಗುತ್ತದೆ. ಆದರೆ ಮತಾಂತರವಾದ ಮೇಲೂ ಅವರು ಹೇಗೆ 'ದಲಿತ'ರಾಗುತ್ತಾರೆ?

**ಮತಾಂತರಿಗಳಿಗೆ ಮೀಸಲಾತಿ : ಪರವಾದಗಳು**

ಮತಾಂತರವಾದ ನಂತರ ಅವರಿಗೆ ಮೀಸಲಾತಿಯನ್ನು ಕೊಡುವುದು ಸರಿಯೇ ಇಲ್ಲವೇ? ಎಂಬ ಪ್ರಶ್ನೆಗಳನ್ನು ಈಗಾಗಲೇ ಎತ್ತಲಾಗಿದೆ. ಕೆಲವು ಸಮಿತಿಗಳನ್ನು ರೂಪಿಸುವ ಮೂಲಕ ಸಲಹೆಗಳನ್ನು ಸ್ವೀಕರಿಸಲಾಗಿದೆ. ಒಟ್ಟಿನಲ್ಲಿ ಆ ಸುತ್ತಲೂ ಒಂದಷ್ಟು ಪರವಿರೋಧದ ಚರ್ಚೆಗಳು ನಡೆದದ್ದು ನಿಜ.

**ಸಿಖ್ & ಬೌದ್ಧರಿಗೆ-ಮೀಸಲಾತಿ :** ಸಂವಿಧಾನ(ಪರಿಶಿಷ್ಟ ಜಾತಿಗಳು) ಆದೇಶ 1950ರ ಪ್ರಕಾರ, ಹಿಂದೂ ಧರ್ಮ ಪ್ರತಿಪಾದಿಸುವ ಅಂಚಿನಲ್ಲಿರುವ ಗುಂಪುಗಳು/ ಸಮುದಾಯಗಳು ಮಾತ್ರ ಪರಿಶಿಷ್ಟ ಜಾತಿಯ ಸದಸ್ಯರಾಗಬಹುದು. ಮೂಲತಃ, ಹಿಂದೂಗಳು ಮಾತ್ರ ಪರಿಶಿಷ್ಟ ಜಾತಿ ಕೋಟಾದಡಿಯಲ್ಲಿ ಮೀಸಲಾತಿಗೆ ಅರ್ಹರಾಗಿದ್ದರು, ಆದರೆ 1956ರಲ್ಲಿ ಸಿಖ್ಖರನ್ನು ಮತ್ತು 1990ರಲ್ಲಿ ಬೌದ್ಧರನ್ನು ಸೇರಿಸಲಾಯಿತು. ಮುಸ್ಲಿಂ ಮತ್ತು ಕ್ರಿಶ್ಚಿಯನ್ ಗುಂಪುಗಳಿಗೆ ಮತಾಂತರವಾದವರನ್ನು ಎಸ್‌ಸಿಗಳ ಪಟ್ಟಿಯಲ್ಲಿ ಸೇರಿಸುವುದಕ್ಕೆ ಅವಕಾಶವನ್ನು ನಿರಾಕರಿಸಲಾಗಿದೆ. ಸಿಕ್ಕರು ಮತ್ತು ಬೌದ್ಧರಿಗೆ ನೀಡಿದಂತೆ ಇಸ್ಲಾಂ ಮತ್ತು ಕ್ರಿಶ್ಚಿಯನ್ ರಿಲಿಜನ್ನಿಗೆ ಮತಾಂತರಗೊಂಡವರಿಗೆ ಪರಿಶಿಷ್ಟರ ಮೀಸಲಾತಿಯನ್ನು ಸಂವಿಧಾನದಲ್ಲಿ ತಿದ್ದುಪಡಿ ತರುವ ಮೂಲಕ ನೀಡಬೇಕೆಂದು ವಾದಿಸಲಾಗುತ್ತಿದೆ.

**ರಂಗನಾಥ್ ಮಿಶ್ರಾ ಸಮಿತಿ:** ಈ ಸಮಿತಿಯು 2004ರಲ್ಲಿ ರಂಗನಾಥ ಮಿಶ್ರ ಆಯೋಗವು ಸುಮಾರು 4 ವರ್ಷಗಳ ಸಮೀಕ್ಷೆಯ ನಂತರ ಮೇ 21. 2007 ರಂದು ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ಈ ವರದಿಯಲ್ಲಿದಲಿತ ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರು ತಮ್ಮ ಸ್ವಂತ ಧರ್ಮದ ಮೇಲ್ಜಾತಿ ಸದಸ್ಯರಿಂದ ಮಾತ್ರವಲ್ಲದೆ ವಿಶಾಲವಾದ ಹಿಂದೂ-ಪ್ರಾಬಲ್ಯದ ಸಮಾಜದಿಂದ ತಾರತಮ್ಯವನ್ನು ಎದುರಿಸುತ್ತಾರೆ. ಕ್ರಿಶ್ಚಿಯನ್ ಮತ್ತು ಇಸ್ಲಾಂಗೆ ಮತಾಂತರಗೊಂಡ ದಲಿತರನ್ನು ಎಸ್‌ಸಿ ವರ್ಗದಿಂದ ಹೊರಗಿಡುವುದು ಸಮಾನತೆಯ ಸಾಂವಿಧಾನಿಕ ಖಾತರಿಯನ್ನು ಉಲ್ಲಂಘಿಸುತ್ತದೆ.

ಜಾತಿ ತಾರತಮ್ಯವನ್ನು ತಿರಸ್ಕರಿಸುವ ಈ ಧರ್ಮಗಳ ಮೂಲ ತತ್ವಗಳಿಗೆ ವಿರುದ್ಧವಾಗಿದೆ. ಅಷ್ಟೇ ಅಲ್ಲದೆಕ್ರಿಶ್ಚಿಯನ್ ಮತ್ತು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡ ದಲಿತರಿಗೆ ಎಸ್‌ಸಿ ಸ್ಥಾನಮಾನದ ನಿರಾಕರಣೆಯು ಅವರ ಸಾಮಾಜಿಕ–ಆರ್ಥಿಕ ಮತ್ತು ಶೈಕ್ಷಣಿಕ ಹಿನ್ನಡೆಗೆ ಕಾರಣವಾಗಿದೆ ಮತ್ತು ಶಿಕ್ಷಣ ಮತ್ತು ಉದ್ಯೋಗಾವಕಾಶಗಳಲ್ಲಿ (ಆರ್ಟಿಕಲ್ 16ರ ಅಡಿಯಲ್ಲಿ ಒದಗಿಸಲಾದ) ಮೀಸಲಾತಿಗಳ ಪ್ರವೇಶದಿಂದ ವಂಚಿತಗೊಳಿಸಿದಂತಾಗುತ್ತದೆ.

ಈ ಶಿಫಾರಸ್ಸಿಗೆ ತೀವ್ರ ವಿರೋಧ ವ್ಯಕ್ತವಾಯಿತು. ಅಲ್ಲದೆ ಈ ವರದಿಯನ್ನು ಬಿಜೆಪಿ ಸರ್ಕಾರವು 2011ರಲ್ಲಿ ದಲಿತ ಕ್ರಿಶ್ಚಿನ್ನರು ಮತ್ತು ಮುಸ್ಲಿಮರು ತಮ್ಮ ವ್ಯಾಪ್ತಿಯೊಳಗೆ ಬರಲು ಕಾರಣವಾಗುವ ಎಲ್ಲಾ ಅಲ್ಪಸಂಖ್ಯಾತರಿಗೆ ಪರಿಶಿಷ್ಟ ಕೋಟಾಗಳನ್ನು ಶಿಫಾರಸ್ಸು ಮಾಡುವ ವರದಿ ವಿರುದ್ಧ ಪಿಐಎಲ್ ಅನ್ನು ಸಲ್ಲಿಸಲು ಬಿಜೆಪಿ ನಿರ್ಧರಿಸಿತು. ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ದಲಿತರಿಗೆ ಮೀಸಲಾತಿಯ ಪ್ರಯೋಜನವನ್ನು ವಿಸ್ತರಿಸಲು ಒಲವು ತೋರಿದ ನ್ಯಾಯಮೂರ್ತಿ ರಂಗನಾಥ್ ಮಿಶ್ರ ಆಯೋಗದ ವರದಿಯನ್ನು ಯಾವುದೇ ಕ್ಷೇತ್ರ ಅಧ್ಯಯನವಿಲ್ಲದೆ ಬರೆಯಲಾಗಿದೆ ಎಂದು ಕೇಂದ್ರವು ನಿರ್ಧರಿಸಿ ಈ ನಿರ್ಧಾರವನ್ನು ಸುಪ್ರೀಂ ಕೋರ್ಟಿಗೆ ತಿಳಿಸಿತು.

**ರಾಜೇಂದ್ರ ಸಾಚಾರ ಸಮಿತಿ:** ಯುಪಿಎ ಸರ್ಕಾರವು 2005ರಲ್ಲಿ ರಾಜೇಂದ್ರ ಸಾಚಾರ (ಹೈಕೋರ್ಟ್‌ನ ಮಾಜಿ ಮುಖ್ಯ ನ್ಯಾಯಮೂರ್ತಿಗಳು) ಇವರ ನೇತೃತ್ವದ ಏಳು ಸದಸ್ಯರ ಉನ್ನತ ಮಟ್ಟದ ಸಮಿತಿಯನ್ನು ರಚಿಸಿತು. ಇದರ ಮುಖ್ಯ ಕೆಲಸ ಮುಸ್ಲಿಮರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಯನ್ನು ಅಧ್ಯಯನವನ್ನು ಮಾಡುವುದು.ಈ ಸಮಿತಿಯು ವರದಿಯನ್ನು 2009ರಲ್ಲಿ ಮಂಡಿಸಿದರು. ಇದು ಮತಾಂತರದ ನಂತರ ದಲಿತರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯು ಸುಧಾರಿಸಿಲ್ಲ ಎಂದು ಗಮನಿಸಿದೆ. ಈ ಸಮಿತಿಯು ಎರಡು ಸದನಗಳಲ್ಲಿ ತನ್ನ ವರದಿಯನ್ನು ಮಂಡಿಸಿತು. ಆದರೆ ಈ ವರದಿಯು ಅಸಮರ್ಪಕ ದತ್ತಾಂಶ ಮತ್ತು ನೈಜ ಪರಿಸ್ಥಿತಿಯೊಂದಿಗೆ ದೃಢೀಕರಿಸುವಲ್ಲಿ ವಿಫಲವಾಗಿದೆ ಎಂದು ಅದರ ಶಿಫಾರಸ್ಸುಗಳನ್ನು ಅಂಗೀಕರಿಸಲಾಗಿಲ್ಲ.

**ಮತಾಂತರದ ನಂತರವೂ ದಲಿತ ಸಮಸ್ಯೆಗಳು:** ರಿಲಿಜನ್ನುಗಳಿಗೆ ಮತಾಂತರವಾದ ನಂತರ ಮತ್ತಷ್ಟು ಸಮಸ್ಯೆಗಳಿಗೆ ಗುರಿಯಾಗುತ್ತಿದ್ದಾರೆ. ಅದು ಅಂಬೇಡ್ಕರ್ ಅವರ ಮಾತಿನಲ್ಲಿ ನೋಡುವುದಾದರೆ "ಕ್ರೈಸ್ತ ಅಧಿಕಾರಿ, ಅನಾಧಿಕಾರಿ ಪ್ರತಿಯೊಬ್ಬರ ಆಕ್ರೋಶ, ಉಗ್ರ, ಕೋಪಗಳಿಗೆ ತುತ್ತಾಗಬೇಕಾಗುತ್ತದೆ. ಕ್ರೈಸ್ತ ಧರ್ಮದ ಬುನಾದಿಯನ್ನು ಮರೆತು, ಪ್ರೀತಿ ದಾನ, ಸೋದರತೆ ಇತ್ಯಾದಿ ತತ್ವಗಳಿಗೆ ವಿರೋಧವಾಗಿ ನಮ್ಮ ಕ್ರೈಸ್ತ ಬಾಂಧವರು ನಮ್ಮ ಚರ್ಚುಗಳಲ್ಲಿ ಕೂಡ ನಮ್ಮನ್ನು ಅಸ್ಪೃಶ್ಯರಂತೆ ಕಾಣುತ್ತಾರೆ.ನಾವು ಹತ್ತಿರ ಬಾರದಂತೆ ನೋಡಿಕೊಳ್ಳುತ್ತಾರೆ. ಪ್ರತ್ಯೇಕ ಆಸನವ್ಯವಸ್ಥೆ, ಅವರು ಕೂಡಲು ಸ್ಥಳಗಳಲ್ಲಿ ಇತರರಿಂದ ಬೇರ್ಪಡಿಸುವ ಕಬ್ಬಿಣ ಕಟಾಂಜನ ಕಬ್ಬಿನ ಸಳಿಗಳ ಅಡೇತಡೆ ಗೋಡೆ, ಬೇಲಿ ನಿರ್ಮಿತವಾಗುತ್ತದೆ. ಇಂಥ ಅನೇಕ ಚರ್ಚುಗಳಿವೆ, ಸಂಸ್ಕಾರಗಳ ಸ್ವೀಕೃತಿಯಲ್ಲಿ, ಮಾಲಿನ್ಯವನ್ನು ದೂರೀಕರಿಸಲೆಂದು ಕೊಂಡ ಒಂದು ವಿಚಿತ್ರ ಪ್ರತ್ಯೇಕತೆ ಆಚರಣೆ ರೂಡಿಯಲ್ಲಿದೆ."

"ದೇವರ ದೃಷ್ಟಿಯಲ್ಲಿ ಮಾನವ ಸಮಾನತೆ, ದಾನಧರ್ಮಗಳ ಆವಶ್ಯಕತೆ, ನೆರೆಹೊರೆಯವರಿಗಾಗಿ ಪ್ರೀತಿ, ಪರಸ್ಪರ ಸಹಕಾರ ಮತ್ತು ದಯೆ ಮುಂತಾದ

ಮೂಲಭೂತ ತತ್ವಗಳನ್ನು ನಮ್ಮ ಕ್ರೈಸ್ತ ಧರ್ಮ ಬೋಧಿಸುತ್ತಿದೆಯಾದರೂ, ನಿಮ್ಮ ವರ್ಗದಿಂದ, ಮತಾಂತರಗೊಂಡ ನಾವು ಅನೇಕರು, ಇಂದಿಗೂ, ಹಿಂದೂ ನಿಮ್ನ ವರ್ಗದ ಜನರಂತೆ ಹೀನ ಸ್ಥಿತಿಯಲ್ಲಿಯೇ ಉಳಿದಿದ್ದೇವೆ. ಅನೇಕ ಸಂಗತಿಗಳು ಅತಿ ಮುಖ್ಯವಾದುದೆಂದರೆ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಕೆಲವರಲ್ಲಿರುವ ಪ್ರಬಲ ಹಿಂದೂ ಮನೋಧರ್ಮದ ಜಾತಿವಾದಿತ್ವ ಮತ್ತು ಧರ್ಮ ಪ್ರಚಾರಕ ನಿರ್ಲಕ್ಷ್ಯ ಮನೋಭಾವ, ಅನಧಿಕಾರ, ಅಸ್ತವ್ಯಸ್ತತೆಗಳು ಇತ್ಯಾದಿಗಳಿಂದಾಗಿ ನಾವು ಕ್ರಿಶ್ಚಿಯನ್ನರಾಗುವುದಕ್ಕಿಂತ ಮೊದಲು ಹೇಗಿದ್ದೇವೋ ಇಂದಿಗೂ ಕ್ರಿಶ್ಚಿಯನ್ ಅಸ್ಪೃಶ್ಯರಾಗಿ ಹಾಗೆಯೇ ಇದ್ದೇವೆ.”

ಚರ್ಚ್‌ಗಳಲ್ಲಿ ಜಾತಿ ಆಚರಣೆಗಳು ಸಾಮಾನ್ಯವಾಗಿವೆ. ಅಂದರೆ ಪ್ರತ್ಯೇಕ ಸ್ಮಶಾನ ಮತ್ತು ವರ್ಶಿಪ್‌ನ ಸಂದರ್ಭದಲ್ಲಿ ಪ್ರತ್ಯೇಕವಾದ ಆಸನದ ವ್ಯವಸ್ಥೆ ಮಾಡುವುದು, ವೈವಾಹಿಕ ಸಂಬಂಧ ಮತ್ತು ಅಹಾರ ವಿನಿಮಯವನ್ನು ಕಟ್ಟುನಿಟ್ಟಾಗಿ ನಿಷೇಧ ಹೀಗೆ ಇಂತಹ ತಾರತಮ್ಯವು ಹಿಂದೂಯಿಸಂನಲ್ಲಿರುವಂತೆ ಕ್ರಿಶ್ಚಿಯಾನಿಟಿಯಲ್ಲಿಯೂ ಅವ್ಯಾಹತವಾಗಿ ಮುಂದುವರೆಯುತ್ತಿರುವುದರಿಂದ ಅವರಿಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿಯನ್ನು ವಿಸ್ತರಿಸಬೇಕೆಂದು ವಾದಿಸಲಾಗುತ್ತಿದೆ.

**ಮತಾಂತರಿಗಳಿಗೆ ಮೀಸಲಾತಿ–ವಿರೋಧವಾದಗಳು**

ಕ್ರಿಶ್ಚಿಯಾನಿಟಿಗೆ ಮತಾಂತರವಾದವರಿಗೆ ಮೀಸಲಾತಿ ನೀಡಲು ಬೆಂಬಲಿಸುವ, ಶಿಫಾರಸ್ಸು ಮಾಡಿರುವುದನ್ನು ಈ ಹಿಂದಿನ ಚರ್ಚೆಯು ಸ್ಪಷ್ಟಪಡಿಸುತ್ತದೆ. ಈಗ ಅದನ್ನು ವಿರೋಧಿಸುವ ಕೆಲವು ನಿಲುವುಗಳನ್ನು ಗಮನಿಸುವುದು ಒಳಿತು.

**ಮಿಶನರಿ–ಮೀಸಲಾತಿ: ಎರಡೆರಡು ಮಾರ್ಗಗಳು:** ಭಾರತಕ್ಕೆ ಬ್ರಿಟೀಷರು ಕೇವಲ ಆಡಳಿತಕ್ಕಾಗಿ ಬಂದವರು, ತಮ್ಮ ರಿಲಿಜನ್‌ಅನ್ನು ಇಲ್ಲಿ ವಿಸ್ತರಿಸಲು ಶ್ರಮವಹಿಸಿದರು. ಅದಕ್ಕೆ ಭಾರತೀಯ ಸಮಾಜದಲ್ಲಿನ ದಬ್ಬಾಳಿಕೆ, ಅಸ್ಪೃಶ್ಯತೆ, ಕಿರುಕುಳಗಳನ್ನು ಬೇರೆಯದೆ ಥರದಲ್ಲಿ ಬಳಿಸಿಕೊಂಡರು. ಅದಕ್ಕೆ ಜಾತಿವ್ಯವಸ್ಥೆಯ ಕತೆಯನ್ನು ಪೋಣಿಸಿದರು. ಬ್ರಾಹ್ಮಣರನ್ನು ಕ್ಯಾಥೋಲಿಕ್ ಪ್ರೀಸ್ಟ್ (ಪೇಗನ್ ಪ್ರೀಸ್ಟ್) ಎಂದು ಅರ್ಥೈಸಿದರು, ಇಲ್ಲಿನ ಎಲ್ಲಾ ಅನಾಹುತಗಳಿಗೆ ಅವರನ್ನು ಹೊಣೆ ಮಾಡಿ, ಕೆಳಜಾತಿಗಳೆಂದು ಗುರುತಿಸಲ್ಪಟ್ಟವರನ್ನು ಮಧ್ಯಕಾಲೀನ ಯುರೋಪಿನಲ್ಲಿ ಶೋಷಣೆಗೆ ಒಳಗದವರಂತೆ ಅರ್ಥೈಸಿ ಅವರ ಗುಣಲಕ್ಷಣಗಳನ್ನು ಆರೋಪಿಸಿದರು.

ಆ ಮೂಲಕ ದಲಿತರನ್ನು ಸಮಾನರಾಗಿಸಲು ಇರುವ ಮಾರ್ಗಗಳೆಂದರೆ, ಒಂದು ಮತಾಂತರ; ಎರಡು, ಪಾಶ್ಚಾತ್ಯ ಶಿಕ್ಷಣ. ಮಿಶನರಿಗಳು ಈ ಎರಡೂ ಮಾರ್ಗಗಳನ್ನು ಅನುಸರಿಸಿದರು. ಎರಡನೆಯದರಲ್ಲಿ ಹೆಚ್ಚು ಯಶಸ್ವಿಯಾದರೆಂದರೆ ತಪ್ಪಿಲ್ಲ. ಶಿಕ್ಷಣ ಸಂಸ್ಥೆಗಳನ್ನು ನಿರ್ಮಿಸಿದರು. ಅದರಲ್ಲಿ ಇಂಗ್ಲಿಷ್ ಶಿಕ್ಷಣವನ್ನು ಪ್ರಾರಂಭಿಸಿದರು. ಕ್ರಿಶ್ಚಿಯಾನಿಟಿಗೆ ಸಂಬಂಧಿಸಿದ ಪಠ್ಯಗಳನ್ನು ಮಾತ್ರ ಭೋದಿಸಿದರು. ಅದರೊಂದಿಗೆ ಅವರ ಮೂಲ ಸಂಪ್ರದಾಯ, ಆಚರಣೆಗಳನ್ನು ಅನೈತಿಕ, ಭ್ರಷ್ಟ, ಅವೈಜ್ಞಾನಿಕವೆಂದು ಅವುಗಳನ್ನು ತಿರಸ್ಕರಿಸುವ ದ್ವೇಷಿಸುವ ಮನೋಭಾವವನ್ನು ಹುಟ್ಟುಹಾಕಲಾಯಿತು. ಅಷ್ಟೇ ಅಲ್ಲದೆ ಮನೆಗಳಿಲ್ಲದ ದಲಿತರಿಗೆ ವಸತಿಯನ್ನು ಒದಗಿಸಿದರು. ಮತ್ತು ಆಸ್ಪತ್ರೆಗಳನ್ನು ನಿರ್ಮಿಸಿ ಯೇಸುವಿನ ಹೆಸರಿನಲ್ಲಿ ವೈದ್ಯಕೀಯ ಸೌಲಭ್ಯಗಳನ್ನು

ನೀಡಿದರು. ಇವೆಲ್ಲವುಗಳನ್ನು ನೀಡುವುದರೊಂದಿಗೆ ದಲಿತರನ್ನು ಮತಾಂತರಿಸುವಲ್ಲಿ ಸಫಲರಾದರು.

ಪಾಶ್ಚಾತ್ಯ ಪಾದ್ರಿ ಮ್ಯೊಗ್ಲಿಂಗ್ ಹೇಳುವುದೆನೆಂದರೆ "ನಮ್ಮ ಎದುರಿನ ಜನಮಾನಸದ ಚೇತನವನ್ನು ಅರ್ಥೈಸಿಕೊಂಡು ಸಾಂಪ್ರದಾಯಿಕ ಆಲೋಚನೆಗಳನ್ನು ತೊಡೆದು ಹಾಕುವುದೇ ಮಿಷನರಿಗಳ ಗುರಿಯಾಗಿದೆ ಎಂದು ಭಾವಿಸುತ್ತೇನೆ. ಜನರನ್ನು ತಪ್ಪು ಗ್ರಹಿಕೆ ಮೌಢ್ಯ ವಿಚಾರಗಳಿಂದ ಬಿಡುಗಡೆಗೊಳಿಸಿ ಹೊಸ ಆಲೋಚನಾ ವಿಧಾನವನ್ನು ರೂಪಿಸುವುದ ಮಿಷನರಿಗಳಾದ ನಮ್ಮ ಆದ್ಯ ಕರ್ತವ್ಯವೆಂದು ಭಾವಿಸುತ್ತಾನೆ"(ಹೆರ್ಮನ ಮ್ಯೋಗ್ಲಿಂಗ್. "ಮಿಷನರಿ ಪ್ರವಾಸ" 2022.4)

ಹೀಗೆ ಮತಾಂತರಕ್ಕೆ ಒಳಪಡುವವರು ಶಿಕ್ಷಣ, ಆರೋಗ್ಯ ಮತ್ತಿತರ ಸವಲತ್ತುಗಳನ್ನು ಪಡೆಯುವಲ್ಲಿ ಯಶಸ್ವಿಯಾಗುವುದರಿಂದ ಅವರುಗಳಿಗೆ ಸಂವಿಧಾನಬದ್ಧವಾಗಿ ನೀಡಲ್ಪಡುವ ಪರಿಶಿಷ್ಟರ ಮೀಸಲಾತಿಯನ್ನು ಮುಂದುವರೆಸುವುದು ನ್ಯಾಯಸಮ್ಮತವಲ್ಲ. ಅಲ್ಲದೇ ಮೂಲ ಜಾತಿ, ಸಂಪ್ರದಾಯ, ಹಾಗೂ ಆಚರಣೆಗಳನ್ನು ತಿರಸ್ಕರಿಸುವ, ಭಿನ್ನ ಹಾದಿಯಲ್ಲಿ ಸಾಗುವ ಇವರಿಗೆ ಮೀಸಲಾತಿ ನೀಡುವುದು ದಲಿತರ ಏಳಿಗೆಗೆ ಕೊಡಲಿಯೇಟು ಕೊಟ್ಟಂತಲ್ಲವೇ? ಎಂಬುದು ಹಲವರ ವಿರೋಧಕ್ಕಿರುವ ಕಾರಣವಾಗಿದೆ.

**ಮತಾಂತರಿಗಳಿಗೆ ಮೀಸಲಾತಿ-ದಲಿತ ವಿರೋಧಿ:** ಕ್ರಿಶ್ಚಿಯನ್ ಮಿಶನರಿಗಳು ಭಾರತದಲ್ಲಿ ಮೊದಲು ಮೇಲ್ಜಾತಿಯವರನ್ನೇ ಮತಾಂತರಿಸಲು ಪ್ರಯತ್ನಿಸಿದರೂ, ಅದು ಈಡೇರದ ಕಾರಣ ಅವರ ಗುರಿ ದಲಿತ ಸಮುದಾಯಗಳ ಕಡೆಗೆ ತಿರುಗಿದ್ದು ಇತಿಹಾಸ. ಅದರಲ್ಲಿ ಅವರು ಭಾಗಶಃ ಯಶಸ್ವಿಯಾದದ್ದು ಸತ್ಯ. ಸ್ವತಂತ್ರ ಭಾರತದಲ್ಲಿ ಸಂವಿಧಾನಾತ್ಮಕ ಆಡಳಿತವು ಮೀಸಲಾತಿಯನ್ನು ಹಿಂದುಳಿದ ಸಮುದಾಯಗಳಿಗೆ ನೀಡುವ ಮೂಲಕ ಅವರ ಸಮಸ್ಯೆಗಳಿಗೆ ಪರಿಹಾರವನ್ನು ನೀಡುವ, ಸಬಲೀಕರಣಗೊಳ್ಳುವ ಮಾರ್ಗವನ್ನು ಒದಗಿಸಲಾಯಿತು. ಆದರೆ ಈ ಮೀಸಲಾತಿಯನ್ನು ನೀಡಲು ಇರುವ ಕಾರಣವೆಂದರೆ, ಭ್ರಷ್ಟ ಹಿಂದೂಯಿಸಂನಿಂದಾಗಿ ಜಾತಿವ್ಯವಸ್ಥೆ ಹುಟ್ಟಿದೆ ಅದರಿಂದಾಗಿ ಕೆಲವು ಸಮುದಾಯಗಳು ಹಿಂದುಳಿದಿದ್ದು, ಆ ಸಮುದಾಯಗಳ ಸಬಲೀಕರಣಕ್ಕಾಗಿ ಮೀಸಲಾತಿಯನ್ನು ಜಾರಿಗೆ ತರಲಾಯಿತು ಎಂಬುದು ಸ್ಪಷ್ಟ. ಅಂದರೆ ಭ್ರಷ್ಟ ಹಿಂದೂಯಿಸಂ ಜಾತಿವ್ಯವಸ್ಥೆಯ ಹುಟ್ಟಿಗೆ ಕಾರಣವಾಯಿತು. ಜಾತಿವ್ಯವಸ್ಥೆಯು ದಲಿತ ಸಮುದಾಯಗಳ ಇಂದಿನ ದುಸ್ಥಿತಿಗೆ ಕಾರಣವಾಗಿದೆ ಎಂದಾದರೆ, ಹಿಂದೂ ಸಮಾಜದೊಳಗೆ ಇರುವ ದಲಿತರಿಗೆ ಮೀಸಲಾಗಿರುವ ಸಂವಿಧಾನಾತ್ಮಕ ಅವಕಾಶಗಳನ್ನು ಕ್ರಿಶ್ಚಿಯಾನಿಟಿ, ಇಸ್ಲಾಂಗೆ ವಿಸ್ತರಿಸುವುದು ಸರಿಯಲ್ಲ ಎಂಬುದು ಹಲವರ ಪ್ರತಿಪಾದನೆ.

**ಅಂಬೇಡ್ಕರ್ ಮತ್ತು ರಿಲಿಜನ್ನಿನ ಮತಾಂತರ:** ಅಂಬೇಡ್ಕರ್‌ರವರು ದಲಿತ ಸಮುದಾಯಗಳ ಬಗ್ಗೆ ಅತ್ಯಂತ ಕಾಳಜಿ ವಹಿಸಿದ್ದ ನಾಯಕರು. ಅವರು ದಲಿತರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯಲು ಹಗಲಿರುಳು ಶ್ರಮಿಸಿದವರು. ಅವರು ಮೀಸಲಾತಿಯನ್ನು ಬಳಸಿ ಸಬಲೀಕರಣಗೊಳ್ಳುವ ಮಾರ್ಗವನ್ನು ಗಟ್ಟಿಯಾಗಿ ಪ್ರತಿಪಾದಿಸಿದ್ದರು. ಅವರು ಕೊನೆಗೆ ಬುದ್ಧಿಸಂ ಅನ್ನು ಸೇರಿದರು ಎಂಬುದು ನಿಜವಾದರೂ ಸಹ ಕ್ರಿಶ್ಚಿಯಾನಿಟಿ ಮತ್ತು ಇಸ್ಲಾಂಗೆ ಮತಾಂತರ ಹೊಂದುವುದು ದಲಿತರ ಸಮಸ್ಯೆಗಳಿಗೆ ಪರಿಹಾರವಾಗದು ಎಂದು ಬಲವಾಗಿ ಪ್ರತಿಪಾದಿಸಿದ್ದರು.

ಅಂಬೇಡ್ಕರ್‌ರವರೇ ಹೇಳುವಂತೆ: "ಮತಾಂತರ'ಗೊಂಡ ದಲಿತರ ಮೇಲಿನ ದೌರ್ಜನ್ಯ ಮತ್ತು ಅನ್ಯಾಯಗಳನ್ನು ನಿವಾರಿಸುವುದು ತನ್ನ ಕರ್ತವ್ಯ ಎಂದು ಕ್ರೈಸ್ತಧರ್ಮ ಪ್ರಚಾರಕರು ಭಾವಿಸಲೇ ಇಲ್ಲ... ಎಲ್ಲಕ್ಕಿಂತ ಮುಖ್ಯವಾಗಿ ಮತಾಂತರಗೊಂಡ ನಂತರ ದಲಿತರು ತಮ್ಮ ಮೇಲಿನ ದೌರ್ಜನ್ಯವನ್ನು ವಿರೋಧಿಸುವುದರ ಬದಲಾಗಿ ನಿಷ್ಕ್ರಿಯರಾಗಿದ್ದಾರೆ". (ಬಿ.ಆರ್.ಅಂಬೇಡ್ಕರ್, 2010: 480).

ಹಾಗೆಯೇ ಇಸ್ಲಾಂಗೆ ಮತಾಂತರವಾಗುವುದನ್ನು ವಿರೋಧಿಸಿ, ಬುದ್ಧಿಸಂ ಕಡೆಗೆ ಹೋಗುವ ಮಾರ್ಗವನ್ನು ತಿಳಿಸುತ್ತಾರೆ. ಬುದ್ಧಿಸಂ ಒಂದು ರಿಲಿಜನ್ ಆಗಿರದೇ, ಅದೊಂದು ಭಾರತೀಯ ಸಂಪ್ರದಾಯವೇ ಆಗಿರುವುದು ಅವರ ನಿಲುವಿಗೆ ಕಾರಣವಿರಬಹುದು! ಹಾಗಾಗಿ, ಅಂಬೇಡ್ಕರ್‌ರನ್ನು ಪೂಜಿಸುವ ದಲಿತರು ಅವ್ಯಾಹತವಾಗಿ ಕ್ರಿಶ್ಚಿಯಾನಿಟಿಗೆ ಮತಾಂತರವಾಗುತ್ತಿರುವುದು ಅಂಬೇಡ್ಕರ್‌ರಿಗೆ ಮಾಡುವ ಅವಮಾನವಾಗುವುದಿಲ್ಲವೇ? ಕ್ರಿಶ್ಚಿಯಾನಿಟಿ, ಇಸ್ಲಾಂನಂತಹ ಸೆಮೆಟಿಕ್ ರಿಲಿಜನ್‌ಗಳಿಗೆ ಮತಾಂತರವಾಗುವುದೇ ಸರಿಯಾದ ಮಾರ್ಗವಲ್ಲ ಎಂಬುದು ಅಂಬೇಡ್ಕರ್‌ರವರ ನಿಲುವಾಗಿರುವಾಗ ಅವರಿಗೆ ಮೀಸಲಾತಿ ನೀಡುವುದು ಸರಿಯಾದ ಕ್ರಮವೇ? ದಲಿತರು ಕ್ರಿಶ್ಚಿಯಾನಿಟಿಗೆ ಮತಾಂತರವಾಗುವುದೇ ಸಾಮಾಜಿಕ ಮತ್ತು ಶೈಕ್ಷಣಿಕ ಅಂತಸ್ತನ್ನು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ. ಹಿಂದೂಸಮಾಜದ, ಜಾತಿಸಮಾಜದ ಅಸಮಾನತೆಯನ್ನು ಧಿಕ್ಕರಿಸಿ ಬಂದರೆ, ಕ್ರೈಸ್ತ ರಿಲಿಜನ್ ಹೊಸ ಸ್ಥಾನಮಾನವನ್ನು ಕರುಣಿಸುತ್ತದೆ ಎಂಬುದೇ ಅವರು ಮತಾಂತರಕ್ಕೆ ನೀಡುವ ಕಾರಣವೆಂದಾದ ಮೇಲೆ, ಅವರನ್ನು ಸಬಲೀಕರಣಗೊಳಿಸುವ ಪ್ರಯತ್ನವನ್ನು ಮಾಡುವುದು ಅವರ ಕರ್ತವ್ಯ. ಮತಾಂತರವಾದ ಮೇಲೂ ಅವರನ್ನು 'ದಲಿತ ಕ್ರಿಶ್ಚಿಯನ್ನರೆಂದು' ಕರೆಯುವುದೇ ಮಹಾನ್ ತಪ್ಪು.ಮತಾಂತರವಾದ ಮೇಲೆ ಅವರು ಕ್ರಿಶ್ಚಿಯನ್ನರು ಮಾತ್ರ.ದಲಿತರಲ್ಲ. ಆದ್ದರಿಂದ ಜಾತಿ ಅಸಮಾನತೆಯನ್ನು ಸರಿಪಡಿಸಲು ನೀಡುವ ಮೀಸಲಾತಿಯನ್ನು ಕ್ರಿಶ್ಚಿಯಾನಿಟಿಗೆ ಮತಾಂತರವಾದವರಿಗೆ ನೀಡುವುದು ಸರಿಯಲ್ಲ ಎಂಬ ವಾದವು ಮುಖ್ಯವಾಗುತ್ತದೆ.

ಮತಾಂತರಿಗಳಿಗೆ ಮೀಸಲಾತಿ ಮತ್ತು ದಲಿತರಿಗಾಗುವ ಅನ್ಯಾಯದ ಅನಾವರಣ: ದಲಿತ ಸಮುದಾಯಗಳು ಕಷ್ಟವಿರಲಿ, ಸುಖವಿರಲಿ ತಮ್ಮದೇ ಜಾತಿಗಳಲ್ಲಿ ಬದುಕಿಕೊಂಡು ಬರುವುದನ್ನು ನೋಡುತ್ತೇವೆ. ಅವರಿಗೆ ಅನುಕೂಲವಾಗಲೆಂದು ಅಂಬೇಡ್ಕರ್‌ರವರು ಮೀಸಲಾತಿ ನೀತಿಯನ್ನು ರೂಪಿಸಿದ್ದು, ಅವರ ಪಾಲಿನ ಮೀಸಲಾತಿಯು ಅವರಿಗೆ ತಲುಪಬೇಕಾದುದು ಸಾಂವಿಧಾನಿಕವೂ, ನ್ಯಾಯಬದ್ಧವೂ ಹೌದು. ಆದರೆ ಅವರ ಆಶಯಕ್ಕೆ ಮತ್ತು ಮೀಸಲಾತಿ ನೀತಿಯ ಉದ್ದೇಶಕ್ಕೆ ವಿರುದ್ಧವಾಗಿ ಬಡ, ಹಿಂದುಳಿದ ದಲಿತರಿಗೆ ಸಿಗಬೇಕಾದ ಮೀಸಲಾತಿಯು ಶ್ರೀಮಂತ ದಲಿತ ಹಾಗೂ ಮತಾಂತರಿಗಳ ಪಾಲಾಗುತ್ತಿರುವುದು ವಿಪರ್ಯಾಸದ ಸಂಗತಿ. ಇದು ದಲಿತ ವಿರೋಧಿ, ಅಂಬೇಡ್ಕರ್ ವಿರೋಧಿ ಮಾತ್ರವಲ್ಲ ಸಂವಿಧಾನ ವಿರೋಧಿಯೂ ಆಗಿದೆ.

ದಲಿತಪರ ಎಂದು ಹೇಳಿಕೊಳ್ಳುವ ಅದೆಷ್ಟೋ ಸಂಘಟನೆಗಳು ದೇಶದಾದ್ಯಂತ ಇವೆ. ಮಾನವ ಹಕ್ಕುಗಳ ಹೆಸರಿನಲ್ಲಿ ಹಲವು ಸಂಘಟನೆಗಳು ದೇಶದಲ್ಲಿ ಅಸ್ತಿತ್ವದಲ್ಲಿವೆ. ಆದರೆ ನಿಜವಾದ ದಲಿತರಿಗೆ ಆಗುತ್ತಿರುವ ಬಹುದೊಡ್ಡ ಮೋಸದ ಕುರಿತು ಜಾಣಮೌನಿಗಳಾಗಿದ್ದಾರೆ. ಕೆಲವು ಕಡೆ ಈ ಸಂಘಟನೆಗಳು ದಲಿತ

ಕ್ರೈಸ್ತರಿಗೆ ಮೀಸಲಾತಿ ನೀಡಬೇಕು ಎಂದು ಹೋರಾಡುವ ಮೂಲಕ ಗೊತ್ತಿದ್ದೋ, ಗೊತ್ತಿಲ್ಲದೆಯೋ ನಿಜವಾದ ದಲಿತರ ಹಿತಾಸಕ್ತಿಗೆ ದಕ್ಕೆ ತರುತ್ತಿದ್ದಾರೆ. ಹಾಗಾದರೆ ಕೆಲವು ದಲಿತ ಸಂಘಟನೆಗಳು ನಿಜವಾದ ದಲಿತರ ಪರವಾಗಿವೆಯೇ, ಅಂಬೇಡ್ಕರ್ ಆಶಯಕ್ಕೆ ಪೂರಕವಾಗಿವೆಯೇ, ಸಂವಿಧಾನದ ನಿಲುವಿಗೆ ಬದ್ಧವಾಗಿವೆಯೇ ಎಂಬ ಅನುಮಾನಗಳು ಮೂಡುತ್ತವೆ. ಈಗಾಗಲೇ ಹಲವರು ತಮ್ಮ ಜಾತಿಗಳಿಂದ ದೂರವಾಗಿ, ಸಂಪ್ರದಾಯಗಳಿಂದ ದೂರವಾಗಿ, ಕ್ರೈಸ್ತರಾಗಿದ್ದರೂ ಸಹ ತಮ್ಮ ಹಿಂದಿನ ಜಾತಿಯ (ಎಸ್ಸಿ, ಎಸ್ಟಿ) ಮೀಸಲಾತಿ ಪ್ರಮಾಣ ಪತ್ರಗಳನ್ನು ಪಡೆದು, ಸೌಲಭ್ಯಗಳನ್ನು ತಲೆಮಾರುಗಳಿಂದಲೂ ಬಳಸಿಕೊಳ್ಳುತ್ತಿದ್ದಾರೆ. ಈ ಕುರಿತು ಧ್ವನಿ ಎತ್ತ ಬೇಕಾಗಿರುವ ಸಂಘಟನೆಗಳು, ಪ್ರಗತಿಪರರು ಅವರನ್ನು ಬೆಂಬಲಿಸುತ್ತಿದ್ದಾರೆ.

ನಿಜವಾದ ದಲಿತರನ್ನು, ಹಿಂದುಳಿದವರನ್ನು ಉದ್ಧರಿಸುವುದು, ಸಬಲೀಕರಣಗೊಳಿಸುವುದು ಮೀಸಲಾತಿಯ ಮೂಲ ಆಶಯ. ಅವರಿಗೆ ಮೀಸಲಾತಿಯ ಅವಕಾಶಗಳು ಸಿಗುವಂತೆ ನೋಡಿಕೊಳ್ಳುವುದು ಎಲ್ಲರ ಕರ್ತವ್ಯ. ಇಲ್ಲದಿದ್ದರೆ, ಈ ಮುಂದಿನ ಪ್ರಶ್ನೆಗಳನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಿದೆ.

1. ದಲಿತ ಕ್ರೈಸ್ತರಿಗೆ ಮೀಸಲಾತಿಯನ್ನು ನೀಡಿದರೆ ದಲಿತರ, ಹಿಂದುಳಿದವರ ಮೀಸಲಾತಿಯನ್ನು ಅವರು ಬಳಸಿಕೊಂಡು ಭಾರತವನ್ನು ಇನ್ನಷ್ಟು ಕ್ರಿಶ್ಚಿಯನೈಸೇಷನ್ ಮಾಡುವುದಿಲ್ಲವೇ? ಎಂಬುದನ್ನು ಗಮನಿಸಬೇಕಿದೆ.
2. ಭಾರತದ ಸಂಸ್ಕೃತಿ ಸಮಾಜವನ್ನು ಹೀಗಳೆಯುವ ಪ್ರವೃತ್ತಿಯು ಕಳೆದ ಮುನ್ನೂರು ವರ್ಷಗಳಿಂದಲೂ ಕಾಣುತ್ತಿದ್ದೇವೆ. ಅದು ಇನ್ನಷ್ಟು ಪರಿಣಾಮಕಾರಿಯಾಗಲು ಇದು ಪರೋಕ್ಷವಾಗಿ ಸಹಕರಿಸಿದಂತಾಗುವುದಿಲ್ಲವೇ? ಎಂಬ ಅನುಮಾನಗಳು ಕಾಡುತ್ತವೆ.
3. ಒಬಿಸಿ ಮೀಸಲಾತಿಯನ್ನು ಈಗಾಗಲೇ ನೀಡಲಾಗಿದೆ. ಮೀಸಲಾತಿ ಹಿಂದೂ ಸಮಾಜದ ಅಸಮಾನತೆ, ತಾರತಮ್ಯ, ಅಸ್ಪೃಶ್ಯತೆಯನ್ನು ತೊಲಗಿಸಲು ಎಂದಾದ ಮೇಲೆ ಹಿಂದೂ ಸಮುದಾಯಗಳಿಗೆ ಮಾತ್ರ ಸೀಮಿತಗೊಳಿಸುವುದು ತಾತ್ವಿಕವಾಗಿಯೂ, ಶಾಸನೀಯವಾಗಿಯೂ ಸಮರ್ಥನೀಯವಾಗುವುದುಲ್ಲವೇ? ಎಂಬುದರ ವಿಶ್ಲೇಷಣೆಯು ನಡೆಯಬೇಕಿದೆ.
4. ಎಷ್ಟೋ ಕುಟುಂಬಗಳು ಮತಾಂತರವಾಗಿ ತಲೆಮಾರುಗಳೇ ಕಳೆದರೂ ತಮ್ಮ ಹಿಂದಿನ ಜಾತಿ ಸರ್ಟಿಫಕೇಟ್‌ಗಳನ್ನು ಪಡೆದು ಸರ್ಕಾರಕ್ಕೆ ವಂಚಿಸುತ್ತಿದ್ದಾರೆ. ಇವುಗಳನ್ನು ಗಮನಿಸುವುದು ನಿಜವಾದ ದಲಿತ ಪರವಾದ ಕಾಳಜಿಯಾಗಲಿದೆ. ಮತಾಂತರ ನಿಷೇಧ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನವು ಈ ನಿಟ್ಟಿನಲ್ಲಿ ಭಾಗಶಃ ಪರಿಹಾರವಾಗಲಿದೆಯೇ? ಎಂಬುದನ್ನು ಗಂಭೀರವಾಗಿ ನೋಡಬೇಕಿದೆ.
5. ದಲಿತರಿಗೆ ಸಿಗಬೇಕಾದ ಸವಲತ್ತುಗಳನ್ನು ಕಿತ್ತು ಬೇರೆಯವರಿಗೆ(ಕ್ರೈಸ್ತರಿಗೆ) ಕೊಡಬೇಕೆನ್ನುವ ಬೇಡಿಕೆಯೇ ದಲಿತವಿರೋಧಿ ಮಾತ್ರವಲ್ಲ ಅಂಬೇಡ್ಕರ್ ವಿರೋಧಿ ಹಾಗೂ ಸಂವಿಧಾನ ವಿರೋಧಿ ನಡೆಯಾಗುವುದಿಲ್ಲವೇ?
6. ಮತಾಂತರಗೊಂಡ ನಂತರ ಅವರೆಲ್ಲರೂ ಕ್ರಿಶ್ಚಿಯನ್ನರೇ ಹೊರತು ದಲಿತ ಕ್ರಿಶ್ಚಿಯನ್ನರಲ್ಲ. ದಲಿತ ಕ್ರಿಶ್ಚಿಯನ್ನರು ಎಂಬ ಪರಿಕಲ್ಪನೆಯೇ ತಪ್ಪು. ಒಂದೊಮ್ಮೆ ಕ್ರಿಶ್ಚಿಯಾನಿಟಿಗೆ ಹೋದನಂತರವೂ ದಲಿತರ ಸಮಸ್ಯೆಗಳು ಇನ್ನೂ ಹೆಚ್ಚಾಗುತ್ತವೆ

ಎಂದಾದರೆ ಮತಾಂತರ ಒಂದು ಪರಿಹಾರ ಎಂಬುದನ್ನು ಕೂಡಲೇ ನಿಲ್ಲಿಸಬೇಕಲ್ಲವೇ? ಅಥವಾ ಇದನ್ನು ಪುನರ್‌ವಿಮರ್ಶಿಸುವ ಅಗತ್ಯವಿದೆ.

ಈ ಎಲ್ಲಾ ಪ್ರಶ್ನೆಗಳು ಗಂಭೀರವಾದ ಚಿಂತನೆಯನ್ನು, ಚರ್ಚೆಯನ್ನು ನಡೆಸಲು ವೇದಿಕೆಯನ್ನು ಒದಗಿಸುತ್ತವೆ. ಕೊನೆಯದಾಗಿ ದಲಿತ ಮತಾಂತರಿಗಳಿಗೆ ಮೀಸಲಾತಿಯನ್ನು ಕೊಡಬಾರದು ಮತ್ತು ರಿಲಿಜನ್‌ಗಳ ಮತಾಂತರವನ್ನು ಬೆಂಬಲಿಸಬಾರದು ಎಂದು ಒತ್ತಾಯಿಸುವುದು ಈ ಲೇಖನದ ಉದ್ದೇಶವಲ್ಲ. ರಿಲಿಜನ್ನುಗಳಿಗೆ ಮತಾಂತರವಾಗುವುದು ವಿಮೋಚನೆಯ ಹಾದಿ ಎಂಬ ಪ್ರತಿಪಾದನೆ ಮತ್ತು ಮತಾಂತರಗೊಂಡವರಿಗೆ ಮೀಸಲಾತಿ ನೀಡಬೇಕು ಎನ್ನುವ ಪ್ರತಿಪಾದನೆ ಇವೆರಡರ ನಡುವೆ ಇರುವ ವೈರುಧ್ಯವನ್ನು ವಿಶ್ಲೇಷಿಸಲು ಈ ಲೇಖನವು ಯತ್ನಿಸಿದೆ.

**ಆಧಾರ ಗ್ರಂಥಗಳು**

1) ಹೆಗಡೆ, ರಾಜರಾಮ. 2017. ಬುದ್ಧಿಜೀವಿಗಳ ಮೂಢನಂಬಿಕೆಗಳು. ಶಿರಸಿ: ನಿಲುಮೆ ಪ್ರಕಾಶನ.
2) ಷಣ್ಮುಖ. ಎ. 2009. ಗ್ರಾಮೀಣ ದಲಿತರ ಸ್ಥಿತಿಗತಿಗಳು. ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾಲಯ.
3) ಸೋಸಲೆ.ಎನ್.ಚಿನ್ನಸ್ವಾಮಿ. 2012. ಅಂಬೇಡ್ಕರ್ ದೃಷ್ಟಿಯಲ್ಲಿ ದಲಿತರು ಮತ್ತು ಮತಾಂತರ. ಯಾಜಿ ಪ್ರಕಾಶನ. ಹೊಸಪೇಟೆ.
4) ಹೆಗಡೆ, ರಾಜರಾಮ (ಸಂ). 2004 ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.
5) ರಘು. ಎಸ್. 2019. "ದಲಿತ ಮತಾಂತರ: ಸ್ವರೂಪ ಮತ್ತು ಸಮಸ್ಯೆಗಳು". ಸಂಶೋಧನಾ ವರದಿ. ರಾಜ್ಯಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, (ಅಪ್ರಕಟಿತ.)
6) ರಮೇಶ (ಸಂ).2014. ಧಾರ್ಮಿಕ ಮತಾಂತರ: ಸಂವಿಧಾನಿಕ ದೃಷ್ಟಿಕೋನ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
7) ಜವರಯ್ಯ ಮ.ನ. 2007. ಅಂಬೇಡ್ಕರ್ ವರ್ಸಸ್ ಮನುವಾದ. ಬೆಂಗಳೂರು: ಬಹುಜನ ಮಾಧ್ಯಮ ಕೇಂದ್ರ.
8) ರಾಮಚಂದ್ರಪ್ಪ ಬರಗೂರು. 2015. ಸಂಸ್ಕೃತಿ : ಶ್ರಮ ಮತ್ತು ಸೃಜನಶೀಲತೆ.ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
9) ಪೋತೆ ಹೆಚ್ ಟಿ. 2016. ಡಾ ಅಂಬೇಡ್ಕರ್ ವಾಚಿಕೆ. ಕಲಬುರುಗಿ: ಗುಲ್ಬರ್ಗಾ ವಿಶ್ವವಿದ್ಯಾಲಯ ಪ್ರಸಾರಾಂಗ.
10) ಹೆರ್ಮನ ಮ್ಯೋಗ್ಲಿಂಗ್. ಗ್ರಾಟ್‌ಫ್ರೈಡ್ ವೈಗ್ಲೆ (ಮೂ) ಎ.ವಿ.ನಾವಡ (ಕನ್ನಡಕ್ಕೆ). 2022. ಮಿಷನರಿ ಪ್ರವಾಸ "ಮಂಗಳೂರಿಂದ ಸುಬ್ರಹ್ಮಣ್ಯಕ್ಕೆ". ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.
11) Chandra Panigrah, Kumuda. 2018. Human Rights and Dalit Christians in India. USA. International Journal of Research in Social Sciences. Vol-8.
12) Clarrout Sarah. Roover Jakob De. 2005. "The Question Of conversion in India" Economic and Political Weekly.

❖❖❖

# ಭಾಷಾ ಚಳವಳಿಯಲ್ಲಿ ಸಾಹಿತ್ಯದ ಪಾತ್ರ

**ಚಂದ್ರಕಲ ಹೆಚ್.ಪಿ.** — ಕನ್ನಡ ಸಹಾಯಕ ಪ್ರಾಧ್ಯಾಪಕರು
**ಡಾ. ಎಸ್. ಸಿದ್ದೇಗೌಡ** — ಕನ್ನಡ ಸಹ ಪ್ರಾಧ್ಯಾಪಕರು
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು (ಸ್ವಾಯತ್ತ) ಮೈಸೂರು

ಭಾಷೆ ಹಾಗೂ ಸಾಹಿತ್ಯ ಒಂದಕ್ಕೊಂದು ಪೂರಕ ಹಾಗೂ ಪೋಷಕ. ಭಾಷಾ ಬೆಳವಣಿಗೆಗೆ ಸಾಹಿತ್ಯದ ಪಾತ್ರ ಎಷ್ಟು ಮಹತ್ವಪೂರ್ಣವೋ, ಸಾಹಿತ್ಯದ ವಿಕಾಸಕ್ಕೆ ಭಾಷೆಯ ಪಾತ್ರವು ಅಷ್ಟೇ ಮಹತ್ವಪೂರ್ಣವಾದದ್ದು. ಕನ್ನಡ ನಾಡು–ನುಡಿಗೆ ಸು.2000ಕ್ಕಿಂತಲೂ ಅಧಿಕ ವರ್ಷಗಳ ಇತಿಹಾಸವಿದ್ದು ಕನ್ನಡ ನಾಡಿನ ಎಲ್ಲೆಯನ್ನು ಕುರಿತು ಕವಿರಾಜಮಾರ್ಗದಲ್ಲೆ 'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್' ಎಂಬ ಉಲ್ಲೇಖವಿದೆ. ಇಷ್ಟು ವಿಸ್ತಾರವಾಗಿದ್ದ ಕನ್ನಡನಾಡು ಬ್ರಿಟೀಷರ ಆಡಳಿತಾವಧಿಯಲ್ಲಿ ಸುಮಾರು ಇಪ್ಪತ್ತೆರಡು ಪ್ರಾಂತ್ಯಗಳಾಗಿ ಹರಿದು ಹಂಚಿ ಹೋಗಿದ್ದು ಅವುಗಳನ್ನು ಆಡಳಿತದ ಅನುಕೂಲಕ್ಕಾಗಿ ಮುಂಬೈ, ಮದ್ರಾಸ್, ಮೈಸೂರು, ಕೊಡಗು, ಹೈದರಾಬಾದ್ ಕರ್ನಾಟಕಗಳು ಎಂದು ಐದು ಪ್ರಮುಖ ವಿಭಾಗಗಳನ್ನಾಗಿ ಮಾಡಿಕೊಳ್ಳಲಾಗಿತ್ತು.

ಭಾರತದ ಸ್ವಾತಂತ್ರ್ಯ ಚಳವಳಿ ಜೊತೆಗೆ ಜೊತೆಯಾದದ್ದು ಪ್ರಾಂತೀಯ ಚಳವಳಿಗಳು. ಈ ಚಳವಳಿಗಳು ಅಭಿವ್ಯಕ್ತಗೊಂಡಿದ್ದು ಭಾಷಿಕ ನೆಲೆಯಿಂದ. ಹಾಗಾಗಿ ಇವನ್ನು ಭಾಷಾ ಚಳವಳಿಗಳು ಎಂದರೂ ತಪ್ಪಿಲ್ಲ. ಆ ಹಿನ್ನೆಲೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳ ಒಂದುಗೂಡುವಿಕೆಗಾಗಿ ಉಗಮಿಸಿದ್ದೇ 'ಏಕೀಕರಣ' ಪರಿಕಲ್ಪನೆ. ರಾಷ್ಟ್ರೀಯ ಹಾಗೂ ಏಕೀಕರಣ ಚಳವಳಿಗಳು ಒಟ್ಟಿಗೆ ಮುಂದುವರಿದರೂ ಸ್ವಾತಂತ್ರ್ಯಾನಂತರ ಪ್ರಾಂತೀಯ ಹಿನ್ನೆಲೆಯಲ್ಲಿ ಭಾಷಾ ಚಳವಳಿಗಳು ಮಹತ್ವಪೂರ್ಣ ಪಾತ್ರ ವಹಿಸಿದವು.

ಸ್ವಾತಂತ್ರ್ಯ ಚಳವಳಿ ಮತ್ತು ಏಕೀಕರಣ ಸಂದರ್ಭದಲ್ಲಿ ದೇಶಪ್ರೇಮ ಹಾಗೂ ನಾಡು–ನುಡಿಯ ಅಭಿಮಾನ ಒಟ್ಟಿಗೆ ಅಭಿವ್ಯಕ್ತಗೊಂಡಿತು. ಈ ಪ್ರೇರಣೆ ಸಾಹಿತ್ಯ ಸೃಷ್ಟಿಯ ಸ್ಫೂರ್ತಿಯ ಸೆಲೆಯಾಯಿತು ಎಂದರೆ ಅತಿಶಯೋಕ್ತಿ ಅಲ್ಲ. ಹರಿದು ಹಂಚಿಹೋಗಿದ್ದ ಕನ್ನಡ ಮಾತನ್ನಾಡುವ ಪ್ರದೇಶಗಳನ್ನು ಒಗ್ಗೂಡಿಸಿ ಜನತೆಯಲ್ಲಿ ಕನ್ನಡಾಭಿಮಾನ ಮೂಡಿಸಿ ಏಕೀಕರಣಕ್ಕೆ ಅವರನ್ನು ಮಾನಸಿಕವಾಗಿ ಸಿದ್ಧಗೊಳಿಸುವಲ್ಲಿ ಕನ್ನಡ ಸಾಹಿತ್ಯ ಹಾಗೂ ಸಾಹಿತಿಗಳು ವಹಿಸಿರುವ ಪಾತ್ರ ಅನನ್ಯವಾದುದು. ಅವರುಗಳಲ್ಲಿ ಶಾಂತಕವಿ, ಬಿ.ಎಂ.ಶ್ರೀ, ಕುವೆಂಪು, ಬೇಂದ್ರೆ, ಹುಯಿಲಗೊಳ ನಾರಾಯಣರಾಯರು, ಮಾಸ್ತಿ, ವಿ.ಸೀ, ಪು.ತಿ.ನ, ರಾಜರತ್ನಂ, ಪಂಜೆ ಮಂಗೇಶರಾಯ, ಕೆ.ಎಸ್.ನರಸಿಂಹಸ್ವಾಮಿ ಹೀಗೆ ಹಲವರು ತಮ್ಮ ಭಾಷಾ ಪ್ರೇಮವನ್ನು ಕವನಗಳ ಮೂಲಕ ಅಭಿವ್ಯಕ್ತಿಸುವುದರರೊಟ್ಟಿಗೆ ಜನತೆಯಲ್ಲಿ ಭಾಷಾಭಿಮಾನವನ್ನು ಮೂಡಿಸಿ ಏಕೀಕರಣಕ್ಕೆ ಸಜ್ಜುಗೊಳಿಸಿದರು.

ಮುಂಬೈ ಕರ್ನಾಟಕದ ಕನ್ನಡಿಗರಲ್ಲಿ ಭಾಷಾ ಜಾಗೃತಿ ಮೂಡಿಸಿದದವರಲ್ಲಿ ಶಾಂತಕವಿಗಳು (ಬಾಳಾಚಾರ್ಯ ಗೋಪಾಲಾಚಾರ್ಯ ಸಕ್ಕರಿ) ಪ್ರಮುಖರು. ಮರಾಠಿ

ಪ್ರಭಾವಕ್ಕೊಳಗಾಗಿದ್ದ ಈ ಪ್ರಾಂತ್ಯದಲ್ಲಿ ಅಲ್ಲಿನ ಜನಮಾನಸದಲ್ಲಿ ಕನ್ನಡವನ್ನು ಹುಟ್ಟು ಹಾಕುವ ಅವಿರತ ಪ್ರಯತ್ನ ಇವರದಾಗಿತ್ತು. ಇವರು ಸುಮಾರು 56 ಕೃತಿಗಳಲ್ಲಿ ಕನ್ನಡತನವನ್ನು ಅಭಿವ್ಯಕ್ತ ಪಡಿಸಿದ್ದಾರೆ. ಕಾವ್ಯಕ್ಕೆ(ಕೀರ್ತನೆ) ಸಂಬಂಧಿಸಿದಂತೆ ಒಂಬತ್ತು ಕೃತಿಗಳನ್ನು ರಚಿಸಿದ ಇವರ ಕೀರ್ತನೆಗಳಲ್ಲಿ 'ವಿದ್ಯಾರಣ್ಯ ವಿಜಯ' ಪ್ರಮುಖವಾದದ್ದು. ಕನ್ನಡದ ಬಗೆಗಿನ ಅಭಿಮಾನ ಇವರಲ್ಲಿ ಎಷ್ಟಿತ್ತೆಂದರೆ 1918ರಲ್ಲಿ ಧಾರವಾಡದಲ್ಲಿ ನಡೆಯಬೇಕಿದ್ದ ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಣದ ಕೊರತೆ ಸಂಭವಿಸಿದಾಗ "ಬೇಡಲು ಕನ್ನಡ ದಾಸಯ್ಯ ಬಂದಿಹ, ನೀಡಿರಮ್ಮ ತಡಮಾಡದಲೇ" ಎಂದು ದಾಸಯ್ಯನಾಗಿ ಹಾಡಿ ಹಣ ಸಂಗ್ರಹಿಸಿ ಕನ್ನಡ ಕಟ್ಟುವ ಕೆಲಸಕ್ಕೆ ಅಡಿಗಲ್ಲು ಹಾಕಿದರು. ಇವರ ಸಮಕಾಲೀನರಾದ ಶಿಶುನಾಳ ಷರೀಫರು ಇವರ ನಾಡು-ನುಡಿಗಳ ಬಗೆಗಿನ ಒಲವು-ನಿಲುವುಗಳನ್ನು ಮೆಚ್ಚಿ "ಇದು ಸಕ್ಕರಿಯಪ್ಪ ನಿಜವಾಗಿ ಇದು ಸಕ್ಕರಿ" ಎಂದಿದ್ದರು.

ಶಾಂತಕವಿಗಳ 'ಶ್ರೀ ವಿದ್ಯಾರಣ್ಯ ವಿಜಯ' ಕೀರ್ತನೆಯು ಕನ್ನಡ ನಾಡು-ನುಡಿಯ ಚಿಂತನೆಗೆ ಪ್ರೇರಕ ಶಕ್ತಿಯಾದ ಮೊದಲ ಕೃತಿ ಎಂದರೆ ಅತಿಶಯೋಕ್ತಿಯಲ್ಲ. ಈ ಕೀರ್ತನೆಯು ರಾಷ್ಟ್ರೀಯ ಹೋರಾಟದ ಜೊತೆಗೆ ಕನ್ನಡ ನಾಡಿನ ಸಾಂಸ್ಕೃತಿಕ ವಿಚಾರಗಳನ್ನೂ ಒಳಗೊಂಡಿದ್ದು ಬಹಳ ಮುಖ್ಯವಾಗಿದೆ. ಈ ಕೀರ್ತನೆಯಲ್ಲಿ ರಾಷ್ಟ್ರೀಯತೆಯನ್ನು ಹೊಮ್ಮಿಸುವ "ನಮ್ಮದೀ ಭರತಭೂಮಿ ಹೆರವರು ನಂಬದಲೆ ಜಗದೀಶ್ವರಂ ತಾನೆ" ಎನ್ನುವ ರಾಷ್ಟಾಭಿಮಾನ ಜೊತೆಗೆ ಕನ್ನಡದ 5 ತುಂಡಾದ ಪ್ರದೇಶಗಳನ್ನು ಕುರಿತು

**"ಇದು ಮಮ್ಮೈಕನ್ನಡ ಕೇಳ್ ಗೆಳೆಯ**
**ಇದು ಮದ್ರಾಸದ ಕನ್ನಡಿಯು**
**ಇದು ಮೈಸೂರವರಡಿಗನ್ನಡಿ ಮೇಣ್**
**ಇದು ಕೊಡಗದ ಕನ್ನಡಿ ಕಾಣೈ**
**ಇದು ಭಾಗ್ಯದ ನಗರದ ಕನ್ನಡಿ ಕೂಡಿದರಿವು ನಿನ್ನಿಡಿ ಕನ್ನಡಿಯು**
**ಈ ನಿನ್ನ ಇಡಿ ಕನ್ನಡಿಯ ಹೆಸರೇನೆಂದರೆ**
**ಕರ್ನಾಟಕವಿದು"**

ಎಂದು ಸಮಗ್ರ ಕರ್ನಾಟಕದ ಚಿತ್ರಣವನ್ನಿಲ್ಲಿ ತೆರೆದು ತೋರಿಸಿದ್ದಾರೆ. ಅಂದು ಕನ್ನಡ ಮಾತನಾಡುವವರು ಮುಂಬೈ, ಮದ್ರಾಸ್, ಮೈಸೂರು, ಕೊಡಗು, ಹೈದರಬಾದ್‌ಗಳಲ್ಲಿ ಹಂಚಿ ಹೋಗಿದ್ದುದನ್ನು ತಿಳಿಸುವುದರೊಟ್ಟಿಗೆ ಈ ಐದು ಕನ್ನಡ ಮಾತನಾಡುವ ಜನರಿರುವ ಪ್ರದೇಶ ಸೇರಿ ಕರ್ನಾಟಕವೆಂಬ ಅಖಂಡ ರಾಜ್ಯದ ಕಲ್ಪನೆಯನ್ನಿಲ್ಲಿ ತಂದಿದ್ದಾರೆ. ಅಲ್ಲದೆ ಈ ಕೀರ್ತನೆಯ ಮೂಲಕ ಕನ್ನಡಿಗರ ತಾಯಿ 'ಭುವನೇಶ್ವರಿ' ಎಂದು ಮೊಟ್ಟಮೊದಲಿಗೆ ಹೇಳಿದವರು ಇವರು. ಕನ್ನಡದ್ದೇ ಆದ ಧಾರ್ಮಿಕ ಸಂಕೇತದ ಮೂಲಕ ಜನರ ಭಾವನೆಗಳನ್ನು ಮುಟ್ಟುವುದು ಸುಲಭ ಎಂಬುದು ಇವರ ಇಂಗಿತವಾಗಿತ್ತು. ಹಾಗಾಗಿ ಭುವನೇಶ್ವರಿ ಎಂಬ ಸಂಕೇತ ನೀಡಿ ಈಕೆ ಕನ್ನಡಿಗರ ತಾಯಿ ಎಂದು ಹೇಳುವ ಮೂಲಕ ಸ್ವಭಾಷಾಭಿಮಾನವನ್ನು ಜನತೆಯಲ್ಲಿ ಬಿತ್ತಿದರು.

ಮುಂಬೈ ಕರ್ನಾಟಕ ಪ್ರಾಂತ್ಯದಲ್ಲಿನ ಏಕೀಕರಣದ ಅಗತ್ಯತೆಗೆ ಶ್ರಮಿಸಿದವರಲ್ಲಿ

‘ಕನ್ನಡ ಕುಲಪುರೋಹಿತರು’ ಎಂದೇ ಹೆಸರಾದ ‘ಹುಯಿಲಗೊಳ ನಾರಾಯಣರಾಯರು’ ಎಲ್ಲರಿಗಿಂತ ಪ್ರಮುಖ ಸ್ಥಾನದಲ್ಲಿ ನಿಲ್ಲುವ ವ್ಯಕ್ತಿ. ಇವರು ಒಂದು ರೀತಿಯಲ್ಲಿ ಕರ್ನಾಟಕ ಏಕೀಕರಣದ ರೂವಾರಿ. ಧಾರವಾಡದ ವಿದ್ಯಾವರ್ಧಕ ಸಂಘದ ಸ್ಥಾಪನೆಯಲ್ಲೂ ಇವರ ಪಾತ್ರ ಅನುಪಮವಾದದ್ದು. ಕರ್ನಾಟಕ ನಾಡಗೀತೆ ಎನಿಸಿದ್ದ

**“ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು**

**ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು”**

ಎಂಬ ಗೀತೆಯ ಮೂಲಕ ಕರ್ನಾಟಕ ಏಕೀಕರಣಕ್ಕೇ ಭದ್ರ ಬುನಾದಿ ಹಾಕಿದರು. ಉತ್ತರ ಕರ್ನಾಟಕದ ಯಾವುದೇ ಸಭೆ ಸಮಾರಂಭಗಳು ಈ ಹಾಡಿನ ಮೂಲಕವೇ ಆರಂಭವಾಗುತ್ತಿದ್ದವು. 1924ರಲ್ಲಿ ಬೆಳಗಾವಿಯಲ್ಲಿ ಮಹಾತ್ಮ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಈ ಗೀತೆಯನ್ನು ಗಂಗೂಬಾಯಿ ಹಾನಗಲ್ ಹಾಡಿದ್ದರು.

ಉತ್ತರ ಕರ್ನಾಟಕದಲ್ಲಿ ಮರಾಠಿ ಪ್ರಾಬಲ್ಯದಿಂದ ಕನ್ನಡ ಭಾಷೆ ನಲುಗಿ ಹೋಗುತ್ತಿದ್ದ ಸಂದರ್ಭದಲ್ಲಿ ಕನ್ನಡಾಭಿಮಾನವನ್ನು ಮೈಗೂಡಿಸಿಕೊಂಡು ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಉದ್ಧಾರಕ್ಕಾಗಿ ಪಣತೊಟ್ಟು ಕನ್ನಡದ ಭವ್ಯ ಪರಂಪರೆಯ ಬಗ್ಗೆ ಜನರಲ್ಲಿ ವಿಶ್ವಾಸ, ಆತ್ಮಾಭಿಮಾನ ಮೂಡಿಸಲು 1917ರಲ್ಲಿ ‘ಕರ್ನಾಟಕ ಗತವೈಭವ’ ಎಂಬ ಪ್ರಸಿದ್ಧ ಕೃತಿಯನ್ನು ರಚಿಸಿ ಕನ್ನಡ ನಾಡು–ನುಡಿಯನ್ನು ವೈಭವೀಕರಿಸಿ ಕನ್ನಡಿಗರನ್ನು ಜಾಗೃತಗೊಳಿಸುವುದರೊಟ್ಟಿಗೆ ಏಕೀಕರಣದ ಅಗತ್ಯತೆಯನ್ನು ಸಾರಿದರು. ‘ರಥೋತ್ಸವ’ ಎಂಬ ಕವನದಲ್ಲಿ “ನೋಡಿ ತಾಯ್ ಮಿಡುಕಿದಳು ಮಕ್ಕಳೆ ಕೂಡಿ ನಡೆಯದೆ ಕೆಲಸವಪ್ಪುದೆ” ಎಂದು ಹೇಳುವ ಮೂಲಕ ಕನ್ನಡಿಗರು ಒಂದಾಗಬೇಕಾದ ಅಗತ್ಯತೆಯನ್ನು ಸಾರಿ ಹೇಳಿದರು. ಮುಂದೆ 1956 ರಲ್ಲಿ ಏಕೀಕರಣ ಸಾಕಾರಗೊಂಡು ಕನ್ನಡನಾಡು ಒಂದಾದಾಗ ‘ಒಂದಾದ ಕನ್ನಡನಾಡು’ ಎಂಬ ಗೀತೆಯನ್ನು ರಚಿಸಿ ಈ ಕನ್ನಡ ನಾಡಿನ ಒಂದೇ ತಾಯಿಯ ಮಕ್ಕಳಿಂದು ಒಂದಾಗಿದ್ದಾರೆ ಅವರನ್ನು ದೇವರು ರಕ್ಷಿಸಲಿ ಎಂದು ಹರಸುವುದರೊಟ್ಟಿಗೆ

**“ಉದಿಸಿ ಬಂದೀ ನಾಡು ವಿಭವದ**

**ತುದಿಯನೇರಲಿ ಮತ್ತೆಯಲ್ಲಿಂ**

**ದುದರದಿರಲದು ಭಾರತಕ್ಕೆ ಘನ ಭೂಷಣವಾಗುತಲಿ”**

ಎಂದು ಇಡೀ ಭಾರತಕ್ಕೆ ನಮ್ಮ ಕನ್ನಡನಾಡು ಭೂಷಣವಾಗಲಿ ಎಂದು ಹಾರೈಸುತ್ತಾರೆ. ಅಲ್ಲದೆ ‘ಬೆಳಗಲೆಂದಿಗು ನಮ್ಮ ಕನ್ನಡನಾಡು’, ‘ಮೂಡಿದುದು ಮೂಡಿದುದು ಕನ್ನಡದ ರವಿಬಿಂಬ’ ಎಂಬ ಕವನಗಳ ಮೂಲ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಎಂಬ ಅವರ ಧ್ಯೇಯ ಫಲಿಸುದುದರ ಬಗ್ಗೆ ಸಂತೋಷ, ಅಭಿಮಾನಗಳು ಒಡಮೂಡಿವೆ. ಆದರೂ ಹೊಸರಾಜ್ಯ ಕರ್ನಾಟಕ ಎಂದಾಗದೆ ‘ಮೈಸೂರು’ ಎಂದು ನಾಮಕರಣಗೊಂಡಿದ್ದು ಅವರಲ್ಲಿ ವ್ಯಥೆಯನ್ನುಳಿಸಿತ್ತು. 1973ರ ನವಂಬರ್ 01 ರಂದು ನವ ಮೈಸೂರು ರಾಜ್ಯಕ್ಕೆ ‘ಕರ್ನಾಟಕ’ ಎಂದು ಮರುನಾಮಕರಣವಾದ ಸಂದರ್ಭದಲ್ಲಿ ಅವರಿರಲಿಲ್ಲ ಎಂಬುದು ಖೇದದ ಸಂಗತಿ. ಆದರೆ ಅವರ ಅಖಂಡ ಕರ್ನಾಟಕದ ನಿರ್ಮಾಣದ ಸಾಕಾರತೆಯು ಅವರ ಆತ್ಮಕ್ಕೆ ಚಿರಶಾಂತಿ ದೊರಕಿಸಿತು.

ಕನ್ನಡ ನಾಡು–ನುಡಿಯ ಬಗ್ಗೆ ಕುವೆಂಪು ಅವರು ಹೊಂದಿದ್ದ ಪ್ರೇಮ ಅಪಾರ. ತಮ್ಮ ಕಾವ್ಯ ಸೃಷ್ಟಿಯ ಮೂಲಕ ಅಖಂಡ ಕರ್ನಾಟಕ ನಿರ್ಮಾಣದ ಆಶಯ ಹೊಂದಿದ್ದ ಕುವೆಂಪು ಅವರ ಪ್ರಾರಂಭದ ಕವನಗಳು ಸೌಂದರ್ಯದ ಆರಾಧನೆಯಿಂದ ಕೂಡಿದ್ದರೂ ಮುಂದೆ ಕನ್ನಡ ನಾಡು–ನುಡಿಯ ಅಭಿಮಾನಗಳು ಒಡಮೂಡಿ ನಿಂತವು. ಸ್ವಾತಂತ್ರ್ಯ ಹಾಗೂ ಏಕೀಕರಣ ಎರಡೂ ವಿಚಾರಗಳನ್ನು, ದೇಶಾಭಿಮಾನ ಹಾಗೂ ಭಾಷಾಭಿಮಾನವನ್ನು 1924ರಲ್ಲಿ ರಚಿಸಿದ "ಜಯ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ" ಎಂಬ ಗೀತೆಯಲ್ಲಿ ಅಭಿವ್ಯಕ್ತಿಸಿದರು. ಆ ಮೂಲಕ ಒಂದನ್ನು ಬಿಟ್ಟು ಮತ್ತೊಂದಿಲ್ಲ, ಒಂದರ ಹಿತ ಮತ್ತೊಂದರಲ್ಲಿದೆ ಎಂದು ತೋರಿಸಿಕೊಟ್ಟರು.

1936ರಲ್ಲಿ ರಚಿಸಿದ ಅವರ 'ಕನ್ನಡಕೆ ಹೋರಾಡು ಕನ್ನಡದ ಕಂದಾ' ಎಂಬ ಕವಿತೆಯಲ್ಲಿಯೂ ಜನತೆಯನ್ನು ಭಾಷಾ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಪ್ರೇರಣೆಯನ್ನು, ಕನ್ನಡ ನಾಡಿನ ರಚನೆಗಾಗಿ ಹೋರಾಟದ ಅನಿವಾರ್ಯತೆಯನ್ನು ಮೂಡಿಸಿದ್ದಾರೆ. "ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು"(1941) ಎಂಬ ಕವನದಲ್ಲಿಯೂ ಕನ್ನಡದ ಮೂಲಕ ಕಟ್ಟಿಕೊಳ್ಳಬೇಕಾದ ವಿಶ್ವಪ್ರಜ್ಞೆಯನ್ನು, ಚಿಂತನೆಯನ್ನು ಅಭಿವ್ಯಕ್ತಿಸಿದ್ದಾರೆ.

1947ರಲ್ಲಿ ಭಾರತ ಸ್ವಾತಂತ್ರ್ಯಗೊಂಡರೂ ಕರ್ನಾಟಕದ ಪಾಲಿಗೆ ಭಾಷಾವಾರು ಪ್ರಾಂತ್ಯ ರಚನೆಗೊಳ್ಳದೆ ಸಂತೋಷ ಎಂಬುದು ಪೂರ್ಣಗೊಳ್ಳಲಿಲ್ಲ. ಆ ಸಂದರ್ಭದಲ್ಲಿ ಕುವೆಂಪು ಅವರು ಏಕೀಕರಣವನ್ನು ಬೆಂಬಲಿಸಿ ಅನೇಕ ವೇದಿಕೆಗಳಲ್ಲಿ ಸರ್ಕಾರವನ್ನು ಕಟುವಾಗಿ ಟೀಕಿಸುತ್ತಿದ್ದರು. ಈ ಸಂದರ್ಭದಲ್ಲಿ ಅವರ ನಾಡು–ನುಡಿ ಚಿಂತನೆಗಳು ಕನ್ನಡಿಗರನ್ನು ಪ್ರೇರೇಪಿಸುತ್ತಿವೆ ಎಂಬ ಕಾರಣಕ್ಕೆ ಮೈಸೂರು ಸರ್ಕಾರ ಕುವೆಂಪು ಅವರಿಗೆ ವಿದ್ಯಾ ಇಲಾಖೆಯ ಮೂಲಕ ನಿಮ್ಮ ಮೇಲೆ ಶಿಸ್ತು ಕ್ರಮ ಏಕೆ ಕೈಗೊಳ್ಳಬಾರದು ಎಂದು ಎಚ್ಚರಿಕೆಯ ನೋಟಿಸು ನೀಡುತ್ತದೆ. ಅದಕ್ಕೆ ಉತ್ತರ ಎಂಬಂತೆ 1949ರಲ್ಲಿ 'ಅಖಂಡ ಕರ್ನಾಟಕ' ಎಂಬ ಕವಿತೆ ರಚಿಸಿದರು.

**"ಅಖಂಡ ಕರ್ನಾಟಕ**
**ಅಲ್ತೊ ನಮ್ಮ ನಾಲ್ಕು ದಿನದ ರಾಜಕೀಯ ನಾಟಕ!**
**.............................**
**ಸರಸ್ವತಿಯೆ ರಚಿಸಿದೊಂದು**
**ನಿತ್ಯ ಸಚಿವಮಂಡಲ,**
**ತನಗೆ ರುಚಿರ ಕುಂಡಲ!**
**ಅಖಂಡ ಕರ್ನಾಟಕ**
**ಅಲ್ತೊ ನಮ್ಮ ಕೀರ್ತಿ ಶನಿಯ ರಾಜಕೀಯ ನಾಟಕ!"**

ಈ ಕವನದ ಮೂಲಕ ಸರ್ಕಾರಕ್ಕೆ ಒಂದು ರೀತಿಯ ಛಾಟಿ ಏಟನ್ನೆ ನೀಡಿದರು. ಅಲ್ಲದೆ ರಾಜಕೀಯ ಒಗ್ಗೂಡುವಿಕೆಗಿಂತ ಸಾಹಿತಿಗಳ ಬಳಗದಿಂದ ನಾಡು–ನುಡಿಗಳು ಒಂದುಗೂಡಿವೆ ಎಂಬ ಪ್ರತಿಕ್ರಿಯೆ ನೀಡುವುದರೊಟ್ಟಿಗೆ ಸರಸ್ವತಿಯಿಂದ ರಚಿತವಾದ ಕವಿ–ಕಾವ್ಯ ಪರಂಪರೆಯ ನಿತ್ಯ ಸಚಿವ ಮಂಡಲದ ಮುಂದೆ ಕೀರ್ತಿಶನಿಯ ಬೆನ್ನು ಹತ್ತಿರುವ ಅಶಾಶ್ವತ ಮಂತ್ರಿಮಂಡಲದ ನಾಟಕಕ್ಕೆ ಬೆಲೆಯಿಲ್ಲ ಎಂಬ ಇವರ ನಿಲುವಿಗೆ

ಬೆಚ್ಚಿ ಸರ್ಕಾರವೆ ಮುಂದೆ ಆ ನೋಟಿಸನ್ನು ವಾಪಸ್ ತೆಗೆದುಕೊಂಡಿತು. ಇಂತಹ ಸಂದರ್ಭದಲ್ಲಿ ಕರ್ನಾಟಕ ಏಕೀಕರಣದ ಅನಿವಾರ್ಯತೆಯನ್ನು ಮನಗಂಡು ಏಕೀಕರಣವಾಗಲೇಬೇಕೆಂದು ದೀಕ್ಷೆ ತೊಡಲು ಕನ್ನಡಿಗರಿಗೆ ಕರೆ ನೀಡಿದರು.

**"ದೀಕ್ಷೆಯ ತೊಡು ಇಂದೇ**

**ಕಂಕಣ ಕಟ್ಟಿಂದೇ**

**ಕನ್ನಡ ನಾಡೊಂದೇ**

**ಇನ್ನೆಂದೂ ತಾನೊಂದೆ"**

ಎಂದು ಕನ್ನಡನಾಡು ಒಂದಾಗಬೇಕೆಂದು ಬಯಸುವ ಕನ್ನಡಿಗರು ದಿಟ್ಟ ಸಂಕಲ್ಪ ಮಾಡದೆ ಏಕೀಕರಣ ಸಾಧ್ಯವಾಗದ ಮಾತು ಎಂದು ಅವರಿಗೆ ಹೋರಾಟದ ದೀಕ್ಷೆ ತೊಡಿಸಿದರು.

ಸ್ವಾತಂತ್ರ್ಯ ಬಂದ ಒಂಬತ್ತು ವರ್ಷಗಳ ಅನಂತರ ಉದಯವಾದ ಕನ್ನಡನಾಡನ್ನು ಕುರಿತು ಕುವೆಂಪು ಅವರು 'ಕರ್ನಾಟಕ ರಾಜ್ಯೋದಯ ಶ್ರೀಗೀತೆ'ಯನ್ನು ರಚಿಸಿದರು.

**"ಬಾರಮ್ಮ ದೇವಿ**

**ಓ ತಾಯಿ ಭಾರತಿಯೆ, ನಿನ್ನ ಮಗಳನು ಹರಸು**

**ವರುಷ ಒಂಭತ್ತರಾಚೆಯಲಿ ಬಂಧ ಮುಕ್ತಳಾದಂದು ನೀ ಕಂಡ ಕನಸು"** ಎಂದು ಭಾರತಮಾತೆ ಹಾಗೂ ಕನ್ನಡಮ್ಮನ ತಾಯಿ-ಮಗಳ ರೂಪಕವನಿಲ್ಲಿ ಮತ್ತೆ ತಂದರು.

ಕುವೆಂಪು ಅವರು 'ಇಂದಿನ ದೇವರು', 'ನೀ ಮೆಟ್ಟುವ ನೆಲ ಅದೆ ಕರ್ನಾಟಕ', 'ಭಾರತ ತಪಸ್ವಿನಿ', 'ಭಾರಿಸು ಕನ್ನಡ ಡಿಂಡಿಮವ', 'ಪಾಂಚಜನ್ಯ' ಇನ್ನೂ ಹಲವಾರು ಕವನಗಳಲ್ಲಿ ನಾಡು-ನುಡಿಯ ಪ್ರೇಮವನ್ನು ಅಭಿವ್ಯಕ್ತಿಸಿದ್ದಾರೆ.

ಉತ್ತರ ಕರ್ನಾಟಕದ ಆಗು-ಹೋಗುಗಳನ್ನು ಮುಖ್ಯವಾಗಿಸಿಕೊಂಡು ಕನ್ನಡ ಮಾತನ್ನಾಡುವ ಜನರೆಲ್ಲರೂ ಒಂದುಗೂಡಬೇಕೆಂಬ ಕನಸಿನೊಟ್ಟಿಗೆ ಕಾವ್ಯ ರಚಿಸಿದ ದ.ರಾ.ಬೇಂದ್ರೆ ಅವರು ಏಕೀಕರಣಕ್ಕೆ ತಮ್ಮದೇಯಾದ ಕೊಡುಗೆ ನೀಡಿದ್ದಾರೆ. ಮುಂಬೈ ಕರ್ನಾಟಕದ ಧಾರವಾಡದಲ್ಲಿ 'ಗೆಳೆಯರ ಗುಂಪ'ನ್ನು ಕಟ್ಟಿ ಜನತೆಯಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗ್ಗೆ ಪ್ರೇಮ ಬೆಳೆಸುವುದರೊಟ್ಟಿಗೆ ಮರಾಠಿ ಮೋಹವನ್ನು ಕಡಿಮೆ ಮಾಡಲು ಪ್ರಯತ್ನಿಸಿದ ಬೇಂದ್ರೆ ಅವರು ತಮ್ಮ ವಿಶಿಷ್ಟ ಕಾವ್ಯ ಶೈಲಿಯ ಮೂಲಕ ತಮ್ಮ ನಾಡು-ನುಡಿಯ ಬಗ್ಗೆ ಕನ್ನಡಿಗರಿಗೆ ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

ಸ್ವಾತಂತ್ರ್ಯ ಮತ್ತು ಏಕೀಕರಣ ಎರಡನ್ನೂ ಸಮಾನ ದೃಷ್ಟಿಕೋನದಿಂದ ಕಾಣುತ್ತಿದ್ದ ಬೇಂದ್ರೆ ಅವರು "ಇಗೋ; ಹೊರಟೆವು ಬಿಡುಗಡೆಗಾಗಿ, ಬಹರಾರು ನಮಗಿದಿರಾಗಿ" (ಬಿಡುಗಡೆ) ಕವನದಲ್ಲಿ ರಾಷ್ಟ್ರ-ರಾಜ್ಯದ ಉಳಿವಿಗಾಗಿ, ಬಿಡುಗಡೆಗಾಗಿ ಹೋರಾಟದ ಅಗತ್ಯತೆಯನ್ನು, ದೃಢ ನಿಲುವಿನ ಅವಶ್ಯಕತೆಯನ್ನು ವ್ಯಕ್ತಪಡಿಸಿದ್ದಾರೆ.

**"ಏಳು ಶೂರರ ಖಣೀ ಏಳು ಧೀರರ ರಾಣಿ**

**ಏಳು ತೀರದ ವೀರರಸದ ವಾಣಿ**

**ಏಳು ಮೀರಿದ ಜಾಣಿ ಏನು ಈ ಸ್ಥಿತಿಗಾಣಿ**

**ಏಳು ವರವರ ಪಾಣಿ"** (ಕನ್ನಡಿಗರ ಉದಯರಾಗ) ಕವನದ ಮೂಲಕ ಕನ್ನಡಿಗರನ್ನು ಏಕೀಕರಣಕ್ಕಾಗಿ ಬಡಿದೆಬ್ಬಿಸಿದ್ದಾರೆ. ಸ್ವಾತಂತ್ರ್ಯಾನಂತರ ಕರ್ನಾಟಕ ಏಕೀಕರಣದ ಬಗ್ಗೆ

ದ್ವಂದ್ವ ನಿಲುವುಗಳು ಏರ್ಪಟ್ಟ ಸಂದರ್ಭದಲ್ಲಿ,

**"ಬೇಗದಿಂ ಕರುನಾಡ ಹರಕುತನವನ್ನು**

**ಕಳೆದು ಹಿರಿದಾಗೋಣ, ಸೀಮೆಯನು ದಾಟ"** (ಸೀಮೋಲ್ಲಂಘನ) ಎಂದು ಏಕೀಕರಣ ಬಗೆಗಿನ ಪರ–ವಿರೋಧ ನಿಲುವುಗಳನ್ನು ಸರಿಪಡಿಸಿಕೊಳ್ಳಬೇಕಾದ ಅಗತ್ಯತೆಯನ್ನು ತಿಳಿಸುವುದರೊಟ್ಟಿಗೆ ಕನ್ನಡಿಗರೆಲ್ಲರೂ ಒಂದೇ ನಾಡಿನ ಎಲ್ಲೆಯೊಳಗೆ ಇರಬೇಕೆಂಬ ಆಶಯ ವ್ಯಕ್ತಪಡಿಸಿದ್ದಾರೆ.

**"ಒಂದೇ ಒಂದೇ ಕರ್ನಾಟಕ ಒಂದೇ**

**ಜಗದೇಳಿಗೆಯಾಗುವುದಿದೆ ಕರ್ನಾಟಕದಿಂದೆ"**

ಕವನದಲ್ಲಿ ಬೇಂದ್ರೆ ಅವರ ವಿಶ್ವವ್ಯಾಪಕವಾದ ವಿಶಾಲದೃಷ್ಟಿಯ ಅನಾವರಣವಿದೆ.

ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಪ್ರಮುಖರಾದ ಮತ್ತೋರ್ವ ಸಾಹಿತಿ 'ಕನ್ನಡದ ಕಣ್ವ' ಎಂದು ಹೆಸರಾದ ಬಿ.ಎಂ.ಶ್ರೀಕಂಠಯ್ಯ. ಇವರು 'ಹಾರಿಸಿ ಹಾರಿಸಿ ಕನ್ನಡ ಬಾವುಟ' ಎಂಬ ಕವಿತೆ ರಚಿಸುವುದರೊಟ್ಟಿಗೆ ಪ್ರಾಚೀನ ಕವಿಗಳಿಂದ ಮೊದಲ್ಗೊಂಡು ಆಧುನಿಕ ಕಾಲಘಟ್ಟದ ಕವಿಗಳು ಕಂಡ ಕರ್ನಾಟಕವನ್ನು, ಕನ್ನಡ ನಾಡು–ನುಡಿಯ ಬಗೆಗಿನ ಕವನಗಳ ಸಂಕಲನವನ್ನು ಹೊರತಂದರು. ಅದೇ 'ಕನ್ನಡದ ಬಾವುಟ'. ಈ ಕನ್ನಡದ ಬಾವುಟವನ್ನು ಹಿಡಿದು ಕನ್ನಡ ನಾಡನ್ನೆಲ್ಲ ಸುತ್ತಿ ಕನ್ನಡ ಜನಮಾನಸದಲ್ಲಿ ಕನ್ನಡ ಪ್ರಜ್ಞೆಯನ್ನು ಭಿತ್ತಿ ತನ್ಮೂಲಕ ಕರ್ನಾಟಕ ಏಕೀಕರಣದ ಹೋರಾಟಕ್ಕೆ ಅವರನ್ನು ಅಣಿಗೊಳಿಸಿದರು. ಬಿ.ಎಂ.ಶ್ರೀ ಅವರು ತಮ್ಮ 'ಕನ್ನಡ ತಾಯ ನೋಟ' ಕವನದಲ್ಲಿ

**"ಸಿರಿಗನ್ನಡಂ ಗೆಲ್ಗೆ, ಹಿರಿಗನ್ನಡಂ ಗೆಲ್ಗೆ**

**ಸಿರಿಗನ್ನಡಂ ಗೆಲ್ಗೆ, ಬಾಳ್ಗೆ**

**ಕನ್ನಡ ತಾಯ್ ಗೆಲ್ಗೆ, ಬಾಳ್ಗೆ"** ಎಂದು ಹಾರೈಸಿದ್ದಾರೆ. ಅಲ್ಲದೆ ಇವರ ಕಾಣಿಕೆ, ಮೈಸೂರು ಮಕ್ಕಳು, ಭಾರತ ಮಾತೆಯ ಪ್ರಾರ್ಥನೆ ಕವನಗಳಲ್ಲೂ ನಾಡು–ನುಡಿಯ ಅಭಿಮಾನ ಹೊರಹೊಮ್ಮಿದೆ.

ಭಾಷೆಯ ಆಧಾರದ ಮೇಲೆ ಕನ್ನಡ ನಾಡಿನ ನಿರ್ಮಾಣಕ್ಕಾಗಿ ಏಕೀಕರಣದ ಸಂದರ್ಭದಲ್ಲಿ ಹಾಗೂ ನಂತರವೂ ಕೂಡ ಇನ್ನು ಹಲವಾರು ಸಾಹಿತಿಗಳು ತಮ್ಮ ಕಾವ್ಯಗಳ ಮೂಲಕ ಜನತೆಯಲ್ಲಿ ನಾಡು–ನುಡಿಯ ಅಭಿಮಾನವನ್ನು ಸಾಕ್ಷಾತ್ಕರಿಸಿದರು. ಅಡಿಗರ 'ಕಟ್ಟುವೆವು ನಾವು', 'ರಾಜ್ಯ ಬಂದರೇನು', 'ಓ ನನ್ನ ಜನವೇ' ಕವನಗಳು, ಚನ್ನವೀರ ಕಣವಿ ಅವರ 'ಹೆಸರಾಯಿತು ಕರ್ನಾಟಕ', 'ಕನ್ನಡ ರಾಜ್ಯೋತ್ಸವ', 'ಕನ್ನಡ ಜ್ಯೋತಿಯ ದೀಪಗಳು', ಆನಂದಕಂದರ 'ಅರುಣೋದಯ', 'ನಾವು ಭಾರತೀಯರು', 'ನನ್ನದು ಈ ಕನ್ನಡ ನಾಡು', ಡಿ.ಎಸ್.ಕರ್ಕಿ ಅವರ 'ಹಚ್ಚೇವು ಕನ್ನಡದ ದೀಪ', ಡಿ.ವಿ.ಜಿ ಅವರ 'ಬೇಲೂರಿನ ಶಿಲಾಬಾಲಿಕೆಯರು', ವಿ.ಕೃ.ಗೋಕಾಕರ 'ಏಕೀಕೃತ ಕರ್ನಾಟಕ', 'ನನ್ನ ಕರ್ನಾಟಕ', ಎಂ.ಗೋವಿಂದ ಪೈ ಅವರ 'ಕನ್ನಡಿಗರ ತಾಯಿ', ಜಯದೇವಿ ತಾಯಿ ಲಿಗಾಡೆ ಅವರ 'ನಮ್ಮ ಭಾರತ', ದಿನಕರ ದೇಸಾಯಿ ಅವರ 'ಏಕೀಕೃತ ಕರ್ನಾಟಕ ಚೌಪದಿಗಳು', ಪು.ತಿ.ನ ಅವರ 'ಕನ್ನಡ ನಾಡು', 'ಬಾ ಕನ್ನಡ ನಾಡಿನ ವಾಣಿ', ಕೆ.ಎಸ್.ನರಸಿಂಹಸ್ವಾಮಿ ಅವರ 'ಕರ್ನಾಟಕ ಗೀತ', 'ಕರ್ನಾಟಕ ರಾಜ್ಯೋತ್ಸವ', ಜಿಪಿ.ರಾಜರತ್ನಂ ಅವರ 'ಕನ್ನಡ ಪದಗೊಳ್', 'ಮಡಿಕೇರೀಲಿ ರತ್ನ', ತೀ.ನಂ.ಶ್ರೀಕಂಠಯ್ಯ ಅವರ 'ಸ್ವಾಗತ', 'ಕನ್ನಡಿಗನ ಕೊರಗು', ಮಾಸ್ತಿ ಅವರ 'ಎಮ್ಮ ಕನ್ನಡಂ', 'ಎಮ್ಮ ನಾಡವರ್', 'ಭಾರತ ವರ್ಷ',

ಬಿ.ಎ.ಸನದಿ ಅವರ 'ನಾಡು ಒಂದಾಯಿತು', ವಿ.ಸೀತಾರಾಮಯ್ಯ ಅವರ 'ನಾಡ ತಾಯಿ', 'ಕನ್ನಡ ನಾಡು' ಹೀಗೆ ಇನ್ನೂ ಹಲವು ಕವಿವರ್ಯರು ತಮ್ಮ ಕವನಗಳ ಮೂಲಕ ಜನತೆಯಲ್ಲಿ ಏಕೀಕರಣದ ಪ್ರಜ್ಞೆಯನ್ನು ಮೂಡಿಸಿದರು. ಇವರುಗಳು ಕೈಗೊಂಡ ಕನ್ನಡ ಕೈಂಕರ್ಯ ಅನನ್ಯ ಮತ್ತು ಅಮೋಘ.

ಭಾಷಾ ಚಳವಳಿಯಲ್ಲಿ ಪತ್ರಿಕಾ ಮಾಧ್ಯಮ ಹಾಗೂ ಸಾಂಸ್ಕೃತಿಕ ಸಂಘಟನೆಗಳೊಂದಿಗೆ ಸಾಹಿತ್ಯ ನಿರ್ವಹಿಸಿದ ಪಾತ್ರ ಮಹತ್ವಪೂರ್ಣವಾದುದು. ರಾಜಕೀಯಕ್ಕಿಂತಲೂ ಸಾಂಸ್ಕೃತಿಕ ಬೆಸುಗೆಯ ಅನಿವಾರ್ಯತೆಯ ಅರಿವಿನಿಂದ ಅಂದಿನ ಸಾಹಿತಿಗಳು, ಕಲಾವಿದರು, ಪತ್ರಕರ್ತರು ತಮ್ಮ ಪತ್ರಿಕೆಗಳು, ಕವನಗಳು, ಲೇಖನಗಳ ಮೂಲಕ ಭಾಷಾತತ್ತ್ವದಡಿಯಲ್ಲಿ ಕನ್ನಡ ಪ್ರಾಂತ್ಯಗಳೆಲ್ಲವೂ ಒಂದುಗೂಡಿ ಏಕೀಕರಣ ಆಗಲೇಬೇಕೆಂದು ಸಾಹಿತ್ಯದ ಮೂಲಕ ಕನ್ನಡಿಗರನ್ನು ಭಾವನಾತ್ಮಕವಾಗಿ ಒಂದುಗೂಡಿಸಿದ, ಜಾಗೃತಗೊಳಿಸಿದ ಕಾರ್ಯ ಅನನ್ಯ. ಕರ್ನಾಟಕ ಏಕೀಕರಣದ ರುವಾರಿಗಳಾದ ಡೆಪ್ಯುಟಿ ಚನ್ನಬಸಪ್ಪ, ಆಲೂರು ವೆಂಕಟರಾಯ, ಮುದವೀಡು ಕೃಷ್ಣರಾವ್, ಹರ್ಡೇಕರ್ ಮಂಜಪ್ಪ, ಎನ್.ಎಸ್.ಹರ್ಡೀಕರ್, ಗಂಗಾಧರರಾವ್ ದೇಶಪಾಂಡೆ, ಸಿದ್ಧಪ್ಪ ಕಂಬಳಿ, ಶ್ರೀನಿವಾಸ ಕೌಜಲಗಿ, ಬೆನಗಲ್ ರಾಮರಾಯರು, ಇನ್ನೂ ಮೊದಲಾದ ಹೋರಾಟಗಾರರ ನಾಡು-ನುಡಿಯ ಅಸ್ಥಿತ್ವಕ್ಕಾಗಿನ ಹೋರಾಟದಲ್ಲಿ ಅವರೊಟ್ಟಿಗೆ ಹೆಗಲೆಣೆಯಾಗಿ ನಿಲ್ಲುವಂತಹವು ಇಂತಹ ಮಹನೀಯರು ಸ್ಥಾಪಿಸಿದ ಸಂಘ ಸಂಸ್ಥೆಗಳು, ಪತ್ರಿಕೆಗಳು, ಅವುಗಳ ಸಹಯೋಗದಲ್ಲಿ ಸಾಹಿತಿಗಳು ಭಾರಿಸಿದ ಕನ್ನಡದ ಡಿಂಡಿಮ. ಈ ಹೋರಾಟಗಾರರು, ಸಂಸ್ಥೆಗಳು, ಪತ್ರಿಕೆಗಳು, ಸಾಹಿತಿಗಳು ಒಟ್ಟಾಗಿ ಜನತೆಯಲ್ಲಿ ಏಕೀಕರಣ ಎಂಬ ಮಂತ್ರದೀಕ್ಷೆಯನ್ನು ತೊಡಿಸಿದುದರ ಫಲವೇ ಇಂದು ಆಚರಿಸುತ್ತಿರುವ ಕನ್ನಡ ರಾಜ್ಯೋತ್ಸವದ ಸಂಭ್ರಮ.

**ಪರಾಮರ್ಶನ ಕೃತಿಗಳು**


1. ಡಾ.ಸಿ.ಆರ್.ಗೋವಿಂದರಾಜು - ಕರ್ನಾಟಕ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ - ಎಸ್‌ಬಿಎಸ್ ಪಬ್ಲಿಷರ್ ಡಿಸ್ಟ್ರಿಬ್ಯೂಟರ್ - (ಬೆಂಗಳೂರು 2020)
2. ಡಾ.ಸಿ.ಆರ್.ಗೋವಿಂದರಾಜು - ಕರ್ನಾಟಕ ಏಕೀಕರಣ ಹಾಗೂ ನಾಮಕರಣ-ಪ್ರಕಟಣೆ: ಕರ್ನಾಟಕ ವಿಧಾನ ಮಂಡಲ ಗ್ರಂಥಾಲಯ ಸಮಿತಿ - (ಬೆಂ. 2005)
3. ಡಾ.ಎಲ್. ಹನುಮಂತಯ್ಯ (ಪ್ರ.ಸಂ.), ಡಾ.ವಿ.ಚಂದ್ರಶೇಖರ ನಂಗಲಿ (ಸಂ) - ಕುವೆಂಪು ವಿರಚಿತ ಕನ್ನಡ ಭಾಷಾ ಸಂವಿಧಾನ - (ಬೆಂ. 2015)
4. ಬಿ.ಎಂ.ಶ್ರೀಕಂಠಯ್ಯ (ಸಂ) -ಕನ್ನಟದ ಬಾವುಟ-ಕನ್ನಡ ಸಾಹಿತ್ಯ ಪರಿಷತ್ತು-(ಬೆಂ 2008)
5. ಪ್ರೊ.ಸಿ.ಎನ್.ಲೋಕಪ್ಪಗೌಡ - ಆಧುನಿಕ ಕರ್ನಾಟಕ (1761-2009) -ರೇಣುಕ ಪ್ರಕಾಶನ (ಹಾಸನ, ನವೆಂಬರ್ 2011)
6. ಎಲ್.ಎಸ್.ಶೇಷಗಿರಿರಾವ್, ಡಾ.ಎಂ.ಚಿದಾನಂದ ಮೂರ್ತಿ, ರಾ.ನಂ.ಚಂದ್ರಶೇಖರ (ಸಂ) - 'ಕನ್ನಡ - ಕನ್ನಡಿಗ - ಕರ್ನಾಟಕ' - ಸಪ್ನ ಬುಕ್ ಹೌಸ್ - (ಬೆಂ. ಜೂನ್ 2010)
7. ಡಾ.ಸೂರ್ಯನಾಥ ಕಾಮತ್ - ಕರ್ನಾಟಕದ ಸಂಕ್ಷಿಪ್ತ ಇತಿಹಾಸ - ಎಂ ಸಿ ಸಿ ಪಬ್ಲಿಕೇಷನ್ಸ್ -(ಬೆಂ. 2011)
8. ರಾಧಾ ಕುಲಕರ್ಣಿ - ನಾಡಗೀತೆ ನೀಡಿದ ನಾರಾಯಣರಾಯರ ನಾಡನೆಚ್ಚು - ವಿಜಯ ಕರ್ನಾಟಕ ಪತ್ರಿಕೆ - 29-01-2012.


❖❖❖

# ಪಂಪನ ಆದಿಪುರಾಣ – ಕಾವ್ಯಧರ್ಮ ಒಂದು ವಿವೇಚನೆ

**ಡಾ. ಮಾದಯ್ಯ ಮಾಕನಹಳ್ಳಿ**
ಸಹ ಪ್ರಾಧ್ಯಾಪಕರು, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ

ಪಂಪನು ಕನ್ನಡದ ಆದಿಕವಿಯೆಂದು ಪ್ರಸಿದ್ಧನಾಗಿದ್ದಾನೆ. ಪಂಪನ ಮನೆತನದ ಪರಂಪರೆ ವೈದಿಕವಾಗಿದೆ. ಇವರ ಮನೆತನವೆಲ್ಲ ಯಜ್ಞ ಯಾಗಗಳನ್ನು ಮಾಡಿದ ವೈದಿಕ ಬ್ರಾಹ್ಮಣರದು. ಪಂಪನ ತಂದೆ ಭೀಮಪ್ಪಯ್ಯ ಮೊಟ್ಟಮೊದಲು ಬ್ರಾಹ್ಮಣ ಜಾತಿಯನ್ನು ಬಿಡದೆ ಜೈನ ಧರ್ಮವನ್ನು ಸ್ವೀಕರಿಸಿದನು. ಪಂಪನಲ್ಲಿಯೂ ವೈದಿಕ–ಜೈನ ಈ ಎರಡು ಪರಂಪರೆಗಳಲ್ಲಿಯ ಉತ್ತಮ ಸಂಸ್ಕಾರಗಳು ನೆಲೆಗೊಂಡವು. ಜೊತೆಗೆ ಜೈನಧರ್ಮವೇ ಉತ್ತಮವೆಂಬ ಮನವರಿಕೆಯೂ ದೃಢವಾಯಿತು.

ಪಂಪನು ತನ್ನೆರೆಡು ಕೃತಿಗಳಾದ 'ಆದಿಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯ' (ಪಂಪಭಾರತ) ಇವುಗಳನ್ನು ಕ್ರಮವಾಗಿ ಆಗಮಿಕ ಅಂದರೆ ಧಾರ್ಮಿಕ ಮತ್ತು ಲೌಕಿಕ ಎಂಬ ಎರಡು ಪ್ರಕಾರಗಳನ್ನು ಉದ್ದೇಶಪೂರ್ವಕವಾಗಿ ಅನುಸರಿಸಿದನು. "ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ" ಎಂದು ಪಂಪಭಾರತದಲ್ಲಿ ಅವನೇ ಹೇಳಿದ್ದಾನೆ. ಎರಡನ್ನೂ ಪ್ರೌಢ ಚಂಪೂಗ್ರಂಥಗಳಾಗಿ ರಚಿಸಿದನು. ಅವುಗಳ ಕಥಾನಕಕ್ಕೆ ಹಿಂದಿನ ಆಕರಗಳನ್ನು ಉಪಯೋಗಿಸಿಕೊಂಡನು. ಹೀಗೆ ಪೂರ್ವಸಾಮಗ್ರಿಯನ್ನು ಬಳಸಿಯೂ ಅಭಿವ್ಯಕ್ತಿಯಲ್ಲಿ ಅಪೂರ್ವವಾದ ಕಾವ್ಯಗಳನ್ನು ನಿರ್ಮಾಣ ಮಾಡಿದನು. ಪಂಪನ ಮಾರ್ಗವೊಂದು ಪಂಪನ ಯುಗದಲ್ಲಿ ರೂಢವಾಯಿತು.

**ಪಂಪನ ಆದಿಪುರಾಣದಲ್ಲಿರುವ ಜೈನಧರ್ಮ ಮತ್ತು ಕಾವ್ಯಧರ್ಮದ ಸಾರ**

'ಆದಿಪುರಾಣ'ವು ಪಂಪನ ಆದಿಕೃತಿ. ಸು. 40ರ ವಯಸ್ಸಿನಲ್ಲಿಯೇ ಅವರು ಪಡೆದ ವಿದ್ವತ್ ವಿವೇಕಗಳ ಪ್ರತೀಕವಾದ ಕೃತಿ. ಈ ಗ್ರಂಥದ ಪೀಠಿಕಾಭಾಗದಲ್ಲಿ ತನ್ನ ಆಕರಗಳನ್ನು ಹೇಳಿದ್ದಾನೆ. ಅದರಲ್ಲಿ ಮುಖ್ಯವಾದುದು ಜಿನಸೇನಾಚಾರ್ಯನ ಸಂಸ್ಕೃತ 'ಪೂರ್ವಪುರಾಣ', ಅಲ್ಲಿಯ ಮೊದಲನೆಯ ತೀರ್ಥಂಕರನ ವಿಸ್ತಾರವಾದ ಚರಿತ್ರೆ ಇಲ್ಲಿಯ ವಿಷಯವಾಗಿದೆ. ಮತನಿಷ್ಠೆಯಿಂದ ತನ್ನ ಕೈಗಳನ್ನು ತಾನೇ ಕಟ್ಟಿಕೊಂಡು ಪಂಪನು ಆಕರವನ್ನು ಯಥಾವತ್ತಾಗಿ ಅನುಕರಿಸಿದ್ದಾನೆ. ಕಥಾವಸ್ತು, ಕಥನಕ್ರಮ, ಭಾವಸಂಪತ್ತಿ, ಮತೀಯ ತತ್ತ್ವಬೋಧೆ ಈ ಎಲ್ಲದರಲ್ಲಿಯೂ 'ಆದಿಪುರಾಣ'ವು ಪೂರ್ವಪುರಾಣಕ್ಕೆ ಋಣಿಯಾಗಿದೆ. ಇಷ್ಟು ಪರತಂತ್ರವಾದರೂ ಗ್ರಂಥನ ಕೌಶಲ್ಯದಿಂದ ಒಟ್ಟಿನಲ್ಲಿ ಅದು ಸ್ವತಂತ್ರ ಕಳೆಯನ್ನು ಪಡೆದಿರುತ್ತದೆ. ಎರಡೂ ಜೈನಪುರಾಣಗಳು, ಎರಡರಲ್ಲಿಯೂ ಕಾವ್ಯ ಸತ್ತ್ವವಿದೆ. ಆದರೆ 'ಪೂರ್ವಪುರಾಣ'ದಲ್ಲಿ ಕಾವ್ಯಕ್ಕಿಂತ ಪುರಾಣದೃಷ್ಟಿ ಹೆಚ್ಚಾಗಿದೆ; 'ಆದಿಪುರಾಣ'ದಲ್ಲಿ ಪುರಾಣಕ್ಕಿಂತ ಕಾವ್ಯದೃಷ್ಟಿ ಹೆಚ್ಚಾಗಿದೆ.

'ನೆಗಟ್ದಾದಿಪುರಾಣದೊಳಜೆವುದು ಕಾವ್ಯಧರ್ಮಮಂ ಧರ್ಮಮುಮಂ' ಎಂದು ಪಂಪನು ಮಾಡಿದ ಘೋಷಣೆ ಬಹುಮಟ್ಟಿಗೆ ಸಾರ್ಥಕವಾಗಿದೆ. ಸನ್ನಿವೇಶ ರಚನೆ, ಪಾತ್ರ ನಿರೂಪಣೆ, ಮತ ವಿವರಣೆಗಳಲ್ಲಿ ಕಾವ್ಯಧರ್ಮ ಮತ್ತು ಧರ್ಮಗಳ ಸಮನ್ವಯವನ್ನು

ಸಾಧಿಸಲಾಗಿದೆ. ಪ್ರೌಢಕಾವ್ಯ ರಚನೆಯ ಪ್ರಥಮಾವೇಶದಲ್ಲಿ ಸಂಸ್ಕೃತ ಪಾಂಡಿತ್ಯದ ಪ್ರದರ್ಶನ, ನೀರಸವಾದ ವಿವರಣೆಗಳು ತಲೆದೋರಿವೆ. ಇದಕ್ಕೆ ಮಹಾಬಲ ರಾಜನ ಓಲಗದಲ್ಲಿ ನಡೆದ ತಾತ್ವಿಕ ವಿವಾದವೂ ಒಂದು ಒಳ್ಳೆಯ ನಿದರ್ಶನ. ಮೂಲದಲ್ಲಿಯ ಈ ಭಾಗವನ್ನು ಸಂಗ್ರಹಿಸುವಲ್ಲಿ ಕವಿಯ ರಸದೃಷ್ಟಿ ಫಲಿಸದಂತೆ ವಿದ್ವತ್ತೆಯೂ ಮೆರೆದಿದೆ. ಚಾರ್ವಾಕ ದರ್ಶನದ ಸಾರವು "ಬಾಲ್ವೆನಮಿಂದ್ರಿಯವರ್ಗದಿಚ್ಚೆಯಂ ಸಲಿಸಿ ಬಸಂತದೊಳ್ ಕಳಚಿಗರ್ಚಿದ ಕೋಗಿಲೆಯಂತೆ ಬಿಚ್ಚತಂ ನಲಿವುದು" ಎಂಬಲ್ಲಿ ಸೊಗಸಾಗಿ ಬಂದಿದೆ. ಆದರೆ ಮುಂದಿನ ವಚನದಲ್ಲಿ ಬಂದಿರುವ ವಿಜ್ಞಾನವಾದ – ನಿರೂಪಣೆ ಅತಿವಿದ್ವತ್ತೆಯಿಂದ ಕೂಡಿದೆ. ಒಂದೊಂದು ತನ್ನ ಹಿಂದಿನ ಭವಗಳಲ್ಲಿ ಭೋಗದ ತರತಮ ಸೋಪಾನಗಳನ್ನೇರುತ್ತ ಪ್ರೇಮದರ್ಶನದಲ್ಲಿ ಮುಂದುವರಿಯುತ್ತ ನಡೆದಿರುವ ಪುರುದೇವನ ಚರಿತ್ರೆಯಲ್ಲಿ ಅಲ್ಲಲ್ಲಿ ಚೆಲುವಾದ ರಸಸ್ಥಾನಗಳಿರುತ್ತವೆ. ಎಲ್ಲಕ್ಕಿಂತ ಹೆಚ್ಚು ರಮ್ಯವಾದುದು ಕೊನೆಯ ಜನ್ಮದಲ್ಲಿ ಸುಖದ ತುತ್ತತುದಿಯಲ್ಲಿರುವಾಗ ಅವನು ವೈರಾಗ್ಯ ಹೊಂದಿದ ಸನ್ನಿವೇಶ. ಅದೇ ನೀಲಾಂಜನೆಯ ನೃತ್ಯ ಸಂದರ್ಭ. ಇಲ್ಲಿ ಕಾವ್ಯಧರ್ಮ ಮತ್ತು ಧರ್ಮಗಳು ಪಡೆದ ಸಮನ್ವಯವು ಸಂಪೂರ್ಣವಾಗಿದೆ. ಆ ಅಮರನರ್ತಕಿಯ ರೂಪು ಬೆಡಗುಗಳ ಮತ್ತು ಕುಣಿತದ ವರ್ತನೆಯಲ್ಲಿ ಪಂಪನ ಕಲ್ಪನಾಶಕ್ತಿ ಕಾರಂಜಿಯಂತೆ ಪದ್ಯ ಪದ್ಯದಲ್ಲಿ ಪುಟಿದಿದೆ. ಭೋಗದ ಅತಿಶಯವು ವೈರಾಗ್ಯದ ಅತಿಶಯಕ್ಕೆ ಕಾರಣವಾಯಿತು ಎಂಬುದನ್ನು ಈ ಸನ್ನಿವೇಶ ಸೂಚಿಸುತ್ತದೆ.

**ಕೋಟಿತೆಱದಿಂದಮೆಸೆವೀ**
**ನಾಟಕಮಂ ತೋಱಿ ಮಾಣ್ದಳಿಲ್ಲನ್ ಬಗೆಯೊಳ್ ।**
**ನಾಟುವಿನಮರಿ ಸಂಸ್ಕೃತಿ**
**ನಾಟಕಮುಮನೆನಗೆ ನೆಱಿಯೆ ತೋಱಿದಳೀಗಳ್ ॥ (9–45)**

ಈ ಭಾಗವು ಅರ್ಥಪೂರ್ಣವಾಗಿದೆ. 'ಪೂರ್ವಪುರಾಣ'ದಲ್ಲಿಯ ಈ ಸಂದರ್ಭವನ್ನು 'ಆದಿಪುರಾಣ'ದ ರಸಸೃಷ್ಟಿಯೊಡನೆ ಹೋಲಿಸಿ ನೋಡಿದರೆ ಪಂಪನ ಅಪೂರ್ವ ಪ್ರತಿಭೆಯನ್ನು ಮನಗಾಣಬಹುದು. ಒಂದರಲ್ಲಿ ಪ್ರಾಚೀನ ಪುರಾಣದ ಸಾಂಪ್ರದಾಯಿಕ ಬೋಧನೆಯಿದ್ದರೆ ಇನ್ನೊಂದರಲ್ಲಿ ಮಾರ್ಗಕಾವ್ಯದ ರಸಪೂರ್ತಿಯಿದೆ. 'ಆದಿಪುರಾಣ'ದ ಕಥಾವಸ್ತುವಿಗೆ ಅನುಗುಣವಾಗಿ ಪಾತ್ರ ರಚನೆ ವ್ಯಾಪಕವಾಗಿದೆ. ಆದಿನಾಥನ ವಿಷಯದಲ್ಲಿ ಅದು ರೂಢವಾದ ಅರ್ಥದಲ್ಲಿ ಪಾತ್ರರಚನೆಯೇ ಅಲ್ಲವೆನ್ನಬಹುದು. ಜನ್ಮದಿಂದ ಜನ್ಮಕ್ಕೆ ಬೆಳೆಯುತ್ತ ಬಂದ ಜೀವನದ ಜನ್ಮಯಾತ್ರೆಯದು, ಮಾನವನು ಆತ್ಮವಿಕಾಸದಿಂದ ದೇವನಾದ ಕಥೆಯದು. ಈ ಆದರ್ಶಸಿದ್ಧಿ ಗೃಹೀತವಾದದ್ದಾದರೂ ಸಾಂಪ್ರದಾಯಿಕ ರೀತಿಯಲ್ಲಿಯೂ ಸಾಂಕೇತಿಕವಾದ, ಸಾರ್ವತ್ರಿಕವಾದ ಒಂದು ಬಗೆಯ ಶ್ರಮವಿದೆ, ಸಾಧನೆಯಿದೆ, ವಿಕಾಸವಿದೆ. ಒಂದೊಂದು ಜನ್ಮದ ಚರಿತ್ರೆಯನ್ನು ಮಾತ್ರ ನೋಡಿದರೆ ಸಹ ಲಲಿತಾಂಗ – ಸ್ವಯಂಪ್ರಭೆಯರ ಅತೃಪ್ತಭೋಗ, ಪ್ರಣಯ ವಿರಹಗಳು, ವಜ್ರಜಂಘ–ಶ್ರೀಮತಿಯವರ ಭೋಗತೃಪ್ತಿ, ಸಹಮರಣಗಳು ಉತ್ಕಟ ರಸಚಿತ್ರಗಳಾಗಿ ಬಂದಿವೆ. ಇಲ್ಲಿಯ ಮಾನವತೆ ಬರಲಿರುವ ಆದಿನಾಥನ ದಿವ್ಯತೆಗೆ, ಸಮ್ಯಕ್ತ್ವಸಿದ್ಧಿಗೆ ಸುಂದರವಾದ ಹಿನ್ನೆಲೆಯನ್ನು ಒದಗಿಸಿರುತ್ತದೆ. ಜೈನಶಾಸ್ತ್ರ ಪುರಾಣ, ಸಂಪ್ರದಾಯ ಇವುಗಳ ಜಾಲದಲ್ಲಿ ಸಿಕ್ಕಿದ್ದರೂ ಪಂಪನು ಅವುಗಳಿಗೆ ಒಟ್ಟಿನಲ್ಲ ಪರಾಧೀನನಾಗದೆ ಕಲಾವಿದನ ರೀತಿಯಲ್ಲಿ ಅವನ್ನು

ಬಳಸಿಕೊಂಡಿದ್ದಾನೆ. ತೀರ್ಥಂಕರನಾಗತಕ್ಕ ಪುರದೇವನ ಪಂಚ ಕಲ್ಯಾಣ ಇಲ್ಲವೆ ಜೀವನದ ಐದು ಘಟ್ಟಗಳನ್ನು ಅವನು ನಿರೂಪಿಸಿದ್ದರಲ್ಲಿ ಶುಷ್ಕಶಾಸ್ತ್ರವಿಲ್ಲ, ಶಾಸ್ತ್ರವನ್ನು ಒಳಗೊಂಡು ಅವನ್ನು ಮೀರಿದ ಕಲಾಮಹಿಮೆಯಿದೆ. ಪರಿನಿಷ್ಕ್ರಮಣ ಕಲ್ಯಾಣ ಸಂದರ್ಭವು ಇದಕ್ಕೆ ಉತ್ತಮ ನಿದರ್ಶನ.

'ಆದಿಪುರಾಣ'ದ ಇತರ ಪಾತ್ರಗಳಲ್ಲಿ ಆದಿನಾಥನ ಮಕ್ಕಳಾದ ಭರತಚಕ್ರವರ್ತಿ ಮತ್ತು ಬಾಹುಬಲಿ ಇವರನ್ನು ನೆನೆಯುವುದು ಅವಶ್ಯ. ಈ ಕಾವ್ಯದ ಉತ್ತರಭಾಗದ ಒಂದು ಆಶ್ವಾಸದಲ್ಲಿ ಮಾತ್ರ ಈ ಚಿತ್ರಣವು ಬಂದಿದ್ದರೂ ಅದರ ಮಹತ್ವ ಹೆಚ್ಚಿನದಾಗಿದೆ. ಆಧ್ಯಾತ್ಮಿಕ ಸಿದ್ಧಿ ಸಾಧನೆಗಳ ಒಂದು ಮುಖವು ಆದಿನಾಥನ ಚರಿತ್ರೆಯಲ್ಲಿ ತೋರಿದ್ದರೆ ಇನ್ನೊಂದು ಮುಖವು ಅವನ ಮಕ್ಕಳಾದ ಭರತ ಬಾಹುಬಲಿಗಳ ಚರಿತ್ರೆಯಲ್ಲಿ ತೋರಿ ಕಥೆಗೆ ಸಮಗ್ರತೆಗೆ ಉಂಟಾಗಿದೆ. ಆದಿನಾಥನ ಕಥೆಯಲ್ಲಿ ಕಾಮತ್ಯಾಗ, ಭರತನ ಕಥೆಯಲ್ಲಿ ಅಹಂಕಾರ ತ್ಯಾಗ ಇವು ಸಮ್ಯಕ್ತ್ವಸಿದ್ಧಿಗೆ ಪೂರ್ವಭಾವಿಗಳೆಂದು ತೋರಿಸಲಾಗಿದೆ. ದಿಗ್ವಿಜಯಕ್ಕೆ ಹೊರಟ ಭರತಚಕ್ರಿ ಹೋದಹೋದಲ್ಲಿ ಗೆಲುವು ಹೊಂದಿ ಉಬ್ಬಿ ಹೋಗುತ್ತಾನೆ. ತನ್ನ ಗೆಲುವಿನ ಶಾಸನವನ್ನು ವೃಷಭಾಚಲದಲ್ಲಿ ಬರೆಯಿಸಬೇಕೆನ್ನಲು ಅಲ್ಲಿ ತನ್ನ ಹಿಂದಿನ ಅನೇಕ ಚಕ್ರಿಗಳು ಬರೆಸಿದ ಆತ್ಮಪ್ರಶಂಸೆಯನ್ನು ನೋಡಿದನು. "ಅಂತವನೊಯ್ಯನೆ ನೋಡಿ ನೋಡಿ ಸೋರ್ದುದು ಕೊಳಗೊಂಡ ಗರ್ವರಸಂ". ಅದು ಅವನ ಅಹಂಕಾರಕ್ಕೆ ಮೊದಲನೆಯ ಆಘಾತ. ಆಮೇಲೆ ಊರಿಗೆ ಮರಳಿ ಬಂದಾಗ ರಾಜಧಾನಿಯ ಬಾಗಿಲಲ್ಲಿ ಅವನ ಚಕ್ರರತ್ನವು ನಿಂತು ಅವನ ತಮ್ಮಂದಿರೇ ಅವನು ಅಧಿರಾಜನೆಂದು ಒಪ್ಪಿಕೊಳ್ಳುವುದಿಲ್ಲವೆಂದು ಸೂಚಿಸಿತು. "ಅಣ್ಣ ಹಿರಿಯನೆಂದು ಮನ್ನಿಸಬಹುದು, ಅವನಿಗೆ ಆಳೆಂದು ಯಾಕಿರುವುದು" ಎಂದು ನೂರು ಜನ ತಮ್ಮಂದಿರು ವಿರಕ್ತಿಯಿಂದ ತಂದೆಯ ಬಳಿಗೆ ತಪಸ್ಸಿಗೆ ಹೋದರು. ಬಾಹುಬಲಿ ಮಣಿಯಲಿಲ್ಲ.

"ಸಂಗರನಿಕಷದೊಳೆಮ್ಮಂದಮಂ ನೀನೆ ಕಾಣ್ಬೈ" ಎಂದು ಬಾಹುಬಲಿ ಹೇಳಿ ಕಳಿಸುತ್ತಾನೆ. ಕೊನೆಗೆ ದೃಷ್ಟಿಯುದ್ಧದಿಂದ ತೊಟ್ಟು ಮಲ್ಲಯುದ್ಧದವರೆಗೆ ಇಬ್ಬರೂ ಹೋರಾಡಲು ಬಾಹುಬಲಿಯೇ ಗೆಲ್ಲುತ್ತಾನೆ. ವಿಶ್ವವಿಜಯಿಯಾದ ಭರತನ ಅಹಂಕಾರಕ್ಕೆ ಇದು ವಜ್ರಾಘಾತ. ಆದರೆ ಸೋಜಿಗವೆಂದರೆ ತನ್ನ ಗೆಲುವಿನಿಂದ ಉಬ್ಬಿ ಹೋಗದೆ ಅಣ್ಣನ ರಾಜ್ಯದಾಹಕ್ಕೆ ಮತ್ತು ಅಹಂಕಾರಕ್ಕೆ ತಾನೇ ಹೇಸಿ ಬಾಹುಬಲಿ ವೈರಾಗ್ಯ ತಾಳುತ್ತಾನೆ, ತಪಸ್ಸಿಗೆ ಹೋಗುತ್ತಾನೆ. ಈ ಉದಾತ್ತ ತ್ಯಾಗದ ಪರಿಣಾಮವು ಭರತನ ಮೇಲೆ ತೀವ್ರವಾಗಿ ಆಗುತ್ತದೆ. ಮುಂದೆ ಕೆಲಕಾಲ ಧರ್ಮದಿಂದ ರಾಜ್ಯವನ್ನಾಳಿ ಅವನೂ ಯತಿದೀಕ್ಷೆಯನ್ನು ತಾಳುತ್ತಾನೆ. ಈ ಸನ್ನಿವೇಶದಲ್ಲಿ ಮೂಲವನ್ನು ಅನುಸರಿಸಿ ಪಂಪನು ಮಾಡಿದ ಸ್ವಭಾವಚಿತ್ರಣವು ಅವನ ಉನ್ನತ ಪ್ರತಿಭೆಗೂ ಸಾಕ್ಷಿಯಾಗಿರುತ್ತದೆ.

'ಆದಿಪುರಾಣ'ವು ಕನ್ನಡದಲ್ಲಿ ಮೊದಲನೆಯ ಜೈನಪುರಾಣವೋ ಹೇಗೆ ಎಂಬುದನ್ನು ಹೇಳಲಾಗದು. ಶ್ರೀವಿಜಯನ 'ಚಂದ್ರಪ್ರಭ ಪುರಾಣ' ಯಾವ ಕಾಲದ್ದೆಂಬುದನ್ನು ನಮಗೆ ತಿಳಿದಿಲ್ಲ. ಅದು ಉಪಲಬ್ಧವಾಗಿಲ್ಲ. 1ನೆಯ ಗುಣವರ್ಮನ 'ಹರಿವಂಶ' ಮುಂದಿನ ನೇಮಿನಾಥ ಪುರಾಣಗಳಂತೆ ಇದ್ದಿರಬಹುದು. ಸದ್ಯಕ್ಕೆ 'ಆದಿಪುರಾಣ'ವು ಉಪಲಬ್ಧವಾದ ಮೊದಲನೆಯ ಜೈನ ಪುರಾಣವೆಂದೂ, ತರುವಾಯದ ಪುರಾಣಗಳಿಗೆ ಒಂದು ಹೆದ್ದಾರಿಯನ್ನು ಹಾಕಿಕೊಟ್ಟ ಗ್ರಂಥವೆಂದೂ ಭಾವಿಸಬಹುದು. ಇದರಲ್ಲಿ ಜೈನವೆಂಬ ಸ್ವರೂಪವು ಸ್ಪಷ್ಟವಾಗಿರುವಂತೆ ವಿಶ್ವವ್ಯಾಪಿ ಎಂಬ ಸತ್ವವು ಹುದುಗಿಕೊಂಡಿದೆ. ಪಂಪ

ಹೇಳಿದಂತೆ ಕಾವ್ಯಧರ್ಮ–ಧರ್ಮ ಇವುಗಳ ಸಮನ್ವಯವು ಇದರಲ್ಲಿ ಬಹುಶಃ ಸಾಧಿಸಿದೆ.

'ಆದಿಪುರಾಣ'ವು ಹದಿನಾರು ಆಶ್ವಾಸಗಳುಳ್ಳ ಸುದೀರ್ಘವಾದ ಪುರಾಣ ಕಾವ್ಯ. ಮೊದಲಿನ ಆರು ಆಶ್ವಾಸಗಳಲ್ಲಿ ಪುರುದೇವನ ಹಿಂದಿನ ಒಂಬತ್ತು ಜನ್ಮಗಳ ಕತೆಯಿದೆ. ಪಂಪನ 'ಆದಿಪುರಾಣ'ವು ಮೊದಲನೆಯ ತೀರ್ಥಂಕರನಾದ ಪುರುದೇವನ ಚರಿತ್ರೆ. ಇದು ಜೈನರಿಗೆ ಪೂಜ್ಯರಾದ 'ತ್ರಿಷಷ್ಟಿಶಲಾಕಾ ಪುರುಷರಲ್ಲಿ ಒಬ್ಬನಾದ ಆದಿದೇವನ ದಿವ್ಯ ಚರಿತ್ರೆಯನ್ನು ಒಳಗೊಂಡಿದೆ. ತ್ರಿಷಷ್ಟಿಶಲಾಕಾ ಪುರುಷರೆಂದರೆ ಇಪ್ಪತ್ತನಲ್ಕು ಜನ ತೀರ್ಥಂಕರರು, ಹನ್ನೆರಡು ಜನ ಚಕ್ರವರ್ತಿಗಳು, ಒಂಬತ್ತು ಮಂದಿ ಬಲದೇವರು, ಒಂಬತ್ತು ಮಂದಿ ವಾಸುದೇವರು ಹಾಗೂ ಒಂಬತ್ತು ಮಂದಿ ಪ್ರತಿವಾಸುದೇವರು – ಹೀಗೆ ಒಟ್ಟು ಅರವತ್ತಮೂರು ಮಂದಿ. ಈ ತೀರ್ಥಂಕರರ ಚರಿತ್ರೆಯನ್ನು ಹೇಳುವುದು ಜೈನಪುರಾಣಗಳ ವಸ್ತು. ಸಂಸಾರದಲ್ಲಿ ಸಿಕ್ಕಿಕೊಂಡು ಬವಣೆ ಪಡುತ್ತಿರುವ ಜೀವವು ಸಮ್ಯಕ್ ಜ್ಞಾನ, ಸಮ್ಯಕ್ ದರ್ಶನ, ಸಮ್ಯಕ್ ಚಾರಿತ್ರ್ಯಗಳೆಂಬ ರತ್ನತ್ರಯವನ್ನಾಶ್ರಯಿಸಿ ಈ ಸಂಸಾರವನ್ನು ದಾಟಿ ಮುಕ್ತಿ ಪಡೆಯುವುದು ತೀರ್ಥಂಕರರ ಜೀವನ ಚರಿತ್ರೆಗಳನ್ನು ಹೇಳುವಾಗ ವರ್ಣಿಸುವ ಜೀವನ ವಿಕಾಸಕ್ರಮ. ಈ ಜೀವನ ವಿಕಾಸದ ಕೊನೆಯ ಮೆಟ್ಟಿಲು ತೀರ್ಥಂಕರತ್ವ; ಅದನ್ನು ದಾಟಿದ ಮೇಲೆ ಶಾಶ್ವತವಾದ ಮೋಕ್ಷ.

ತೀರ್ಥಂಕರನಾಗುವ ಜೀವವು ಹೇಗೆ ಹಿಂದಿನ ಜನ್ಮಗಳಲ್ಲಿ ಕಷ್ಟವನ್ನು ಭವಿಸಿ ಪಾಪವನ್ನು ಕಡಿಮೆ ಮಾಡಿಕೊಂಡಿತೆಂಬುದನ್ನು ನಿರೂಪಿಸುವುದು 'ಭವಾವಳಿ' (ಎಂದರೆ ತೀರ್ಥಂಕರರ ಹಿಂದಿನ ಜನ್ಮಗಳ) ವರ್ಣನೆಯ ಉದ್ದೇಶ. ಪ್ರತಿಯೊಂದು ಜನ್ಮದಲ್ಲೂ ತನ್ನ ಕರ್ಮವನ್ನು ಕಡಿಮೆ ಮಾಡಿಕೊಳ್ಳುತ್ತ ಮೋಕ್ಷಕ್ಕೆ ಹತ್ತಿರವಾದ ಜೀವ ತಳೆದು ಹುಟ್ಟುವುದು ತೀರ್ಥಂಕರನ ಜನ್ಮದಲ್ಲಿ. ತೀರ್ಥಂಕರರ ಜೀವನವು ಪುರಾಣಗಳಲ್ಲಿ ಐದು ಹಂತಗಳಲ್ಲಿ ವರ್ಣಿತವಾಗಿರುತ್ತದೆ. ಅವುಗಳೆಂದರೆ 'ಗರ್ಭಾವತರಣ ಕಲ್ಯಾಣ', ತೀರ್ಥಂಕರ ಶಿಶುವು ತಾಯಿಯ ಗರ್ಭವನ್ನು ಪ್ರವೇಶಿಸುವುದು. 'ಜನ್ಮಾಭಿಷೇಕ ಕಲ್ಯಾಣ'–ಹುಟ್ಟುವುದು, 'ಪರಿನಿಷ್ಕ್ರಮಣ ಕಲ್ಯಾಣ'–ವೈರಾಗ್ಯವುಂಟಾಗುವುದು. 'ಕೇವಲ ಜ್ಞಾನ ಕಲ್ಯಾಣ' ಅತ್ಯಂತ ಶ್ರೇಷ್ಠ ಜ್ಞಾನವುಂಟಾಗುವುದು ಮತ್ತು 'ಪರಿನಿರ್ವಾಣ ಕಲ್ಯಾಣ' ಮೋಕ್ಷಕ್ಕೆ ಸೇರುವುದು. ಧಾರ್ಮಿಕ ಕಾವ್ಯಗಳಲ್ಲಿ ಇಲ್ಲಿ ಕವಿಗೆ ಸ್ವಾತಂತ್ರ್ಯ ಕಡಿಮೆ, ಆದರೆ ಪ್ರತಿಭಾಶಾಲಿಗಳಾದ ಕವಿಗಳು ಈ ಚೌಕಟ್ಟಿನಲ್ಲಿಯೇ ಅಲ್ಲಲ್ಲಿ ಸುಂದರವಾದ ಸನ್ನಿವೇಶಗಳನ್ನು ನಿರ್ಮಿಸುತ್ತಾರೆ; ಅಂತಹ ಕವಿಗಳಲ್ಲಿ ಪಂಪನು ಶ್ರೇಷ್ಠನೆನಿಸಿಕೊಂಡವನು. ಇಲ್ಲಿ ಧರ್ಮ ಎಂಬ ಸಾಮಾನ್ಯ ಪದದಲ್ಲಿ ಮತಧರ್ಮ ಮತ್ತು ವಿಶ್ವಧರ್ಮ ಎರಡೂ ಸೇರಿಕೊಂಡಿವೆ. ಶಾಸ್ತ್ರ ಜಡವಾದ ಭಾಗ, ಸಂಸ್ಕೃತ ಶಬ್ದಾಡಂಬರದ ಭಾಗಗಳನ್ನು ಕಡೆಗಣಿಸಿದರೆ ಅದು ಉತ್ತಮ ಕಾವ್ಯವೆಂಬುದು ನಿಜ. ಪಂಪನ ಕೃತಿಗಳೆಡರನ್ನೂ ಹೋಲಿಸಲಾಗಿ 'ಆದಿಪುರಾಣ'ವು ಕೆಲವಂಶಗಳಲ್ಲಿ ಉತ್ತಮವಾದರೆ, ಬಹುಶಃ ಎಲ್ಲ ಅಂಶಗಳಲ್ಲಿ ಉತ್ತಮ ಕಾವ್ಯವಾದ 'ಪಂಪಭಾರತ'ವು ಮುಂದೆ ಸೃಷ್ಟಿಯಾಯಿತೆಂಬುದನ್ನು ನೆನೆಯಬೇಕು.

**ಪರಾಮರ್ಶನ ಗ್ರಂಥಗಳು**

1. ಪಿ.ವಿ. ನಾರಾಯಣ : ಚಂಪೂ ಕವಿಗಳು; ಸಪ್ನ ಬುಕ್ ಹೌಸ್, ಬೆಂಗಳೂರು, 2018
2. ರಂ.ಶ್ರೀ.ಮುಗಳಿ:ಕನ್ನಡ ಸಾಹಿತ್ಯ ಚರಿತ್ರೆ; ಗೀತಾ ಬುಕ್ ಹೌಸ್ ಪ್ರಕಾಶನ, ಮೈಸೂರು, 2015

❖❖❖

# ಪಂಚತಂತ್ರದ ಇತಿಹಾಸ

**ಡಾ ರೋಹಿಣಿ ಎನ್. ಹಿರೇಶೆಡ್ಡಿ**
ಕನ್ನಡ ಸಹ ಪ್ರಾಧ್ಯಾಪಕಿ, ಸರಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯಪುರ

ಮನುಷ್ಯನು ಮಾತು ಕಲಿತಂದಿನಿಂದ ಕಥೆ ಹೇಳಲು ಕೇಳಲು ತೊಡಗಿದ. ಕಥೆಯೆಂದರೆ ದೊಡ್ಡವರು ಚಿಕ್ಕವರೆನ್ನದೆ, ಮಕ್ಕಳು ಮರಿಯೆನ್ನದೆ ಮೆಯ್ಯೆಲ್ಲ ಕಿವಿಯಾಗಿ ಕೇಳುವರು. ಕೇಳುವವರ ಸಂಖ್ಯೆ ಹಿರಿದಾದುದರಿಂದ ಕಥೆಗಳ ರಾಶಿಯೂ ಕಾಲಕಾಲಕ್ಕೆ ಬೆಳೆಯಿತು. ಪ್ರಪಂಚದ ಸಾಹಿತ್ಯದಲ್ಲಿ ಕಥಾ ಪ್ರಪಂಚ ಬೆಳೆದ ಹಾಗೆಯೇ ಭರತಖಂಡದಲ್ಲಿಯೂ ಬೃಹತ್ಕಥೆ, ಪಂಚತಂತ್ರ, ಹಿತೋಪ್ಷ್ಣ ಪ್ರ ದೇಶ, ಕಥಾಸರಿತ್ಸಾಗರ ಮೊದಲಾದ ಕಥಾ ಸಮುದ್ರಗಳು ಸೃಷ್ಟಿಯಾದುವು. ಇವುಗಳಲ್ಲಿ ಪೈಶಾಚಿ ಭಾಷೆಯಲ್ಲಿರುವ ಗುಣಾಢ್ಯನ ಬೃಹತ್ಕಥ ಪ್ರಾಚೀನವಾದುದು. ಆದರೆ ಈಗ ಇದು ಉಪಲಬ್ಧವಾಗಿಲ್ಲ. ಇದನ್ನು ಮೂಲವಾಗಿಟ್ಟು ಕೊಂಡು ಅನೇಕ ಸಂಗ್ರಹಗಳು ಬಂದುವು. ಅವುಗಳ ಆಧಾರದಿಂದ ಮೂಲದಲ್ಲಿ ಅದು ಹೇಗಿದ್ದಿರಬಹುದು ಎಂಬ ಕಲ್ಪನೆಯನ್ನು ಮಾಡಿಕೊಳ್ಳಬೇಕಾಗಿದೆ. ಗುಣಾಢ್ಯನ ವಿಚಾರವೂ ಏನೂ ತಿಳಿದುಬಂದಿಲ್ಲ. ಬೃಹತ್ಕಥೆಯ ಸಂಗ್ರಹಗಳಲ್ಲಿ ನೇಪಾಳದ ಬುದ್ಧಸ್ವಾಮಿಯಿಂದ ಕ್ರಿ.ಶ. 8–9ನೆಯ ಶತ ಮಾನಗಳಲ್ಲಿ ರಚಿತವಾದ ·ಬೃಹತ್ಕಥಾ ಶ್ಲೋಕಸಂಗ್ರಹ'ವು ಅತ್ಯಂತ ಪ್ರಾಚೀನವಾದುದು. ಅನಂತರ 11ನೆಯ ಶತಮಾನದಲ್ಲಿ ಕಾಶ್ಮೀರದ ಸೋಮದೇವನು ಬರೆದ ·ಬೃಹತ್ಕಥಾ ಸರಿತ್ಸಾಗರ' ಮುಖ್ಯವಾದುದು. ಈ ಕಥೆಗಳಲ್ಲೆಲ್ಲ ಮಾನವನ ಆಚಾರ ವಿಚಾರ, ನಡೆ ನುಡಿಗಳನ್ನು ಮೃಗಪಕ್ಷಿಗಳಿಗೆ ಆರೋಪಿಸಿ ಕಥೆಗಳ ನಿರೂಪಣೆ ಮಾಡುವುದು ವಿಶೇಷವಾದ ಅಂಶ.

ಈ ಕಥಾಸಾಗರದಲ್ಲಿ 'ಪಂಚತಂತ್ರ' ಮತ್ತು 'ಹಿತೋಪದೇಶ' ಎಂಬ ಕೃತಿಗಳು ವಿಶೇಷ ಜನಪ್ರಿಯವಾದುವು. ಇವೆರಡೂ ಕೃತಿಗಳು ಅಲ್ಪ ಸ್ವಲ್ಪ ವ್ಯತ್ಯಾಸವನ್ನು ಹೊಂದಿ ಪ್ರಪಂಚದ ನಾನಾ ದೇಶಗಳ ನಾನಾ ಭಾಷೆಗಳಲ್ಲಿ ಅವತರಿಸಿದುವು. 'ಬೈಬಲ್' ಗ್ರಂಥವನ್ನು ಬಿಟ್ಟರೆ ಪ್ರಪಂಚದಲ್ಲಿ 'ಪಂಚತಂತ್ರ'ದಷ್ಟು ಹೆಚ್ಚು ಭಾಷೆಗಳಿಗೆ ಅನುವಾದವಾದ ಗ್ರಂಥ ಇನ್ನೊಂದಿಲ್ಲ. ಅರ್ಥಶಾಸ್ತ್ರದ ಐದು ತಂತ್ರಗಳನ್ನು ಕಥೆಗಳ ಮೂಲಕ ಅದು ಪ್ರತಿಪಾದಿಸುವುದರಿಂದ ಅದಕ್ಕೆ 'ಪಂಚತಂತ್ರ' ಎಂಬ ಹೆಸರು ಬಂತು. ಪ್ರಪಂಚದ ನೂರಾರು ವಿದ್ವಾಂಸರು ಇದನ್ನು ತಮ್ಮ ತಮ್ಮ ಭಾಷೆಗಳಿಗೆ ಅನುವಾದಿಸಿಕೊಂಡಿದ್ದಾರೆ; ಅಧ್ಯಯನ ಮಾಡಿದ್ದಾರೆ; ಶಾಸ್ತ್ರೀಯ ಸಂಸ್ಕರಣಗಳನ್ನು ತರಲು ಭಗೀರಥ ಪ್ರಯತ್ನ ಮಾಡಿದ್ದಾರೆ; 'ಪಂಚತಂತ್ರ'ದ ಪ್ರಪಂಚವೇ ಒಂದು ಪ್ರಪಂಚದಷ್ಟು ವಿಶಾಲವೆಂಬಷ್ಟು ಅದನ್ನು ಕುರಿತು ಕೆಲಸಗಳಾಗಿವೆ. 'ಪಂಚತಂತ್ರ'ದ ಕರ್ತೃ ವಿಷ್ಣು ಶರ್ಮನೆಂಬ ಬ್ರಾಹ್ಮಣ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಆದರೆ ಅವನು ಯಾರು, ಎಲ್ಲಿದ್ದ, ಯಾವಾಗ ಇದ್ದ, ಏನಾಗಿದ್ದ ಎಂಬ ವಿವರವೆಲ್ಲವೂ ಕಾಲಗರ್ಭದಲ್ಲಿ ಅಡಗಿಹೋಗಿದೆ.

'ಪಂಚತಂತ್ರ'ವು ಪ್ರಪಂಚ ಪ್ರವಾಸಮಾಡಿದ ಭಾಗ್ಯಶಾಲಿಯಾದ ಗ್ರಂಥ. ಇದರ ಇತಿಹಾಸವನ್ನು ಕೂಲಂಕಷವಾಗಿ ಕಂಡುಹಿಡಿದ ಮಹನೀಯ ಜರ್ಮನಿಯ ಪ್ರಾಚ್ಯತಜ್ಞ

ನಾಗಿದ್ದ ಜೋನ್ಸ್ ಹರ್ಟೆಲ್(Johnnes Hertel). ಪ್ರಪಂಚದಲ್ಲಿ ದೊರೆಯುವ ಸುಮಾರು 50–60 ಭಾಷಾಂತರಗಳಲ್ಲಿ ಸುಮಾರು ಇನ್ನೂರಕ್ಕಿಂತ ಅಧಿಕ ರೂಪಾಂತರಗಳು ಸಿಗುತ್ತವೆ ಎಂಬ ಅದ್ಭುತವನ್ನು ಈತ 1914ರಲ್ಲಿ ಜಗತ್ತಿಗೆ ಸಾರಿದನು. ವಿಷ್ಣು ಶರ್ಮನ ಪಂಚತಂತ್ರವು ವಿಶ್ವರೂಪ ತಾಳಿ ಹೇಗೆ ಪ್ರಪಂಚದ ಪಶ್ಚಿಮೋತ್ತರ ದೇಶಗಳಿಗೆ ಪ್ರಸಾರವಾಯಿತು ಎಂಬುದನ್ನು ಈತ ಗುರುತಿಸಿದ್ದಾನೆ. ಇತ್ತೀಚೆಗೆ ಫ್ರಾಂಕ್ಲಿನ್(Franklin Edgarton) Pancatantra Reconstructed ಪಾಠ ಸಂಪ್ರದಾಯವು ಭಾರತದಿಂದ ಪೂರ್ವ ದಕ್ಷಿಣ ದೇಶಗಳಿಗೆ ಹೋಯಿತು ಎಂಬುದನ್ನು ಸಾರಿದ್ದಾನೆ.

ಮೂಲ ಪಂಚತಂತ್ರವು ಕ್ರಿ.ಶ.ದ ಆರಂಭದ ಶತಮಾನದಲ್ಲಿ ರಚಿತವಾಗಿದ್ದಿರಬೇಕು ಎಂದು ವಿದ್ವಾಂಸರು ಊಹಿಸುತ್ತಾರೆ. ವಿಷ್ಣು ಶರ್ಮನ ಪಂಚತಂತ್ರ ಪಶ್ಚಿಮ ದೇಶಗಳಿಗೆ ಹೋದ ಕತೆ ಸ್ವಾರಸ್ಯವಾಗಿದೆ ಕ್ರಿ.ಶ. 531 ರಿಂದ 579ರ ವರೆಗೆ ಪರ್ಷಿಯಾದೇಶವನ್ನು ಆಳಿದ ದೊರೆ ಖುಸ್ರು ನೌ ಷೇರ್ವಾನ್ ಎಂಬವನು ಸತ್ತವರನ್ನು ಬದುಕಿಸುವ ಮೂಲಿಕೆ ಯೊಂದು ಭಾರತದಲ್ಲಿದೆ ಎಂಬುದನ್ನು ಕೇಳಿದನು. ತನ್ನ ಆಸ್ಥಾನ ವೈದ್ಯನಾದ ಬುರ್ಜೆ ಃಣಠಡಿದಜ ಎಂಬವನೊಡನೆ ಆ ಮೂಲಿಕೆಯನ್ನು ತನಗೆ ತಂದುಕೊಡಬೇಕೆಂದು ಅವನನ್ನು ಭಾರತಕ್ಕೆ ಕಳುಹಿಸಿದನು. ಅವನು ಅದನ್ನು ಭಾರತದಲ್ಲೆಲ್ಲ ಹುಡುಕಿ ಅದು ಎಲ್ಲಿಯೂ ಸಿಕ್ಕದಿರಲು ಅನುಭವಿಯಾದ ವೃದ್ಧನೊಬ್ಬನು ಅವನೊಡನೆ ಹೀಗೆ ಹೇಳಿದನು. 'ಅಂಥ ಮೂಲಿಕೆ ಯಾವುದೂ ಇರಲು ಸಾಧ್ಯವಿಲ್ಲ; ಮೂಢರನ್ನು ಬುದ್ಧಿವಂತರನ್ನಾಗಿ ಮಾಡ ಬಲ್ಲ 'ಪಂಚತಂತ್ರ'ವೇ ಆ ಮೂಲಿಕೆ!' ಅದನ್ನು ಕೇಳಿದ ಬುರ್ಜೆ 'ಪಂಚತಂತ್ರ'ದ ಪ್ರತಿಯೊಂದನ್ನು ಸಂಪಾದಿಸಿಕೊಂಡು ತನ್ನ ರಾಜಭಾಷೆಯಾದ ಪಹಲ್ವಿಗೆ ಅನುವಾದಿಸಿ ತನ್ನ ದೊರೆಗೆ ಇದು ಸತ್ತವರನ್ನೂ ಎತ್ತ ಬಲ್ಲ ಭಾರತದ ಮೂಲಿಕೆ' ಎಂದು ಅರ್ಪಿಸಿದನು. ರಾಜನು ಅದನ್ನು ತನ್ನ ಪಹಲ್ವಿಭಾಷೆಯಲ್ಲಿ 'ಕರಟಕ ದಮನಕ' ಎಂಬ ಹೆಸರಿನಿಂದ ಪ್ರಕಟಿಸಿದನಂತೆ. ಅದು ಈಗ ದೊರೆಯುವುದಿಲ್ಲ. ಅದನ್ನು ಆಧರಿಸಿದ ಅನುವಾದ ಗಳಿಂದ ನನಗೆ ಈ ವಿಚಾರ ತಿಳಿದುಬರುತ್ತದೆ.

ಈ ಕೃತಿ ಪಾಶ್ಚಾತ್ಯ ಜಗತ್ತಿನಲ್ಲಿ ಕ್ರಿ.ಶ.6ನೆಯ ಶತಮಾನದಿಂದ 16ನೆಯ ಶತಮಾನದವರೆಗೆ ಅನೇಕ ಅನುವಾದಗಳಾಗಲು ಪ್ರೇರೇಪಿಸಿತು; ತುಂಬ ಪ್ರಭಾವವನ್ನು ಬೀರಿತು. ಇವುಗಳಲ್ಲಿ ಪರ್ಷಿಯಾದೇಶದ ದೊರೆಯ ಆಸ್ಥಾನದಲ್ಲಿದ್ದ ಬಡ್ (Bud) ಎಂಬವನು 'ಕರಟಕ ದಮನಕ' ನನ್ನು ಕಾಲಿಲಾಗ್ ಮತ್ತು ದಮ್ನ್ಯಾಗ್ (Kalilag And Damnag) ಎಂಬ ಹೆಸರಿನಲ್ಲಿ ಸಿರಿಯಾಭಾಷೆಗೆ ಅನುವಾದಿಸಿದನು. ಇದರ ಭಾಷಾಂತರಗಳು ಜರ್ಮನ್ ಭಾಷೆಯಲ್ಲಿವೆ. ಇದು ಅನಂತರ ಎಂಟನೆಯ ಶತಮಾನದಲ್ಲಿ ಅರಬ್ಬಿ ಭಾಷೆಗೆ ಅನುವಾದವಾಯಿತು. ಅವುಗಳಲ್ಲಿ ಅಬ್ದುಲ್ಲ ಇಬನ್ ಅಲ್ ಮೊಖಾಫೆ (Abdullah Ibn Al Moqaaff) ಈತನ ಕೃತಿ ಪಾಶ್ಚಾತ್ಯ ಪ್ರಪಂಚದಲ್ಲೆಲ್ಲ ಪ್ರಸಾರವಾಯಿತು. ಇದು ಕ್ರಿ. ಶ. 1816 ರಿಂದ ಇಂಗ್ಲಿಷ್, ಜರ್ಮನ್, ಫ್ರೆಂಚ್, ಡೇನಿಷ್, ರಷ್ಯನ್, ಇಟ್ಯಾಲಿಯನ್, ಸ್ಪ್ಯಾನಿಷ್, ಜೆಕ್ ಮೊದಲಾದ ಭಾಷೆಗಳಿಗೆ ಅನುವಾದಗೊಂಡಿತು. ಇದು ಹನ್ನೊಂದನೆಯ ಶತಮಾನದಲ್ಲೇ ಗ್ರೀಕ್ ಭಾಷೆಯಲ್ಲಿ ಬಂದು ಅದರಿಂದ ಲ್ಯಾಟಿನ್, ಸ್ಲಾವೊನಿಕ್, ಹೀಬ್ರೂ ಭಾಷೆಗಳಿಗೆ ಅನುವಾದಗೊಂಡಿತು. ಕ್ರಿ.ಶ.1570ರಲ್ಲಿ ಸರ್ ಥಾಮಸ್ ನಾಥ್(Sir Thomas Nath) ಎಂಬವನು 'ಮೊರೇಲ್ ಫಿಲಾಸೋಫಿಯಾ ಆಫ್ ಡೋ' (Morale Philosophia of Doni) 2 ಮೊತ್ತಮೊದಲು

ಪಂಚತಂತ್ರವನ್ನು ಅನುವಾದಿಸಿದನು.

ಪಂಚತಂತ್ರದ ಇನ್ನೊಂದು ಶಾಖೆಯು ಪರ್ಷಿಯನ್ ಭಾಷೆಯಲ್ಲಿ 'ಅನ್ವಾರೆ ಸುಹೈಲಿ' ಎಂಬ ಹೆಸರಿನಿಂದ ಹದಿನೈದನೆಯ ಶತಮಾನದಲ್ಲಿ ಪ್ರಪಂಚ ಪ್ರಸಿದ್ಧವಾಯಿತು. ತಮಾಷೆಯೆಂದರೆ ಇದು ಮಧ್ಯ ಏಷ್ಯದ ನೂರಾರು ಭಾಷೆಗಳಲ್ಲಿ ಅನುವಾದವಾಗಿ ಪಂಚತಂತ್ರದ ಮಾತೃಭೂಮಿಯಾದ ಭಾರತಕ್ಕೆ ಬಂದಿದೆ. 'ಅನ್ವಾರೆ ಸುಹೈಲಿ' ಹದಿನಾರನೆಯ ಶತಮಾನದಲ್ಲಿ ಟರ್ಕಿಷ್ ಭಾಷೆಯಲ್ಲಿ 'ಹುಮಾಯೂನ್ ನಾಮಾ' ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಇದೂ ಮತ್ತೆ ಯೂರೋಪಿಯನ್ ಭಾಷೆಗಳಿಗೆ ಅನುವಾದಗೊಂಡಿತು. ಅವುಗಳಲ್ಲಿ ಫ್ರೆಂಚ್ ಅನುವಾದ ಮುಖ್ಯವಾದುದು. 'ಅನ್ವಾರೆ ಸುಹೈಲಿ'ಯ ಇನ್ನೊಂದು ಶಾಖೆ ಮಂಗೋಲಿಯನ್ ಭಾಷೆಗಳಿಗೆ ಹರಿದುಬಂತು. "ಹೀಗೆ ಪಂಚತಂತ್ರ ಪಹಲ್ವಿಯ ಭಾಷಾಂತರದಿಂದ ಸುಮಾರು ಹದಿಮೂರು ಶತಮಾನಗಳಲ್ಲಿ ದೇಶದೇಶಾಂತರಗಳಲ್ಲೆಲ್ಲ ಭಾಷಾಂತರ, ಮರುಭಾಷಾಂತರ, ಪ್ರತಿಭಾಷಾಂತರ ಗದ್ಯದಿಂದ ಪದ್ಯ, ಪದ್ಯದಿಂದ ಗದ್ಯ ರೂಪಾಂತರವನ್ನು ಹೊಂದಿ ಏಷ್ಯ ಮತ್ತು ಯುರೋಪ್ ಖಂಡದ ಬಹುಭಾಗವನ್ನಷ್ಟೇ ಅಲ್ಲದೆ ಆಫ್ರಿಕಾಖಂಡದ ಬಹುಭಾಗದಲ್ಲಿಯೂ ವಿವಿಧ ಹೆಸರ ಗಳಿಂದಲೂ ರೂಪಗಳಿಂದಲೂ ಸಂಚಾರಮಾಡಿ ಪುನಃ ಭಾರತವನ್ನೇ ಪ್ರವೇಶಿಸಿರುವುದು ಬಹು ಸೋಜಿಗದ ಸಂಗತಿ." ಇವಿಷ್ಟು ವಿಷ್ಣು ಶರ್ಮನ ಪಂಚತಂತ್ರದ ಪ್ರವಾಸದ ಒಂದು ಸ್ಥೂಲ ಪರಿಚಯ.

ಪಂಚತಂತ್ರದ ಇನ್ನೊಂದು ಸಂಪ್ರದಾಯ ವಸುಭಾಗ ಭಟ್ಟನಿಂದ ಆರಂಭವಾಯಿತೆಂದು ಆಗಲೇ ಪ್ರಸ್ತಾಪಿಸಲಾಗಿದೆ. ಇದು ಭಾರತದಿಂದ ದಕ್ಷಿಣ ಪೂರ್ವ ದೇಶಗಳಿಗೆ ಪ್ರವಾಸಹೋಯಿತು. ಇದರ ಕನ್ನಡದ ಅವತಾರ ಕ್ರಿ.ಶ. 1031ರಲ್ಲಿ ದುರ್ಗಸಿಂಹನೆಂಬ ಬ್ರಾಹ್ಮಣನಿಂದ ಆಯಿತು. ಈ ವಸುಭಾಗಭಟ್ಟ ಯಾರು, ಏನು, ಎಲ್ಲಿದ್ದ, ಯಾವಾಗ ಇದ್ದ ಎಂಬ ವಿಚಾರವೂ ವಿಷ್ಣು ಶರ್ಮನ ವಿಚಾರದ ಹಾಗೆಯೇ ಒಗಟಾಗಿದೆ. ವಸುಭಾಗ ಭಟ್ಟನು ಯಾವ ಭಾಷೆಯಲ್ಲಿ ಪಂಚತಂತ್ರವನ್ನು ಬರೆದ ಎಂಬುದೂ ಗೊತ್ತಿಲ್ಲ. ವಿಷ್ಣು ಶರ್ಮನ ಹಾಗೆ ಇವನೂ ಸಂಸ್ಕೃತದಲ್ಲಿಯೇ ಬರೆದಿರಬಹುದೆಂದು ವಿದ್ವಾಂಸರು ಊಹಿಸುತ್ತಾರೆ. ತಾನು ವಸುಭಾಗ ಭಟ್ಟನ ಪಂಚತಂತ್ರವನ್ನು ಆಧರಿಸಿ ಬರೆದೆನೆಂದು ದುರ್ಗಸಿಂಹನು ಹೀಗೆ ಹೇಳುತ್ತಾನೆ: ಪುಷ್ಪದಂತನೆಂಬ ಗಣಪ್ರಧಾನನು ಮಾನವಲೋಕದಲ್ಲಿ ಹುಟ್ಟಿ ಗುಣಾಢ್ಯನೆಂಬ ಸತ್ಕವಿಯಾಗಿ ಶಾಲಿವಾಹನನೆಂಬ ಚಕ್ರವರ್ತಿಯ ಕವಿಯಾಗಿದ್ದು ಹರನು ಗಿರಿಸುತೆಗೆ ಹೇಳಿದ ಕತೆಗಳನ್ನು ಪೈಶಾಚಿಕ ಭಾಷೆಯಲ್ಲಿ ಬೃಹತ್ಕಥೆಗಳನ್ನಾಗಿ ಮಾಡಿ ಹೇಳಲು ಅವುಗಳನ್ನು ವಸುಭಾಗಭಟ್ಟನು ಕೇಳಿ ಆ ಕಥಾ ಸಮುದ್ರದಲ್ಲಿ ಪಂಚ ರತ್ನವಾಗಿರುವ ಐದು ಕಥೆಗಳನ್ನು ಆಯ್ದು 'ಪಂಚತಂತ್ರ' ಎಂದು ಹೆಸರಿಟ್ಟು ಸಮಸ್ತ ಜಗತ್ತಿನ ಜನೋಪಕಾರಕ್ಕಾಗಿ ಹೇಳಿದನು. ವಸುಧಾಧಿಪರಿಗೆ ಹಿತವೂ ಅಖಿಲ ವಿದ್ವಾಂಸ ರಿಂದ ಸ್ತುತವೂ ಆದ ಅಂಥ ವಸುಭಾಗಭಟ್ಟನ ಕೃತಿಯನ್ನು ಹೊಸತಾಗಿ ಕನ್ನಡದಲ್ಲಿ ವಿರಚಿಸುತ್ತೇನೆ.

ದುರ್ಗಸಿಂಹನ ಕನ್ನಡ ಪಂಚತಂತ್ರವನ್ನು 1898ರಲ್ಲಿ ಮೊತ್ತಮೊದಲು ಸಂಪಾದಿಸಿ ಪ್ರಕಟಿಸಿದ ಶ್ರೀ ಎಸ್.ಜಿ. ನರಸಿಂಹಾಚಾರರೂ ಶ್ರೀ ಮ.ಆ. ರಾಮಾನುಜಯ್ಯಂಗಾರರೂ ತಮ್ಮ ಗ್ರಂಥದ ಪೀಠಿಕೆಯಲ್ಲಿ ಹೀಗೆ ಹೇಳಿದ್ದಾರೆ: "ಈ ಪಂಚತಂತ್ರಕ್ಕೂ ಪ್ರಾಕೃತದಲ್ಲಿ

ಪ್ರಚಾರದಲ್ಲಿರುವ ವಿಷ್ಣು ಶರ್ಮನ ಪಂಚತಂತ್ರಕ್ಕೂ ತಂತ್ರಗಳ ಹೆಸರುಗಳ ಲ್ಲಿಯೂ ಅಂತರಾಳಿಕ ಕಥಾಭಾಗಗಳಲ್ಲಿಯೂ ಉದ್ಧೃತವಾಗಿರುವ ಶ್ಲೋಕಗಳಲ್ಲಿಯೂ ಹವು ಭೇದಗಳಿವೆ. ಈ ಕವಿ ವಿಷ್ಣುಶರ್ಮನ ಪ್ರಸಿದ್ಧವಾದ ಪಂಚತಂತ್ರವನ್ನು ಬಿಟ್ಟು ವಸುಭಾಗನ ಪಂಚತಂತ್ರವನ್ನು ಕನ್ನಡಿಸುವುದಕ್ಕೆ ಕಾರಣವೇನೋ ತಿಳಿಯಲಿಲ್ಲ." ಆ ಕಾಲದಲ್ಲಿ ವಸುಭಾಗಭಟ್ಟನ ಪಂಚತಂತ್ರದ ವಿಚಾರವಾಗಿ ಏನೂ ತಿಳಿಯದಿರುವುದೇ ಹೀಗೆ ಬರೆಯಲು ಕಾರಣ, ಅಲ್ಲಿಂದೀಚೆಗೆ ವಿದ್ವಾಂಸರ ಸಂಶೋಧನೆಗಳ ಫಲ ವಾಗಿ ವಸುಭಾಗ ಭಟ್ಟನ ಪಂಚತಂತ್ರದ ಸಂಪ್ರದಾಯವೇ ಬೇರೆ ಎಂದೂ ಆದು ಪೂರ್ವ ದಕ್ಷಿಣ ಪ್ರಪಂಚಕ್ಕೆ ವ್ಯಾಪಿಸಿತೆಂದೂ ತಿಳಿದುಬಂತು.

ಜಾವಾದ್ವೀಪದಲ್ಲಿ ಇದು 'ತಂತ್ರಿ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಲೇಯಾಸ್ ದೇಶದ ಪಂಚತಂತ್ರವನ್ನು 'ತಂತ್ಯೆ' ಎಂದು ಕರೆಯುತ್ತಾರೆ. ಥಾಯ್ ದೇಶದಲ್ಲಿ ಇದನ್ನು 'ತಂತ್ರ್ಯ' ಎಂದು ಕರೆಯಲಾಗಿದೆ. ಇಲ್ಲೆಲ್ಲ ಕಂಡುಬರುವ 'ವಸು ಫಖ' ಎಂಬ ಅರ್ಥವಾಗದ ಮಾತು ವಸುಭಾಗಭಟ್ಟನ ಹೆಸರೇ ಎಂಬುದನ್ನುಲಾಗಿದೆ. ಇರಲ್ಲದೆ ಜಪಾನೀ ಭಾಷೆಗೂ ಇದು ಅನುವಾದವಾಗಿ ಹೋಗಿದೆ. ಭಾರತ ದಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವುದು ವಿಷ್ಣು ಶರ್ಮನ ಪಂಚತಂತ್ರ, ವಸುಭಾಗ ಭಟ್ಟನ ಪಂಚತಂತ್ರದ ರೂಪಾಂತರಗಳು ಭಾರತದ ಪೂರ್ವದಕ್ಷಿಣ ದೇಶಗಳಲ್ಲಿ ಕಂಡುಬರುವುದ ರಿಂದ ಅವನು ದಾಕ್ಷಿಣಾತ್ಯನಾಗಿದ್ದಿರಬಹುದು ಎಂದು ಊಹಿಸುತ್ತಾರೆ,

ಕನ್ನಡನಾಡಿನಲ್ಲಿ ಪಂಚತಂತ್ರವನ್ನು ಕುರಿತು ಆಳವಾದ ಅಧ್ಯಯನವನ್ನು ಮಾಡಲು ತನ್ನ ಜೀವಮಾನವನ್ನೇ ಮುಡಿಪಿಟ್ಟವರು ಡಾ. ಎ. ವೆಂಕಟಸುಬ್ಬಯ್ಯನವರು ಪಂಚತಂತ್ರದಲ್ಲಿರುವ ಕಥೆಗಳ ಸಂಖ್ಯೆಯನ್ನೂ ಅವುಗಳಲ್ಲಿರುವ ಪರಸ್ಪರ ಸಾಮ್ಯ ವೈಷಮ್ಯ ಗಳನ್ನೂ ಅಭ್ಯಾಸಿಸಿ ಅವರು ದುರ್ಗಸಿಂಹನ ಪಂಚತಂತ್ರದಲ್ಲಿ ಒಟ್ಟು 65 ಕಥೆಗಳಿವೆ ಎಂದು ನಿರ್ಧರಿಸಿದ್ದಾರೆ. ಥಾಯ್ಲೆಂಡಿನ ಪಂಚತಂತ್ರದಲ್ಲಿ 360 ಕಥೆಗಳಿವೆಯಂತೆ. ಜಾವಾದೇಶದ ಪಂಚತಂತ್ರದಲ್ಲಿಯೂ 360 ಕಥೆಗಳಿವೆಯಂತೆ. ವಿಷ್ಣು ಸಿಂಹ, ದುರ್ಗಸಿಂಹರ ಪಂಚತಂತ್ರಗಳಲ್ಲಿ ಸುಮಾರು 65 ಕಥೆಗಳಿರುವುದರಿಂದ ಮೂಲಪಂಚ ತಂತ್ರದಲ್ಲಿ 60 ಕಥೆಗಳಿದ್ದಿರಬಹುದು ಎಂದು ವಿದ್ವಾಂಸರು ಊಹಿಸಿದ್ದಾರೆ ದುರ್ಗ ಸಿಂಹನ ಪಂಚತಂತ್ರವು ವಸುಭಾಗಭಟ್ಟನ ಪಂಚತಂತ್ರದ ನೇರವಾದ ಅನುವಾದನಲ್ಲ ವೆಂಬುದು 'ಪೊಸತಾಗಿದೆ' ಎಂಬ ಅವನ ಮಾತಿನಿಂದ ತಿಳಿಯುವುದು.

**ದುರ್ಗಸಿಂಹನ ದೇಶ, ಕಾಲ, ವ್ಯಕ್ತಿ ವಿಚಾರ**

ದುರ್ಗಸಿಂಹನು ತನ್ನ ವಿಚಾರವನ್ನು ತನ್ನ ಕೃತಿಯಲ್ಲಿ ಕನ್ನಡದ ಆದಿಕವಿ ಪಂಪನ ಹಾಗೆ ವಿವರವಾಗಿ ನಿವೇದಿಸಿಕೊಂಡಿರುವುದರಿಂದ ಕವಿಚರಿತೆಯನ್ನು ತಿಳಿದುಕೊಳ್ಳಲು ಕಷ್ಟವಾಗುವುದಿಲ್ಲ. ಅವನು ತನ್ನ ಊರು ಕರ್ಣಾಟಕದ ಸಯ್ಯಡಿಯ ಅಗ್ರಹಾರವೆಂದು ಹೇಳಿದ್ದಾನೆ. 'ಛಂದೋಂಬುಧಿ'ಯನ್ನು ಬರೆದ ನಾಗವರ್ಮನ ಊರೂ ಅದೇ ಆಗಿದೆ. ಅದು ಕಿಸುಕಾಡುನಾಡಿನಲ್ಲಿದೆ ಎಂದು ಅವನು ಹೇಳಿದ್ದಾನೆ. ಆ ಸಯ್ಯಡಿಯಲ್ಲಿ ತನ್ನ ಚಕ್ರವರ್ತಿಯ ಆಜ್ಞೆಯಂತೆ ಹರಿಹರಭವನಗಳನ್ನು ದುರ್ಗಸಿಂಹನು ಕಟ್ಟಿಸಿದನಂತೆ. ಸಯ್ಯಡಿ ಇಂದು ಧಾರವಾಡ ಜಿಲ್ಲೆಯ ರೋಣ ತಾಲೂಕಿನಲ್ಲಿದೆ. ದುರ್ಗಸಿಂಹನ ಪದ್ಯಗಳು ಸೂಕ್ತಿ ಸುಧಾರ್ಣವದಲ್ಲಿ ದೊರಕುವುದರಿಂದ ದುರ್ಗಸಿಂಹನು

ಕ್ರಿ.ಶ.1139 ರಿಂದ ಕ್ರಿ.ಶ.1149ರ ವರೆಗೆ ಆಳಿದ ಚಾಲುಕ್ಯ ಜಗದೇಕ ಮಲ್ಲನಲ್ಲಿ ಸಂಧಿವಿಗ್ರಹಿಯಾಗಿದ್ದಿರಬೇಕೆಂದೂ ಅದರಿಂದ ಇವನ ಕಾಲವು ಕ್ರಿ.ಶ.ಸು.1145 ಆಗಿದ್ದಿರಬೇಕೆಂದೂ ಕವಿಚರಿತೆಯ ಪ್ರಥಮ ಸಂಪುಟದಲ್ಲಿ ಶ್ರೀ ಆರ್. ನರಸಿಂಹಾಚಾರರು ನಿರ್ಣಯಿಸಿದ್ದರು. ಈ ಅಭಿಪ್ರಾಯವನ್ನೇ ಶ್ರೀ ಎಸ್.ಜಿ. ನರಸಿಂಹಾಚಾರ್ಯರ ಆವೃತ್ತಿಯ ಪೀಠಿಕೆಯಲ್ಲಿ ಉಲ್ಲೇಖಿಸಲಾಗಿದೆ. ಶ್ರೀ ರಾಜಪುರೋಹಿತರು ಒಂದನೆಯ ಜಗದೇಕಮಲ್ಲ ಜಯಸಿಂಹನ ಆಳ್ವಿಕೆಯ ಕಾಲದಲ್ಲಿ ಎಂದರೆ ಕ್ರಿ.ಶ.1037–1042ರ ಅವಧಿಯಲ್ಲಿ ದುರ್ಗಸಿಂಹನು ತನ್ನ ಕೃತಿಯನ್ನು ರಚಿಸಿರಬೇಕು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಡಾ. ರಂ.ಶ್ರೀ. ಮುಗಳಿಯವರು ಸು. ಕ್ರಿ.ಶ. 1030 ಎನ್ನುತ್ತಾರೆ. ಕರ್ಣಾಟಕ ಕವಿಚರಿತೆಯ 1961ರ ಪರಿಶೋಧಿತ ಮುದ್ರಣದಲ್ಲಿ ದುರ್ಗಸಿಂಹನ ಕಾಲ ನನ್ನು ಕ್ರಿ.ಶ. ಸು. 1025 ಎಂದು ಹೇಳಿದೆ. ಪಂಚತಂತ್ರದ ಆರಾ ಪ್ರತಿಯಲ್ಲಿ ದೊರಕಿದ ಒಂದು ಪದ್ಯ ದುರ್ಗಸಿಂಹನ ಕಾಲ ನಿರ್ಣಯಮಾಡಲು ಸಹಕಾರಿಯಾಯಿತು. ಪದ್ಯ ಹೀಗಿದೆ :

ಅತಿ ಸಂಪನ್ನತೆ ವೆತ್ತ ಸಹ ನಿವಾಸ ಸ್ಥಾನವಾದ ಪ್ರಜಾ ಪತಿ ಸಂವತ್ಸರ ಚೈತ್ರಮಾಸಸಿತಪಕ್ಷ ದ್ವಾದಶೀ ತಾರಕಾ ಪತಿವಾರಂ ಬರೆ ಪಂಚತಂತ್ರ ಮೆಸೆದ ಧಾತ್ರಿಯೊಳ್ ದುರ್ಗನಿ ರ್ಮಿತಮುದ್ರತ್ ಕವಿಶೇಖರ ಪ್ರಮದ ಲೀಲಾಪುಷ್ಪಿ ತಾಮ್ರದ್ರುಮಂ।

ಈ ಪದ್ಯವನ್ನು ಆಧರಿಸಿ ರಾಷ್ಟ್ರಕವಿ ಎಂ. ಗೋವಿಂದ ಪೈ ಅವರು ಜಯಸಿಂಹ ಜಗದೇಕ ಮಲ್ಲನ ಕಾಲ ಕ್ರಿ.ಶ. 1015 1042 ಎಂದೂ ಅವನಲ್ಲಿಯೇ ದುರ್ಗಸಿಂಹನು ಸಂಧಿ ವಿಗ್ರಹಿಯಾಗಿರಬೇಕೆಂದೂ, ಮೇಲಿನ ಪದ್ಯದಲ್ಲಿ ಹೇಳಿದ ಶಕ ಸಂವತ್ಸರ 53ನೆಯ ಪ್ರಜಾಪತಿ ಸಂವತ್ಸರ ಚೈತ್ರ ಶುದ್ಧ 12 ಸೋಮವಾರವು ಕ್ರಿ.ಶ. 1031ನೆಯ ಮಾರ್ಚ್ ಎಂಟನೆಯ ತಾರೀಕು ಆಗುತ್ತದೆ ಎಂದೂ ನಿರ್ಣಯಿಸಿದ್ದಾರೆ.

ದುರ್ಗಸಿಂಹನು ತನ್ನ ಗ್ರಂಥದ ಆದಿಭಾಗದಲ್ಲಿ ಸುಮಾರು 62 ಪದ್ಯಗಳಲ್ಲಿ ತನ್ನ ವಿಚಾರವನ್ನು ವಿವರವಾಗಿ ತಿಳಿಸಿದ್ದಾನೆ. ಅದು ಹೀಗಿದೆ : ಕರ್ಣಾಟಕದ ಕಿಸುಕಾಡು ನಾಡಿನಲ್ಲಿ ಸಯ್ಯಡಿಯೆಂಬ ಅಗ್ರಹಾರದಲ್ಲಿ 'ಸಕಲ ಧರ್ಮಕ್ಕೆಲ್ಲಂ ಕಯ್ಯಾಲ್ ಮೂಡಿದಂತೆ' ದುರ್ಗಸಿಂಹನೆಂಬ ಬ್ರಾಹ್ಮಣನಿದ್ದನು. ಆತನ ಹೆಂಡತಿರೇವಕ. ಇವರ ಮಗ 'ಮನ್ವಾದಿ ಪುರಾಣ ಮುನಿಗಣ ಪ್ರಣತ ಶ್ರುತಿವಿಹಿತ ವಿಶುದ್ಧ ಮಾರ್ಗನು ನಿತ್ಯ ಹೋಮಾಧ್ಯಯನಾನೇಕ ಯಾಗಾವತಸ್ನಾನ ಪವಿತ್ರಗಾತ್ರನು, ಭಗವನ್ನಾರಾಯಣ ಚರಣಾಂಬುಜ ಸ್ಮರಣ ಪರಿಣತಾಂತಃಕರಣನುಂ, ತರ್ಕ ವ್ಯಾಕರಣ ಕಾವ್ಯ ನಾಟಕ ಭರತ ವಾತ್ಸಾಯನಾದ್ಯಶೇಷ ವಿದ್ಯಾ ಸಮುದ್ರ ತರಣಗುಣೈಕ ಪುಣ್ಯನುಂ, ಧರಾಮರಾಗ್ರಗಣ್ಯನುಂ' ಆದ ದುರ್ಗಮಯ್ಯನಿದ್ದನು. ಅವನ ಮಗನಾದ 'ದೇವದ್ವಿಜ ಗುರುಜನಪದ ಸೇವಾ ನಿರತ'ನಾದ ಈಶ್ವರಾಯನಿದ್ದನು. ಅವನ ಹೆಂಡತಿ ರೇವಾಂಬಿಕೆ, ಇವರಿಬ್ಬರ ಮಗ ಪ್ರಸ್ತುತ ಕವಿಯಾದ ದುರ್ಗಸಿಂಹ. ಈತನು ಬ್ರಾಹ್ಮಣ. ಕಮ್ಮೆ ಕುಲದವನು, ಗೌತಮಗೋತ್ರ ಸಂಭೂತನು, ಇವನ ಗುರು 'ಮಹಾಯೋಗಿ'ಯಾದ ಶಂಕರಭಟ್ಟ, ಚಾಳುಕ್ಯರಾಜರಲ್ಲಿ 'ಕಲಿಕಾಲಕರ್ಣ' 'ನೃಪ ಚಕ್ರವರ್ತಿತಿಲಕಂ' 'ಶ್ರೀ ಕೀರ್ತಿ ವಿದ್ಯಾಧರಂ' 'ಸತ್ಯಾಶ್ರಯ ಕುಲತಿಲಕಂ' 'ಚೋಳ ಕಾಲಾನಲಂ' ಎಂಬ ಬಿರುದುಗಳುಳ್ಳ ಜಗದೇಕಮಲ್ಲ ಜಯಸಿಂಹ ಎಂಬ ರಾಜನಲ್ಲಿ ಶ್ರೀ ಗಂಡಭೂರಿಶ್ರಯನೆಂಬ ಬಿರುದುಳ್ಳ ಸಿಂಹಸನ್ನಾಹನೆಂಬ ದಂಡನಾಯಕನಿದ್ದನು. ಅವನ ಪಾದಕಮಲ

ಶೃಂಗನಾದ ಚಕ್ರವರ್ತಿದಂಡಾಧೀಶ, ಕೋದಂಡರಾಮಾಧಿಪ ಮೊದಲಾದ ಬಿರುದುಳ್ಳ ಕುಮಾರಸ್ವಾಮಿಯು ಕವಿಗೆ ಜಗದೇಕಮಲ್ಲನಲ್ಲಿ ಸಂಧಿ ವಿಗ್ರಹಿ ಪದವಿಯನ್ನು ಕೊಡಿಸಿದನು. ಇವನು ತನ್ನ ಚಕ್ರವರ್ತಿಯ ಆಜ್ಞೆಯಂತೆ ಸಯ್ಯಡಿಯಲ್ಲಿ 'ಹರಿಹರಭನನ' ಗಳನ್ನು ಮಾಡಿಸಿದನಂತೆ. ಈತನು ಪೂರ್ವಕವಿಗಳಲ್ಲಿ ವಾಲ್ಮೀಕಿ, ವ್ಯಾಸರನ್ನೂ 'ನಾಭೇಯಂ ಸುರಾಮಾತ್ಯ ಕರ್ಣನಿಗಿಂತ, ನಿಶ್ವೇಶ್ವರನಿಗಿಂತ, ಹನುಮಂತನಿಗಿಂತ, ಗರುಡನಿಗಿಂತ ದುರ್ಗಸಿಂಹನು ಇಮ್ಮಡಿ, ಮುಮ್ಮಡಿ, ನಾಲ್ಮಡಿ, ಐದುನುಡಿ ದೊಡ್ಡವನಂತೆ!

ಪರಮಾತ್ಮನು ಪರಮೇಶ್ವರ, ವಿಷ್ಣುವು ದೈವ, ಮಹಾಯೋಗಿಗಳಾದ ಶಂಕರಭಟ್ಟರು ಗುರುಗಳು, ಚೆನ್ನಾಗಿ ಪೋಷಿಸಿದವನು ಶ್ರೀ ಚೋಳಕಾಳಾನಲ ಎಂಬ ಬಿರುದುಳ್ಳ ರಾಜಶ್ರೇಷ್ಠನೂ, ಚಕ್ರವರ್ತಿ ತಿಲಕನೂ, ಚೆನ್ನಾಗಿ ಸೊಕ್ಕಿದ ವೈರಿಗಳೆಂಬ ಆನೆಗಳಿಗೆ ಸಿಂಹಸ್ವರೂದೆನೂ ಆದ ಜಗದೇಕಮಲ್ಲ ಜಯಸಿಂಹನು ಒಡೆಯನು ಎಂದ ಮೇಲೆ ಮರ್ಗಸಿಂಹನೆ ದೊಡ್ಡ ತನವನ್ನು ಏನೆಂದು ವರ್ಣಿಸಲಿ! ಮುಂದೆ ನೇರವಾಗಿ ತನ್ನ ಕೃತಿಯನ್ನು ಆರಂಭಿಸಲು ಪೀಠಿಕೆ ಹಾಕುತ್ತಾನೆ :

**ವಸುಭಾಗ ಭಟ್ಟ ಕೃತಿಯಂ**
**ವಸುಧಾಧಿಪ ಹಿತನಖಿಲ ವಿಬುಧಸ್ತು ತಮಂ**
**ಪೊಸತಾಗಿದೆ ವಿರಚಿಸುವೆಂ**
**ವಸುಮತಿಯೊಳ್ ಪಂಚತಂತ್ರಮಂ ಕನ್ನಡದಿಂ**

ಪಂಚತಂತ್ರವು ಗದ್ಯಭೂಯಿಷ್ಠವಾದ ಚಂಪೂರೂಪವಾಗಿದೆ. ಇದರಲ್ಲಿ

1. ಭೇದಪ್ರಕರಣ ವರ್ಣನಂ
2. ಪರೀಕ್ಷಾ ವ್ಯಾವರ್ಣನಂ
3. ವಿಶ್ವಾಸ ಪ್ರಕರಣ ವರ್ಣನಂ
4. ವಂಚನಾ ಪ್ರಕರಣ ವರ್ಣನಂ
5. ಮಿತ್ರಕಾರ ಪ್ರಕರಣಂ

ಎಂಬ ಹೆಸರಿನ ಐದು ತಂತ್ರಗಳಿವೆ. ಪಂಚತಂತ್ರದ ಕಥೆಗಳು ಹುಟ್ಟಿದ ವಿಚಾರವನ್ನು ಈ ರೀತಿಯಾಗಿ ಹೇಳಿದ್ದಾನೆ:

ಪರಜತಗಿರಿಯಲ್ಲಿ ಪ್ರೀತಿಯಿಂದ ಗಿರಿಜಾಪತಿಯಾದ ಶಿವನೂ ಶಂಕರನೂ ಭಾಗೀರಥಿಯ ವಲ್ಲಭನೂ ದೇವ ದೇವನೂ ವರದನೂ ಸಮಸ್ತ ದೇವತೆಗಳ ರತ್ನ ಕಿರೀಟ ಗಳು ತಾಗಿದ ಪಾದಕಮಲವುಳ್ಳವನೂ ಆದ ಶಿವನು ಪ್ರಸಿದ್ಧವಾದ ಈ ಕಥೆಯನ್ನು ಹೇಳುವುದಕ್ಕಾಗಿ ಅರ್ಧನಾರೀಶ್ವರನಾಗಿದ್ದನು. ಒಂದು ದಿನ ಪರಮೇಶ್ವರನು ಮೇರು ಪರ್ವತದ ಮೇಲೆ ಅತ್ಯಂತ ಸಂತೋಷದಿಂದ ಎಡದಲ್ಲಿ ಬ್ರಹ್ಮನೂ ಬಲದಲ್ಲಿ ವಿಷ್ಣು ವೂ ಹಿಂದೆ ಮೂವತ್ತು ಮೂರು ಕೋಟಿ ದೇವತೆಗಳೂ ಮುಂದೆ ನಂದೀಶ ವೀರಭದ್ರರೇ ಮೊದಲಾದ ಗಣಗಳ ಒಡೆಯರೂ ತೊಡೆಯ ಮೇಲೆ ಗೌರಿಯೂ ಜಡೆಯಲ್ಲಿ ಗಂಗೆಯೂ ಸಹಿತವಾಗಿ ಓಲಗಗೊಟ್ಟು ಕುಳಿತಿದ್ದನು. ಹಾಗಿದ್ದ ಪರಮೇಶ್ವರನಿಗೆ ಗೌರಿಯು ಕಮಲಗಳನ್ನು ಮುಗಿದು ದೇವಾ, ನೀವು ನನಗೆ ಒಂದು ಅಪೂರ್ವವಾದ ಕಥೆಯನ್ನು ಹೇಳಬೇಕು ಎನ್ನಲು ಹರನು ಮುಗುಳ್ನಕ್ಕು ಪಾರ್ವತಿಗೆ ಅಪೂರ್ವವಾದ ಕಥೆಗಳನ್ನು ಹೇಳುತ್ತಿದ್ದನು. ಆಗ ಆ ಕಥಾಗೋಷ್ಠಿಯಲ್ಲಿ ಪುಷ್ಪದಂತನೆಂಬ ಗಣ ಪ್ರಧಾನನು ಇದ್ದು ಎಲ್ಲವನ್ನೂ ಕೇಳಿ ಆತನು ಏನೋ ಒಂದು ಕಾರಣದಿಂದ ಮನುಷ್ಯಲೋಕದಲ್ಲಿ ಹುಟ್ಟಿ

ಗುಣಾಢ್ಯನೆಂಬ ಸತ್ವನಿಯಾಗಿ ಶಾಲಿವಾಹನನೆಂಬ ಚಕ್ರವರ್ತಿಯ ಕವಿಯಾಗಿದ್ದು ಹರನು ಗೌರಿಗೆ ಹೇಳಿದ ಕಥೆಗಳನ್ನು ಪೈಶಾಚಿಕ ಭಾಷೆಯಲ್ಲಿ ಬೃಹತ್ಕಥೆಗಳನ್ನಾಗಿ ಮಾಡಿ ಹೇಳಿದನು. ಅವುಗಳನ್ನು ವಸುಭಾಗಭಟ್ಟನು ಕೇಳಿ ಆ ಕಥಾ ಸಮುದ್ರದಲ್ಲಿ ಪಂಚರತ್ನವಾದ ಐದು ಕಥೆಗಳನ್ನು ಆರಿಸಿ ಪಂಚತಂತ್ರ ಎಂದು ಹೆಸರಿಟ್ಟು ಸಮಸ್ತ ಜನರ ಉಪಕಾರಕ್ಕಾಗಿ ಹೇಳಿದನು. ಅದರಿಂದ, ರಾಜರಿಗೆ ಹಿತಕರವೂ ಸಮಸ್ತ ಪಂಡಿತರಿಂದ ಪ್ರಶಂಸಿತವೂ ಆದ ವಸುಭಾಗಭಟ್ಟನ ಕೃತಿಯನ್ನು ಪ್ರಪಂಚದಲ್ಲಿ ಹೊಸತಾಗುವಂತೆ ಪಂಚತಂತ್ರವನ್ನು ಕನ್ನಡದಲ್ಲಿ ವಿರಚಿಸುವೆನು.

ಗ್ರಂಥದ ಆದಿಯಲ್ಲಿ ವಿಷ್ಣುವನ್ನು ಮೊತ್ತಮೊದಲು ಸ್ತುತಿಸಿ ಬಳಿಕ ಈಶ್ವರ, ಬ್ರಹ್ಮ, ಸರಸ್ವತಿ, ಚಂದ್ರ, ಮನ್ಮಥ, ಸೂರ, ಗಣಪತಿ, ದುರ್ಗೆ ಇವರನ್ನು ಅನುಕ್ರಮವಾಗಿ ಸ್ತುತಿಸಿದ್ದಾನೆ. ಪ್ರತಿಯೊಂದು ತಂತ್ರದ ಕೊನೆಯಲ್ಲೂ ಈ ಗದ್ಯಭಾಗವಿದೆ.

**ಪರಾಮರ್ಶನ ಗ್ರಂಥಗಳು**


1. ದುರ್ಗಸಿಂಹನ ಕರ್ನಾಟಕ ಪಂಚತಂತ್ರಂ–ಗುಂಡ್ಮಿ ಚಂದ್ರಶೇಖರ ಐತಾಳ
2. ಕನ್ನಡ ಸಾಹಿತ್ಯ ಚರಿತ್ರೆ – ಡಾ. ಹೆಚ್. ನಂಜೇಗೌಡ


❖❖❖

ದಿವದ ಗಾನವು
ಹಾಯ್ದ ಹಳ್ಳಿಯ
ನೆಲವು ಹಾಡನು ಗುನುಗಿದೇ।
ಪಾಡು ಸರಿಯುತ
ಜಗದ ಹಾಡಿಗೆ
ದಾರಿ ತೋರಿಸಿ ಹರಸಿದೇ॥

# ಸಂಗೀತ ಚಿಕಿತ್ಸೆ

**ಶ್ರೀವಿಜಯ**
ಸಹಪ್ರಾಧ್ಯಾಪಕರು, ಶ್ರೀ ವೈ.ಎಂ. ಮಲ್ಲಿಕಾರ್ಜುನಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಯಳಂದೂರು ಚಾಮರಾಜನಗರ ಜಿಲ್ಲೆ–571441

ಸಂಗೀತಕಲೆ ಸ್ವರ, ರಂಗ, ಭಾವ, ಲಯ, ಹಂಗು ಶೃತಿಗಳಿಂದ ಕೂಡಿದ ಧ್ವನಿಸಮನ್ವಯವಾಗಿದೆ. ಧ್ವನಿಯು ಮಾನವನ ದೈಹಿಕ ಬೌದ್ಧಿಕ ಹಾಗೂ ಮಾನಸಿಕ ಆರೋಗ್ಯದ ಸಮತೋಲನವನ್ನು ಕಾಯ್ದುಕೊಂಡು ಹೋಗುವಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಆದ್ದರಿಂದಲೇ ಭಾರತದಲ್ಲಿ ಹಾಗು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ 'ಸಂಗೀತ ಚಿಕಿತ್ಸೆಯು' ಹೆಚ್ಚು ಜನಪ್ರಿಯವಾಗುತ್ತಿದ್ದು, ಸಂಗೀತ ಚಿಕಿತ್ಸೆಗಾಗಿಯೇ ವಿಶೇಷ ಪಠ್ಯಕ್ರಮವನ್ನು ರೂಪಿಸಲಾಗಿದೆ.

'ರಾಗಪದ್ಧತಿ'ಯನ್ನು ಕುರಿತು 9ನೇ ಶತಮಾನದಲ್ಲಿ ಮತುಂಗ ಮುನಿಯು ಹೀಗೆ ಹೇಳಿದ್ದಾರೆ: 'ರಾಗವು ಸುಮಧುರವಾದ ಧ್ವನಿಯ ಸಂಯೋಜನೆಯಾಗಿದ್ದು, ಮಾನವನ ಹೃದಯವನ್ನು ಪ್ರಫುಲ್ಲಿತವಾಗಿ ಮಾಡುವ ಶಕ್ತಿ ಹೊಂದಿದೆ. ಒಂದು ರಾಗವನ್ನು ಮೇಲಿಂದ ಮೇಲೆ ಕೇಳುವುದರಿಂದ ನಿರ್ದಿಷ್ಟವಾದ ತರಂಗಗಳು ಉತ್ಪತ್ತಿಯಾಗಿ, ರೋಗಪೀಡಿತ ನರಗಳಿಗೆಹಾಗೂ ಸ್ನಾಯುಗಳಿಗೆ ವಿಶೇಷ ಸಂವೇದನೆಯನ್ನು ನೀಡಿ ಅವುಗಳಲ್ಲಿ ಹೆಚ್ಚಿನ ರಕ್ತಪರಿಚಲನೆಯನ್ನು ಹಾಗೂ ಶಕ್ತಿಯನ್ನು ಉಂಟು ಮಾಡುತ್ತದೆ' ಇದರಿಂದ ಆ ರೋಗಿಯು ತನ್ನಿಂದ ತಾನೇ ಸಹಜವಾಗಿ ಗುಣಮುಖನಾಗುತ್ತಾನೆ.

**ಪಶ್ಚಿಮ ದೇಶಗಳಲ್ಲಿ ಸಂಗೀತ ಚಿಕಿತ್ಸೆ**

ಪಾಶ್ಚಿಮಾತ್ಯರಿಗೆ ಅನಾದಿಕಾಲದಿಂದಲೂ ಸಂಗೀತ ಮತ್ತು ಆರೋಗ್ಯದ ನಡುವಿನ ಸಂಬಂಧದ ಬಗೆಗೆ ಅರಿವಿತ್ತು. ಉದಾಹರಣೆಗೆ: ಗ್ರೀಕರ ಅಪೊಲೊ, ಸಂಗೀತ ಮತ್ತು ಕಲೆಗೆ ಮಾತ್ರವಲ್ಲ ಗುಣಪಡಿಸುವಿಕೆಗೆ ಅಧಿದೇವನಾಗಿರುವುದು. ಅರಿಸ್ಟಾಟಲ್ ಮತ್ತು ಪ್ಲೇಟೋ ಬರಹಗಳಲ್ಲಿಯೂ ಸಂಗೀತ ಮತ್ತು ಆರೋಗ್ಯದ ನಡುವಿನ ಸಂಬಂಧವನ್ನು ಚರ್ಚಿಸಲಾಗಿದೆ. ಅಷ್ಟೇ ಅಲ್ಲದೇ ಆಧುನಿಕ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸಂಗೀತ ಚಿಕಿತ್ಸೆ ಹೆಚ್ಚಿನ ಖ್ಯಾತಿಯನ್ನು ಪಡೆದಿದ್ದು ಪ್ರಥಮ ಹಾಗೂ ದ್ವಿತೀಯ ಮಹಾಯುದ್ಧಗಳಲ್ಲಿ ಭಾಗವಹಿಸಿ ಮಾನಸಿಕ ಹಾಗೂ ದೈಹಿಕ ತುಮುಲಗಳಿಂದ ಬಾಧೆ ಪಡುತ್ತಿದ್ದವರಿಗೆ ಪರಿಣತ ಸಂಗೀತತಜ್ಞರಿಂದ ಸಂಗೀತ ಚಿಕಿತ್ಸೆ ನೀಡಿ ಸಮಾಧಾನವನ್ನು ಒದಗಿಸಲಾಯಿತು. ಈ ಹಿನ್ನಲೆಯಲ್ಲಿ ವಿಶ್ವದಲ್ಲಿಯೇ ಪ್ರಪ್ರಥಮ ಬಾರಿಗೆ 1944ರಲ್ಲಿ ಮಿಚಿಗನ್ ರಾಜ್ಯ ವಿಶ್ವವಿದ್ಯಾಲಯದಲ್ಲಿ ಸಂಗೀತ ಚಿಕಿತ್ಸೆ ಪದವಿ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಇಂದು ಅಮೇರಿಕದಲ್ಲಿ 'ಸರ್ಟಿಫಿಕೇಷನ್ ಬೋರ್ಡ್ ಆಫ್ ಮ್ಯೂಸಿಕ್ ಥೆರಪಿ' ಸಂಸ್ಥೆಯು ರಾಷ್ಟ್ರಮಟ್ಟದಲ್ಲಿ ಪರೀಕ್ಷೆಗಳನ್ನು ನಡೆಸುತ್ತಿದೆ. ಸಂಗೀತ ಚಿಕಿತ್ಸೆಯ ಉದ್ದೇಶದಿಂದಲೇ 1998ರಲ್ಲಿ ವಿಶೇಷವಾಗಿ 'ದಿ ಅಮೇರಿಕನ್ ಮ್ಯೂಸಿಕ್ ಥೆರಪಿ ಅಸೋಸಿಯೇಷನ್' ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

**ಭಾರತೀಯ ಸಂಗೀತ ಚಿಕಿತ್ಸೆ**

ಭಾರತೀಯ ಸಂಗೀತದಲ್ಲಿ ತತ್ವಶಾಸ್ತ್ರ, ಮನಃಶಾಸ್ತ್ರ, ಆಧ್ಯಾತ್ಮ ಸೌಂದರ್ಯ ಎಲ್ಲವೂ ಅಡಕಗೊಂಡಿವೆ. ಭಾರತೀಯ ಸಂಗೀತದ ರಾಗಗಳು ಸಾಮಗಾನ ರೂಪದಲ್ಲಿದ್ದವು. ನಿರ್ದಿಷ್ಟರಾಗವನ್ನು ಹಾಡಿದರೆ ನಿರ್ದಿಷ್ಟ ಕಾಯಿಲೆ ಉಪಶಮನಗೊಳ್ಳುತ್ತದೆ ಎಂಬ ಜ್ಞಾನ ಪ್ರಾಚೀನ ಭಾರತದಲ್ಲಿಯೆ 'ರಾಗಚಿಕಿತ್ಸೆ' ಎಂಬ ಹೆಸರಿನಲ್ಲಿ ಪ್ರಚಲಿತದಲ್ಲಿತ್ತು. ಇಂದು ಚೆನ್ನೈನ 'ನಾವ್ಸೆಂಟ್'ನಲ್ಲಿ ನಾದ ರೋಗವನ್ನು ಶಾಸ್ತ್ರೀಯವಾಗಿ ಅಭ್ಯಸಿಸಲಾಗುತ್ತದೆ. ಅಷ್ಟೇ ಅಲ್ಲದೇ ಜನವರಿಯಲ್ಲಿ ಚನ್ನೈನಲ್ಲಿ ನಡೆದ ಸಂಗೀತ ಚಿಕಿತ್ಸೆಯ ರಾಷ್ಟ್ರೀಯ ಸಮ್ಮೇಳನದಲ್ಲಿ 'ಸುನಾಮಿ' ಪೀಡಿತರು ಅನುಭವಿಸುತ್ತಿರುವ ಮಾನಸಿಕ ಒತ್ತಡವನ್ನು ಉಪಶಮಪಗೊಳಿಸಲು ಹಾಗೂ ಅವರಲ್ಲಿ ಸಮಾಧಾನ ನೆಲೆಸುವಂತೆ ಮಾಡಲು ಸಂಗೀತ ಚಿಕಿತ್ಸೆಯನ್ನು ಬಳಸಬೇಕು ಎಂಬ ಸಲಹೆಯೂ ಕೇಳಿ ಬಂದಿತು.

ಸಂಗೀತದ ರಾಗಗಳಿಗೂ ದೇಹದ ಚಕ್ರಗಳಿಗೂ ಸಂಬಂಧವಿದೆ ಎನ್ನಲಾಗಿದೆ. ಉದಾಹರಣೆಗೆ 'ಸ' ಸ್ವರವು ಅತ್ಯಂತ ಕೆಳಗಿನ ಮೂಲಾಧಾರಕ್ಕೆ ಸಂವಾದಿಯವಾಗಿದೆ. ಅಂದರೆ ಸ್ವರದ ಪಠನವನ್ನು ಶಾಸ್ತ್ರೀಯವಾಗಿ ಅಭ್ಯಸಿಸಿದ್ದೇ ಆದರೆ ಆ ಮೂಲಕ ಮೂಲಾಧಾರಚಕ್ರವನ್ನು ಚೇತನಗೊಳಿಸಲು ಸಾಧ್ಯವಿದೆ. ಇದೇ ರೀತಿ 'ರೆ' ಸ್ವರವು ಸ್ವಾಧಿಸ್ತಾನಚಕ್ರಕ್ಕೆ, 'ಗ'ವು ಮಣಿಪುರ ಚಕ್ರಕ್ಕೆ 'ನಿ'ಯು ಅತ್ಯಂತ ಉನ್ನತ ಸ್ತರದ ಚಕ್ರವಾದ ಸಹಸ್ರಾರಕ್ಕೆ ಸಂವಾದಿಯಾಗಿರುತ್ತದೆ. ಸಂಗೀತದಲ್ಲಿ ಆರೋಹ ಮತ್ತು ಅವರೋಹಗಳು ಅದೇ ಪ್ರಕಾರವಾಗಿ ಶಕ್ತಿ ಸಂಚಾರಕ್ಕೆ ಕಾರಣವಾಗುತ್ತವೆ. ಹೀಗೆ ಅನಾದಿಕಾಲದಿಂದಲೂ ಭಾರತೀಯ ಸಂಸ್ಕೃತಿಯಲ್ಲಿ ಸಂಗೀತ ಚಿಕಿತ್ಸೆ ವಿಶೇಷವಾದ ಮನ್ನಣೆಯನ್ನು ಪಡೆದಿದೆ.

ಇತ್ತಿಚಿನ ದಿನಗಳಲ್ಲಿ ಸಂಗೀತ ಚಿಕಿತ್ಸೆಯನ್ನು ವಿಶ್ವದಲ್ಲಿ ವಿವಿಧ ರೀತಿಯಲ್ಲಿ ಬಳಸಲಾಗುತ್ತದೆ. ಉದಾಹರಣೆಗೆ: ದೆಹಲಿಯ ಅಪೋಲೋ ಆಸ್ಪತ್ರೆಯಲ್ಲಿ ಸಂಗೀತ ಚಿಕಿತ್ಸೆಯದೇ ಒಂದು ವಿಭಾಗವಿದ್ದು ಅಲ್ಲಿ ಅಧಿಕ ರಕ್ತದೊತ್ತಡ, ಉಗ್ಗು, ನೋವು, ಮೈಗ್ರೇನ್, ತಲೆನೋವು ಅರ್ಥೆಟಿಸ ಮೊದಲಾದ ಕಾಯಿಲೆಗಳಿಗೆ ಚಿಕಿತ್ಸೆಯನ್ನು ನೀಡಲಾಗುತ್ತದೆ. ಗುಜರಾತಿನ ಬರೋಡ ನಗರದಲ್ಲಿರುವ ಕೆ.ಎಂ.ಶಾಹ ದಂತವೈದ್ಯ ಕಾಲೇಜು ಮತ್ತು ಆಸ್ಪತ್ರೆಗಳ ವರಾಂಡದಲ್ಲಿ ಸಂಗೀತ ಚಿಕಿತ್ಸಾವಿಧಾನವನ್ನು ಅಳವಡಿಸಿದ್ದು, ಸರದಿ ಕಾಯುವ ರೋಗಿಗಳು ಈ ಸಂಗೀತವನ್ನು ಕೇಳುತ್ತಾ ಉಲ್ಲಸಿತರಾಗಿ ಕುಳಿತಿರುತ್ತಾರೆ.

ಈಚೆಗೆ 'ಬಿಬಿಸಿ' ಪುಟಾಣಿಗಳ ಆರೋಗ್ಯ ಕಾಪಾಡುವಲ್ಲಿ ಶಾಸ್ತ್ರೀಯ ಸಂಗೀತದ್ದು ಗಣನೀಯ ಪಾತ್ರ ಎಂದು ಗುರುತಿಸಿದೆ. ಸಂಗೀತ ಮಗುವಿನ ಮೆದುಳಿನ ಸಂಚಲನವನ್ನು ಹೆಚ್ಚಿಸಿ ಸೂಕ್ಷ್ಮವಿಚಾರಗಳ ಗ್ರಹಿಕೆಗೆ ಅನುಕೂಲ ಮಾಡಿಕೊಡುವದು ಮತ್ತು ಉತ್ತಮ ಸಂಗೀತ ಮಗುವಿನ ಆರೋಗ್ಯಯುತ ಬೆಳವಣಿಗೆಗೆ ಸಹಕರಿಸುತ್ತದೆ ಎಂಬ ವರದಿಯನ್ನು ಬಿತ್ತರಮಾಡಿತ್ತು.

ಕೆಲವು ರಾಗಗಳು ಕೆಲವು ನಿರ್ದಿಷ್ಟ ಸಮಸ್ಯೆಗಳಿಗೆ ಸಮಾಧಾನ ಕೊಡುತ್ತವೆ ಎಂದು ಕಂಡುಕೊಳ್ಳಲಾಗಿದೆ. ಉದಾ: ಸಾವೇರಿ ರಾಗವನ್ನು ಗಂಟುನೋವಿನಿಂದ ಬಳಲುವವರಿಗೆ ಕೇಳಿಸಿದ್ದಾದರೆ ಹೆಚ್ಚಿನ ಪರಿಣಾಮ ಕಂಡು ಬರುತ್ತದೆ. ಅತಿಯಾದ ಚಟುವಟಿಕೆಗಳಿಂದ ಕೂಡಿದಮಕ್ಕಳಿಗೆ ಭಜನಗಳಲ್ಲಿ ತೊಡಗಿಸಲಾಗುತ್ತದೆ. ಮಧ್ಯಮಾವತಿಯು ಉತ್ತೇಜಿತ ಮನಸ್ಸನ್ನು ಶಾಂತಗೊಳಿಸುತ್ತದೆ. ಕಫದೋಷಕ್ಕೆ ಸಂಬಂಧಿಸಿದ ಖಾಯಿಲೆಗಳಾದ

ಅಸ್ತಮಾ, ಕೆಮ್ಮುಶೀತ, ಕ್ಷಯರೋಗ(ಟೀಬಿ), ಮೊದಲಾದ ಸಮಸ್ಯೆಗಳ ತೀವ್ರತೆಯನ್ನು ಭೈರವಿರಾಗವು ನಿವಾರಿಸಬಲ್ಲದು. ರಾಗ ಮಲ್ಹಾರ ಸಿಟ್ಟು ಒತ್ತಡಗಳಿಗೆ ಮದ್ದಾದರೆ, ರಾಗ ಸೌರವ, ಜೈಜೈವಂತೆ ಮಾನಸಿಕ ಕ್ಲೇಶವನ್ನು ಕಡಿಮೆ ಮಾಡುತ್ತವೆ. ರಾಗ ಹಿಂಡೋಳವು ಏಕಾಗ್ರತೆಯನ್ನುಹೆಚ್ಚಿಸುತ್ತದೆ. ಅಷ್ಟೇಅಲ್ಲದೆ ಯಕೃತ ಸಂಬಂಧಿ ಕಾಯಿಲೆಗಳಿಗೆ ಮದ್ದಾಗುತ್ತದೆ.

ಆಧುನಿಕ ಜಗತ್ತಿನಲ್ಲಿ ಕೈಗಾರಿಕರಣದಿಂದ, ವ್ಯಾಪಾರೀಕರಣದಿಂದ ಹಾಗೂ ನಗರೀಕರಣದಿಂದ ಅನೇಕ ಹೊಸಹೊಸ ಬಗೆಯ ರೋಗಗಳಿಗೆ ಮಾನವನು ತುತ್ತಾಗುತ್ತಿದ್ದಾನೆ ಮತ್ತು ಅವುಗಳಿಂದ ಮುಕ್ತಿ ಪಡೆಯಲು ವೈದ್ಯರು ಹೇಳುವ ದುಬಾರಿ ಬೆಲೆಯ ಔಷಧಿಗಳಿಗೆ ಮೊರೆ ಹೋಗಬೇಕಾಗುತ್ತದೆ. ಈ ನಿಟ್ಟಿನಲ್ಲಿ ವಿಚಾರ ಮಾಡಿದಾಗ ಅತ್ಯಂತ ಸರಳವಾದ, ಯಾವುದೇ ಆರ್ಥಿಕ ಹೊರೆಯಿಲ್ಲದೆ, ಕೆಟ್ಟ ಪರಿಣಾಮಗಳನ್ನು ಬೀರದೆ ಇರುವ 'ಸಂಗೀತ ಚಿಕಿತ್ಸೆ' ಪದ್ಧತಿಯನ್ನು 'ವೈಜ್ಞಾನಿಕವಾಗಿ' ಪದ್ಧತಿಯಲ್ಲಿ ಅಳವಡಿಸಿಕೊಂಡರೆ ಜನರಿಗೆ ಹೆಚ್ಚು ಅನುಕೂಲಕರವಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

❖❖❖

ದೇವನಿಲ್ಲಿಗೆ
ಬರುವ ಮುನ್ನವೆ
ಬಂದು ತಲುಪಿದೆ ಗಾನವೂ।
ಅವನ ಕಾಣುವ
ಬಯಕೆ ಸುರಿಸುತ
ಕಾದು ಕುಳಿತಿವೆ ಕಂಗಳೂ॥

# ಓ.ಎಲ್. ನಾಗಭೂಷಣಸ್ವಾಮಿ ಅವರ
# ‘ಉಲಿವ ಮರ’ದೊಳಗೆ

**ಡಾ. ಗುರುಸ್ವಾಮಿ ಹಿರೇಮಠ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು ನವನಗರ, ಬಾಗಲಕೋಟೆ

ಓ.ಎಲ್. ನಾಗಭೂಷಣಸ್ವಾಮಿ ಅವರು ಸಾಹಿತ್ಯ ವಿಮರ್ಶೆ ಹಾಗೂ ಭಾಷಾಂತರ ಕ್ಷೇತ್ರಗಳಿಗೆ ಗಂಭೀರವಾಗಿ ತೊಡಗಿಸಿಕೊಂಡ ವಿದ್ವಾಂಸರು. ಮಾತ್ರವಲ್ಲದೆ, ಈ ವಿಚಾರಗಳಿಗೆ ಸಂಬಂಧಿಸಿದ ಅಪೂರ್ವವಾದ ಕೃತಿಗಳನ್ನು ಓದುಗ ವಲಯಕ್ಕೆ ನೀಡಿದವರು. ವಿಮರ್ಶೆಯ ಪರಿಭಾಷೆ, ಪ್ರಜ್ಞಾಪ್ರವಾಹ ತಂತ್ರ, ಇಂದಿನ ಹೆಜ್ಜೆ, ಮತ್ತೆ ತೆರೆದ ಬಾಗಿಲು ಎಂಬಂತಹ ವಿಮರ್ಶಾ ಕೃತಿಗಳ ಮೂಲಕ ನಾಡಿನ ವಿಮರ್ಶಾ ವಲಯವನ್ನು ಮರುಚಿಂತನೆಗೆ ಹಚ್ಚಿದವರು. ಜಿಡ್ಡು ಕೃಷ್ಣಮೂರ್ತಿಯವರ ‘ಅನುದಿನ ಚಿಂತನ’ ‘ಪ್ರೀತಿ ಎಂದರೇನು?’ ‘ಸಂಬಂಧವೆಂದರೇನು?’ ಎಂಬಂತಹ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡುವ ಮೂಲಕ ಕನ್ನಡದ ಚಿಂತನಾಕ್ರಮವನ್ನು ಹೊಸ ದೃಷ್ಟಿಕೋನದೆಡೆಗೆ ಪರಿಚಯಿಸಿದವರು. ಜೊತೆಗೆ ಅಲ್ಲಮನ ವಚನ ಸಂಗ್ರಹ, ತತ್ವಪದಗಳನ್ನು, ಆಧುನಿಕ ತಮಿಳು ಕವಿತೆಯಂತಹ ಕೃತಿಗಳನ್ನು ಸಂಪಾದಿಸುವ ಮಹತ್ವದ ಕಾರ್ಯಗಳ ಮೂಲಕ ಕನ್ನಡದ ಚಿಂತನೆಯನ್ನು ವಿಸ್ತರಿಸಿದವರು. ಬೇಂದ್ರೆ ಕೃಷ್ಣಶಾಸ್ತ್ರಿ, ಜಿ.ಎಸ್. ಶಿವರುದ್ರಪ್ಪ, ಚಂದ್ರಶೇಖರ ಕಂಬಾರರಂತಹ ಮಹತ್ವದ ದಾರ್ಶನಿಕ–ಚಿಂತಕರ, ಕವಿಗಳ ಕೃತಿಗಳನ್ನು ಇಂಗ್ಲೀಷಿಗೂ ಅನುವಾದಿಸುವುದರೊಂದಿಗೆ ಕನ್ನಡದ ಚಿಂತನೆಯನ್ನು ಗಡಿಯಾಚೆಗೂ ಪರಿಚಯಿಸಿದವರು. ಇಂತಹ ಕನ್ನಡದ ಮಹತ್ವದ ಮತ್ತು ಹೊಸ ಚಿಂತನೆಗಳನ್ನು ರೂಪಿಸಿದ ಲೇಖಕರಾಗಿದ್ದು; ಅವರ ಪ್ರಸ್ತುತ ‘ಉಲಿವ ಮರ’ ಕೃತಿಯು ‘ವಚನ ಸಾಹಿತ್ಯ ಮತ್ತು ಸಂಸ್ಕೃತಿ’ ಕುರಿತು ಜಿಜ್ಞಾಸೆ ನಡೆಸಿದ ಮಹತ್ವದ ಕೃತಿಗಳಲ್ಲಿ ಒಂದು. ಪ್ರಸ್ತುತ ಕೃತಿಯೊಳಗಿನ ವಿಚಾರಗಳನ್ನು ಗ್ರಹಿಸುವ ಹಾಗೂ ವಿಶ್ಲೇಷಿಸಿಕೊಳ್ಳುವ ಮತ್ತು ಪ್ರಸ್ತುತ ಕಾಲಘಟ್ಟಕ್ಕೆ ಒಂದು ಕೃತಿ ತೋರುವ ಮಾರ್ಗಗಳನ್ನು ಶೋಧಿಸಿ ಗುರುತಿಸಿಕೊಳ್ಳುವುದು ಈ ಲೇಖನದ ಉದ್ದೇಶ.

ಭಾರತೀಯ ಜ್ಞಾನ ಪ್ರವಾಹದ ಮುಂದುವರೆದ ಭಾಗವಾಗಿ ‘ಉಲಿವ ಮರ’ ಎನ್ನುವ ಈ ಕೃತಿಯು ಭಕ್ತಿ ದೇವರು– ನೆನಪು, ವಿಚಾರ ಮೊದಲಾಗಿ, ಬಸವಣ್ಣ ಮತ್ತು ಭಕ್ತಿ, ಭಕ್ತಿಯ ಹಲವು ರೂಪ, ಜಂಗಮ, ಬಯಲು, ಬಯಲು ಮತ್ತು ಆವರಣ, ಧರ್ಮವೆಂಬ ಮರ, ಕಾಯ–ಕಾಯಕ, ಅಂದಂದೆ ಅರಿಯಲು ಬಾರದು, ಅರ್ಥ ತ್ರಿವಿಧ, ಕನ್ನಡಿ ಮತ್ತು ಯುದ್ಧ, ಕಟ್ಟಿಗೆ: ಒಂದು ಪದ ಆರು ಅರ್ಥ, ಕಲ್ಪಿತ–ಕಾಮಿತ ಮತ್ತು ಭಾವಿತವಲ್ಲದ ಸತ್ಯ, ನಿರಾಳ, ಅಲ್ಲಮ–ಸರಳ ಪ್ರವೇಶಿಕೆ, ‘ದಿ ಸೈನ್’ ವಚನಗಳ ಇಂಗ್ಲೀಶ್ ಅನುವಾದಕ್ಕೊಂದು ಮುನ್ನುಡಿ, ಶೂನ್ಯ ಸಂಪಾದನೆಯ ರಚನಾ ವಿನ್ಯಾಸ ತತ್ವಪದಗಳು ಪ್ರಸ್ತಾವನೆ, ಶರಣಕ್ರಾಂತಿ: ಪ್ರತಿಕ್ರಿಯೆ, ಎಂಬಂತಹ ಮೌಲ್ಯಿಕ ವಿಚಾರಗಳಿಂದ ಕೂಡಿದ ಲೇಖನಗಳ ಸಂಗ್ರಹವಾಗಿದೆ.

ಈ ಕೆಳಗೆ ಪ್ರಸ್ತಾಪಿಸಲಾದ ವಚನದೊಂದಿಗೆ ಪ್ರಸ್ತುತ ಕೃತಿ ಆರಂಭವಾಗುತ್ತದೆ.

**ಉಲಿವ ಮರದ ಪಕ್ಷಿಯಂತೆ, ದೆಸೆದೆಸೆಯನಾಲಿಸುತಿರ್ದೆ.**

**ಅರಿವರಿಲ್ಲ ಅರಿವರಿಲ್ಲ ಅರಿದು ಮರೆಯಿತ್ತಯ್ಯಾ.**

**ಮಡುವಿನೊಳಗೆ ಬಿದ್ದ ಆಲಿಕಲ್ಲಿಂತೆ**

**ತನ್ನ ತಾನಿರ್ದನು ಗುಹೇಶ್ವರಯ್ಯನು. (ವಚನ ಸಂಖ್ಯೆ–666 ಅಲ್ಲಮನ ವಚನ ಚಂದ್ರಿಕೆ)**

ಸಾಮಾನ್ಯವಾಗಿ ಅಲ್ಲಮನು ತನ್ನ ವಿಚಾರಗಳನ್ನು 'ಬೆಡಗಿನ' ಮೂಲಕ ಹೇಳುವುದು ಆತನ ವಿಶೇಷತೆ. ಇಲ್ಲಿನ ವಚನವೂ ಸಹ ಅಂತಹವುಗಳಲ್ಲಿ ಒಂದಾಗಿದೆ. ಮರದ ಮೇಲೊಂದು ಕುಳಿತ ಪಕ್ಷಿ(ಶರಣ) ತನ್ನ ಧ್ವನಿ ಮತ್ತು ಭಾವನೆಗಳನ್ನು ತಾನೆ ಆಲಿಸುತ್ತಾ ಸಂತೋಷಿಸುತ್ತದೆ. ಆದರೆ ಲೋಕದ ಜನ ಹಾಗಲ್ಲ; ಅವರು ವ್ಯವಹರಿಸುವ ಲೋಕದಲ್ಲಿ ವಿಷಯೋನ್ಮಾದಗೊಂಡು 'ದಿವ್ಯತ್ವದ' ಅರಿವಿಲ್ಲದೇ ತಮ್ಮ ಅರಿವಿನ ಸ್ವರೂಪವನ್ನೇ ತಾವು ಮರೆತವರು ಎಂಬುದನ್ನು ವಚನ ಸೂಚ್ಯವಾಗಿ ವ್ಯಕ್ತಪಡಿಸುತ್ತದೆ. ಹಾಗೆಯೇ ಶರಣನೆಂಬುವವನು ಆಲಿಕಲ್ಲಿನಂತೆ ಅರಿವಿನ ಸಾಗರದಲ್ಲಿ ಬಿದ್ದು ನಿರ್ಬಯಲುಗೊಳ್ಳುವ, ತಾನೇ ತಾನಾಗುವ ಸಾಮರಸ್ಯದ ನಿಲುವು ಇಲ್ಲಿ ವ್ಯಕ್ತವಾಗಿದೆ. (ಹೆಚ್ಚಿನ ಮಾಹಿತಿಗಾಗಿ ನೋಡಿ; ಪು.ಸಂ: 1035. ಅಲ್ಲಮಪ್ರಭುದೇವರ ವಚನ–ನಿರ್ವಚನ, ಶ್ರೀ ಸಿದ್ಧೇಶ್ವರ ಸ್ವಾಮಿಗಳು. ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ. ಮೈಸೂರು) ಈ ವಚನವನ್ನು ಮುಖ್ಯವಾಗಿಸಿಕೊಂಡು ಓ.ಎಲ್.ನಾಗಭೂಷಣ ಸ್ವಾಮಿ ಅವರು 'ಉಲಿವ ಮರದ ಪಕ್ಷಿಯ ಹಾಗೆ ದಿಕ್ಕು ದಿಕ್ಕುಗಳ ಸದ್ದು ಕೇಳುತ್ತಿದ್ದೆ, ಅರಿಯುವವರು ಇಲ್ಲ, ನಾನು ಅರಿತದ್ದೂ ಮರೆಯಿತು, ಮಡುವಿನೊಳಗೆ ಬಿದ್ದ ಆಲಿಕಲ್ಲಿನ ಹಾಗೆ ಇಲ್ಲವಾದೆ' ('ಉಲಿವ ಮರ' ಪ್ರಸ್ತಾವನೆಯ ಭಾಗ) ಎಂಬುದನ್ನು ಪ್ರಸ್ತಾಪಿಸುತ್ತಾ ಈ ಕೃತಿಗೊಂದು ಮುನ್ನುಡಿಯನ್ನು ರೂಪಿಸುತ್ತಾರೆ. ಜೊತೆಗೆ ಮನುಷ್ಯ ವ್ಯಕ್ತಿತ್ವದ ಕುರಿತಾಗಿನ ವ್ಯಾಖ್ಯಾನಗಳು, ಗೊಂದಲಗಳು ಮತ್ತು ಅದನ್ನು ಮೀರಲು ನಡೆದ, ನಡೆಯುತ್ತಿರುವ ವಾದ ಸರಣಿಗಳಿಗೆ ತೆರೆದುಕೊಳ್ಳುವ ಅನೇಕ ಸಂಗತಿಗಳು ಇಲ್ಲಿ ವ್ಯಕ್ತವಾಗಿವೆ.

ಹಾಗೆಯೇ ಮನುಷ್ಯರನ್ನು ಕಾಡಿದ ಮತ್ತು ಈ ಚಿಂತನೆಯ ಮೂಲವೂ ಆಗಿರುವ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳು ಬಹು ವಿಶಿಷ್ಟವಾದ ಪರಿಕಲ್ಪನೆಗಳು. ಇವು ಹುಟ್ಟು ಹಾಕಿರುವ ಭರವಸೆಗಳು ಮತ್ತು ಭಯಗಳು ಚಿಂತಕರನ್ನು ವಿಭಿನ್ನವಾಗಿ ಆಲೋಚಿಸುವುದಕ್ಕೆ ಹಚ್ಚಿರುವುದಂತೂ ಸತ್ಯ. ಅದಕ್ಕೆ ಈ ಕೃತಿಯ ಮೊದಲ ಅಧ್ಯಾಯವೇ ಸಾಕ್ಷಿಯಾಗಿದೆ. ಅದುವೇ 'ಭಕ್ತಿ ದೇವರು–ನೆನಪು, ವಿಚಾರ ಮೊದಲಾಗಿ' ಎಂಬ ಭಾಗದಲ್ಲಿ ಭಕ್ತಿ ಗೊತ್ತಿಲ್ಲ, ದೇವರು ಗೊತ್ತಿಲ್ಲ ಎಂಬ ನೆಲೆಯಿಂದ ಪ್ರಾರಂಭವಾಗಿ 'ಭಕ್ತಿ ಕೂಡಾ ಕಾಮದ ಹಾಗೆ, ಪ್ರೇಮದ ಹಾಗೆ ಆಗಾಗ ಮೂಡುವ, ಇರುವ, ಇಲ್ಲದಾಗುವ ಭಾವ ಇದ್ದೀತು. ಭಾವ ಅಲ್ಲವೇನೋ. ಸ್ಥಿತಿ ಇದ್ದೀತು'(ಉಲಿವ ಮರ ಪು.ಸಂ–1) ಎಂಬ ವಿಚಾರದೊಂದಿಗೆ ಚಿಂತನೆಗಳು ಪ್ರಾರಂಭವಾಗುತ್ತವೆ. ಅದು ದೇವರ ಪರಿಕಲ್ಪನೆಯೊಂದಿಗೆ ಸಂವಾದಿಸುವ ಮಾರ್ಗವಾಗಿ ಭಾವಸಂಕೀರ್ಣತೆಯನ್ನು ಪಡೆದುಕೊಳ್ಳುತ್ತದೆ.

ಹಾಗೇಯೇ ಈ ಪರಿಕಲ್ಪನೆಯು ಕೇವಲ ಮನಸಿನ ಭಾವ ಮಾತ್ರ ಆಗಿರದೆ ಅದು ದೇಹದ ಜೊತೆಗೂ ನಿಕಟವಾದ ಸಂಬಂಧವನ್ನು ಹೊಂದಿದೆ. ಅಲ್ಲದೆ ದೇಹ–ಮನಸುಗಳೆರಡು ಬೆರೆತ ಸ್ಥಿತಿಯಾಗಿ ಅದು ಅನುಭೂತಿಯ ಸ್ಥಿತಿಯನ್ನು ಪಡೆಯುತ್ತವೆ. ಈ ವಿಚಾರಗಳು ಬಸವಣ್ಣ ಮತ್ತು ಭಕ್ತಿ ಎಂಬ ಪರಿಕಲ್ಪನೆಯ ಭಾಗದಲ್ಲಿ (ಅದೇ–

ಪು.ಸಂ–9) ವ್ಯಕ್ತವಾಗಿವೆ. ಈ ಅಂಶಗಳನ್ನೊಳಗೊಂಡ ಚಿಂತನೆಗಳು ಹೊಸ ಆಯಾಮವನ್ನು ತೆರೆದುಕೊಳ್ಳುತ್ತವೆ. ಮುಂದುವರೆದು ಅದು ಭಕ್ತಿಯ ಹಲವು ರೂಪ ಎಂಬ ಭಾಗದಲ್ಲಿ ಅದು 'ಸಹನೆ, ಶೌರ್ಯ, ಶರಣಾಗತಿ, ಧೈರ್ಯ, ಇವೆಲ್ಲ ಇದ್ದರೆ ಮಾತ್ರ ಭಕ್ತಿ ಮೂಡುತ್ತದೋ ಅಥವಾ ಭಕ್ತಿ ಬೆಳೆದ ಹಾಗೆ ಈ ಗುಣಗಳೂ ಬೆಳೆಯುತ್ತವೆಯೋ ಅನ್ನುವ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟ. ಈ ಎಲ್ಲ ಗುಣಗಳಿಗೂ ಭಕ್ತಿಗೂ ಸಂಬಂಧವಿದೆ ಅನ್ನುವುದಷ್ಟು ಮಾತ್ರ ನಿಜ. ಭಕ್ತಿ ಬೆಳೆದ ಹಾಗೆ ಈ ಗುಣಗಳೂ ಬೆಳೆದು ಪುಷ್ಟವಾಗುತ್ತವೆ.' (ಅದೇ ಪು.ಸಂ–13) ಎಂಬ ನಿಲುವಿಗೆ ಈ ವಿಚಾರಗಳು ಗುರುತಿಸಿಕೊಳ್ಳುತ್ತವೆ.

ಅದೇ ರೀತಿಯಲ್ಲಿ 'ಜಂಗಮ' ಪರಿಕಲ್ಪನೆಯು ಸಹ ಹೊಸ ಆಲೋಚನೆಗೆ ತೆರೆದುಕೊಳ್ಳುತ್ತದೆ. ಯಾವುದನ್ನು ಜಾತಿ ಸೂಚಕವಾಗಿ ಪರಿಗಣಿಸುವ ಸಂದರ್ಭದಲ್ಲಿ (ಇಂತಹ ಅನೇಕ ಪರಿಕಲ್ಪನೆಗಳು ಜಾತಿ ಸೂಚಕವಾಗಿ ಬಳಕೆಯಾಗುತ್ತಾ ಹೊಸ ವಿವಾದಗಳನ್ನು, ಚರ್ಚೆಗಳನ್ನು ಹುಟ್ಟು ಹಾಕುತ್ತಿರುವ ಹೊತ್ತಿನಲ್ಲಿ) ಅದನ್ನು ಆದಿಯಲ್ಲಿ ಹುಟ್ಟುವ ಮತ್ತು ಅನಾದಿಯಲ್ಲಿ ಕೊನೆಗೊಳ್ಳುವ ಇಂತಹ ತಾತ್ವಿಕ ವಿಚಾರಗಳನ್ನು ಇಲ್ಲಿ ಚರ್ಚಿಸುತ್ತಾ ಜಂಗಮವೆನ್ನುವುದು 'ಇಡೀ ಬದುಕು, ಬದುಕಿರುವ ಒಂದೊಂದೂ ಜೀವ, ಜೀವದ ದೇಹದೊಳಗಿನ ಒಂದೊಂದೂ ರಕ್ತಕಣ, ಮನಸ್ಸಿನ ಒಂದೊಂದೂ ಭಾವ, ಆಲೋಚನೆ, ಎಲ್ಲವೂ ಜಂಗಮವೇ, ಹರಿವೇ. ಅದನ್ನು ಅರಿವೆಗೆ ತಂದುಕೊಂಡಾಗ ಜಂಗಮವಲ್ಲದ ಜೀವ ಒಂದೂ ಇರುವುದಿಲ್ಲ. ಜಂಗಮ ಚಲನೆಗೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ'. (ಅದೇ ಪು.ಸಂ–19) ಎಂಬಲ್ಲಿಗೆ ವಿಸ್ತಾರಗೊಳ್ಳುತ್ತ ಚಿಂತನೆಯ ವಿಸ್ತಾರವೂ ಇಲ್ಲಿ ತೆರೆದುಕೊಳ್ಳುತ್ತದೆ.

ಶರಣರ, ಅನುಭಾವಿಗಳ ವಿಚಾರಗಳನ್ನು ಚರ್ಚಿಸುವಾಗಲೆಲ್ಲಾ ಹೆಚ್ಚು ಮಹತ್ವವನ್ನು ಪಡೆಯುವ ಪರಿಕಲ್ಪನೆಯಲ್ಲಿ 'ಬಯಲು' ಒಂದು. ಮೇಲು ನೋಟಕ್ಕೆ ಸರಳವೆನಿಸುವ ಈ ಪರಿಕಲ್ಪನೆಯು ನಮ್ಮ ಅರಿವಿಗೆ ದಕ್ಕದ ವಿಚಾರವಾಗಿಯೂ, ನಮ್ಮ ಅನುಭಾವದ ನೆಲೆಯನ್ನು ಪ್ರಶ್ನಿಸಿಕೊಳ್ಳಬೇಕಾದ ಮತ್ತು ನಿಜದ ಸಂಗತಿಯನ್ನು ಜಾಗೃತಿಗೊಳಿಸುವ ಅನಿವಾರ್ಯತೆಯ ಕಷ್ಟ ಸಾಧ್ಯತೆಯನ್ನು ಹುಟ್ಟುಹಾಕುತ್ತದೆ. ಬರೀ ಖಾಲಿಯಾಗಿರದ, ಖಾಲಿಯೂ ಆಗಿರುವ ಅನಂತತೆಯ ಅನುಭಾವದೊಂದಿಗಿನ ಅನುಸಂಧಾನದ ಸ್ಥಿತಿಯಾಗಿಯೂ ಕಾಡುವ ಈ ವಿಚಾರವನ್ನು ಕುರಿತು ನಡೆದಿರುವ ಸಂಗತಿಗಳೊಂದಿಗೆ ಇದರ ಅರ್ಥವನ್ನು ವಿಸ್ತರಿಸುವ ಅಂದರೆ ಅದರೊಂದಿಗೆ ಅರ್ಥತಾದ್ಯಾತ್ಮವನ್ನು ಅನುಭವಿಸುವ ವಿಚಾರಗಳನ್ನು ಇಲ್ಲಿ ವ್ಯಕ್ತಪಡಿಸಲಾಗಿದೆ.

**ಸತ್ಯವೂ ಇಲ್ಲ, ಅಸತ್ಯವೂ ಇಲ್ಲ.**
**ಸಹಜವೂ ಇಲ್ಲ, ಅಸಹಜವೂ ಇಲ್ಲ.**
**ನಾನೂ ಇಲ್ಲ, ನೀನೂ ಇಲ್ಲ.**
**'ಇಲ್ಲ' 'ಇಲ್ಲ' ಎಂಬುದು ತಾನಿಲ್ಲ.**
**ಗುಹೇಶ್ವರನೆಂಬುದು ತಾ ಬಯಲು (ವಚನ ಸಂಖ್ಯೆ–1568 ಅಲ್ಲಮಪ್ರಭುದೇವರ ವಚನಸಂಪುಟ)**

ಇಲ್ಲಿನ 'ಬಯಲು' ಪರಿಕಲ್ಪನೆಯನ್ನು ಸಂಪಾದಿಸಲು ಇದುವರೆಗೆ ನಡೆದಿರುವ ಪ್ರಯತ್ನಗಳು ಮತ್ತು ವ್ಯರ್ಥಪ್ರಯತ್ನಗಳನ್ನು ಮನವರಿಕೆ ಮಾಡಿಕೊಡುವಂತಿವೆ ಮತ್ತು ಎಚ್ಚರಿಸುವಂತಿವೆ.

ಜೊತೆಗೆ 'ನಿರ್ಬಂಧವಿರದ, ಆತಂಕವಿರದ, ಅಳಕು ಇರದ, ಜಂಬವಿರದ, ಅರಿವು ಇರದ, ಮರೆವು ಇರದ, ಅವು ಯಾವುವೂ ಅಲ್ಲದ ಬಯಲನ್ನು ಸಾಧಿಸುವುದೇ ಮನುಷ್ಯನ ನಿಜವಾದ ಗುರಿ'(ಅದೇ ಪುಟ.ಸಂ–24) ಎಂಬ ವಿಚಾರವೇ 'ಶೂನ್ಯ ಸಂಪಾದನೆ' ಎಂಬ ಪರಿಲ್ಪನೆಗೆ ಮೂಲವಾಯಿತು. ಹಾಗಾಗಿ ಈ ಬಯಲನ್ನು ಸಂಪಾದಿಸಲು ನಡೆಸಿದ ಹೋರಾಟಗಳಲ್ಲಿ ಆತನಿಗೆ ಅಡ್ಡಿಯಾದವುಗಳೇ ತಲೆಮಾರುಗಳಿಂದ ಬಂದು ಜಡತ್ವದ ಸ್ಥಿತಿಗೆ ಕಾರಣವಾದ ನಂಬಿಕೆಗಳು, ಆಚರಣೆಗಳು, ನೆನೆಪುಗಳು, ಕಲ್ಪಿತ ಆರೋಪಗಳು ಇಲ್ಲಿ ತುಂಬಾ ಚರ್ಚೆಯ ವಿಷಯಗಳಾಗಿವೆ. ಇವುಗಳೊಂದಿಗೆ ಈ ಬಯಲು ಮತ್ತು ಆವರಣ ಎನ್ನುವ ಭಾಗದಲ್ಲಿ ಸಮಾಜದ ನಡಾವಳಿಯಾಗಿ ಪರಿಮಿತಗೊಂಡು ಕುರುಹು ಮಾತ್ರವಾಗಿ ಉಳಿದಿರುವ ಸಂಗತಿಗಳನ್ನು ಅನುಭವಕ್ಕೆ ತಂದುಕೊಳ್ಳುವ ಮತ್ತು ಅವುಗಳಲ್ಲಿಯೇ ಹೊರಳಾಡುವ, ಘರ್ಷಿಸಿಸುವ, ಪರಿಶೀಲಿಸಿಕೊಳ್ಳುವ ಇಂತಹ ಸಾಂಸ್ಕೃತಿಕ ಕಥನವೂ ರೂಪುಗೊಳ್ಳುವದನ್ನು ಇಲ್ಲಿ ವ್ಯಕ್ತಗೊಳಿಸಲಾಗಿದೆ.

ಮನುಷ್ಯ ಚಿಂತನೆಗಳಲ್ಲಿ ಅತೀ ಹೆಚ್ಚು ಕಾಡಿದ್ದು ತಾನು ಕಟ್ಟಿಕೊಳ್ಳಲು ಹೊರಟ 'ಧರ್ಮ'ದ ಪರಿಕಲ್ಪನೆಯೂ ಒಂದು. ಇದಕ್ಕಾಗಿ ನಡೆಸಿದ ಹೋರಾಟಗಳು, ಸಂಘರ್ಷಗಳು ನಮ್ಮ ಅರಿವಿಗೆ ಬರದಷ್ಟು ನಡೆದು ಹೋಗಿ 'ದಯವಿಲ್ಲದ ಧರ್ಮವದೇವುದಯ್ಯಾ... ದಯವೇ ಧರ್ಮದ ಮೂಲ'ವಾಗಿಸಿಕೊಂಡದ್ದುಂಟು. ಇಲ್ಲಿ ಬಳಸಲಾದ 'ಮೂಲ' ಎಂಬುದು ಏನ್ನನ್ನು ಸೂಚಿಸುತ್ತದೆ; ಹಾಗೆಯೇ 'ದಯೇ' ಎಂಬುದು ಏನ್ನನ್ನು ಸೂಚಿಸುತ್ತದೆ ಎಂಬಿತ್ಯಾದಿ ಪ್ರಶ್ನೆಗಳಿಗೆ ದಾರಿ ಮಾಡಿಕೊಡುತ್ತದೆ. ಇದನ್ನೇ 'ಧರ್ಮವೆಂಬ ಮರ' ಎಂಬ ಭಾಗದಲ್ಲಿ ಚರ್ಚಿಸುತ್ತಾ 'ಧರ್ಮವೆಂಬ ಮರದ ಬೆಳಸು ಮನುಷ್ಯರ, ನಮ್ಮ ನಿಮ್ಮೆಲ್ಲರ ಜವಾಬ್ದಾರಿ. ಅಂದರೆ ದಯೇ ಅನ್ನುವುದು ಬೇರು, ಕಾಂಡ, ಟೊಂಗೆ, ಟಿಸಿಲು, ಎಲೆ, ಹೀಚು(ಮಾಗದ ಸಣ್ಣದಾದ ಕಾಯಿ), ಕಾಯಿ, ಹಣ್ಣು ಇಡೀ ಮರದಲ್ಲಿ ವ್ಯಾಪಿಸಿ ನಿಲ್ಲುವ ಹಾಗೆ ಬದುಕಬೇಕು. ಕ್ರೌರ್ಯ ಬೆಳೆಯುವಷ್ಟೇ ಸುಲಭವಾಗಿ ದಯೆಯ ಬೀಜದಿಂದ ಅಥವಾ ಬೇರಿನಿಂದ ಧರ್ಮದ ಮರವೂ ಬೆಳೆದು, ಒಬ್ಬೊಬ್ಬರ ಎದೆಯಲ್ಲೂ ಆವರಿಸಿ ನಿಲ್ಲುವಂತಿದ್ದರೆ!'(ಅದೇ ಪುಟ.ಸಂ–29) ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಮನುಷ್ಯ–ಧರ್ಮ–ಸಮಾಜಗಳ ನಡುವಿನ ತ್ರಿವಳಿ ಸಂಗಮದಲ್ಲಿ ಕಾಯ–ಕಾಯಕ–ದಾಸೋಹ ಪರಿಕಲ್ಪನೆಗಳು ಹೊಸ ಭರವಸೆಗಳೊಂದಿಗೆ ಹುಟ್ಟಿಕೊಂಡವು. ಕಾಯವನ್ನು ಹಿಡಿದುಕೊಂಡು ಐಕ್ಯನಾಗುವ, ಇಲ್ಲವೇ ಕಾಯಕದೊಂದಿಗೆ ಐಕ್ಯನಾಗಬೇಕೆ? ಇವೆರಡನ್ನು ಬಳಸಿಕೊಂಡು ದಾಸೋಹದಿಂದ ತಾನು ತನ್ನಿಂದ ಮುಕ್ತಗೊಳಿಸಿಕೊಳ್ಳಬೇಕೋ? ಎಂಬೆಲ್ಲಾ ಚಿಂತನೆಗಳನ್ನು ಈ ಪರಿಕಲ್ಪನೆಗಳು ಹುಟ್ಟುಹಾಕಿವೆ. ಈ ಕಾರಣದಿಂದಾಗಿ ಐಕ್ಯನಾಗುವ ಇಲ್ಲವೇ ಕೈಲಾಸದ ಸ್ಥಿತಿಗೇರುವ ಸಂದರ್ಭಗಳನ್ನು ಕುರಿತು 'ಕಾಯ–ಕಾಯಕ' ಎಂಬ ಲೇಖನದಲ್ಲಿ ಚರ್ಚಿಸಲಾಗಿದೆ. ತನು–ಮನ–ಭಾವಗಳೊಂದಿಗೆ ಬೆಸೆದುಕೊಳ್ಳುವ ಮತ್ತು ಗತಿ–ಮತಿಗಳನ್ನು ಆಧರಿಸಿ ವ್ಯಕ್ತಗೊಳ್ಳುವ ಭಕ್ತಿ ಮತ್ತು ಅನುಭಾವವನ್ನು ಕಾಯ ಮತ್ತು ಕಾಯಕದೊಂದಿಗೆ ವ್ಯಕ್ತಗೊಳಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಬಸವಣ್ಣ, ಅಕ್ಕಮಹಾದೇವಿ, ಆಯ್ದಕ್ಕಿ ಮಾರಯ್ಯ, ಲಕ್ಕಮ್ಮ, ನೀಲಮ್ಮನವರ ವಚನಗಳಲ್ಲಿನ ವಿಚಾರಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಈ ಎಲ್ಲ ತಿಳುವಳಿಕೆಯೊಂದಿಗೆ ಕಾಯ–ಕಾಯಕ–ದಾಸೋಹದ

ಪರಿಕಲ್ಪನೆಗಳು ಬೆಳೆದಾಗ್ಯೂ 'ಇವನ್ನು ಖಚಿತವಾಗಿ ಹೇಳುವುದಕ್ಕೆ ಪಠ್ಯವನ್ನು ಆಧರಿಸಿದ, ಪಠ್ಯಪ್ರಸರಣವನ್ನು ಆಧರಿಸಿದ ಶೋಧನೆ ನಡೆಯಬೇಕು. ಅಂದರೆ, ಪಾಠಾಂತರ ಯಾವ ಕಾಲದ ಹಸ್ತಪ್ರತಿಯಲ್ಲಿ, ಯಾವ ಪ್ರದೇಶದಲ್ಲಿ ಸಿಕ್ಕಿತು ಅನ್ನುವುದನ್ನೂ ಹುಡುಕಬೇಕಾಗುತ್ತದೆ'. (ಅದೇ ಪು.ಸಂ-33) ಎಂಬ ಸೂಕ್ಷ್ಮತೆಯೂ ಇಲ್ಲಿದೆ.

ಇವೆಲ್ಲಾ ಚಿಂತನೆಗಳೊಂದಿಗೆ 'ಮನುಷ್ಯ ತಾನು ಹೇಗೆ ಪವಿತ್ರ ಮತ್ತು ಮಹಂತನಾಗುವುದು?' ಎಂಬಂತಹ ಆಲೋಚನೆಗಳಿಗೆ ಬಂಧಿಯಾಗಿರುವ ಮತ್ತು ಅದನ್ನು ಸಾಧಿಸಲು ಹೊರಟಾಗಿನ ಸ್ಥಿತಿ ಮತ್ತು ಅದರಿಂದ ಪಡೆದ ನಿಜದ ಅರಿವಿನ ಚರ್ಚೆಗಳನ್ನಿಲ್ಲಿ ವ್ಯಕ್ತಪಡಿಸಲಾಗಿದೆ. ಹಾಗೆಯೇ ಅದಕ್ಕೆ ಪೂರಕವಾಗಿ ಅಲ್ಲಮನ ಈ ಕೆಳಗಿನ ವಚನವನ್ನು ಬಳಸಿಕೊಳ್ಳಲಾಗಿದೆ.

**ಹಿಂದಣ ಅನಂತವನೂ, ಮುಂದಣ ಅನಂತವನೂ**
**ಒಂದು ದಿನ ಒಳಕೊಂಡಿತ್ತು ನೋಡಾ**
**ಒಂದು ದಿನವನೊಳಕೊಂಡು ಮಾತಾಡುವ**
**ಮಹಂತನ ಕಂಡು ಬಲ್ಲವರಾರಯ್ಯ**
**ಆದ್ಯರು ವೇದ್ಯರು ಅನಂತ ಹಿರಿಯರು**
**ಲಿಂಗದಂತುವನರಿಯದೆ ಅಂತೆ ಹೋದರು ಕಾಣಾ ಗುಹೇಶ್ವರಾ.**

**(ಅಲ್ಲಮನ ವಚನ ಚಂದ್ರಿಕೆ ವ.ಸಂ-435)**

'ಕೊನೆಯಿರದ ಗತಕಾಲ, ಕೊನೆಯಿರದ ಭವಿಷ್ಯದ ಕಾಲ ಎಲ್ಲವೂ ನಾವು ಬದುಕಿರುವ ಈ ಒಂದು ದಿನದೊಳಗೇ ಇವೆ. ಈ ಇಂದಿನ ದಿನವನ್ನು ಒಳಗೊಂಡು ಮಾತಾಡಬಲ್ಲ ಮಹಂತನನ್ನು ಕಂಡವರು ಇಲ್ಲ. ಬಲ್ಲೆವು ಎಂದುಕೊಂಡವರು ಲಿಂಗದ ನೆಲೆಯನ್ನು ಅರಿಯದೆ ಹಾಗೇ ಹೊರಟು ಹೋದರು.' (ಅದೇ ಪು.ಸಂ-36) ಎಂಬ ವಿಚಾರಗಳೊಂದಿಗೆ ಈ ವಚನದ ಆಶಯವನ್ನು ಕಟ್ಟುತ್ತಾ ಹೊಸ ಆಲೋಚನೆಗೆ ತೆರೆದುಕೊಳ್ಳುವುದನ್ನು ಗಮನಿಸಬಹುದು.

ಒಂದು ಗಂಭೀರ ಚಿಂತನೆಯ ಹರಿವು ಹಿಂದಣ-ಮುಂದಣ ಹಾಗೂ ಈ ಕ್ಷಣದ ಬದುಕಿನ ಕೊಂಡಿಯಾಗಿಸುತ್ತಾ ಅನಂತವಾಗುವ ಪರಿಗೆ ಸಜ್ಜಾಗಿಸುವ ಪ್ರಯತ್ನವೆನಿಸುತ್ತದೆ. ಅದನ್ನೇ ವಿಭಿನ್ನವಾಗಿ ದೇಹ-ಮನಸ್ಸು-ಪ್ರಾಣ-ರುಚಿ-ಮಾತಾಗಿ ವ್ಯಕ್ತವಾಗುವ ಜೀವನು ತನ್ನೊಳಗಿನ ಭೇದವನ್ನು ಕಳೆದುಕೊಂಡು ಅಂತಿಮವಾಗಿ ವ್ಯಕ್ತಿತ್ವವಾಗುವ ಸಂಗತಿಗಳನ್ನು ವಚನ-ವಚನಕಾರರ ಬದುಕಿನ ವಿಚಾರಗಳು ಈ ಮುಂದಿನ ವಚನಗಳಲ್ಲಿ ವ್ಯಕ್ತವಾಗಿದ್ದನ್ನು ಗ್ರಹಿಸಬಹುದು.

**ತನು ಒಂದು ದ್ವೀಪ**
**(ಪ್ರಕೃತಿಗೆ ಪೂರಕವಾದದು; ನೋವು/ನಲಿವು/ಸಂಭ್ರಮ/ಸುಖ-ದುಃಖ/ಹೋರಾಟ)**
**ಮನ ಒಂದು ದ್ವೀಪ (ಊರ್ಧ್ವಮುಖಿಯಾಗಿ/ಅಧೋಮುಖಿಯಾಗಿ)**
**ಆಪ್ಯಾಯ(ರುಚಿ) ಒಂದು ದ್ವೀಪ**
**ವಚನ ಒಂದು ದ್ವೀಪ**
**ಇಂತೀ ನಾಲ್ಕು ದ್ವೀಪದೆಡೆಯ ಬೆಸಗೊಂಬಡೆ**
**ಗುಹೇಶ್ವರ ನಿಮ್ಮ ಸ್ಥಾನಂಗಳು** **(ಅಲ್ಲಮನ ವಚನ ಚಂದ್ರಿಕೆ ವ.ಸಂ-594)**

'ನಮ್ಮ ವ್ಯಕ್ತಿತ್ವವೆ ನಮಗೊಂದು ಸಮಸ್ಯೆಯಾಗುತ್ತಿದೆ. ನಮ್ಮನ್ನು ನಾವೇ ಇನ್ನಷ್ಟು

ಪರಿಶೀಲಿಸಿಕೊಳ್ಳುವ ಅಗತ್ಯವಿದೆ ಎಂದು ನಮಗನ್ನಿಸಿದಾಗ ತಕ್ಕ ನೆರವನ್ನು ನೀಡುವ ಕೆಲವೇ ಪಠ್ಯಗಳಲ್ಲಿ ಅಲ್ಲಮ ವಚನಗಳು ಮುಖ್ಯವಾದವು. ಈ ಕಾಲದ ನಮ್ಮ ಛಿದ್ರಿತ ವ್ಯಕ್ತಿತ್ವಗಳ ಚಿತ್ರಣದಂತೆಯೇ ಕಾಣತೊಡಗುತ್ತದೆ ಈ ವಚನ. ನಮ್ಮ ದೇಹ, ಮನಸ್ಸು, ರುಚಿ, ಮಾತು ಎಲ್ಲ ಸೀಳಿಕೊಂಡಿವೆ, ಪ್ರತ್ಯೇಕ ದ್ವೀಪಗಳಾಗಿವೆ ಅನ್ನಿಸಬಹುದು. ಆದರೆ ನೋಡಿ, ಪ್ರತ್ಯೇಕವೆಂಬಂತೆ ತೋರುವ ದ್ವೀಪಗಳು ತಮ್ಮ ನಡುವೆ ಇರುವ ನೀರಿನಿಂದ ಪರಸ್ಪರ ಸಂಬಂಧ ಹೊಂದಿರುವಂಥವಲ್ಲವೇ! (ನೋಡಿ: 'ಉಲಿವ ಮರ' ಓ.ಎಲ್. ನಾಗಭೂಷಣಸ್ವಾಮಿ ಪುಟ ಸಂ: 61) ಎಂಬಂತಹ ಹೊಸ ಹೊಳಹುವಿನೊಂದಿಗೆ ವ್ಯಕ್ತಿತ್ವವನ್ನು ಪರಿಭಾವಿಸುವ ಮತ್ತು ವಚನದ ಸುತ್ತ ಕಟ್ಟಿಕೊಟ್ಟ ಹೊಸ ಓದಿನ ಸಾಧ್ಯತೆಯನ್ನು ಇಲ್ಲಿ ಗುರುತಿಸಬಹುದು.

ಒಂದು ವ್ಯಕ್ತಿತ್ವವು ರೂಪುಗೊಳ್ಳುವಾಗ ಬಾಹ್ಯ ಮತ್ತು ಆಂತರಿಕವಾದ ಪ್ರಭಾವಗಳು, ಪ್ರೇರಣೆಗಳು ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಅದರಲ್ಲೂ ಅಧ್ಯಯನ, ಅನುಭವಗಳು ಮತ್ತು ಒದಗಿಬರುವ ಪರಿಸರ ಈ ಮುಂತಾದ ಸಂಗತಿಗಳು ಸದಾ ಚಿಂತನೆಗೆ ಕಾರಣವಾಗುತ್ತವೆ. ಮತ್ತು ಅವುಗಳಿಂದಾಗಿ ಆಂತರ್ಯದೊಳಗೆ ಹುಟ್ಟಿಕೊಳ್ಳುವ ಸಂಘರ್ಷಗಳು, ತುಮುಲಗಳು ಮತ್ತು ತಾಕಲಾಟಗಳು ಕೊನೆಗೆ ವ್ಯಕ್ತಿಯ ವ್ಯಕ್ತಿತ್ವದ ರೂಪಣದಲ್ಲಿ ಅಂತಿಮವಾದ ಪಾತ್ರವನ್ನು ವಹಿಸುತ್ತವೆ.

**ನಿರಾಳವೆಂಬ ಕೂಸಿಂಗೆ ಬೆಣ್ಣೆಯನಿಕ್ಕಿ ಹೆಸರಿಟ್ಟು ಕರೆದವರಾರೋ?**
**ಅಕಟಕಟಾ ಶಬ್ದದ ಲಜ್ಜೆಯ ನೋಡಾ**
**ಗುಹೇಶ್ವರನನರಿಯದ ಅನುಭಾವಿಗಳೆಲ್ಲರ**
**ತರಕಟ ಕಾಡಿತ್ತು. (ಅಲ್ಲಮನ ವಚನ ಚಂದ್ರಿಕೆ. ವಚನ ಸಂಖ್ಯೆ–264)**

'ಆಗುವ ಬಯಕೆ ತೊರೆದು ಇರುವುದನ್ನು ಒಪ್ಪಿದಾಗ ನಿರಾಳತೆ, ನಿಶ್ಚಿಂತೆ, ಖಚಿತತೆಗಳು ದೊರೆಯುತ್ತವೆ ಅನ್ನುವುದು ಈ ವಚನದ ತಾತ್ವಿಕ ಧೋರಣೆ.' ('ಉಲಿವ ಮರ' ಓ.ಎಲ್. ನಾಗಭೂಷಣಸ್ವಾಮಿ ಪುಟ ಸಂ: 53)

**ಅಂಗೈಯೊಳಗಣ ಸಿಂಹಾಸನವಿದೇನೋ?**
**ಅಂಗೈಯ ಮೇಲೆ ಸಂಹಾಸನವೆಂದಿದೇನೋ?**
**ಧೂಪ ದೀಪ ನಿವಾಳಿಯೆಂದೇನೋ?**
**ಶರಣಂಗೆ ಕಳಸದ ಮೇಲೆ ನೆಲೆಗಟ್ಟೆಂದೇನೋ?**
**ಗುಹೇಶ್ವರನೆಂಬ ನಿರಾಳ! (ಅಲ್ಲಮನ ವಚನ ಚಂದ್ರಿಕೆ ವಚನ ಸಂಖ್ಯೆ–598)**

'ಅಲ್ಲಮನ ಈ ವಚನವು ಗುಹೇಶ್ವರನೆಂಬ ನಿರಾಳಕ್ಕೆ ಪೂಜೆ ಮೊದಲಾದ ಆಚರಣೆಗಳನ್ನು ಮಾಡುವುದೆಷ್ಟು ನಿರರ್ಥಕ ಎನ್ನುವುದನ್ನು ತಿಳಿಸುತ್ತದೆ. ಗುಹೇಶ್ವರನೆಂಬುದು 'ಪರಮ' ಸ್ಥಿತಿಯನ್ನು ಸೂಚಿಸುವ ಸಂಕೇತವಾದರೆ ಅದಕ್ಕೆ ಲಿಂಗದ ರೂಪ ನೀಡಿ, ಅಂಗೈಯೊಳಗೆ ಕೂರಿಸಿಕೊಂಡು, ಅಂಗೈಯನ್ನೇ ಸಿಂಹಾಸನವೆಂದು ಭಾವಿಸುವುದು, ಧೂಪ, ದೀಪ ನಿವಾಳಿಯನ್ನು ಅರ್ಪಿಸುವುದು ಇವೆಲ್ಲ ಭಾವತೃಪ್ತಿಯೇ ಹೊರತು ಅರ್ಥಪೂರ್ಣವಲ್ಲ. ಅಲ್ಲಮ ಈ ವಚನದಲ್ಲಿ ಭಕ್ತನ ನಿಲುವಿನಿಂದಲ್ಲ, ಅನುಭಾವಿಯ ನಿಲುವಿನಲ್ಲಿ ಮಾತನಾಡಿದ್ದಾನೆ. ('ಉಲಿವ ಮರ' ಪುಟ ಸಂ: 53).

ಒಟ್ಟಾರೆಯಾಗಿ ಒಂದು ವೈಯಕ್ತಿಕ ಅನುಭವವು ತತ್ವವಾಗಿ, ತತ್ವವು ಸಿದ್ಧಾಂತವಾಗಿ, ಸಿದ್ಧಾಂತಕ್ಕೆ ತಕ್ಕ ಆಚರಣೆ ರೂಪುಗೊಂಡು ಹಲವು ಜ್ಞಾನಶಾಖೆಯ ಅಲ್ಲಮನ

‘ಉಲಿವ ಮರ’ವು ಹಿಂದಣ ಮತ್ತು ಮುಂದಣ ಹೆಜ್ಜೆಗಳನ್ನು ವರ್ತಮಾನದಲ್ಲಿರಿಸುವ ಪ್ರಯತ್ನವಾಗಿದೆ.

**ಪರಾಮರ್ಶನ ಗ್ರಂಥಗಳು**


- ‘ಉಲಿವ ಮರ’ ಓ.ಎಲ್. ನಾಗಭೂಷಣಸ್ವಾಮಿ – ಕಿರಂ ಪ್ರಕಾಶನ, ಗೋವಿಂದರಾಜ ನಗರ–ಬೆಂಗಳೂರು.
- ಅಲ್ಲಮನ ವಚನ ಚಂದ್ರಿಕೆ–(ಸಂ) ಡಾ. ಎಲ್. ಬಸವರಾಜು. ಲೋಹಿಯಾ ಪ್ರಕಾಶನ, ಬಳ್ಳಾರಿ.
- ಅಲ್ಲಮ ಪ್ರಭುದೇವರ ವಚನ–ನಿರ್ವಚನ, ಶ್ರೀ ಸಿದ್ಧೇಶ್ವರ ಸ್ವಾಮಿಗಳು. ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ ಮೈಸೂರು.
- ಅಲ್ಲಮಪ್ರಭುದೇವರ ವಚನಸಂಪುಟ. (ಸಂ) ಡಾ. ಬಿ.ವ್ಹಿ. ಮಲ್ಲಾಪೂರ, ಕರ್ನಾಟಕ ಸರಕಾರ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.


❖❖❖

ಹಕ್ಕಿ ಕೊರಳನು
ಚಾಚಿ ಕೇಳಿದೆ
ಯಾರ ಉಸಿರಿನ ದನಿಯಿದೂ।
ಪುಕ್ಕ ಬಿಡಿಸುತ
ನವಿಲು ಹೇಳಿದೆ
ದೇವ ಗಾನಕೆ ದೊರೆಯಿದೂ॥

# ಕಂಬ ಮತ್ತು ಕುವೆಂಪು ರಾಮಾಯಣಗಳಲ್ಲಿ ಸೀತಾ ರಾಮರ ಪ್ರೇಮ–ವಿರಹ

**ಡಾ. ಮಹೇಂದ್ರ ಟಿ. ಎಂ.**
ಪೋಸ್ಟ್ ಡಾಕ್ಟೊರಲ್ ರಿಸರ್ಚರ್, ಕನ್ನಡ ಭಾರತಿ ವಿಭಾಗ, ಕುವೆಂಪು ವಿವಿ, ಶಂಕರಘಟ್ಟ

'ರಾಮಾಯಣ'ದ ಕಥೆ ಆನಾದಿಯಾದದ್ದು, ಆದರೆ ಅದೆಂದೂ ನಿಂತ ನೀರಲ್ಲ; ಸದಾ ಹರಿವ ತೊರೆ. ಕಾಲಕಾಲಕ್ಕೆ, ಕಾಲಧರ್ಮಕ್ಕೆ ತಕ್ಕಂತೆ ತನ್ನ ಸ್ವರೂಪವನ್ನು ಬದಲಾಯಿಸಿಕೊಂಡು ವೈವಿಧ್ಯಮಯವಾಗಿ, ಸಾರ್ವಕಾಲಿಕವಾಗಿ ಉಳಿದಿರುವಂತದ್ದು. ಮತ್ತು ಸದಾ ಚಲನಶೀಲತೆ, ಸೃಜನಶೀಲತೆಯ ಅನಂತತೆಯನ್ನು ಕಂಡುಕೊಂಡ ಮಹಾಕಾವ್ಯ. ಪ್ರಸ್ತುತ ಕಂಬ–ಕುವೆಂಪು ಅವರ ರಾಮಾಯಣಗಳು ಎರಡು ಭಿನ್ನ ಕಾಲಘಟ್ಟದ ವಿಭಿನ್ನ ರಚನೆಗಳು. ಈ ಎರಡೂ ರಾಮಾಯಣದ ಕಾವ್ಯಗಳಿಗೂ ಕ್ರಮವಾಗಿ ತಮಿಳು–ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವಿಶಿಷ್ಟ ಹಿನ್ನೆಲೆ ಮತ್ತು ಮಹತ್ವವಿದೆ. ಕಥೆ, ಪಾತ್ರ, ಸನ್ನಿವೇಶ, ನಿರೂಪಣಾ ಶೈಲಿ ಮತ್ತು ಧ್ಯೇಯೋದ್ದೇಶಗಳಲ್ಲಿ ವೈಶಿಷ್ಟ್ಯ ಮತ್ತು ಹೊಸತನ ಈ ಎರಡೂ ಕಾವ್ಯಗಳ ಗುಣಧರ್ಮವಾಗಿದೆ.

ತಮಿಳು ಸಾಹಿತ್ಯದಲ್ಲಿ ಕಂಬರಾಮಾಯಣಕ್ಕೆ ವಿಶೇಷ ಮಹತ್ವವಿದೆ. ಈ ಸಾಹಿತ್ಯದ ಆರಂಭಿಕ ಮಹತ್ವದ ಕಾವ್ಯಗಳಲ್ಲಿ ಕಂಬರಾಮಾಯಣ ಅಗ್ರಸ್ಥಾನದಲ್ಲಿ ನಿಲ್ಲಬಲ್ಲ ಕೃತಿ. ಕಂಬನಿಗಿಂತ ಮುಂಚೆ 'ಅಗವಲ್' ಛಂದಸ್ಸಿನಲ್ಲಿ ರಾಮಾಯಣ ಕಾವ್ಯವೊಂದು ರಚನೆಯಾಗಿರುವ ಬಗ್ಗೆ ಸುಳಿವುಗಳಿವೆ. ಅದರ ಕೆಲವೇ ಕೆಲವು ಪದ್ಯಗಳು ಮಾತ್ರ ಈಗ ಉಪಲಬ್ಧ ಇವೆ. ಪ್ರಾಚೀನ 'ಸಂಘ ಸಾಹಿತ್ಯ'ದಲ್ಲಿ ರಾಮಾಯಣ ಕಥೆಯ ಕೆಲವು ಸಂಗತಿಗಳು ಸಾಂದರ್ಭಿಕವಾಗಿ ಉಲ್ಲೇಖಿತಗೊಂಡಿವೆ. ತಮಿಳುನಲ್ಲಿ ಜೈನ ರಾಮಾಯಣದ ಕೆಲವು ತುಣುಕುಗಳು ದೊರೆತಿವೆ. 'ಶಿಲಪ್ಪದಿಕಾರಂ' ತಮಿಳಿನ ಮೊದಲ ಮಹಾಕಾವ್ಯ. ಇದರಲ್ಲಿ ಸಾಂದರ್ಭಿಕವಾಗಿ 'ರಾಮಕಥೆ' ವಿಚಾರಗಳು ವಿರಳವಾಗಿ ಕಾಣಸಿಗುತ್ತವೆ. ಮುಂದೆ ಆಳ್ವಾರರು ರಾಮನನ್ನು ದೈವೀಕರಿಸಿರುವುದ ಕಂಡುಬರುತ್ತದೆ. ಹೀಗೆ ನಂತರದಲ್ಲಿ 'ರಾಮಕಥೆ' ಪೂಜ್ಯನೀಯವಾಗಿ ನಿರಂತತೆಯನ್ನು ಕಾಯ್ದುಕೊಂಡಿತು ಎನ್ನಬಹುದು.

ತಮಿಳು ಸಾಹಿತ್ಯದಲ್ಲಿ ರಾಮಾಯಣ ಎಂದಾಕ್ಷಣ ಅನ್ವರ್ಥವೆಂಬಂತೆ ನೆನಪಾಗುವುದು 'ಕಂಬ ರಾಮಾಯಣ'. ಕತೆ ವಾಲ್ಮೀಕಿ ರಾಮಾಯಣದ್ದೇ ಆದರೂ ಕವಿ ತನ್ನ ಪುನರ್‌ಸೃಷ್ಟಿಯಲ್ಲಿ ಸಾಕಷ್ಟು ಸೃಜನಶೀಲತೆ ತೋರಿದ್ದಾನೆ. ಪಾತ್ರ, ಸನ್ನಿವೇಶ, ಸಂದರ್ಭಗಳು ಕವಿ ಕಲ್ಪನೆಯಲ್ಲಿ ಉದಾತ್ತತೆಯನ್ನು ಪಡೆದಿವೆ. ಒಂದು ಮಹಾಕಾವ್ಯ ತನ್ನ ಪ್ರಾದೇಶಿಕ ಸಂಸ್ಕೃತಿ, ಆಚಾರ–ವಿಚಾರ, ಜೀವನಕ್ರಮಗಳಿಂದ ಸಾಕಷ್ಟು ಪ್ರಭಾವಿತವಾಗಿರುವಂತೆ, ಇಲ್ಲಿಯೂ ಕಂಬನು ತುಂಬು ಅಭಿಮಾನದಿಂದ 'ತಮಿಳು ಸಂಸ್ಕೃತಿ'ಯನ್ನು ಪ್ರತಿನಿಧಿಸಿದ್ದಾರೆ. ಈ ಕಾರಣದಿಂದಲೇ ಈ ಕೃತಿ ಜನಮನ್ನಣೆಗೂ ಪಾತ್ರವಾಯಿತು. ಹಾಗೆ ಪೂರ್ವ ಕವಿಗಳ ಸಾಹಿತ್ಯದಲ್ಲಿನ ವಿಚಾರಧಾರೆಗಳೂ ಕಂಬನ ಮೇಲೆ ದಟ್ಟ ಪ್ರಭಾವ ಬೀರಿವೆ. ಇದಕ್ಕೆ ಕಾವ್ಯ ಸಂದರ್ಭದಲ್ಲಿ ಸಾಕಷ್ಟು ನಿದರ್ಶನಗಳಿವೆ.

ಸಂಘ ಸಾಹಿತ್ಯದ ವಿಚಾರಧಾರೆಗಳು, ಆಳ್ವಾರರ ಭಕ್ತಿ ಕಾವ್ಯಗಳಲ್ಲಿ ಬರುವ ಪರಿಕಲ್ಪನೆಗಳು ಇತ್ಯಾದಿ ಪೂರ್ವ ಪರಿಕರಗಳಿಂದ ಆತ ಲಾಭ ಪಡೆದಿದ್ದಾನೆ.

ಕುವೆಂಪು ಅವರಾಗಲಿ ಕಂಬರಾಗಲಿ ವಾಲ್ಮೀಕಿ ರಾಮಾಯಣವನ್ನು ಒಂದು ನೀಲನಕ್ಷೆಯಾಗಿ ಬಳಸಿದ್ದಾರೆ ಹೊರತು ಪಡಿಯಚ್ಚಾಗಿ ತೆಗೆದುಕೊಳ್ಳಲಿಲ್ಲ. ಕಂಬರಾಮಾಯಣದ ಪ್ರೇರಣೆ ಕುವೆಂಪು ಕಾವ್ಯದ ಮೇಲಿರುವುದು ಸ್ಪಷ್ಟ. ಕಂಬನ ಹೊಸತನ, ಸೃಜನಶೀಲನೆ, ಸಮನ್ವಯ ದೃಷ್ಟಿಕೋನ ಕುವೆಂಪು ಅವರ ಕಾವ್ಯಕ್ಕೂ ಸ್ಫೂರ್ತಿ ನೀಡಿದೆ. ಹಾಗೆ ಕುವೆಂಪು ಯಾವ ಕವಿ, ಕೃತಿಯ ಆಲೋಚನೆ, ವಿಚಾರಗಳನ್ನೇ ಸಮರ್ಥಿಸಲು ಹೊರಟವರಲ್ಲ. ಇಪ್ಪತ್ತನೆಯ ಶತಮಾನದ ತುರ್ತಿನ ಅನುಗುಣವಾಗಿ, ಕಾಲಧರ್ಮವನ್ನು ಗಮನದಲ್ಲಿಟ್ಟುಕೊಂಡು, ಸಮಕಾಲೀನತೆ ಮತ್ತು ಸಾರ್ವಕಾಲೀನತೆಯನ್ನು ಕಾವ್ಯದ ಮುಖೇನ ಸಾಧಿಸಿದವರು. ಪಾಶ್ಚಾತ್ಯ ಮಹಾಕಾವ್ಯಗಳು, ತಮಿಳು, ಸಂಸ್ಕೃತ, ಮುಖ್ಯವಾಗಿ ಕನ್ನಡದ ಆದಿ ಕಾವ್ಯಗಳ ಪ್ರೇರಣೆ ಕುವೆಂಪು ಅವರ ಸೃಜನಶೀಲತೆ, ಚಿಂತನೆ, ಪ್ರತಿಭೆಯನ್ನು ಹೆಚ್ಚಿಸಿದೆ. ಅಷ್ಟೇ ಅಲ್ಲದೇ ವರ್ತಮಾನದ ಸಮಸ್ಯೆ ಸವಾಲುಗಳಿಗೆ ಭೂತಕಾಲದ ಕಥೆಯನ್ನು ಬಳಸಿಕೊಂಡು ಮಹಾಕಾವ್ಯ ಹೆಣೆಯುವ 'ಕಾವ್ಯ ಪ್ರತಿಭೆ' ಅಭೂತಪೂರ್ವವಾದುದು. ಭೂತ, ವರ್ತಮಾನ, ಭವಿಷ್ಯತ್ತನ್ನು ಸಮನ್ವಯ, ಪೂರ್ಣದೃಷ್ಟಿಯಿಂದ 'ಶ್ರೀ ರಾಮಾಯಣ ದರ್ಶನಂ' ನೋಡುತ್ತದೆ. "ಇತಿಹಾಸಮಲ್ತು; ಬರಿ ಕಥೆಯಲ್ತು; ಕಥೆ ತಾಂ ನಿಮಿತ್ತಮಾತ್ರಂ" ಎನ್ನುವ ಸಾಲು ಅವರ ಮಹಾಕಾವ್ಯದ ಉದ್ದೇಶವನ್ನು ಆರಂಭದಲ್ಲೇ ಸೂಚ್ಯವಾಗಿ ಹೇಳುತ್ತದೆ. ಈ ಎಲ್ಲಾ ಕಾರಣಗಳಿಂದ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯ ಒಂದು ಯುಗಧರ್ಮದ ಪ್ರತೀಕವಾಗಿದೆ. ಕಂಬ ಮತ್ತು ಕುವೆಂಪು ರಾಮಾಯಣಗಳು ಪಾತ್ರಗಳ ಸನ್ನಿವೇಶ ಸೃಷ್ಟಿಯಲ್ಲಿ ವಾಲ್ಮೀಕಿ ರಾಮಾಯಣಕ್ಕಿಂತ ಸಾಕಷ್ಟು ಭಿನ್ನವಾದವುಗಳು. ಹಾಗೆ ಕಂಬ ಮತ್ತು ಕುವೆಂಪು ಸೃಷ್ಟಿಸಿದ ಸನ್ನಿವೇಶಗಳೂ ಸಹ ಪರಸ್ಪರ ವಿಭಿನ್ನ. ಮಿಥಿಲೆಯಲ್ಲಿ ನಡೆದ ಸೀತಾಸ್ವಯಂವರದ ಸನ್ನಿವೇಶವು ಚಿತ್ರಿತವಾಗ ಬಗೆಯನ್ನು ಇಲ್ಲಿ ತೌಲನಿಕವಾಗಿ ವಿವೇಚಿಸಲಾಗಿದೆ.

'ಸೀತಾ ಸ್ವಯಂವರ'ದಂತಹ ಒಂದು ಸನ್ನಿವೇಶ ವಾಲ್ಮೀಕಿ, ಕಂಬ, ಕುವೆಂಪು ಈ ಮೂವರು ಮಹಾ ಕವಿಗಳಲ್ಲೂ ವಿಭಿನ್ನ ಮತ್ತು ವೈಶಿಷ್ಟಪೂರ್ಣ ಕವಿಕಲ್ಪನೆಗಳಿಂದ ಮಿಂದೆದ್ದಿದೆ. ಕಂಬ ಮತ್ತು ಕುವೆಂಪು ರಾಮಾಯಣಗಳು ಸೀತಾ ಸ್ವಯಂವರ ಸನ್ನಿವೇಶದಲ್ಲಿ ರಸಸಿದ್ಧಿ ಸಾಧಿಸಿವೆ. ಕಂಬನ ರಾಮ–ಸೀತೆ ಮೊದಲ ನೋಟದಲ್ಲಿ ಪರಸ್ಪರ ಆಕರ್ಷಿತರಾಗುತ್ತಾರೆ. ಇಲ್ಲಿ ಕಂಬರು ತಮಿಳುನಾಡಿನ 'ಕಳವಿಯಲ್' (ವಿವಾಹ ಪೂರ್ವದ ಪ್ರೇಮ) ಸಂಪ್ರದಾಯವನ್ನನುಸರಿಸಿ ರಚಿಸಿದ್ದಾರೆ. ಸ್ವಯಂವರದ ಸಭಾಂಗಣಕ್ಕೆ ರಾಮನ ಆಗಮನವಾಗುತ್ತಿದ್ದಂತೆಯೇ ಸೀತಾರಾಮರ ಕಣ್ಣುಗಳು ಪರಸ್ಪರ ಅನುರಾಗ ಪರವಶತೆಯಲ್ಲಿ ಸಂಧಿಸುತ್ತವೆ.

ರಾಮನು ಸೀತೆಯನ್ನು ಮೊದಲು ಕಂಡ ಕ್ಷಣವನ್ನು ಕವಿ ಕಂಬ ಸ್ವಾರಸ್ಯಕರವಾಗಿ ಚಿತ್ರಿಸಿದ್ದಾನೆ. ಸ್ವಯಂವರಕ್ಕೆಂದು ಬರುತ್ತಿರುವಾಗ ಅರಮನೆಯ ಸುತ್ತಲಿನ ಕಂದಕದ ನೀರಿನಲ್ಲಿ ಮನಮೋಹಕ ರೂಪವತಿಯ ಬಿಂಬವೊಂದನ್ನು ಕಾಣುತ್ತಾನೆ. ಆತ ಆ ಬಿಂಬವನ್ನರಸಿ ತಲೆ ಎತ್ತಿ ನೋಡಿದಾಗ ಅರಮನೆಯ ಮೇಲುಗಡೆ ಹಂಸದ ನಲಿದಾಟವನ್ನು ನೋಡುತ್ತಾ ನಿಂತಿದ್ದ ಸೀತೆಯ ದರ್ಶನ ಅವನಿಗಾಗುತ್ತದೆ. ಅಲ್ಲಿ

ಕಾಕತಾಳೀಯವೆಂಬಂತೆ ರಾಮ–ಸೀತೆಯರ ದೃಷ್ಟಿಗಳ ಸಂಗಮವಾಗುತ್ತದೆ. ಉದಾಹರಣೆಗೆ ಈ ಪದ್ಯವನ್ನು ನೋಡಬಹುದು

**ಎಣ್ಣಾರು ನಲತ್ತಿನಾಳ್ ಇನ್ನೈಯಳ್ ನಿನ್ರುಳಿ**
**ಕಣ್ಣೊಡು ಕಣ್ ಇಣೈ ಕಟ್ಟಿ, ಒನ್ರೈ ಒನ್ರು**
**ಉಣ್ಣವುಂ ನಿಲೈಪೆರಾದು ಉಣರ್ವು ಒನ್ರಿಡ**
**ಅಣ್ಣಲುಂ ನೋಕ್ಕಿನಾನ್; ಅವ್ವಳುಂ ನೋಕ್ಕಿನಾಳ್**
**(ಕಂಬರಾಮಾಯಣ : ಮಿಥಿಲೈಕಾಟ್ಚಿ ಪಟಮ್, ಪದ್ಯ 598)**

ಅರ್ಥ:

ಎಣೆಯಿಲ್ಲದಾ ಚೆಲುವ ಪ್ರತಿರೂಪವು ಹಾಗೆ ನಿಂತಿರಲು
ಕಣ್ಣೊಡನೆ ಕಣ್ಣು ಒಂದಾಗಿ ಹೆಣೆದು ಒಂದು
ಮತ್ತೊಂದ ಸವಿಯುತ ಭಾವಪರವಶದಲಿ, ಸುಖಿಸುತಿರಲು
ಪುರುಷೋತ್ತಮನು ನೋಡಿದನು; ಅವಳೂ ನೋಡಿದಳು.

ಇದು ಕಂಬ ಚಿತ್ರಿಸಿರುವ ರಸಪೂರ್ಣ ಮೊದಲ ನೋಟ. ಸರಳವಾಗಿ ಸುಂದರ ಭಾವ ಭಾಷೆಯಲ್ಲಿ ಕಂಬ ಸೀತೆರಾಮರ ಕಣ್ಣೋಟಗಳ ಸಮಾಗಮವನ್ನು ವರ್ಣಿಸಿದ್ದಾನೆ. ರಾಮ ಮತ್ತು ಸೀತೆಯರ ಚೆಲುವು, ರಾಮ–ಸೀತೆಯರ ನಡುವೆ ಉಂಟಾದ ಅನುರಾಗದ ಭಾವಗಳು, ಪರಸ್ಪರ ಒಬ್ಬರಿಗೊಬ್ಬರು ಸೋತು ಮನಸ್ಸಿನಲ್ಲೇ ಶರಣಾಗುವುದು, ಆ ಕ್ಷಣದಲ್ಲಿ ಇಬ್ಬರೂ ಅನುಭವಿಸುವ ಭಾವ ಪರವಶತೆ, ಅನನ್ಯ ಅನುಭವಗಳು, ಪ್ರೇಮದ ಸೆಳೆತ ಇತ್ಯಾದಿಗಳನ್ನು ಒಂದೇ ಪದ್ಯದಲ್ಲಿ ಮೂಡಿಸಿ ಕವಿ ಓದುಗರ ಕಲ್ಪನೆಗೆ ಇನ್ನಷ್ಟು ಕಲ್ಪನಾ ಶಕ್ತಿ ತುಂಬಿ ಬರುವಂತೆ ಮಾಡಿ ವರ್ಣಿಸಿದ್ದಾರೆ. ಮುಂದಿನ ಪದ್ಯಗಳಲ್ಲಿ ಕವಿ ಅವರಿಬ್ಬರ ವಿರಹ ಭಾವಗಳನ್ನೂ ಕಲ್ಪಿಸಿದ್ದಾನೆ. ಸೀತೆಯನ್ನು ನೋಡಿದ ನಂತರ ರಾಮನ ಮನಸ್ಸಿನಲ್ಲೆಲ್ಲ ಅವಳ ಚೆಲುವೇ ತುಂಬಿತ್ತು. ಆತ ಕೇವಲ ಲಕ್ಷ್ಮಣನನ್ನು ಅನುಸರಿಸಿ ಸಾಗುತ್ತಿದ್ದನಷ್ಟೆ, ಅವನ ದೇಹವಷ್ಟೇ ಸಾಗುತ್ತಿತ್ತು, ಮನಸ್ಸು ಸೀತೆಯ ಒಳಗೆ ಓಡುತ್ತಿತ್ತು ಎನ್ನುವುದನ್ನು ಕವಿ ಚಿತ್ರಿಸಿರುವ ಬಗೆ ರಸಪೂರ್ಣವಾಗಿದೆ. ಹಾಗೆ ಮೊದಲ ನೋಟದಲ್ಲೇ ಮನಸ್ಸನ್ನು ರಾಮನಿಗೆ ಅರ್ಪಿಸಿದ ಸೀತೆಯೂ ಇದೇ ರೀತಿಯ ವಿರಹದಲ್ಲಿ ಬೇಯುತ್ತಾಳೆ. ರಾಮ ದೂರ ಸಾಗಿದಂತೆ ಕಾಣದಾದಾಗ ಆಕೆ ಸ್ತಬ್ಧವಾಗಿ ಚಿತ್ರದಲ್ಲಿನ ಕನ್ಯೆಯಂತೆ ನಿಂತು ಬಿಡುತ್ತಾಳೆ. ವಿರಹದಿಂದ ಆಕೆಯ ಮೈಮನಸ್ಸು ಬೇಯುತ್ತದೆ. ಚಂದ್ರೋದಯ ಆಕೆಯ ವಿರಹವನ್ನು ಇಮ್ಮಡಿಗೊಳಿಸುತ್ತದೆ. ಹಾಸಿಗೆ ಮೇಲೆ ಚೆಲ್ಲಿದ ತಾವರೆಯೆಸಳುಗಳು ಅವಳಿಗೆ ಮುಳ್ಳಂತೆ ಭಾಸವಾಗುತ್ತದೆ. ಆಕೆ ಚಂದ್ರನನ್ನೂ ನಿಂದಿಸುತ್ತಾಳೆ, ಹಲವು ಬಗೆಯ ವಿರಹಗಳು ಆಕೆಗೆ ನಿದ್ದೆಗೆಡಿಸುತ್ತವೆ.

ಅತ್ತಕಡೆ ರಾಮ ಜನಕರಾಯನ ಅತಿಥಿಗೃಹದ ಶಯ್ಯಾಗಾರದಲ್ಲಿ ಸೀತೆಯನ್ನು ನೆನೆದು ವಿರಹದಲ್ಲಿ ಬೇಯುತ್ತಾನೆ. ಸೀತೆಯಂತೆ ಚಂದ್ರನ ಬೆಳದಿಂಗಳೂ ರಾಮನನ್ನು ಕಾಡುತ್ತದೆ. ಅವನ ಹೃದಯ ಸೀತೆಯನ್ನರಸಿ ಭ್ರಮಾತ್ಮಕವಾಗಿ ಚಲಿಸುತ್ತದೆ, ಪ್ರೇಮಯಾತನೆ ಸಹಿಸದಾಗುತ್ತದೆ. 'ರಾಮನು ಏಕಾಂಗಿಯಾಗಿದ್ದನೆ? ಇಲ್ಲ. ಏಕಾಂತತೆ, ಇರುಳು, ಚಂದ್ರ, ಅವನ ಆತ್ಮಪ್ರಣಯಿನಿ ಸೀತೆ ಇವರೆಲ್ಲ ಅವನೊಂದಿಗಿದ್ದರು' ಎಂದು ಹೇಳುತ್ತಾ ರಾಮನ ಸ್ಥಿತಿಗೆ ಕಂಬನೂ ಅನುಕಂಪ ತೋರುತ್ತಾನೆ. ಕವಿ ಇಲ್ಲಿ ಪರಕಾಯ ಪ್ರವೇಶ ಮಾಡಿರುವಂತಿದೆ. ಹೀಗೆ ರಾಮ–ಸೀತೆಯರು ಒಂದೇ ನೋಟದಲ್ಲಿ ಪ್ರೇಮದ

ಸೆರೆಯಲ್ಲಿ ಸಿಲುಕಿದ ಸನ್ನಿವೇಶವನ್ನು ಕವಿಯೂ ಪ್ರೇಮಪರವಶನಾಗಿ ಚಿತ್ರಿಸಿದಂತಿದೆ.

ಮಾರನೆಯ ದಿನ ಸ್ವಯಂವರದ ಕಾರ್ಯಕ್ರಮವೇರ್ಪಡುತ್ತದೆ. ಅಲ್ಲಿ ನೆರೆದ ಅನೇಕ ರಾಜ ಮಹಾರಾಜರು ಶಿವಧನಸ್ಸನ್ನು ಕಂಡು ಅಸಹಾಯಕತೆಯಲ್ಲಿ ನೊಂದುಕೊಳ್ಳುತ್ತಾರೆ. ವಿಶ್ವಾಮಿತ್ರರ ಸಲಹೆಯಂತೆ ರಾಮ ಶಿವಧನಸ್ಸನ್ನೇ ನೋಡುತ್ತ ಕುಳಿತಿದ್ದ ಸಿಂಹಾಸನವನ್ನು ಬಿಟ್ಟೇಳುತ್ತಾನೆ. ಬಿಲ್ಲಿನ ಬಳಿ ಹೋಗುತ್ತಾನೆ. ಸಭಾಂಗಣದಲ್ಲಿ ನೆರೆದ ರಾಜ ಮಹಾರಾಜರಿಗೆ ರಾಮ ಬಿಲ್ಲನ್ನು ಮುರಿದ ಸದ್ದಷ್ಟೆ ಕೇಳುತ್ತದೆ. ಕ್ಷಣಮಾತ್ರದಲ್ಲೆ ರಾಮ ಬಿಲ್ಲನ್ನು ಮುರಿದುದ್ದರಿಂದ ಅಲ್ಲಿ ನೆರೆದವರಿಗೆ ಹೇಗೆ ಮುರಿದ ಎನ್ನುವುದೂ ಸಹ ವಿಸ್ಮಯವಾಗಿ ಉಳಿಯುತ್ತದೆ. ಅಷ್ಟರಮಟ್ಟಿಗಿನ ಪರಾಕ್ರಮಿ ರಾಮ ಎನ್ನುವುದನ್ನು ಕವಿ ಸಹಜ ಸುಂದರವಾಗಿ ಇಲ್ಲಿ ಕಟ್ಟಿಕೊಟ್ಟಿದ್ದಾರೆ.

ಕಂಬರಾಮಾಯಣದಲ್ಲಿ ರಾಮ ಶಿವಧನಸ್ಸನ್ನು ಮುರಿದ ವಿಚಾರ ಸೀತೆಗೆ ನಂತರ ತಿಳಿಯುತ್ತದೆ. ಏಕೆಂದರೆ ಆಕೆ ಸ್ವಯಂವರದಲ್ಲಿ ಹಾಜರಿರುವುದಿಲ್ಲ. ಅಂತಃಪುರದಲ್ಲಿ ರಾಮನ ನೆನಪಲ್ಲಿ ವ್ಯಾಕುಲಚಿತ್ತೆಯಾಗಿರುತ್ತಾಳೆ. ಸಖಿ ನೀಲಮಾಲೆಯ ಅತ್ಯಾನಂದದಲ್ಲಿ ಓಡಿ ಬಂದು ರಾಮ ಧನಸ್ಸನ್ನು ಮುರಿದ ವಿಚಾರ ತಿಳಿಸುತ್ತಾಳೆ. ರಾಮನ ಕುಲ ವಿವರ ಮತ್ತು ಚಹರೆಗಳನ್ನು ವರ್ಣಿಸಿ ಹೇಳಿದಾಗ ತಾನು ನೋಡಿದ ಸುಂದರ ಪುರುಷ ರಾಮನೇ ಎಂದು ಆಕೆಗೆ ಖಾತ್ರಿಯಾಗುತ್ತದೆ. ಅವಳ ಸಂದೇಹ ನಿವಾರಣೆಯಾಗಿ ಆನಂದಾನುಭವದಲ್ಲಿ ಆಕೆಯ ಮೈ ಹಿಗ್ಗುತ್ತದೆ. ಹೀಗಾದಾಗ ಅವಳು ಕಟಿಯಲ್ಲಿ ಧರಿಸಿದ ಒಡ್ಯಾಣವು ತುಂಡಾಗಿ ಕಳಚಿ ಬೀಳುತ್ತದೆ. ಸೀತೆಗೆ ಪ್ರಣಯ ಭಾವ ಭಾವೋದ್ರೇಕವನ್ನು ಸೂಕ್ಷ್ಮ ಕಲ್ಪನೆಯಲ್ಲಿ ಚಿತ್ರಿಸಿದ ಕಂಬನು ಸೀತಾ ಸ್ವಯಂವರದಲ್ಲಿ ಆತನ ಅಪೂರ್ವ ಕಲ್ಪನೆಯ ಶಿಲ್ಪವನ್ನು ಕಡೆದು ನಿಲ್ಲಿಸಿದ್ದಾನೆ. "ಕಂಬರ ಕಾವ್ಯದಲ್ಲಿ ಸೀತಾರಾಮರ ಪ್ರೇಮವು ಅನ್ಯಾದೃಶವಾಗಿ ಚಿತ್ರಿತವಾಗಿದೆ. ಸೀತಾ ವಿವಾಹ ಸನ್ನಿವೇಶವು ವಾಲ್ಮೀಕಿಯಲ್ಲಿ ಬಹು ಸಂಗ್ರಹವಾಗಿ ವರ್ಣಿತವಾಗಿದೆ. ಕಂಬರು ತಮಿಳುನಾಡಿನ ಕಳವಿಯಲ್(ವಿವಾಹ ಪೂರ್ವದ ಪ್ರೇಮ) ಸಂಪ್ರದಾಯವನ್ನನುಸರಿಸಿ ಆ ಸಂದರ್ಭವನ್ನು ಐದು ಪ್ರತ್ಯೇಕ ಪಟಲಗಳಲ್ಲಿ ವಿಸ್ತರಿಸಿ ನಾಯಕ ನಾಯಕಿಯರಿಗೆ ಸ್ವಯಂವರಕ್ಕೆ ಹಿಂದಿನ ದಿನವೇ ಸಂದರ್ಶನವನ್ನೇರ್ಪಡಿಸಿ ಅವರ ವಿರಹವನ್ನು ವಿಸ್ತರಿಸಿ ವಿವಾಹಕ್ಕೆ ಸಂಬಂಧಪಟ್ಟ ಮೆರವಣಿಗೆ ಮೊದಲಾದವುಗಳನ್ನು ಅತಿದೀರ್ಘವಾಗಿ ವಿವರಿಸಿದ್ದಾರೆ."

ರಾಮ–ಸೀತೆಯರ ವಿವಾಹ ಪೂರ್ವ ಭೇಟಿ ಮಿಥಿಲೆಯ ಉದ್ಯಾನವನದಲ್ಲಿ ಆಕಸ್ಮಿಕವೆಂಬಂತೆ ಆಗುವ ಕಥೆ ತುಳಸಿದಾಸರ ರಾಮಾಯಣದಲ್ಲಿದೆ. ಈ ಕಲ್ಪನೆಗೆ ಕಂಬರಾಮಾಯಣದ ಪ್ರಭಾವವಿದೆ ಎನ್ನುವುದು ಹಲವರ ವಾದ. ಕುವೆಂಪು ಉದ್ಯಾನವನದ ಸನ್ನಿವೇಶ ತರುತ್ತಾರಾದರು ಅದು ತುಳಸಿದಾಸರಿಗಿಂತ ಸಾಕಷ್ಟು ಭಿನ್ನವಾಗಿದೆ. ಬಾಲ ಸಹಜವಾದ ಆಟದಲ್ಲಿ ಮಗ್ನನಾಗಿ ಲಕ್ಷ್ಮಣನ ಜೊತೆಯಲ್ಲಿ ಉದ್ಯಾನವನದಲ್ಲಿ ವಿಹಾರ ಮಾಡುತ್ತ ಅಲ್ಲಿನ ಕೊಳದ ನೀರಿಗೆ ಕಲ್ಲೆಸೆಯುವ ಆಟವಾಡುತ್ತಿದ್ದ ರಾಮನನ್ನು ಸೀತೆ ನೋಡುತ್ತಾಳೆ. ಅವಳ ಮುಖ ಅನುರಾಗದಲ್ಲಿ ಓಕುಳಿಯಂತಾಗುತ್ತದೆ. ತನ್ನ ಕನಸಿನಲ್ಲಿ ನಿತ್ಯವೂ ಕಾಣುತ್ತಿದ್ದ ನೀಲ ದೇಹಿ ಈತನೇ ಎಂದು ವಿಸ್ಮಯ ಮತ್ತು ಅನುರಾಗದಲ್ಲಿ ಆತನನ್ನೇ ದಿಟ್ಟಿಸಿ ನೋಡುತ್ತಾಳೆ. ಪ್ರಣಯ ವೇದನೆಯಲ್ಲಿ ಅರಮನೆಗೆ ಹಿಂದಿರುಗುತ್ತಾಳೆ. ಚಿಂತೆಯಲ್ಲಿ ಮುಳುಗಿದ ಸೀತೆಯನ್ನು ಊರ್ಮಿಳೆ ಕಾರಣ ಕೇಳಿದಾಗ. ತನ್ನ ಕನಸಿನ ನೀಲ ದೇಹಿಯನ್ನು ಉದ್ಯಾನವನದಲ್ಲಿ

ಕಂಡ ಬಗೆಯನ್ನು ಆಕೆಗೆ ವಿವರಿಸುತ್ತಾಳೆ.

"..........................

**ಗುರುತಿಸಿದೆನಾ ರೂಪಮಂ ನಮ್ಮ ಪೂದೋಂಟದೊಳ್**

**ಕೊಳದ ತಡಿಯೊಳ್ ನಿಂದ ಗಗನೋಪಮಾಂಗದಾ**

**ನೀಲ ಕಾಂತಿಯ ತರುಣ ವಿಗ್ರಹದಿ**".

**(ಶ್ರೀ ರಾಮಾಯಣ ದರ್ಶನಂ: ಶಿಲಾತಪಸ್ವಿನಿ, ಪದ್ಯ 450, 460)**

ತನ್ನ ಕನಸಿನ ದಿವ್ಯಮೂರ್ತಿಯನ್ನು ಕಣ್ಣಾರೆ ಕಂಡ ಅನುಭವವನ್ನು ಊರ್ಮಿಳೆಗೆ ಹೇಳುತ್ತಿರುವಾಗಲೇ, ಸಖಿಯರಿಂದ ರಾಮನು ನಾಳಿನ ಬಿಲ್ಲು ಪರೀಕ್ಷೆಗೆ ಬಂದವನೆಂಬ ವಿಚಾರ ತಿಳಿಯುತ್ತದೆ. "ನೀನಲ್ಲಿ ಕಂಡವಗೆ ರಾಮನೆಂಬಭಿಧಾನಮಿಹುದಂತೆ! ರವಿಕುಲದರಸು ದೇವ ದಶರಥ ಪುತ್ರನಂತೆ! ತಾನಯೋಧ್ಯೆಗೆ ಸ್ವಾಮಿಯಹನಂತೆ! ಬಿಲ್ಮುರಿಯೆ, ನಿನಗವನಿನಿಯನಂತೆ! ಬಲ ಪರೀಕ್ಷೆಗೆ ನಾಳೆ ದಿನವಂತೆ!" ಎನ್ನುವ ಸುದ್ದಿ ಸೀತೆಯ ಕಿವಿಗೆ ಬಿದ್ದೊಡನೆ ಆಕೆಗೆ ಪರಮಾನಂದವಾಗುತ್ತದೆ. ರಾಮನ ಜಯಕ್ಕಾಗಿ ಆಕೆ ಆ ರಾತ್ರಿ ಆರಾಧನೆಯಲ್ಲಿ ತೊಡಗುತ್ತಾಳೆ. ಅವಳ ಪೂಜೆಯೇ ರಾಮನ ಜಯಕ್ಕೆ ಕಾರಣವೆಂದು ಕವಿ ಕಲ್ಪಿಸಿದ್ದಾರೆ.

ರಾಮನಿಗೆ ಒಲಿದ ಮನಸ್ಸು ಹರ ಶರಾಸನವನ್ನು ತಿರಸ್ಕರಿಸುತ್ತದೆ. "ಹರ ಶರಾಸನವಂತೆ! ತೆಗೆ, ಪರೀಕ್ಷೆಯದೇಕೆ ತಾನೊಲಿದ ನಲ್ಲಂಗೆ!" ಎಂದುಕೊಳ್ಳುತ್ತಾಳೆ. ಆದರೆ ಸ್ವಯಂವರದಲ್ಲಿ ರಾವಣನ ಸರದಿ ಬಂದಾಗ "ಓ ಧನುವೆ, ಕಾಪಾಡು ಬಾಲೆಯಂ; ಕೈಮುಗಿವೆ ಕಾಲ್ಗೆರಗಿ; ಮುರಿಯದಿರ್; ಬಾಗದಿರ್; ಸುರಮೇರು ಭಾರದಿಂ ದೈತ್ಯನೆತ್ತದ ತೆರದಿ ಭಾರಗೊಂಡಬಲೆಯಂ ಪೊರೆ" ಎನ್ನುತ್ತಾ ಭಯದಲ್ಲಿ ಧನಸ್ಸನ್ನು ಬೇಡಿಕೊಳ್ಳುತ್ತಾಳೆ. ನಂತರ ರಾಮನ ಸರದಿ ಬಂದಾಗ "ಹಗುರಾಗು ಗರಿಯಂತೆ; ಬಾಗು ಬಳ್ಳಿಯ ತೆರದಿ; ರಾಮಂಗೆ ಮುರಿದು ಬೀಳ್, ಓ ಧನುವೆ!" ಎನ್ನುತ್ತಾ ಭಾವಪೂರ್ಣವಾಗಿ ಭಕ್ತಿಯಿಂದ ಸೀತೆಯು ಬೇಡಿಕೊಳ್ಳುತ್ತಾಳೆ. ಇಲ್ಲೆಲ್ಲಾ ಕವಿ ಸೀತೆಯ ಕೋರಿಕೆಗಳೇ ರಾಮನು ಧನಸ್ಸನ್ನು ಮುರಿಯಲು ಕಾರಣವೆಂಬಂತೆ ಕಲ್ಪಿಸಿದ್ದಾರೆ. ಸೀತೆಯ ಮುಗ್ಧ ಪ್ರೇಮ, ಎಳೆಯ ರಾಮನ ಪರಾಕ್ರಮ ಇಲ್ಲಿ ಮುಖ್ಯವಾಗಿ ಬಿಂಬಿತವಾದ ಎರಡು ವಿಷಯಗಳು.

ಕಂಬರಾಮಾಯಣದಲ್ಲಿ ರಾಮ ಬಿಲ್ಲಿನ ಸಮೀಪ ಬಂದಾಗ ಸಭೆಯಲ್ಲಿ ನೆರದ ಎಲ್ಲರಿಗೂ ಆತನ ಪರಾಕ್ರಮದ ಮೇಲೆ ಮೊದಲೇ ನಂಬಿಕೆ ಇರುವಂತೆ ಬಿಂಬಿತವಾಗಿದೆ. ಆದರೆ ಕುವೆಂಪು ರಾಮಾಯಣದಲ್ಲಿ ರಾಮನು ಬಿಲ್ಲಿನ ಸಮೀಪ ಬಂದಾಗ ಅಲ್ಲಿ ನೆರೆದಿದ್ದ ಲಲನೆಯರು "ಹಾ! ಧನುವೆಲ್ಲಿ? ಶಿಶುವೆಲ್ಲಿ? ಸಿಡಿಲೆತ್ತ? ಹೂವೆತ್ತ?" ಎಂದು ಸಂಕಟಪಟ್ಟುಕೊಂಡರಂತೆ. ಆದರೆ ರಾಮ ಯಾವುದನ್ನೂ ಲೆಕ್ಕಿಸದೆ ಸೀತೆಯನ್ನೊಮ್ಮೆ ನೋಡಿ ಬಿಲ್ಲಿಗೆ ನಮಸ್ಕರಿಸಿ ಹೆದೆಯೇರಿಸಿ ಮುರಿದು ಬಿಡುತ್ತಾನೆ. ಸೀತೆಯು ಆನಂದಮಯಿಯಾಗಿ ಉತ್ಸುಕತೆಯಿಂದ ನಡೆದುಬಂದು ರಾಮನ ಕೊರಳಿಗೆ ಮಾಲೆ ಹಾಕುತ್ತಾಳೆ. ಕಂಬರಾಮಾಯಣದಲ್ಲಿ ರಾಮ–ಸೀತೆಯರ ಪರಸ್ಪರ ಪ್ರೇಮ, ವಿರಹದ ಭಾವಗಳು ವರ್ಣನೆಗೊಂಡಿವೆ. ಆದರೆ ಕುವೆಂಪು ರಾಮಾಯಣದಲ್ಲಿ ರಾಮನ ಭಾವಾನುರಾಗಗಳಿಗೆ ಪ್ರಾಮುಖ್ಯತೆ ನೀಡದೆ ಸೀತೆಯ ಬಯಕೆ, ಕೋರಿಕೆ, ಹಾರೈಕೆಗಳನ್ನು ಮಾತ್ರ ವರ್ಣಿಸಿ ಹೇಳಿರುವುದು ಕಂಡುಬರುತ್ತದೆ.

ಹಾಗೆ ಸೀತೆಯ ಕನಸು, ಉದ್ಯಾನವನದಲ್ಲಿ ನನಸಾಗಿ ಕಂಡದ್ದೂ ಕೂಡ ಕವಿ ಕಾವ್ಯದಲ್ಲಿ ಅಲ್ಲಲ್ಲಿ ಬಳಸಿದ ಪ್ರತಿಮೆಯಂತೂ ವಿಶಿಷ್ಟವಾದುದು. ಇಲ್ಲಿ ಸೀತೆಯ ಕನಸು ಅವಳ ಭವಿಷ್ಯದ ಪತಿಯನ್ನು ಮುಂಚಿತವಾಗಿ ತೋರಿಸಿದ ಪ್ರತಿಮೆಯಾಗಿದೆ. ಇಲ್ಲಿ ಸೀತೆಯ ಪ್ರಾರ್ಥನೆಗಳು ರಾಮನ ಯಶಸ್ಸಿಗೆ ಕಾರಣವಾಗಿವೆ. ಒಟ್ಟಾರೆಯಾಗಿ ಹನ್ನೆರಡನೆಯ ಶತಮಾನದ ಕಂಬ ಇಪ್ಪತ್ತನೆಯ ಶತಮಾನದ ಕುವೆಂಪು ಚಿತ್ರಿಸಿದ ಸೀತೆಯ ಸ್ವಯಂವರಗಳೆರಡು ಭಿನ್ನವೂ ವಿಶಿಷ್ಟವೂ ಆಗಿದೆ. ಇಬ್ಬರಲ್ಲೂ ಕಾಣುವ ಸಾಮ್ಯತೆ ಎಂದರೆ ಸೀತೆಯ ಪ್ರೇಮಾನುರಾಗ, ರಾಮನ ಪರಾಕ್ರಮ ಎನ್ನುವುದು ವಿಶೇಷ. ಉಳಿದ ಪ್ರಸಂಗಗಳು ಈರ್ವರ ಕಲ್ಪನೆಯಲ್ಲಿ ವಿಭಿನ್ನವಾದ ಶೈಲಿಯಲ್ಲಿ ಪ್ರೇಮ, ಭಾವ, ವಿರಹ, ಶೃಂಗಾರ, ಪ್ರಣಯಗಳು ವರ್ಣಿತಗೊಂಡಿವೆ.

❖❖❖

ಮಾವ ಒಗರನು
ಸವಿದ ಕೋಗಿಲೆ
ಕಂಠ ಗುನುಗಿದೆ ಗಾನವಾ।
ಜೊತೆಗೆ ಹಾಡಿವೆ
ಮರಿಗಳೆಲ್ಲವು
ಹಿಡಿದು ಕೊಟ್ಟಿವೆ ರಾಗವಾ॥

# ಅಡಿಗರ 'ವರ್ಧಮಾನ' ಕವಿತೆಯಲ್ಲಿ ತಲೆಮಾರುಗಳ ತಳಮಳ

**ಲೋಕೇಶ ಕೆ.ಪಿ.**
ಕನ್ನಡ ಸಹ ಪ್ರಾಧ್ಯಾಪಕರು. ಕನ್ನಡ ವಿಭಾಗ, ಸ.ಮಹಾವಿದ್ಯಾಲಯ (ಸ್ವಾಯತ್ತ), ಮಂಡ್ಯ

ಅನ್ಯರೊರೆದುದನೆ ಬರೆದುದನೆ ನಾ ಬರೆಬರೆದು ಭಿನ್ನಗಾಗಿದೆ ಮನವು: ಬಗೆಯೊಳಗನೇ ತೆರೆದು ನನ್ನ ನುಡಿಯೊಳೆ ಬಣ್ಣಬಣ್ಣದಲಿ ಬಣ್ಣಿಸುವ ಪನ್ನತಿಕೆ ಬರುವನಕ ನನ್ನ ಬಾಳಿದು ನರಕ ಎಂದು ಹೇಳುತ್ತ ಪ್ರಯೋಗಾತ್ಮಕವಾಗಿ ಬರೆಯುತ್ತಾ ವಿಭಿನ್ನತೆಯ ಅಭಿವ್ಯಕ್ತಿಯ ತಂತ್ರದಲ್ಲಿ ಬೆರಗುಮೂಡಿಸಿದ ಕವಿ ಅಡಿಗರು 'ವರ್ಧಮಾನ' ಎಂಬ ಕವನ ಸಂಕಲನವನ್ನು ರಚಿಸಿದರು.

ವರ್ಧಮಾನ ಕವನಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಮಧ್ಯಪ್ರದೇಶ ಸರ್ಕಾರದ ಕಬೀರ್ ಸಮ್ಮಾನ್ ಪ್ರಶಸ್ತಿ ಲಭಿಸಿದ್ದು ಇದರಲ್ಲಿ ಒಟ್ಟು ಹತ್ತು ಕವಿತೆಗಳಿದ್ದು, ನವ್ಯ ಕಾವ್ಯದಲ್ಲಿ ಅತ್ಯಂತ ಚರ್ಚೆಗೊಳಗಾದ ಕವಿತೆಗಳಲ್ಲಿ ವರ್ಧಮಾನ ಎಂಬ ಕವಿತೆಯೂ ಒಂದಾಗಿದ್ದು, ಎರಡು ತಲೆಮಾರಿನ ವ್ಯಕ್ತಿಗಳ ಮನೋಧರ್ಮದ ಅಂತರವನ್ನು ಹಾಗೂ ಹಿಂದಿನ ತಲೆಮಾರಿನ ತಳಮಳಗಳನ್ನು ಪ್ರಸ್ತುತ ತಲೆಮಾರಿನ ವ್ಯಕ್ತಿಯ ಹಮ್ಮು-ಬಿಮ್ಮುಗಳು ಹಾಗೂ ಆಟಾಟೋಪಗಳನ್ನು ವ್ಯಕ್ತಿ ವಿಶಿಷ್ಟತೆಯ ಹಿನ್ನಲೆಯಲ್ಲಿ ಅಡಿಗರು ಚಿತ್ರಿಸಿರುವುದನ್ನು ಕಾಣಬಹುದಾಗಿದೆ. ಪಂಪನ ಹಾಗೆ ಅಸಲು ಕಸಬನ್ನ ಬಲ್ಲ ಅಡಿಗರು ಕುಮಾರವ್ಯಾಸನ ರೂಪಕ ಸೃಷ್ಟಿಯ ಸಾಮರ್ಥ್ಯವನ್ನು ಹಾಗೆಯೆ ಬೇಂದ್ರೆಯ ಶ್ರಾವಣ ಪ್ರತಿಭೆಯನ್ನು ಪಡೆಯುವುದರೊಂದಿಗೆ ಶತಮಾನದ ಕವಿಯಾಗಿ ಪ್ರತಿಕ್ಷಣವೂ ತಮ್ಮನ್ನ ತಾವು ಶೋಧಿಸಿಕೊಳ್ಳುವ ಕವಿಯಾಗಿ ರೂಪಗೊಂಡರು.

ದೇಶದಲ್ಲಿ ನಡೆಯುತ್ತಿರುವ ಎಲ್ಲಾ ಸಂಚಲನಗಳನ್ನು ತಾವು ಮೊದಲರಿತು ಆಯಾ ಸಂದರ್ಭಗಳಿಗೆ ಅನುಗುಣವಾಗಿ ಕೆಲವು ಭಾವನೆಗಳಿಗೆ ಸ್ಪಂದಿಸುವ ಗುಣವನ್ನು ಅಡಿಗರಲ್ಲಿ ಕಾಣಬಹುದಾಗಿದೆ. ಪ್ರವರ್ಧನಮಾನಕ್ಕೆ ಬರುತ್ತಿರುವ ವ್ಯಕ್ತಿಗೆ ಭೂತಕಾಲ, ವರ್ತಮಾನ ಮತ್ತು ಭವಿಷ್ಯತ್ ಕಾಲಗಳ ಅರ್ಥಗ್ರಹಿಕೆಯ ಅರಿವಿನ ಅವಶ್ಯಕತೆಯನ್ನು 'ವರ್ಧಮಾನ' ಕವಿತೆಯಲ್ಲಿ ನೋಡಬಹುದಾಗಿದೆ. ಬೆಳವಣಿಗೆಯ ಹಂತದಲ್ಲಿರುವ ವ್ಯಕ್ತಿಯ ಪೊಗರು, ಯೌವ್ವನೋತ್ಸಾಹ ಆರಂಭದಲ್ಲಿ ರಭಸದಿಂದ ಕೂಡಿದ್ದು ಕ್ರಮೇಣ ಬದುಕು ಮಾಗುವಿಕೆಯ ಹಂತವನ್ನು ತಲುಪುವುದನ್ನು ಬಹು ಪರಿಣಾಮಕಾರಿಯಾಗಿ ಮತ್ತು ಸಂಕೀರ್ಣವಾಗಿ ಕವಿತೆ ಧ್ವನಿಸುತ್ತದೆ.

ಪ್ರತಿಯೊಂದು ತಲೆಮಾರು ಕೂಡ ತನ್ನದೇ ಆದ ಸ್ಪರ್ಧೆ ಮತ್ತು ಪಂಥಾಹ್ವಾನವನ್ನು ಎದುರಿಸಿ ರೂಪಿಸಿಕೊಳ್ಳುವ ಕ್ರಮ ಎಷ್ಟು ಚೇತೋಹಾರಿಯೋ ಅಷ್ಟೇ ಆತಂಕಮಯವೂ ಹೌದು. ಈ ಬಗೆಯ ತಲ್ಲಣದ ತುಡಿತಗಳು ಎರಡೂ ತಲೆಮಾರನ್ನು ಬಿಟ್ಟಿಲ್ಲವೆಂದು ಹೇಳಿದರೆ ತಪ್ಪಾಗುವುದಿಲ್ಲ. ಅಡಿಗರ ವರ್ಧಮಾನ ವರ್ತಮಾನದ ಎಲ್ಲಾ ತಲ್ಲಣಗಳನ್ನು ಅತ್ಯಂತ ಸಮರ್ಥವಾಗಿ ಧ್ವನಿಸಿದೆ.

ಮೊದಲ ಭಾಗದಲ್ಲಿ ಬೆಳೆಯುತ್ತಿರುವ ವ್ಯಕ್ತಿಯ ಯೌವ್ವನಾವಸ್ಥೆಯ ಚಿತ್ರಣವನ್ನು ನೀಡುತ್ತಾ ಈ ರಾಜಕುಮಾರನಿಗೆ ಮೀಸೆ ಚಿಗುರುತ್ತಿದೆ ಈ ಸಂದರ್ಭದಲ್ಲಿ ದೇಶ

ಕಾಣುವುದಿಲ್ಲವೆಂಬ ಸಾಂಪ್ರದಾಯಿಕ ನಾಣ್ನುಡಿಯಂತೆ ವಾಸ್ತವತೆಯನ್ನು ಬಿಂಬಿಸುತ್ತಾ ವ್ಯಂಗ್ಯದ ಶೈಲಿಯಲ್ಲಿ ಕವಿತೆ ಆರಂಭವಾಗುತ್ತಿದೆ. ಕತ್ತಿನ ಕುಣಿಕೆ ಹರಿದು ಹರವೋ ಹರ ಎಂಬಲ್ಲಿ ವ್ಯಕ್ತಿ ಸ್ವಾತಂತ್ರ್ಯದ ಸಾಪಲ್ಯತೆಯನ್ನು ವಿಡಂಬಿಸಿ ಎಲ್ಲವನ್ನು ಕಿತ್ತು ಹಾಕುವನೆಂಬ ತುರಿಕೆ ಮತ್ತು ಅಹಮ್ಮಿಕೆಯನ್ನು ಪ್ರತಿಪಾದಿಸಿ ಕವಿತೆಯಲ್ಲಿ ರೂಪಕಗಳು ಪರಸ್ಪರ ಬೆರೆಯುವುದನ್ನು ಅರಬ್ಬಿಕುದುರೆ, ಚೆಟ್ಟಿ, ಯಕ್ಷಗಾನದ ಕುಣಿತ ಮುಂತಾದ ಪದಪುಂಜಗಳಲ್ಲಿ ನೋಡಬಹುದು. ನಾಣಿಯ ಮಗ ಶೀನಿ ಎಂದು ತಲೆಮಾರುಗಳಿಗೆ ಹೆಸರನ್ನು ಸಾಂಕೇತಿಕವಾಗಿ ಸೂಚಿಸಿರುವುದರಲ್ಲಿ ಸರ್ವಸಾಮಾನ್ಯನ ಮಗನಾಗಿದ್ದರೂ ರಾಜಕುಮಾರನ ಹಾಗೆ ಎಂಬಲ್ಲಿ ಕವಿಗೆ ಕೋಪವಿದೆ ಹಾಗೂ ಸಹಾನುಭೂತಿಯಿದೆ.

ಶೀನಿಗೆ ಆಕಾಶ ಕೈಗೆಟಕದಿದ್ದಕ್ಕೆ ಮತ್ತೊಮ್ಮೆ ತಾಯ ಗರ್ಭದಲ್ಲಿ ಕೂರಲಾಗದಿದುದಕ್ಕೆ ಹಾಗೂ ಮೊಲೆ ಬಿಡಿಸಿದ್ದಕ್ಕೆ ಮತ್ತು ತನ್ನಪ್ಪ ತನಗಿಂತ ಮೊದಲೇ ಹುಟ್ಟಿದ್ದಕ್ಕೆ ಸಿಟ್ಟು ಆಕ್ರೋಶ ರೊಚ್ಚು ಹಾರಾಟವೆಲ್ಲವೂ ಹೆಚ್ಚಾಗಿದೆ.

ಕವಿತೆಯ ಎರಡನೇ ಭಾಗದಲ್ಲಿ ಬೇಡವೆಂಬುದನ್ನು ಮಾಡುವುದೇ ಇವತ್ತಿನ ಪರಂಪರೆಯ ಗುಣವಾಗಿರುವುದನ್ನು ಮಾರ್ಮಿಕವಾಗಿ ದೃಷ್ಟಾಂತದ ಮೂಲಕ ಈ ಕೆಳಗಿನಂತೆ ಅಭಿವ್ಯಕ್ತಿಸಲಾಗಿದೆ. ಒಂದು ಬಗೆಯಲ್ಲಿ ಲಕ್ಷ್ಮೀಶನ ಜೈಮಿನಿ ಭಾರತ ಕೃತಿಯಲ್ಲಿನ ಚಂಡಿ ಕತೆಯನ್ನು ನೆನಪಿಗೆ ತರುವಂತೆ ಕವಿತೆ ಗೋಚರವಾಗುತ್ತದೆ.

**ಕಿಲಾಡಿ ರಸ್ತೆಯ ಕೊನೆಗೆ ತಿರುವಿನಲ್ಲಪಘಾತ**
**ನ ಪ್ರಮದಿತವ್ಯ ಬೋರ್ಡಿನ ಕೆಳಗೆ ಹೆದ್ದಾರಿ**
**ಬಿಟ್ಟು ಬಿದ್ದೆದ್ದು ಹೆದ್ದಾರಿ ಹಿಡಿವುತ್ಪಾತ**
**ವರ್ಧಮಾನದ ವರಾತ.**

ಕವಿತೆಯ ಈ ಸಾಲುಗಳಲ್ಲಿ ನ ಪ್ರಮದಿತವ್ಯ ಎಂಬ ಸಂಸ್ಕೃತ ಪದವು ಮರೆಯಬಾರದು, ತಪ್ಪದೇ ಮಾಡಬೇಕು ಎಂಬ ತೈತ್ತಿರಿಯೋಪನಿಷತ್‌ನ ಅನುವಾಕ,1 ಹಿರಿಯರಿಗೆ ವಿರುದ್ಧವಾಗಿ ನಡೆಯುವ ಬಗ್ಗೆ ವ್ಯಂಗ್ಯವಿದೆ. ರಾಮಾಯಣದ ವಿರಾಧ, ಸುಗ್ರೀವಾಜ್ಞೆ, ಕಿಷ್ಕಿಂದೆ, ಹನುಮಂತ, ಧೃವನ ತಾಯಿ, ಚಿಕ್ಕಮ್ಮಂದಿರು, ಜಟಾಯು ಇತ್ಯಾದಿ ಪುರಾಣ ಪ್ರತಿಮೆಗಳು ಸಮಕಾಲಿನವಾಗುವಂತೆ ಕವಿತೆಯಲ್ಲಿ ಬೆಸೆದುಕೊಂಡಿದೆ. ಈ ಸಂದರ್ಭದಲ್ಲಿ ಅಡಿಗರು ಬಳಸಿರುವ ಶಬ್ದಗಳು ಅತ್ಯಂತ ಸಂಕೀರ್ಣವಾಗಿವೆ. ಅಭಿವ್ಯಕ್ತಿಯೂ ಸಂಕೀರ್ಣವಾಗಿರುವುದರೊಂದಿಗೆ ಭಾಷೆಯಲ್ಲಿ ಪ್ರಬುದ್ಧತೆ ಮತ್ತು ಪ್ರಯೋಗಾತ್ಮಕತೆಯನ್ನು ತರುತ್ತಾರೆ. ಸಾಧನೆಗೆ ಯಾವುದೇ ಅನ್ಯಮಾರ್ಗವಿಲ್ಲವೆಂಬುದನ್ನು ಒತ್ತಿಹೇಳುತ್ತಾರೆ. ಹಿಪ್ಪಿ ಗೆಳೆಯರ ಸಹವಾಸದಿಂದ ಮೈಕೈ ಗಾಯಮಾಡಿಕೊಳ್ಳುವುದು ತನ್ನ ಸಾಹಸಗಳನ್ನು ಯಾರೂ ನೋಡುವವರಿಲ್ಲವೆಂದು ಅಸಹಜವಾಗಿ ಮತ್ತು ವಿಕೃತವಾಗಿ ನಡೆದುಕೊಳ್ಳುವುದು ಹಾಗೂ ಒದ್ದಾಡುವುದನ್ನು ಗುರುತಿಸಲಾಗಿದೆ.

ಕವಿತೆಯ ಎರಡನೇ ಭಾಗದಲ್ಲಿ ಪೌರಾಣಿಕ ಪ್ರತಿಮೆಗಳು ಕಂಡುಬರುತ್ತವೆ. ಲೋಕಕಂಟಕನಾಗಿದ್ದ ವಿರಾಧನು ಸೀತೆಯನ್ನು ಅಪಹರಿಸ ಹೊರಟಾಗ ರಾಮಲಕ್ಷ್ಮಣರು ಅವನ ತೋಳುಗಳನ್ನು ಕಡಿದು ಕಂದಕಕ್ಕೆ ತಳ್ಳಿದರು. ನಂತರ ಇವನಿಗೆ ಗಂಧರ್ವಜನ್ಮ ದೊರಕಿತು. ಯೌವನದ ಸಂದರ್ಭದಲ್ಲಿ ಹಿಪ್ಪಿಗೆಳೆಯರು ನಿಶ್ಚಿತ ಗುರಿ ಉದ್ದೇಶಗಳಿಲ್ಲದ ಪ್ರದೇಶಗಳಿಗೆಲ್ಲ ಕರೆದುಕೊಂಡು ಹೋಗಿ ಹಲವಾರು ಸಮಸ್ಯೆಗಳನ್ನು ಮಾಡಿಕೊಂಡು

ನಂತರ ಬಿಡಿಸಿಕೊಳ್ಳಲು ಪ್ರಯತ್ನಿಸಿ ನಾಟಕೀಯವಾದ ರೀತಿನೀತಿಗಳನ್ನು ನೋಡಲು ಯಾರೂ ಇಲ್ಲದೆ ಕೊನೆಗೆ ತನ್ನ ಅಸ್ತಿತ್ವದ ಪ್ರಶ್ನೆ ಎದುರಾಗಿ ಕೊರಗುತ್ತಾರೆ.

ಹೀಗೆ ಕವಿತೆಯ ನಾಯಕ ವಿರಾಧನ ರೀತಿ ಸಮಸ್ಯೆಗೆ ಸಿಲುಕಿ ನಂತರ ಪರಿಹರಿಸಿಕೊಂಡು ಸುನೀತಿಯು ಪುರಾಣದಲ್ಲಿ ಹೇಗೆ ತನಗಾದ ಅವಮಾನಕ್ಕಾಗಿ ಮನದಲ್ಲಿ ಮರುಗುತ್ತಾಳೊ ಹಾಗೆ ನಾಯಕ ತನ್ನ ನೋವಿಗೆ ತಾನೆ ಮರುಗಿ, ಸುರುಚಿಯು ಧ್ರುವನ ಆತ್ಮೋದ್ಧಾರಕ್ಕೆ ಹೇಗೆ ಶ್ರಮಿಸಿದಳೊ ಹಾಗೆ ಶ್ರಮಿಸುವೆಡೆಗೆ ಪ್ರಯತ್ನಿಸುವುದು ಮತ್ತು ತನ್ನ ಆಜ್ಞೆಯನ್ನು ತಾನೆ ಮೀರದಂತೆ ವೀರಾಧಿವೀರನಾದ ಹನುಮಂತನಂತೆ ಧೈರ್ಯ, ಶ್ರದ್ದೆ ಮತ್ತು ಕಾರ್ಯಪ್ರವೃತ್ತಿಯ ಮೂಲಕ ಸಾಧನೆ ಮಾಡುವುದು; ತನ್ನ ಮಂಡಿಯುದ್ದದ ಸಾಧನೆ ಎಂದರೆ ಅಲ್ಪ ಅಥವಾ ಅರ್ಧಸಾಧನೆಗೆ ತಾನೆ ಚಪ್ಪಾಳೆ ತಟ್ಟಿಕೊಳ್ಳಬೇಕೆಂಬ ಕಟಕಿಯನ್ನು ನೋಡಬಹುದಾಗಿದೆ. ತನ್ನ ಸಾಧನೆಗೆ ತೊಡಕಾದ ಎಲ್ಲಾ ಆತಂಕವನ್ನು ನಿವಾರಿಸಿಕೊಂಡು ಮುನ್ನುಗಿದ್ದರೆ ಸರಿ ಇಲ್ಲದಿದ್ದರೆ ತಾನೆ ಸಂಧಿಗ್ದತೆ ಮತ್ತು ಇಕ್ಕಟಿಗೆ ಸಿಲುಕಿ ತನ್ನ ಶಾಪಕ್ಕೆ ತಾನೆ ಕಾವಲುಗಾರನಾಗಿ ಕೊರಬೇಕಾದ ಅನಿವಾರ್ಯತೆ ಸೃಷ್ಟಿಯಾಗುತ್ತದೆಂಬ ಜಾಗೃತಿಯ ಸಂದೇಶವು ಕವಿತೆಯಲ್ಲಡಗಿದೆ.

ಕವಿತೆಯ ಮೂರನೆಯ ಭಾಗದಲ್ಲಿ ತಂದೆ ಮಗನ ಭಾವನೆಗಳನ್ನು ಅರ್ಥಮಾಡಿಕೊಳ್ಳಲು ತೊಡಗಿದರೂ ಮಗ ಅರ್ಥವಾಗುತ್ತಿಲ್ಲವೆಂಬ ಆತಂಕವಿದೆ. ಕೊರಕಲಿನ ದಂಡೆಯ ಮೇಲೆ ಕುಳಿತು ಸಿಗರೇಟು ಹಚ್ಚಿ ಸೇದುತ್ತಿರುವ ದೃಶ್ಯದ ಹೊಲಿಕೆಯಾಗಿ ಪಂಚಾಗ್ನಿ ಮಧ್ಯಸ್ಥ ಮಗ ಎಂದರೆ ಬೇಸಿಗೆಯಲ್ಲಿ ಋಷಿಗಳು ತಪಸ್ಸು ಮಾಡುವಾಗ ನಾಲ್ಕು ಕಡೆಗಳಲ್ಲೂ ಇರುತ್ತಿದ್ದ ನಾಲ್ಕು ಅಗ್ನಿ ಮತ್ತು ಮೇಲಿನ ಸೂರ್ಯನಂತೆ ತನ್ನ ನಾಲ್ಕೂ ಗೆಳೆಯರ ನಾಯಕನಾಗಿ ಸೂರ್ಯನ ರೀತಿ ಕಂಗೊಳಿಸುತ್ತಿದ್ದ ರೀತಿ ನೋಡಿ ಮಗನ ಗೋಳನ್ನು ಕಂಡು ಪರಿತಪಿಸುವ ರೀತಿ ಅನನ್ಯವಾದುದು. ತಂದೆ ಕೂಗು ಮಗನಿಗೆ ಕೇಳಿಸುತ್ತಿಲ್ಲವಾದ್ದರಿಂದ ಅವನ ಭಾಷೆ ಬೇರೆ ನನ್ನ ಭಾಷೆಯೇ ಬೇರೆಯಾಗಿದೆಯೆನೋ ಎಂಬ ಅನುಮಾನ ಮತ್ತು ಆತಂಕ ಮೂಡುತ್ತದೆ. ರಾತ್ರಿ ನಿದ್ದೆಯಿಲ್ಲದ, ಮುಖದಲ್ಲಿ ಕಳೆಯಿಲ್ಲದ, ಹರಕು ಬಟ್ಟೆಯ ಮಗನನ್ನು ನೋಡಿದರೆ ತಂದೆಯ ಕರುಳು ಕಿವಿಚುತ್ತದೆ.

ತನ್ನ ಮಗ ಈ ಹಿಪ್ಪಿಗೆಳೆಯರ ಜೊತೆ ಸೇರಿ ನಿರ್ವೀರ್ಯನಾಗಿ ಬದುಕುತ್ತಿದ್ದಾನೆ ಎಂದೆನಿಸುತ್ತದೆ. ವಂಶೋದ್ದಾರಕ ಮನೆತನಕ್ಕೆ ಆಧಾರಸ್ಥಂಭವಾಗುವ ಬದಲು ಹಾಳಾಗುತ್ತಿದ್ದಾನಲ್ಲ ಎಂಬ ವ್ಯಥೆಯುಂಟಾಗುತ್ತದೆ. ಇವನು ನಮ್ಮ ಮನೆತನಕ್ಕೆ ಒಳ್ಳೆಯ ಹೆಸರು ತರುತ್ತಿಲ್ಲವಲ್ಲ ಎಂಬ ಕಾರಣಕ್ಕಾಗಿ ಇವನು ನನ್ನ ಮಗನೇ ಅಲ್ಲ ಅನ್ನೋಣವೆನುಸುತ್ತದೆ ಆದರೆ ಅದು ಸಾಧ್ಯವಾಗುತ್ತಿಲ್ಲ.

ಮುತ್ತಜ್ಜ ಕಟ್ಟಿದ ಮನೆ ದೀಪ ಹಚ್ಚುವರಿಲ್ಲ ಶ್ರದ್ದೆ ಕೊಡುವನ್ನ ನೀರಿಲ್ಲದೆಯೆ ಉರುಳುವವರು ಪಿತೃಪಿತಾಮಹರು ಎಂಬಲ್ಲಿ ತಮ್ಮ ಮನೆತನದ ಗೌರವ ಮರ್ಯಾದೆಗಳನ್ನು ಉಳಿಸಲೋಸುಗ ಹಾಗೂ ಮನೆ ದೀಪ ಬೆಳಗಿಸಲು ಮತ್ತು ಶ್ರಾದ್ಧದಂದು ತಮ್ಮ ಹಿರಿಯ ಪಿತೃಗಳನ್ನು ಆಹ್ವಾನಿಸಿ ಅನ್ನದ ಪಿಂಡ ಹಾಕಿ ಎಳ್ಳು ನೀರು ಬಿಡುತ್ತಾನೋ ಇಲ್ಲವೋ ಎಂಬ ಅನುಮಾನ ಮತ್ತು ಆಂತಕ ಇಲ್ಲಿ ವ್ಯಕ್ತವಾಗುತ್ತದೆ. ಯಾಕಾದರೂ ಇವನು ತಾಯಿಯ ಗರ್ಭದಿಂದ ಹೊಕ್ಕಳಬಳ್ಳಿ ಕತ್ತರಿಸಿಕೊಂಡು

ಜನಿಸಿದನೋ ಎಂದು ನೊಂದು ನಿಂದಿಸಿ ನುಡಿಯುತ್ತ ಪ್ರಾಯದ ತೀರದಲ್ಲಿರುವ ಯುವಮನಸ್ಸುಗಳಿಗೆ ಪರಂಪರೆ ಅಥವಾ ಭೂತಕಾಲದ ಮಧುರ ಸಂಬಂಧಗಳ ಅರಿವಾಗುವುದಿಲ್ಲವೆಂಬುದನ್ನು 'ಬಿತ್ತಕ್ಕೆ ಬೇರಿನ ಚಿಂತೆ' ಇಲ್ಲವೆಂಬ ಮಾತುಗಳಲ್ಲಿ ವಿಡಂಬಿಸಲಾಗಿದೆ.

ಕವಿತೆಯ ನಾಲ್ಕನೇ ಭಾಗದಲ್ಲಿ ಕವಿತೆಯ ನಾಯಕ ಪ್ರವೇಶಿಸಲಾಗದ ಅಗಮ್ಯವಾದ ಗವಿಯಲ್ಲಿಯ ಕತ್ತಲೆಯನ್ನು ತೊಡೆದುಹಾಕಿ ನಡೆವ, ಮುಗ್ಗರಿಸಿದ ನಂತರವೇ ಬದುಕಿನ ಪಾಠ ಕಲಿಯುವ, ಒಳ್ಳೆಯ ಹಾದಿ ಹಿಡಿಯುವ, ಜೀವನದಲ್ಲಿ ಕಳೆದುಕೊಂಡದ್ದನ್ನು ಪಡೆವೆ ಎಂಬ ಆತ್ಮವಿಶ್ವಾಸದಿಂದ ಸಾಗುತ್ತಿದ್ದರೆ ತಂದೆಯ ಆತಂಕವೇನೆಂದರೆ ಹಿರಿಯರಿಗೆ ಅರ್ಪಿಸುವ ಆಹಾರ(ಕವ್ಯ), ಯಜ್ಞದಲ್ಲಿ ದೇವತೆಗಳಿಗೆ ಅರ್ಪಿಸುವ ಆಹಾರ(ಹವ್ಯ), ಗುರುದಕ್ಷಣೆ ನೀಡುತ್ತಾನೋ ಇಲ್ಲವೆಂಬ ಅನುಮಾನ ಹಾಗೂ ತನ್ನ ಮಗ ಕೋತಿಯಂತೆ ಹಾರಾಡುತ್ತಿದ್ದವನು ಹನುಮಂತನ ಹಾಗೆ ಛಲ ಮತ್ತು ಧೈರ್ಯದಿಂದ ದಾರಿ ಕಂಡುಕೊಳ್ಳುತ್ತಾನೆಂಬ ಆಶಾಭಾವನೆ ಮೂಡುತ್ತದೆ.

ಕವಿತೆಯ ನಾಯಕನಿಗೆ ತನಗೆ ತಾನೆ ಹೊಳೆಯುವ ವರ್ಚಸ್ಸು ಸ್ವಯಂಪ್ರತಿಭೆಯಿಂದ ಬರುವುದರೊಂದಿಗೆ ಅಂತರ್ಮುಖಿಯಾಗಿ ಯಾವುದು ಸರಿ ಯಾವುದು ತಪ್ಪು ಎಂಬ ನಿರ್ಣಯ ಮಾಡುವ ಹಂತಕ್ಕೆ ತಲುಪಿದರೆ ತಂದೆಗೆ ಖುಷಿಯಾಗುತ್ತದೆ ಹಾಗೂ ಮಗನ ಬದುಕು ಒಂದು ಕಾವ್ಯವಾಗಿ ಅರಳುತ್ತದೆ. ಅವನ ಎಲ್ಲ ಸೋಲು ಮತ್ತು ಗೆಲುವಿನಿಂದ ಸುಂದರ ಜೀವನ ರೂಪುಗೊಳ್ಳುತ್ತದೆಂಬ ಹಾರೈಕೆಯೊಂದು ಪರಂಪರೆಯಿಂದ ವ್ಯಕ್ತವಾಗಿದೆ.

**ಗಹ್ವರದ ಮುಖ ಅಲ್ಲಿ; ಆಚೆ ಬಯಲ ಬರಾವು;**
**ಹಣ್ಣು ಹಂಪಲು ಹಸುರ ಬಲ್ಲೆ, ಬಲ್ಲೆ;**
**ಜೀವನನಿಧಾನಶ್ರುತಿ ಶುದ್ಧಿ ಮೊರೆವ ಕರಾವು;**
**ಹನುಮದ್ವಿಕಾಸಕ್ಕೆ ಇಲ್ಲ ಎಲ್ಲೆ.**

ಸ್ವಯಂಪ್ರಭೆಯ ಗುಹೆಯನ್ನು ವರ್ಣಿಸುತ್ತಲೆ ಕಾವ್ಯಸೃಷ್ಟಿಯು ಬೆಳೆದು ಯಜ್ಞದ ವಿಧಿವಿಧಾನ, ಅಗ್ನಿ ಸ್ಥಾಪನೆ, ವೇದ ಪಠನ ಕ್ರಮ ಈ ಎಲ್ಲಾ ಕ್ರಮವನ್ನು ದಾಟಿಸುವಂತಹ ಬಯಲ ಬರಾವು ಅಂದರೆ ಅಕ್ಷರಸ್ಥನಾಗಿ ಅಥವಾ ವಿದ್ಯಾವಂತನಾಗಿ ಬಾಳುವ ಆಸೆ, ಹಿಂದೆ ಅಡ್ಡದಾರಿ ಹಿಡಿದಿದ್ದವ ಈಗ ಬಯಲ ಬರಾವಿನಿಂದ ಬದುಕಿನ ಅಸಾಧ್ಯಸಾಧ್ಯತೆಗಳು ಹನುಮದ್ವಿಕಾಸದ ಅಂದರೆ ಉಜ್ವಲವಾಗಿ ಊರ್ಧ್ವಮುಖವಾಗಿ ಏರುವ ಪ್ರಕ್ರಿಯೆ ಒದಗಿದ್ದು ತಂದೆಯ ಕಣ್ಣೆದುರಿಗೆ ಸಂಮೃದ್ಧಿಯ ವಿಕಾಸವಾಗುವ ಸೂಚನೆಯೊಂದಿಗೆ ಕವಿತೆ ಮುಕ್ತಾಯವಾಗುತ್ತದೆ.

ವ್ಯಕ್ತಿವಿಶಿಷ್ಟತೆಗಾಗಿ ಸದಾ ತುಡಿಯುವ ಅಡಿಗರ ಈ ಕವಿತೆಯಲ್ಲಿ ಹೊಸ ಜನಾಂಗದ ಬಗೆಗಿನ ಸ್ಪಂದನೆಯ ಗುಣ ಹಾಗೂ ಪ್ರತಿಯೊಂದು ತಲೆಮಾರು ತನ್ನ ಪರಂಪರೆಯ ಬೆಳಕಿನಲ್ಲಿ ಭವಿಷ್ಯವನ್ನು ಆಧುನಿಕ ಮನಸ್ಸಿನೊಂದಿಗೆ ರೂಪಿಸಿಕೊಳ್ಳಬೇಕು ಎನ್ನುವ ಆಶಯ ಕಾಣುತ್ತದೆ.

**ಗ್ರಂಥಋಣ**

1. ಗೋಪಾಲಕೃಷ್ಣ ಅಡಿಗ. ಎಂ. ಅಡಿಗರ ಸಮಸ್ತ ಸಾಹಿತ್ಯ 1 ಸಮಗ್ರ ಕಾವ್ಯ.

ಐಬಿಎಚ್ ಪ್ರಕಾಶನ ಗಾಂಧಿನಗರ, ಪ್ರ.ಮುದ್ರಣ; 1987 ಬೆಂಗಳುರು–560009.

2. ನಾಗಭೂಷಣ ಸ್ವಾಮಿ ಓ.ಎಲ್ (ಸಂಕಲನ):ನಮ್ಮ ಕನ್ನಡ ಕಾವ್ಯ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ವಿದ್ಯಾರಣ್ಯ. ಕಮಲಾಪುರ.
3. ಮಧುಸೂದನ, ಕೆ.ಎಸ್(ಸಂ) ಆಧುನಿಕ ಕನ್ನಡ ಕಾವ್ಯ ಸಂಪುಟ ಪ್ರೊ. ಜಿ. ಸುನಂದ. ಎಂ.ಕೆ. ರುಕ್ಮಿಣಿ. ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–560056
4. ವಿಜಯಶಂಕರ ಎಸ್.ಆರ್.(ಸಂಪಾದಕರು), ಪ್ರತಿಮಾಲೋಕ. ಗೋಪಾಲಕೃಷ್ಣ ಅಡಿಗ – ಮರು ಓದು. ಅಂಕಿತ ಪುಸ್ತಕ ಪ್ರಕಾಶನ. ಬೆಂಗಳೂರು.
5. ಸುಮತೀಂದ್ರ ನಾಡಿಗ, ಅಡಿಗರ ಕಾವ್ಯ, ಸುಮತಿ ಪ್ರಕಾಶನ, ಗಾಂಧಿಬಜಾರ್, ಬೆಂಗಳೂರು–4

❖❖❖

ತಂಪು ನೆಳಲನು
ಹುಡುಕಿ ಅಲೆದಿದೆ
ಮೇವ ಮರೆತಿಹ ಹಿಂಡದೂ।
ಮರಗಳಡಿಯಲಿ
ಮಲಗಿ ಗಾನದ
ಗರಿಕೆ ಸವಿಯುವ ಹಂಬಲೂ॥

# ವಿಜ್ಞಾನ ಕಥಾಸಾಹಿತ್ಯ

**ಡಾ. ಪರಶುರಾಮ ಮೂರ್ತಿ ಜಿ.**

ಆಂಗ್ಲ ಭಾಷಾ ಸಹ ಪ್ರಾಧ್ಯಾಪಕರು, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು(ಸ್ವಾಯತ್ತ), ಮೈಸೂರು–05

**ಡಾ. ಕವಿತಾ ಎಂ.ಎನ್.**

ಕನ್ನಡ ಸಹಪ್ರಾಧ್ಯಾಪಕರು, ಶ್ರೀಮದ್ದಾನೇಶ್ವರ ಸ.ಪ್ರ.ದ.ಕಾ, ಕಬ್ಬಹಳ್ಳಿ, ಚಾಮರಾಜನಗರ–571109

ಕನ್ನಡಿಗರಿಗೆ ವಿಜ್ಞಾನ ಕಥಾಸಾಹಿತ್ಯದ ಬಗ್ಗೆ ತಪ್ಪು ಕಲ್ಪನೆಗಳು ಇದ್ದಂತೆ ಕಾಣುತ್ತದೆ. ನಾವು ಕೆಲವು ಸತ್ಯಗಳನ್ನು ನಿಸ್ಸಂಕೋಚವಾಗಿ ಒಪ್ಪಿಕೊಂಡು ಭ್ರಮೆಯಲ್ಲೇ ಮುಂದುವರೆಯುವುದನ್ನು ನಿಲ್ಲಿಸುವುದು ನಮ್ಮ ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಒಳ್ಳೆಯದು. ನಮ್ಮಲ್ಲಿ ಹೆಮ್ಮೆ ಪಟ್ಟುಕೊಳ್ಳುವಂತಹ ವಿಶ್ವದರ್ಜೆಯ ಸಾಹಿತ್ಯ ಸೃಷ್ಟಿಯಾಗಿದೆ ಹಾಗೂ ಅದಕ್ಕೆ (ಅಂತರ್)ರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ದೊರೆತಿದೆ ಎಂಬುದು ಸತ್ಯ ಹಾಗೆಂದು ನಮ್ಮಲ್ಲಿ ಎಲ್ಲ ಪ್ರಕಾರಗಳ ಸಾಹಿತ್ಯವೂ ಬೇಕಾದಷ್ಟು ಇವೆ ಎಂಬ ತಪ್ಪುಕಲ್ಪನೆ ಹೊಂದುವ ಅಗತ್ಯವಿಲ್ಲ. ಇಂಗ್ಲಿಷ್ ಕಾದಂಬರಿ ಕ್ಷೇತ್ರದಲ್ಲಿರುವಷ್ಟು ಪ್ರಕಾರಗಳ ವೈವಿಧ್ಯತೆ ಕನ್ನಡದಲ್ಲಿ ಖಂಡಿತಾ ಇಲ್ಲ. ಹಾಗೂ ಅವುಗಳನ್ನು ವ್ಯವಸ್ಥಿತವಾಗಿ ವರ್ಗೀಕರಿಸುವ ಪ್ರಯತ್ನ ನಡೆದಂತೆ ಇಲ್ಲ.

ವಿಜ್ಞಾನಕಥಾ ಸಾಹಿತ್ಯದ ವಿಶ್ಲೇಷಣೆಗೆ ಎರಡು ರೀತಿಯ ಸಿದ್ಧತೆಗಳ ಅಗತ್ಯವಿದೆ. ಮೊದಲನೆಯದು ಈಗಾಗಲೇ ಇಂಗ್ಲಿಷ್ (ಅಥವಾ ಇತರ ಐರೋಪ್ಯ/ರಷ್ಯನ್ ಭಾಷೆಗಳಲ್ಲಿ) ಯಾವ ರೀತಿಯ ಸಾಹಿತ್ಯ ರಚನೆಯಾಗಿದೆ, ಹಾಗೂ ಅವುಗಳ ಲಕ್ಷಣಗಳು ಏನು ಎಂಬ ಅಧ್ಯಯನ. ಎರಡನೆಯದಾಗಿ ವಿಜ್ಞಾನದ ಮೂಲಭೂತ ಪರಿಜ್ಞಾನ ಹಾಗೂ ಆವಿಷ್ಕಾರದ ಪರಿಕಲ್ಪನೆ. ಇವೆರಡೂ ಇಲ್ಲದೆ ಒಬ್ಬ ಬರಹಗಾರ ಎಂಥ ಅದ್ಭುತ ಕಥೆಗಾರನಾದರೂ ಅವನು ವಿಜ್ಞಾನಕಥಾ ಸಾಹಿತ್ಯವನ್ನು ಬರೆಯಲಾರ.

ಕನ್ನಡಕ್ಕೆ ಮಾತ್ರ ಸೀಮಿತಗೊಳಿಸದೆ ಇಡೀ ಭಾರತದ ಸಾಹಿತ್ಯಕೃತಿಗಳಿಗೆ ಅನ್ವಯಿಸಿ ಹೇಳಿದರೂ ಈ ಪ್ರಕಾರದ ಸಾಹಿತ್ಯ ನಮ್ಮಲ್ಲಿ ಈಗ ಬಹಳ ದಾರುಣವಾಗಿದೆ ಹಾಗೂ ಇದರ ಭವಿಷ್ಯ ಆಶಾದಾಯಕವಾಗಿಲ್ಲ. ಇದಕ್ಕೆ ಕಾರಣ ನಮ್ಮಲ್ಲಿ ಸ್ವತಂತ್ರವಾದ (ಇಂಡೀಜೀನಸ್) ವಿಜ್ಞಾನ ತಂತ್ರಜ್ಞಾನದ ಪರಿಸರವೇ ಇಲ್ಲ. ವಿಜ್ಞಾನದ ಕ್ಷೇತ್ರದಲ್ಲಿ ಒಂದಷ್ಟು ಪರಿಶ್ರಮ ಅರಿವು ಇಲ್ಲದವರ ವಿಜ್ಞಾನಕಥಾ ಸಾಹಿತ್ಯ ಬರೆಯಲು ಸಾಧವೇ ಇಲ್ಲ. ದುರಭಿಮಾನದಿಂದ ಈ ಮಾತನ್ನು ವಿರೋಧಿಸಿದರೂ ವಾಸ್ತವ ಬದಲಾಗುವುದಿಲ್ಲ.

**ಇವು ಸೈಂಟಿಫಿಕ್ ಫಿಕ್ಷನ್ ಅಲ್ಲ**

ಡಾ. ಬಿ.ಜಿ.ಎಲ್. ಸ್ವಾಮಿಯವರ ಹಸಿರು ಹೊನ್ನು ಸಸ್ಯಶಾಸ್ತ್ರದ ವಿಶ್ವರೂಪವನ್ನೇ ಕನ್ನಡದ ಓದುಗರಿಗೆ ದರ್ಶನ ಮಾಡಿಸಿದರೂ ಸಹ, ಕನ್ನಡದಲ್ಲಿ ಈ ರೀತಿಯ ಸಾಹಿತ್ಯವು ಅದುವರೆಗೂ ಇರಲೇ ಇಲ್ಲ ಎನ್ನುವುದು ನಿಜವೇ ಆದರೂ ಸಹ, ಅದನ್ನು ವಿಜ್ಞಾನಕಥಾ ಸಾಹಿತ್ಯ ಎಂದು ಕರೆಯಲು ಸಾಧ್ಯವಿಲ್ಲ. ಮೊದಲನೆಯದಾಗಿ ಅದು ಕಾದಂಬರಿ ಪ್ರಕಾರಕ್ಕೆ ಸೇರುವುದೇ ಇಲ್ಲ. ನಂತರದ ವಿಮರ್ಶಕರು ಈ ಗ್ರಂಥದ ಕ್ಲಾಸಿಫಿಕೇಶನ್ ತಪ್ಪಾಗಿ ಮಾಡಿದ್ದಾರೆ.

ಇಂದು ಸ್ವತಃ ಸ್ವಾಮಿಯವರೇ ಜೀವಂತವಾಗಿದ್ದಿದ್ದರೆ ಈ ಮಾತನ್ನು ಒಪ್ಪುತ್ತಿದರೇನೋ.

ಇದೇ ರೀತಿ ತೇಜಸ್ವಿಯವರ ಕರ್ವಾಲೋ ಕಾದಂಬರಿಯಲ್ಲಿ ಸ್ವಲ್ಪ ಪ್ರಾಣಿಶಾಸ್ತ್ರಕ್ಕೆ ಸಂಬಂಧಿಸಿದ ವಿಷಯ ಪ್ರಸ್ತಾಪವಾಗುತ್ತದೆ. ಸರೀಸೃಪಗಳಿಗೆ ಅಪರೂಪವೆನಿಸಿದ ಹಾರುವ ಓತಿಯನ್ನು ಹುಡುಕಿಕೊಂಡು ಕಾಡಿಗೆ ಹೋಗುವ ಕಥಾವಸ್ತು ಇದ್ದರೂ ಕಾದಂಬರಿಯನ್ನು ವಿಜ್ಞಾನಕಥಾ ಸಾಹಿತ್ಯ ಎನ್ನಲು ಸಾಧ್ಯವಿಲ್ಲ. ಇಲ್ಲಿ ಕಾದಂಬರಿಯ ಮೌಲ್ಯ ವಿಮರ್ಶೆ ಮಾಡುತ್ತಿಲ್ಲ. ಕರ್ವಾಲೋ ಕನ್ನಡ ಕಂಡ ಶ್ರೇಷ್ಟ ಕಾದಂಬರಿಗಳಲ್ಲಿ ಒಂದು ಎಂಬುದರಲ್ಲಿ ಎರಡನೆಯ ಮಾತಿಲ್ಲ. ಆದರೆ ಅದನ್ನು ವಿಜ್ಞಾನಕಥಾ ಸಾಹಿತ್ಯ ಎಂದು ಕರೆಯಲು ಸಾಧ್ಯವಿಲ್ಲ ಎಂಬುದು ಮಾತ್ರ ಇಲ್ಲಿ ಗಮನಿಸಬೇಕು.

ಇನ್ನು ತ್ರಿವೇಣಿಯವರ ಬೆಕ್ಕಿನ ಕಣ್ಣು ಹಾಗೂ ಶರಪಂಜರದಂತಹ ಕಾದಂಬರಿಗಳನ್ನೂ ವಿಜ್ಞಾನಕಥಾ ಸಾಹಿತ್ಯದ ಗುಂಪಿಗೆ ಸೇರಿಸುವ ಪ್ರಯತ್ನ ಕೆಲವರು ಮಾಡಿದ್ದಾರೆ. ಎರಡೂ ಕಾದಂಬರಿಗಳಲ್ಲಿ ಮುಖ್ಯ ಪಾತ್ರವು ಮನೋವೈಜ್ಞಾನಿಕ ಸಮಸ್ಯೆಯಿಂದ ಬಳಲುತ್ತಿರುವವರ ಕೇಸ್ ಸ್ಟಡಿ ಇರುವುದು ನಿಜ. ಆದರೆ ಇದು ಯಾವ ಕಾರಣಕ್ಕೂ ಸೈ–ಫಿ ಎನ್ನಲು ಸಾಧ್ಯವಿಲ್ಲ. ಕಾದಂಬರಿಗಳಿಗಿಂತ ಸ್ವಲ್ಪ ಭಿನ್ನವಾದ ವಸ್ತುವನ್ನು ನಮ್ಮ ಪುರಾಣಗಳಲ್ಲಿ ಬರುವ ಕೆಲವು ಸನ್ನಿವೇಶಗಳಲ್ಲಿ ಆಧುನಿಕ ವೈಜ್ಞಾನಿಕ ತತ್ವಗಳನ್ನು ಗುರುತಿಸಲು ಸಾಧ್ಯವಿದೆ. ಹಾಗೆಂದು ಅವುಗಳನ್ನು ವಿಜ್ಞಾನಕಥಾ ಸಾಹಿತ್ಯವೆಂದು ಕರೆಯಲು ಸಾಧ್ಯವಿಲ್ಲ. ಚರಿತ್ರಪೂರ್ವ ಕಾಲದಲ್ಲಿ ಎರಡು ವಿಭಿನ್ನ ರೀತಿಯ ಅನ್ಯಗ್ರಹವಾಸಿಗಳು ಭೂಮಿಗೆ ಬಂದು ಮನುಷ್ಯರ ವಂಶವಾಹಿನಿಯಲ್ಲಿ ಸುಧಾರಣೆ ತಂದು, ಭಾಷೆ ನಾಗರೀಕತೆ ಕಲಿಸಿ, ಇಲ್ಲಿಯ ನೈಸರ್ಗಿಕ ಸಂಪನ್ಮೂಲಗಳಿಗಾಗಿ ತಮ್ಮ ಪ್ರಭುತ್ವಕ್ಕಾಗಿ ತಮ್ಮತಮ್ಮಲ್ಲೇ ಸೆಣಸಾಡಿ. ತಮ್ಮ ತಂತ್ರಜ್ಞಾನದಿಂದ ನಮ್ಮ ದೃಷ್ಟಿಯಲ್ಲಿ ದೇವರಾದರು ಎನ್ನುತ್ತಿದ್ದೇವೆ ಎಂದೆಲ್ಲ ಬರೆದರೂ ಅದು ಇತಿಹಾಸವೋ ಪುರಾಣವೋ ಆಗಬಹುದಷ್ಟೇ ಹೊರತು ಇವೆಲ್ಲ ವೈಜ್ಞಾನಿಕ ಕಥಾಸಾಹಿತ್ಯವಾಗುವುದಿಲ್ಲ.

ರಾಬಿನ್ ಕುಕ್ ಬರೆದಕೋಮಾ; ಆಸ್ಪತ್ರೆಯೊಂದರಲ್ಲಿ ರೋಗಿಗಳನ್ನು ಕೋಮಾ ಸ್ಥಿತಿಗೆ ತರಿಸಿ ಬೇಡಿಕೆ ಬೇಕಾದಾಗ ಅವರ ದೇಹದ ಬಿಡಿಭಾಗಗಳನ್ನು (ಕಾಳಸಂತೆಯಲ್ಲಿ) ಮಾರುವ ದಂಧೆ ಮಾಡುತ್ತಿದ್ದವರ ರಹಸ್ಯವನ್ನು ಬೇಧಿಸುವ ಕಥೆ ಹೊಂದಿದೆ. ಇದೂ ಹಾಗೂ ಮೈಕೇಲ್ ಪಾಮರ್ ಬರೆದ ಎ ಹಾರ್ಟ್ ಬೀಟ್ ಅವೇ ಮುಂತಾದ ಕಾದಂಬರಿಗಳನ್ನು ಮೆಡಿಕಲ್ ಥ್ರಿಲ್ಲರ್ ಎಂದು ಕರೆಯುತ್ತಾರೆ. ಇದನ್ನು ಕನ್ನಡದಲ್ಲಿ ಬರೆದಿದ್ದರೆ ಬಹುಶಃ ಇದನ್ನೂ ವಿಜ್ಞಾನಕಥಾ ಸಾಹಿತ್ಯ ಎಂದು ಬಿಡುತ್ತಿದ್ದರೇನೋ.

**ಮತ್ತೆ ಯಾವುದು?**

ಥಟ್ಟೆಂದು ನೆನಪಿಗೆ ಬರುವ ಇಬ್ಬರೇ ಇಬ್ಬರು ಬರಹಗಾರರು, ರಾಜಶೇಖರ ಭೂಸನೂರಮಠ ಹಾಗೂ ಮನುರವರು. ಸ್ವಲ್ಪ ಮಟ್ಟಿಗೆ ಕನ್ನಡ ಸಾಹಿತ್ಯಕ್ಕೆ ಉತ್ತಮ ವಿಜ್ಞಾನಕಥಾಸಾಹಿತ್ಯವನ್ನು ಒದಗಿಸಿದ್ದಾರೆ. ಆದರೆ ಇದೊಂದು ಪರಂಪರೆಯಾಗಿ ಬೆಳೆದು ಬರುವಷ್ಟು ಪ್ರಮಾಣದಲ್ಲಿ ಕಾದಂಬರಿಗಳ ಸಂಖ್ಯೆಯಲ್ಲೂ, ಬರಹಗಾರರ ಸಂಖ್ಯೆಯಲ್ಲೂ ಬೆಳೆಯಲೇ ಇಲ್ಲ. ನಾಗೇಶ ಹೆಗ್ಗಡೆಯವರ ಒಂದೆರಡು ಬಿಡಿ ಸಣ್ಣ ಕಥೆಗಳು ಭರವಸೆ ಹುಟ್ಟಿಸುವಂತಿದ್ದರೂ ಅವರು ವಿಜ್ಞಾನ ಲೇಖನಗಳಿಗೆ ಹೆಚ್ಚು ಆದ್ಯತೆ ಕೊಟ್ಟು ಇದನ್ನು ನಿಲ್ಲಿಸೇಬಿಟ್ಟರು. ಇನ್ನು ಉಳಿದ ಪ್ರಯತ್ನಗಳೆಂದರೆ ಕೆಲವು ಇಂಗ್ಲಿಷ್

ಅನುವಾದಗಳು ಹಾಗೂ ಇಂಗ್ಲಿಷ್ ಕಾದಂಬರಿಗಳನ್ನು ಓದಿ ಅದರಿಂದ ಪ್ರೇರಿತರಾಗಿ ಪೇಲವವಾಗಿ ಬರೆದ ಕೆಲವು ಕಾದಂಬರಿಗಳು.

**ವಿಜ್ಞಾನಕಥಾ ಸಾಹಿತ್ಯದ ಉಪ ವಿಭಾಗಗಳು**

ಆರ್ಥರ್ ಸಿ ಕ್ಲಾರ್ಕ್, ಜೇಮ್ಸ್ ಬ್ಲಿಷ್, ಟಾಮ್‌ಗುಡ್‌ವಿನ್ ರಂತಹ ಹಾರ್ಡ್ ಸೈನ್ಸ್ ಬರಹಗಾರರು ತಮ್ಮ ಬರಹದಲ್ಲಿ ಅತ್ಯಂತ ಸೂಕ್ಷ್ಮ ವೈಜ್ಞಾನಿಕ ವಿವರಗಳಿಗೂ ಪ್ರಾಮುಖ್ಯತೆ ನೀಡುತ್ತಾರೆ. ಅವು ಅತ್ಯಂತ ನೈಜವಾಗಿರುತ್ತವೆ. ಇಂಥಹ ಕಥೆಗಳಲ್ಲಿ ತಂತ್ರಜ್ಞಾನವೇ ಮುಖ್ಯ ವಸ್ತು, ಪಾತ್ರಧಾರಿಗಳು, ಕಥಾವಸ್ತು ಎಲ್ಲವೂ ಗೌಣವಾಗುತ್ತದೆ.

ಸಮಾಜಶಾಸ್ತ್ರ, ಮನೋವಿಜ್ಞಾನ, ತತ್ವಶಾಸ್ತ್ರಗಳನ್ನು ಒಳಗೊಂಡ ಸಾಹಿತ್ಯವನ್ನು ಸಾಫ್ಟ್ ಸೈನ್ಸ್ ಎನ್ನುತ್ತಾರೆ. ರೇ ಬ್ರಾಂಡ್‌ಬರಿ, ಫ್ರಾಂಕ್ ಹರ್ಬರ್ಟ್‌ರಂತಹ ಬರಹಗಾರರು ಬರೆಯುವ ಭವಿಷ್ಯದ ತಂತ್ರಜ್ಞಾನದಿಂದ ಸಮಾಜ, ಮನಸ್ಸು, ತತ್ವಗಳು ಹೇಗೆ ಬದಲಾಗುತ್ತವೆ. ಎಂದು ತೋರಿಸುವ ಕಥೆಗಳು, ಫಿಲಿಪ್ ಕೆ.ಡಿಕ್ ಮತ್ತು ವಿಲಿಯಂಗಿಬ್ಸನ್‌ರಂತಹ ಕಥಾಸಾಹಿತಿಗಳು ಬರೆಯುವ ಕಾದಂಬರಿಗಳು ಸೈಬರ್ ಪಂಕ್ ವರ್ಗಕ್ಕೆ ಸೇರುತ್ತವೆ. ಇದರಲ್ಲಿ ದುಷ್ಕೃತ್ಯಗಳು, ನಿರಾಶಾದಾಯಕ ವಿಷಯಗಳನ್ನು ಒಳಗೊಂಡಿರುತ್ತವೆ. ಕಂಪ್ಯೂಟರ್ ತಂತ್ರಜ್ಞಾನವಿದ್ದು, ಹ್ಯಾಕ್ ಮಾಡುವುದು, ಕೃತಕ ಬುದ್ಧಿವಂತಿಕೆ (ಅರಿಫಿಶಿಯಲ್ ಇಂಟಲಿಜೆನ್ಸ್) ಒಳಗೊಂಡಿರುತ್ತದೆ. ಜೋ ಹಾಲ್ಡ್‌ಮ್ಯಾನ್ ಕಾದಂಬರಿಗಳಂತೆ ಅಂತರ್– ಗ್ರಹಗಳ ಯುದ್ಧಗಳನ್ನು ಒಳಗೊಂಡ ಕಾದಂಬರಿಗಳಿವೆ.

ಈ ಭೂಮಿಯ ಚರಿತ್ರೆಯಲ್ಲಿ ಬಹಳ ಹಿಂದೆ ಏನೋ ವಿಪರ್ಯಾಸ ನಡೆದಿದ್ದು ಅದರ ಪರಿಣಾಮವಾಗಿ ನಾವು ಈಗ ಹೀಗಿದ್ದೇವೆ. ಇದಕ್ಕೆ ಒಂದು ಪರ್ಯಾಯ ಸತ್ಯ ಪ್ರಪಂಚ ಇರುವಂತೆ ಕಲ್ಪಿಸಿ ಬರೆವ ಕಾದಂಬರಿಗಳು ಪರ್ಯಾಯ ವಿಶ್ವ ಗುಂಪಿಗೆ ಸೇರುತ್ತವೆ. ಜಾನ್‌ಕ್ರಾಮರ್ ಹಾಗೂ ಫಿಲಿಪ್ ಕೆ ಡಿಕ್ ಬರೆದಿರುವ ಕೆಲವು ಕಾದಂಬರಿಗಳನ್ನು ಇಲ್ಲಿ ಸ್ಮರಿಸಬಹುದು. ಫಿಲಿಫ್ ಕೆ.ಡಿಕ್‌ರವರು ಸುಮಾರು 35ರಷ್ಟು ಕಾದಂಬರಿಗಳನ್ನೂ ಹಾಗೂ ಲೆಕ್ಕವಿಲ್ಲದಷ್ಟು ಸಣ್ಣ ಕತೆಗಳನ್ನು ವಿಜ್ಞಾನ ಸಾಹಿತ್ಯಕ್ಷೇತ್ರದಲ್ಲಿ ಬರೆದಿರುತ್ತಾರೆ. ಇವರನ್ನು ವಿಜ್ಞಾನ ಸಾಹಿತ್ಯದ ಲೇಖಕರೆಂದೆ ಕರೆಯಲಾಗುತ್ತದೆ.

ಸ್ಟೀಮ್ ಪಂಕ್ ವರ್ಗಕ್ಕೆ ಸೇರುವ ಕಥೆಗಳು ಭವಿಷ್ಯತ್ತಿನಲ್ಲಿ ನಡೆಯುವುದಲ್ಲ. ಆದರೆ ಹಿಂದಿನ ಕಾಲದಲ್ಲಿ ಲಭ್ಯವಿದ್ದ ತಂತ್ರಜ್ಞಾನಕ್ಕೆ ಹೋಲಿಸಿದರೆ ತಮ್ಮ ಸಮಕಾಲೀನರಿಗಿಂತ ತಾಂತ್ರಿಕವಾಗಿ ತುಂಬ ಮುಂದೆ ಇದ್ದಂತೆ ಕಥೆಗಳು ರಚಿತವಾಗಿರುತ್ತವೆ. ಕಥೆಗಳು ಸಾಧಾರಣವಾಗಿ ವಿಕ್ಟೋರಿಯನ್ ಯುಗದಲ್ಲಿ ನಡೆದಂತೆ ಬಣ್ಣಿಸಲಾಗುತ್ತದೆ. ಜೂಲ್ಸ್ ವರ್ನ್ ಬರೆದದ ಲೀಗ್ ಆಫ್ ಎಕ್ಸ್‌ಟ್ರಾರ್ಡಿನರಿ ಜಂಟ್ಲ್‌ಮನ್ ರೀತಿಯ ಕಥೆಗಳು ಇಂಥವು. ಎಚ್.ಹಿ. ಬೆಲ್ಸ್ ಬರೆದ ದ ಟೈಮ್ ಮಷೀನ್‌ನಂತಹ ಕಾದಂಬರಿಗಳು ಕಾಲಯಾನವನ್ನು ಬಣ್ಣಿಸುತ್ತದೆ. ಕಾಲದ ಮಿತಿಗಳನ್ನು ಉಲ್ಲಂಘಿಸಿ ಪಯಣಿಸುವ ಹಾಗೂ ಮನುಷ್ಯರ ಮೇಲೆ ಅದರ ಪರಿಣಾಮವನ್ನು ಕುರಿತ ಕಾದಂಬರಿಗಳು ಈ ಗುಂಪಿಗೆ ಸೇರುತ್ತವೆ. ಬಹುತೇಕ ಜನರಿಗೆ ಪರಿಚಿತವಾಗಿರುವ ಸ್ಟಾರ್‌ಟ್ರೆಕ್ ನಂತಹ ವ್ಯೋಮ ಪ್ರಸ್ಥಾನದ ಕಾದಂಬರಿಗಳನ್ನು ಸ್ಪೇಸ್‌ಅಪೇರ ಎನ್ನುತ್ತಾರೆ. ವ್ಯೋಮದಲ್ಲಿ ಬಹುದೂರದ ಪಯಣ, ವಿಚಿತ್ರ 'ಅನ್ಯರ' ಮುಖಾಮುಖಿ ಇಂತಹ ವಸ್ತುಗಳನ್ನು ಹೊಂದಿರುತ್ತವೆ. ಎಸ್. ಎಲ್. ಭೈರಪ್ಪನವರ 'ಯಾನ' ಕಾದಂಬರಿಯನ್ನೂ ಈ ಸಾಲಿಗೆ ಸೇರಿಸಬಹುದು.

ಈ ಮೇಲಿನ ಯಾವ ಗುಂಪಿಗೂ ಸೇರದ, ಅದರ ಯಾವ ಲಕ್ಷಣಗಳನ್ನೂ ಹೊಂದದ ಸ್ವಲ್ಪ ಮಾತ್ರ ವಿಜ್ಞಾನ ಎಲ್ಲೋ ಹಾದು ಹೋಗುವ ಸಾಹಿತ್ಯವನ್ನು ವಿಜ್ಞಾನಕಥಾ ಸಾಹಿತ್ಯ ಎಂದು ಕರೆದರೆ ಅದರ ಬಗ್ಗೆ ತಿಳಿಯದ ಮುಗ್ಧ ಕನ್ನಡ ಓದುಗರರಿಗೂ ಹಾಗೂ ಅದರಿಂದ ಪ್ರೇರಿತರಾಗಿ ಹೊಸದಾಗಿ ಸಾಹಿತ್ಯ ರಚಿಸಬಹುದಾದ ಉದಯೋನ್ಮುಖ ಬರಹಗಾರರಿಗೂ ದಿಕ್ಕು ತಪ್ಪಿಸಿದಂತಾಗುತ್ತದೆ. ವಿಜ್ಞಾನವನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಅನೇಕ ಕನ್ನಡಿಗರು ಇದ್ದಾರೆ. ಇವರ ಅಧ್ಯಯನದಲ್ಲಿ ಎದುರುಗೊಂಡಿರುವ ವಿಜ್ಞಾನದ ವಿಸ್ಮಯಗಳನ್ನು ಥಿಯರೆಟಿಕಲ್ ಆಗಿದ್ದು ಕಂಡುಹಿಡಿಯದಿರುವ ವಿಷಯಗಳನ್ನು ಆಧರಿಸಿ ಕಥೆ ಕಾದಂಬರಿಗಳನ್ನು ಬರೆಯುವ ಸಾಹಿತ್ಯಾಸಕ್ತಿಯನ್ನು ತೋರಿದರೆ ನಮ್ಮಲ್ಲೂ ಈ ಕ್ಷೇತ್ರ ಬೆಳೆಯಬಹುದು.

**ಸೈ–ಫಿ ಪ್ರಬೇಧ ಲಕ್ಷಣಗಳು**

ವಿಜ್ಞಾನಕಥಾಸಾಹಿತ್ಯದ ಪ್ರಕಾರವು ಹೀಗೇ ಇರಬೇಕು ಎಂದು ಹೇಳಲು ಸಾಧ್ಯವಿಲ್ಲವಾದರೂ ಅದರ ಕೆಲವು ವಿಶ್ವಮಾನ್ಯ ಲಕ್ಷಣಗಳನ್ನು ಗುರುತಿಸಬಹುದು.

**ಅನ್ಯಗ್ರಹ ವಾಸಿಗಳು :** ವಿಜ್ಞಾನಕಥಾ ಸಾಹಿತ್ಯದಲ್ಲಿ ಪ್ರಮುಖ ಪಾತ್ರವರ್ಗದಲ್ಲಿ ಅನ್ಯಗ್ರಹ ವಾಸಿಗಳು ಇರಬೇಕು. ಅವರು ನಮ್ಮಗ್ರಹಕ್ಕೆ ಬರುವುದು ಅಥವಾ ವ್ಯೋಮದಲ್ಲೋ ಬೇರೆ ಗ್ರಹದಲ್ಲೋ ಅವರ ಭೇಟಿ ನಮಗೆ ಆಗುವಂತೆ ಇರಬೇಕು. ಅವರು ನಮ್ಮೊಂದಿಗೆ ಸ್ನೇಹ ಜೀವಿಗಳಾಗಿ ಕೆಲವು ಕಾದಂಬರಿಗಳಲ್ಲಿ ಚಿತ್ರಿತವಾಗಿದ್ದರೆ ಇನ್ನು ಕೆಲವು ಕಾದಂಬರಿಗಳಲ್ಲಿ ಅವರು ನಮ್ಮ ಅತ್ಯಂತ ಭಯಾನಕ ಶತ್ರುಗಳಾಗಿ ಚಿತ್ರಿಸಲಾಗಿದೆ.

**ವ್ಯೋಮಯಾನ :** ನಾವು ಅನ್ಯಗ್ರಹ ಜೀವಿಗಳನ್ನು ಮುಖಾಮುಖಿ ಮಾಡುತ್ತೇವೋ ಇಲ್ಲವೋ ವ್ಯೋಮಯಾನವಂತೂ ವಿಜ್ಞಾನಕಥಾ ಸಾಹಿತ್ಯದಲ್ಲಿ ಇದ್ದೇ ಇರುತ್ತದೆ.

**ಕಾಲಯಾನ :** ಈಗಿನವರೆಗೂ ಇನ್ನೂ ಇದು ಸಾಧ್ಯವಾಗದೇ ಇದ್ದರೂ ವೈಜ್ಞಾನಿಕ ಥಿಯರಿಯಲ್ಲಿ ಕಾಲಯಾನ ಸಾಧ್ಯವಿದೆ. ಹೀಗಾಗಿ ವಿಜ್ಞಾನಕಥಾಸಾಹಿತ್ಯದ ಅತ್ಯಂತ ಜನಪ್ರಿಯ ಸಾಧನ ಹಾಗೂ ಕ್ರಿಯೆ ಕಾಲ ಯಾನ. ಪಾತ್ರಗಳು ಭೂತ ಅಥವಾ ಭವಿಷ್ಯತ್ ಕಾಲಕ್ಕೆ ಹೋಗಿ (ಬರುವ) ಸಾಹಸ ಮಾಡುತ್ತಾರೆ.

ಭವಿಷ್ಯತ್ ವಿಶ್ವ: ಕಾಲ ಯಾನ, ವ್ಯೋಮ ಯಾನವಿಲ್ಲದೆ, ಭವಿಷ್ಯತ್ತಿನ ಒಂದು ಕಾಲದಲ್ಲಿ ಒಂದು ನಿರ್ದಿಷ್ಟ ಸ್ಥಳದಲ್ಲಿ ಸಂಭವಿಸಬಹುದಾದ ಘಟನೆಗಳ ಕಲ್ಪನೆ ವಿಜ್ಞಾನಕಥಾ ಸಾಹಿತ್ಯವಾಗಬಹುದು.

**ಉನ್ನತ ತಂತ್ರಜ್ಞಾನ:** ಮೊದಮೊದಲು ವಿಜ್ಞಾನಕಥಾಸಾಹಿತ್ಯ ಬರೆದವರು ಅತ್ಯಂತ ಉನ್ನತ ತಂತ್ರಜ್ಞಾನಕ್ಕೆ ಆದ್ಯತೆ ಕೊಡುತ್ತಿದ್ದರು. ಅಥವಾ ಆಗಾಗಲೇ ಇದ್ದ ಆಧುನಿಕ ತಂತ್ರಜ್ಞಾನವನ್ನು ಇನ್ನಷ್ಟು ಕ್ರಿಯಾಶೀಲವಾಗಿ, ಪರಿಷ್ಕರಿಸಿ ಬಳಸುವ ಕಲ್ಪನೆಗಳನ್ನು ಮಾಡುತ್ತಿದ್ದರು. 20ನೆಯ ಶತಮಾನದಲ್ಲಿ ಅದ್ಭುತವಾದ ಆವಿಷ್ಕಾರಗಳನ್ನು ಕಂಡಿರುವುದರಿಂದ ಭವಿಷ್ಯದಲ್ಲಿ ಇನ್ನೂ ಎಂತೆಂತಹ ಉಪಕರಣಗಳ ಸಂಶೋಧನೆಯಾಗಬಹುದೆಂದು ಕಲ್ಪಿಸಿಕೊಳ್ಳಲು ಕಷ್ಟವಲ್ಲ. ಜೂಲ್ಸ್ ವರ್ನ್‌ರಂತಹ ಅನೇಕ ಸಾಹಿತಿಗಳು ತಮ್ಮ ಕಲ್ಪನೆಯಲ್ಲಿ ಸೃಷ್ಟಿಸಿದ ವಸ್ತುಗಳನ್ನು ವಿಜ್ಞಾನಿಗಳು ನಿಜವಾಗಿಯೂ ನಂತರ ಸೃಷ್ಟಿಸಿದ್ದಾರೆ. ಇವರನ್ನು ವಿಜ್ಞಾನ ಸಾಹಿತ್ಯದ ಪಿತಾಮಹರೆಂದು ಕರೆಯಲಾಗಿದೆ.

ಯುಟೋಪಿಯಾ/ ಡಿಸ್ಟೋಪಿಯಾ ತಂತ್ರಜ್ಞಾನದ ಫಲಶ್ರುತಿಯಾಗಿ ಭವಿಷ್ಯವು ನಮಗಾಗಿ ಆತಂಕರಹಿತ ಆದರ್ಶ ಸಮಾಜವನ್ನು ನೀಡಲಿದೆ ಎಂಬ ಕಲ್ಪನೆ ಯುಟೋಪಿಯಾ ಆದರೆ, ವಿನಾಶ, ವಿಪತ್ತು, ದೌರ್ಜನ್ಯಗಳೇ ಕೂಡಿದ ದುರಾಡಳಿತ ಭವಿಷ್ಯ ಮುಂದೆ ಬರಲಿದೆ ಎಂಬ ಕಲ್ಪನೆಯನ್ನು ಡಿಸ್ಟೋಪಿಯಾ ಎನ್ನುತ್ತಾರೆ. ಇದು ವಿಜ್ಞಾನಕಥಾಸಾಹಿತ್ಯಕ್ಕೆ ನೇರವಾಗಿ ಸಂಬಂಧಿಸಿಲ್ಲವಾದರೂ ತಂತ್ರಜ್ಞಾನದ ದುರ್ಬಳಕೆ ಇಲ್ಲಿ ಇರುತ್ತದೆ. (ಆರ್ವೆಲ್ಲಿನ 1984 ಇದ್ದಂತೆ). ವೈಜ್ಞಾನಿಕ ನಿಯಮಗಳು: ವಿಜ್ಞಾನಕಥಾಸಾಹಿತ್ಯವು ವೈಜ್ಞಾನಿಕ ನಿಯಮಗಳನ್ನು ಅನುಸರಿಸುತ್ತದೆ. ಈಗಾಗಲೇ ವೈಜ್ಞಾನಿಕವಾಗಿ ಸಾಬೀತಾಗಿರುವ ಅಥವಾ ನಂಬಲು ಶಕ್ಯವಾದ, ವೈಜ್ಞಾನಿಕ ಸಿದ್ಧಾಂತಗಳನ್ನು ಆಧರಿಸಿ ಬರೆಯಲಾಗಿರುತ್ತದೆ. ಹೀಗೆ ಮಾಡಲು ಲೇಖಕನಿಗೆ ಸ್ವಲ್ಪ ವಿಜ್ಞಾನದ ಅರಿವು ಇರಬೇಕು.

**ಟಿಪ್ಪಣಿಗಳು**

1. ರಾಜಶೇಖರ ಭೂಸನೂರು ಮಠ: ರಾಭೂ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಕನ್ನಡ ವಿಜ್ಞಾನ ಕಥಾ ಸಾಹಿತಿ. ಶುಕ್ರಗ್ರಹದ ಸಾಹಸಿ ಯೀರ್ಝಾನ್, ಸಿಗ್ನೀ ಸಂಗೀತ, ರಾಕ್ಷಸ ದ್ವೀಪ, ನಾಳಿನ ಮಕ್ಕಳ ಕಥೆಗಳು, ಯಂತ್ರಮಾನವ, ಮನ್ವಂತರ, ನೌಕಾಘಾತ ಮೊದಲಾದವು ಇವರ ಪ್ರಸಿದ್ಧ ಕೃತಿಗಳು.
2. ಮನು: ಮನು ಹೆಸರಿನಿಂದ ಕನ್ನಡದಲ್ಲಿ ವೈಜ್ಞಾನಿಕ ಕಥೆ–ಕಾದಂಬರಿಗಳನ್ನು ಬರೆದು ಪ್ರಸಿದ್ಧರಾಗಿರುವ ಪೆನುಗೊಂಡೆ ನರಸಿಂಹ ರಂಗನ್ ಅವರು ಮಂಡ್ಯ ಜಿಲ್ಲೆಯ ಮೇಲುಕೋಟೆಯವರು. ಹಿಮಜ್ವಾಲೆ, ಐರಾವತ, ಮಹಾಪ್ರಸ್ಥಾನ, ಸುದರ್ಶನಚಕ್ರ, ಅಯನ, ನೇಪಥ್ಯ, ಖೆಡ್ಡಾ, ಗ್ರಸ್ತ ಮೊದಲಾದ ವಿಜ್ಞಾನ ಕಥಾ ಸಾಹಿತ್ಯ ಕೃತಿಗಳನ್ನು ಕನ್ನಡ ಸಾಹಿತ್ಯಲೋಕಕ್ಕೆ ಕೊಡುಗೆಯಾಗಿ ನೀಡಿದ್ದಾರೆ.
3. ನಾಗೇಶ್ ಹೆಗಡೆ: ಕನ್ನಡ ನಾಡಿನ ಅಪೂರ್ವ ವಿಜ್ಞಾನ ಬರೆಹಗಾರ ನಾಗೇಶ್ ಹೆಗಡೆ ಮೂಲತಃ ವಿಜ್ಞಾನಿಗಳು. ಪತ್ರಕರ್ತರಾಗಿ, ಪರಿಸರವಾದಿಯಾಗಿ, ಚಿಂತಕರಾಗಿ, ಸಾಹಿತಿಯಾಗಿ, ಅಂಕಣಕಾರರಾಗಿ ಮನೆಮಾತಾಗಿದ್ದಾರೆ. ಗುರುಗ್ರಹದಲ್ಲಿ ಗುಮ್ಮ, ಗುರುಗ್ರಹದಲ್ಲಿ ದೀಪಾವಳಿ, ಮಿನುಗುವ ಮೀನು ಕುಲಾಂತರಿ ಕೋತಿ, ಮಂಗಳಲೋಕದಲ್ಲಿ ಮಾನವ, ಆಚೆನ ಲೋಕಕ್ಕೆ ಕ್ಯಾಲಕೋಶ ಮುಂತಾದವು ಇವರ ಪ್ರಮುಖ ಕೃತಿಗಳು.

**ಪರಾಮರ್ಶನಾ ಕೃತಿಗಳು**


1. ಭೂಸನೂರಮಠ ರಾಜಶೇಖರ, ಮುಂದಾನೊಂದು ಕಾಲದ ಕಥೆಗಳು (ಹದಿಮೂರು ವೈಜ್ಞಾನಿಕ ಕಥೆಗಳು), ಕನ್ನಡದ ವೈಜ್ಞಾನಿಕ ಕಥೆಗಳು, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, 2019
2. ಭೂಸನೂರ ಮಠ ರಾಜಶೇಖರ ಪುಸ್ತಕಗಳು ,ಸಾಹಿತ್ಯ ಪ್ರಕಾಶನ –ಮಂಗಳ, ನೌಕಘಾತ ಸಸ್ಯೆಕೊರಮ, ನಾನು ಮೆಚ್ಚಿದ ಪಾಶ್ಚ್ಯಾತ್ಯ ಕಥೆಗಳು, ಮನ್ವಂತರ ಹಾಗೂ ಆಪರೇಷನ್ ಯು.ಫ್.ಓ. 2017
3. ನಾಗೇಶ್ ಹೆಗಡೆ –ನಮ್ಮೊಳಗಿನ ಬ್ರಹ್ಮಾಂಡ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು,
4. ಬೈರನಟ್ಟಿ ಎಚ್.ಎಸ್. – ದಾರೊಯುಗ, ಸಮಾಜ ಪುಸ್ತಕಾಲಯ, ದಾರವಾಡ, 2017
5. Karnataka Katha" by S. L. Bhyrappa - A collection of stories that blend elements of science fiction with traditional narratives.
6. "Aasmanada" by R. K. Narayan - A science fiction novel that explores themes of space and time.
7. "Samsara" by Ananth K. - A contemporary science fiction novel that delves into philosophical themes through a futuristic lens.
8. Aldiss, Brian W., and David Wingrove. Trillion Year Spree: The History of Science Fiction.
9. Jameson, Fredric. "Progress Versus Utopia; or, Can We Imagine the Future?" Science Fiction Studies, Vol. 9, No. 2, 1982.
10. Wolfe, Gary K. "The Known and the Unknown: The Iconography of Science Fiction." Extrapolation, Vol. 21, No. 3, 1980.
11. Mendlesohn, Farah, and Edward James, eds. The Cambridge Companion to Science Fiction.


**Online Resources:**


1. Science Fiction Studies Journal, Available online at https://www.depauw.edu/sfs/
2. The Internet Speculative Fiction Database (ISFDB),A database of science fiction, fantasy, and horror literature: http://www.isfdb.org/
3. JSTOR and Project MUSE


❖❖❖

# ಗುಹೇಶ್ವರ ಅಂಕಿತನಾಮಕ್ಕೆ ಉಪನಿಷತ್ ಪ್ರೇರಣೆ ನೀಡಿದೆಯೇ?

**ಡಾ. ನಾ. ಮೊಗಸಾಲೆ**
ಕಾಂತಾವರ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ

ಸಾಹಿತ್ಯ ಶ್ರೀಮಂತಿಕೆಯ ಪರಂಪರೆಯುಳ್ಳ ನಮ್ಮ ಕನ್ನಡ ಸಾಹಿತ್ಯದಲ್ಲಿ ಹನ್ನೆರಡನೇ ಶತಮಾನದ ವಚನ ಸಾಹಿತ್ಯ ಚಳುವಳಿಯು ಉಳಿದ ಸಾಹಿತ್ಯ ಪ್ರಕಾರಕ್ಕಿಂತ ಭಿನ್ನವಾಗಿದೆ. ಯಾಕೆಂದರೆ ಹನ್ನೆರಡನೇ ಶತಮಾನದ ತನಕದ ಕಾವ್ಯವು ಮನಸ್ಸಿಗೆ ಮುದ ನೀಡಬಹುದಾದ ಸಾಹಿತ್ಯ ಪ್ರಕಾರ ಎಂದಷ್ಟೇ ಅಥವಾ ಕಾವ್ಯ ಮೀಮಾಂಸೆಯ ನೆಲೆಯಲ್ಲೇ ಇರುವಂಥಾದ್ದಾದರೆ, ಬಸವಾದಿ ಶರಣರ ನೇತೃತ್ವದಲ್ಲಿ ಮುನ್ನೆಲೆಗೆ ಬಂದ ಶರಣ ಚಳವಳಿಯು 'ಕಾವ್ಯ'ಕ್ಕೆ ಮಾತ್ರ ಸೀಮಿತವಲ್ಲ, ಅದು ಕಾವ್ಯವಾಗಿದ್ದುಕೊಂಡು 'ಜನಪರವಾದ ಅಥವಾ ಸಮಾಜಮುಖಿಯಾದ ಸಾಹಿತ್ಯ'ವಾಗಿದೆ ಎನ್ನುವುದನ್ನು ನಾವು ಒಪ್ಪಿದ್ದೇವೆ. ಅವರು ತಮ್ಮ ಸಾಹಿತ್ಯವನ್ನು 'ವಚನ' ಅಂದರೆ 'ಮಾತು' ಅಥವಾ 'ಪ್ರಮಾಣ ರೂಪ'ದಲ್ಲಿರುವ ಸಾಹಿತ್ಯವೆಂಬಂತೆ ತಮ್ಮ ಸಾಹಿತ್ಯವನ್ನು ಪರಿಕಲ್ಪಿಸಿಕೊಂಡಿದ್ದರು. ಅವರಿಂದ ಆ ನೆಲೆಯಲ್ಲಿ ಸೃಷ್ಟಿಯಾದ ವಚನ ಸಾಹಿತ್ಯವು ಬಸವಾದಿ ಶರಣರ ಕಾಲದಲ್ಲಿ ಮನುಷ್ಯನು ತನ್ನನ್ನು ತಾನೇ ಮೇಲೆತ್ತಿಕೊಳ್ಳುವುದಕ್ಕೆ ಅಂದರೆ 'ಧಾರಯತಿ ಇತಿ ಧರ್ಮ' ಎಂಬುದಕ್ಕೆ ರೂಪಕವಾಯಿತು. ಇದರಿಂದಾಗಿ ಸಮಸಮಾಜದ ಕಲ್ಪನೆಯ ಜೊತೆ ಕಾಯಕದ ಅವಶ್ಯಕತೆ, ತ್ರಿವಿಧ ದಾಸೋಹದಂಥ ಜೀವನ್ಮುಖಿ ಚಿಂತನೆಗಳು ಮುಂದೆ ಬಂದುವು. ಕುತೂಹಲದ ವಿಚಾರ ಅಂದರೆ ನಿಧಾನವಾಗಿ ಇದು ಮುಂದಿನ ಶತಮಾನದಲ್ಲಿ 'ಶಾಸ್ತ್ರ' ಅಥವಾ 'ಧರ್ಮಶಾಸ್ತ್ರ'ದ ಮಟ್ಟಕ್ಕೆ ಏರಿ ನೂತನ ಸಮಾಜದ (ಲಿಂಗಾಯತ ಧರ್ಮ) ರೂಪದಲ್ಲಿ ಸಮಾಜದಲ್ಲಿ ವಿಭಿನ್ನವಾಗಿ ಗುರುತಿಸಲ್ಪಟ್ಟು ಸಾಹಿತ್ಯವೂ, ಶಾಸ್ತ್ರವೂ ಒಂದೇ ಎಂಬಂತೆ ಭಾರತೀಯತೆಯ ಬಹುತ್ವದಲ್ಲಿ ಸೇರಿಕೊಂಡಿತು.

ಅದೇನೇ ಇದ್ದರೂ, ಇಂಥ ವಚನಗಳು ಎರಡು ಕಾರಣಕ್ಕೆ ಆಗಲೂ ಮತ್ತು ಈಗಲೂ ಮಹತ್ವದ್ದಾಗಿಯೇ ಉಳಿದಿವೆ. ಮೊದಲನೆಯದ್ದು ಹಿಂದೆ ಇದ್ದ ಕಾವ್ಯದಲ್ಲಿನ ಆದರ್ಶವು ಕೇವಲ ಗ್ರಂಥಸ್ಥವಾಗಿಯೇ ಉಳಿದುದಾಗಿದ್ದು ಅದು ಜನ ಜೀವನದಲ್ಲಿ ವಿಶೇಷವಾದ ಪರಿವರ್ತನೆಯನ್ನು ತರಲಿಲ್ಲ. ವಚನ ಸಾಹಿತ್ಯವು ಹಾಗಿಲ್ಲ. ಅದು ಎಲ್ಲಾ ಜಾತಿಯ/ ಸಮುದಾಯದವರ ಮನಸ್ಸಿನಲ್ಲಿ ಜೀವನ ಧರ್ಮದ ಎಚ್ಚರವನ್ನು ಹುಟ್ಟಿಸಿತು. ಈ ಕಾರಣದಿಂದ ಅದು ಆ ದಿನಗಳಲ್ಲಿ ಮುಖ್ಯವಾಗಿರುವ ಹಾಗೆ, ಈಗಲೂ ಅದೇ ರೀತಿ ಇದ್ದು ಸಾಹಿತ್ಯ ಎನ್ನುವುದು ಕೇವಲ ಆಲಂಕಾರಿವಾಗಿ ಇರಬಾರದು, ಅದು ನೇರವಾಗಿ ಜನ ಜೀವನದ ಭಾಗವಾಗಿರಬೇಕು ಮತ್ತು ಜನರ ನಡುವಿನಿಂದ ಎದ್ದು ಅದು ಜನರಲ್ಲಿ ಜಾಗೃತಿಯನ್ನೂ ಎಚ್ಚರವನ್ನೂ ಉದ್ದೀಪಿಸಬೇಕೆಂಬಂತೆ ಆಯಿತು. ಹಾಗಾಗಿ ವಚನ ಸಾಹಿತ್ಯದ ಅಂದಿನ ಅಘೋಷಿತ 'ಉದ್ದೇಶ'ವು ಇಂದು ನಮ್ಮ ಸಾಹಿತಿಗಳ 'ಘೋಷಿತ' ಉದ್ದೇಶವಾಗಿರುವುದು ನಮಗೆ ಗೊತ್ತು.

ಎರಡನೆಯದ್ದು ವಚನಕಾರರಿಗೆ ಜನರೆಲ್ಲ ಜ್ಞಾನಿಗಳಾಬೇಕು, ಅವರು ಆಡುವ

ಮಾತುಗಳಲ್ಲಿ ಧರ್ಮವೂ ಸೇರಿದಂತೆ ಪ್ರಗತಿಪರ ಚಿಂತನೆಗಳು ಇರಬೇಕು ಮತ್ತು ಅವು 'ಪ್ರಮಾಣ ವಚನಗಳ ರೀತಿಯಲ್ಲಿ'ರಬೇಕು ಎನ್ನುವುದು ಒಂದು ಆದರ್ಶವಾಗಿತ್ತು. ಇದು ಮುಕ್ತ ಚಿಂತನೆಯದ್ದಾಗಿದ್ದು ಬಸವಾದಿ ಶರಣರ ನೇತೃತ್ವದ ಅನುಭವ ಮಂಟಪದಲ್ಲಿ 'ಶುದ್ಧ ಸಾಹಿತ್ಯ'ವಾಗಿ ಹೊರಹೊಮ್ಮಿತು.

ಇಂಥ ವಚನಕಾರರೆಲ್ಲ ತಾವು ಆಡಿದ (ರಚಿಸಿದ) 'ವಚನ'ಗಳಲ್ಲಿ ತಂತಮ್ಮ 'ಇಷ್ಟದೇವರ' ಹೆಸರನ್ನು (ಆ ಹೆಸರು ಶಿವನಿಗೆ ಎಂಬಂತೆ) 'ಅಂಕಿತನಾಮ'ವನ್ನಾಗಿ ಇರಿಸಿಕೊಂಡರು.

ಶರಣ ಚಳುವಳಿಯಲ್ಲಿ ಮುಂಚೂಣಿಯಲ್ಲಿ 'ಯುಗಪುರುಷ'ನಾಗಿ ನಿಂತ ಬಸವಣ್ಣ ತನ್ನ ಅಂಕಿತನಾಮವನ್ನು 'ಕೂಡಲಸಂಗಮದೇವ' ಎಂದು ಇಟ್ಟುಕೊಂಡ. ಈತನ 1414 ವಚನಗಳು ಈ ತನಕ ಲಭ್ಯವಿವೆ ಎಂಬ ಮಾಹಿತಿ ಇದ್ದು, ಈತನು ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಾಮಾಜಿಕ ಸುಧಾರಣೆಗೆ ತನ್ನ ವಚನಗಳಲ್ಲಿ ಹೆಚ್ಚು ಒತ್ತುಕೊಟ್ಟ. ಬಸವಣ್ಣನ ಸಮಕಾಲೀನನಾಗಿದ್ದ ಅಲ್ಲಮಪ್ರಭು ದೇವರು ಇಂದಿನ ಲೋಕಸಭೆಯ ಹಾಗಿದ್ದ ಮತ್ತು ಬಸವಣ್ಣನೇ ಮುಂದೆ ನಿಂತು ಪರಿಕಲ್ಪಿಸಿದ್ದ 'ಅನುಭವ ಮಂಟಪ'ದಲ್ಲಿ ಬಸವಣ್ಣನಿಂದಲೇ ಅಧ್ಯಕ್ಷನಾಗಿ ನಿಯುಕ್ತನಾಗಿ ಕುಳಿತ ಮತ್ತು ಮುಂದೆ ತಾನಾಗಿಯೇ ಅದರಿಂದ ಇಳಿದ. ಆತನ ಅಂಕಿತನಾಮ 'ಗುಹೇಶ್ವರಾ' ಎನ್ನುವುದಾಗಿದ್ದು ಆ ಅಂಕಿತದಲ್ಲಿ ಆತನು ಬರೆದ 1645 ವಚನಗಳು ಈ ತನಕ ಲಭ್ಯವಿದೆ. ಅವುಗಳಲ್ಲಿ ಅನುಭಾವ ಮತ್ತು ಆಧ್ಯಾತ್ಮವೇ ಮುಖ್ಯವಾಗಿದೆ. ಅವನ ಜೀವನ ಸಾಧನೆಯ ಕುರಿತು ಅವನ ಸಮಕಾಲೀನರಿಂದ ಮತ್ತು ಆ ತದನಂತರದವರಿಂದ ಅನೇಕ ಕಾವ್ಯಗಳು ಹುಟ್ಟಿಕೊಂಡಿವೆ.

ಇದೇ ರೀತಿ ವಚನಕಾರರೆಲ್ಲ ಒಂದೊಂದು ಅಂಕಿತದಲ್ಲಿ ವಚನಗಳನ್ನು ಬರೆಯಲು ಎರಡು ಕಾರಣಗಳಿರಬಹುದು. ಒಂದು ತಮ್ಮ ಅಸ್ಮಿತೆಯನ್ನು ವಚನಗಳ ಮೂಲಕ ತೋರಿಸಿ ಕೊಡುವುದಾದರೆ, ಇನ್ನೊಂದು ತಮ್ಮ ಇಷ್ಟ ದೇವರ (ಈಶ್ವರನ) 'ಅಂಕಿತ'ವನ್ನು ತಮ್ಮದಾಗಿಸಿಕೊಂಡು, ಆ ಇಷ್ಟದೇವರನ್ನು ವಚನಗಳ ಮೂಲಕ ಶಾಶ್ವತವಾಗಿ ಇರಿಸುವುದು.

ಹನ್ನೆರಡನೇ ಶತಮಾನದ ಸಾಹಿತ್ಯವು ವಚನಯುಗವಾಗಿ, ಆಮೇಲೆ 'ಬಸವಯುಗ'ವಾಗಿ ಕಾಣಿಸಿಕೊಂಡ ಹಾಗೆ, ಹದಿನೈದನೇ ಮತ್ತು ಹದಿನಾರನೇ ಶತಮಾನದ ಸಾಹಿತ್ಯವು ದಾಸ ಬಳಗದ ಕೀರ್ತನಾಸಾಹಿತ್ಯದಿಂದ 'ದಾಸಯುಗ' ವಾದದ್ದು ನಮಗೆ ಗೊತ್ತು. ಬಹುತೇಕ ದಾಸರು ತಂತಮ್ಮ ಇಷ್ಟ ದೇವತೆಗಳ ಅಂಕಿತದಲ್ಲಿ ಇಹಪರದ ಜಂಜಾಟಗಳನ್ನು ಮೀರಿ ಲೋಕೋತ್ತರವನ್ನು ಕಾಣಬಹುದೆನ್ನುವಂತಹ ಅಥವಾ ವಚನಕಾರರಂತೆ ಸಮಾಜಮುಖಿ ಚಿಂತನೆಗಳನ್ನು ತಮ್ಮ ಕೀರ್ತನೆಗಳಲ್ಲಿ ಪ್ರಚುರಪಡಿಸಿದರು. ಇವರೆಲ್ಲರೂ ತಂತಮ್ಮ ಇಷ್ಟ ದೇವತೆಯ ಹೆಸರಿನಲ್ಲೇ ಅಂಕಿತಗಳನ್ನು ಟಂಕಿಸಿದ್ದು, ಇದಕ್ಕೆ ಇವರು ವಚನ ಚಳುವಳಿಯಿಂದ ಪ್ರೇರಣೆಗೊಂಡುದೂ ಕಾರಣವಿರಬಹುದು.

ಪುರಂದರ ದಾಸರಿಗೆ 'ಪುರಂದರ ವಿಠಲ', ಕನಕದಾಸರಿಗೆ 'ಬಾಡದಾದಿ ಕೇಶವ ಅಥವಾ ಆದಿಕೇಶವ,' ವಾದಿರಾಜರಿಗೆ 'ಹಯವದನ', ವ್ಯಾಸರಾಯರಿಗೆ 'ಶ್ರೀಕೃಷ್ಣ', ಶ್ರೀಪಾದರಾಯರಿಗೆ 'ರಂಗವಿಠಲ', ವಿಜಯದಾಸರಿಗೆ 'ವಿಜಯವಿಠಲ',

ವೇಣುಗೋಪಾಲದಾಸರಿಗೆ ‘ವೇಣುಗೋಪಾಲ ವಿಠಲ’, ಮೋಹನದಾಸರಿಗೆ ‘ಮೋಹನ ವಿಠಲ’, ಗೋಪಾಲದಾಸರಿಗೆ ‘ಗೋಪಾಲ ವಿಠಲ’, ಜಗನ್ನಾಥ ದಾಸರಿಗೆ ‘ಜಗನ್ನಾಥ ವಿಠಲ’ ಅಂಕಿತನಾಮವಾಗಿದ್ದರೆ, ಹೆಳವನಕಟ್ಟೆ ಗಿರಿಜಮ್ಮ ‘ಹೆಳವನಕಟ್ಟೆ ರಂಗ’ ಎಂಬ ಅಂಕಿತನಾಮವನ್ನು ಇಟ್ಟುಕೊಂಡಿದ್ದರು. ಇದೇ ಕಾಲದಲ್ಲಿದ್ದ (16ನೇ ಶತಮಾನದ) ಸರ್ವಜ್ಞ ಕವಿಯು ಮೂರು ಪಾದಗಳ ತ್ರಿಪದಿಗಳ ವಚನಕಾರನಾಗಿದ್ದು ದಾಸ ಸಾಹಿತ್ಯದ ಆಳ ಮತ್ತು ವಿಸ್ತಾರವನ್ನು ಅತ್ಯಂತ ಸೂಕ್ಷ್ಮವಾಗಿ ತನ್ನ ತ್ರಿಪದಿಗಳಲ್ಲಿ ಕಾವ್ಯಾತ್ಮಕವಾಗಿ ತೆರೆದಿಟ್ಟಿದ್ದ. ಅವನ ಮೂಲ ಹೆಸರು ಏನಿತ್ತೋ ಗೊತ್ತಿಲ್ಲ! ಆದರೆ ಅದು ಮುಖ್ಯವೇ ಅಲ್ಲ ಎನ್ನುವಂತೆ ಆತ ತನ್ನ ಅಂಕಿತನಾಮ(ಸರ್ವಜ್ಞ)ದಿಂದಲೇ ಪ್ರಸಿದ್ಧನಾಗಿದ್ದ. ಆತ ಕವಿಯೇ ಆಗಿದ್ದರೂ ಆತನೂ ವಚನಕಾರನೂ ಹೌದೆನ್ನುವಂತೆ ಹಿರಿಯ ವಿದ್ವಾಂಸ ಡಾ. ಎಂ.ಎ.ಕಲಬುರ್ಗಿ ಅವರು ಬೆಂಗಳೂರಿನ ಬಸವ ಸಮಿತಿಯವರು ಪ್ರಕಟಿಸಿರುವ ‘ವಚನ ಸಂಪುಟ’ದ ಪ್ರಸ್ತಾವನೆಯಲ್ಲಿ(ಪುಟ 41) ‘ಆತ ಕವಿಯಷ್ಟೇ ಅಲ್ಲ, ವಚನಕಾರನೂ ಹೌದು’ ಎನ್ನುತ್ತಾರೆ. ಅದೇನಿದ್ದರೂ ವಚನಕಾರರನ್ನು ಕವಿಗಳೆಂದು ನಾವು ಒಪ್ಪಿಯೇ ಒಪ್ಪುತ್ತೇವೆ.

ಆದರೆ ನನಗೆ ಕುತೂಹಲ ಇರುವುದು, ಅಲ್ಲಮನ ‘ಗುಹೇಶ್ವರಾ’ ಎನ್ನುವ ಅಂಕಿತನಾಮದಲ್ಲಿ. ಗುಹೇಶ್ವರನ ‘ಗುರು’ ಅನಿಮಿಷ ಎನ್ನುವವನಾಗಿದ್ದರೂ ಅಲ್ಲಮನ ‘ಇಷ್ಟದೇವತೆ’ ಯಾವುದು ಎಂಬ ಉಲ್ಲೇಖ ಎಲ್ಲೂ ಕಾಣುವುದಿಲ್ಲ. ಆದರೆ ಆತ ‘ಗುಹೇಶ್ವರ’ ಎಂಬ ಹೆಸರನ್ನು ತನ್ನ ಅಂಕಿತವಾಗಿ ಇರಿಸಿಕೊಳ್ಳಬೇಕಾದರೆ ಆತ ಉಪನಿಷತ್ ಮತ್ತು ಭಗವದ್ಗೀತೆಯನ್ನು ಚೆನ್ನಾಗಿ ಅಭ್ಯಸಿಸಿರಬೇಕು ಎಂದು ನನಗೆ ಕಾಣುತ್ತದೆ. ಯಾಕೆಂದರೆ ತೈತ್ತಿರೀಯ ಉಪನಿಷತ್ತಿನ ಬ್ರಹ್ಮಾನಂದವಲ್ಲಿಯ ಮೊದಲ ಅನುವಾಕವು ‘ಓಂ ಬ್ರಹ್ಮವಿದಾಪ್ನೋತಿ ಪರಂ । ತದೇಷಾಭಕ್ತಾ । ಸತ್ಯಂ ಜ್ಞಾನಮನಂತಂ ಬ್ರಹ್ಮ । ಯೋವೇದ ನಿಹಿತಂ ಗುಹಾಯಾಂ ಪರಿಮೇ ವ್ಯೋಮನ್..’ ಎಂಬಂತೆ ಪ್ರಾರಂಭವಾಗುತ್ತಿದ್ದು ಅದರ ಅರ್ಥವು ‘ಕುತ್ತಿಗೆಯಿಂದ ನಾಭಿಯವರೆಗಿನ ಹನ್ನೆರಡು ಅಂಗುಲ ಪ್ರದೇಶವನ್ನು ‘ದಹರಾಕಾಶ’ ಎನ್ನುವ ಪರಿಕಲ್ಪನೆ(ವೈದಿಕ ಶಾಸ್ತ್ರದಲ್ಲಿ) ಇದ್ದು, ಅದುವೇ ಹೃದಯಾಕಾಶವಾಗಿರುವ ‘ಗುಹಾ’ ಆಗಿದೆ’ ಎಂಬಂತಿದೆ, ನಿಹಿತಂ ಗುಹಾಯಾಂ ಪರಿಮೇವ್ಯೋಮನ್ ಅಂದರೆ ಈ ಹೃದಯ ಗುಹೆಯಲ್ಲಿರುವ ಅನಂತ, ಅಖಂಡ, ಅನಾದಿ ಅಪ್ರಮೇಯ ಮತ್ತು ಆತ್ಮ ಸ್ವರೂಪಿ ಪರಬ್ರಹ್ಮನೇ ಗುಹೇಶ್ವರ ಎಂದಾಗುತ್ತದೆ ಎನ್ನುವುದನ್ನು ವಿದ್ವಾಂಸರು ಹೇಳಿದ್ದಾರೆ. ‘ಗುಹೇಶ್ವರಾ’ನನ್ನು ‘ಗುಂಹೇಶ್ವರ’ ‘ಗೋಹೇಶ್ವರ’ ‘ಗೊಗೇಶ್ವರ’ ಇತ್ಯಾದಿಯಿಂದಲೂ ಕರೆಯುವುದಿದೆ ಎನ್ನುವ ಹಿರಿಯ ವಿದ್ವಾಂಸ ಡಾ.ಎಲ್.ಬಸವರಾಜ ಅವರು ತಮ್ಮ ‘ಅಲ್ಲಮನ ವಚನ ಚಂದ್ರಿಕೆ ಮಾಲಿಕೆಯ’ ಚಂದ್ರಿಕೆಯ ಬೆಳಕು ಎಂಬ ಪ್ರಸ್ತಾವನೆಯಲ್ಲಿ(ಪುಟ28) ‘ಹರಿಹರನ ರಗಳೆಯಿಂದ ಇವೆಲ್ಲ ಹೊಳೆಯುತ್ತದೆ’ ಎನ್ನುತ್ತಾರೆ. ಗೊಗ್ಗೇಶ್ವರ ಎನ್ನುವುದು ಅಲ್ಲಮನ ಅಂಕಿತನಾಮವಾಗಿ ‘ಇರುವುದು ಹೌದು’ ಎನ್ನುವ ಅವರು, ಅವೆಲ್ಲ ‘ಗುಹೇಶ್ವರ’ ಎನ್ನುವುದರ ರೂಪಾಂತರವೇ ಹೊರತು, ಬೇರೆಯೇನೂ ಅಲ್ಲ ಎನ್ನುತ್ತಾರೆ. ಕೊನೆಗೆ ಅವರು, ಗುಹೇಶ್ವರನೇ ಸರಿಯಾದ ಅಂಕಿತನಾಮ ಎನ್ನುತ್ತಾರೆ. ಅವರು ಕೆಲವು ಕಡೆ ‘ಅಲ್ಲಮನ ಹೆಸರು ಗುಹೇಶ್ವರಯ್ಯ ಎಂಬ ಭಾವದ ಸೂಚನೆಯಂತೆ ಇರುವುದು ನಿಜ’ ಎಂಬ ಅಭಿಪ್ರಾಯಕ್ಕೂ ಬರುತ್ತಾರೆ.

ಕಠೋಪನಿಷತ್‌ನ ಎರಡನೇ ವಲ್ಲಿಯ 12ನೇ ಶ್ಲೋಕವು ಇದನ್ನು ಪುಷ್ಟೀಕರಿಸುತ್ತದೆ.

**ತಂ ದುರ್ದರ್ಶಂ ಗೂಢ ಮನುಪ್ರವಿಷ್ಟ**

**ಗುಹಾಹಿತಂ ಗಹ್ವರೇಷ್ಟ ಪುರಾಣಮ್**

**ಅಧ್ಯಾತ್ಮಯೋಗಾಧಿಗಮೇನ ದೇವಂ**

**ಮತ್ವಾ ಧೀರೋ ಹರ್ಷ ಶೋಕೌನ್ ಜಹಾತಿ**

'ದೂರದರ್ಶನನೂ ಗೂಢವನ್ನು ಪ್ರವೇಶಿಸಿರುವವನೂ ಗುಹೆಯಲ್ಲಿರುವವನೂ (ಗುಹ್ವರದಲ್ಲಿರುವವನು) ಪುರಾಣನೂ ಆದ ದೇವನನ್ನು ಅಧ್ಯಾತ್ಮ ಯೋಗ ಪ್ರಾಪ್ತಿಯಿಂದ ತಿಳಿದುಕೊಂಡ ಧೀರನು ಹರ್ಷ ಮತ್ತು ಶೋಕವನ್ನು (ದ್ವಂದ್ವವನ್ನು) ಬಿಟ್ಟಿರುತ್ತಾನೆ' ಎನ್ನುವುದು ಇದರ ಸರಳ ಅರ್ಥ. ಅಲ್ಲಮನಿಗೆ ಇದು ಪೂರ್ತಿಯಾಗಿ ಅನ್ವಯಿಸುತ್ತದೆ. ಯಾಕೆಂದರೆ ಅವನು ದೇವರನ್ನು ಅರ್ಥೈಸಿದ್ದು ಅಮೂರ್ತವಾಗಿ ಮತ್ತು ಅನಂತವಾಗಿ ಮಾತ್ರವಲ್ಲ ಆತ ನಿಜವಾದ ಅರ್ಥದಲ್ಲಿ 'ಧೀರ'ನೂ ಆಗಿದ್ದ.

ಇನ್ನೂ ಇದನ್ನು ಸ್ವಷ್ಟಪಡಿಸುವ ಇನ್ನೊಂದು ಶ್ಲೋಕ ಕಠೋಪನಿಷತ್‌ನಲ್ಲಿದೆ (ನಾಲ್ಕನೇ ವಲ್ಲಿಯ ಶ್ಲೋಕ–6) ಯಃ ಪೂರ್ವಂ ತಪಸೋ ಜಾತಮದ್ಭ್ಯಃ ಪೂರ್ವಂಜಾಯತ ಗುಹಾಂ। ಪ್ರವಿಶ್ಯ। ತಿಷ್ಠಂತಂ ಯೋ ಭೂತೇರ್ಭಿವ್ಯಪಶ್ಯತ ಏತದ್ವೈತತ್

'ನೀರಿಗಿಂತ ಮೊದಲು ತಪಸ್ಸಿನಿಂದ ಹುಟ್ಟಿರುವ ಮತ್ತು ಹೃದಯವನ್ನು ಪ್ರವೇಶಿಸಿ ಭೂತಗಳೊಂದಿಗೆ ಇರುವ(ಪಂಚ ಭೂತಾತ್ಮಕವಾದ ದೇಹದಲ್ಲಿ ನೆಲೆಸಿರುವ) ಹಿರಣ್ಯಗರ್ಭನನ್ನು(ಆತ್ಮವನ್ನು) ಯಾವನು ನೋಡುತ್ತಾನೋ ಅವನೇ ಆತ್ಮನಾಗಿದ್ದು, 'ಇದೇ ಅದು' ಎಂಬಂತಾಗಿದೆ' ಎನ್ನುವುದು ಆ 'ವಾಕ್'ನ ಅರ್ಥ.

ಅಲ್ಲಮನ ಅಂಕಿತನಾಮದ ಹಿಂದೆ ಇಂಥ ತಾತ್ತ್ವಿಕತೆ ಇದೇ ಎಂದು ಊಹಿಸಿದರೆ ಖಂಡಿತ ತಪ್ಪಿಲ್ಲ. ಯಾಕೆಂದರೆ ಅಲ್ಲಮ ಅಪರೂಪದ ಅನುಭಾವಿ. ಜಂಗಮನಾಗಿ ಕಾಶ್ಮೀರದಿಂದ ದಕ್ಷಿಣ ಭಾರತದ ತುದಿಯವರೆಗೆ ಸಂಚರಿಸಿದವನು. ಮುಕ್ತಾಯಕ್ಕ, ಸಿದ್ಧರಾಮ, ಗೋರಕ್ಷ ಮೊದಲಾದ ಸಾಧಕರ ಮನದ ಕಾಳಿಕೆಯನ್ನು ಕಳೆದು ಮಾರ್ಗದರ್ಶನ ಮಾಡಿದವನು. ಬಸವಣ್ಣನ ಮಹಾ ಆಂದೋಲನವನ್ನೂ ನೋಡಲು ಸಿದ್ಧನಾಗಿ ಕಲ್ಯಾಣಕ್ಕೆ ಬಂದು ಅಲ್ಲಿ 'ಅನುಭವ ಮಂಟಪ'ದ ಅಧ್ಯಕ್ಷನಾಗಿ ಅಧ್ಯಾತ್ಮ ಚಿಂತಕನಾಗಿ ಲೋಕೋತ್ತರವಾಗಿ ಬೆಳಗಿದವನು. ಅವನು ವಚನ, ಸ್ವರವಚನ, ಸೃಷ್ಟಿಯವಚನ, ಮಂತ್ರಗೋಪ್ಯಗಳನ್ನು ಬರೆದ ವಿದ್ವಾಂಸನಾಗಿದ್ದು ಆತನ ಬೆಡಗಿನ ಪರಿಭಾಷೆಯಲ್ಲಿರುವ ವಚನಗಳು ಉಪನಿಷತ್ತಿನ ಹಾಗೆಯೇ ಅನೂಹ್ಯ ಮತ್ತು ಅದ್ಭುತ ಕಾವ್ಯವೇ ಆಗಿದೆ. ಇಂಥ ಅಲ್ಲಮನು.

**ನಾನೆಂಬುದು ಪ್ರಮಾಣ ನೀನೆಂಬುದು ಪ್ರಮಾಣ**

**ಸ್ವಯಂವೆಂಬುದು ಪ್ರಮಾಣ ಪರವೆಂಬುದು ಪ್ರಮಾಣ**

**ಪ್ರಮಾಣವೆಂಬುದು ಪ್ರಮಾಣ**

**ಗುಹೇಶ್ವರನೆಂಬುದು ಅಪ್ರಮಾಣ**

ಎನ್ನುತ್ತಾನೆ. ಅಂದರೆ ಇದು ಗುಹೇಶ್ವರನನ್ನು ಹೊರತುಪಡಿಸಿ ಉಳಿದುದೆಲ್ಲವನ್ನೂ ಗುರುತಿಸಬಹುದು ಎನ್ನುವುದಾದರೂ, 'ಗುಹೇಶ್ವರನೂ ಅಪ್ರಮಾಣವೇ ಆಗಿದೆ' ಎನ್ನುವಂತಿದೆ. ಅರ್ಥಾತ್ ಇದು 'ಯಃ ಪೂರ್ವಂ ತಪಸೋ... ಎನ್ನುವ ಶ್ಲೋಕವನ್ನೇ

ಉದ್ಧರಿಸಿದ ಹಾಗೆ ಆಗುತ್ತದೆ.

ಅಷ್ಟೇ ಅಲ್ಲ; ಈ ಕೆಳಗಿನ ವಚನವು ಆತನ ಮೇಲಿನ ಮಾತನ್ನು ಇನ್ನಷ್ಟು ದೃಢೀಕರಿಸುತ್ತದೆ.

**ನೀ ನಾನೆಂಬ ಭಾವವಾರಿಂದಾಯ್ತು ಹೇಳಾ?**

**ನೀನೆಂಬುದು ಅಜ್ಞಾನ ನಾನೆಂಬುದು ಮಾಯಾಧೀನ?**

**ನೀನೆನ್ನದೆ ನಾನೆನ್ನದೆ ಇಷ್ಟು ಸುಖವ ಭಿನ್ನವಿಲ್ಲದೆ ಅರಿಯಬಲ್ಲಡೆ**

**ಆ ಸುಖವು ನಿಮಗರ್ಪಿತ ಕಾಣಾ ಗುಹೇಶ್ವರಾ**

ಇದರ ಅರ್ಥ : 'ನಾನು ಭಕ್ತ, ನೀನು ದೇವ ಎಂಬ ದ್ವಂದ್ವ ಇಲ್ಲದ ಅಖಂಡ ಸತ್ಯ ನೀನು! ಅದನ್ನು ಮೀರಿ ನೀನು ಬೇರೆ, ನಾನು ಬೇರೆ ಎನ್ನುವುದು ಮಾಯಾವಾದ! ಈ ಮಾಯೆ ಇಲ್ಲವಾದಾಗ ನಾನೇ ನೀನು, ನೀನೇ ನಾನು ಎಂದಾಗುವ ಸುಖ ಸಿಕ್ಕುತ್ತದೆ, ಅದನ್ನು ನಿನಗೆ ಅರ್ಪಿಸುತ್ತೇನೆ' ಎನ್ನುವುದಾಗಿದ್ದು ಇದು ಅಪರೂಪದ ಆತ್ಮಜ್ಞಾನ. ಇದು ಅಲ್ಲಮನು ಬೇರೆಯಲ್ಲ ಗುಹೇಶ್ವರನು ಬೇರೆಯಲ್ಲ ಎನ್ನುವುದಾಗಿದೆ.

ಈ ಎಲ್ಲ ಕಾರಣದಿಂದ ಅಲ್ಲಮನ ಅಂಕಿತನಾಮವು ಆತನ 'ಆತ್ಮಜ್ಞಾನ ಪ್ರಮಾಣ ಸ್ವರೂಪ'ವೇ ಎಂದು ಹೇಳುವಂಥ 'ಗುಹೇಶ್ವರ' ಎಂಬ ಅಂಕಿತನಾಮದಲ್ಲಿದೆ ಎಂದು ಖಂಡಿತ ಹೇಳಬಹುದು. ಹಾಗಾಗಿ ಅವನು ಹೇಳುವ (ರಚಿಸಿದ) ವಚನಗಳೆಲ್ಲವೂ 'ಆತ್ಮಸಾಕ್ಷಿ ಪ್ರಮಾಣ ಪೂರ್ವಕವಾದ ಮಾತು' ಆಗಿದೆ ಎಂದು ಹೇಳಬೇಕು.

❖❖❖

# ಶ್ರೀ ಅವರ 'ಪ್ರಾರ್ಥನೆ' ಮತ್ತು ನ್ಯೂಮನ್ ಅವರ 'ಲೀಡ್, ಕೈಂಡ್ಲಿ ಲೈಟ್' ಕವನಗಳ ತೌಲನಿಕ ವಿಶ್ಲೇಷಣೆ

**ಡಾ. ಮುರಳಿ ಕೆ.ವಿ.**
ಸಹಾಯಕ ಪ್ರಾಧ್ಯಾಪಕರು, ಕನ್ನಡವಿಭಾಗ, ಸ.ಪ್ರ.ದ. ಕಾಲೇಜು, ಕುದೂರು, ರಾಮನಗರ
**ಶ್ರೀನಿವಾಸ್ ಎಂ.**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸ.ಪ್ರ.ದ. ಕಾಲೇಜು, ಸಾಲಿಗ್ರಾಮ, ಮೈಸೂರು

1833ರಲ್ಲಿ ನ್ಯೂಮನ್ ತಮ್ಮ ಮನಸಿನ ತಲ್ಲಣದ ಕ್ಷಣದಲ್ಲಿ ರಚಿಸಿದ ವಿಲೀಡ್, ಕೈಂಡ್ಲಿ ಲೈಟ್‌ಹಿ ಕ್ರೈಸ್ತ ಭಕ್ತಿಗೀತೆಗಳಲ್ಲಿ ಅತ್ಯಂತ ಮೆಚ್ಚುಗೆಗೆ ಪಾತ್ರವಾದ ಕವನವಾಗಿ ಮೂಡಿಬಂದಿದೆ. ವ್ಯಕ್ತಿಯ ಬದುಕಿನ ಆಧ್ಯಾತ್ಮಿಕ ಅಸ್ಪಷ್ಟತೆಯ ನಡುವೆ, ನ್ಯೂಮನ್ ಅವರ ಸಂಕಷ್ಟಗಳು ಮತ್ತು ದಿವ್ಯ ಮಾರ್ಗದರ್ಶನದ ಅಗತ್ಯದಿಂದ ಪ್ರೇರಿತವಾದ ಈ ಗೀತೆ ಒಂದು ಮಾನವೀಯ ಆರ್ತತೆಯನ್ನು ಪ್ರತಿನಿಧಿಸುತ್ತದೆ. ಇದರ ಸರಳ ಭಾಷೆಯು ಭಾಷೆಯ ಗಡಿಯನ್ನು ಮೀರಿ ಪ್ರತಿಧ್ವನಿಸುತ್ತಾ, ಜೀವನದ ತಲ್ಲಣ, ಅನಿಶ್ಚಿತತೆಯೊಂದಿಗೆ ಹೋರಾಡುವವರಿಗೆ ಸಮಾಧಾನವನ್ನು ನೀಡುತ್ತದೆ.

ಕಾಲಕ್ರಮೇಣ, ಈ ಗೀತೆ 19ನೇ ಶತಮಾನದ ಕ್ರೈಸ್ತ ಸಾಂಸ್ಕೃತಿಕ ಹಿನ್ನೆಲೆಯನ್ನು ಮೀರಿ ವಿವಿಧ ಭಾಷಾ ಮತ್ತು ಸಾಂಸ್ಕೃತಿಕ ಸನ್ನಿವೇಶಗಳಲ್ಲಿ ರೂಪಾಂತರಗೊಂಡಿದೆ. ಇವುಗಳಲ್ಲಿ, ಬಿ.ಎಂ. ಶ್ರೀಕಂಠಯ್ಯ ಅವರು ಕನ್ನಡಕ್ಕೆ ಅನುವಾದಿಸಿದ 'ಪ್ರಾರ್ಥನೆ' (ಕರುಣಾಳು ಬಾಬೆಳಕೆ – ಈ ಹೆಸರಿನಲ್ಲಿ ಹೆಚ್ಚು ಪ್ರಸಿದ್ಧಿ) ಕವನವು ಕನ್ನಡ ಸಾಹಿತ್ಯದಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದೆ. ಆಧುನಿಕ ಕನ್ನಡ ಕಾವ್ಯದ ಅಡಿಗಲ್ಲಿಗೆ ಕಾರಣರಾದ ಶ್ರೀಕಂಠಯ್ಯ, ನ್ಯೂಮನ್ ಅವರ ಕವಿತೆಯ ಮೂಲಭಾವನೆಯನ್ನು ಕನ್ನಡ ಭಾಷಾ ಸಹೃದಯರಿಗೆ ತಲುಪಿಸಲು ಈ ಕವನವನ್ನು ವಿಶಿಷ್ಟವಾಗಿ ಭಾಷಾಂತರಿಸಿದ್ದಾರೆ. ಇದು ನ್ಯೂಮನ್ ಅವರ ಭಕ್ತಿಗೀತೆಗಳ ಆಧ್ಯಾತ್ಮಿಕ ಸೂಕ್ಷ್ಮತೆಯನ್ನು ಕಾಪಾಡುವುದಲ್ಲದೆ, ಕನ್ನಡ ಕಾವ್ಯದ ಸಾಂಪ್ರದಾಯಿಕ ಶೈಲಿಯನ್ನೂ ಬಿಂಬಿಸುವಲ್ಲಿ ಸಶಕ್ತವಾಗಿದೆ. ಕನ್ನಡ ಭಾಷಾಂತರವು ನ್ಯೂಮನ್ ಅವರ ಗೀತೆಯ ವಿಶ್ವಮಟ್ಟದ ಆಕರ್ಷಕತೆಯನ್ನು ಪ್ರತಿಬಿಂಬಿಸುತ್ತಾ, ಸ್ಥಳೀಯತೆಯನ್ನೂ ಒಳಗೊಂಡಿದೆ.

ಈ ತೌಲನಿಕ ವಿಶ್ಲೇಷಣೆಯಲ್ಲಿ ಆಂಗ್ಲದ ಮೂಲಗೀತೆ ಮತ್ತು ಅದರ ಕನ್ನಡ ಭಾಷಾಂತರವನ್ನು ಸಮಗ್ರವಾಗಿ ಗಮನಿಸಲಾಗುವುದು.

## ಭಾಷಾ ಮತ್ತು ಕಾವ್ಯಶೈಲಿ

ವಿಲೀಡ್ ಕೈಂಡ್ಲಿ ಲೈಟ್‌ಹಿ ಮತ್ತು ಅದರ ಕನ್ನಡ ರೂಪ 'ಪ್ರಾರ್ಥನೆ' ಇವು ವಿಭಿನ್ನ ಭಾಷಾ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳನ್ನು ಹೊಂದಿದವುಗಳಾದರೂ ಈ ಎರಡೂ ಗೀತೆಗಳು ಆಧ್ಯಾತ್ಮಿಕ ತವಕ ಮತ್ತು ದಿವ್ಯ ಮಾರ್ಗದರ್ಶನದ ಹಂಬಲವನ್ನು ಸಮಾನವಾಗಿ ಹೊಂದಿವೆ.

ನ್ಯೂಮನ್ ಅವರ ಆಂಗ್ಲ ಗೀತೆ ವಿಶಾಲ ಓದುಗ ವರ್ಗದ ಮನಸ್ಸಿನಲ್ಲಿ

ಗಾಢವಾದ ಪ್ರತಿಧ್ವನಿಯನ್ನು ಮೂಡಿಸುತ್ತದೆ. ಉದಾಹರಣೆಗೆ, "Lead Thou me on" ಎಂಬ ಮೊದಲ ವ್ಯಕ್ತಿಯ ದೃಷ್ಟಿಕೋನವು ಮಾತನಾಡುವವನ ಮತ್ತು ದಿವ್ಯನ ನಡುವಿನ ಆಪ್ತಸಂಬಂಧವನ್ನು ಒದಗಿಸುತ್ತದೆ, ಇದು ತೀವ್ರ ಭ್ರಾಂತಿಯಲ್ಲಿರುವ ಅಥವಾ ಭರವಸೆ ಮತ್ತು ಮಾರ್ಗದರ್ಶನವನ್ನು ಹುಡುಕುವ ಯಾರಿಗಾದರೂ ಅನುಭವಿಸಲು ಸಾಧ್ಯವಾಗುತ್ತದೆ. ಸಹಜ ನಿವೇದನೆಯು ಗೀತೆಯ ಆಳವಾದ ಅರ್ಥವನ್ನು ಹೊಳೆಯುವಂತೆ ಮಾಡುತ್ತದೆ, ಇದರಿಂದಾಗಿ ಅದು ಶಾಶ್ವತ ಮತ್ತು ವಿಶ್ವ ಪ್ರಾಮುಖ್ಯತೆಯನ್ನು ಹೊಂದುತ್ತದೆ.

ಇದಕ್ಕೆ ವಿರುದ್ಧವಾಗಿ, ಬಿ.ಎಂ. ಶ್ರೀಕಂಠಯ್ಯ ಅವರ ಕನ್ನಡ ಭಾಷಾಂತರವು, ನ್ಯೂಮನ್ ಅವರ ಕಾರ್ಯದ ಸಾರಾಂಶವನ್ನು ಘನೀಕರಿಸಿಕೊಂಡು, ಕನ್ನಡ ಸಾಹಿತ್ಯದ ಸಮೃದ್ಧ ಕಾವ್ಯಪರಂಪರೆಯನ್ನು ಅಭಿವ್ಯಕ್ತಿಸುತ್ತದೆ. ಶ್ರೀ ಅವರ ಭಾಷಾಂತರವು ಛಂದಸ್ಸಿಗೆ ವಿಸೇಷ ಗಮನ ಕೊಡುತ್ತದೆ ಉದಾಹರಣೆಗೆ, ನ್ಯೂಮನ್ ಅವರ ಸಾಲುಗಳು 'Keep Thou my feet; I do not ask to see / The distant scene; one step enough for me' ಕನ್ನಡದಲ್ಲಿ ಈ ರೀತಿ ಅನುವಾದವಾಗುತ್ತದೆ: ವಿಕೇಳೆನೊಡನೆಯೆ–ಸಾಕು ನನಗೊಂದು ಹೆಜ್ಜೆ". ಈ ಅನುವಾದವು ಮೂಲ ಅರ್ಥವನ್ನು ಕಾಪಾಡುತ್ತಾ, ಕನ್ನಡ ಭಾಷೆಯ ಛಂದಸ್ಸು ಮತ್ತು ಸೌಂದರ್ಯಶೀಲತೆಗೆ ಅನುಗುಣವಾಗಿ ಹೊಂದಿಸುತ್ತದೆ. 'ನನಗೊಂದು ಹೆಜ್ಜೆ'(ಒಂದು ಹೆಜ್ಜೆ) ಎಂಬ ಪದಗಳು, ಪ್ರಕಾಶ ನೀಡುವ ದಿವ್ಯ ಮಾರ್ಗದರ್ಶನದ ಮೇಲೆ ಅವಲಂಬನೆಯನ್ನು ನಿರೂಪಿಸುತ್ತದೆ.

ಕನ್ನಡ ಭಾಷಾಂತರವು ಕನ್ನಡ ಸಾಹಿತ್ಯದ ವಿಶೇಷತೆಯಾದ ಛಂದಸ್ಸು, ಅಲಂಕಾರ ಮತ್ತು ಭಾವನಾತ್ಮಕ ಶೈಲಿಗಳನ್ನು ಪರಿಚಯಿಸುತ್ತದೆ, ಇದರಿಂದಾಗಿ ಗೀತೆಯ ಲಾಲಿತ್ಯವನ್ನು ಹೆಚ್ಚಿಸುತ್ತದೆ. ಉದಾಹರಣೆಗೆ: ವಿಮಿರುಗು ಬಣ್ಣಕೆ ಬೆರೆತು, ಭಯ ಮರೆತು, ಕೊಬ್ಬಿದೆನು; ಮೆರೆದಾಯ್ತು: ನೆನೆಯದಿರು ಹಿಂದಿನದನೆಲ್ಲಹಿ ಇಂತಹ ಸಾಲುಗಳು ಆಂತರಿಕ ತಮಸ್ಸನ್ನು ಮತ್ತು ಅಜ್ಞಾನವನ್ನು ವಿವರಿಸುತ್ತವೆ. ಇದು ಹಿಂದಿನ ತಪ್ಪುಗಳನ್ನು ಗುರುತಿಸಿ ಮುಂದಿನ ಪ್ರಗತಿಗೆ ಬದ್ಧತೆಯನ್ನು ತೋರಿಸುತ್ತದೆ. ನ್ಯೂಮನ್ ಅವರ ಗೀತೆ 19ನೇ ಶತಮಾನದ ಕ್ರೈಸ್ತ ಸಾಂಸ್ಕೃತಿಕ ಮತ್ತು ಸೈದ್ಧಾಂತಿಕ ಹಿನ್ನಲೆಯಲ್ಲಿ ಆಧಾರಿತವಾಗಿದೆ, ಆದರೆ ಶ್ರೀಕಂಠಯ್ಯ ಅವರ ಕವಿತೆ ಕನ್ನಡದ ಕಾವ್ಯ ಪರಂಪರಗೆ ತಕ್ಕಂತೆ ಇದೆ. ಶ್ರೀಯವರದು ಅನುವಾದ ಅಥವಾ ಭಾಷಾಂತರ ಎನ್ನುವುದಕ್ಕಿಂತ ರೂಪಾಂತರ ಎಂದರೆ ಸರಿಯಾಗುತ್ತದೆ.

**ವಿಷಯದ ಸಾಮ್ಯತೆಗಳು**

'ಲೀಡ್ ಕೈಂಡ್ಲಿ ಲೈಟ್' ಮತ್ತು ಅದರ ಕನ್ನಡ ರೂಪಾಂತರ 'ಪ್ರಾರ್ಥನೆ' (ಕರುಣಾಳು ಬಾಬೆಳಕೆ) ಇವೆರಡರ ಹೃದಯಭಾಗದಲ್ಲಿ, ಅನಿಶ್ಚಿತತೆಯ ಕ್ಷಣಗಳಲ್ಲಿ ದಿವ್ಯಮಾರ್ಗದರ್ಶನದ ಮೇಲೆ ಅಚ್ಚುಕಟ್ಟಾದ ನಂಬಿಕೆ ಇದೆ. ನ್ಯೂಮನ್ ಅವರ ಮೂಲಗೀತೆಯಲ್ಲಿ : "Lead, kindly Light, amid the encircling gloom" ಅನೇಕ ಆಧ್ಯಾತ್ಮಿಕ ಕತ್ತಲೆಯ ಕ್ಷಣಗಳನ್ನು ಚಿತ್ರಿಸುತ್ತದೆ, ಅಲ್ಲಿ ಕವಿ ದಿವ್ಯಬೆಳಕಿನತ್ತ ತಿರುಗುತ್ತಾನೆ. ಕವಿತೆಯು ದೇವರನ್ನು ಪರಮಮಾರ್ಗದರ್ಶಿಯಂತೆ ಬಿಂಬಿಸುತ್ತದೆ.

ಈ ವಿಷಯವನ್ನು ಕನ್ನಡ ರೂಪಾಂತರದಲ್ಲಿಯೂ ಆಳವಾಗಿ ಪ್ರತಿಬಿಂಬಿಸುವಂತೆ

ಮಾಡಲಾಗಿದೆ, ಉದಾಹರಣೆಗೆ: 'ಕೈಹಿಡಿದು ನಡೆಸೆನ್ನನು'. ಈ ಮನೋಭಾವದಿಂದ ಮಾಡಲಾದ ಮನವಿ ದಿವ್ಯ ನೆರವಿನ ಅವಲಂಬನೆಯನ್ನು ತೋರಿಸುತ್ತದೆ, ಇದು ದಿವ್ಯನೊಂದಿಗೆ ಹೃದಯಸ್ಪರ್ಶಿ ಹತ್ತಿರ ಸಂಬಂಧವನ್ನು ಚಿತ್ರಿಸುತ್ತದೆ. ಇದು ಭಾವನಾತ್ಮಕ ತೂಕವನ್ನು ಹೊಂದಿದ್ದು, ವ್ಯಕ್ತಿಯ ಮಾನವೀಯ ಮಿತಿಗಳನ್ನು ಒಪ್ಪಿಕೊಳ್ಳಲು ಮತ್ತು ಜೀವನದ ಸವಾಲುಗಳನ್ನು ಎದುರಿಸಲು ದೈವದ ಸಹಾಯ ಅಗತ್ಯ ಎನ್ನುತ್ತದೆ.

ಇನ್ನೊಂದು ಕೇಂದ್ರವಿಷಯವೆಂದರೆ, ಮಾನವೀಯ ದೌರ್ಬಲ್ಯವನ್ನು ಒಪ್ಪಿಕೊಳ್ಳುವ ಮತ್ತು ಒಂದು ಉನ್ನತ ಶಕ್ತಿಗೆ ಶರಣಾಗುವ ಅಗತ್ಯ. ನ್ಯೂಮನ್ ಅವರ ವಿನಮ್ರತೆ ಈ ಸಾಲಿನಲ್ಲಿ ಸ್ಪಷ್ಟವಾಗಿದೆ: "I loved to choose and see my path; but now,/Lead Thou me on." ಆತ್ಮನಿರ್ಧಾರದಿಂದ ಶರಣಾಗುಣದತ್ತ ಈ ಪರಿವರ್ತನೆ, ಆಧ್ಯಾತ್ಮಿಕ ಬೆಳವಣಿಗೆಯ ಉದಾಹರಣೆ. ಇದು ಮಿತಿಗಳನ್ನು ಒಪ್ಪಿಕೊಳ್ಳಲು ಮತ್ತು ದಿವ್ಯಮಾರ್ಗದರ್ಶನದ ಮೇಲೆ ನಂಬಿಕೆಯನ್ನು ಇಡಲು ತಯಾರಾಗಿರುವ ಬುದ್ಧಿವಂತಿಕೆಯನ್ನು ತೋರಿಸುತ್ತದೆ.

ಕನ್ನಡ ರೂಪಾಂತರದಲ್ಲಿ ಸ್ವಲ್ಪ ಭಿನ್ನವಾದ ರೀತಿಯಲ್ಲಿ ಸ್ವವಿಮರ್ಶೆಯ ಸಾಲುಗಳಿವೆ. ವಿಮಿರುಗು ಬಣ್ಣಕೆ ಬೆರೆತು, ಭಯ ಮರೆತು, ಕೊಬ್ಬಿದೆನುಹಿ.
ನ್ಯೂಮನ್ ಅವರ ಮೂಲಗೀತೆ ತಕ್ಷಣ ಸ್ಪಷ್ಟತೆಯ ಬೇಡಿಕೆಯನ್ನು ತಳ್ಳಿಹಾಕುತ್ತದೆ, ಬದಲಿಗೆ ಪಯಣದ ಮೇಲೆ ಗಮನ ಕೇಂದ್ರೀಕರಿಸುತ್ತದೆ: "The night is dark, and I am far from home; / Lead Thou me on." ಕನ್ನಡ ರೂಪಾಂತರವು ಈ ಭಾವನೆಯನ್ನು 'ಇಷ್ಟು ದಿನ ಸಲಹಿರುವೆ ಮೂರ್ಖನನು; ಮುಂದೆಯೂ ಕೈಹಿಡಿದು ನಡೆಸದಿಹೆಯಾ?' ಎಂದು ವ್ಯಕ್ತಮಾಡಿದೆ. ಈ ಅಭಿವ್ಯಕ್ತಿಯು ಭರವಸೆ ಮತ್ತು ಶ್ರದ್ಧೆಯನ್ನು ತೋರಿಸುತ್ತದೆ, ಕಳೆದ ಅನುಭವದಿಂದ ಸ್ಫೂರ್ತಿಯನ್ನು ಪಡೆಯುತ್ತದೆ.

19ನೇ ಶತಮಾನದಲ್ಲಿ ನ್ಯೂಮನ್ ಅವರು ರಚಿಸಿದ 'ಲೀಡ್ ಕೈಂಡ್ಲಿ ಲೈಟ್' ವಿಕ್ಟೋರಿಯನ್ ಯುಗದ ಕ್ರೈಸ್ತ ಧಾರ್ಮಿಕ ಮತ್ತು ಪೂಜಾ ಸಂಪ್ರದಾಯಗಳಲ್ಲಿ ಆಳವಾಗಿ ನೆಲೆಗೊಂಡಿರುವ ಈ ಗೀತೆ, ಪಾಶ್ಚಾತ್ಯ ನಿರೂಪಣೆಯ ಒಂದು ವಿಶಿಷ್ಟ ಆಯಾಮದಲ್ಲಿ ನ್ಯೂಮನ್ ಅವರ ವೈಯಕ್ತಿಕ ಆಧ್ಯಾತ್ಮಿಕ ಪಯಣವನ್ನು ಪ್ರತಿಫಲಿಸುತ್ತದೆ. ಇದರ ವಿರುದ್ಧವಾಗಿ, ಬಿ.ಎಂ. ಶ್ರೀಕಂಠಯ್ಯ ಅವರ ಕನ್ನಡ ರೂಪಾಂತರವು ಈ ಕನ್ನಡದ ಸಾಂಸ್ಕೃತಿಕ ಹಿನ್ನೆಲೆಗೆ ತಕ್ಕಂತೆ ಹೊಂದಿಸುತ್ತದೆ. ಕನ್ನಡದ ಭಕ್ತಿಪರಂಪರೆಯ ರಚನೆಗಳನ್ನು ಶ್ರೀಯವರ ಗೀತೆ ನೆನಪಿಸುತ್ತದೆ.

ಬೆಳಕು ಎಂಬ ಮಾರ್ಗದರ್ಶಕ ಶಕ್ತಿ ಎಂಬ ರೂಪಕವು ಸಾಂಸ್ಕೃತಿಕ ಅಂತರವನ್ನು ಮೀರಿಸಿ, ದಿವ್ಯಪ್ರಚೋದನೆ, ಸ್ಪಷ್ಟತೆ ಮತ್ತು ಭರವಸೆಯ ಸಂಕೇತವಾಗಿ ಕಾರ್ಯನಿರ್ವಹಿಸುತ್ತದೆ. "kindly Light" ಬೆಳಕಿನ ಚಿತ್ರಣವನ್ನು ತೋರುತ್ತದೆ. ಕನ್ನಡದಲ್ಲಿ ಈ ರೂಪಕವು "ಬೆಳಕೆ" (ಬೆಳಕು) ಪದದ ಮೂಲಕ ಹೆಚ್ಚಿನ ಅರ್ಥಪೂರ್ಣತೆಯನ್ನು ಹೊಂದುತ್ತದೆ. ಕನ್ನಡದ ದಾರ್ಶನಿಕ ಪರಂಪರೆಯಲ್ಲಿ "ಬೆಳಕೆ" ಶಾಂತಿ, ಜ್ಞಾನ, ಮತ್ತು ದಿವ್ಯಪ್ರಭುತ್ವವನ್ನು ಪ್ರತಿಪಾದಿಸುತ್ತದೆ.

ಕನ್ನಡ ರೂಪಾಂತರವು ಕರ್ನಾಟಕದ ನೈಸರ್ಗಿಕ ಪರಿಸರವನ್ನು ತೋರಿಸಲು ಈ ಅಂಶಗಳನ್ನು ಹೊಸರೂಪದಲ್ಲಿ ಅಳವಡಿಸುತ್ತದೆ. ಉದಾಹರಣೆಗೆ: 'ಬೆಟ್ಟಹೊಳೆಗಳ ಹಾದು, ಇರುಳನ್ನು ನೂಕದಿಹೆಯಾ?' ಎಂಬ ಸಾಲನ್ನು ನೋಡಬಹುದು.

**ಲಯ ಮತ್ತು ಭಾವನಾತ್ಮಕ ಪ್ರಭಾವ**

ಈ ಎರಡು ಕವನಗಳು ಭಾವನಾತ್ಮಕ ಪ್ರಭಾವ ಮತ್ತು ಆಳವಾದ ಆಧ್ಯಾತ್ಮಿಕ ತೀವ್ರತೆಯನ್ನು ಹೊಂದಿವೆ. ಕನ್ನಡ ಅನುವಾದವು ಮೂಲದಲ್ಲಿರುವ ಶರಣಾಗುಣದ ಧಾಟಿಯನ್ನು ಕಾಪಾಡಿಕೊಂಡರೂ, ಅದರಲ್ಲಿ ಹೆಚ್ಚು ಲಾಲಿತ್ಯ ಮತ್ತು ಭಾವೋದ್ರೇಕವನ್ನು ಸೇರಿಸುತ್ತದೆ. ಕನ್ನಡದ ಸಾಲುಗಳು: 'ಬೆಳಗಾಗ ಹೊಳೆಯದೇ ಹಿಂದೊಮ್ಮೆ ನಾನೊಲಿದು ಈ ನಡುವೆ ಕಳೆಕೊಂಡ ದಿವ್ಯಮುಖ ನಗುತ?' ಈ ಭಾವೋದ್ರೇಕದ ಅಂಶವು ಕನ್ನಡ ಕಾವ್ಯದ ಭಕ್ತಿಪರಂಪರೆಯ ಪ್ರಭಾವವನ್ನು ಪ್ರತಿಫಲಿಸುತ್ತದೆ, ಅಲ್ಲಿ ದಿವ್ಯನೊಂದಿಗೆ ವೈಯಕ್ತಿಕ ಮತ್ತು ಹೃದಯಸ್ಪರ್ಶಿ ಸಂಬಂಧ ಮುಖ್ಯವಾಗಿದೆ.

**ಮೂಲನಿಷ್ಠೆ**

ಬಿ.ಎಂ. ಶ್ರೀಕಂಠಯ್ಯ ಅವರ ಗೀತೆಯು ರೂಪಾಂತರವಾದರೂ ಅದರಲ್ಲಿ ಮೂಲನಿಷ್ಠೆಯಿದೆ. ಉದಾಹರಣೆ: ಬೆಳಕು ಎಂಬ ಮಾರ್ಗದರ್ಶಕ ಶಕ್ತಿ ಮತ್ತು ಮಾತನಾಡುವ ವ್ಯಕ್ತಿಯ ಮಾನವೀಯ ಮಿತಿಗಳನ್ನು ಒಪ್ಪಿಕೊಳ್ಳುವ ಮನಸ್ಥಿತಿಯನ್ನು ಅದೇರೀತಿ ಉಳಿಸಿದ್ದಾರೆ. 'ಕೈ ಹಿಡಿದು ನಡೆಸೆನ್ನನು' ಎಂಬ ವಾಕ್ಯದ ಪುನರಾವೃತ್ತಿಯು ಇಂಗ್ಲಿಷ್ ಗೀತೆಯ ಧಾಟಿಯನ್ನು ಹೋಲುತ್ತದೆ. ಮೂಲ ಭಾವವನ್ನು ಮತ್ತು ಭಾವನಾತ್ಮಕ ಪ್ರಭಾವವನ್ನು ಉಳಿಸುತ್ತದೆ. ಈ ಪುನರಾವೃತ್ತಿಯು ಕನ್ನಡ ಸಾಹಿತ್ಯದ ಜಾನಪದ ಮತ್ತು ಸಂಗೀತ ಪರಂಪರೆಯೊಂದಿಗೆ ಸರಿಹೊಂದುತ್ತದೆ, ಇದು ಹಾಡಲು ಹೆಚ್ಚು ಅನುಕೂಲ ಮಾಡಿಕೊಡುತ್ತದೆ. ಕನ್ನಡ ಕಾವ್ಯದ ಛಂದಸ್ಸು ಮತ್ತು ಲಾಲಿತ್ಯವೂ ಶ್ರೀಯವರ ರೂಪಾಂತರದ ಮತ್ತೊಂದು ಪ್ರಮುಖ ಲಕ್ಷಣವಾಗಿದೆ. ಶ್ರೀಕಂಠಯ್ಯ ಅವರ ಗೀತೆಯು ಆಧ್ಯಾತ್ಮಿಕ ಸಂದೇಶವನ್ನು ಕಾಪಾಡುವುದರ ಜೊತೆಗೆ, ಛಂದಸ್ಸು ಮತ್ತು ಸಂಗೀತ ಭರಿತ ಶೈಲಿಗಳನ್ನು ಸೇರಿಸುತ್ತದೆ, ಇದು ಭಾವನಾತ್ಮಕ ಪ್ರತಿಕ್ರಿಯೆಯನ್ನು ಪ್ರೇರೇಪಿಸುತ್ತದೆ.

**ಪರಾಮರ್ಶನ ಗ್ರಂಥಗಳು:**


- ಎಲ್.ಎಸ್. ಶೇಷಗಿರಿ ರಾವ್–ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತಪುಸ್ತಕ, ನಾಲ್ಕನೆಯ ಆವೃತ್ತಿ–2008
- ಡಾ. ಶ್ರೀನಿವಾಸ ಹಾವನೂರ–ಹೊಸಗನ್ನಡ ಅರುಣೋದಯ, ಕನ್ನಡ ಪುಸ್ತಕ ಪ್ರಾಧಿಕಾರ, ತೃತೀಯ ಮುದ್ರಣ–2011
- ಎಸ್. ಅನಂತನಾರಾಯಣ–ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ, ಡಿ.ವಿ.ಕೆ. ಮೂರ್ತಿ–2011
- ರಹಮತ್ ತರೀಕೆರೆ (ಸಂ)–ಇಂಗ್ಲಿಷ್ ಗೀತಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 2007


❖❖❖

# ಹಂಪಿ ಸಾಂಸ್ಕೃತಿಕ ಚರಿತ್ರೆ ಹಾಗೂ ಪ್ರವಾಸೋದ್ಯಮ

**ಡಾ. ಕೆ. ಮಹೇಶ್**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸ.ಪ್ರ.ದ. ಕಾಲೇಜು, ಕಂಪ್ಲಿ, ಬಳ್ಳಾರಿ ಜಿಲ್ಲೆ–583231

**ಪ್ರಸ್ತಾವನೆ**

ಪ್ರವಾಸೋದ್ಯಮವೆನ್ನುವುದು ಆಧುನಿಕ ಜಗತ್ತಿನಲ್ಲಿ ಒಂದು ದೊಡ್ಡ ಉದ್ಯಮವಾಗಿ ಪರಿವರ್ತನಾ ದಿಕ್ಕಿನಲ್ಲಿ ಸಾಗುತ್ತಿದೆ. ಹಂಪಿಯ ಸಾಂಸ್ಕೃತಿಕ ಇತಿಹಾಸ ಮತ್ತು ಪರಿಸರವು ಪ್ರವಾಸೋದ್ಯಮವನ್ನು ಬೆಳೆಸಿದ ಬಗೆ ಮತ್ತು ಅದಕ್ಕೆ ಪೂರಕವಾಗಿ ಬೆಳೆದ ಸ್ಥಳೀಯ ವ್ಯಾಪಾರೋದ್ಯಮದ ಬಗೆದೀ ಲೇಖನ ಬೆಳಕು ಚೆಲ್ಲುತ್ತದೆ. ಪ್ರವಾಸೋದ್ಯಮವೆನ್ನುವುದು ಆಧುನಿಕವಾಗಿ ಒಂದು ವ್ಯಾಪಾರದ ಉದ್ದಿಮೆಯಾಗಿ ಮುಂಚೂಣಿಯಲ್ಲಿರುವುದನ್ನು ನಾವು ಇಂದು ಗಮನಿಸುತ್ತೇವೆ. ಪ್ರವಾಸೋದ್ಯಮವು ಇಂದು ಬಂಡವಾಳ ಹೂಡಿಕೆಯನ್ನು ತನ್ನತ್ತ ಸೆಳೆಯುತ್ತಿರುವುದು ಕಂಡುಬರುತ್ತದೆ. ಇಲ್ಲಿ ಎರಡು ಮುಖ್ಯ ಸಮಸ್ಯೆಗಳನ್ನು ಮಾತ್ರ ವಿಶ್ಲೇಷಣೆಗೆ ಒಳಪಡಿಸಲಾಗುತ್ತದೆ.

ಹಂಪಿಯನ್ನು ಕುರಿತಾದ ಆಧುನಿಕ ಪ್ರವಾಸೋದ್ಯಮವೆನ್ನುವ ಅಧ್ಯಯನದಲ್ಲಿ ನಾವು ಮೊಟ್ಟಮೊದಲಿಗೆ ಹಂಪಿ ಕ್ಷೇತ್ರದ ಚಾರಿತ್ರಿಕ ಹಿನ್ನೆಲೆಯನ್ನು ಸಹ ಪರಿಗಣಿಸಬೇಕಾಗುತ್ತದೆ. ಏಕೆಂದರೆ ಯಾವುದೇ ಒಂದು ಕ್ಷೇತ್ರ ಅಥವಾ ಪ್ರದೇಶವು ಪ್ರವಾಸೋದ್ಯಮದ ಸ್ಥಳದಲ್ಲಿ ಗುರುತಿಸಿಕೊಳ್ಳಬೇಕಾದರೆ ತನ್ನದೇ ಆದ ಮಹತ್ವವನ್ನು ಪಡೆದಿರಬೇಕಾಗುತ್ತದೆ. ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ, ನೈಸರ್ಗಿಕವಾಗಿ ಛಾಪನ್ನು ಮೂಡಿಸಿರಬೇಕು. ಇಲ್ಲದಿದ್ದರೆ ಅದು ವಿಶ್ವಮಾನ್ಯತೆಯ ಪಟ್ಟಿಯಲ್ಲಿ ಬರುವುದಕ್ಕೆ ಸಾಧ್ಯವಿಲ್ಲ. ಪ್ರವಾಸಿಗರ ಮನತಣಿಸುವ ಕ್ಷೇತ್ರವಾದರೆ ಸಾಕು ಪ್ರವಾಸಿಗ ಬರುತ್ತಾನೆ ಮತ್ತು ಪ್ರವಾಸೋದ್ಯಮವು ಬೆಳೆಯುತ್ತದೆ. ಅಲ್ಲದೇ, ಪ್ರವಾಸೋದ್ಯಮದಲ್ಲಿ ತೊಡಗಿಸಿಕೊಂಡ ಉದ್ದಿಮೆದಾರರು, ವ್ಯಾಪಾರಿಗಳು ಕೂಡಾ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ.

*****

ವಿಜಯನಗರ ಸಾಮ್ರಾಜ್ಯವು ಹುಟ್ಟುವುದಕ್ಕಿಂತ ಪೂರ್ವದಲ್ಲಿ ಈ ಪ್ರದೇಶವು ಪೌರಾಣಿಕವಾಗಿ ಗುರುತಿಸಿಕೊಂಡಿದ್ದಿತು. ಅಲ್ಲದೆ, ಪ್ರಾಚೀನ ಮಾನವರು ವಾಸಮಾಡಿದ ಸ್ಥಳವಾಗಿ ಕಂಡುಬಂದಿದೆ. ಹಳೆಶಿಲಾಯುಗದ ಜನರು ಈ ಸುಂದರ ಪ್ರದೇಶದಲ್ಲಿ ವಾಸ ಮಾಡಿದ ಕುರುಹುಗಳು ಹಂಪಿಯ ಗುಡ್ಡಬೆಟ್ಟಗಳಲ್ಲಿ ಇಂದಿಗೂ ಕಂಡು ಬರುತ್ತವೆ. ನಮಗೆ ಕರ್ನಾಟಕನ್ನಾಳಿದ ರಾಜಮನೆತನಗಳಲ್ಲಿ ಮೊದಲು ಹಂಪಿ ಪ್ರದೇಶವನ್ನಾಳಿದ ಅರಸುಮನೆತನದವರೆಂದರೆ ಬಾದಾಮಿ ಚಾಲುಕ್ಯರು. ತದನಂತರ ಈ ಪ್ರದೇಶವು ಹೊಯ್ಸಳರ ನೇರ ಆಳ್ವಿಕೆಯಲ್ಲಿ ನಿರ್ಮಾಣವಾದ ಹಲವು ಕಟ್ಟಡಗಳು ಇಂದಿಗೂ ಉಳಿದುಕೊಂಡು ಬಂದಿವೆ. ಇಲ್ಲಿನ ನೈಸರ್ಗಿಕವಾದ ತಾಣ ಮತ್ತು ನದಿ ಇರುವುದು ರಾಜಧಾನಿ ಉದ್ಭವವಾಗಲಿಕ್ಕೆ ಕಾರಣವಾಯಿತು. ಮುಂದೆ ವಿಜಯನಗರ ಸಾಮ್ರಾಜ್ಯವು ದಕ್ಷಿಣ ಭಾರತದ ದೊಡ್ಡ ಅರಸುಮನೆತನವಾಗಿ ಬೆಳೆಯುವಲ್ಲಿ ಕ್ರಿ.ಶ.1336ರಲ್ಲಿ ಸಾಮ್ರಾಜ್ಯದ ಸ್ಥಾಪನೆಯಾಯಿತು. ಹಂಪಿಯನ್ನು

ರಾಜಧಾನಿಯಾಗಿ ಮಾಡಿಕೊಂಡು ಸುಮಾರು 250 ವರ್ಷಗಳ ಕಾಲ ಆಳ್ವಿಕೆಯನ್ನು ಮಾಡಿ ನಾಲ್ಕು ವಂಶಸ್ಥರು ಹಂಪಿಯನ್ನು ಆಳಿದರು. ಅವರಲ್ಲಿ ಸಂಗಮ. ಸಾಳುವ, ತುಳುವ, ಅರವೀಡು ಮನೆತನಗಳು ಒಬ್ಬರ ನಂತರ ಒಬ್ಬರು ಆಳ್ವಿಕೆ ಮಾಡಿದರು. ವಿಜಯನಗರದ ಸ್ಥಾಪನೆ 1336ರಲ್ಲಿ ಆಗಿದ್ದರೂ ಅವರು ಸ್ವಾತಂತ್ರ ಆಳ್ವಿಕೆ ನಡೆಸಿದ್ದು ಕ್ರಿ.ಶ. 1356ರ ನಂತರ. ಅವರಲ್ಲಿ ಸಂಗಮವಂಶದ ಒಂದನೇ ಬುಕ್ಕಮಹಾರಾಜನು ಪ್ರಥಮ ಅರಸನಾಗಿ ಪಟ್ಟಕ್ಕೆ ಬರುತ್ತಾನೆ. ಸಂಗಮವಂಶದಲ್ಲಿ ಪ್ರಬಲ ದೊರೆಯಾಗಿ ಮುಂದೆ ಇಮ್ಮಡಿ ದೇವರಾಯನು ಕಾಣಿಸಿಕೊಂಡು ವಿಜಯನಗರ ಸಾಮ್ರಾಜ್ಯವನ್ನು ದಕ್ಷಿಣ ಭಾರತದಾದ್ಯಂತ ವಿಸ್ತರಿಸುತ್ತಾನೆ.

2ನೇ ದೇವರಾಯನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯವು ಉನ್ನತವಾದ ಸ್ಥಾನವನ್ನು ಪಡೆದುಕೊಂಡು ಅಂತರ್‌ರಾಷ್ಟ್ರೀಯ ಖ್ಯಾತಿಯನ್ನು ಪಡೆಯುತ್ತದೆ. ಅಂದೇ ವಿಜಯನಗರ ರಾಜಧಾನಿ ಹಂಪಿಯು ಒಂದು ಪ್ರವಾಸಿ ತಾಣವಾಗಿ ಗುರುತಿಸಿಕೊಂಡು ಹಲವಾರು ದೇಶಗಳಿಂದ ರಾಯಭಾರಿಗಳು, ವ್ಯಾಪಾರಿಗಳು, ಯಾತ್ರಿಕರು ಹಂಪಿಗೆ ಭೇಟಿ ನೀಡಿರುವುದು ಗಮನಿಸಬಹುದು. ಅದರಲ್ಲಿ ಮುಖ್ಯವಾಗಿ ಅಬ್ದುಲ್ ರಜಾಕ್‌ನು ಪರ್ಶಿಯಾ ದೇಶದಿಂದ ಬಂದ ಪ್ರವಾಸಿಯಾಗಿದ್ದಾನೆ. ಮುಂದೆ ಹಲವಾರು ದೇಶಗಳಿಂದ ವಿದೇಶಿ ಪ್ರವಾಸಿಗರು ಹೆಚ್ಚು ಹೆಚ್ಚು ಬರಲು ಪ್ರಾರಂಭಿಸಿದರು. ಹಂಪಿಯು ಒಂದು ಅಂತರ್‌ರಾಷ್ಟ್ರೀಯ ವ್ಯಾಪಾರ ಕೇಂದ್ರವಾಗಿ ಮೊದಲಿನಿಂದಲೂ ಪ್ರಸಿದ್ಧಿ ಪಡೆದ ಸ್ಥಳವಾಗಿದೆ.

ಮುಂದೆ ಸಾಳುವ ವಂಶಸ್ಥರು ಆಳ್ವಿಕೆಗೆ ಬಂದ ನಂತರ ಸಾಳುವ ನರಸಿಂಹರಾಯರು ಪಟ್ಟಕ್ಕೆ ಬಂದರು. ಇವರ ಕಾಲವು ಸಾಧಾರಣ ಸ್ಥಿತಿಯಲ್ಲಿ ಮುಂದುವರೆಯಿತು. ತದನಂತರ, ತುಳುವ ಮನೆತನದಲ್ಲಿ ಶ್ರೀಕೃಷ್ಣ ದೇವರಾಯನು ಪ್ರಸಿದ್ದ ದೊರೆಯಾಗಿ ದಕ್ಷಿಣ ಭಾರತವನ್ನು ಆಳಿದನು. ಇವರು ಉತ್ತಮ ಆಳ್ವಿಕೆ ನಡೆಸುವುದರ ಜೊತೆಗೆ ಅನೇಕ ಸುಧಾರಣೆಗಳು ಮತ್ತು ಪ್ರಜಾಹಿತ ಕಾರ್ಯಗಳನ್ನು ಕೈಗೊಂಡರು. ಹಂಪಿಯಲ್ಲಿ ನಿರ್ಮಿತವಾದ ದೇವಾಲಯಗಳು, ಕಟ್ಟಡಗಳು, ದೇವಾಲಯಗಳ ಮುಂದಿನ ರಥವೀದಿಗಳು ಅಥವಾ ಬಜಾರುಗಳು ಅಲ್ಲದೆ, ಅರಸರು ಕಟ್ಟಿಸಿದ ಮಹಾಕಟ್ಟಡಗಳ ನಿರ್ಮಾಣಗಳು ಅದ್ಭುತವಾಗಿ ಮೂಡಿಬಂದಿರುವುದು ಇಂದು ಪ್ರವಾಸಿಗರ ಆಕರ್ಷಣೀಯ ತಾಣವಾಗಿರುವುದಕ್ಕೆ ಕಾರಣವಾಗಿದೆ. ವಿಜಯನಗರದ ಅರಸರು ವಿದೇಶಗಳೊಂದಿಗೆ ಹೊಂದಿದ್ದ ವ್ಯಾಪಾರ ಸಂಬಂಧ ಪ್ರವಾಸಿಗರ ಸಂಖ್ಯೆಯನ್ನು ಹೆಚ್ಚಿಸುತ್ತಲಿತ್ತು. ಅರಬ್, ಪರ್ಶಿಯಾ, ಯುರೋಪಾ, ಶ್ರೀಲಂಕಾ ಮುಂತಾದ ದೇಶಗಳೊಂದಿಗೆ ನಿಕಟ ಸಂಪರ್ಕವನ್ನು ಹಂಪಿಯ ಅರಸರು ಹೊಂದಿದ್ದರು. ಅಂದಿನ ಸಾಮ್ರಾಜ್ಯದ ಪ್ರಸಿದ್ಧಿಯ ಕಾರಣವಾಗಿ ಇಂದು ಹಂಪಿಯನ್ನು ವಿಶ್ವಮಾನ್ಯತೆಯ ಪಟ್ಟಿಯಲ್ಲಿ ಸೇರಿಸಿರುವುದು ಗಮನಾರ್ಹವಾಗಿದೆ. ಇದರಿಂದ ಇಂದು ವಿವಿಧ ದೇಶಗಳಿಂದ ಸಾವಿರಾರು ಸಂಖ್ಯೆಯಲ್ಲಿ ಯಾತ್ರಾರ್ಥಿಗಳು, ಪ್ರವಾಸಿಗರು ತಂಡೋಪತಂಡವಾಗಿ ಬರುವುದು ಸಾಮಾನ್ಯವಾಗಿದೆ. 20ನೇ ಶತಮಾನದಲ್ಲಿ ಪ್ರವಾಸ ಒಂದು ಉದ್ದಿಮೆಯಾಗಿ ಬೆಳೆದ ಮೇಲೆ ಹಂಪಿಗೆ ಬರುವ ಪ್ರವಾಸಿಗರನ್ನು ಆಕರ್ಷಿಸಲು ಉದ್ದಿಮೆಯನ್ನು ಪ್ರೋತ್ಸಾಹಿಸಲು ಸ್ಥಳೀಯರು ಕೈಗೊಂಡ ಕಾರ್ಯಗಳು ಮತ್ತು ಅವರು ತಮ್ಮನ್ನು ತೊಡಗಿಸಿಕೊಂಡ ರೀತಿಯನ್ನು ನೋಡಬಹುದಾಗಿದೆ.

**ಹಂಪಿ ಪ್ರವಾಸೋದ್ಯಮ ಬೆಳವಣಿಗೆ**

ಹಂಪಿ ಪ್ರವಾಸೋದ್ಯಮವು ಇಂದು ಭಾರತದ ಆಕರ್ಷಣೀಯ ಕೇಂದ್ರವಾಗಿ ಬೆಳೆಯತೊಡಗಿದೆ. 1990ರ ನಂತರ ವಿದೇಶಿ ಪ್ರವಾಸಿಗರು ಭಾರತಕ್ಕೆ ಬರುವುದು ಹೆಚ್ಚಿದೆ. ಹಂಪಿಗೆ ಬರುವ ವಿದೇಶಿಯ ಹಾಗೂ ದೇಶಿಯ ಪ್ರವಾಸಿಗರು ಹಂಪಿ ಸುತ್ತಮುತ್ತಲ ಪ್ರದೇಶಗಳಲ್ಲಿ ಉಳಿಯುತ್ತಾರೆ. ಪ್ರವಾಸಿಗರಿಗೆ ಅಗತ್ಯವಿರುವ ಸರಕು ಮತ್ತು ಸೇವೆಗಳನ್ನು ಸ್ಥಳೀಯ ವ್ಯಾಪಾರಿಗಳು ಒದಗಿಸುತ್ತಾರೆ. ಮಾಧ್ಯಮ ಸಂಪರ್ಕಗಳಿಂದ 1991ರ ನಂತರ ಹಂಪೆ ಸಾಕಷ್ಟು ಅಭಿವೃದ್ಧಿಯನ್ನು ಹೊಂದಿದೆ. ಪ್ರವಾಸೋದ್ಯಮದ ಪ್ರಾಮುಖ್ಯತೆಯನ್ನು ಮನಗಂಡು ಭಾರತ ಸರಕಾರ ಕೂಡ ಅವರ ಏಳಿಗೆಗೆ ಪೂರಕವಾಗುವಂತಹ ನೀತಿಯನ್ನು ಜಾರಿಗೊಳಿಸಿದೆ. 1992ರಲ್ಲಿ ಭಾರತ ಸರಕಾರವು ಪ್ರವಾಸೋದ್ಯಮದ ರಾಷ್ಟ್ರೀಯ ಕ್ರಿಯಾ ಯೋಜನೆಯನ್ನು ಜಾರಿಗೊಳಿಸಿತು. ಪ್ರವಾಸೋದ್ಯಮದ ಅಭಿವೃದ್ಧಿಗೆ ಕೇಂದ್ರ ಸರಕಾರದಿಂದ ಸೀಮಿತ ಹಣಕಾಸಿನ ನೆರವು ರಾಜ್ಯ ಸರಕಾರಗಳಿಗೆ ದೊರಕುತ್ತದೆ.

ಕರ್ನಾಟಕದ ಪ್ರವಾಸೊದ್ಯಮ ಇಲಾಖೆ 1997ರಲ್ಲಿ ಪ್ರವಾಸೋದ್ಯಮ ಕರಡು ನೀತಿಯನ್ನು ರಚಿಸಿತು. ಈ ಹೊಸ ಪ್ರವಾಸೋದ್ಯಮದ ನೀತಿಯ ಮುಖ್ಯ ಉದ್ದೇಶ ಪ್ರವಾಸೋದ್ಯಮ ಸಂಬಂಧಿತ ಚಟುವಟಿಕೆಗಳನ್ನು ಅಭಿವೃದ್ದಿಪಡಿಸುವುದು; ಪುರಾತನ ಮತ್ತು ಐತಿಹಾಸಿಕ ಸ್ಥಳಗಳನ್ನು ಸಂರಕ್ಷಿಸುವುದು. ಈ ಉದ್ದೇಶಗಳ ಸಫಲತೆಗಾಗಿ ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಪ್ರವಾಸೋದ್ಯಮ ಘಟಕಗಳನ್ನು ಹೊಂದಿದೆ. ಹೊಸಪೇಟೆಯಲ್ಲಿ ಹಂಪಿ ಅಭಿವೃದ್ಧಿ ಪ್ರಾಧಿಕಾರ ಪ್ರವಾಸೋದ್ಯಮ ಇಲಾಖೆ ಮತ್ತು ಕಮಲಾಪುರದಲ್ಲಿ ಭಾರತ ಪುರಾತತ್ವ ಸಂಗ್ರಹಾಲಯ ಹಾಗೂ ರಾಜ್ಯ ಪುರಾತತ್ವ ಸಂಗ್ರಹಾಲಯ ನಿರ್ದೇಶನಾಲಯಗಳು ಹುಟ್ಟಿಕೊಂಡ ಮೇಲೆ ಹಂಪಿ ಪ್ರದೇಶವನ್ನು ಆಧುನಿಕವಾಗಿ ಶೋಧನೆ ಮಾಡಿ ಪ್ರಾಚೀನ ನೆಲೆಗಳನ್ನು ಅಭಿವೃದ್ಧಿಪಡಿಸುವುದರ ಜೊತೆಯಲ್ಲಿ ಹಂಪಿಯನ್ನು ಒಂದು ವಿಶ್ವ ಭೂಪಟದಲ್ಲಿ ತರಲು ಪ್ರಯತ್ನಿಸಿದ್ದಾರೆ.

**ಹಂಪಿ ಪ್ರವಾಸೋದ್ಯಮದಲ್ಲಿ ಸ್ಥಳೀಯ ವ್ಯಾಪಾರಸ್ಥರು**

ಹಂಪಿಗೆ ಬರುವ ಪ್ರವಾಸಿಗರಿಗೆ ತೃಪ್ತಿಪಡಿಸಲು ಹಾಗೂ ಅವರು ಹಂಪಿಯಲ್ಲಿ ತಂಗಿದಾಗ ಅವರ ಅಭಿರುಚಿ ಮತ್ತು ಬೇಡಿಕೆಗಳನ್ನು ಈಡೇರಿಸಲು ಸ್ಥಳೀಯರು ಯಾವ ರೀತಿಯ ಸೇವಾ ಸೌಲಭ್ಯಗಳನ್ನು ಒದಗಿಸುತ್ತಾರೆ ಎನ್ನುವುದನ್ನು ನೋಡಬಹುದು. ಇದರಲ್ಲಿ ವಿದೇಶಿ ಮತ್ತು ದೇಶಿ ಪ್ರವಾಸಿಗರ ಬೇಡಿಕೆಗಳನ್ನು ಪೂರೈಸಲು ಹುಟ್ಟಿಕೊಂಡ ವಿವಿಧ ಸೌಲಭ್ಯಗಳ ಪರಿಕರಗಳನ್ನು ಸ್ಥೂಲವಾಗಿ ಈ ಕೆಳಗಿನಂತೆ ವಿಂಗಡಿಸಬಹುದು. ಊಟ ಮತ್ತು ತಂಗುವ ವ್ಯವಸ್ಥೆ, ಸಾರಿಗೆ ಮತ್ತು ಸಂಪರ್ಕ ಸೌಲಭ್ಯಗಳು, ವೈದ್ಯಕೀಯ ಸೌಲಭ್ಯಗಳು, ಕಾನೂನು ವ್ಯವಸ್ಥೆ ಮತ್ತು ಇತರ ಸೌಲಭ್ಯಗಳು.

ಸೇವಾ ಸೌಲಭ್ಯಗಳಲ್ಲಿ ದುಡಿಯುವರಲ್ಲಿ ಸಂಘಟಿತ ವಲಯ ಮತ್ತು ಅಸಂಘಟಿತ ವಲಯಗಳೆಂದು ಎರಡು ರೀತಿಯ ಸೇವಾ ವಲಯಗಳನ್ನು ಗುರುತಿಸಬಹುದು. ಸಂಘಟಿತ ವಲಯಗಳಲ್ಲಿ ಮುಖ್ಯವಾಗಿ ಅತಿಥಿ ಗೃಹಗಳು, ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು, ಬಂಡಿ ಹೋಟೆಲ್‌ಗಳು, ಕಿರಾಣಿ ಅಂಗಡಿಗಳು, ಪೆಟ್ಟಿಗೆ ಅಂಗಡಿಗಳು, ಆಟಿಕೆ ಸಾಮಾನು ಅಂಗಡಿ, ಸಂಚಾರಿ ಆಟಿಕೆ ಸಾಮಾನು ಅಂಗಡಿ, ತೆಂಗಿನಕಾಯಿ

ಅಂಗಡಿ, ಸ್ಟೇಷನರಿ ಅಂಗಡಿಗಳು, ಹಣ್ಣು ಮತ್ತು ತರಕಾರಿ ಅಂಗಡಿಗಳು, ತಂಪುಪಾನೀಯ ಅಂಗಡಿಗಳು, ಪುಸ್ತಕದ ಅಂಗಡಿಗಳು, ಬಳೆ ಅಂಗಡಿ, ಪುರಾತನ ವಸ್ತುಗಳ ಅಂಗಡಿ, ಮಿಠಾಯಿ ಅಂಗಡಿ, ಲಂಬಾಣಿ ಮತ್ತು ಸಿದ್ದ ಉಡುಪು ಅಂಗಡಿ, ಇಂಟರ್‌ನೆಟ್ ಅಂಗಡಿಗಳು, ಟ್ರಾವೆಲರ್ಸ್ ಅಂಗಡಿಗಳು, ವಿದೇಶಿ ವಿನಿಮಯ ಅಂಗಡಿಗಳು, ದ್ವಿಚಕ್ರ ವಾಹನಗಳ ಬಾಡಿಗೆ ಅಂಗಡಿಗಳು ಇತ್ಯಾದಿಗಳು ಸಂಘಟಿತ ವಲಯದಲ್ಲಿ ಬರುತ್ತವೆ.

ಇಲ್ಲಿ ಸ್ಥಳೀಯರು ಮತ್ತು ಹೊರ ರಾಜ್ಯಗಳಿಂದ ಬಂದ ಜನರು ತಮ್ಮದೇ ಸ್ವತಃ ಖರ್ಚಿನಲ್ಲಿ ಪ್ರವಾಸಿಗರ ಸೇವೆಗೆ ಅನುವು ಮಾಡಿಕೊಡುವಲ್ಲಿ ಪ್ರವಾಸಿಗರಿಗೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸುತ್ತಾರೆ. ಇವರು ತಮ್ಮದೇ ಆದ ಸಂಘಟಿತ ವಲಯವನ್ನು ರೂಪಿಸಿಕೊಂಡು ವ್ಯಾಪಾರವನ್ನು ಏಕದರಗಳಲ್ಲಿ ಮಾಡುತ್ತಾರೆ. ಇವರಿಗೆ ಕಾನೂನಿನ ಚೌಕಷ್ಟು ರಕ್ಷಣೆ ಮಾಡಿ ನಿಲ್ಲುತ್ತದೆ. ಇವರು ತಮ್ಮ ಸೇವಾ ವಲಯವನ್ನು ಪ್ರಾರಂಭಿಸಬೇಕಾದರೆ ಹಂಪಿ ಗ್ರಾಮ ಪಂಚಾಯತಿಯ ಅನುಮತಿಯನ್ನು ಪಡೆದುಕೊಂಡು ಪ್ರವಾಸಿಗರ ಬೇಡಿಕೆಗಳನ್ನು ಪೂರೈಸುವ ನಿಟ್ಟಿನಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ.

ಹಂಪಿ ಗ್ರಾಮದಲ್ಲಿ ಸೇವಾವಲಯದ ಸಂಘಟಿತ ವಲಯದಲ್ಲಿ ತೊಡಗಿಸಿಕೊಂಡ ಸ್ಥಳೀಯ ವ್ಯಾಪಾರಿಗಳ ಸಂಖ್ಯೆ ಮತ್ತು ವೃತ್ತಿಗಳನ್ನು ಈ ಕೆಳಗಿನಂತೆ ನೋಡಬಹುದು.

| ಕ್ರ.ಸಂ | ವೃತ್ತಿಗಳು | ಸಂಖ್ಯೆ |
|---|---|---|
| 01. | ಅತಿಥಿ ಗೃಹಗಳು | 46 |
| 02. | ರೆಸ್ಟೋರೆಂಟ್‌ಗಳು | 15 |
| 03. | ಹೋಟೆಲ್‌ಗಳು | 20 |
| 04. | ಬಂಡಿ ಹೋಟೆಲ್‌ಗಳು | 01 |
| 05. | ಕಿರಾಣಿ ಅಂಗಡಿಗಳು | 07 |
| 06. | ಪೆಟ್ಟಿಗೆ ಅಂಗಡಿಗಳು | 40 |
| 07. | ಆಟಿಕೆ ಸಾಮಾನು ಅಂಗಡಿ | 04 |
| 08. | ಸಂಚಾರಿ ಸಾಮಾನು ಅಂಗಡಿ | 07 |
| 09. | ತೆಂಗಿನಕಾಯಿ ಅಂಗಡಿ | 07 |
| 10. | ಸ್ಟೇಷನರಿ ಅಂಗಡಿ | 03 |
| 11. | ಹಣ್ಣು ಮತ್ತು ತರಕಾರಿ | 17 |
| 12. | ತಂಪುಪಾನೀಯ ಅಂಗಡಿ | 05 |
| 13. | ಐಸ್‌ಕ್ಯಾಂಡಿ ತಳ್ಳುವ ಬಂಡಿಗಳು | 05 |
| 14. | ಪುಸ್ತಕದ ಅಂಗಡಿ | 04 |
| 15. | ಬಳೆ ಅಂಗಡಿ | 02 |
| 16. | ಪುರಾತನ ವಸ್ತುಗಳ ಅಂಗಡಿ | 03 |
| 17. | ಮಿಠಾಯಿ ಅಂಗಡಿ | 02 |
| 18. | ಲಂಬಾಣಿ ಮತ್ತು ಸಿದ್ದ ಉಡುಪು ಅಂಗಡಿ | 33 |

| | | |
|---|---|---|
| 19. | ಎಸ್.ಟಿ.ಡಿ. ಬೂತ್‌ಗಳು | 10 |
| 20. | ಇಂಟರ್ ನೆಟ್ ಅಂಗಡಿ | 08 |
| 21. | ಟ್ರಾವೆಲ್ಸ್ ಅಂಗಡಿ | 07 |
| 22. | ವಿದೇಶಿವಿನಿಮಯ ಅಂಗಡಿ | 06 |
| 23. | ದ್ವಿಚಕ್ರ ವಾಹನಗಳ ಬಾಡಿಗೆ ಅಂಗಡಿ | 06 |
| 24. | ಪ್ರವಾಸಿ ಮಾರ್ಗದರ್ಶಿಗಳು | 24 |

ಈ ಮೇಲಿನ ಕೋಷ್ಠಕದಲ್ಲಿ ಪ್ರವಾಸಿಗರ ಬೇಡಿಕೆಗಳು ಮತ್ತು ಅವರ ತೃಪ್ತಿಯಾಗುವ ವಲಯಗಳನ್ನು ಮಾತ್ರ ಪರಿಗಣಿಸಲಾಗಿದೆ. ಇಲ್ಲಿ ಸಂಘಟಿತ ವಲಯಗಳನ್ನು ಮಾತ್ರ ಮೇಲೆ ತಿಳಿಸಲಾಗಿದೆ ದೇಶಿಯರನ್ನು ದೃಷ್ಟಿಯಲ್ಲಿಟ್ಟುಕೊಂಡ ವ್ಯಾಪಾರಿಗಳೇ ಬೇರೆ ಮತ್ತು ವಿದೇಶಿಯರನ್ನು ದೃಷ್ಟಿಯಲ್ಲಿಟ್ಟುಕೊಂಡ ವ್ಯಾಪಾರಿಗಳೇ ಬೇರೆ. ಇಲ್ಲಿ ವಿದೇಶೀಯರಿಗೆ ಬೇಕಾಗುವ ಸೇವಾ ಸೌಲಭ್ಯಗಳಲ್ಲಿ ಹೆಚ್ಚಿನದಾಗಿ ವಿದೇಶಿ ಅಭಿರುಚಿಗೆ ತಕ್ಕಂತೆ ಅವರನ್ನು ತೃಪ್ತಿಪಡಿಸುವುದು ವ್ಯಾಪಾರಿಗಳ ಕರ್ತವ್ಯವಾಗಿರುವುದರಿಂದ ಇದರಲ್ಲಿ ಹೆಚ್ಚಿನ ಬಂಡವಾಳ ತೊಡಗಿಸಬೇಕಾಗುತ್ತದೆ.

ಅಸಂಘಟಿತ ವಲಯದಲ್ಲಿ ಇನ್ನುಳಿದ ಸೇವಾ ವಲಯಗಳೆಲ್ಲವೂ ಬರುತ್ತವೆ. ಕೂಲಿಕಾರ್ಮಿಕರಿಂದ ಹಿಡಿದು ಸಣ್ಣ ಪುಟ್ಟ ವ್ಯಾಪಾರಿಗಳೆಲ್ಲರೂ ಬರುತ್ತಾರೆ. ಇವರು ದೇಶಿ ಪ್ರವಾಸಿಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಸಣ್ಣ ಹಣವನ್ನು ತೊಡಗಿಸಿ ಜೀವನ ಸಾಗಿಸುವವರಾಗಿರುತ್ತಾರೆ. ಇವರಲ್ಲಿ ನದಿ ದೋಣಿಗಾರರು, ಸೋಡಾ ಮಾರುವವರು, ಎಳೆ ನೀರು ಅಂಗಡಿಯವರು, ಪುಸ್ತಕ ಮಾರುವವರು, ವೇಷಧಾರಿಗಳು, ಕಲ್ಲಿನ ಶಿಲ್ಪಿಗಾರರು, ಹಣ್ಣಿನರಸದ ಅಂಗಡಿಯವರು ಇತ್ಯಾದಿ ಬರುತ್ತಾರೆ.

ಊಟ ಮತ್ತು ತಂಗಲಿಕ್ಕೆ 1970ರ ಹಿಂದೆ ಹಂಪಿಯಲ್ಲಿ ಹೋಟೆಲ್‌ಗಳಾಗಲಿ, ರೆಸ್ಟೋರೆಂಟ್‌ಗಳಾಗಲಿ, ಅತಿಥಿಗೃಹಗಳಾಗಲಿ ಇರಲಿಲ್ಲ. ಹಿರಿಯರ ಪ್ರಕಾರ ಬೀದಿ ಬೀದಿಯಲ್ಲಿ ಎರಡು ಮೂರು ಪೆಟ್ಟಿಗೆ ಅಂಗಡಿ ಮಾದರಿಯ ಹೋಟೆಲ್‌ಗಳು ಇದ್ದವು. ಆಗ ಪ್ರವಾಸಿಗರ ಸಂಖ್ಯೆ ಬಹಳ ಕಡಿಮೆ ಇರುತ್ತಿತ್ತು. ಆದರೆ 90ರ ದಶಕದಲ್ಲಿ ಪ್ರತಿವರ್ಷ 100 ವಿದೇಶಿ ಪ್ರವಾಸಿಗರು ಮತ್ತು ದೇಶಿ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರಲಾರಂಭಿಸಿದರು. ಅಲ್ಲಿಂದ ಹೋಟೆಲ್‌ಗಳು, ಅತಿಥಿಗೃಹಗಳು ಪ್ರಾರಂಭವಾದವು. ಪ್ರವಾಸೋದ್ಯಮದ ಆರಂಭಿಕ ದಿನಗಳಲ್ಲಿ ರಜಪೂತ ಕುಟುಂಬದವರು ಅತಿಥಿಗೃಹ ಮತ್ತು ರೆಸ್ಟೋರೆಂಟ್‌ಗಳನ್ನು ಪ್ರಾರಂಭಿಸಿದರು. 1990ರ ನಂತರ ಪ್ರವಾಸಿಗರ ಸಂಖ್ಯೆ ಹೆಚ್ಚಾದಾಗ ಇವರೊಂದಿಗೆ ಲಿಂಗಾಯತ ಮತ್ತು ಇತರೆ ಜನಾಂಗದ ಜನರು ಈ ವ್ಯವಹಾರದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ತದನಂತರದಲ್ಲಿ ಈ ಒಂದು ವ್ಯಾಪಾರಕ್ಕೆ ಅಥವಾ ವ್ಯವಹಾರಕ್ಕೆ ಬ್ಯಾಂಕ್ ಮತ್ತು ಇತರ ಸರಕಾರದ ಆರ್ಥಿಕ ಸಂಸ್ಥೆಗಳಿಂಧ ಚಿಕ್ಕ ಪ್ರಮಾಣದಲ್ಲಿ ಸಾಲವನ್ನು ನೀಡಲು ಪ್ರಾರಂಭಿಸಿದಾಗ ಹೆಚ್ಚಿನದಾಗಿ ಜನರು ಅದರ ಉಪಯೋಗವನ್ನು ಪಡೆದು ಹೊಸ ವ್ಯವಹಾರಗಳನ್ನು ಪ್ರಾರಂಭಿಸಿದರು.

ಹಂಪಿ ಗ್ರಾಮದಲ್ಲಿ ವೈದ್ಯಕೀಯ ಸೌಲಭ್ಯದಲ್ಲಿ ಮೂರು ಖಾಸಗಿ ಕ್ಲಿನಿಕ್‌ಗಳು ಮತ್ತು ಒಂದು ಸರಕಾರಿ ಆಸ್ಪತೆ ಇದೆ. ವಿದೇಶೀಯರು ಆಲೋಪತಿ ಔಷಧಕ್ಕಿಂತ ಹೋಮಿಯೋಪತಿ ಮತ್ತು ಆಯುರ್ವೇದಿಕ್ ಔಷಧಿಗಳನ್ನು ಹೆಚ್ಚು ಬಳಸುತ್ತಾರೆ

ಎನ್ನುವುದು ವಿಶೇಷ.

ಹಂಪಿಯ ಸ್ಮಾರಕಗಳು ತುಂಬಾ ವಿಶಾಲವಾದ ಪ್ರದೇಶದಲ್ಲಿ ಹರಡಿಕೊಂಡಿರುವುದರಿಂದ ತಮ್ಮ ಸ್ವಂತ ವಾಹನ ಅಥವಾ ತಾವು ಬರುವಾಗಲೇ ಬಾಡಿಗೆಗೆ ಮಾಡಿಕೊಂಡು ಬಂದಿರುವ ವಾಹನ ಇಲ್ಲದಿದ್ದರೆ ಸ್ಥಳೀಯವಾಗಿ ಬೈಸಿಕಲ್ಲು, ಆಟೋ ಮತ್ತು ಕಾರುಗಳನ್ನೇ ಉಪಯೋಗಿಸಬೇಕಾಗಿರುತ್ತದೆ.

ಹಂಪಿಯಲ್ಲಿ ಅಂಚೆಕಛೇರಿ 1973ರಲ್ಲಿ ಆರಂಭವಾಗಿದೆ. ಇದು 1984ರಲ್ಲಿ ಉನ್ನತಿ ಪಡೆದು ಸಬ್ ಪೋಸ್ಟ್ ಆಫೀಸು ಆಗಿದೆ. ಅದೇ ರೀತಿಯಾಗಿ ಹಂಪಿಯಲ್ಲಿ 10 ಎಸ್.ಟಿ.ಡಿ.ಬೂತುಗಳಿವೆ. ಬೂತ್‌ಗಳನ್ನು ತೆರೆದವರು ಬ್ರಾಹ್ಮಣ, ಲಿಂಗಾಯಿತ, ಸಿಂಗ್, ವಡ್ಡರು, ವೈಶ್ಯ ಜಾತಿ ಜನರು ಇದ್ದಾರೆ. ಇವರೆಲ್ಲ ಪ್ರವಾಸೊದ್ಯಮದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇಂಟರ್‌ನೆಟ್ ಮತ್ತು ಇ–ಮೇಲ್ ಶಾಪುಗಳು ಹಂಪಿಯಲ್ಲಿ 4 ಇವೆ. ಇವುಗಳು ಸಿಂಗ್, ಲಿಂಗಾಯತ, ವೈಶ್ಯ ಹಾಗೂ ಕ್ಷತ್ರಿಯ ಜನಾಂಗಕ್ಕೆ ಸೇರಿದವುಗಳಾಗಿವೆ. ಪ್ರವಾಸಿಗರಿಗೆ ಸಲಹೆ, ಸೂಚನೆ, ಮಾರ್ಗದರ್ಶನ ನೀಡಲು ಸರಕಾರದ ಪ್ರವಾಸೊದ್ಯಮ ಇಲಾಖೆಯು ಹೊಸಪೇಟೆ ಮತ್ತು ಹಂಪಿಯಲ್ಲಿ ಮಾಹಿತಿ ಕೇಂದ್ರಗಳನ್ನು ತೆರೆದಿದೆ.

ಮಾರ್ಗದರ್ಶಿಗಳ ಮತ್ತು ಟ್ರಾವೆಲ್ಸ್ ಹೌಸ್‌ಗಳು ಹಂಪಿ ಸುತ್ತಮುತ್ತಲಲ್ಲಿ ಕಂಡು ಬರುತ್ತವೆ. ಪ್ರವಾಸಿಗರಿಗೆ ಮಾರ್ಗದರ್ಶನ ಮಾಡಲು ತರಬೇತಿ ಪಡೆದ ಮಾರ್ಗದರ್ಶಿಗಳಿದ್ದಾರೆ. ಇವರಲ್ಲಿ 15 ಜನ ಪದವೀಧರ ಗೈಡುಗಳಾದರೆ, 15 ಜನ ಪದವಿಪೂರ್ವ ಮತ್ತು ಪ್ರೌಢಶಿಕ್ಷಣ ಪಡೆದವರಾಗಿದ್ದಾರೆ. ಪ್ರವಾಸೋದ್ಯಮ ಇಲಾಖೆಯು ಮಾರ್ಗದರ್ಶನವನ್ನು ಮಾಡುವವರಿಗೆ 4 ತಾಸುಗಳಿಗೆ ರೂಪಾಯಿ 150 ಗಳನ್ನು ನಿಗಧಿ ಪಡಿಸಿದೆ. ಎಸ್.ಟಿ.ಡಿ. ಗೈಡುಗಳಿಗೆ 4 ತಾಸುಗಳಿಗೆ 300 ರೂಪಾಯಿ ನಿಗದಿಪಡಿಸಿದೆ.

ಹಂಪಿಯಲ್ಲಿ ಒಟ್ಟು 21 ಟ್ರಾವೆಲ್ಸ್ ಮತ್ತು ವಿದೇಶಿ ಹಣದ ವಿನಿಮಯ ಅಂಗಡಿಗಳಿವೆ. ಹಣದ ವಿನಿಮಯ ಮತ್ತು ಟಾವೆಲ್ಸ್ ಹೌಸ್‌ಗಳಿವೆ. ಅವು ಪ್ರವಾಸಿಗರಿಗೆ ಪ್ರಯಾಣದ ಟಿಕೆಟುಗಳನ್ನು ಕಾಯ್ದಿರಿಸುತ್ತವೆ. ಇವುಗಳಲ್ಲಿ 4 ಹೌಸ್‌ಗಳು ವಿದೇಶಿ ವಿನಿಮಯ ವ್ಯವಹಾರದೊಂದಿಗೆ ಕಾರ್ಯನಿರ್ವಹಿಸುತ್ತವೆ. ಖಾಸಿಗೆಯವರು 6 ವಿದೇಶಿ ಹಣದ ವಿನಿಮಯ ಮಳಿಗೆಗಳನ್ನು ತೆರೆದಿದ್ದಾರೆ. ರಾಷ್ಟ್ರೀಕೃತ ಕೆನರಾಬ್ಯಾಂಕ್ ಕೂಡ ಇಲ್ಲಿದೆ. ಇದು ಹಂಪಿಯಲ್ಲಿ 1978ರಲ್ಲಿ ಪ್ರಾರಂಭವಾಗಿ ಸ್ಥಳೀಯರಿಗೆ ಹಾಗೂ ವಿದೇಶಿಯರಿಗೆ ಬ್ಯಾಂಕ್ ವ್ಯವಹಾರ ಮಾಡಲು ಅನುಕೂಲ ಮಾಡಿಕೊಟ್ಟಿದೆ ಎಂದು ಹೇಳಬಹುದು.

ಹಂಪಿಯಲ್ಲಿರುವ ಇತರೆ ಅಂಗಡಿಗಳೆಂದರೆ ಪ್ರವಾಸಿಗರಿಗಾಗಿ ಪುರಾತನ ಅವಶೇಷಗಳ ಅಂಗಡಿಗಳು 3 ಇವೆ. ಇವುಗಳಲ್ಲಿ ಮನೆ ಬಳಕೆಯ ವಸ್ತು, ಅಲಂಕಾರ ವಸ್ತುಗಳು, ಉಡುಪುಗಳು, ಮೂರ್ತಿಗಳು, ಮಾರಾಟವಾಗುತ್ತವೆ. ಈ ಅಂಗಡಿಗಳನ್ನು ಹೆಚ್ಚಾಗಿ ಕಾಶ್ಮೀರಿ ಮುಸ್ಲಿಂರು ನಡೆಸುತ್ತಾರೆ. ಮಾರಾಟಗಾರರು ಇಂತಹ ವಸ್ತುಗಳನ್ನು ದೆಹಲಿ, ಜಯಪುರ ಇತ್ಯಾದಿ ಸ್ಥಳಗಳಿಂದ ತಂದು ಮಾರಾಟಮಾಡುತ್ತಾರೆ. ಆಭರಣ ಅಂಗಡಿಗಳಲ್ಲಿ ಹಿತ್ತಾಳೆ, ತಾಮ್ರದಿಂದ ಮಾಡಿದ ಒಡವೆಗಳಿರುತ್ತವೆ. ದೇಶಿಯರು ಹಾಗೂ ವಿದೇಶಿಯರು ಕೊಳ್ಳಬಹುದಾದ ಆಟಿಕೆ ಸಾಮಾನು ಮತ್ತು ಮನೆ ಅಲಂಕಾರದ

ವಸ್ತುಗಳ ಅಂಗಡಿಗಳು ಹಂಪಿಯಲ್ಲಿ ಕಂಡುಬರುತ್ತವೆ. ಇಂತಹ ವ್ಯಾಪಾರದಲ್ಲಿ ಕುರುಬರು, ಜೈನರು, ನಾಯ್ಡು ಕೋಮಿನವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರು ವಸ್ತುಗಳನ್ನು ಮೈಸೂರು, ಚೆನ್ನರಾಯಪಟ್ಟಣ, ಹೈದರಾಬಾದ್, ಬೆಂಗಳೂರು ಮುಂತಾದ ಸ್ಥಳಗಳಿಂದ ತಂದು ಮಾರಾಟಮಾಡುತ್ತಾರೆ.

ಒಟ್ಟಾರೆಯಾಗಿ ಸ್ಥಳೀಯ ವ್ಯಾಪಾರಿಗಳಲ್ಲಿ ಸಂಘಟಿತ ಮತ್ತು ಅಸಂಘಟಿತ ವಲಯದಲ್ಲಿ ತೊಡಗಿದ ಎಲ್ಲಾ ಜನರು ಪ್ರವಾಸೋದ್ಯಮದ ಅಭಿವೃದ್ಧಿಯಲ್ಲಿ ತಮ್ಮನ್ನು ತೊಡಗಿಸಿಕೊಮಡಿದ್ದಾರೆ.

**ಪರಾಮರ್ಶನ ಗ್ರಂಥಗಳು**


1. ಸಿದ್ದಪ್ಪ ಕೆ, ಹಂಪಿಯ ಪ್ರವಾಸೋದ್ಯಮ: ಪಲ್ಲವ ಪ್ರಕಾಶನ, ಹೊಸಪೇಟೆ, 2011
2. ದೇವರು ಕೊಂಡಾರೆಡ್ಡಿ, ಹಂಪಿ ಶಾಸನ ಸಂಪುಟ–3, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000
3. ಸುರೇಶ ಕೆ.ಎಂ, ವಾಸುದೇವ ಬಡಿಗೇರ, ಎಸ್.ವೈ. ಸೋಮಶೇಖರ್, ಮಾಡಲಗೇರಿ ಕೊಟ್ರೇಶ್, ಕರ್ನಾಟಕ ದೇವಾಲಯ ಕೋಶ: ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕವಿವಿ, ಹಂಪಿ, 1999


❖❖❖

ಈಗ ಬಿಟ್ಟರೆ
ಮುಂದೆ ಸಿಗುವುದೆ
ಇಂಥ ಹಾಲ್ದೆನೆ ಸಂಭ್ರಮಾ।
ಕಿವಿಯ ತುಂಬಿಸಿ
ಜಠರ ಹಿಗ್ಗಿಸಿ
ಮೆಲುಕಬೇಕಿದೆ ವಿಭ್ರಮಾ॥

# ಜನಸಮುದಾಯಗಳ ಕುರಿತ ಸರ್ವಜ್ಞನ ಚಿಂತನೆಗಳು

**ಡಾ. ಮಂಜುನಾಥ**
ಬೆದವಟ್ಟಿ, ಅಂಚೆ ಯಡಿಯಾಪುರ, ತಾಲೂಕು: ಕುಕನೂರು, ಜಿಲ್ಲೆ: ಕೊಪ್ಪಳ–583 232

ಕನ್ನಡ ಸಾಹಿತ್ಯ ಚರಿತ್ರೆಯನ್ನು ದಾಖಲಿಸುವಾಗ ಪ್ರಾತಿನಿಧಿಕವಾಗಿ ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಹೀಗೆ ಕಾಲದ ದೃಷ್ಟಿಯಿಂದ ಮೂರು ವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಈ ವಿಭಾಗೀಯ ಕ್ರಮದಲ್ಲಿ ಅದರಲ್ಲಿಯೂ ಮಧ್ಯಕಾಲೀನ ಕನ್ನಡ ಸಾಹಿತ್ಯದ ಹಾದಿಗೆ ವಿಶೇಷ ತಿರುವು ನೀಡಿದವರ ಸಾಲಿನಲ್ಲಿ ಸರ್ವಜ್ಞರು ಕೂಡ ಒಬ್ಬರು. ಸರ್ವಜ್ಞರನ್ನು ವರಕವಿ, ತ್ರಿಪದಿ ಚಕ್ರವರ್ತಿ, ಜಾನಪದ ಕವಿ, ಜಂಗಮ ವಿಶ್ವಕೋಶ ಮೊದಲಾದ ಪದ, ಪದವಿಯ ಮೂಲಕ ಗುರುತಿಸಲಾಗಿದೆ. ಇವರು ಸಮಾಜಗಳಲ್ಲಿ ನಡೆಯುವ ವಿದ್ಯಮಾನಗಳನ್ನು ಮಾನಸಿಕ ಅಂತರದಲ್ಲಿ ನಿಂತು ನೋಡುವ ವಿಶೇಷತೆಯನ್ನು ಒಲಿಸಿಕೊಂಡವರು. ಜೀವನದ ವೈಪರಿತ್ಯಗಳನ್ನು ಅಲೆಮಾರಿತನದ ಮುಖೇನ ಸಾಂಘಿಕ ಬಲದ ಕೊರತೆಯೊಂದಿಗೆ ಏಕಾಂಗಿಯಾಗಿಯೇ ಎದುರುಗೊಂಡು, ಆಯಾ ಕಾಲದ ಸಾಮಾಜಿಕ, ಚಾರಿತ್ರಿಕ ಮತ್ತು ಧಾರ್ಮಿಕ ಒತ್ತಡಗಳನ್ನು ಸಹಿಸಿಕೊಂಡು ರೂಪುತಳೆದ ವ್ಯಕ್ತಿತ್ವವಿದು. ಈ ವ್ಯಕ್ತಿತ್ವವು ತನ್ನ ಸಮಕಾಲೀನ ಯುಗದಲ್ಲಿ ರೂಪುಗೊಂಡಿರುವ ಮತ್ತು ಈಗಾಗಲೇ ಅಸ್ತಿತ್ವ ಕಟ್ಟಿಕೊಂಡ ಕೆಲವು ಜನಸಮುದಾಯಗಳ ಕುರಿತು ಹೇಗೆ ಆಲೋಚನೆಗಳನ್ನು ಮಾಡಿತು ಎಂಬುದನ್ನು ಅವರೇ ರಚಿಸಿದ ತ್ರಿಪದಿಗಳನ್ನು ಉಲ್ಲೇಖಿಸುವುದರ ಮೂಲಕ ತಿಳಿಸುವ ಉದ್ದೇಶ ಈ ಬರೆಹಕ್ಕಿದೆ.

ಸರ್ವಜ್ಞರು ರಚಿಸಿದ ತ್ರಿಪದಿಗಳನ್ನು ಗಮನಿಸಿದಾಗ 'ಅಕ್ಕಸಾಲಿಗರು, ಒಕ್ಕಲಿಗರು, ಕಟಕರು, ಬಡಿಗರು, ಕುಂಬಾರರು, ಗಾಜುಗಾರರು, ಗಾಣಿಗರು, ಜಾಲಗಾರರು, ಜಾಡರು, ಡೊಂಬರು, ತಳವಾರರು, ಪಂಚಾಳರು, ಬಣಜಿಗರು, ಬೆಸ್ತರು, ಬೇಡರು, ಸಿಂಪಿಗರು, ಸುಂಕಿಗರು, ಹಟಗಾರರು, ಹರದರು(ವ್ಯಾಪಾರಿ), ಹೆಳವರು' ಮೊದಲಾದವರ ಕುರಿತು ಅವರ ಗುಣಲಕ್ಷಣಗಳು, ಅವರ ಮಿತಿಗಳನ್ನು ದಾಖಲಿಸಿದ್ದಾರೆ. ಪ್ರಸ್ತುತ ಲೇಖನದ ಮಿತಿ ಮತ್ತು ವ್ಯಾಪ್ತಿಯ ದೃಷ್ಟಿಯಿಂದ ಅದರಲ್ಲಿ ಅಕ್ಕಸಾಲಿಗರು, ಒಕ್ಕಲಿಗರು, ಬಡಿಗರು, ಗಾಣಿಗರು, ಸಿಂಪಿಗರು, ತಳವಾರರು, ಬಣಜಿಗರು, ಕುಂಬಾರರು, ಹರದರು, ಬೇಡರು, ಜಾಡರು, ಹೆಳವರು ಇವರ ಕುರಿತ ತಿಳಿಸಿದ ಕೆಲವು ತ್ರಿಪದಿಗಳ ಮೂಲಕ ಈ ಕೆಳಗಿನಂತೆ ವಿವರಿಸಲಾಗದೆ.

ಸ್ವಾಸ್ಥ್ಯ ಸಮಾಜಕ್ಕೆ ಯಾವುದು ಕಂಟಕ? ಯಾವುದು ಈ ಸಮಾಜಕ್ಕೆ ತರವಲ್ಲ ಮತ್ತು ಹಾಗೇ ಇರಕೂಡದು ಎಂಬುದನ್ನು ಸರ್ವಜ್ಞರು ತಮ್ಮ ತ್ರಿಪದಿಯ ಮೂಲಕ ತಿಳಿಸಿದ್ದಾರೆ.

**"ಬೆಕ್ಕು ಮನೆಯೊಳು ಲೇಸು ಮುಕ್ಕು ಕಲ್ಲಿಗೆ ಲೇಸು ।**
**ನಕ್ಕು ನಗಿಸುವಾ ನುಡಿ ಲೇಸು ಊರಿಗೆ ।**
**ಒಕ್ಕಲಿಗ ಲೇಸು ಸರ್ವಜ್ಞ॥1236॥"** **(ಉತ್ತಂಗಿ ಚೆನ್ನಪ್ಪ:1927:208).**

ಇಲಿಗಳ ಕಾಟದಿಂದ ಮನೆಯನ್ನು ರಕ್ಷಿಸಿಕೊಳ್ಳಲು ಒಂದು ಬೆಕ್ಕು ಇರಬೇಕೊ ಹಾಗೆಯೇ ದವಸ ದಾನ್ಯಗಳನ್ನು ಬೀಸಿ ಬೇರ್ಪಡಿಸುವ ಬೀಸುವ ಕಲ್ಲಿಗೆ ತಕ್ಕನಾದ ಒಂದು ರಂಧ್ರವಿರಬೇಕು. ಆಗಿದ್ದಾಗ ಮಾತ್ರ ಅದರಿಂದ ಅಡುಗೆಗೆ ಬೇಕಾದ ಬೇಳೆ, ನುಚ್ಚು ಮಾಡಿಕೊಳ್ಳಲು ಸಾಧ್ಯ. ಮನೆಯಲ್ಲಿ ಯಾವಾಗಲೂ ನಕ್ಕು ನಗಿಸುವ ಮಾತುಗಳು ಇರಬೇಕು ಅದರಂತೆ ಊರು ಎಂದ ಮೇಲೆ ಜನರ ಹಸಿವು ನೀಗಿಸಲು ಭೂಮಿಯನ್ನು ಉತ್ತಿ, ಬಿತ್ತುವ ಕೌಶಲ್ಯವನ್ನೊಳಗೊಂಡ ರೈತನಿರಬೇಕು. ಒಂದು ಮನೆ ಅಥವಾ ಊರು ನೆಮ್ಮದಿಯಿಂದ ಬದುಕಲು ಇವುಗಳು ಇದ್ದರೆ ಒಳ್ಳೆಯದು ಎಂಬುದು ಈ ತ್ರಿಪದಿಯ ಸಾರವಾಗಿದೆ.

**"ಎಳ್ಳು ಗಾಣಿಗ ಬಲ್ಲ ಸುಳ್ಳು ಸಿಂಪಿಗ ಬಲ್ಲ ।**
**ಕಳ್ಳರನು ಬಲ್ಲ ತಳವಾರ, ಬಣಜಿಗ– ।**
**ನೆಲ್ಲವನು ಬಲ್ಲ ! ಸರ್ವಜ್ಞ॥1293॥"** **(ಉತ್ತಂಗಿ ಚೆನ್ನಪ್ಪ:1927:218)**

ಇಡೀ ಸಮಾಜಕ್ಕೆ ತನ್ನ ಕೌಶಲ್ಯ ಮತ್ತು ಶ್ರಮದ ಮೂಲಕ ಎಣ್ಣೆಯನ್ನು ತಯಾರಿಸುವ ಗಾಣಿಗನಿಗೆ ಎಳ್ಳಿನ ಗುಣಲಕ್ಷಣ, ಅದರಲ್ಲಿನ ಎಣ್ಣೆಯ ಪ್ರಮಾಣ ಎಷ್ಟಿದೆ? ಎಂಬ ಮೊದಲಾದ ವಿಷಯಗಳನ್ನು ಅರಿತಿರುವನು. ಹಾಗೆಯೇ ಊರ ಜನರ ಮಾನ ಮುಚ್ಚುವಂತಹ ಬಟ್ಟೆಯನ್ನು ತನ್ನ ಕೌಶಲ್ಯ ಮತ್ತು ಶ್ರಮದ ಮೂಲಕ ತಯಾರಿಸುವ ದರ್ಜಿ/ ಸಿಂಪಿಗನು ವ್ಯಕ್ತಿಯ ದೇಹದಲ್ಲಿ ಮರೆಮಾಚಿದ ಸುಳ್ಳುಗಳನ್ನು ಬಲ್ಲವನು. ಅಥವಾ ನಿಗದಿತ ದಿನದಂದು ಹೊಲಿದುದನ್ನು ಕೊಡದ ಕಾರಣ ಅವನು ಸುಳ್ಳು ಹೇಳುವವನಿರಬಹುದು. ಊರ ಸುರಕ್ಷತೆಯ ದೃಷ್ಟಿಯಿಂದ ಅದರ ಸುತ್ತಲೂ ತಿರುಗಾಡುತ್ತಾ ಕಳ್ಳ–ಕಾಕರ ಚಲನವಲನಗಳನ್ನು ತಳವಾರನು ಅವಲೋಕಿಸುತ್ತಾನೆ. ವ್ಯಾಪಾರಕ್ಕೆ ಹೆಸರುವಾಸಿಯಾದ ಬಣಜಿಗ ಅಂದರೆ ವರ್ತಕನಿಗೆ ಎಲ್ಲವೂ (ಊರಿನ/ ಕುಟುಂಬದ/ ವ್ಯಕ್ತಿಯ ಸಾಮಾಜಿಕತೆ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಮೊದಲಾದ ಸಂಗತಿಗಳು) ತಿಳಿದಿರುತ್ತದೆ. ಒಂದು ಸಾಮಾಜಿಕ ವ್ಯವಸ್ಥೆಯೊಳಗಿರುವ ಒಂದೊಂದು ಸಮುದಾಯವು ತನ್ನದೇ ಆದ ವೃತ್ತಿ, ಕೌಶಲ್ಯ ವಿಶೇಷವಾಗಿ ಅವರ ಬದುಕಿನ ರಚನಾ ಕ್ರಮದ ಪಾರಂಪರಿಕ ಜ್ಞಾನವನ್ನು ಸೂಕ್ಷ್ಮವಾಗಿ ಗಮನಿಸಿದ ಸರ್ವಜ್ಞರು ಹೀಗೆ ಸಮುದಾಯಗಳ ಜ್ಞಾನಪರಂಪರೆಯನ್ನು ಮತ್ತು ಅವರ ಅರಿವಿನ ಬದುಕನ್ನು ಈ ತ್ರಿಪದಿಯ ಮೂಲಕ ತಿಳಿಸುತ್ತಾರೆ.

**"ಕೊಂಬು ಹೋರಿಗೆ ಲೇಸು ತುಂಬು ಕೇರಿಗೆ ಲೇಸು ।**
**ಕುಂಬಾರ ಲೇಸು ಊರಿಗೆ ಹರದಂಗೆ ।**
**ನಂಬುಗೆಯೆ ಲೇಸು ಸರ್ವಜ್ಞ॥1296॥"** **(ಉತ್ತಂಗಿ ಚೆನ್ನಪ್ಪ:1927:218)**

ಯಾವುದು? ಯಾವುದಕ್ಕಿರಬೇಕು? ಎನ್ನುವ ಮೂಲ ಪ್ರಶ್ನೆಗಳನ್ನು ಸಮಾಜಗಳ ಒಳಗಿನ ತಿಳುವಳಿಕೆಯ ನುಡಿಗಳಿಂದ ಗ್ರಹಿಸಿದವರು ಇವರು. ಬಹುಷಃ ಅದರ ಭಾಗವಾಗಿಯೇ ಸರ್ವಜ್ಞರು 'ಹೋರಿಗೆ ಕೊಂಬಿರಬೇಕು ಅಂದಾಗಲೆ ಅದು ಚೆಂದವಾಗಿ ಮತ್ತು ತನ್ನ ತಾ ರಕ್ಷಿಸಿಕೊಳ್ಳಲು ಸಾಧ್ಯವಾಗುತ್ತದೆ, ಕೇರಿ ಎಂದ ಮೇಲೆ ಜನವಸತಿ ಎಂಬುದಿರಬೇಕು ಅಂದಾಗಲೇ ಅದಕ್ಕೊಂದು ಅರ್ಥ ಬರುತ್ತದೆ. ಊರು ಅಂದ ಮೇಲೆ ಅಲ್ಲಿ ಒಬ್ಬ ಕುಂಬಾರನಿರಬೇಕು ಜನರಿಗೆ ನಿತ್ಯ ಅವಶ್ಯಕವೆನಿಸುವ ಸಾಮಗ್ರಿಗಳನ್ನು ಒದಗಿಸಲು ಆಗುತ್ತದೆ. ಅಂತಯೇ ವರ್ತಕನಾದವನಿಗೆ ನಂಬಿಕೆ ಎಂಬುದು ಇರಬೇಕು,

ನಂಬಿಕೆಯಿಲ್ಲದಿದ್ದರೆ ನಿತ್ಯ ವ್ಯಾಪಾರ–ವ್ಯವಹಾರಗಳು ನಡೆಯುವುದು ಕಷ್ಟ. ಯಾರಿಗೆ? ಯಾವುದು? ಮುಖ್ಯ ಎಂಬುದನ್ನು ತಿಳಿಸುವುದೇ ಈ ತ್ರಿಪದಿಯ ಸಾರವಾಗಿದೆ. ಇದೇ ಸಾರವನ್ನು ಮತ್ತೊಂದು ತ್ರಿಪದಿಯಲ್ಲಿ ಸರ್ವಜ್ಞರು ತಿಳಿಸಿದ್ದಾರೆ. ಅದು,

**"ಅಗ್ಗ ಬಡವಗೆ ಲೇಸು ಬುಗ್ಗೆಯಗಸಗೆ ಲೇಸು ।**

**ತಗ್ಗಿನ ಗದ್ದೆ ಉಳಲೇಸು ಜೇಡಂಗೆ ।**

**ಮಗ್ಗ ಲೇಸೆಂದ ಸರ್ವಜ್ಞ॥1308॥"** **(ಉತ್ತಂಗಿ ಚೆನ್ನಪ್ಪ:1927:220).**

ಬಡತನದ ಬೇಗುದಿಯಲ್ಲಿ ಮಿಂದೆದ್ದವರಿಗೆ ಮುಖ್ಯವಾಗಿ ಬೇಕಾಗಿರುವುದು ಕೈಗೆಟುಕುವ ಅಗ್ಗದ ವಸ್ತುಗಳೇ. ತೊಟ್ಟು ಬಿಟ್ಟ ಅಥವಾ ಬಳಕೆ ಮಾಡಿದ ಉಡುಗೆಗಳನ್ನು ಹಸನು ಮಾಡುವ ಅಗಸನಿಗೆ ಬೇಕಾಗಿರುವುದು ನೀರಿನ ಬುಗ್ಗೆ ಇರುವ ಜಾಗವೇ. ಬಿತ್ತನೇ ಕೆಲಸ ಮಾಡಲು ಬೇಕಾಗಿರುವುದು ತಗ್ಗಿನಲ್ಲಿರುವ ಜಾಗವೇ, ಅದರಂತೆ ನೂಲುಗಳ ಜೋಡಿಸಿ ಬಟ್ಟೆ ನೇಯುವವರಿಗೆ ಮುಖ್ಯವಾಗಿ ಬೇಕಾದದು ಮಗ್ಗವೇ. ಯಾವುದು ಯಾರಿಗೆ ಸೂಕ್ತ ಮತ್ತು ಮುಖ್ಯ ಎಂಬುದನ್ನು ತಿಳಿಸುವುದೇ ಈ ತ್ರಿಪದಿಯ ಮುಖ್ಯ ಉದ್ದೇಶವಾಗಿದೆ.

ಮಾನವ ಜೀವಿಗಳು ಸುಖ ಮತ್ತು ನೆಮ್ಮದಿಯಿಂದ ತನ್ನ ಬದುಕನ್ನು ಹೇಗೆ ಕಳೆಯಬೇಕು ಮತ್ತು ಹೇಗೆ ಕಳೆಯಬಹುದು ಎಂಬುದನ್ನು ಸರ್ವಜ್ಞರು ತಮ್ಮ ಸುತ್ತಮುತ್ತಲಿನ ಸಮಾಜಗಳನ್ನು ಅವಲೋಕಿಸಿ ತಿಳಿದುಕೊಂಡಿದ್ದರು. ಈ ವಿಷಯಕ್ಕೆ ಸಂಬಂಧಿಸಿದಂತೆ ಅವರ ಒಂದು ತ್ರಿಪದಿಯನ್ನು ತಿಳಿಸುವುದಾದರೆ,

**"ಹರದನಾ ಮಾತನ್ನು ಹಿರಿದು ನಂಬಲು ಬೇಡ ।**

**ಗರಗಸದೊಡನೆ ಮರಹೋರಿ ತನ್ನ ತಾ_ ।**

**ನಿರಿದುಕೊಂಡಂತೆ ಸರ್ವಜ್ಞ॥1297॥"** **(ಉತ್ತಂಗಿ ಚೆನ್ನಪ್ಪ:1927:218).**

ಸದಾ ಲಾಭದ ಆಸೆಯಿಂದ ಬಣ್ಣದ ಮಾತುಗಳನ್ನಾಡುವ ವ್ಯಾಪಾರಿಯ ಮಾತುಗಳನ್ನು ನೂರಕ್ಕೆ ನೂರರಷ್ಟು ಸತ್ಯವೆಂದು ತಿಳಿದುಕೊಳ್ಳಬಾರದು. ಒಂದು ವೇಳೆ ಹಾಗೇನಾದರೂ ಆದರೆ ಕೆಳಗಿರುವ ವಸ್ತು, ವ್ಯಕ್ತಿ ಯಾವುದಾದರಷ್ಟೇ ಅದನ್ನು ಕೊರೆಯುವ/ ಕತ್ತರಿಸುವ ಗುಣವೊಂದಿರುವ ಗರಗಸಕ್ಕೆ ತಾನೇ ಹೋಗಿ ತನ್ನ ದೇಹ ಅರ್ಪಿಸಿದಂತೆ. ಬಣ್ಣದ ಮಾತಿಗೆ ಬಲಿಯಾಗುವುದರಿಂದ ಎಂತಹ ಅಪಾಯವಿದೆ ಎಂಬುದನ್ನು ಕವಿಯು ಹೀಗೆ ತಿಳಿಸುತ್ತಾರೆ.

'ಪ್ರತ್ಯಕ್ಷವಾಗಿ ಕಂಡರು ಪ್ರಮಾಣಿಸಿ ನೋಡು' ಎನ್ನುವ ಜ್ಞಾನುಡಿಯಂತೆ ಕಂಡತಕ್ಷಣ ಇದು ಅದುವೇ ಎಂದು ನಿರ್ಧಾರಕ್ಕೆ ಬರುವುದು ತಪ್ಪು ಎನ್ನುವ ಅಂಶವನ್ನು ಸರ್ವಜ್ಞರು ಬಹಳ ಅರ್ಥಪೂರ್ಣವಾಗಿ ತಮ್ಮ ತ್ರಿಪದಿಯಲ್ಲಿ ಹೇಳಿದ್ದಾರೆ. ಅದು,

**"ಗಾಣಿಗನು ಈಶ್ವರನ ಕಾಣನೆಂಬುದು ಸಹಜ ।**

**ಏಣಾಂಕಧರನು ಧರೆಗಿಳಿಯಲವನಿಂದ ।**

**ಗಾಣವಾಡಿಸುವ ! ಸರ್ವಜ್ಞ॥1306॥"** **(ಉತ್ತಂಗಿ ಚೆನ್ನಪ್ಪ:1927:220).**

ಎಣ್ಣೆ ಕಾಳುಗಳನ್ನು ಗಾಣದ ಸಹಾಯದಿಂದ ಅದರಲ್ಲಿನ ಎಣ್ಣೆಯನ್ನು ಬೇರ್ಪಡಿಸುವ ಗಾಣಿಗನು ಶಿವನನ್ನು ಕಾಣ ಎಂಬುದು ಸಹಜ, ಒಂದು ವೇಳೆ ಶಿವನೇನಾದರೂ ಧರೆಗಿಳಿದು ಬಂದರೆ ಅವನಿಂದಲೇ ಗಾಣವನ್ನು ಸುತ್ತಿಸುವನು. ಈ ತ್ರಿಪದಿಯನ್ನು ಬಹುಷಃ ಹೀಗೆ ಗ್ರಹಿಸಬಹುದು, 'ಕಾಯಕನಿರತ ಗಾಣಿಗನಿಗೆ ತನ್ನ

ವೃತ್ತಿ ಬದುಕಿನ ಮೇಲಿರುವ ಶ್ರದ್ಧೆ ಎಂತಹದೇಂದರೆ ಸಾಕ್ಷಾತ್ ಶಿವ ಬಂದರೂ ಕೂಡ ಅವನಿಂದಲೂ ತನ್ನ ಕಾಯಕವನ್ನು ಮಾಡಿಸುವಷ್ಟು ಗಾಡವಾದದು.' ಅವರಿಗೆ ತಮ್ಮ ವೃತ್ತಿ ಬದುಕು ಎಷ್ಟು ಮುಖ್ಯ ಎಂಬುದನ್ನು ಈ ತ್ರಿಪದಿಯಿಂದ ಗ್ರಹಿಸಬಹುದಾಗಿದೆ.

ಈಗಾಗಲೇ ತಿಳಿಸಿರುವಂತೆ ಯಾರಿಗೆ? ಯಾವುದು ಸೂಕ್ತ ಮತ್ತು ಮುಖ್ಯ ಎಂಬುವಂತೆ ಯಾರಿಗೆ ಮತ್ತು ಯಾವುದಕ್ಕೆ? ಯಾವುದರ ಚಿಂತೆ ಎಂಬುದನ್ನು ಸಹ ಕವಿ ಸರ್ವಜ್ಞರು ತಿಳಿಸಿದ್ದಾರೆ. ಇದಕ್ಕೆ ಸಂಬಂದಿಸಿದಂತೆ ಒಂದು ತ್ರಿಪದಿಯನ್ನು ಉಲ್ಲೇಖಿಸುವುದಾದರೆ,

**"ಬೇಡಗಡವಿಯ ಚಿಂತೆ ಆಡಿಂಗೆ ಮಳೆ ಚಿಂತೆ ।**

**ನೋಡುವ ಚಿಂತೆ ಕಂಗಳಗೆ ಹೆಳವಗೆ_ ।**

**ದ್ದಾಡುವ ಚಿಂತೆ ಸರ್ವಜ್ಞ॥1309॥"** **(ಉತ್ತಂಗಿ ಚೆನ್ನಪ್ಪ:1927:220).**

ಬೇಟೆಯೇ ತನ್ನ ಮೂಲ ವೃತ್ತಿ, ಅದುವೇ ಅವನ ಸಾಮಾಜೋ–ಧಾರ್ಮಿಕ, ಸಾಂಸ್ಕೃತಿಕ ಗುರುತು ಎನ್ನುವ ಬೇಡನಿಗೆ ಯಾವಾಗಲು ಇರುವ ಚಿಂತೆ ಎಂದರೆ ಅದು ಅಡವಿಯೇ. ಒಂದರ್ಥದಲ್ಲಿ ಅವನು ಚಿಂತಿಸಬೇಕಾದದು ಅದನ್ನೇ ಎನಿಸುತ್ತದೆ. ಅದೇ ರೀತಿ ಪರಿಸರದ ಹಸಿರನ್ನು ತಿಂದು ಬದುಕುವ ಆಡಿಗೆ ಯಾವಾಗಲೂ ಮಳೆಯ ಚಿಂತೆ. ಮಳೆ ಬಂದರೆ ಹಸಿರು ಎಂಬುದು ಅದಕ್ಕೆ ಗೊತ್ತಿದೆ. ತೆರೆದ ಕಣ್ಣುಗಳಿಗೆ ಯಾವಾಗಲೂ ಏನಾದರೊಂದನ್ನು ನೋಡುವ ಚಿಂತೆ. ಇದೇ ರೀತಿ ಅಂಗ ನ್ಯೂನ್ಯತೆಯನ್ನೊಳಗೊಂಡ ಹೆಳವನಿಗೆ ಇತರರಂತೆ ಎದ್ದು ಓಡಾಡುವ ಚಿಂತೆ. ಇಲ್ಲಿ ಬೇಡನಿಗೆ ಮತ್ತು ಆಡಿಗೆ ತನ್ನ ಹೊಟ್ಟೆಯ ಹಸಿವಿನ ಚಿಂತೆಯಾದರೆ, ಕಣ್ಣಿಗೆ ಹೊಸತನವನ್ನು ಆಸ್ವಾದಿಸುವ ಚಿಂತೆ, ಅದರಂತೆ ಹೆಳವನಿಗೆ ತನ್ನ ಮಾನಸಿಕ ಮತ್ತು ದೈಹಿಕ ನ್ಯೂನ್ಯತೆಗಳನ್ನು ಮೀರುವ ಚಿಂತೆ ಇದೆ. ಹೀಗೆ ಒಬ್ಬೊಬ್ಬರಿಗೂ, ಒಂದೊಂದಕ್ಕೂ ಒಂದೊಂದು ಚಿಂತೆಗಳಿರುತ್ತವೆ. ಬಹುಶಃ ಚಿಂತೆಗಳಿಲ್ಲದ ಬದುಕಿಲ್ಲವೆಂಬುದನ್ನು ತಿಳಿಸುವ ಉದ್ದೇಶ ಈ ತ್ರಿಪದಿಗಿರಬಹುದು.

**ಕಡೆನುಡಿ**

ಇವತ್ತಿನ ಕಾಲದಲ್ಲಿ ಸಮುದಾಯಗಳನ್ನು ಕುರಿತು ಮಾತನಾಡುವುದೆಂದರೆ ಸುಡುವ ಕೆಂಡವನ್ನು ಮಡಿಲಿಗೆ ಹಾಕಿಕೊಂಡಂತೆ. ಆದರೆ ಸರ್ವಜ್ಞರು ಬದುಕಿದ ಕಾಲ ಹೇಗಿತ್ತೊ ಏನೋ? ಆದರೂ ಅವರು ತಮ್ಮ ಅನಿಸಿಕೆಗಳನ್ನು ಮುಕ್ತವಾಗಿ ತಮಗೊಲಿದ ಮತ್ತು ದುಡಿದು ಬದುಕುವ ಜನರಿಗೆ ಪ್ರಿಯವಾದ ತ್ರಿಪದಿಯ ಮೂಲಕ ಅಭಿವ್ಯಕ್ತಿಸಿದರು. ಯಾವ ವೃತ್ತಿ ಹಿನ್ನಲೆಯ ಸಮುದಾಯ ಹೇಗೆ ಸಮಾಜದಲ್ಲಿ ನಡೆದುಕೊಳ್ಳುತ್ತದೆ, ಹೇಗೆ ಅದು ತನ್ನ ತಪ್ಪನ್ನು ತಿದ್ದಿಕೊಳ್ಳಬಹುದು ಎಂಬುದನ್ನು ಆ ಸಮುದಾಯದ ಗೌರವಕ್ಕೆ ದಕ್ಕೆತರದಂತೆ ಕೆಲವೊಮ್ಮೆ ಗೌಪ್ಯವಾಗಿ ಮತ್ತು ಮುಕ್ತವಾಗಿ ತಿಳಿಕೇಳಿದರು. ಈ ತಿಳುವಳಿಕೆಯನ್ನು ನೀಡುವ ಸಂದರ್ಭದಲ್ಲಿ ಕೆಲವು ಸಮುದಾಯಗಳ ಹೆಸರನ್ನು 'ಅರ್ಥದೊಳಗಿನ ಅರ್ಥ'ವನ್ನು ತಿಳಿಸಲು ಬಳಸಿರಬಹುದು. ನಮ್ಮ ಸಮುದಾಯವನ್ನು ಸರ್ವಜ್ಞರು ಹೀಗೆ ಅಲ್ಲಗಳೆದಿದ್ದಾರೆ ಎಂದು ದ್ವೇಷಿಸುವ ಬದಲು ಅದರ ಹಿಂದಿನ ವಾಸ್ತವ, ಸಾಮಾಜಿಕ ಒತ್ತಡ, ಪದ ಬಳಕೆಯಿಂದಾದ ಪ್ರಯೋಜನವನ್ನು ಅರಿತುಕೊಳ್ಳಬೇಕಾದದು ಸೂಕ್ತವೆನಿಸುತ್ತದೆ. ಆ ಮೂಲಕ ಅವತ್ತಿನ ಸಾಮಾಜಿಕ ರಚನೆ ಮತ್ತು ಅದರೊಳಗಿನ

ಅಂತರ್‌ಕ್ರಿಯೆಗಳು ಹಾಗೂ ಬಾಹ್ಯ ಪ್ರಕ್ರಿಯೆಗಳನ್ನು ಅರ್ಥೈಸಿಕೊಳ್ಳಲು ಸಾಧ್ಯ. ಈ ನೆಲೆಯಿಂದ ಸರ್ವಜ್ಞರನ್ನು ಗ್ರಹಿಸಿದರೆ ಅವರು ತಾಳಿದ ತಾತ್ವಿಕ ನಿಲುವುಗಳನ್ನು ಹಾಗೂ ನಮ್ಮ ಹಿರಿಕರು ಅವರಿಗೆ ನೀಡಿದ ಪದವಿಗಳಿಗೂ ಗೌರವಿಸಿದಂತಾಗುತ್ತದೆ.

**ಪರಾಮರ್ಶನ ಸಾಹಿತ್ಯ**


- ಅಮರೇಶ ನುಗಡೋಣಿ (ಸಂ), 2013, ಸರ್ವಜ್ಞನ ತ್ರಿಪದಿಗಳು ಅನುಸಂಧಾನದ ನೆಲೆಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಕನ್ನಡ ರತ್ನಕೋಶ ಪರೀಷ್ಕೃತ, 2017, ಕನ್ನಡ ಸಾಹಿತ್ಯ ಪರಿಷ್ಯತ್ತು, ಬೆಂಗಳೂರು.
- ಚನ್ನಪ್ಪ ಉತ್ತಂಗಿ, 1927, ತ್ರಿಪದಿರೂಪವಾಗಿ ರಚಿಸಿದ ಸರ್ವಜ್ಞ ವಚನಗಳು, ಕರ್ನಾಟಕ ಪ್ರಿಂಟಿಂಗ ವರ್ಕ್ಸ, ಧಾರವಾಡ.
- ಬಸವರಾಜು ಎಲ್ (ಸಂ), 2017, ಸರ್ವಜ್ಞನ ತ್ರಿಪದಿಗಳು, ದೂರಶಿಕ್ಷಣ ನಿರ್ದೇಶನಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ರಮೇಶ್ ಬೆ ಗೋ, 2011, ಸರ್ವಜ್ಞ ವಚನ ವೈಭವ ಕವಿ ಸರ್ವಜ್ಞನ ವಚನಗಳು ತಾತ್ಪರ್ಯ ಸಹಿತ, ವಿದ್ಯಾರ್ಥಿ ಪ್ರಕಾಶನ, ಬೆಂಗಳೂರು.
- ರಾಗೌ (ಸಂ), 2013, ಸರ್ವಜ್ಞನ ಸಮಗ್ರ ತ್ರಿಪದಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ರಾಜಶೇಖರ ಜಮದಂಡಿ, 2004, ಸರ್ವಜ್ಞನ ವಚನಗಳು ಒಂದು ಜಾನಪದೀಯ ಅಧ್ಯಯನ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು.
- ವೀರೇಶ ಬಡಿಗೇರ(ಸಂ), 2014, ಸರ್ವಜ್ಞನ ಸಾಹಿತ್ಯ ಕುರಿತ ಅಧ್ಯಯನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.


❖❖❖

# ಕನ್ನಡ ವರ್ಣ ಮಾಲೆಯಲ್ಲಿ ‘ಬಿಂದು’ವಿನ ಲಿಪಿಸ್ಥಾನ ಒಂದು ಅವಲೋಕನ

**ಜಿ. ವೀರಭದ್ರ ಗೌಡ**

ಸಹಾಯಕ ಪ್ರಾಧ್ಯಾಪಕರು ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ ಜಿ.ಕೆ.ವಿ.ಕೆ., ಬೆಂಗಳೂರು

ಕನ್ನಡ ಲಿಪಿಯಲ್ಲಿಯ ‘ಬಿಂದು’*ವಿನ ಕುರಿತಿರುವ ಪ್ರಮುಖ ನಿಲುವುಗಳನ್ನು ಅವಲೋಕಿಸುತ್ತಾ ಅದರ ಲಿಪಿಸ್ಥಾನವನ್ನು ಸ್ಪಷ್ಟಪಡಿಸುವುದು ಈ ಬರಹದ ಪ್ರಯತ್ನವಾಗಿದೆ. ಕನ್ನಡವನ್ನು ಪ್ರಾಥಮಿಕೇತರ ಹಂತದಲ್ಲಿ ಎರಡನೆಯ ಭಾಷೆಯಾಗಿ ಬೋಧಿಸುವಾಗ ಕನ್ನಡ ಲಿಪಿಯಲ್ಲಿಯ ಬಿಂದು ಸೃಷ್ಟಿಸುವ ಗೊಂದಲದಿಂದ ಈ ಉದ್ದೇಶವನ್ನು ಕೈಗೆತ್ತಿಕೊಳ್ಳಲಾಗಿದೆ. ಪ್ರಸ್ತುತ ಉದ್ದೇಶಕ್ಕೆ ಬಿಂದುವಿನ ಕುರಿತ ಸಾಂದರ್ಭಿಕ ಪರಿಶೀಲನೆಗಳನ್ನು ಅವಲೋಕಿಸಿ, ಅವುಗಳಿಂದ ಉದ್ದೇಶಿತ ಸಮಸ್ಯೆಗೆ ಪರಿಹಾರವನ್ನು ಹುಡುಕಿಕೊಳ್ಳುವುದಾಗಿದೆ. ಇದನ್ನು ವ್ಯಾಕರಣ ಪರಿಭಾಷೆಯಲ್ಲಿ ಅನುಸ್ವಾರವೆಂದು ಪರಿಭಾವಿಸಿದ್ದು, ಕನ್ನಡ ನುಡಿಯ ಲಿಪಿಯಲ್ಲಿ ಅದರದೇ ಚರಿತ್ರೆಯನ್ನು ಹೊಂದಿದೆ.**

### ಅ. ಬಿಂದು ಕುರಿತ ಪ್ರಮುಖ ನಿಲುವುಗಳು

### 1. ಬಿಂದು: ಐತಿಹಾಸಿಕ ಪರಿಶೀಲನೆ

ಬಿಂದುವನ್ನು ಚಾರಿತ್ರಿಕವಾಗಿ ಅಧ್ಯಯನಕ್ಕೆ ಒಳಗುಮಾಡಿದ ಡಾ. ಬಸವರಾಜ ಗೋಡಗಂಟಿಯವರು; “ಮೂಲ ಕನ್ನಡದಲ್ಲಿ ಸ್ವರಾಂತ ಪದಗಳಿದ್ದರೂ ವ್ಯಂಜನಾಂತಗಳೇ ಹೆಚ್ಚು. ಈ ವ್ಯಂಜನಾಂತಗಳು ಹೆಚ್ಚಾಗಿ ಅನುನಾಸಿಕದಿಂದ ಕೊನೆಯಾಗುತ್ತವೆ. ಅರೆ ಸ್ವರಗಳಾದ /ಯ್/, /ಲ್/ ಧ್ವನಿಗಳೂ ಪದದ ಕೊನೆಯಲ್ಲಿ ಇದ್ದು ಹೆಚ್ಚಿನವು ಅನುನಾಸಿಕದಿಂದ ಕೊನೆಯಾಗುವವು. ಕನ್ನಡದ ಐದು ಅನುನಾಸಿಕಗಳಾದ /ಙ್/, /ಞ್/, /ಣ್/, /ನ್/ ಮತ್ತು /ಮ್/ ಇವುಗಳಲ್ಲಿ /ನ್/, /ಣ್/ಮತ್ತು /ಮ್/ ಮಾತ್ರವೆ ಹೆಚ್ಚು ಬಳಕೆಯಾಗಿರುವುವು. ಇದರಲ್ಲಿ /ನ್/ಬಳಕೆಯೇ ಹೆಚ್ಚೆಂಬುದು ವಿದ್ವಾಂಸರ ಮತ. ಆದರೆ ಅನೇಕರು ಹೀಗೆ ಬರುವ ವ್ಯಂಜನವನ್ನು /ಮ್/ ಎಂದು ಭಾವಿಸಿದ್ದುಂಟು”[1] ಎಂದಿದ್ದಾರೆ.

### 2. ಬಿಂದು: ಪ್ರಾಚೀನ ವ್ಯಾಕರಣಕಾರರು

ಪ್ರಾಚೀನ ವ್ಯಾಕರಣ ಗ್ರಂಥಗಳ ಪ್ರತಿನಿಧಿಯಾಗಿ ‘ಬಿಂದು’ ಕುರಿತ ವಿವರಗಳನ್ನು ಗಮನಿಸಲು ಇಲ್ಲಿ ಕೇಶಿರಾಜನ ಶಬ್ದಮಣಿ ದರ್ಪಣದಲ್ಲಿಯ ವಿವರಗಳಿಗೆ ಪ್ರಾಧಾನ್ಯತೆಯನ್ನು ನೀಡಲಾಗಿದೆ; ಅವು ಇಂತಿವೆ; “...ಬಿಂದುವುಂ ವಿಸರ್ಗಮುಮೆಂದಕ್ಕುಮಿವೆಯ್ದೆ ಯೋಗವಾಹಂ...”(ಸೂತ್ರ27)[2] ಮುಂದುವರೆದು 41ನೆಯ ಸೂತ್ರದ ವೃತ್ತಿಯಲ್ಲಿ “ಸ್ವರದಿಂ ವರ್ಗದಿಂ ಅವರ್ಗದಿಂ ಯೋಗವಾಹದಿಂ ದೇಶೀಯಂಗಳಿಂ–ಇಂತು ಶುದ್ಧಾಕ್ಷರಂಗಳೇ ಕನ್ನಡದೊಳ್ ಪಂಚವಿಧಮೆಂದು ಕವಿಗಳ್ ಬಾಲಶಿಕ್ಷೆಯಂ ಮಾಳ್ಪರ್”[3] 42ನೆಯ ಸೂತ್ರದಲ್ಲಿ ದೇಸಿಯವನ್ನು

ಕೂಡಿಸಿ ಅಚ್ಚಗನ್ನಡಕ್ಕೆ ಕೆಲವು ವರ್ಣಗಳನ್ನು ಕಳೆಯುವಾಗ, ವಿಸರ್ಗವನ್ನು ಕಳೆದು ಬಿಂದುವನ್ನು ಉಳಿಸಿಕೊಳ್ಳುತ್ತಾನೆ. ಅಲ್ಲದೆ ಯೋಗವಾಹಗಳಲ್ಲಿ ಜಿಹ್ವಾಮೂಲೀಯ ಮತ್ತು ಉಪಧ್ಮಾನೀಯಗಳ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ.

**3. ಬಿಂದು : ಆಧುನಿಕ ವ್ಯಾಕರಣಕಾರರು**

ಅ. ವ್ಯಾಕರಣಸಾರ: ಈ ಕೃತಿಯಲ್ಲಿ ವರ್ಣಮಾಲೆಯನ್ನು; ಸ್ವರಗಳು, ವ್ಯಂಜನಗಳು, ಯೋಗವಾಹಗಳು ಎಂದು ಮೂರು ವರ್ಗಗಳಲ್ಲಿ ಗುರಿತಿಸಿಕೊಂಡು, ಬಿಂದುವನ್ನು ಮೂರನೆಯ ವರ್ಗವಾದ ಯೋಗವಾಹಗಳು ಎಂಬ ಭಾಗದಲ್ಲಿ ಸೇರಿಸಲಾಗಿದೆ. ಈ ಭಾಗದಲ್ಲಿ ಮೊದಲಿಗೆ ಬಿಂದು ಇದ್ದು, ತರುವಾಯದಲ್ಲಿ ಕ್ರಮವಾಗಿ ವಿಸರ್ಗ, ಜಿಹ್ವಾಮೂಲೀಯ, ಉಪಧ್ಮಾನೀಯಗಳಿವೆ.[4] ಮುಂದುವರೆದು ವಿವರಣೆಗಳಲ್ಲಿ ಯೋಗವಾಹ ಎಂದರೆ; "ಮತ್ತೊಂದರ ಸಹಾಯದಿಂದ ಒಯ್ಯಲ್ಪಡತಕ್ಕದ್ದು ಎಂದರ್ಥ. ಇದಕ್ಕೆ ಸ್ವಂತ ಉಚ್ಚಾರಣೆಯಿಲ್ಲ. ಸ್ವರಾಕ್ಷರದ ಸಹಾಯದಿಂದಲೇ ಉಚ್ಚರಿಸಬೇಕು. ಇದರಲ್ಲಿ ಅನುಸ್ವಾರ, ವಿಸರ್ಗವೆಂದು ಎರಡು ವಿಧ. ವಿಸರ್ಗವು ಕನ್ನಡದಲ್ಲಿ ಸಹಜವಾಗಿ ಇಲ್ಲ. ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಬಳಸುವಾಗ ಇದು ಪ್ರಯೋಗವಾಗುತ್ತದೆ"[5]

ಆ. ಕನ್ನಡ ಮಧ್ಯಮ ವ್ಯಾಕರಣ: "ಹಂಸ, ದುಃಖ ಎಂಬ ಎರಡು ಪದಗಳನ್ನು ಈಗ ಬಿಡಿಸಿ ನೋಡಿ. ಹಂಸ=ಹ್–ಅ–ಂ–ಸ್–ಅ, ದುಃಖ= ದ್–ಉ–ಃ–ಖ್–ಅ. ಮೊದಲನೆಯದರಲ್ಲಿ ಅಕಾರಕ್ಕೂ ಸಕಾರಕ್ಕೂ ನಡುವೆ ಇರುವ ವರ್ಣಕ್ಕೆ (ಂ) 'ಅನುಸ್ವಾರ' ಎಂದೂ, ಎರಡನೆಯದರಲ್ಲಿ ಉಕಾರಕ್ಕೂ ಖಕಾರಕ್ಕೂ ನಡುವೆ ಇರುವ ವರ್ಣಕ್ಕೆ (ಃ) 'ವಿಸರ್ಗ' ಎಂದೂ ಹೆಸರು. ಸ್ವರದ ಸಹಾಯವಿಲ್ಲದೆ ಇವೆರಡು ವರ್ಣಗಳನ್ನೂ ಉಚ್ಚರಿಸಲು ಸಾಧ್ಯವಿಲ್ಲ; ಆದಕಾರಣ ಇವು ವ್ಯಂಜನಗಳೇ."[6]

ಇ. ಕನ್ನಡ ಕೈಪಿಡಿ: ಕೈಪಿಡಿಕಾರರು ಕೇಶಿರಾಜನನ್ನು ಅನುಸರಿಸಿಕೊಂಡು ಕನ್ನಡ ವರ್ಣಮಾಲೆಯನ್ನು 47 ವರ್ಣಗಳೆಂದು ಒಪ್ಪಿಕೊಂಡು, ಸ್ವರಗಳು ವ್ಯಂಜನಗಳು ಹಾಗೂ ಅನುಸ್ವಾರ ಎಂದು ಮೂರು ಗುಂಪು ಮಾಡಿದ್ದುಂಟು. ತರುವಾಯದಲ್ಲಿ ಶಕಟರೇಫೆ ಮತ್ತು ರಳಗಳ ಕುರಿತು ವಿವರಿಸುತ್ತಾರೆ.[7]

**4. ಬಿಂದು : ಆಧುನಿಕ ಭಾಷಾವಿಜ್ಞಾನಿಗಳು**

ಕೇಶಿರಾಜನು ನಿರೂಪಿಸಿದ ಶುದ್ಧಗೆಯನ್ನು ವಸ್ತುನಿಷ್ಠ ಅಧ್ಯಯನಕ್ಕೆ ಒಳಪಡಿಸಿ ಅಥವಾ ಆಧುನಿಕ ಭಾಷಾವಿಜ್ಞಾನದ ಧ್ವನಿಮಾ ನಿರ್ಣಯ ತತ್ವಗಳಿಂದ ಪರಿಶೀಲಿಸಿದ ಕೆಲವು ವಿದ್ವಾಂಸರು ಬಿಂದುವನ್ನು ಕನ್ನಡ ವರ್ಣಮಾಲೆಯಿಂದ ಕಳೆ/ತೆಗೆಯಬಹುದು ಎಂದಿದ್ದಾರೆ. ಮುಂದುವರೆದು ಕನ್ನಡ ಬರಹದಲ್ಲಿ ಬಿಂದು ನಿರ್ವಹಿಸುವ ಕಾರ್ಯವನ್ನು 'ತ'ವರ್ಗದ ಅನುನಾಸಿಕವಾದ 'ನ್'ದಿಂದ ನಿರ್ವಹಿಸಬಹುದೆಂದು ಸೂಚಿಸಿದ್ದಾರೆ.[8]

**ಆ. ಬಿಂದು ಕುರಿತ ಪ್ರಮುಖ ನಿಲುವುಗಳಿಂದ ಮೂಡುವ ಪ್ರಶ್ನೆಗಳು ಮತ್ತು ಅವುಗಳ ಸಮಾಧಾನಗಳು**

1. ವ್ಯಂಜನಾಂತ್ಯ ಕನ್ನಡ ಪದಗಳಲ್ಲಿಯ /ನ್/ದ ಹೆಚ್ಚಿನ ಬಳಕೆಗಳನ್ನು /ಮ್/ ವೆಂದು ಭಾವಿಸಲು ಕಾರಣಗಳೇನು? ವ್ಯಂಜನಾಂತ್ಯ ಕನ್ನಡ ಪದಗಳಲ್ಲಿಯ 'ನ್'ದ

ಹೆಚ್ಚಿನ ಬಳಕೆಗಳನ್ನು ‘ಮ್’ವೆಂದು ಒಪ್ಪಲು ಕಾರಣಗಳನ್ನು ಅವಲೋಕಿಸಿದಾಗ; ಅನುನಾಸಿಕಗಳನ್ನು ಅನುಸ್ವಾರವೆಂಬ ಪರಿಭಾಷೆಯಲ್ಲಿ ಬಿಂದುವಿನ ಸಂಕೇತದಿಂದ ಸ್ವರದೊಂದಿಗೆ ಸ್ಥಾನ ಕಲ್ಪಿಸಿಕೊಂಡು, ಅದರ ಉಚ್ಚಾರಣೆಯನ್ನು ‘ಮ್’ ಎಂದು ರೂಢಿಸಿದ ಪ್ರಕ್ರಿಯೆಯ ಫಲ.

2. ಪಾರಂಪರಿಕ ವ್ಯಾಕರಣಕಾರರು ಬಿಂದುವಿನ ಆಕಾರ/ ರೂಪವನ್ನು ಸ್ಪಷ್ಟಪಡಿಸಿದ್ದಾರೆ. ಆದರೆ, ಅದರ ಉಚ್ಚರಣೆಯನ್ನು ಸ್ಪಷ್ಟಪಡಿಸುವುದಿಲ್ಲ. ಜೀಹ್ವಾಮೂಲೀಯ ಹಾಗೂ ಉಪಧ್ಮಾನೀಯಗಳ ಉಚ್ಚಾರಣೆಯ ನೆಲೆಯನ್ನು ಸೂಚಿಸಿದ್ದಾರೆ ಯಾಕೆ? ಅಕ್ಷರ/ ಶುದ್ಧಗೆ ನಿರೂಪಣೆಯಲ್ಲಿ ಧ್ವನಿ ಮತ್ತು ಲಿಪಿ ಸಂಬಂಧವನ್ನು ಸ್ಪಷ್ಟಮಾಡಿಕೊಳ್ಳದೆ, ಅವು ಒಂದಕ್ಕೊಂದು ಪರ್ಯಾಯ ಪದಗಳೆಂಬಂತೆ ಪರಿಗಣಿಸಿಕೊಂಡದ್ದು ಕಾರಣವಾಗಿದೆ. ಬಿಂದು ಬಿಟ್ಟು ಉಳಿದ ಯೋಗವಾಹಗಳು ಕೇವಲ ಅಂದಿನ ಸ್ವೀಕೃತ ರೂಪಗಳಲ್ಲಿ ಮಾತ್ರ ಬಳಕೆಯಾಗುತ್ತಿರುವುದು ಕಾರಣವಾಗಿ ತೋರುತ್ತದೆ. ಬಿಂದು ಸ್ವೀಕೃತ ಹಾಗೂ ಸ್ವೀಕೃತೇತರ ರೂಪಗಳಲ್ಲಿಯೂ ಬಳಕೆಯಾಗುವುದರಿಂದ ಗೊಂದಲವಾಗಿ ಸಂಸ್ಕೃತದಂತೆ ಕನ್ನಡಕ್ಕೂ ಸಹ ಸಹಜವಾಗಿಸಿಕೊಂಡು ಅನುಸ್ವಾರವೆಂದು ಪರಿಗಣಿಸಲಾಗಿದೆ.

3. ಬಿಂದುವನ್ನು ಯೋಗವಾಹ, ಅನುನಾಸಿಕ, ವ್ಯಂಜನವೆಂದು ಸ್ಪಷ್ಟಪಡಿಸಿಕೊಂಡಿದ್ದರೂ ವರ್ಣಮಾಲೆಯಲ್ಲಿ ಸ್ವರಗಳ ಪಟ್ಟಿಯಲ್ಲಿ ಸೇರಿಸಿಕೊಳ್ಳಲು ಕಾರಣವೇನು? ಕನ್ನಡ ವ್ಯಾಕರಣಗಳು ವರ್ಣಮಾಲೆಯನ್ನು ನಿರೂಪಿಸುವಾಗ; ಸಂಸ್ಕೃತ ಮಾದರಿಯನ್ನೇ ಅನುಸರಿಸಿ ಸ್ವರ, ವ್ಯಂಜನ, (ವರ್ಗ, ಅವರ್ಗ)ವೆಂದು ವಿಭಜಿಸಿ ವ್ಯಂಜನಗಳ ಬದಲಾಗಿ ವ್ಯಂಜನಾಕ್ಷರಗಳನ್ನು ಸೇರಿಸಿಕೊಳ್ಳುವ ಕ್ರಮ ಬೆಳೆದು ಬಂದಿದೆ. ಈ ಕ್ರಮದಲ್ಲಿ ಅನುಸ್ವಾರವನ್ನು ಸಂಸ್ಕೃತದಂತೆ ಅನುನಾಸಿಕಕ್ಕಿಂತ ಭಿನ್ನವೆಂಬ ಭ್ರಮೆಯಿಂದ ಅದಕ್ಕೆ ಸ್ವತಂತ್ರ ಉಚ್ಚಾರಣೆಯು ಇಲ್ಲವೆಂಬ ವಿವರಣೆಗಳಿಂದ ‘ಅ’ ಎಂಬ ಸ್ವರದೊಂದಿಗೆ ಸೇರಿಸಿ ಉಚ್ಚಾರಣೆಯನ್ನು ರೂಢಿಸುತ್ತಾ ಸಂಸ್ಕೃತದಂತೆ ಕನ್ನಡದಲ್ಲಿ ಲಿಪಿಯನ್ನು ಬೆಳೆಸಿಕೊಂಡು, ಸಂಧ್ಯಕ್ಷರಗಳ ತರುವಾಯದಲ್ಲಿ ಸ್ವರ ಭಾಗದಲ್ಲಿ ಪ್ರತ್ಯೇಕವೆಂಬಂತೆ ಸ್ಥಾನವನ್ನು ಕಲ್ಪಿಸಲಾಗಿದೆ. ಇತರ ದ್ರಾವಿಡ ಭಾಷೆಗಳನ್ನು ಗಮನಿಸಿದಾಗ ತಮಿಳಿನಲ್ಲಿ ಈ ಕ್ರಮ ಇಲ್ಲ. ತೆಲುಗು ಮಲೆಯಾಳಂಗಳಲ್ಲಿ ಕನ್ನಡದಂತೆ ಇದೆ. ತಮಿಳಿನಲ್ಲಿ ಬಿಂದು ಪ್ರತಿನಿಧಿಸುವ ಒಟ್ಟು ಧ್ವನಿಗಳನ್ನು ಅನುನಾಸಿಕಗಳೆಂದು ಮಾತ್ರ ಪರಿಗಣಿಸಲಾಗಿದೆ. ಉದಾ: ಕಂಬ ಕಾಮಾಯಣ ಎಂಬಿಲ್ಲಿಯ ಕಂಬ ಎಂಬ ರೂಪವನ್ನು ‘ಕಮ್ಪ’ (ಉಚ್ಚಾರಣೆ ಕಂಬ) ಬರೆಯಲಾಗುತ್ತದೆ.

4. ಬಿಂದು ವಿಸರ್ಗಗಳಿಗೆ ಸ್ವತಂತ್ರ ಉಚ್ಚಾರಣೆ ಇಲ್ಲವೆಂಬುದು ಇವುಗಳಿಗೆ ಮಾತ್ರ ಸೀಮಿತವಾದ ಲಕ್ಷಣವೇ? ಬಿಂದು ವಿಸರ್ಗಗಳಿಗೆ ಸ್ವತಂತ್ರ ಉಚ್ಚಾರಣೆ ಇಲ್ಲವೆಂಬುದು ಇವುಗಳಿಗೆ ಮಾತ್ರ ಸೀಮಿತವಾದ ಲಕ್ಷಣವಲ್ಲ. ಎಲ್ಲಾ ವ್ಯಂಜನಗಳಿಗೆ ಅನ್ವಯಿಸುವ ಲಕ್ಷಣ. ಆ ಕಾರಣಕ್ಕೆ ವ್ಯಂಜನಗಳನ್ನು ಕಲಿಸುವಾಗ/ರೂಢಿಸುವಾಗ, ವ್ಯಂಜನಗಳನ್ನು ಬಳಸದೆ, ವ್ಯಂಜನಾಕ್ಷರಗಳನ್ನು ಬಳಸಲಾಗುತ್ತದೆ. ಸೂಕ್ಷ್ಮವಾಗಿ ಗಮನಿಸಿದಾಗ ಕನ್ನಡ ಲಿಪಿ ವ್ಯವಸ್ಥೆಯಲ್ಲಿ ಬಿಂದು, ಅನುನಾಸಿಕ ವ್ಯಂಜನಗಳ ನಿರ್ದಿಷ್ಟ ‘ಸಂದರ್ಭ’ದ ಲಿಪಿ. ಪದರಚನೆಯ ವ್ಯಂಜನ ಗುಚ್ಛ/ದ್ವಿತ್ವಗಳಲ್ಲಿ ಮೊದಲ ವ್ಯಂಜನ ಅನುನಾಸಿಕವಾಗಿದ್ದು, ತರುವಾಯದ ವ್ಯಂಜನ ಅದೇ ವರ್ಗದ ಅನುನಾಸಿಕೇತರ ವರ್ಗೀಯ ವ್ಯಂಜನವು

ಪ್ರಸಾರವಾಗುವ ನಿರ್ದಿಷ್ಟ ಪರಿಸರದಲ್ಲಿಯ ಅನುನಾಸಿಕ ಸಂಕೇತದ ಬದಲಾಗಿ ಬಿಂದುವನ್ನು ಬಳಸಲಾಗುತ್ತದೆ. ಉದಾ: ಹಂಪೆ, ಅಂಗಿ; ಮೊದಲ ಉದಾಹರಣೆಯಲ್ಲಿ 'ಮ್'ದ ಉಚ್ಚಾರಣೆಯನ್ನು ಪ್ರತಿನಿಧಿಸಿದರೆ, ಎರಡನೆಯ ಉದಾಹರಣೆಯಲ್ಲಿ 'ಙ್' ಉಚ್ಚಾರಣೆಯನ್ನು ಪ್ರತಿನಿಧಿಸಿದೆ. ಅಂದರೆ ಬಿಂದುವಿನ ಉಚ್ಚಾರಣೆ 'ಮ್'ಮಾತ್ರವಲ್ಲ. ಅದನ್ನು ಬಳಸಿ ಕನ್ನಡ ರೂಪಗಳನ್ನು ಬರೆಯುವಾಗ ನಿರ್ದಿಷ್ಟ ಪರಿಸರದಲ್ಲಿ ಅದರ ಉಚ್ಚಾರಣೆ 'ಙ್/ ಞ್/ ಣ್/ ನ್/ ಮ್' ಐದು ರೀತಿಯಲ್ಲಿದೆ.

5. ಅನೇಕ ವಿರೋಧಗಳ ಮಧ್ಯ ದೀರ್ಘ 'ೠ' ಕಾರವನ್ನು ಬಿಡಲಾಯಿತು. ಆಧುನಿಕರು ಬಿಂದುವನ್ನು ವರ್ಣಮಾಲೆಯಿಂದ ಕೈ ಬಿಡಬಹುದೆಂದು ಸೂಚಿಸಿದ್ದರೂ ಬಿಡಲಾಗಿಲ್ಲ ಯಾಕೆ? ಅನೇಕ ವಿರೋಧಗಳ ಮಧ್ಯ ದೀರ್ಘ ೠಕಾರವನ್ನು ಬಿಡಲಾಯಿತು. ಆಧುನಿಕ ಭಾಷಾವಿಜ್ಞಾನಿಗಳು ಬಿಂದುವನ್ನು ವರ್ಣಮಾಲೆಯಿಂದ ಕೈ ಬಿಡಬಹುದೆಂಬುದು ಸೂಚಿಸಿದ್ದರೂ ಬಿಡಲಾಗದಿದ್ದಕ್ಕೆ ಕಾರಣಗಳು ಇಂತಿವೆ; ದೀರ್ಘ ೠಕಾರದಿಂದ ಬರೆಯುವ ಪದಗಳು ಕನ್ನಡದಲ್ಲಿ ಬಳಕೆಯಲ್ಲಿರಲಿಲ್ಲ. ಅದನ್ನು ಸಂಪೂರ್ಣ ತೊರೆಯಲು ಅದು ಸಕಾರಣವಾಗಿ ಕಂಡಿತ್ತು. ಅದರಂತೆ ಬಿಂದುವು ಒಂದು ಪ್ರತೇಕ ಸ್ವೀಕೃತಿ ಧ್ವನಿ ಹಾಗೂ ಲಿಪಿಯಾಗಿಲ್ಲ. ೠಕಾರಕ್ಕಿಂತ ಭಿನ್ನ ಲಿಪಿ ಸ್ವರೂಪವನ್ನು ಹೊಂದಿ ನಿರ್ದಿಷ್ಟ ಪರಿಸರದಲ್ಲಿ ಬಳಸುವ ಅನುನಾಸಿಕಗಳ ಹೆಚ್ಚುವರಿ ಲಿಪಿಯಾಗಿದೆ. ಈ ಪರಿಸರದಲ್ಲಿ ಉಳಿದ ವ್ಯಂಜನಗಳಂತೆ ವರ್ಣಮಾಲೆಯಲ್ಲಿಯ ವರ್ಗಾಂತ್ಯಗಳನ್ನು ವ್ಯಂಜನಗಳನ್ನು ಬಳಸುವುದಿಲ್ಲ. ವ್ಯಂಜನ ಗುಚ್ಚಗಳನ್ನು ಸರಳವಾಗಿ ಬರೆಯಲು ನೆರವಾಗುತ್ತದೆ ಮತ್ತು ವ್ಯಂಜನ ಗುಚ್ಚಗಳಲ್ಲಿ ಎರಡನೆಯ ವ್ಯಂಜನ(ಒತ್ತಕ್ಷರ) ವನ್ನು ಅಡಿಯಲ್ಲಿ ಬರೆಯುವ ಶ್ರಮವನ್ನು ಕಡಿಮೆ ಮಾಡುವುದಾಗಿದೆಂದು ಊಹಿಸಿಕೊಳ್ಳಲು ಅನುವುಮಾಡಿದೆ ಎಂದೆಲ್ಲ ಭಾವಿಸಬಹುದು. ಶ್ರಮ ಕಡಿಮೆಗಿಂತ ನಿಖರತೆಯನ್ನು ಮುಖ್ಯವಾಗಿಸಿಕೊಳ್ಳುವುದು ಅಗತ್ಯವೆನಿಸಿಲ್ಲ ಎನ್ನಬೇಕಾಗುತ್ತದೆ. ಅನುನಾಸಿಕಗಳ ಉಚ್ಚಾರಣೆಯಲ್ಲಿ ಬಿಂದುವಿನ ಈ ಪೂರಕ ವ್ಯವಸ್ಥೆಯನ್ನು 'ನ್'ದಿಂದ ನಿಭಾಯಿಸಬಹುದು. ಇದು ಆಚರಣೆಗೆ ಬಂದಿಲ್ಲ. ಸಂಶೋಧನೆಯ ಫಲಗಳಿಗೆ ಇತರ ವಿಜ್ಞಾನ ಹಾಗೂ ಸಮಾಜವಿಜ್ಞಾನ ಶಾಖೆಗಳಲ್ಲಿ ಇದ್ದಂತೆ ಭಾಷೆಯ ಸಂದರ್ಭದಲ್ಲಿ ಮನ್ನಣೆ ಕೊಡುತ್ತಿಲ್ಲವೆಂಬುದು ಮುಖ್ಯ. ಈ ನಿಲುವನ್ನು ಇಚ್ಛಾಶಕ್ತಿಯ ಕೊರತೆ ಎಂದರೆ ಸರಿ ಎನಿಸುವುದೆ? ಉಚಿತ ಬದಲಾವಣೆಗೆ ಕೆಲವು ಸಾರಿ ಅನಾಸಕ್ತಿಯೇ ಬಲವಾದ ವಿರೋಧಿವಾಗಿರುತ್ತದೆ ಎಂಬುದಕ್ಕೆ ಇದು ಉತ್ತಮ ಸಾಕ್ಷಿಯಾಗಿದೆ.

ಇ. ಎರಡನೆಯ ಭಾಷೆಯಾಗಿ ಬೋಧಿಸುವಾಗ/ಕಲಿಯುವಾಗ ಮೂಡುವ ಪ್ರಶ್ನೆಗಳು ಮತ್ತು ಸಮಾಧಾನಗಳು

6. ಬಿಂದುವಿಗೆ ಒಂದು ಉಚ್ಚಾರಣೆಯೋ ಹಲವು ಉಚ್ಚಾರಣೆಗಳೋ? ಕನ್ನಡ ಪದಗಳನ್ನು ಬರೆಯುವಲ್ಲಿ ಬಿಂದುವಿಗೆ ಒಂದು ಉಚ್ಚಾರಣೆ ಇಲ್ಲ. ಈಗಾಗಲೆ ಹೇಳಿದಂತೆ ಐದು ಉಚ್ಚರಣೆಗಳು ಇವೆ. ಆದರೆ 'ಅಂ'ದಲ್ಲಿಯ ಬಿಂದುವಿನ ಉಚ್ಚಾರಣೆ 'ಮ್'ವೆಂದು, ಅದನ್ನು ಅನುಸ್ವಾರವೆಂದು ವಿವರಿಸಿ ಙ್,ಞ್,ಣ್,ನ್ ಹಾಗೂ ಮ್‌ಗಳನ್ನು ಅನುನಾಸಿಕ/ ನಾಸಿಕಗಳೆಂದು ಅಸ್ಪಷ್ಟವಾಗಿ ಪರಿಚಯಿಸಿಕೊಂಡಿರುವುದರಿಂದ ಇವುಗಳ ಮಧ್ಯ ಪರಸ್ಪರ ಸಂಬಂಧಿವಿಲ್ಲವೆಂಬಂತಹ ತಪ್ಪು ತಿಳುವಳಿಕೆಯು ಕಲಿಕೆ/ ಬೋಧನಾ ಪರಿಸರದಲ್ಲಿ ಸೃಷ್ಟಿಯಾಗಿದೆ. ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಪ್ರಥಮ, ದ್ವಿತೀಯ ಹಾಗೂ

ತೃತೀಯ ಭಾಷೆ ಕಲಿಕೆಯಲ್ಲಿ ಇದೊಂದು ಅಪ್ರಜ್ಞಾಪೂರಕವಾಗಿಯೋ ಭಯದ ರೂಢಿಯಾಗಿಯೋ ಕರಗತವಾಗುತ್ತದೆ. ಕಾಲೇಜು ಹಂತದ ವಿದ್ಯಾರ್ಥಿಗಳಲ್ಲಿ ವಿವೇಚನಾ ಸಾಮರ್ಥ್ಯ ಸಮರ್ಥವಾಗಿರುವ ಹಂತದಲ್ಲಿ ಕನ್ನಡವನ್ನು ಎರಡನೆಯ ಭಾಷೆಯಾಗಿ ಕಲಿಸುವ/ ಕಲಿಯುವಾಗ, ಹಲವು ಲಿಪಿ ಸಂಕೇತಗಳಿಗೆ ಲಭಿಸಿದ ಸ್ಪಷ್ಟತೆ ಬಿಂದುವಿಗೆ ಲಭಿಸದೆ ತೀರ ಗೊಂದಲ ಬೆಳದು ಕಲಿಕೆಯನ್ನು ಜಟಿಲವಾಗಿಸುತ್ತದೆ. ಕೆಲವೊಮ್ಮೆ ಕಲಿಸುವವರ ಬಗ್ಗೆ ಕಲಿಯುವವರು ಅನುಮಾನದಿಂದ ನೋಡುವಂತಾಗುತ್ತದೆ. ಬಿಂದುವಿಗೆ ಸ್ವತಂತ್ರ ಉಚ್ಚಾರಣೆ ಇಲ್ಲವೆಂಬುದು ಒಂದು ಲಕ್ಷಣವಾದರೆ, ಅದಕ್ಕೆ 'ಮ್' ಮಾತ್ರವಲ್ಲದೆ 'ಙ್, ಞ್, ಣ್, ನ್ ಹಾಗೂ ಮ್', ಈ ಐದು ಉಚ್ಚಾರಣೆಗಳಿವೆ ಎಂಬುದು ಮತ್ತೊಂದು ಲಕ್ಷಣವಾಗಿದೆ.

7. ಕನ್ನಡ ಲಿಪಿ ವ್ಯವಸ್ಥೆಯ ಬೋಧನೆ/ಕಲಿಕೆಯಲ್ಲಿ ಇದು ಸಮಸ್ಯೆಯಾಗುವುದೇಕೆ? ಬಿಂದುವಿನ ಅಪೂರ್ಣ ಲಕ್ಷಣವನ್ನೇ ಪೂರ್ಣ ಲಕ್ಷಣವೆಂದು ಭ್ರಮಿಸಿರುವುದೇ ಇಂಥ ಸಮಸ್ಯೆಗೆ ಕಾರಣವಾಗಿದೆ ಎಂಬುದನ್ನು ಈಗ ಬಿಡಿಸಿ ಹೇಳಬೇಕಾಗಿಲ್ಲ. ಬಿಂದುವಿಗೆ 'ಮ್'ದಂತೆ ಇತರ ಅನುನಾಸಿಕಗಳ ರೂಢಿ ಅಥವಾ ತರಬೇತಿಯಾಗದೇ ಇರುವುದು. ಕನ್ನಡ ಲಿಪಿ ವ್ಯವಸ್ಥೆಯಲ್ಲಿ ಇದರ ಸ್ಥಾನವನ್ನು ಸೂಕ್ಷ್ಮವಾಗಿ ತರ್ಕಿಸಿ ಹೊಂದಿಸಿಕೊಂಡರೆ ಇಂತಹ ಸಮಸ್ಯೆಗಳಿಗೆ ಸಮಾಧಾನ ಕಂಡುಕೊಂಡಂತಾಗುತ್ತದೆ. ವರ್ತಮಾನದ ಕನ್ನಡ ಲಿಪಿಯಲ್ಲಿ; ರ್ ಹಾಗೂ ಅನುನಾಸಿಕ ವ್ಯಂಜನಗಳಿಗೆ ಮಾತ್ರ ಮೂರು ಲಿಪಿಸಂಕೇತಗಳು ಬಳಕೆಯಾಗುತ್ತಿದ್ದು, ಉಳಿದ ವ್ಯಂಜನಗಳಿಗೆ ಎರಡೇ ಸಂಕೇತಗಳು ಬಳಕೆಯಾಗುತ್ತವೆ. ಸ್ಪಷ್ಟತೆಗೆ ಮಂದಿನ ಭಾಗ ಗಮನಿಸಿ.

| ವ್ಯಂಜನಾಕ್ಷರಗಳು | ಅದ್ಯವ್ಯಂಜನ/ವ್ಯಂಜನ 1 | ಒತ್ತಕ್ಷರ/ ವ್ಯಂಜನ 2 | ಹೆಚ್ಚುವರಿ ಸಂಕೇತ |
|---|---|---|---|
| ರ | ರ್ | ್ರ | ೯ |
| ಅನುನಾಸಿಕಗಳು | ಙ್ | ್ಙ | ಂ |
| | ಞ್ | ್ಞ | ಂ |
| | ಣ್ | ್ಣ | ಂ |
| | ನ್ | ್ನ | ಂ |
| | ಮ್ | ್ಮ | ಂ |
| ಇತರ ವ್ಯಂಜನಾ | ಕ್ | ್ಕ | ಇಲ್ಲ |
| ಕ್ಷರಗಳ ಪ್ರತಿನಿಧಿ | ತ್ | ್ತ | ಇಲ್ಲ |
| ಯಾಗಿ ಕ,ತ,ಲ | ಲ್ | ್ಲ | ಇಲ್ಲ |

8. ಕನ್ನಡ ವರ್ಣಮಾಲೆಯಲ್ಲಿ ಇದರ ಸ್ಥಾನದಿಂದ ಸಮಸ್ಯೆ ಆಗಿದೆಯೇ? ಇದಕ್ಕೆ ಎಲ್ಲಿ ಸ್ಥಾನ ಕಲ್ಪಿಸಬೇಕು? ವರ್ಣಮಾಲೆಯಲ್ಲಿ ಬಿಂದುವಿಗೆ ಸ್ವರಗಳೊಂದಿಗೆ ಸ್ಥಾನ ಕಲ್ಪಿಸಿ 'ಮ್'ದ ಉಚ್ಚಾರಣೆಯಿಂದ ರೂಢಿಸುವುದರಿಂದ ಸಮಸ್ಯೆ ಭಿನ್ನ ವಲಯದಲ್ಲಿ ಭಿನ್ನವಾಗಿರುತ್ತದೆ. ಇದರ ಸ್ಥಾನವನ್ನು ಕನ್ನಡ ವರ್ಣಮಾಲೆಯಿಂದ ಅವಲೋಕಿಸಿದಾಗ; ಯಾವುದೇ ವ್ಯಂಜನವು ವ್ಯಂಜನ ಗುಚ್ಛದಲ್ಲಿ ಬಳಕೆಯಾಗುವಾಗ ಮೊದಲ ವ್ಯಂಜನದ ಎರಡನೆಯ ಲಿಪಿ/ಒತ್ತಕ್ಷರಕ್ಕೆ ವರ್ಣಮಾಲೆಯಲ್ಲಿ ಸ್ಥಾನಕೊಟ್ಟಿಲ್ಲ. ಅಲ್ಲದೆ 'ರ'ದ ಹೆಚ್ಚುವರಿ ಲಿಪಿಯಾದ '೯'(ಅರ್ಕಾವಳಿ/ಅರ್ಕಾವತ್ತು)ಗೆ ವರ್ಣಮಾಲೆಯಲ್ಲಿ ಸ್ಥಾನ

ನೀಡಿಲ್ಲ. 'ಙ, ಂ' ಇವರೆಡು ಒಂದೇ ಸ್ವರೂಪದವು ವ್ಯಂಜನ ಗುಚ್ಚದಲ್ಲಿ ಮೊದಲ ವ್ಯಂಜನವನ್ನು ಪ್ರತಿನಿಧಿಸುತ್ತವೆ. ಹೀಗಿರುವಾಗ ಅನುನಾಸಿಕ ವ್ಯಂಜನಗಳ, ವ್ಯಂಜನ ಗುಚ್ಚದಲ್ಲಿ ಬಳಕೆಯಾಗುವ ಮೊದಲ ವ್ಯಂಜನದ ಹೆಚ್ಚುವರಿ ಲಿಪಿಯಾದ ಬಿಂದುವಿಗೆ ವರ್ಣಮಾಲೆಯಲ್ಲಿ ಸ್ಥಾನ ಮಾಡಿಕೊಡುವುದೇಕೆ? ಬಿಂದುವೂ ನಿರ್ದಿಷ್ಟ ಪರಿಸರದಲ್ಲಿ ಬಳಸುವ ಹೆಚ್ಚುವರಿ ಲಿಪಿಯಾಗಿರುವುದರಿಂದ, ಒತ್ತರಗಳೊಂದಿಗೆ ಸ್ಥಾನ ಕಲ್ಪಿಸುವುದು. ಜೊತೆ ಕಲಿಕೆ/ ಬೋಧನೆ ಸಂದರ್ಭದಲ್ಲಿ ಅನುನಾಸಿಕಗಳ ವ್ಯಂಜನ ಗುಚ್ಚ ಸ್ವರೂಪವು ಸ್ಪಷ್ಟವಾಗುವಂತಹ ಹೆಚ್ಚು ಉದಾರಣೆಗಳಿಂದ ರೂಢಿ ಮಾಡಿಸುವುದರಿಂದ ಹಲವು ಗೊಂದಲಗಳಿಗೆ ಪೂರ್ಣ ವಿರಾಮ ಹಾಕಿದಂತಾಗುತ್ತದೆ.

**ಈ. ಅವರ್ಗೀಯ ವ್ಯಂಜನಗಳೊಂದಿಗೆ ಪ್ರಸಾರವಾಗುವ ಬಿಂದು**

ವ್ಯಂಜನ ಗುಚ್ಚಗಳಲ್ಲಿ ಪ್ರಸಾರವಾಗುವ ಬಿಂದು ಆಯಾ ವರ್ಗದ ವ್ಯಂಜನಗಳ ಮುಂದೆ ಅದೇ ವರ್ಗದ ಅಂತ್ಯವ್ಯಂಜನದ ಉಚ್ಚಾರಣೆಯನ್ನು ಹೊಂದಿರುತ್ತದೆ. ಅವರ್ಗೀಯ ವ್ಯಂಜನಗಳ ಮುಂದೆ ಪ್ರಸಾರವಾಗುವ ನಿರ್ದಿಷ್ಟತೆ ಬಿಂದುವನ್ನು 'ಮ್'ದ ಉಚ್ಚರಣೆಯಿಂದ ರೂಢಿಸುವುದರಿಂದ 'ಮ್' ಹೊರತಾದ ಅನುನಾಸಿಕಗಳ ಉಚ್ಛರಣೆಯು 'ಮ್' ಆಗಿ ರೂಢಿಯಾಗುತ್ತಿದೆ. ಅದು ಸಂಸ್ಕೃತದ ಸ್ವೀಕೃತ ರೂಪಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

'ಹ'ಕಾರ ಪೂರ್ವದಲ್ಲಿ ಬಿಂದುವು ಕೆಲವರ ಉಚ್ಚಾರಣೆಯಲ್ಲಿ 'ಕ'ವರ್ಗದ ಅನುನಾಸಿಕ ಉಚ್ಛಾರಣೆಯಾಗಿದ್ದರೂ ಹಲವರ ಉಚ್ಚಾರಣೆಯಲ್ಲಿ 'ಪ'ವರ್ಗದ ಅನುನಾಸಿಕ ಉಚ್ಛಾರಣೆಯಾಗಿದೆ. ಉದಾ: ಙ್>ಮ್ ಸಿಂಹ, ನರಸಿಂಹ

'ಯ' ಹಾಗೂ 'ಶ'ಕಾರ ಪೂರ್ವದಲ್ಲಿ ಬಿಂದುವು ಕೆಲವರ ಉಚ್ಛಾರಣೆಯಲ್ಲಿ 'ಚ'ವರ್ಗದ ಅನುನಾಸಿಕ ಉಚ್ಛಾರಣೆಯಾಗಿದ್ದರೂ ಹಲವರ ಉಚ್ಛಾರಣೆಯಲ್ಲಿ 'ಪ'ವರ್ಗದ ಅನುನಾಸಿಕ ಉಚ್ಛಾರಣೆಯಾಗಿದೆ. ಉದಾ: ಞ್>ಮ್ ಸಂಯೋಜನೆ, ಸಂಯುಕ್ತ. ಅಂಶ, ಆಂಶಿಕ,

ಸಂಲಗ್ನ, ಸಂವೇದನೆ, ಸಂವಾದ, ಮಾಂಸ, ಮೀಮಾಂಸೆ. ಈ ಉದಾಹರಣೆಗಳಲ್ಲಿ 'ಮ್'ಹೊರತಾದ ಉಚ್ಛಾರಣೆ 'ಮ್'ಕ್ಕೆ ಪರಿವರ್ತನೆಯಾಗಿ ಉಚ್ಛರಿಸುತ್ತಿರುವಂತಹ ಕ್ರಮ ಬೆಳೆದಿದೆ ಎನಿಸುತ್ತದೆ. ಈ ಅನುಮಾನದ ನಿವೃತ್ತಿಗೆ ಭಿನ್ನ ಆಯಾಮದ ಅವಲೋಕನ ಅಗತ್ಯವಿದೆ.

ಪರಂಪರೆಯಲ್ಲಿ ಕನ್ನಡಕ್ಕೆ ಸಂಸ್ಕೃತವು ಒಂದು ಅನಿವಾರ್ಯ ಮಾದರಿ, ಅನುಕರಣೀಯ ಹಾಗೂ ಪ್ರತಿಷ್ಠೆಯಾಗಿ ತೋರಿದ್ದುಂಟು. ಅದರ ಅನುಕರಣೆ ಕೆಲವು ಪ್ರಯೋಜನೆಗಳೊಂದಿಗೆ ಸಮಸ್ಯೆಗಳನ್ನುಂಟು ಮಾಡಿದೆ. ಬಿಂದುವನ್ನು ಅನುಸ್ವಾರವೆಂದು ಸಂಸ್ಕೃತ ರೂಪಗಳ ಶುದ್ಧತೆಗಾಗಿ ಗುರುತಿಸಿಕೊಂಡಿದ್ದರೆ, ಬಹುತೇಕ ಅವರ್ಗೀಯ ವ್ಯಂಜನಗಳ ಪೂರ್ವದ ಬಿಂದುವನ್ನು 'ಮ್' ಉಚ್ಚಾರಣೆಗೆ ಪರಿವರ್ತಿಸಿಕೊಂಡಿದೆ. ಅದರ ಫಲದಿಂದ, ಪದಾರ್ಥಗಳನ್ನು ವಿವರಿಸುವ ನಿಘಂಟು, ಕೋಶಗಳು ಬಿಂದು, ಯೋಗವಾಹ ಮುಂತಾದ ಪದಗಳಿಗೆ ಅರ್ಥವನ್ನು ವಿವರಿಸುವಲ್ಲಿ ಅವಘಡಗಳನ್ನು ಸೃಷ್ಟಿಸಿಕೊಂಡದ್ದು ಲಕ್ಷಿಸಬಹುದು. ವರ್ಣಗಳನ್ನು ಆಧರಿಸಿ ಕೈಗೊಳ್ಳಬಹುದಾದ ಬಹುತೇಕ ಕಾರ್ಯಗಳಲ್ಲಿ ತಪ್ಪು ನಿರ್ಧಾರಕ್ಕೆ ದಾರಿಮಾಡಿದೆ. ಒಂದು ಮಹತ್ವದ

ಉದಾಹರಣೆ; ಕನ್ನಡ ಕೋಶಗಳಲ್ಲಿ ಅಕಾರಾದಿಯನ್ನು ಅನುಸರಿಸುವ ಕ್ರಮದಲ್ಲಿ ಬಿಂದು ಸಹಿತ ರೂಪವು ಮೊದಲ ನಮೋದಾಗಿ ಸ್ಥಾನ ಪಡೆದಿದೆ. ಉದಾ: ಕನ್ನಡ ಸಾಹಿತ್ಯ ಪರಿಷತ್ತಿನ ಪರಿಷ್ಕೃತ(2001) ಸಂಕ್ಷಿಪ್ತ ಕನ್ನಡ ನಿಘಂಟಿನಲ್ಲಿ 1ನೆಯ ಪುಟದ 'ಅ' ನಮೋದಿನ ತರುವಾಯ, 9ನೆಯ ಪುಟದ ಕೊನೆಯ ಎರಡನೆಯ ನಮೋದಾಗಿ 'ಅಕಚ' ಎಂಬ ನಮೋದು ಇದೆ. ಇದು ಎರಡನೆಯ ನಮೋದು ರೂಪವಾಗಬೇಕಾಗಿತ್ತು. ಎಂಟು ಪುಟಗಳ ವ್ಯಾಪ್ತಿಯಲ್ಲಿ ಬಿಂದುಯುಕ್ತ (ಅಂಕ–ಅಂಸಕೂಟದ ಮಧ್ಯದ ನಮೋದುಗಳು) ನಮೋದುಗಳು ಮಧ್ಯದಲ್ಲಿ ಎಡೆಪಡೆದಿವೆ. ಇದೆಲ್ಲವೂ ವಿವೇಕದಲ್ಲಿ ಬೆಳೆದಂತಹ ಅಜ್ಞಾನದ ಪ್ರತೀಕವಾಗಿವೆ. ಕನ್ನಡ ನುಡಿ ಲಿಪಿಯ ಗೊಂದಲಗಳನ್ನು ಸರಳವಾಗಿಸುವುದು ಕನ್ನಡಲಿಪಿಯನ್ನು ಕಲಿಯುವ ಎಲ್ಲರಿಗೂ ಸರಳವಾಗಿ ಅನುಕೂಲವಾಗಬಲ್ಲದು.

**ಕೊನೆ ಟಿಪ್ಪಣೆ**

* ಬಿಂದುವಿನಂತೆ ಇನ್ನು ಕೆಲವು ಲಿಪಿಗಳ ಬಗ್ಗೆ ತರಕಾರಗಳು ಇವೆ. ಎರಡನೆಯ ಭಾಷೆಯಾಗಿ ಕನ್ನಡವನ್ನು ಕಲಿಸುವಾಗ ಬಿಂದುವಿನಷ್ಟೇ ಗೊಂದಲವನ್ನು ಋಕೈಹಿ ಲಿಪಿಯಿಂದಲೂ ಆಗುತ್ತಿದೆ. ಋಕೈ ತುಂಬ ಹಣಹಿ ಎಂದು ಬರೆಯಲು ಹೇಳಿದಾಗ ಋಕ್ಯ ತುಂಬ ಹಣಹಿ ಎಂದು ಬರೆಯುತ್ತಾರೆ.

** ಅನುಸ್ವಾರ: ಅಶೋಕನ ಕಾಲದ ಬ್ರಾಹೀ ಲಿಪಿಯಲ್ಲಿ ಅನುಸ್ವಾರವನ್ನು ಸೂಚಿಸಲು ಅಕ್ಷರದ ಎಡಭಾಗ ಮೇಲ್ಭಾಗದಲ್ಲಿ ಒಂದು ಬಿಂದುವನ್ನು ಬರೆಯುತ್ತಿದ್ದರು. ಇದೇ ಪದ್ಧತಿಯೇ ಕೆಲವು ಕಾಲ ಮುಂದುವರಿಯಿತು. ಕಾಲ ಕ್ರಮೇಣ ಈ ಬಿಂದು ಸ್ವಲ್ಪ ದಪ್ಪವಾಯಿತು. ಗಂಗಂರ ಶಾಸನಗಳಲ್ಲಿ ದಪ್ಪವಾದ ಬಿಂದುಗಳನ್ನು ಕಾಣಬಹುದು ರಾಷ್ಟ್ರಕೂಟ ಕಾಲದಲ್ಲಿ ಬಿಂದುವು ಅತಿ ಸಣ್ಣ ವೃತ್ತದಂತೆ ಪರಿವರ್ತಿತವಾಗುವುದನ್ನು ನಾವು ನೋಡುತ್ತೇವೆ. ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಈ ವೃತ್ತವು ಇನ್ನು ಸ್ವಲ್ಪ ದೊಡ್ಡದಾಗುತ್ತದೆ. ಹೊಯಸ್ಸಳರ ಕಾಲದಲ್ಲಿ ವೃತ್ತವು ದೊಡ್ಡದಾಗಿ ಅಕ್ಷರದ ಎಡ ಪಕ್ಕದಲ್ಲಿ ಅದೇ ಸಾಲಿನಲ್ಲಿ ಬರೆಯಲ್ಪಡುವುದನ್ನು ನೋಡುತ್ತೇವೆ. ಆದರೂ ಕೂಡ ಅಕ್ಷರದ ಮೇಲ್ಭಾಗದಲ್ಲಿ ಬರೆಯುವುದೂ ಕೂಡ ಬಳಕೆಯಲ್ಲಿದ್ದಿತು. ವಿಜಯನಗರ ಕಾಲದಲ್ಲಿ ಸೊನ್ನೆಯನ್ನು ಪಕ್ಕದಲ್ಲಿ ಬರೆಯುವ ಪ್ರವೃತ್ತಿ ಸ್ಥಿರಗೊಂಡಿತೆಂದು ಹೇಳಬಹುದು. ಅದೇ ಮುಂದೆಯೂ ಬಳಕೆಗೆ ಬಂದಿತು. ಎಂದು ಎ. ವಿ. ನರಸಿಂಹಮೂರ್ತಿ ಅಭಿಪ್ರಾಯ ಪಟ್ಟಿದ್ದಾರೆ. ಎ.ವಿ.ನರಸಿಂಹಮೂರ್ತಿ(1968) ಕನ್ನಡ ಲಿಪಿ ಉಗಮ ವಿಕಾಸ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು. ಪುಟ: 45.

1. ಹಳಗನ್ನಡ : ಸಂ. ಷ.ಶಟ್ಟರ್, ಅಭಿನವ ಪ್ರಕಾಶನ ಬೆಂಗಳೂರು–ಪುಟ: 229.
2. ಶಬ್ದಮಣಿದರ್ಪಣಂ–ಸಂ. ಡಿ.ಎಲ್. ನರಸಿಂಹಾಚಾರ್ ಶಾರದಾ ಮಂದಿರ ಪ್ರಕಾಶನ; ಮೈಸೂರು ಪುಟ: 22.
3. ಶಬ್ದಮಣಿದರ್ಪಣಂ–ಸಂ. ಡಿ.ಎಲ್. ನರಸಿಂಹಾಚಾರ್ ಶಾರದಾ ಮಂದಿರ ಪ್ರಕಾಶನ; ಮೈಸೂರು ಪುಟ: 39.
4. ವ್ಯಾಕರಣಸಾರ–ತ.ಸು.ಶಾಮರಾಯ, ಹಾಗೂ ನ.ಸುಬ್ರಹ್ಮಣ್ಯಂ; ತ.ವೆಂ.ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರ, ಮೈಸೂರು ಪುಟ: 2.

5. ವ್ಯಾಕರಣಸಾರ–ತ.ಸು.ಶಾಮರಾಯ, ಹಾಗೂ ನ.ಸುಬ್ರಹ್ಮಣ್ಯಂ; ತ.ವೆಂ.ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರ, ಮೈಸೂರು ಪುಟ: 7.
6. ಕನ್ನಡ ಮಧ್ಯಮ ವ್ಯಾಕರಣ–ತೀ.ನಂ.ಶ್ರೀಕಂಠಯ್ಯ; ಗೀತಾ ಬುಕ್ ಹೌಸ್, ನ್ಯೂ ಸ್ಟಾಚ್ಯು ಸರ್ಕಲ್, ಮೈಸೂರು ಪುಟ: 14.
7. ಕನ್ನಡ ಕೈಪಿಡಿ–1–ಪ್ರ.ಸಂ. ಡಾ .ಕೆ. ವಿ. ಪುಟ್ಟಪ್ಪ, ಮೈಸೂರು ವಿಶ್ವವಿದ್ಯಾನಿಲಯ, ಪುಟ:3.
8. ವಿವರಗಳಿಗೆ ನೋಡಿ; ವಿ. ಶಿವಾನಂದರವರ ಶಬ್ದಮಣಿ ದರ್ಪಣ ವಿಳಾಸ. ಪುಟ:52, ವಿಲ್ಯಂ ಮಾಡ್ತಾರವರ ಕನ್ನಡ ವ್ಯಾಕರಣ ಸಮಸ್ಯೆಗಳು, ಪುಟ:3.

**ಆಕರಗಳು**

**ಅ. ಕೃತಿಗಳು**


1. ಕನ್ನಡ ಕೈಪಿಡಿ:1 (1969) ಪ್ರ.ಸಂ. ಡಾ॥ ಕೆ.ವಿ.ಪುಟ್ಟಪ್ಪ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–6
2. ಕನ್ನಡ ಭಾಷೆಯ ರೂಪರೇಷೆಗಳು(1975) ವಿಲ್ಯಂ ಮಾಡ್ತ; ಕನ್ನಡ ಅಧ್ಯಯನ ಪೀಠ, ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–3
3. ಕನ್ನಡ ಮಧ್ಯಮ ವ್ಯಾಕರಣ(1972)ತೀ.ನಂ.ಶ್ರೀಕಂಠಯ್ಯ; ಗೀತಾ ಬುಕ್ ಹೌಸ್, ನ್ಯೂ ಸ್ಟಾಚ್ಯು ಸರ್ಕಲ್, ಮೈಸೂರು–1
4. ದರ್ಪಣ ವಿವರಣ(ಕೇಶಿರಾಜ ವಿರಚಿತ 'ಶಬ್ದಮಣಿಪರ್ದಣ'ದ ವಸ್ತು ವಿವರಣೆ) (2001)– ಡಾ. ಟಿ.ವಿ.ವೆಂಕಟಾಚಲ ಶಾಸ್ತ್ರೀ; ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು–2
5. ನಿಜಕ್ಕೂ ಹಳೆಗನ್ನಡ ವ್ಯಾಕರಣ ಎಂತಹದು?(2005) ಡಿ.ಎನ್. ಶಂಕರಭಟ್; ಭಾಷಾ ಪ್ರಕಾಶನ ಮೈಸೂರು–26
6. ವ್ಯಾಕರಣಸಾರ – ತ.ಸು. ಶಾಮರಾಯ, ಹಾಗೂ ನ, ಸುಬ್ರಹ್ಮಣ್ಯಂ;(1973) ತ.ವೆಂ. ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರ, ಮೈಸೂರು–4
7. ಶಬ್ದಮಣಿ ದರ್ಪಣ ವಿಳಾಸ(ಹೊಸಗನ್ನಡ ವ್ಯಾಖ್ಯಾನ ಗದ್ಯ)–(1972) ಡಾ. ವಿ.ಶಿವಾನಂದ; ವಿಜಯ ಪುಸ್ತಕ ಭಂಡಾರ ಮತ್ತು ಪ್ರಕಾಶನ ಸ್ಟೇಶನ್ ರೋಡ, ಗದಗ
8. ಹಳಗನ್ನಡ(ಭಾಷೆ, ಭಾಷಾವಿಕಾಸ, ಭಾಷಾ ಬಾಂಧವ್ಯ)– ಸಂ: ಷ. ಶೆಟ್ಟರ್(2017) ಅಭಿನವ 17/18–2, ಮೊದಲನೆಯ ಮುಖ್ಯರಸ್ತೆ ಮಾರೇನಹಳ್ಳಿ, ವಿಜಯನಗರ, ಬೆಂಗಳೂರು–560040
9. ಸಂಕ್ಷಿಪ್ತ ಕನ್ನಡ ನಿಘಂಟು (ಪರಿಷ್ಕೃತ)(2001) ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ, ಬೆಂಗಳೂರು–18


**ಆ. ಪತ್ರಿಕೆಗಳು**


1. ದ್ರಾವಿಡ ಅಧ್ಯಯನ, (ಸಂಪುಟ:3, ಸಂಚಿಕೆ:2, ಜುಲೈ–ಡಿಸೆಂಬರ್ 2004) ಸಂ.ಡಾ. ಎ.ಸುಬ್ಬಣ್ಣ ರೈ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–583 276.


❖❖❖

# ಗಬಾಳ ಆತ್ಮಕಥೆ : ಸಾಮಾಜಿಕ, ಸಾಂಸ್ಕೃತಿಕ, ದಲಿತ ಸಂಕಥನ

**ಡಾ. ಉಮೇಶ**
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ

ಆತ್ಮಕಥನ ಎಂದರೆ ಒಬ್ಬ ವ್ಯಕ್ತಿ ತನ್ನ ಬದುಕಿನ ಬಗ್ಗೆ ತಾನೇ ಬರೆದುಕೊಳ್ಳುವುದು. ಭಾರತದ ಬೇರೆ ಬೇರೆ ಭಾಷೆಗಳಿಂದ ಮತ್ತು ಅನ್ಯದೇಶಗಳಿಂದ ಆತ್ಮಕಥೆಗಳು ಕನ್ನಡ ಭಾಷೆಗೆ ಅನುವಾದಗೊಂಡಿವೆ. ಈ ಕಾರಣದಿಂದ ಕನ್ನಡದಲ್ಲಿ ಆತ್ಮಕಥನ ಸಾಹಿತ್ಯ ಪರಂಪರೆ ಬೆಳೆಯಲು ಸಾಧ್ಯವಾಯಿತು. ಇದೇ ರೀತಿ ಮರಾಠಿ ಭಾಷೆಯಿಂದ ಕನ್ನಡಕ್ಕೆ ಅನೇಕ ಆತ್ಮಕಥೆಗಳು ಅನುವಾದಗೊಂಡಿವೆ. ಅವುಗಳಲ್ಲಿ 'ಗಬಾಳ' ಆತ್ಮಕಥೆಯೂ ಒಂದಾಗಿದೆ. ಮರಾಠಿ ಲೇಖಕ ದಾದಾಸಾಹೇಬ ಮಲ್ಹಾರಿ ಮೋರೆ ಅವರ ಮೂಲ 'ಗಬಾಳ' ಆತ್ಮಕಥೆಯನ್ನು ಕನ್ನಡಕ್ಕೆ ಅದೇ ಹೆಸರಿನಲ್ಲಿಯೇ ದುಂ.ನಿಂ. ಬೆಳಗಲಿ ಅವರು ಅನುವಾದಿಸಿದ್ದಾರೆ. ಈ ಆತ್ಮಕಥೆಯು ದಲಿತ ಆತ್ಮಕಥೆ.

ಭಾರತೀಯ ಸಾಹಿತ್ಯದಲ್ಲಿ ದಲಿತ ಆತ್ಮಕಥೆಗಳಿಗೆ ವಿಶೇಷ ಸ್ಥಾನವಿದೆ. 'ಗಬಾಳ' ಆತ್ಮಕಥೆ ಏಕಕಾಲಕ್ಕೆ ಒಂದು ಬಗೆಯ ಕುತೂಹಲ, ಆಸಕ್ತಿ ಮತ್ತು ಆತಂಕಗಳನ್ನು ಉಂಟುಮಾಡುತ್ತದೆ. ಈ ಆತ್ಮಕಥನವನ್ನು ಓದಿದಾಗ ಈ ಅನುಭವ ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕ ಮನುಷ್ಯನಿಗೂ ಆಗುವಂಥದ್ದೆ. ಗಬಾಳ ಎಂದರೆ ಚಿಂದಿಗಂಟು, ಸರಕು ಸಾಮಾನು, ಬೇಕು ಬೇಡವಾದ ನಿರುಪಯುಕ್ತ ವಸ್ತುಗಳನ್ನು ಒಂದೆಡೆ ಸೇರಿಸಿದ ಗುಂಪು ಎಂದು ಮತ್ತು ಅಲೆಮಾರಿ ಜನಾಂಗ ಎಂಬ ಇನ್ನೊಂದು ಅರ್ಥವು ಉಂಟು. ಸ್ವತಂತ್ರ ಭಾರತದ ಅಮಾನವೀಯ, ಶೋಷಿತ ಸ್ಥಿತಿಯ ಅನಾವರಣ ಮಾಡುವ ಈ ಕೃತಿಯಲ್ಲಿ ಭಾರತದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಎಳೆಎಳೆಯಾಗಿ ವಿವರಿಸಲಾಗಿದೆ. ಈ ದೃಷ್ಟಿಯಿಂದ ಮರಾಠಿ ಆತ್ಮಕಥೆಗಳನ್ನು ಓದಿದಾಗ ಕೆಲವು ಜನಾಂಗವೊಂದರ ಬದುಕು ಅಮಾನವೀಯ ಮತ್ತು ಶೋಷಿತ ನೆಲೆಯಲ್ಲಿದ್ದು ಕೂಡ ಅದರಿಂದ ವಿಮುಕ್ತಿ ಪಡೆದು ಸಾಧಕರಾಗಿರುವ ಸಂಗತಿಗಳು ನಮಗೆ ಗೋಚರಿಸುತ್ತವೆ. ಈ ಹಿನ್ನೆಲೆಯಲ್ಲಿ 'ಗಬಾಳ' ಆತ್ಮಕಥೆಯು ಶೈಕ್ಷಣಿಕ, ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಕಾರಣಗಳಿಂದಾಗಿ ಶತಮಾನಗಳಿಂದ ವಂಚಿತರಾದ ಜನಾಂಗ ತಮ್ಮ ನೈತಿಕ ಅಸ್ತಿತ್ವವನ್ನು ಕಳೆದುಕೊಂಡು ಜೀವನ ನಡೆಸಲು ಕಷ್ಟಸಾಧ್ಯವಾದ ಜನಾಂಗ ಅತಂತ್ರ ಬದುಕಿನ ಜನಾಂಗವೊಂದರ ಅನೇಕ ಸಮಸ್ಯೆಗಳ ಸರಮಾಲೆಯನ್ನು ತೆರೆದಿಟ್ಟಿದೆ.

"ನನಗೆ ತಿಳುವಳಿಕೆ ಬಂದಾಗಿನಿಂದ ನಾನು ಯಾವ ಜನಾಂಗದಲ್ಲಿ ಜನ್ಮ ತಳೆದನೋ ಆ ಅಲೆಮಾರಿ ಜನಾಂಗದ ದುಃಖ, ವ್ಯಥೆ, ಆ ಸಮಾಜದ ಉಪೇಕ್ಷೆ ಹಾಗೂ ಅವರ ಬದುಕನ್ನು ನಾನು ತಮ್ಮ ಮುಂದಿಡಲು ಇಲ್ಲಿ ಪ್ರಯತ್ನಿಸಿದ್ದೇನೆ" ಎಂಬ ಆತ್ಮಕಥೆಗಾರರ ಮಾತುಗಳು ಆತ್ಮಕಥನ ಬರೆಯಬೇಕಾದವರಿಗೆ ಇರಬೇಕಾದ ಪ್ರಮುಖ ಅಂಶವಾದ ಪ್ರಾಮಾಣಿಕತೆಯನ್ನು ಪೂರ್ಣಾಶಃ ಸ್ಪಷ್ಟಪಡಿಸಿವೆ.

'ಗಬಾಳ' ಆತ್ಮಕಥೆಯು ಅಲೆಮಾರಿ ಜನಾಂಗದ ದಾದಾಸಾಹೇಬ ಮೋರೆ

ಅವರು ತಮ್ಮ ಅಕ್ಷರ ಕಲಿಕೆಗಾಗಿ ಹೋರಾಡಿದ ವಿಶಿಷ್ಟ ಅನುಭವದ ಕಥೆಯಾಗಿದೆ. ಬುಡುಬುಡಿಕೆಯವರ ಜಾತಿಯಲ್ಲಿ ಹುಟ್ಟಿದ ದಾದಾಸಾಹೇಬ ಮೋರೆ ಅವರು ತಮ್ಮ ಸಂಚಾರಿ ಬದುಕಿನ ಕರಾಳ ಚಿತ್ರಣಗಳನ್ನು ಮನಕರಗುವಂತೆ ಚಿತ್ರಿಸಿದ್ದಾರೆ. ಬಟ್ಟ ಬಯಲಿನಲ್ಲಿ ಉರಿಬಿಸಿಲು–ಬಿರುಮಳೆಯಲ್ಲಿ, ಕಗ್ಗತ್ತಲಿನಲ್ಲಿ, ಕಲ್ಲು–ಮುಳ್ಳುಗಳಲ್ಲಿ, ಸ್ಮಶಾನ–ಶೌಚಸ್ಥಳದಲ್ಲಿ, ಉಪವಾಸ, ವನವಾಸ, ರಸ್ತೆಗಳಲ್ಲಿ ಹುಟ್ಟುತ್ತ–ಸಾಯುತ್ತ, ಬೀದಿನಾಯಿಗಳಿಂದ ಕಚ್ಚಿಸಿಕೊಳ್ಳುತ್ತ, ಶೋಷಣೆಗೆ ಒಳಗಾಗುತ್ತ ಜೀವನ ಸಾಗಿಸುವ ಈ ಅಲೆಮಾರಿ ಜನಾಂಗದ ಯಥಾರ್ಥ ಶೋಚನೀಯ ಜೀವನ ಕಣ್ಣಿಗೆ ಕಟ್ಟಿದಂತೆ, ದೇಹಕ್ಕೆ ಬಲವಾದ ಆಯುಧದಿಂದ ತಿವಿದಂತೆ ಭಾಸವಾಗುತ್ತದೆ. 'ಹಾಲಕ್ಕಿ' ಹೆಸರಿನಲ್ಲಿ ಊರೂರು ಅಲೆದು ತಿರುಪೆ ಬೇಡುತ್ತ ತಿರುಗುವ ಈ ಜನಾಂಗದ ಕರುಣಾಜನಕ ಕಥೆಯೇ 'ಗಬಾಳ'.

'ಗಬಾಳ' ಕೃತಿಯಲ್ಲಿ ಲೇಖಕರು ತಮ್ಮ ಬಾಲ್ಯದಿಂದ ಯೌವ್ವನದವರೆಗೆ ತಾವು ಅನುಭವಿಸಿದ ಕಷ್ಟ, ಶೋಷಣೆ, ಅವಮಾನ ಮುಂತಾದವುಗಳನ್ನು ದಾಖಲಿಸುತ್ತಲೇ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುವ ಸಾಹಸಮಯ ಮನೋಧೈರ್ಯ ಕೃತಿಯಲ್ಲಿ ಬಿತ್ತರಗೊಂಡಿದೆ. ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯವಾಗಿ ಸಮಾಜದಲ್ಲಿ ಅಸ್ತಿತ್ವವನ್ನು ಕಳೆದುಕೊಂಡು ಈ ಅಲೆಮಾರಿ ಜನಾಂಗಕ್ಕೆ ತನ್ನದೇ ಆದ ಬದುಕಿನ ಚೌಕಟ್ಟು, ಸಂಪ್ರದಾಯ, ಆಚರಣೆಗಳಿರುವುದನ್ನು ಲೇಖಕರು ದಾಖಲಿಸುತ್ತಾರೆ. ಆದರೂ ಇಷ್ಟೆಲ್ಲದರ ಮಧ್ಯೆ ಬದುಕಿನಲ್ಲಿ ಉತ್ತಮ ಭವಿಷ್ಯ ಕಳೆದುಕೊಂಡವರಾದ ಇವರು 'ಹಾಲಕ್ಕಿ' ಹೆಸರಿನಲ್ಲಿ ಭವಿಷ್ಯ ಹೇಳುವ ವೃತ್ತಿ ಮಾಡುವುದು ವಿಚಿತ್ರವಾಗಿ ಕಂಡು ಬಂದರು ಅದು ಅವರ ಹೊಟ್ಟೆ ಹೊರೆಯುವ ಕಾರ್ಯವಾಗಿದೆ. ಇದು ಆ ಜನಾಂಗದ ಸಾಮಾಜಿಕ ಸ್ಥಿತಿಗತಿಗಳನ್ನು ಅನಾವರಣಗೊಳಿಸುತ್ತದೆ.

ಲೇಖಕರೇ ಹೇಳುವಂತೆ ಈ ಅಲೆಮಾರಿಗಳ ಬದುಕು ವೈಪರೀತ್ಯಗಳಿಂದ ಕೂಡಿತ್ತು. ತಾವು ಹೋಗುವ ಊರಲ್ಲಿ ಬಿಡಾರ ಹೂಡಿ ಅದರ ಮುಂದೆ ಕುದುರೆ, ನಾಯಿ ಕಟ್ಟುವುದೇ ಅವರ ಸಂಕೇತವಾಗಿತ್ತು. ಕೆಲವೊಮ್ಮೆ ಇವರ ಡೇರೆಗಳು ಎಲ್ಲೆಲ್ಲಿ ಗುಡಾರ ಹುಡುಕುತ್ತಿದ್ದಾರೆಂದರೆ "ಎಲ್ಲೆಡೆ ಹೇಲು ಹೊಲಸು ಕಾಣುತ್ತಿತ್ತು. ಆದರೆ ನಮ್ಮ ಜನರಿಗೆ ಅದರ ದುರ್ವಾಸನೆ ಬರುತ್ತಿರಲಿಲ್ಲ. ಆ ಹೊಲಸಿನಲ್ಲಿಯೇ ನಮ್ಮ ಒಜೆಗಳನ್ನು ಇಳಿಸತೊಡಗಿದವು. ಅದೇ ಸ್ಥಳದಲ್ಲಿ ಊಟ, ನಿದ್ರೆ ಮಾಡಬೇಕು" ಎನ್ನುವ ಲೇಖಕರ ಮಾತುಗಳು ಅವರದು ಎಂತಹ ಕ್ರೂರ ಬದುಕನ್ನು ಸಾಗಿಸಬೇಕಾದ ಸ್ಥಿತಿ ಎಂಬುದು ನಿಜಕ್ಕೂ ಕರುಣಾಜನಕ.

ಈ ಅಲೆಮಾರಿ ಜನಾಂಗ ಒಂದೂರಿನಿಂದ ಇನ್ನೊಂದೂರಿಗೆ (ಗಂಟು ಮೂಟೆ ಸಹಿತ) ಪ್ರಯಾಣಿಸುವಾಗ ಮಕ್ಕಳು, ಸಾಮಾನು ಸರಂಜಾಮುಗಳು, ತಮ್ಮಲ್ಲಿದ್ದ ನಾಯಿ, ಕೋಳಿ, ಕುರಿ, ಕುದುರೆ, ವಯಸ್ಸಾದವರು, ಅನಾರೋಗ್ಯ ಪೀಡಿತರು, ಗರ್ಭಿಣಿಯರು ಮತ್ತು ಬಾಣಂತಿಯರನ್ನು ಕರೆದುಕೊಂಡು ಹೋಗಬೇಕಾಗಿತ್ತು. ಈ ದೃಷ್ಟಿಯಿಂದ ಕೃತಿಯಲ್ಲಿ "ಜಮೀನುದಾರರು ಕೇವಲ ಶೋಷಕರಲ್ಲ. ಅವರು ನಮ್ಮ ಕನಸುಗಳ ಮೇಲೆಯೂ ಅಧಿಪತ್ಯ ಹೊಂದಿದ್ದರು. ಆದರೆ ಅವುಗಳ ವಿರುದ್ಧ ಹೋರಾಡಲು ನಮಗೆ ತಾಳ್ಮೆ ಮತ್ತು ಶ್ರದ್ಧೆ ಬೇಕಿತ್ತು" ಎಂಬ ಮಾತುಗಳ ಮುಖೇನ ದಾದಾಸಾಹೇಬ ಮೋರೆ ಅವರು ತಮ್ಮ ಕಾಲಘಟ್ಟದ ಭೂಸ್ವಾಮ್ಯ ವ್ಯವಸ್ಥೆಯ ಕ್ರೂರತೆ ಮತ್ತು ಬಡವರ

ಮೇಲಿನ ಶೋಷಣೆ ಹಾಗೂ ದೌರ್ಜನ್ಯವನ್ನು ತೆರೆದಿಟ್ಟಿದ್ದಾರೆ. ಆದ್ದರಿಂದಲೇ ಈ ಆತ್ಮಕಥೆಯು ಸಾಮಾಜಿಕ ನ್ಯಾಯದ ತಾತ್ವಿಕತೆಯನ್ನು ಮರೆತುಹೋದ ಸಮಾಜಕ್ಕೆ ಬಲವಾದ ಎಚ್ಚರಿಕೆಯಾಗಿ ಪರಿಣಮಿಸಿದೆ.

ಅಲೆಮಾರಿ ಜನಾಂಗದ ಮೂಲ ಕಸುಬು ತಾವು ಹೋದ ಕಡೆ ಭಿಕ್ಷೆ ಬೇಡಿ ಜೀವನ ನಡೆಸುವುದು. ಆದರೆ ದಾದಾಸಾಹೇಬ ಮೋರೆ ಅವರಿಗೆ ಶಿಕ್ಷಣ ಪಡೆಯಬೇಕೆಂಬ ಅದಮ್ಯ ಬಯಕೆ. ದಾದಾ ಸಾಹೇಬರು ತಮ್ಮ ಜನಾಂಗದ ಸಾಂಪ್ರದಾಯಿಕ ವೃತ್ತಿಯನ್ನು ಮುಂದುವರೆಸಬೇಕೆಂಬುದು ಆತನ ತಾತನ ಆಸೆ. ಆದರೆ ದಾದಾ ಸಾಹೇಬ ಮೋರೆಯವರ ತಂದೆಯ ಆಲೋಚನೆ ಬೇರೆಯದೇ ಆಗಿತ್ತು. ಮಗನಿಗೆ ತಕ್ಕ ಶಿಕ್ಷಣ ಕೊಡಿಸಬೇಕೆಂಬುದು ಅವರ ಆಸೆಯಾಗಿತ್ತು, ಅದನ್ನು ಈಡೇರಿಸಿದರೂ ಕೂಡ. ಈ ಸಂಗತಿಯು ಅವರ ತಂದೆಯ ಮನಸ್ಸು ಆಧುನಿಕತೆಗೆ ತೆರೆದುಕೊಂಡ ಮನಸ್ಥಿತಿ ಎಂದು ನಾವು ಗಮನಿಸಬಹುದು. ಶಿಕ್ಷಣ ಕೊಡಿಸಲೆಂದು ಶಾಲೆಗೆ ಕರೆದುಕೊಂಡು ಹೋದಾಗ ಹರಿದ ಚಡ್ಡಿ, ಕೆದರಿದ ಕೂದಲು, ಹರಿದ ಅಂಗಿ ಇದು ದಾದಾಸಾಹೇಬರ ಸ್ಥಿತಿಗತಿ. ಇದು ದಾದಾ ಸಾಹೇಬರೊಬ್ಬರದ್ದೇ ಅಲ್ಲ ಆ ಜನಾಂಗದ ಪ್ರತಿಯೊಬ್ಬರ ವೇಷಭೂಷಣವು ಅಷ್ಟೇ. ಇವನನ್ನು ನೋಡಿದ ಮಾಸ್ತರರು 'ನೀವು ಭಿಕಾರಿಗಳು ನಿಮಗೆ ಶಾಲೆಗೆ ಸೇರಿಸಬೇಕೋ' ಎಂದು ಅಪಹಾಸ್ಯ ಮಾಡುವುದರ ಜೊತೆಗೆ ದಾದಾಸಾಹೇಬರ ಅಲೆಮಾರಿ ಸಮಸ್ಯೆ ಮತ್ತು ಆತನು ಅಶುಚಿತ್ವದಿಂದ ಕೂಡಿದ ಕಾರಣದಿಂದಾಗಿ ಆತನನ್ನು ಅಂಗಳದಲ್ಲಿ ಮಾಸ್ತರರು ಕೂರಿಸುವ ಸನ್ನಿವೇಶವು ಆ ಕಾಲಘಟ್ಟದ ಸಾಮಾಜಿಕ ಸ್ಥಿತಿಗತಿಗಳು ನಮ್ಮ ಅರಿವಿಗೆ ತಟ್ಟನೆ ಹೊಳೆಯುತ್ತವೆ. ಅಲೆಮಾರಿ ಜನಾಂಗದಲ್ಲಿ ಜನಿಸಿದ ದಾದಾಸಾಹೇಬರು ಶಾಲೆಗೆ ಹೋದ ದಿನವೇ ಮೇಲಿನ ರೀತಿ ಅವಮಾನಕ್ಕೆ ಒಳಗಾದರೂ, ಅಕ್ಷರ ಕಲಿಯಬೇಕೆಂಬ ಅವರ ಹಂಬಲ ಅದಮ್ಯವಾಗಿತ್ತು. ಕಲಿಯುವ ವಿಷಯದಲ್ಲಿ ಮೋರೆಯವರು ನಿಷ್ಠಾವಂತರಾಗಿದ್ದರು.

ಈ ಜನಾಂಗದವರಿಗೆ ಸಾಂಸ್ಕೃತಿಕವಾಗಿ ಮರಗಮ್ಮ ದೇವಿಯ ಜಾತ್ರೆ ಬಹಳ ವಿಶಿಷ್ಟವಾದುದ್ದಾಗಿದೆ. ಇದು ಅವರ ಸಂಸ್ಕೃತಿಯ ಪ್ರತೀಕವೂ ಕೂಡ. ಕೃತಿಯಲ್ಲಿ ಅಭಿವ್ಯಕ್ತಿಗೊಂಡಿರುವ ಸಾವಿನ ಪ್ರಸಂಗಗಳಲ್ಲಿನ ಅಂತ್ಯ ಸಂಸ್ಕಾರಗಳ ವಿಧಿ-ವಿಧಾನಗಳು, ತಿಥಿ, ಬಾಣಂತನ ಮುಂತಾದ ಸನ್ನಿವೇಶಗಳು ಆ ಜನಾಂಗದ ನೈಜ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಶೂದ್ರ ಸಮುದಾಯದ ಸಾಂಸ್ಕೃತಿಕ ಬದುಕಿನಲ್ಲಿ ಮೈ ಮೇಲೆ ಬರುವ ದೇವರು ಮತ್ತು ಶ್ರಮಿಕ ವರ್ಗದವರ ಮೈಮೇಲೆ ಬರುವ ದೇವರುಗಳ ಕೆಲವು ಸ್ವರೂಪವನ್ನು ಈ ಕೃತಿಯಲ್ಲಿ ಕಾಣಬಹುದಾಗಿದೆ. ಗಂಗೂಮಾವಶಿಗೆ ಮೈ ಮೇಲೆ ದೇವರು ಬಂದಾಗ ಆಕೆ 'ಒಂದು ಕೋಳಿ, ಐದು ಚಪಾತಿ, ಒಂದು ತೆಂಗಿನಕಾಯಿ, ಅನ್ನ ಮತ್ತು ಲಿಂಬು ಇತ್ಯಾದಿ ಕೇಳುತ್ತಾಳೆ'. ವಿಶೇಷವಾಗಿ ಈ ಜನಾಂಗದವರ ಮೈ ಮೇಲೆ ದೇವರು (ಗಂಗೂಮಾವಶಿ) ಬಾಯಿ ಬಿಟ್ಟು ಕೇಳುವ ಕಾಣಿಕೆ ನೋಡಿದರೆ ಇವರು ಎಷ್ಟು ಹಸಿವಿನಿಂದ ಬಳಲುತ್ತಿದ್ದರು, ಅದರ ತೀವ್ರತೆ ಎಷ್ಟಿತ್ತು ಎನ್ನುವುದು ನಮಗೆ ನೇರವಾಗಿ ವೇದ್ಯವಾಗುವ ಸಂಗತಿ.

'ಗಬಾಳ' ಆತ್ಮಕಥೆಯು ಕತ್ತಲೆಯಿಂದ ಬೆಳಕಿನೆಡೆಗೆ ನಡೆಸುವ ಹೋರಾಟದ ಕಥನವಾಗಿದೆ. ತಮ್ಮ ಅನಿಶ್ಚಿತ ಬದುಕಿಗೊಂದು ನೆಲೆ ಬೇಕೆನ್ನುವ ಛಲ, ಅಸಹಾಯಕತೆ ಮತ್ತು ಹತಾಶೆಯ ಹಲವಾರು ಸಂಗತಿಗಳನ್ನು ಈ ಕೃತಿ ಒಳಗೊಂಡಿದೆ. ಈ ಆತ್ಮಕಥೆಯ

ಆದಿಯಿಂದ ಅಂತ್ಯದವರೆಗೆ ಅತಂತ್ರವಾದ ಅನೇಕ ಕುಟುಂಬಗಳು ತಮ್ಮ ನಿರ್ದಿಷ್ಟ ನೆಲೆಯನ್ನು ಸ್ಥಾಪಿಸಿಕೊಳ್ಳಲಾಗದೆ ಇರುವುದರ ಹಿಂದೆ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಿಂದುಳಿಯುವಿಕೆಯೇ ಪ್ರಮುಖ ಕಾರಣವಾಗಿದೆ. ಆದ್ದರಿಂದಲೇ ಈ ಕೃತಿಯು ಅಲೆಮಾರಿ ಜನಾಂಗವೊಂದರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಕಥನವನ್ನು ನಮ್ಮ ಮುಂದೆ ಅನಾವರಣಗೊಳಿಸಿದೆ. ಹೊಟ್ಟೆಪಾಡಿಗೆ ಬದುಕಿಗಾಗಿ ಜೀವನವಿಡೀ ಅಲೆಮಾರಿತನ, ಭಿಕ್ಷೆ ಬೇಡುವುದು, ಭವಿಷ್ಯ ಹೇಳುವ ವೃತ್ತಿ ಇವೆಲ್ಲದರ ಮಧ್ಯೆ ತಮ್ಮ ಬದುಕನ್ನು ಉದ್ಧಾರ ಮಾಡದ ದೇವರು, ಜಾತ್ರೆ, ಹಬ್ಬಗಳು ತಮ್ಮ ಬದುಕನ್ನು ಹೊಸ ಬಗೆಯಲ್ಲಿ ರೂಪಿಸಿಕೊಡುತ್ತವೆ ಎಂಬ ಹುಸಿ ಭ್ರಮೆಗಳು ಮತ್ತು ಮೂಢನಂಬಿಕೆಯಂತಹ ಸಾಮಾಜಿಕ ವಿಷಮತೆಗಳು ಈ ಕೃತಿಯಲ್ಲಿ ಅನಾವರಣಗೊಂಡಿವೆ.

ಮರಾಠಿ ಆತ್ಮಕಥೆಗಳ ವೈಶಿಷ್ಟ್ಯವೆಂದರೆ ವಿವಿಧ ವೃತ್ತಿಗಳಲ್ಲಿ ತೊಡಗಿದ ವಿವಿಧ ಜಾತಿ ಸಮುದಾಯದವರು ಆತ್ಮಕಥೆಯ ರಚನೆಯಲ್ಲಿ ತೊಡಗಿದ್ದು. ಇವರ ಆತ್ಮಕಥೆಗಳಲ್ಲಿ ದಲಿತರ ಶೋಷಣೆ, ಸವರ್ಣೀಯರ ದೌರ್ಜನ್ಯ, ಆ ಜನಾಂಗ ಅನುಭವಿಸಿದ ಅಪಾರ ವೇದನೆ, ತೊಳಲಾಟ ಮತ್ತು ಪಟ್ಟ ಸಂಕಟ ಹೀಗೆ ಒಟ್ಟಾರೆಯಾಗಿ ಘತಕಾಲದ ಚರಿತ್ರೆಯ ದುರಂತ ಚಿತ್ರಣ ಅಭಿವ್ಯಕ್ತಿ ಹಾಗೂ ಅನಾವರಣಗೊಂಡಿವೆ. ಈ ಹಿನ್ನೆಲೆಯಲ್ಲಿ ಮರಾಠಿ ದಲಿತ ಆತ್ಮಕಥೆಗಳು ಇತರ ಭಾಷೆಗಳ ಆತ್ಮಕಥೆಗಳಿಗಿಂತ ಭಿನ್ನವಾದ ಲೋಕವನ್ನು, ಬದುಕಿನ ವಿವಿಧ ಅನುಭವಗಳನ್ನು ತೆರೆದಿಡುತ್ತವೆ. ಆದುದರಿಂದಲೇ "ಮರಾಠಿ ಸಾಹಿತ್ಯದಲ್ಲಿ ದಲಿತ ಲೇಖಕರ ಒಂದು ಪ್ರಭಾವಪೂರ್ಣವಾದ ಸಾಹಿತ್ಯ ಮಾಧ್ಯಮ ಆತ್ಮಕಥೆ. ದಲಿತ ಲೇಖಕರನ್ನು ಸಮಾಜ ಯಾವ ಯಾವ ರೀತಿಯಲ್ಲಿ ಹೇಗೆ ಶೋಷಣೆ ಮಾಡಿತ್ತೆಂಬುದನ್ನು ಹಾಗೂ ಆತ ಅದನ್ನು ಹೇಗೆ ಎದುರಿಸಿದನು ಎಂಬುದರ ವಾಸ್ತವ ಚಿತ್ರಣ ಸುರುಳಿ ಸುರುಳಿಯಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ತಾವು ಅನುಭವಿಸಿದ ಅವಮಾನ, ಹಿಂಸೆ, ಸಮಾಜ ಮತ್ತು ಪರಂಪರೆಗಳು ಕಾಲಕಾಲಕ್ಕೆ ನೀಡಿದ ಬರೆ, ಅಜ್ಞಾನದಿಂದ ತಾವು ಅನುಭವಿಸಿದ ದಾಸ್ಯತ್ವ, ಹಸಿವು, ದಾರಿದ್ರ್ಯ, ಅಪಮಾನ, ಸಮಾಜದ ಮಾನಸಿಕ ಸ್ಥಿತಿ ಇವು ಮಹತ್ವದ್ದಾಗುತ್ತದೆ" ಎನ್ನುವ ಲಕ್ಷಣ್ ಅವರ ಮಾತುಗಳು ಅರ್ಥಪೂರ್ಣವಾದ ಮೌಲ್ಯವನ್ನು ಪಡೆಯುತ್ತವೆ.

ಶಿಕ್ಷಿತರ ಕುಟುಂಬದಲ್ಲಿ ಹುಟ್ಟಿದ ಹುಡುಗನೊಬ್ಬ ಶಾಲಾ ಕಾಲೇಜಿನಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗುವುದು ಮಹಾಸಂಗತಿಯಾಗಲಿ, ಆಶ್ಚರ್ಯಪಡುವಂಥದ್ದಲ್ಲ. ಶತಶತಮಾನಗಳಿಂದ ಅಕ್ಷರ ವಂಚಿತರಾಗಿದ್ದ ಅಲೆಮಾರಿ ಜನಾಂಗದ ಹುಡುಗನೊಬ್ಬ ಭಿಕ್ಷೆ ಬೇಡುತ್ತ, ಊರೂರು ತಿರುಗುತ್ತ, ಕೂಲಿ ಕೆಲಸ ಮಾಡುತ್ತ ಮತ್ತು ನಾಟಕಗಳಲ್ಲಿ ಪಾತ್ರ ಮಾಡುತ್ತಾ ಓದಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗುವುದು ನಿಜಕ್ಕೂ ಮಹಾಸಂಗತಿ. ಶ್ರೀ ದಾದಾಸಾಹೇಬ ಮಲ್ಹಾರಿ ಮೋರೆ ತಮ್ಮ ಜನಾಂಗದವರಂತೆ ಶಿಕ್ಷಣವಂಚಿತರಾಗುವ ಇತರರಿಗೆ ಸ್ಫೂರ್ತಿ ಮತ್ತು ಮಾರ್ಗದರ್ಶನ ಆಗುವ ರೀತಿಯಲ್ಲಿ ತಮ್ಮ ಆತ್ಮಕಥನವನ್ನು ರಚಿಸಿದ್ದಾರೆ. 'ಗಬಾಳ' ಆತ್ಮಕಥೆಯು ಕೇವಲ ದಲಿತರ ಶೋಷಣೆಯ ನಿರೂಪಣೆಯಲ್ಲ. ಅವರ ಹೋರಾಟದ ದಾರಿ, ಧೈರ್ಯ ಮತ್ತು ಅಸ್ತಿತ್ವವನ್ನು ಹುಡುಕುವ ಪ್ರಯತ್ನವನ್ನು ತೀವ್ರವಾಗಿ ಪ್ರತಿಪಾದಿಸುತ್ತದೆ. 'ಗಬಾಳ' ಕೃತಿಯು ಕೇವಲ ಓದಿಗೆ ಮಾತ್ರವಲ್ಲ ಬದಲಾವಣೆಗೆ ಪ್ರೇರಣೆ ನೀಡುವ ಕೃತಿಯಾಗಿ ಹಿರಿಮೆಯನ್ನು ಗಳಿಸಿದೆ. 'ಗಬಾಳ'

ಆತ್ಮಕಥೆಯು ಮರಾಠಿ ದಲಿತ ಜನಾಂಗವೊಂದರ ಸಾಮಾಜಿಕ, ಸಾಂಸ್ಕೃತಿಕ ಬದುಕು ಬಿಂಬಿತವಾಗಿದ್ದರೂ ಅದು ಇಡೀ ಭಾರತೀಯ ದಲಿತ ಸಮುದಾಯದವರ ಬದುಕನ್ನು ಪ್ರತನಿಧಿಸುತ್ತದೆ. ಆತ್ಮಕಥೆಗಳ ರಚನೆ ವ್ಯಕ್ತಿಯ ನೆಲೆಯದ್ದಾದರೂ ಸಮಷ್ಠಿ ನೆಲೆಯನ್ನು ಅನುಸಂಧಾನಗೊಳಿಸುವ ಮುಖೇನ ಆತ್ಮಕಥೆಯಾಗಿ ಉಳಿಯದೆ ಒಂದು ಪ್ರದೇಶ, ಪರಿಸರ ಮತ್ತು ಒಂದು ಜನಾಂಗದ ಚರಿತ್ರೆಯಾಗಿ ಬೆಳೆದು ಬಂದಿರುವುದನ್ನು 'ಗಬಾಳ' ಆತ್ಮಕಥೆಯು ತೋರಿಸಿದೆ.

**ಪರಾಮರ್ಶನ ಗ್ರಂಥಗಳು**


1) ದಾದಾ ಸಾಹೇಬ ಮಲ್ಹಾರಿ ಮೋರೆ, ಗಬಾಳ(ಅನು) ದುಂ.ನಿಂ. ಬೆಳಗಲಿ, 1995, ನವಕರ್ನಾಟಕ ಪ್ರಕಾಶನ, ಬೆಂಗಳೂರು–01
2) ರವೀಂದ್ರನಾಥ ಕೆ.ವಿ., ದಶಕದ ಕನ್ನಡ ಸಾಹಿತ್ಯ : 2002 : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
3) ಗುರುಲಿಂಗ ಕಾಪಸೆ, ಆತ್ಮಶೋಧ, 2004, ಚೆನ್ನಬಸವ ಪ್ರಕಾಶನ, ಹಲಸಂಗಿ
4) ನಾಗರಾಜ್ ಡಿ.ಆರ್., ಸಂಸ್ಕೃತಿ ಕಥನ, 2008, ಅಕ್ಷರ ಪ್ರಕಾಶನ, ಹೆಗ್ಗೋಡು
5) ಜವರೇಗೌಡ ದೇ., ಕುವೆಂಪು ದರ್ಶನ, 2007, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ


❖❖❖

# ಕರುನಾಡ ಕೋಗಿಲೆ ರಾಜ್ಯ ಪ್ರಶಸ್ತಿ ವಿಜೇತ ಮರೆಪ್ಪ ಮಾರೆಪ್ಪ ದಾಸರ್

**ಡಾ. ತಿಮ್ಮಣ್ಣ ಭೀಮರಾಯ**

ಅತಿಥಿ ಉಪನ್ಯಾಸಕರು, ಸಂಗೀತ ಮತ್ತು ನೃತ್ಯ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಕನ್ನಡ ನಾಡಿನಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ವಿಶಿಷ್ಟವಾದ ಪರಂಪರೆಯಿದೆ. ಕನ್ನಡದ ಪ್ರಥಮ ಕೃತಿ 'ಕವಿರಾಜಮಾರ್ಗ'ವನ್ನು ಕೊಟ್ಟಿದ್ದು ಇದೇ ಪ್ರದೇಶ. ಶರಣರ, ದಾಸರ ಕಾರ್ಯಕ್ಷೇತ್ರವಾದ ಈ ಪ್ರದೇಶ ತತ್ವಪದಕಾರರ ತಾಣವೂ ಆಗಿದೆ. ವಚನ, ಸ್ವರವಚನ, ಕೀರ್ತನೆ, ಸುಳಾದಿ, ಉಗಾಭೋಗದಂತಹ ವಿಶಿಷ್ಟ ಸಾಹಿತ್ಯ ರೂಪಗಳನ್ನು ನೀಡಿದ ಈ ಪ್ರದೇಶ ಗಮನ ಸೆಳೆಯುವ ತತ್ವಪದಗಳನ್ನು ಕೊಟ್ಟಿದೆ. ಆ ಮೂಲಕ ಜನಪದ ಸಾಹಿತ್ಯದ ಹೊಸ ಸಾಧ್ಯತೆಗಳನ್ನು ಇಲ್ಲಿ ಕಾಣಬಹುದಾಗಿದೆ. ಈ ದೃಷ್ಟಿಯಿಂದ ಇಲ್ಲಿನ ತತ್ವಪದಗಳು ತುಂಬಾ ಮುಖ್ಯವಾಗುತ್ತವೆ. ಒಟ್ಟಾರೆಯಾಗಿ ಸಗರನಾಡು, ಎಡೆದೊರೆನಾಡು, ಕಲ್ಯಾಣನಾಡು ಈ ಮೂರು ನಾಡುಗಳನ್ನೊಳಗೊಂಡಿರುವ ಹೈದರಾಬಾದ್–ಕರ್ನಾಟಕದ ಪರಂಪರೆ ವಿಶಿಷ್ಟವಾಗಿದೆ.

'ಕವಿರಾಜಮಾರ್ಗ'ಕಾರ ಹೇಳಿದ 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣಿತ ಮತಿಗಳ್' ಎಂಬ ಮಾತು ತತ್ವಪದಕಾರರಿಗೆ ಅಕ್ಷರಶಃ ಅನ್ವಯಿಸುತ್ತದೆ. ಅನ್ಯವಿಚಾರಗಳನ್ನು, ಅನ್ಯಧರ್ಮಗಳನ್ನು ಪ್ರೀತಿಯಿಂದ ಕಾಣುವ ಗುಣ ಈ ಪ್ರಾಂತ್ಯದ ಜನ ಸಮುದಾಯಗಳಲ್ಲಿ ಮೂಡಲು ತತ್ವಪದಕಾರರು ಹಾಗೂ ತತ್ವಪದ ಗಾಯಕರು ಕಾರಣರಾಗಿದ್ದಾರೆ. ಇದರಿಂದ ಕವಿರಾಜಮಾರ್ಗಕಾರನ ಆದರ್ಶದ ಕೂಸುಗಳಂತೆ ತತ್ವಪದಕಾರರು ಕಾಣಿಸುತ್ತಾರೆ. ಈ ಕವಿಯ ಕನಸನ್ನು ನಮ್ಮ ಕೋಪಣಾಚಲ ನಾಡಿನ ಯರಂಬುರ್ಗಿ ಈಗಿನ(ಯಲಬುರ್ಗಾ) ಪ್ರದೇಶದ ತತ್ವಪದ ಹಾಡುಗಾರನಾಗಿ ರಾಜ್ಯಪ್ರಶಸ್ತಿ ಪಡೆದಿರುವ ಮಾರೆಪ್ಪ ಚೆನ್ನದಾಸರು ನನಸಾಗಿಸಿದ್ದಾರೆ ಎಂದರೆ ತಪ್ಪಾಗದು.

'ತತ್ವ' ಎಂದರೆ ಸಿದ್ಧಾಂತ, ಪರಮಾತ್ಮ, ನಿಜಸ್ಥಿತಿ ಎಂದರ್ಥ. ತತ್ವಜ್ಞಾನವನ್ನು ಬ್ರಹ್ಮ ಜ್ಞಾನವೆಂದು ಕರೆಯಲಾಗಿದೆ. 'ಪದ' ಎಂಬುದನ್ನು 'ಹಾಡು', 'ಹದಗೊಂಡ ಶಬ್ದ' ಎಂದು ಕರೆಯಲಾಗಿದೆ. ಪರಮಾತ್ಮನಿಗೆ ಸಂಬಂಧಿಸಿದ ಸಿದ್ಧಾಂತವನ್ನು ಹಾಡಿನ ಮೂಲಕ ಅಭಿವ್ಯಕ್ತಿಸುವ ಕ್ರಿಯೆಗೆ ತತ್ವಪದ ಎನ್ನುತ್ತಾರೆ. 'ತತ್ವಪದ'ದಲ್ಲಿ ತತ್ವ ಮತ್ತು ಪದ ಇವೆರಡಕ್ಕೂ ಅರ್ಥಪೂರ್ಣವಾದ ಸಂಬಂಧವಿದೆ. 'ತತ್ವ' ವಸ್ತುವಾದರೆ, 'ಪದ' ಅಭಿವ್ಯಕ್ತಿ ಮಾಧ್ಯಮ. ವಸ್ತು ಮತ್ತು ಅಭಿವ್ಯಕ್ತಿ ಇವೆರಡನ್ನು ಸಮನ್ವಯಗೊಳಿಸಿಕೊಂಡಿರುವ 'ತತ್ವಪದ' ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿರುವುದರ ಜೊತೆಗೆ ಸಂಸ್ಕೃತಿಯೊಂದರ ಪ್ರತೀಕವೂ ಆಗಿದೆ. ತತ್ವಪದಗಳು "ಹರಸಂಸ್ಕೃತಿಯನ್ನು ಹೇಳಿದರೆ, ಕೀರ್ತನೆಗಳು ಹರಿಸಂಸ್ಕೃತಿಯನ್ನು ಹೇಳಿವೆ."

ತತ್ವಪದಗಳನ್ನು ಅನುಭಾವ ಪದಗಳೆಂದೂ, ಇದಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ಕೈವಲ್ಯ ಸಾಹಿತ್ಯವೆಂದು ಗುರುತಿಸಲಾಗಿದೆ. ಕನ್ನಡದಲ್ಲಿ ರಚನೆಯಾಗಿರುವ ತತ್ವಪದ ಸಾಹಿತ್ಯಕ್ಕೆ ಒಂದು ಪರಂಪರೆಯನ್ನು ಕಟ್ಟಿಕೊಂಡು ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು

‘ಕನ್ನಡದಲ್ಲಿ ಕೈವಲ್ಯ ಸಾಹಿತ್ಯ’ ಎಂಬ ಗ್ರಂಥವನ್ನೇ ರಚಿಸಿದ್ದಾರೆ. ತತ್ವಪದಗಳು ಗಟನೆಗಳ ಅನುಭವದಿಂದ ಹುಟ್ಟುತ್ತವೆ. ಆ ಘಟನೆಗಳ ‘ತತ್ವ’ವನ್ನು ಬೇಧಿಸುವುದರ ಮೂಲಕ ಆ ಅನುಭವವನ್ನು ಅನುಭಾವಕ್ಕೆ ತಿರುಗಿಸುತ್ತವೆ. ಸಂತರ ಅಥವಾ ಅವರ ಶಿಷ್ಯರ ಬದುಕಿನ ಘಟನೆಗಳೇ ತತ್ವಪದಗಳಿಗೆ ವಿವರಣೆಯಾಗುತ್ತವೆ.

ಕಲೆ ಜೀವನದ ಕೈಗನ್ನಡಿ; ಕಲೆ ಸರ್ವರನ್ನು ಆಕರ್ಷಿಸುತ್ತದೆ. ಆದರೆ ಕೆಲವರನ್ನು ಮಾತ್ರ ಕೈ ಮಾಡಿ ಕರೆಯುತ್ತದೆ. ಹೀಗೆ ತಲೆತಲಾಂತರಗಳಿಂದ ವಂಶಪಾರಂಪರಿಕವಾಗಿ ಬಂದಂತಹ ತತ್ವಪದ ಸಂಗೀತವನ್ನು ಹಾಡುತ್ತ ಭಿಕ್ಷೆ ಬೇಡಿ ತಾನು ಬದುಕಿ ತತ್ವಪದ ಸಂಗೀತವನ್ನು ಬೆಳೆಸಿದ ಮಹಾನ್ ಕಲಾವಿದ ಎಂದರೆ ಮಾರೆಪ್ಪ ಮಾರೆಪ್ಪ ದಾಸರು. ಇವರು ಕೊಪ್ಪಳ ಜಿಲ್ಲೆಯ ಯಲಬುರ್ಗ ತಾಲೂಕಿನ ಲಿಂಗನಬಂಡಿಯಲ್ಲಿ 1939ರಲ್ಲಿ ಜನಿಸಿದರು. ಇವರ ತಂದೆ ಮಾರೆಪ್ಪ ದಾಸರ್ ಮತ್ತು ತಾಯಿ ದುರ್ಗಮ್ಮ ದಾಸರ್. ಮೂಲತಃ ಅಲೆಮಾರಿ ಚನ್ನದಾಸ ಸಮುದಾಯದ ತಂದೆ ಮಾರೆಪ್ಪ ದಾಸರ ಕೂಡ ಏಕತಾರಿ ಮೀಟುತ್ತಾ ಊರಿಂದ ಊರಿಗೆ ಅಲೆಯುತ್ತಾ ತತ್ವಪದಗಳನ್ನು ಹಾಡಿ ಭಿಕ್ಷೆ ಪಡೆದು ಜೀವನ ನಡೆಸುತ್ತಿದ್ದರು. ಹೀಗಾಗಿ ಮಾರೆಪ್ಪ ದಾಸರಿಗೂ ಕೂಡ ತತ್ವಪದ ಹಾಡುಗಾರಿಕೆ ಹುಟ್ಟಿನಿಂದಲೇ ಮೈಮನಕ್ಕೆ ಅಂಟಿಕೊಂಡು ಬಂದಂಥ ಕಲೆಯಾಗಿದೆ.

ಒಂದು ದಿನ ತಂಬೂರಿಯನ್ನು ಹಿಡಿಯದಿದ್ದರೆ ಜೀವನ ನಡೆಸುವುದು ತುಂಬ ಕಷ್ಟಕರವಾದಂಥ ಪರಿಸ್ಥಿತಿಯಲ್ಲಿ ಇವರು ನಾಲ್ಕನೇ ತರಗತಿಗೆ ತಮ್ಮ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ತುಂಬರಗುದ್ದಿಗೆ ಬಂದು ನೆಲೆಸಿದರು. ಹೀಗೆ ನಿರಂತರವಾಗಿ ಹಾಡುತ್ತ ಭಿಕ್ಷೆ ಬೇಡಿ ಜೀವನ ನಡೆಸುತ್ತಿದ್ದರು. ಹೀಗೆ ಒಂದು ದಿನ ರಾಯಚೂರು ಜಿಲ್ಲೆ ಲಿಂಗಸೂಗೂರು ತಾಲೂಕಿನ ನಿರ್ಲೂಟಿಯಿಂದ ಕಾಯಕ ಮಾಡಿಕೊಂಡು ಲಿಂಗನಬಂಡಿಗೆ ಬಂದಿದ್ದ ರಾಮಣ್ಣ ಮಾಸ್ತರ ಎಂಬ ಚೆನ್ನದಾಸ ಸಮುದಾಯದ ಕಲಾವಿದರನ್ನು “ಗುರುಗಳೇ ನನಗೆ ಪೀಟಿಲು ಕಲಿಯಬೇಕೆಂದು ತುಂಬ ಆಶೆಯಾಗಿದೆ. ನನಗೆ ಪೀಟಿಲು ನುಡಿಸಲು ಕಲಿಸಿ ಕೊಡಬೇಕು” ಎಂದು ಕೇಳಿಕೊಂಡರು. ಆಗ ಪೀಟಿಲು ಗುರುಗಳು ನಾನು ನಿನಗೆ ಪೀಟಿಲು ಕಲಿಸುತ್ತೇನೆ. ನೀನು ನನ್ನ ಜೊತೆಗೆ ಬರಬೇಕೆಂದು ಹೇಳಿದರು.

ಮಾರೆಪ್ಪ ದಾಸರು ಪೀಟಿಲು ಕಲಿಯಬೇಕೆಂಬ ಛಲದಿಂದ ತಂದೆ–ತಾಯಿಯನ್ನು ಬಿಟ್ಟು ಗುರುಗಳ ಜೊತೆಗೆ ಹೋದರು. ಹೀಗೆ ನಿರಂತರವಾಗಿ ಮೂರು ವರ್ಷಗಳ ಕಾಲ ಗುರುಗಳ ಸೇವೆ ಮಾಡಿಕೊಂಡು ಪೀಟಿಲು ವಾದ್ಯವನ್ನು ನುಡಿಸಲು ಕಲಿತರು. ಮೂಲತಃ ಅಲೆಮಾರಿ ಸಮುದಾಯವಾಗಿರುವುದರಿಂದ ಹಾಡಿಕೊಂಡು ಭಿಕ್ಷಾಟನೆ ಮಾಡುವುದೇ ಇವರ ಕಾಯಕವಾಗಿತ್ತು. ಹೀಗೆ ಭಿಕ್ಷಾಟನೆ ಮಾಡುತ್ತಾ ಹೊರಟ ಮಾರೆಪ್ಪ ದಾಸರು ಒಂದು ದಿನ ಧಾರವಾಡದ ಒಂದು ಓಣಿಯಲ್ಲಿ ತಮ್ಮ ದಿನನಿತ್ಯದ ಕಾಯಕದಂತೆ ಸುಮಧುರವಾದ ಕಂಠಸಿರಿಯಲ್ಲಿ ಹಾಡಿಕೊಂಡು ನಿಂತಿದ್ದರು. ಇವರ ಕಂಠಸಿರಿಯನ್ನು ಕೇಳಿದ ಸಂಗೀತ ಸಾಮ್ರಾಟ ಹಿಂದೂಸ್ತಾನಿ ಸಂಗೀತದ ಅಂತಾರಾಷ್ಟ್ರೀಯ ಕಲಾವಿದ ಡಾ. ಮಲ್ಲಿಕಾರ್ಜುನ ಮನ್ಸೂರ್ ಅವರು ಮಾರೆಪ್ಪ ದಾಸರನ್ನು ತಮ್ಮ ಮನೆಗೆ ಕರೆಸಿಕೊಂಡು ಎರಡು ಗಂಟೆಯವರೆಗೆ ಇವರ ಸಂಗೀತವನ್ನು ಕೇಳಿ ಮೆಚ್ಚಿಕೊಂಡು ಒಂದು ನೂರು ರೂಪಾಯಿ ಸಂಭಾವನೆಯನ್ನು ಕಾಣಿಕೆಯಾಗಿ ಕೊಟ್ಟರು. ಆರು ತಿಂಗಳವರೆಗೆ ಭಿಕ್ಷಾಟನೆ ಮಾಡಿದರೂ ನೂರು ರೂಪಾಯಿ ಸಂಗ್ರಹಿಸಲಾಗುವುದಿಲ್ಲ.

ಅಂಥದರಲ್ಲಿ ಮನ್ಸೂರು ಸಾಹೇಬರು ಒಂದು ನೂರು ರೂಪಾಯಿ ಕೊಟ್ಟಿದ್ದನ್ನು ನೋಡಿ ಖುಷಿಯಿಂದ ಸ್ವೀಕಾರ ಮಾಡಿದರು. ಇವರ ಗಾಯನಕ್ಕೆ ಮೆಚ್ಚಿದ ಮನ್ಸೂರ್ ಅವರು ಇವರನ್ನು ಧಾರವಾಡ ಆಕಾಶವಾಣಿಯಲ್ಲಿ ಹಾಡಿಸಬೇಕೆಂದು ತಿಳಿದು ಆಕಾಶವಾಣಿಯ ನಿರ್ದೇಶಕರಾಗಿದ್ದ ನೀಲಗಾರ ಅವರಿಗೆ ಇವರ ಹಾಡುಗಾರಿಕೆ ಕುರಿತು ತಿಳಿಹೇಳಿ ನಂತರ ಆಕಾಶವಾಣಿಯಲ್ಲಿ ಹಾಡಿಸಿದರು. ಇದು 1973ನೇ ಇಸ್ವಿ ಮಾರೆಪ್ಪ ದಾಸರು ಆಕಾಶವಾಣಿಯಲ್ಲಿ ಮೊದಲಬಾರಿಗೆ ತತ್ವಪದ ಹಾಡಿದರು. "ತೂಗುತಾದ ನೋಡ ಜೋಕಾಲಿ ಸದ್ಗುರುವಿನ ದಯಾದಿಂದ" ಎಂಬ ಹಾಡು ಆಕಾಶವಾಣಿಯಲ್ಲಿ ಪ್ರಸಾರವಾದ ಇವರ ಹಾಡನ್ನು ಕೇಳಿದ ಎಂ.ಕೆ. ನಾರಾಯಣರಾವ್ ಅವರು ಇವರ ಹಾಡು ಕೇಳಬೇಕೆಂದು ಇವರನ್ನು ಮನೆಗೆ ಕರೆಸಿ ಅರ್ಧ ಗಂಟೆ ಹಾಡಿಸಿ ಸಂತೋಷಪಟ್ಟರು. ಹಾಡಿಕೊಂಡು ಭಿಕ್ಷೆ ಬೇಡಿ ಜೀವನ ನಡೆಸುತ್ತಿದ್ದ ಮಾರೆಪ್ಪ ದಾಸರಿಗೆ ಮಲ್ಲಿಕಾರ್ಜುನ ಮನ್ಸೂರ್ ಅವರ ಕೃಪೆಯಿಂದ ಆಕಾಶವಾಣಿ ಮತ್ತು ಹಲವಾರು ಮನೆಗಳಲ್ಲಿ, ವೇದಿಕೆಗಳಲ್ಲಿ ಕಾರ್ಯಕ್ರಮ ನೀಡುವಂತಹ ಸೌಭಾಗ್ಯ ದೊರಕಿತು.

ಜಾನಪದ ಸಂಗೀತದ ಭಂಡಾರವೇ ಆಗಿರುವ ಮಾರೆಪ್ಪ ದಾಸರು ಭಿಕ್ಷೆ ಬೇಡಿ ಜೀವನ ನಡೆಸುತ್ತಿದ್ದರು. ಭಿಕ್ಷೆ ಬೇಡುವ ಪರಿಸ್ಥಿತಿ ತಮ್ಮ ಮಕ್ಕಳಿಗೆ ಬರಬಾರದೆಂದು ಕೆಲವರು ತಮ್ಮ ಮಕ್ಕಳಿಗೆ ತಮ್ಮ ವೃತ್ತಿ ಮಾಡುವುದೇ ಬೇಡವೆಂದು ಹೇಳುತ್ತಾರೆ. ಆದರೆ ಮಾರೆಪ್ಪ ದಾಸರು ತಮಗೆ ಎಷ್ಟೇ ಕಷ್ಟಗಳು ಇದ್ದರೂ ಕೂಡ ತಲೆತಲಾಂತರಗಳಿಂದ ಬಂದಂತಹ ಈ ಸಂಗೀತ ಕಲೆ ತಮ್ಮೊಂದಿಗೆ ಕೊನೆಯಾಗಬಾರದೆಂದು ಹಲವಾರು ಶಿಷ್ಯರನ್ನು ತಯಾರು ಮಾಡುತ್ತಿದ್ದಾರೆ. ನಾಡಿನ ಹೆಸರಾಂತ ಜನಪದ, ತತ್ವಪದ, ದಾಸರಪದ ಮತ್ತು ವಚನಗಳನ್ನು ಹಾಡಿಕೊಂಡು ನಾಡಿನ ತುಂಬೆಲ್ಲ ಸಂಚರಿಸಿ ಅಜ್ಞಾನದಿಂದ ದುಶ್ಚಟಗಳಿಗೆ ಬಲಿಯಾದ ಎಷ್ಟೋ ಜನರನ್ನು ಜ್ಞಾನದೆಡೆಗೆ ತಂದಿರುವ ಕೀರ್ತಿ ಮಾರೆಪ್ಪ ಮಾರೆಪ್ಪ ದಾಸರ್ ಅವರಿಗೆ ಸಲ್ಲುತ್ತದೆ.

ಕಿತ್ತೂರು ರಾಣಿ ಚೆನ್ನಮ್ಮ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಮಹಾಂತೇಶ ನೋಣಿಯವರು ಮಾರೆಪ್ಪ ದಾಸರ ಜೀವನ ಸಾಧನೆಯನ್ನು ಕುರಿತು ಎಂ.ಫಿಲ್ ಪದವಿ ಸಹ ಪಡೆದಿದ್ದಾರೆ. ಯಾವುದೇ ರೀತಿಯ ಶಾಸ್ತ್ರೀಯ ಸಂಗೀತ ಕಲಿಯದಿದ್ದರೂ ತತ್ವಪದಗಳನ್ನು ಲೀಲಾಜಾಲವಾಗಿ ಹಾಡುವಂಥ ಮಹಾನ್ ಕಲಾವಿದ ಮಾರೆಪ್ಪ ಮಾರೆಪ್ಪ ದಾಸರ್ ಇವರ ಸಂಗೀತ ಸಾಧನೆಗೆ ಮೆಚ್ಚಿ ಹಲವಾರು ಸಂಘ–ಸಂಸ್ಥೆಗಳು, ಮಠ–ಮಾನ್ಯಗಳು ಮತ್ತು ರಾಜ್ಯ ಸರ್ಕಾರದಿಂದ ಹಲವಾರು ಪ್ರಶಸ್ತಿಗಳನ್ನು ಕೊಟ್ಟು ಗೌರವಿಸಿದೆ.

"ತೂಗುತಾದ ನೋಡ ಜೋಕಾಲಿ ಸದ್ಗುರುವಿನ ದಯಾದಿಂದ" ಹೀಗೆ ಹಲವಾರು ಚೆನ್ನದಂಥ ಹಾಡುಗಳನ್ನು ತಮ್ಮ ಕಂಠಸಿರಿಯಲ್ಲಿ ಇಟ್ಟುಕೊಂಡು ಭಿಕ್ಷೆ ಬೇಡುತ್ತ ಇಡೀ ನಮ್ಮ ನಾಡನ್ನು ಸಂಚಾರ ಮಾಡಿದಂಥ ಕಲಾವಿದ ಮಾರೆಪ್ಪ ದಾಸರ್ ಇವರಂಥ ಅಪ್ಪಟ ದೇಸಿ ಗಾಯಕರು ಅಪರೂಪಕ್ಕೊಬ್ಬರು. ಸಂಗೀತದಲ್ಲಿ ಆಗರ್ಭ ಶ್ರೀಮಂತರಾದ ಮಾರೆಪ್ಪ ಮರೆಪ್ಪ ದಾಸರ್ ಆರ್ಥಿಕ ಪರಿಸ್ಥಿತಿಯಿಂದ ಇನ್ನೂ ಪಾರಾಗಿಲ್ಲ. ಈಗಲೂ ಕೂಡ ಯಲಬುರ್ಗಾ ನಿಲ್ದಾಣ ಬೀದಿಯ ಪಕ್ಕದ ಗುಡಿಸಿಲಿನಲ್ಲಿ ವಾಸಿಸುತ್ತಿರುವ ಮಾರೆಪ್ಪ ದಾಸರಿಗೆ ಆರು ಜನ ಪುತ್ರರು ಇಬ್ಬರು ಪುತ್ರಿಯರಿದ್ದಾರೆ.

ಪರಂಪರಾಗತವಾಗಿ ಹಾಡುಗಾರರಾದ ದಾಸರ್ ಬದುಕು ಸಾಗಿಸಲು ಬೇರೆ

ಬೇರೆ ವೃತ್ತಿಗಳನ್ನು ಅನುಸರಿಸುತ್ತಿದ್ದಾರೆ. ಆದರೆ ಛಲಬಿಡದೆ ಎಷ್ಟೇ ತೊಂದರೆ ತಾಪತ್ರಯಗಳು ಬಂದರೂ ಈ ಸಂಗೀತ ತನ್ನೊಂದಿಗೆ ಹಾಳಾಗಬಾರದೆಂದು ಬಿಡುವಿನ ವೇಳೆಯಲ್ಲಿ ಮಕ್ಕಳಿಗೆ ತತ್ವಪದಗಳನ್ನು ಹೇಳಿಕೊಡುತ್ತ ತಮ್ಮ ಸಂಗೀತ ಸೇವೆಯನ್ನು ಮುಂದುವರಿಸಿಕೊಂಡು ಸಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು**


1. ರಾಮಚಂದ್ರೇಗೌಡ, ಹಿ.ಶಿ., ಚಕ್ಕರೆ ಶಿವಶಂಕರ್ (ಸಂ), ಜಾನಪದ ತಲೆಆಮಾರು–2, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, 2003
2. ಚಕ್ಕರೆ ಶಿವಶಂಕರ, ಕನ್ನಡ ಜನಪದ ಕಲಾ ಪ್ರವೇಶ, ಸಾಗರ ಪ್ರಕಾಶನ, ಬೆಂಗಳೂರು, 2006
3. ಗಿರಿಜಾ ಕರ್ಪೂರ, ಗುಲಬರ್ಗಾ ಜಿಲ್ಲೆಯ ಜನಪದ ಕಲಾವಿದರು
4. ಯಲ್ಲಪ್ಪ ಬಿ. ಹಿಮ್ಮಡಿ, ಚೆನ್ನದಾಸರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2008
5. ಡಾ. ಮಲ್ಲಿಕಾಜು ಬಿ. ಮಾನ್ಪಡೆ, ಚೆನ್ನದಾಸರ ಸಮುದಾಯ, ಡಾ. ಬಿ.ಆರ್. ಅಂಬೇಡ್ಕರ ಸಂಶೋಧನಾ ಸಂಸ್ಥೆ, ಬೆಂಗಳೂರು, 2016
6. ಡಾ. ನಾಗರಾಜ ಹವಲ್ದಾರ, ಕರ್ನಾಟಕ ಕಲಾವಿದರು, ಹಿಂದೂಸ್ತಾನಿ ಸಂಗೀತ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು, 2016


❖❖❖

# ತಾಂಡ ಕಾದಂಬರಿಯಲ್ಲಿ ಲಂಬಾಣಿ ಸಂಸ್ಕೃತಿಯ ಚಿತ್ರಣ

**ಡಾ. ಸೋಮಶೇಖರ ಎಂ.**

ಕನ್ನಡ ಸಹ ಪ್ರಾಧ್ಯಾಪಕರು, ಎಸ್.ಜಿ.ಆರ್.ಸಿ.ಎಂ. ಸ. ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಬಳ್ಳಾರಿ

ವಿಶ್ವದ ವೈವಿಧ್ಯಮಯ ಸಂಸ್ಕೃತಿಗಳಲ್ಲಿ ಭಾರತದ ಬಹುಸಂಸ್ಕೃತಿಗಳು ವಿಶಿಷ್ಟವಾಗಿವೆ. ಭಾರತದ ವೈವಿಧ್ಯಮಯ ಸಂಸ್ಕೃತಿಗಳಲ್ಲಿ ಲಂಬಾಣಿ ಸಂಸ್ಕೃತಿಯು ಒಂದಾಗಿದೆ. 'ಬಂಜಾರ' ಪದ ಭಾಷಿಕವಾಗಿ, ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ವಿಶಾಲಾರ್ಥವನ್ನು ಪಡೆದುಕೊಂಡಿದೆ. ಲಂಬಾಣಿ, ಸುಗಾಲಿ, ಬಣಜಾರ, ಲಂಬಾಡಿ, ಲಮಾಣಿ, ಬಣಜಾರ ಹೀಗೆ ಹಲವು ಹೆಸರಿನಿಂದ ಕರೆಯಿಸಿಕೊಳ್ಳುವ ಬಂಜಾರರು ತಮ್ಮ ಉಡುಗೆ-ತೊಡೊಗೆ, ಭಾಷೆ ಹಾಗೂ ಸಂಸ್ಕೃತಿಯಿಂದಲೇ ದೇಶದಲ್ಲಿ ವಿಶಿಷ್ಟವಾಗಿ ಗುರುತಿಸಿಕೊಳ್ಳುತ್ತಾರೆ. ವಿಶ್ವದ ಬುಡುಕಟ್ಟು ಸಂಸ್ಕೃತಿಗಳಲ್ಲಿ ಅತ್ಯಂತ ವರ್ಣರಂಜಿತವಾದ ಸಂಸ್ಕೃತಿ ಬಂಜಾರ ಸಮುದಾಯದ್ದು.

ಕರ್ನಾಟಕದಲ್ಲಿ ಲಂಬಾಣಿ ಸಮುದಾಯದ ಸಂಸ್ಕೃತಿಯನ್ನು ಪಸರಿಸುವಲ್ಲಿ ಕನ್ನಡ ಸಾಹಿತ್ಯ ಶ್ರಮಿಸಿದೆ. ಕತೆ, ಕಾದಂಬರಿ, ನಾಟಕ ಹೀಗೆ ಮುಂತಾದ ಸಾಹಿತ್ಯ ರೂಪಗಳಲ್ಲಿ ಲಂಬಾಣಿ ಸಂಸ್ಕೃತಿ ಕಾಣಿಸಿಕೊಂಡಿದೆ. ಕಳೆದ ಮೂರ್ನಾಲ್ಕು ದಶಕಗಳಿಂದೀಚೆಗೆ ಕವಿಗಳು, ಲೇಖಕರು, ಕಥೆಗಾರರು, ಸಂಶೋಧಕರು, ಬರಹಗಾರರು ಲಂಬಾಣಿ ಸಂಸ್ಕೃತಿ ಹಾಗೂ ಪರಂಪರೆಗಳನ್ನು ಲಿಖಿತ ರೂಪದಲ್ಲಿ ದಾಖಲಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಬಂಜಾರ ಸಮುದಾಯದ ಲೇಖಕರಷ್ಟೇಯಲ್ಲದೇ ಬಂಜಾರೇತರ ಕವಿಗಳು, ಬರಹಗಾರರು ತಮ್ಮ ಬರವಣಿಗೆಯ ಮೂಲಕ ಈ ಸಂಸ್ಕೃತಿಯನ್ನು ಹಿಡಿದಿಟ್ಟು ಮುಂದಿನ ತಲೆಮಾರುಗಳಿಗೆ ಕೊಂಡೊಯ್ಯಲು ಶ್ರಮಿಸಿಸುತ್ತಿದ್ದಾರೆ. ಅಂಥವರ ಸಾಲಿನಲ್ಲಿ ಶಿರಗಾನಹಳ್ಳಿ ಶಾಂತನಾಯ್ಕ ಅವರು ಒಬ್ಬರು. ಇವರು ಕನ್ನಡ ಮತ್ತು ಆಂಗ್ಲಬಾಷೆಯಲ್ಲಿ ಹಲವಾರು ಕತೆ, ನಾಟಕ, ಕವನ ಸಂಕಲನ, ಕಾದಂಬರಿಗಳನ್ನು ರಚಿಸಿ ಸಾಹಿತ್ಯಾಸಕ್ತರಿಗೆ ಉಣಬಡಿಸಿದ್ದಾರೆ.

ಶಿರಗಾನಹಳ್ಳಿ ಶಾಂತನಾಯ್ಕರ 'ತಾಂಡ' ಕಾದಂಬರಿ ಬಂಜಾರ ಸಮುದಾಯದ ಸಾಂಸ್ಕೃತಿಕ ಪರಂಪರೆಗಳನ್ನು ತೆರೆದಿಡುವ ಕೃತಿಯಾಗಿದೆ. ಇದೊಂದು ಜನಾಂಗೀಯ ಸಂಕಥನ. "ಒಂದೆ ಭಾಷೆ, ಒಂದೆ ಸಂಸ್ಕೃತಿ, ಒಂದೆ ಸಂಪ್ರದಾಯ, ಒಂದೆ ಆಚರಣೆ ಹಾಗೂ ಒಂದೆ ದೈವವನ್ನು ನಂಬಿ ಬದುಕಿರುವುದೆ ತಾಂಡ" ಎಂದು ಕಾದಂಬರಿಯ ಮುನ್ನುಡಿಯಲ್ಲಿ ಹೇಳಿರುವ ಸರಜೂ ಕಾಟ್ಕರ್ ಅವರ ಮಾತುಗಳು ಸತ್ಯವಾದುದು. ಶಾಂತನಾಯ್ಕರು ಈ ಕಾದಂಬರಿಯಲ್ಲಿ ಲಂಬಾಣಿ ಜನರ ಬದುಕಿನ ವಿವಿಧ ಸ್ತರಗಳನ್ನು ಹಲವು ಪ್ರಸಂಗಳ ಮೂಲಕ ಎಳೆ ಎಳೆಯಾಗಿ ಪರಿಚಯಿಸಿದ್ದಾರೆ. ಕಾದಂಬರಿ ಓದುಗರಿಗೆ ಲಂಬಾಣಿ ಸಮುದಾಯದ ವೈವಿಧ್ಯಮಯ ಸಂಸ್ಕೃತಿಯ ಜೊತೆಗೆ ಲಂಬಾಣಿಯೇತರ ಸಂಸ್ಕೃತಿಯ ಪರಿಚಯವೂ ಆಗುತ್ತದೆ. ಮೂರ್ನಾಲ್ಕು ದಶಕಗಳ ಪೂರ್ವದಲ್ಲಿದ್ದ ಲಂಬಾಣಿ ಜನರ ಸಾಮಾಜಿಕ-ಆರ್ಥಿಕ ಜೀವನದ ಸ್ಥಿತಿಗತಿ, ಸಾಂಸ್ಕೃತಿಕ ಜೀವನ ಮುಂತಾದ ಆಯಾಮಗಳ ವಿಚಾರಗಳನ್ನು ಕಾದಂಬರಿ ಒಳಗೊಂಡಿದೆ.

ತಾಂಡ ಒಂದು ಅಸ್ಮಿತೆ. ಒಂದೇ ತಾಂಡದಲ್ಲಿ ಒಂದೇ ಸಂಸ್ಕೃತಿಯ ಜನರು ವಾಸವಾಗಿರುವುದು ಬಹಳಷ್ಟು ಕಡೆಗಳಲ್ಲಿ ಕಂಡುಬರುತ್ತದೆ. ಆದರೂ ಕೆಲವೊಂದು ತಾಂಡಗಳು ಕನ್ನಡ ಮಾತನಾಡುವ ಜನಸಮುದಾಯದೊಂದಿಗೆ ಕೂಡಿ ಸಹಜೀವನ ನಡೆಸುತ್ತಿರುವುದು ಕರ್ನಾಟಕದ ಅಲ್ಲಲ್ಲಿ ಕಂಡುಬರುತ್ತವೆ. ಹೀಗಾಗಿ ಬಂಜಾರರು ಸಂಸ್ಕೃತೀಕರಣಗೊಂಡು ವೇಷಭೂಷಣಗಳಲ್ಲಿ, ಹಬ್ಬಹರಿದಿನಗಳಲ್ಲಿ ಅನೇಕ ಮಾರ್ಪಾಡುಗಳಾಗಿವೆ. ಕಾದಂಬರಿಕಾರರೇ ಹೇಳುವಂತೆ "ನನ್ನ ಎರಡನೇ ಕಾದಂಬರಿ 'ತಾಂಡ' ಒಂದು ಲಮಾಣಿ ತಾಂಡದ ಒಳಸುಳಿಗಳನ್ನು ಬಿಚ್ಚಿಡುವ ಪ್ರಯತ್ನವಾಗಿದೆ." ಬದಲಾಗುತ್ತಿರುವ ಜಾಗತಿಕರಣದ ಸಂದರ್ಭಕ್ಕೆ ಮುಖಾಮುಖಿಯಾಗುತ್ತಿರುವ ಬಂಜಾರರ ಸಂಸ್ಕೃತಿಯು ಅವಸಾನದತ್ತ ಸಾಗುತ್ತಿರುವುದನ್ನು ಕಾದಂಬರಿಯಲ್ಲಿ ಹಿಡಿದಿಡುವ ಪ್ರಯತ್ನ ಮಾಡಿರುವುದು ಕಂಡುಬರುತ್ತದೆ.

ಲಂಬಾಣಿ ಸಮುದಾಯದವರು ವಾಸಮಾಡುವ 'ತಾಂಡ' ಎಂದು ಕರೆಯಲ್ಪಡುವ ಪ್ರದೇಶವು ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ಭೌಗೋಳಿಕವಾಗಿ ಸಮೃದ್ಧಿ ಕಾಣದಿದ್ದರೂ ಸಾಂಸ್ಕೃತಿಕವಾಗಿ ಸಂಪತ್ಭರಿವಾಗಿರುವುದನ್ನು ನೋಡಬಹುದು. 'ತಾಂಡ' ಕಾದಂಬರಿಯಲ್ಲಿ ದಾಖಲಾಗಿರುವ ಭದ್ರನಾಯ್ಕನ ತಾಂಡದ ಸಂಸ್ಕೃತಿ ಎಂದರೆ ಅದು ಸಮಸ್ತ ತಾಂಡಗಳ, ಲಂಬಾಣಿ ಸಮುದಾಯದ ಸಂಸ್ಕೃತಿಯಾಗಿದೆ. ವಿಶ್ವದ ನಾನಾ ಮೂಲೆಗಳಲ್ಲಿ ವಾಸವಾಗಿದ್ದರೂ ಇವರದ್ದು ಒಂದೆ ಭಾಷೆ, ಒಂದೆ ಸಂಸ್ಕೃತಿ, ಒಂದೆ ಸಂಪ್ರದಾಯ, ಒಂದೆ ಆಚರಣೆ ಹಾಗೂ ಒಂದೆ ದೈವದ ಪರಿಪಾಲನೆ. ಹೀಗಾಗಿ 'ತಾಂಡ' ಕಾದಂಬರಿ ಸಾತುಭವಾನಿ ಪೂಜೆ, ಬೂಡಿಯಾಡಿ ಹಬ್ಬ(ಅಜ್ಜಿ ಹಬ್ಬ), ಅಲಾಯಿ ಹಬ್ಬ, ಬನ್ನಿ ಹಬ್ಬ, ಯುಗಾದಿ ಹಬ್ಬ, ಒಳಂಗ್(ಪ್ರಾರ್ಥನೆ), ದಳವ ಧೋಕಾಯೆರೋ(ಬಾಣಂತಿಯರಿಗೆ ಅಗ್ನಿ ಸ್ಪರ್ಶ ಮಾಡುವ ಪೂಜೆ), ಮಳಾವ್(ನ್ಯಾಯ ಪಂಚಾಯಿತಿ), ವಾಝು(ನಗಾರಿ ಭಜನೆ), ಹವೇಲಿ(ವಿದಾಯದ ಹಾಡು) ಇತ್ಯಾದಿ ಲಂಬಾಣಿ ಆಚರಣೆಗಳನ್ನು, ನಂಬಿಕೆಗಳನ್ನು ದಾಖಲಿಸಿಕೊಂಡಿದೆ.

ಪ್ರತಿವರ್ಷ ಕಾರಹುಣ್ಣಿಮೆ ನಂತರ ಬರುವ ಮಣ್ಣೆತ್ತಿನ ಅಮವಾಸ್ಯೆಯ ಮೊದಲನೆಯ ವಾರದ ಮಂಗಳವಾರ ಇಲ್ಲವೆ ಶುಕ್ರವಾರ ಲಂಬಾಣಿಗರು 'ಸೀತ್ಲ' (ಸಾತಿಯಾಡಿ ಪೂಜೆ) ಹಬ್ಬ ಆಚರಿಸುವರು. "ಊರ ಮುಂದೆ ಏಳು ಹೆಣ್ಣು ದೇವತೆಗಳಾದ ತುಳಜ, ಇಂಗಳಾ, ಬೋದ್ರಿ, ಮರಿಯ, ಮತರಿ, ಠಕರಿ, ಭನಕಿಯರ ರೂಪ ತಾಳಿದ ಅಧಿದೇವತೆಯರು" ಪೂಜೆಗೊಳ್ಳುವರು. ಸಮುದಾಯದ ಉದ್ಧಾರಕ್ಕಾಗಿಯೇ ಈ ಅಧಿದೇವತೆ ಭೂಮಿಯ ಮೇಲೆ ಅವತರಿಸಿದ್ದಾಳೆಂಬುದು ನಂಬಿಕೆ. ಇದರ ವಿವರಗಳು ಕಾದಂಬರಿಯಲ್ಲಿ ಬಂದಿವೆ.

ಕಾದಂಬರಿಯಲ್ಲಿ ಬರುವ ಇನೊಂದು ಹಬ್ಬ ಬೂಡಿಯಾಡಿ ಹಬ್ಬ. ಲಂಬಾಣಿಗರು ಸಾತಿಯಾಡಿ ಹಬ್ಬ ಆಚರಿಸಿದ ನಂತರ 'ಬೂಡಿಯಾಡಿ'(ಅಜ್ಜಿ ಹಬ್ಬ) ಹಬ್ಬ ಆಚರಿಸುವರು. ಇಡೀ ತಾಂಡದ ರಕ್ಷಣೆ ಮಾಡುವ ದೇವತೆಯ ಸಂತೃಪ್ತಿಗಾಗಿ ಈ ಹಬ್ಬದ ಆಚರಣೆ ಮಾಡುವ ವಾಡಿಕೆ. ಈ ಹಬ್ಬವನ್ನು 'ಹೋಳಿಗೆಮ್ಮ' ಹಬ್ಬವೆಂತಲೂ ಕರೆಯುವರು. 'ಅಲಾಯಿ ಹಬ್ಬ'(ಮೊಹರಂ)ಕ್ಕೂ ಲಂಬಾಣಿಗರಿಗೂ ಇರುವ ಸಂಬಂಧ ಅಷ್ಟಕಷ್ಟೇ. ಆದರೂ ಕೆಲವೊಂದು ತಾಂಡಗಳಲ್ಲಿ ಅಲಾಯಿ ಹಬ್ಬದ ಆಚರಣೆ ಇಂದಿಗೂ ನಡೆದುಕೊಂಡು ಬಂದಿರುವುದು ಸೋಜಿಗವೆ. ಲಂಬಾಣಿ ಸಂಸ್ಕೃತಿಗಳಲ್ಲಿ ಅಲಾಯಿ ಹಬ್ಬ

ಆಚರಣೆಯ ಕಡ್ಡಾಯವಿಲ್ಲ. ಕಾದಂಬರಿಯಲ್ಲಿ ದಾಖಲಾಗಿರುವಂತೆ ಹುಲಿಯೂರನ ತಾಯಿ ಜಾನಿಬಾಯಿ ತವರುಮನೆ ಹಂಡೆಕೊಪ್ಪಲು ತಾಂಡದಲ್ಲಿ ಅಲಾಯಿ ಹಬ್ಬದ ತಲೆತಲಾಂತರದಿಂದಲೂ ಆಚರಣೆಯಲ್ಲಿತ್ತು. ಈ ತಾಂಡದಿಂದ ಯಾರ್ಯಾರು ಬೀಗತನ ಮಾಡಿದ್ದಾರೋ ಅವರೆಲ್ಲ ಪೀರಲುದೇವರ ಒಕ್ಕಲಾಗಿದ್ದರು. ಹಾಗಾಗಿ ಭದ್ರನಾಯ್ಕನ ತಾಂಡದಲ್ಲೂ ಅಲಾಯಿ ಹಬ್ಬದ ಆಚರಣೆ ಜೋರಾಗಿಯೆ ನಡೆಯುತ್ತಿತ್ತು. ಈ ಹಬ್ಬದಲ್ಲಿ ಹುಲಿವೇಷ ಹಾಕಿ ಕುಣಿಯುತ್ತಿದ್ದರು. ಹುಲಿಯೂರನಿಗೆ ತನ್ನ ತಾಯಿ "ಮಗ ಇದು ನಮ್ಮ ಆಚರಣೆ, ನೀನು ಐಮೋಮ್ ದಿಮ್ ಆಗಲೇಬೇಕು" ಎಂದು ಹಠದಿಂದ ಮಗನಿಗೆ ಪೀರಲುದೇವನ ಒಕ್ಕಲು ಮಾಡಿದ್ದನ್ನು ಇಲ್ಲಿ ನೋಡಬಹುದು.

ಲಂಬಾಣಿಗಳ ಯುಗಾದಿ ಹಬ್ಬದ ವಿವರಗಳೂ ಕಾದಂಬರಿಯಲ್ಲಿ ಬಂದಿದೆ. ಯುಗಾದಿ ಆಚರಣೆ ಲಂಬಾಣಿಗರಲ್ಲಿ ಮೂರ್ನಾಲ್ಕು ದಿನಗಳವರೆಗೂ ಇರುತ್ತದೆ. ಅಮಾವಾಸ್ಯೆಯ ದಿನ ಎಲ್ಲರ ಮನೆಯಲ್ಲೂ ಸಜ್ಜೆ, ಗೋಧಿ, ಅಕ್ಕಿ ಮುಂತಾದ ಧಾನ್ಯಗಳಿಂದ 'ದೋಸೆ' ಮಾಡುವರು. ಮೊದಲನೆಯ ದೋಸೆಯನ್ನು ಚರಗ ಮಾಡಿ ಮನೆಯ ಸುತ್ತೆಲ್ಲ ಚೆಲ್ಲುವರು. ದೋಸೆಯ ಜೊತೆಗೆ 'ಗೋಲ್ವಾಣಿ'(ಬೆಲ್ಲ, ಕಸಕಸೆ, ಕೊಬ್ಬರಿಯಿಂದ ತಯಾರಿಸಿ ಒಗ್ಗರಣೆ ಕೊಟ್ಟಿರುವ ಪಾನಕ) ತಯಾರಿಸಿ ಕುಟುಂಬದವರೆಲ್ಲ ಒಟ್ಟಾಗಿ ಊಟ ಮಾಡುವರು. ಎರಡನೆಯ ದಿವಸ ಬೇವು ಬೆಲ್ಲ ಮಾಡಿ ದೇವರಿಗೆ ಪೂಜೆ ಸಲ್ಲಿಸುವರು. ಮೂರನೆಯ ದಿನ ಹೋಳಿಗೆ (ಕಡಬು) ಮಾಡುವರು. ಈ ದಿನವೇ ಚಂದ್ರನ ದರ್ಶನಕ್ಕಾಗಿ ಸಾಯಂಕಾಲದ ವರೆಗೂ ಕಾತುರದಿಂದ ಕಾಯುವರು. ಆಕಾಶದಲ್ಲಿ ಮೋಡಗಳ ಅಡಚಣೆಯಿಲ್ಲದೇ ಗೋಚರಿಸುವ ಚಂದ್ರನ ದರುಶನವಾದರೆ ಕೈಮುಗಿದು ನಮಿಸುವರು. ನಂತರ ತಾಂಡದ ಮನೆ ಮನೆಗೆ ತೆರಳಿ ತಮ್ಮ ಸಂಬಂಧಿಕರಿಗೆ, ಹಿರಿಯರಿಗೆಲ್ಲ ಕಾಲಿಗೆಬಿದ್ದು ನಮಸ್ಕರಿಸುವರು. "ದೊಡ್ಡವ್ವ ಚಂದ್ರನ್ನ ನೋಡಿದ್ರಾ" ಎಂದು ಕೇಳುವರು "ಹೂಂ ನೊ ಮಗ ನೋಡಿದೆ" ಎಂದೆಲ್ಲ ಹೇಳಿ ಮಕ್ಕಳಿಗೆ, ಮೊಮ್ಮಕ್ಕಳಿಗೆ ಹರಸುವರು. ಈ ಸಂದರ್ಭದಲ್ಲಿ ಎಂಥಹ ವೈರತ್ವವಿದ್ದರೂ ಮರೆತು ಬಂಧು ಬಾಂಧವರ ಮನೆಮನೆಗೆ ಸುತ್ತಾಡಿ ಯುಗಾದಿಗೆ ಶುಭಾಶಯಗಳನ್ನು ಹೇಳುವುದೇ ವಿಶೇಷವಾಗಿರುತ್ತದೆ. ಹುಲಿಯೂರನ ತಂದೆ ತೋಪುನಾಯ್ಕನ ದುಡಿಮೆ ಕಂಡು ತಮ್ಮಂದಿರು ಹೊಟ್ಟೆಕಿಚ್ಚುಪಟ್ಟು ವರ್ಷಕ್ಕೆರಡು ಸಲ ಜಗಳ ಆಡುತ್ತಿದ್ದರು. ಆದರೆ ಯುಗಾದಿಯ ಚಂದ್ರನ ದರುಶನವು ಈ ವೈರತ್ವಕ್ಕೆ ತಿಲಾಂಜಲಿಯಿಡುತ್ತಿದ್ದದ್ದು ವಿಶೇಷ.

ಬಂಜಾರ ಸಮಾಜದಲ್ಲಿ ನಡೆಯುವ ಮದುವೆ ಸಂದರ್ಭದಲ್ಲಿನ ಆಚರಣೆಗಳಲ್ಲಿ 'ಢಾವಲೊ' ಅಥವಾ 'ಢಾಳೋ' ಒಂದು ವಿಶಿಷ್ಟ ಪದ್ಧತಿಯಾಗಿದೆ. ಇದು ಕೂಡ ತಾಂಡ ಕಾದಂಬರಿಯಲ್ಲಿ ಬರುತ್ತದೆ. ಇದು ಮದುವೆಯಾಗುತ್ತಿರುವ ಹುಡುಗಿಯ ಮನೆಯಲ್ಲಿ ನಡೆಯುವ ಪದ್ಧತಿ. ಮದುವೆ ಗಂಡು-ಹೆಣ್ಣಿನ ಮನೆಗಲಲ್ಲಿ ಸಂಭ್ರಮ ಮನೆಮಾಡಿರುತ್ತದೆ. ಆದರೆ ಲಂಬಾಣಿ ಸಮಾಜದಲ್ಲಿ ಹೆಣ್ಣಿನ ಮನೆಯಲ್ಲಿ ಮದುವೆ ಸಂಭ್ರಮವಿದ್ದರೂ ಮದುವೆಯಾಗುತ್ತಿರುವ ಆ ಹುಡುಗಿಗೆ ತವರುಮನೆಯ ಮೇಲಿನ ಪ್ರೀತಿ, ಮಮತೆಗಳು ನೆನಪಾಗಿ; ಗಂಡನ ಮನೆಯಲ್ಲಿ ಹೇಗೆ ನೋಡಿಕೊಳ್ಳುವರೋ ಎಂಬ ಭವಿಷ್ಯದ ಬದುಕನ್ನು ನೆನೆದು ತನ್ನ ದುಖಃವನ್ನು 'ಢಾವಲೊ' ಮೂಲಕ ಹೊರಹಾಕುವಳು. ಇದನ್ನೆಲ್ಲ ಕೇಳಿಸಿಕೊಳ್ಳುವ ಹುಡುಗಿಯ ತಂದೆ, ತಾಯಿ, ಬಂಧುಗಳು ಮಧುಮಗಳ ದುಃಖದಲ್ಲಿ ತಾವು ಭಾಗವಹಿಸಿಕೊಂಡು ಅಳುವ ಪ್ರಸಂಗ ನಡೆಯುತ್ತದೆ.

ಹೀಗೆ ಅಳುತ್ತಿರುವಾಗ ಕೆಲವರು "ಏಯ್, ಸೀಮೆಯೊಳಗಿಲ್ಲದ ಮದುವೆ ನೀನೆ ಆಗಿ ಏನೆ ರಂಕಿ(ಹುಡುಗಿಯ ಹೆಸರು). ಬಾಯಿ ಮುಚ್ಚು. ನಿನ್ನ ಮದುವೆ ಆಗಿರೋನು ನಿನ್ನ ಕೊಲ್ಲಾಕ ಆಗುತ್ತಿದ್ದಾನೆ ಅಂದ್ಕೊಂಡಿ ಏನು?" ಎಂದು ಸಮಾಧಾನಪಡಿಸುವರು. ಹೀಗೆ ಹುಡುಗಿಗೆ ಬುದ್ಧಿಮಾತುಗಳನ್ನು ಹೇಳುವುದು, ಹೆತ್ತವರಿಗೆ ಸಮಾಧಾನದ ಮಾತುಗಳನ್ನು ಹೇಳುವುದು ಕೊನೆಗೆ ಗಂಡನ ಮನೆಗೆ ಕಳುಹಿಸುವುದು ನಡೆಯುತ್ತದೆ. ಇಂಥಹ ವಿಶಿಷ್ಟ ಆಚರಣೆಯನ್ನು ಶಾಂತನಾಯ್ಕರು 'ತಾಂಡ' ಕಾದಂಬರಿಯಲ್ಲಿ ದಾಖಲಿಸಿದ್ದಾರೆ.

ಲಂಬಾಣಿಗರಲ್ಲಿ ಸತಿಪದ್ಧತಿ ಬಗೆಗೆ ಹೆಚ್ಚಿನ ಮಾಹಿತಿ ಸಿಗದಿದ್ದರೂ ಆಚರಣೆಯಲ್ಲಿರುವ ಗುಜಾಸತ್ತಿ ಮೊದಲಾದ ಏಳು ಸತ್ತಿಗಳ ಪೂಜೆ ಇನ್ನೂ ಜೀವಂತವಿದೆ. ಮನೆಯೊಳಗೆ ಏನೇ ಕಾರ್ಯ ನಡೆದರು ಮೊದಲು ಗುಜಾಸತ್ತಿಗೆ 'ಒಳಂಗ್' (ಪ್ರಾರ್ಥನೆ) ಹೇಳಿಯೇ ಮುಂದಿನ ಕೆಲಸ ನಡೆಸುವ ಪದ್ಧತಿಯಿದೆ. ಕಾದಂಬರಿಯಲ್ಲಿ ಏಳು ಸತ್ತಿಗಳ ಕುರಿತು ದಾಖಲಿಸದಿದ್ದರೂ ಅವುಗಳಲ್ಲಿ ಪ್ರಮುಖಳಾದ 'ಗುಜಾಸತ್ತಿ' ತೋಪುನಾಯ್ಕನ ವಂಶಸ್ಥಳು ಎಂದು ಹೇಳಿರುವುದರಿಂದ ಆ ಸತ್ತಿಗೆ ಮೊದಲನೆಯ ಆದ್ಯತೆ ದೊರೆತಿದೆ. ಉದಾರಣೆಗೆ, ಮನೆಯಲ್ಲಿ ನಡೆಯುವ ಮದುವೆ ಶಾಸ್ತ್ರಕ್ಕೆ ತೋಪುನಾಯ್ಕನ ಹೆಂಡತಿ ಜಾನಿಬಾಯಿ ತಾಂಡದ ಒಳಂಗ್ ಹಾಡುವ ಹೆಂಗಳೆಯರನ್ನು ಕರೆಯಿಸಿ ಮಗ ಸೊಸೆಗೆ ಒಳಿತಾಗಳೆಂದು ಗುಜಾಸತ್ತಿಗೆ ಪ್ರಾರ್ಥನೆ ಮಾಡಿಸುವುದು. ಮತ್ತೊಂದು ಪ್ರಸಂಗವೆಂದರೆ, ಜಾತುನಾಯ್ಕನ ಹೆಂಡತಿ ಮೆಕಳಿ ಗರ್ಭವತಿಯಾದ ಎಂಟನೇ ತಿಂಗಳಲ್ಲಿ "ತಾಯಿ ಗುಜಾಸತಿ ನನ್ನ ಸೊಸೆಯನ್ನ ಯಾವುದೂ ಕಷ್ಟ ಕೊಡದಂಗೆ ಕಾಪಾಡು ತಾಯಿ, ಸುಸೂತ್ರವಾಗಿ ಎರಡ ಕಡೆ ಮಾಡು" ಎಂದು ಬೇಡಿಕೊಂಡು ತಾಂಡದ ಹಿರಿಕ ಹೆಣ್ಣುಮಕ್ಕಳನ್ನು ಕರೆದು 'ಒಳಂಗ್' ಹಾಡಿಸುವುದು. ಹೀಗೆ ಪ್ರಾರ್ಥನೆ ಸಲ್ಲಿಸಿದ ಮೇಲೆ ಕೊಬ್ಬರಿ, ಬೆಲ್ಲ ಹಾಗೂ ಹೆಂಡ ಹಂಚುವ ಪದ್ಧತಿ ರೂಢಿಯಲ್ಲಿದೆ. ಇಂಥಹ ಪ್ರಸಂಗಗಳು ಲಂಬಾಣಿಗರಲ್ಲಿ ಮಹಾಸತಿ ಪದ್ಧತಿ ಜಾರಿಯಲ್ಲಿ ಇದ್ದಿರಬಹುದೆಂದು ಸೂಚಿಸುತ್ತವೆ.

ಸಂಪ್ರದಾಯಗಳ ಆಚರಣೆ ಮತ್ತು ಅದನ್ನು ಅನುಸರಿಸುವ ಪದ್ಧತಿಗಳಲ್ಲಿ ವಿಶಿಷ್ಟವಾಗಿ ಕಾಣಿಸಿಕೊಳ್ಳುವ ಲಂಬಾಣಿಗರು ದೇಶದ ಹಲವು ಬುಡಕಟ್ಟು ಜನಾಂಗಗಳಲ್ಲಿ ವಿಶೇಷವಾಗಿ ಗುರುತಿಸಿಕೊಳ್ಳುವರು. ಮದುವೆಗಳು, ಹಬ್ಬಹರಿದಿನಗಳು, ವೇಷ ಭೂಷಣಗಳು ಎಲ್ಲವೂ ವಿಭಿನ್ನವೆ. ಬನ್ನಿಹಬ್ಬ, ಯುಗಾದಿ ಚಂದ್ರನ ದರ್ಶನ, ದೀಪಾವಳಿಯ ಹಿರಿಯರ ಪೂಜೆ, ಮಹಾಸತಿಯರ ಪೂಜೆ, ಒಳಂಗ್, ವಾಝು(ಭಜನೆ), ಮಳಾವೋ(ನ್ಯಾಯ ಪದ್ಧತಿ) ಹೀಗೆ ಹಲವು ಆಚರಣೆಗಳು ಲಂಬಾಣಿಯೇತರರನ್ನು ಆಕರ್ಷಿಸುತ್ತವೆ. ನಂಬಿಕೆಗಳು, ಮೂಢನಂಬಿಕೆಗಳು ಇವರಲ್ಲಿನ ಅನಕ್ಷರತೆಗೆ ಸಾಕ್ಷಿಯಾಗಿವೆ. ಹೊಟ್ಟೆ ತುಂಬಿಸಿಕೊಳ್ಳಲು ಪ್ರಾಮಾಣಿಕವಾಗಿ ದುಡಿಯುವ ಇವರು ವಲಸೆ, ಗುಳೇ ಹೋಗುವುದು ಬಡತನಕ್ಕೆ ಸಾಕ್ಷಿಯಾಗಿವೆ. ಹೀಗಾಗಿ ಸಾಂಸ್ಕೃತಿಕವಾಗಿ ಶ್ರೀಮಂತಿಕೆಯಿದ್ದರೂ ಆರ್ಥಿಕ, ರಾಜಕೀಯ, ಸಾಮಾಜಿಕ ಸ್ತರಗಳಲ್ಲಿ ಅಭಿವೃದ್ಧಿಯಾಗದಿರುವುದನ್ನು ಗಮನಿಸಬಹುದು. ಜಾಗತಿಕರಣದ ಪ್ರಭಾವದಿಂದಾಗಿ ಆಹಾರ, ಉಡುಪು, ಸಂಸ್ಕೃತಿಗಳಲ್ಲಿ ಪಲ್ಲಟಗೊಂಡಿರುವುದು ಈ ಸಮುದಾಯದ ವೈಭವಯುತ ಸಾಂಸ್ಕೃತಿಕ ಲೋಕವನ್ನು ಅವಸಾನದ ಬಾಯಿಗೆ ತಳ್ಳಿದಂತಾಗಿದೆ.

ಆದ್ದರಿಂದ ಶಾಂತನಾಯ್ಕ ಅವರ 'ತಾಂಡ' ಕಾದಂಬರಿ ಪ್ರಜ್ಞಾಪೂರ್ವಕವಾಗಿ ಲಂಬಾಣಿ ಸಂಸ್ಕೃತಿಯ ತಲ್ಲಣಗಳನ್ನು, ಜನರ ದಾರುಣ ಬದುಕನ್ನು ಹಲವು ಸಂಕಥನಗಳ ಮೂಲಕ ಓದುಗರ ಮುಂದೆ ಇಟ್ಟಿರುವುದು ಮುಂದಿನ ಯುವಪೀಳಿಗೆಗೆ ಎಚ್ಚರಿಕೆಯಾಗಿದೆ. ಲಂಬಾಣಿ ಸಂಸ್ಕೃತಿ, ಆಚರಣೆ ಹಾಗೂ ಪದ್ಧತಿಗಳನ್ನು ಉಳಿಸಿಕೊಂಡು ಹೋಗುವ ಭವಿಷ್ಯದ ಮಾರ್ಗವನ್ನು ತೋರಿಸಿಕೊಟ್ಟಿದ್ದಾರೆ. ಆದ್ದರಿಂದ ಈ ಕಾದಂಬರಿಯಲ್ಲಿ ದಾಖಲಾಗಿರುವ ಎಲ್ಲಾ ಪ್ರಸಂಗಗಳು ಕಾಲ್ಪನಿಕವಲ್ಲ; ಅವೆಲ್ಲವೂ ವಾಸ್ತವಕಥೆಗಳೇ ಆಗಿವೆ.

**ಆಕರ ಕೃತಿ**


1. ಶಿರಗಾನಹಳ್ಳಿ ಶಾಂತನಾಯ್ಕ–ತಾಂಡ(ಕಾದಂಬರಿ), ಪ್ರಗತಿ ಪ್ರಕಾಶನ, ಮೈಸೂರು. 2021


**ಪರಾಮರ್ಶನ ಗ್ರಂಥಗಳು**


1. ಡಾ. ಪಿ. ಕೆ. ರಾಠೋಡ್, ಬಂಜಾರ ಸಂಸ್ಕೃತಿ ಕಥನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. 2015
2. ಡಾ. ಹರಿಲಾಲ ಪವಾರ, ಬಂಜಾರ ಭಾಷೆ ತೌಲನಿಕ ಅಧ್ಯಯನ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೋಟಗುಡಿ. 2017
3. ಡಾ. ಡಿ.ಬಿ.ನಾಯಕ(ಸಂ), ಲಂಬಾಣಿ ಸಾಂಸ್ಕೃತಿಕ ಪದಕೋಶ(ಸಂಪುಟ–17), ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೋಟಗುಡಿ. 2021
4. ಡಾ. ಸಣ್ಣರಾಮ(ಸಂ), ಭಾಷಾಶಾಸ್ತ್ರೀಯ ನೆಲೆಯಲ್ಲಿ ದಕ್ಷಿಣ ಭಾರತದ ಲಂಬಾಣಿ ಭಾಷೆ, ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ ಹಂಪಿ. 2023
5. ಡಾ. ಸಣ್ಣರಾಮ(ಸಂ), ಬಂಜಾರ ಭಾಷೆ, ಸಮಾಜ ಮತ್ತು ಸಂಸ್ಕೃತಿ, ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ ಹಂಪಿ. 2023


❖❖❖

# ಸುಕುಮಾರಸ್ವಾಮಿ ಕಥೆಯಲ್ಲಿ ಶಿಕ್ಷಣ

**ಶ್ರೀಪತಿ ಹಳಗುಂದ**
ಮುಖ್ಯಸ್ಥರು, ಕನ್ನಡ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಹೊಸನಗರ, ಶಿವಮೊಗ್ಗಜಿಲ್ಲೆ

ಸುಕುಮಾರಸ್ವಾಮಿಯ ಕಥೆ ಸುಮಾರು ಎರಡು ಸಾವಿರ ವರ್ಷಗಳ ಸುದೀರ್ಘವಾದ ಇತಿಹಾಸ ಹೊಂದಿರುವ ಕನ್ನಡ ಸಾಹಿತ್ಯದ ಮೊದಲ ಗದ್ಯ ಕೃತಿ 'ವಡ್ಡಾರಾಧನೆ'ಯದ್ದು. ಇಲ್ಲಿ ಹತ್ತೊಂಭತ್ತು ಕಥೆಗಳಿವೆ. ಶೈಲಿಯಲ್ಲಿ ಕಾವ್ಯಾತ್ಮಕವಾಗಿರುವುದರಿಂದ ಇಂದಿಗೂ ಓದುಗನನ್ನು ಕಾವ್ಯದ ಲಹರಿಯಲ್ಲಿಯೇ ನಿಲ್ಲಿಸಿರುವುದು ಅದರ ವಿಶೇಷ. ಮೊದಲನೆಯ ಕಥೆಯೇ ಸುಕುಮಾರಸ್ವಾಮಿಯ ಕಥೆ.

ವಡ್ಡಾರಾಧನೆಯ ಕರ್ತೃ, ಕೃತಿನಾಮ, ಕಾಲ, ದೇಶಗಳ ಕುರಿತು ಸಾಕಷ್ಟು ಚರ್ಚೆಗಳು, ಜಿಜ್ಞಾಸೆಗಳು, ಅಭಿಪ್ರಾಯ–ಭಿನ್ನಾಭಿಪ್ರಾಯಗಳು, ವಾದ–ವಿವಾದ ನಡೆದಿದೆ, ನಡೆಯುತ್ತಲಿದೆ. 'ಯಾ ಪೇಟ್ದಿ ಪತ್ತೊಂಬತ್ತು ಕಥೆಗಳ್ ಶಿವಕೋಟ್ಯಾಚಾರ್ಯರ ಪೇಳ್ದ ವಡ್ಡಾರಾಧನೆಯ ಕವಚವು ಮಂಗಳ ಮಹಾಶ್ರೀ' ಎಂಬ ಗದ್ಯಭಾಗವಿದ್ದು ಆನಂತರದಲ್ಲಿ ಅದನ್ನು ಪ್ರತಿ ಮಾಡಿದವರ ಹೆಸರು ಮತ್ತು ಕಾಲದ ವಿವರಗಳಿವೆ.

ಕೃತಿಯ ಆರಂಭದಲ್ಲಿ "ಮುನ್ನಂ ಸುಕುಮಾರಸ್ವಾಮಿಯ ಕಥೆಯಿಂ ಪೇಳ್ವೆಂ" ಎಂದು ವರ್ತಮಾನ ಕಾಲದ ಉತ್ತಮ ಪುರುಷ ಏಕವಚನದಲ್ಲಿ ಶಿವಕೋಟ್ಯಾಚಾರ್ಯ ಸ್ಪಷ್ಟವಾಗಿ ತಿಳಿಸಿ ಹತ್ತೊಂಭತ್ತು ಕಥೆಗಳನ್ನು ನಿರೂಪಿಸಿದ್ದಾನೆ. ವಡ್ಡಾರಾಧನೆ ಎಂಬ ಪದದಲ್ಲಿ ವೃಕ್+ಬೃಹ್ ಧಾತುಗಳು ಸಮಾನಾರ್ಥವಾಗಿದ್ದು ಬೇರೆ ಬೇರೆ ರೂಪಗಳಾಗಿರುವಂತೆ ಕಾಣುತ್ತದೆ. ವಡ್ಡ ಪ್ರಾಕೃತದ ದೊಡ್ಡ ಪದದ ಮೂಲ '...ವಡ್ಡಾರಾಧಣಾ ಎಂದರೆ ದೊಡ್ಡ ಅಥವಾ ದೊಡ್ಡವರ ಆರಾಧನೆ' ಇರಬಹುದು.

ಸುಕುಮಾರಸ್ವಾಮಿಯ ಕಥೆಯ ಮೂಲಕ ಅಂದಿನ ಶಿಕ್ಷಣ, ಶಿಕ್ಷಣದ ವ್ಯವಸ್ಥೆಯನ್ನು ಗುರುತಿಸುವುದು ಈ ಲೇಖನದ ಉದ್ದೇಶ. ಇಲ್ಲಿ ಮೊದಲ ಕಥೆಯಾದ ಸುಕುಮಾರಸ್ವಾಮಿಯ ಕಥೆಯನ್ನು ಮಾತ್ರ, ಅದರಲ್ಲೂ ಅಗ್ನಿಭೂತಿ, ವಾಯುಭೂತಿ ಭಾಗದ ಕೆಲವು ದೃಷ್ಟಾಂತಗಳ ಬಗ್ಗೆ ಇಲ್ಲಿ ಗಮನ ಹರಿಸಲಾಗಿದೆ. ಜನಪದ ಕಥೆಗಳಂತೆ ಆರಂಭವಾಗುವ ಕೆಲ ಕಥೆಗಳು ಪ್ರಾದೇಶಿಕ ವರ್ಣನೆಯಿಂದ ಆರಂಭವಾಗುತ್ತವೆ. ಈ ವರ್ಣನೆ ಸಹ ರಾಜನ, ಮಂತ್ರಿಯ ಕಾರ್ಯಕ್ಷಮತೆಗೆ ಹಿಡಿದ ಕೈಗನ್ನಡಿಯಾಗಿದೆ.

'ಈ ಜಂಬೂದ್ವೀಪದ ಭರತ ಕ್ಷೇತ್ರದೊಳ್ ವತ್ಸೆಯೆಂಬುದು ನಾಡಲ್ಲಿ ಕೌಸಂಬಿಯೆಂಬ ಪೊಳಲ್ ಅದನಾಳ್ವೊನತಿ ಬಳನೆಂಬರಸನಾತನ ಮಹಾದೇವಿ ಮನೋಹರಿ'. ಜಂಬೂ ಎಂಬ ದ್ವೀಪ, ಭರತ ಕ್ಷೇತ್ರ, ವತ್ಸೆ ಎಂಬ ನಾಡು, ಕೌಸಂಬಿ ಎಂಬ ಪಟ್ಟಣ ಹೀಗೆ ವಿಸ್ತಾರವಾದ ಪ್ರಾದೇಶಿಕತೆ ಹಿನ್ನೆಲೆಯಿಟ್ಟುಕೊಂಡು ಕಥೆ ಮುಂದುವರಿಯುತ್ತದೆ. ಅತಿಬಳ ಮತ್ತು ಮನೋಹರಿಯ ಪರಿಚಯ ಇಲ್ಲಿಗೆ ಮುಗಿದು ಈ ರಾಜನ ಮಂತ್ರಿಯಾದ ಸೋಮಶರ್ಮ ಮತ್ತು ಅವನ ಹೆಂಡತಿ ಕಾಶ್ಯಪಿಯ ಪರಿಚಯಿಸಿ ಎರಡು ಮಕ್ಕಳಾದ ಅಗ್ನಿಭೂತಿ ಮತ್ತು ವಾಯುಭೂತಿಯ ಪರಿಚಯ ಮತ್ತು ದೀರ್ಘವಾದ ಅವರ ಬದುಕು ಅನಾವರಣಗೊಳ್ಳುತ್ತಾ ಹೋಗುತ್ತದೆ.

ಮಕ್ಕಳಿಗಾಗಿ ಆಸ್ತಿ ಮಾಡಿದ ಸೋಮಶರ್ಮ ಮಕ್ಕಳನ್ನು ಆಸ್ತಿ ಮಾಡುವಲ್ಲಿ ಎಡವುತ್ತಾನೆ. ಹೀಗಿರುವಾಗ ಸೋಮಶರ್ಮ ಸಾವನ್ನಪ್ಪುತ್ತಾನೆ. ಮಂತ್ರಿಯಾದ ಈತನಿಗೆ ಮಕ್ಕಳಿರುವುದು ಮನಗಂಡ ರಾಜ ಇದೇ ಪದವಿ ಕೊಡಲು ಮುಂದಾಗುತ್ತಾನೆ. ಆಗ ಈರ್ವರ ವಾಸ್ತವ ಸ್ಥಿತಿ ಅರ್ಥವಾಗುತ್ತದೆ. ನೀವಾವೋದುಗಳಂ ಬಲ್ಲಿರೆಂದೀರ್ವರುಮಂ ಬೆಸಗೊಂಡಡವರ್ಗ್ಗಳ್ ತಲೆಯಂ ಬಾಗಿ ಮರುಮಾತುಗೊಡದೆ ಕಣ್ಣಿನೀರಂತೀವಿನೆಲ ನಂಬರೆಯುತ್ತಿರೆ.'

ಇದೊಂಥರ 'ಕ್ಯಾಂಪಸ್ ಇಂಟರ್‌ವ್ಯೂ' ಇದ್ದಹಾಗೆ. ಅಲ್ಲಿ ಸೋಲುತ್ತಾರೆ. ಮನೆಗೆ ಬಂದಾಗ ಈ ವಿಷಯ ತಾಯಿ ಕಾಶ್ಯಪಿಗೆ ತಿಳಿಯುತ್ತದೆ. ಮೊದಲೇ ವೈಧವ್ಯದ ಕಷ್ಟವನ್ನು ಅನುಭವಿಸುತ್ತಿರುವ ಕಾಶ್ಯಪಿಗೆ ಇನ್ನೊಂದು ಆಘಾತ ಎದುರಾಗುತ್ತದೆ. ಹೆತ್ತೊಡಲು ಅಲ್ಲವೇ? ಮಕ್ಕಳ ಅಸಹಾಯಕತೆಯನ್ನು ಕಂಡ ಕಾಶ್ಯಪಿ ಮತ್ತಷ್ಟು ಅಸಹಾಯಕಳಾಗುತ್ತಾಳೆ. ಒಂದು ಅಸ್ತಿತ್ವವನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದು ಆ ಕಾಲದ ಹೆಣ್ಣಿನ ಮಾನಸಿಕ ಗಟ್ಟಿತನವನ್ನು ಸಾರುತ್ತದೆ.

ಇಂದು ಜಗತ್ತನ್ನಾಳುತ್ತಿರುವುದು ಬುದ್ಧಿ. ಹೌದು, ಹೃದಯ ಹೃದಯಗಳ ಸಂಬಂಧ ಸತ್ತು ಬುದ್ಧಿ ಬುದ್ಧಿಗಳ ಸಂಬಂಧವೇ ಮೇಲ್ಪಂಕ್ತಿಯಲ್ಲಿದೆ. ತುಂಬಿದ ಸಭೆಯಲ್ಲಿ ಅಸಹಾಯಕರಾದ ಅಗ್ನಿಭೂತಿ ಮತ್ತು ವಾಯುಭೂತಿ ತಾಯಿ ಬಳಿ ಬರುವ ಮುನ್ನ ರಾಜನಿಂದ, ಅಲ್ಲಿದ್ದ ಸಭಾಸದರಿಂದ ಅವಮಾನಿತರಾದಾಗಲೇ ಗೊತ್ತಾಗಿದ್ದು ವಿದ್ಯೆಗಿರುವ ಮಹತ್ವ. ನೊಂದು ಸಮಾಜದಿಂದ ವಿಮುಖರಾಗಲು ಹೊರಟ ಮಕ್ಕಳನ್ನು ಸಮಾಜಮುಖಿಯಾಗಿಸಲು ಕಾಶ್ಯಪಿ ಹೊರಡುತ್ತಾಳೆ. ಇದರ ಪ್ರತಿಫಲವೇ ತನ್ನಣ್ಣ ಸೂರ್ಯಮಿತ್ರನಲ್ಲಿ ಮಕ್ಕಳ ವಿದ್ಯಾಭ್ಯಾಸದ ಫಲವಾಗಿ ಕಳಿಸಲು ಮುಂದಾಗಿದ್ದು. ಕಾಶ್ಯಪಿ ಬರೆದು ಕಳುಹಿಸಿದ ಪತ್ರ ಗಮನಾರ್ಹ. 'ಸೋಮಶರ್ಮಂ ಕಳಿದುದುಮಂ ಮಂತ್ರಿ ಪದವಿ ಪೆರರ್ಗಾದುದುಮಂ ಮಕ್ಕಳೂ ಸಪ್ತವ್ಯಸನಾಭಿಭೂತರಾಗಿ ಬಾಳುಂ ಕೆಟ್ಟುದುಮಂ ಶಾಸ್ತ್ರಜ್ಞರುಂ ಬುದ್ಧಿಯಾಡೆಯರುಂ ಯೋಗ್ಯರುಮಪ್ಪಂತು ಮಾಡಿಮೆಂದು...'

ಅಯೋಗ್ಯರೆಂದು ಸಭೆಯಿಂದ ಬಂದ ಮಕ್ಕಳಿಗೆ ತನ್ನಣ್ಣನ ಬಳಿ ಕಾಶ್ಯಪಿ ಕೇಳಿಕೊಂಡಿದ್ದು ಶಾಸ್ತ್ರ, ಬುದ್ಧಿ ಮಾತ್ರವಲ್ಲ, ಯೋಗ್ಯರನ್ನಾಗಿ ಮಾಡು ಎಂದು. ಇಲ್ಲಿಂದಲೇ ಈ ಕಥೆ ಒಂದು ಪರಿಣಾಮಕಾರಿ ತಿರುವು ಪಡೆಯುತ್ತದೆ. ಪತ್ರವನ್ನು ಓದಿದ ಸೂರ್ಯಮಿತ್ರ ಒಂದು ಸುಳ್ಳನ್ನು ಹೇಳುತ್ತಾನೆ. ಕೆಲವೊಮ್ಮೆ ಒಂದು ಸುಳ್ಳು ಸತ್ಯಕ್ಕಿಂತ ಮೌಲ್ಯವಾದುದ್ದಾಗಿರುತ್ತದೆ ಎಂಬುದಕ್ಕೆ ಇದೇ ಸಾಕ್ಷಿ.

ಕೌಸಂಬಿಯಿಂದ ಹೊರಟ ಸಹೋದರರು ಕೆಲವು ದಿವಸ ನಡೆದು ರಾಜಗೃಹ ತಲುಪುವಾಗಲೇ ಹೈರಾಣಾಗಿದ್ದರು. ಈ ನೋವಿನ ಜೊತೆಗೆ ಮತ್ತೊಂದು ಆಘಾತ ಕಾದಿತ್ತು. ಹೊರಡುವ ಮುನ್ನ ತಾಯಿ ಯಾರನ್ನು ತನ್ನ ಅಣ್ಣ ಎಂದಿದ್ದಳು, ಆದರೆ ಪತ್ರವನ್ನು ಓದಿದ ಸೂರ್ಯಮಿತ್ರ 'ಕಾಶ್ಯಪಿಯೊಂಬಳೆನಗೆ ತಂಗೆಯಲ್ಲ ಸೋಮಶರ್ಮನೊಬ್ಬೊಂ ಮಯ್ದುನನುಮಿಲ್ಲ ಸೂರ್ಯಮಿತ್ರನೆಂಬ ಪೆಸರೆನಗುಂಟು ನಿಮ್ಮ ಮಾವನಪ್ಪ ಸೂರ್ಯಮಿತ್ರನಲ್ಲ.' ಅಬ್ಬಾ! ಬಾಣಲಿಯಿಂದ ಬೆಂಕಿಗೆ ಬಿದ್ದ ಅನುಭವವಾದಂತಾಯಿತು. 'ಛೇ ಕಪ್ಪಡಮುಟ್ಟು ಬೈಕಂದುರಿದಿನ್ನ ಪೊಡಮೊಡುವವೆಂದು' ಮೊದಲೇ ಹೇಳಿದ ನೆನಪಾಯಿತು. ಇಲ್ಲಿ ಗಮನಿಸಬೇಕಾದುದು ಸೂರ್ಯಮಿತ್ರನ ದೂರಾಲೋಚನೆ ಮತ್ತು ಭಾವನಾತ್ಮಕ ಸಂಬಂಧ. ತನ್ನ ತಂಗಿಯ ಪತ್ರದ ಒಕ್ಕಣೆ 'ಮಂತ್ರಿ ಪದವಿ

ಪರೆರಗ್ಗಾದುದುಮಂ' ಎಂಬ ವಾಕ್ಯ ಸೂರ್ಯಮಿತ್ರನನ್ನು ಜಾಗೃತಾವಸ್ಥೆಗೆ ತರುತ್ತದೆ.

ಇದು ಕುಲದ ಪ್ರೀತಿಯೂ ಹೌದು, ಒಡಹುಟ್ಟಿದವಳ ಬಗ್ಗೆ ಇರುವ ಅಪಾರ ಪ್ರೀತಿ ಕೂಡ. 'ಕಾಶ್ಯಪಿಯೆಂಬೊಳೆನಗೆ ತಂಗೆಯಿಲ್ಲ' ಎನ್ನುವಾಗ ಸೂರ್ಯಮಿತ್ರನಿಗೆ ಹೃದಯ ತುಂಬಿ ಬಂದಿರಬೇಕು. ಆದರೆ ಹೀಗೆ ಹೇಳದೆ ಹೋದರೆ ತನ್ನ ಅಳಿಯಂದಿರ ಪಾಡೇನು ಎಂಬ ಚಿಂತೆಯೂ ಕಾಡಿರಬೇಕು. ಕಠಿಣವಾದ ಎದೆಯೊಳಗೆ ಒಂದು ಮೃದು ಹೃದಯವಿದೆಯಲ್ಲ, ಈ ಕಾರಣಕ್ಕೆ ಸೂರ್ಯಮಿತ್ರ ಎದೆಯನ್ನು ಪರಿಚಯಿಸುತ್ತಾನೆ ಹೃದಯವನ್ನಲ್ಲ. ತೋರಿಸುವ ಸಮಯವು ಬಂದೇ ಬರುತ್ತದೆ ಎಂದು ವಿಶ್ವಾಸವೂ ಇರಬಹುದು. 'ಪೆಸರಂಗೊಪ್ಪೆನಪ್ಪೊಡೆ ಮುನ್ನಿನಂತುರ್ಕಿ ಕೆಡುವರೆಂದು ಮನದೆ ಬಗೆದು'.

ಏಕೆಂದರೆ ಸೂರ್ಯಮಿತ್ರನು ಬಹುಶಃ ಅಗ್ನಿಭೂತಿ ಮತ್ತು ವಾಯುಭೂತಿಯ ಬಾಲ್ಯವನ್ನು ಕಂಡಿರಬೇಕು. ಸೋಮಶರ್ಮನ ಸಾಧುತನವೋ ಮಕ್ಕಳೀರ್ವರ ದುರ್ನಡತೆಯೋ ಕೊನೇಪಕ್ಷ ಅಪ್ಪನ ಪದವಿಗಾಗುವಷ್ಟಾದರೂ ಓದದೇ ಇರುವುದು ಕಳವಳ ತಂದಿರಬೇಕು. ಈ ಕಾರಣಕ್ಕೆ ಆತ ಹೆಸರನ್ನು ಒಪ್ಪಿಕೊಂಡರೂ ಮಾವ ಎನ್ನುವ ಸಂಬಂಧವನ್ನು ಒಪ್ಪಿಕೊಳ್ಳದಿರುವುದು ಆ ಮೂಲಕ ಈರ್ವರಿಗೆ ತಂದೆಯಿಂದ ಕಳೆದುಕೊಂಡದ್ದನ್ನು ಮಾವನಿಂದ ಕೊಡಿಸುವ ಎಂದು ಮುಂದಾಗುತ್ತಾನೆ.

ಇದೇ ಸಂದರ್ಭದಲ್ಲಿ ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಪಂಪ ಪೂರ್ವಯುಗದಲ್ಲೂ ಗುರು-ಶಿಷ್ಯರ ನಡುವೆ ಇರುವ ಅಂತರ. ಈ ಅಂತರ ಸ್ವಪ್ರತಿಷ್ಠೆಯಾಗಿರಲಿ, ಅಹಂಕಾರಕ್ಕಾಗಲೀ ಅಲ್ಲ ಎನ್ನುವುದು ಮನಗಾಣಬೇಕು. ಇದೇ ನಿಜವಾದ ಶಿಕ್ಷಣ. ಭಯಮಿಶ್ರಿತ ಗೌರವದಿಂದ ಕೂಡಿದ ಶಿಕ್ಷಣ ಮಾತ್ರ ಸಂಪೂರ್ಣವಾದ ಶಿಕ್ಷಣವಾಗಲು ಸಾಧ್ಯ. ಸಲುಗೆ ಶಿಕ್ಷಣದ ಹೆದ್ದಾರಿಯಲ್ಲ, ಶಿಸ್ತು ನಿಜವಾದ ಹೆದ್ದಾರಿ. ಆದರೂ ಸೂರ್ಯಮಿತ್ರ ತನ್ನಳಿಯಂದಿರು ಎಲ್ಲಿ ನೊಂದುಕೊಂಡಾರೋ ಎಂದು 'ಮತ್ತಮಿಂತೆದಂ ನೀಮಾರ್ಗಾರಾದೊಡಮೆಂ ವಿದ್ಯಾರ್ಥಿಗಳಾಗಿಯೋದಮ್ ಕಲ್ಪೆಮೆಂಬಳ್ತಿಯೊಳ್ ಬಂದಿರೊಪ್ಪಡೆ ನಿಮ್ಮನೋದಿಸಲಕ್ಕುಂ' ಎನ್ನುತ್ತಾನೆ. ಇದನ್ನು ಮಹಾಪ್ರಸಾದ ಎಂದು ಈರ್ವರು ಒಪ್ಪಿಕೊಳ್ಳುತ್ತಾರೆ. ಒಪ್ಪಲು ಕಾರಣ ಸಭೆಯಲ್ಲಿ ಆದ ಅಪಮಾನ ಒಂದು ಕಡೆ, ಇನ್ನೊಂದು ಕಡೆ ತಾಯಿಯ ಪ್ರೀತಿ. ಎಲ್ಲಕ್ಕಿಂತ ಹೆಚ್ಚಾಗಿ ಸಾಗಿಬಂದ ಕೆಲವು ದಿನಗಳ ಹಾದಿ.

'ಕೆಟ್ಟ ಮೇಲೆ ಬುದ್ಧಿ ಬಂತು' ಎಂಬಂತಾಗಿದೆ ಇವರ ಸ್ಥಿತಿ. ಅಂತೂ ವಿದ್ಯಾಪ್ರಾರಂಭಗೆಯ್ದರ್. ಏಳೆಂಟು ವರ್ಷದಲ್ಲಿ ನಾಲ್ಕು ವೇದ, ಆಲಿಂಗಮುಂಷಡಗಳು ಎಂದರೆ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ್ಯ ಎಂಬ ವೇದಾಂತಗಳು, ಪದಿನೆಂಟು ಧರ್ಮಶಾಸ್ತ್ರಗಳುಂ ಮನು, ಯಮ ದೇವಲ, ವಶಿಷ್ಠ, ಅತ್ರಿ, ದಕ್ಷ ವಿಮ್ಲು, ಅಂಗೀರಸ, ಉತನಾ, ವಾತ್ವತಿ, ವ್ಯಾಸ, ಆಪಸ್ತಂಭ, ಗೌತಮ, ಕಾತ್ಯಾಯನ, ನಾರದ, ಯಾಜ್ಞವಲ್ಕ್ಯ, ಪರಾಶರ, ಸಂವರ್ತ, ಶಂಖ, ಹಾರೀತ, ಲಿಖಿತ ಇವರಿಂದ ಪ್ರಣೀತವಾದ ಧರ್ಮಶಾಸ್ತ್ರಗಳು, ಮೀಮಾಂಸೆ, ನ್ಯಾಯ...

**ಶಾಲಿಹೋತ್ರ-ಶಾಲಿಹೋತ್ರನು ಬರೆದ ಅಶ್ವಶಾಸ್ತ್ರ**

**ಪಾಳಕಾಪ್ಯಂ-ಪಾಳಕಾಪ್ಯ ಬರೆದ ಗಜಶಾಸ್ತ್ರ**

**ಆಶ್ವಿನಿಮತಂ-ಅಶ್ವಿನೀ ದೇವತೆಗಳಿಂದ ದೇವವೈದ್ಯರಿಂದ ಸೃಜಿಸಿದ ಗ್ರಂಥ**

**ಬಾಹಲು–ಅಷ್ಟಾಂಗಹೃದಯವೆಂಬ ವೈದ್ಯಗ್ರಂಥ**

**ಕ್ಷಾರಪಾನೀಯ–ಪಾನಕ್ಕೆ ಸಂಬಂಧಿಸಿದ ವೈದ್ಯ... ಇತ್ಯಾದಿ**

ಆ ಕಾಲದ ಇಂಜಿನಿಯರಿಂಗ್, ಫಿಲಾಸಫಿ, ಮೆಡಿಕಲ್ ಎಲ್ಲಾ ಈ ಮೇಲಿನ ಕಲಿಕೆಯಲ್ಲಿ ಸೇರಿಹೋಗಿದ್ದವು. ಅಂದಿನ ಶಿಕ್ಷಣ ಒಂದು ರೀತಿಯ ತಪಸ್ಸೂ ಆಗಿತ್ತು ಎಂದು ಶಿವಕೋಟ್ಯಾಚಾರ್ಯ ಹೇಳುವಾಗ ಒಂದು ಬದ್ಧತೆಯಿತ್ತು ಎನ್ನುವುದು ಸತ್ಯ. ಅಂದರೆ ಒಂದು ವಿಷಯವನ್ನು ಕಲಿಯುವುದು ಬೇರೆ, ಕಲಿತ ವಿಷಯದಲ್ಲಿ ಪಾಂಡಿತ್ಯ ಗಳಿಸುವದು ಬೇರೆ. ಅಂತೂ ಅಗ್ನಿಭೂತಿ, ವಾಯುಭೂತಿ ಪಾಂಡಿತ್ಯ ಗಳಿಸಿಕೊಂಡರು. ಸಪ್ತ ವ್ಯಸನಾಭಿಭೂತರಾದ ಈರ್ವರು ಸಕಲ ವಿಷಯ ಪಂಡಿತರಾದ ವಿಷಯ ಅಷ್ಟು ಸುಲಭದ್ದಲ್ಲ ಮತ್ತು ಅದು ದಕ್ಕಿಸಿಕೊಳ್ಳಲಿಕ್ಕೆ ಪಟ್ಟ ಶ್ರಮ ಮೆಚ್ಚುವಂಥದ್ದು. ಇದು ಅವರ ಸ್ವಕಲಿಕೆಯ ಸ್ವಾಭಿಮಾನದ ಹಿನ್ನೆಲೆಯದ್ದು.

ಹೀಗೆ ಕೌಸಂಬಿಯಿಂದ ರಾಜಗೃಹಕ್ಕೆ ಬಂದ ಈರ್ವರೂ ರಾಜಗೃಹದಿಂದ ಕೌಸಂಬಿಗೆ ತೆರಳಲು ಸಜ್ಜಾಗುತ್ತಾರೆ. ಕೌಸಂಬಿಯಿಂದ ಹೊರಡುವಾಗ ಇದ್ದ ಮನಸ್ಥಿತಿ ರಾಜಗೃಹದಿಂದ ಕೌಸಂಬಿಗೆ ಹೊರಡುವಾಗ ಇರಲಿಲ್ಲ. ನಿಜ, ಹೆತ್ತ ಕರುಳಿಗೆ ನೋವನ್ನುಂಟುಮಾಡಿದ ಸಹೋದರರು ಅದೇ ಕರುಳಿಗೆ ಸಾಂತ್ವನ ಹೇಳುವ ಉತ್ಸುಕತೆಯಲ್ಲಿದ್ದಾರೆ.

ಹೀಗೆ ನಮಸ್ಕರಿಸಿ ಹೊರಡುವ ಮುನ್ನ ಸೂರ್ಯಮಿತ್ರ ಹೀಗೆ ಹೇಳುತ್ತಾನೆ; 'ನೀಮೆಮ್ಮ ತಂಗೆಯ ಮಕ್ಕಳಿರ್ ಸೋದರಳಿಯಂದಿರಪ್ಪಿರ' ಒಂದೆಡೆ ಸಹೋದರರಿಗೆ ಕಲಿತ ಖುಷಿ, ಇನ್ನೊಂದೆಡೆ ನಮ್ಮ ಮಾವನೇ ಈತನು ಎಂಬ ಆಶ್ಚರ್ಯ. ಇಷ್ಟಕ್ಕೆ ನಿಲ್ಲದ ಸೂರ್ಯಮಿತ್ರ 'ಮುಳಿಯದಿರಿ ಕ್ಷಮಿಯಿಸಿಮೆಂದುಡಲುಂ ತುಡಲುಂ ಸಂಬಳಮುಮಂ ಕೊಟ್ಟು ಕಳಿಪಿದಾಗಳ್' ಒಬ್ಬ ಗುರುವಿಗೆ ಇರಬೇಕಾದ ಎಲ್ಲಾ ಸನ್ನಡತೆಗಳ ಪ್ರತಿನಿಧಿಯಾಗುತ್ತಾನೆ ಸೂರ್ಯಮಿತ್ರ. ಹಿರಿಯವನಾದ ಅಗ್ನಿಭೂತಿ ಅಗ್ನಿಯಂತೆ ಉರಿಯದೆ ತಣ್ಣನೆಯ ಮನಸ್ಥಿತಿಯಿಂದ ಈವರೆವಿಗೂ ಗುರುವಾಗಿದ್ದು ಈಗ ಗುರುವೂ, ಮಾವನೂ ಆದ ಸೂರ್ಯಮಿತ್ರನು ಅನುಸರಿಸಿದ ಕ್ರಮವನ್ನು ಉಪಕಾರ ಎಂದೇ ಬಗೆಯುತ್ತಾನೆ.

ಜೈನಧರ್ಮದಲ್ಲಿ ಹುಟ್ಟು ಮತ್ತು ಮರುಹುಟ್ಟು ಸಹಜ ಮತ್ತು ಈ ತೆರನಾದ ನಂಬಿಕೆ ಅಪಾರ. ಯಾರ ಬಸಿರಿನಲ್ಲಿ ಸೃಷ್ಟಿಯಾಗುತ್ತಾರೋ ಅದು ಮುಖ್ಯ. ಏಕೆಂದರೆ ಅದು ಅವರ ಹಿಂದಿನ ಜನ್ಮದ ಪಾಪ ಪುಣ್ಯವನ್ನು ನಿರ್ಧರಿಸುವ ಬಸುರಾಗಿರುತ್ತದೆ. ಕೇವಲ ಸಹಜ ಜನನ ಅಲ್ಲ, ಅದು ಆತ ಮಾಡಿದ ಕರ್ಮದ ಫಲವೂ ಹೌದು. 'ಉತ್ತಮ ಕುಲದ ಶ್ರಾವಕರ ಬಸಿರೊಳ್ ಪುಟ್ಟುವುದು ಹೆಮ್ಮೆಯ ಸಂಗತಿ'. ಆದರೆ ವಾಯುಭೂತಿ ಮಾವನ ನಿರ್ಬಂಧವನ್ನು ಖಂಡಿಸುತ್ತಾನೆ. ವಾಯುಭೂತಿಗೆ ನೆನಪಾಗಿದ್ದು ಆತ ಗುರುವಾಗಿ ಕೊಟ್ಟ ಕಷ್ಟಕ್ಕಿಂತ ಮಾವನಾಗಿ ಹೀಗೆ ನಡೆದುಕೊಳ್ಳಬಾರದಾಗಿತ್ತು ಎಂದು. ಕೌಸಂಬಿಯಿಂದ ತಾಯಿ ಕಾಶ್ಯಪಿ ಕಳಿಸುವ 'ಎಮ್ಮಣ್ಣಿ' ಎಂಬ ಪ್ರೀತಿಯ ಸಂಬೋಧನೆ ನೆನಪಾಗುತ್ತದೆ. ಆದರೆ ಸೂರ್ಯಮಿತ್ರ ನನ್ನ ಅಳಿಯ ಎಂಬ ಪ್ರೀತಿ ತೋರಿಸದೇ ಇದ್ದುದು ವಾಯುಭೂತಿಯ ಕೋಪಕ್ಕೆ ಕಾರಣ. ಕರುಳಸಂಬಂಧ ಇಷ್ಟೇನಾ ಎಂಬ ಧೋರಣೆ ವಾಯುಭೂತಿಯದ್ದು.

ಸೂರ್ಯಮಿತ್ರನ ಈ ತೆರನಾದ ನಡವಳಿಕೆಯಿಂದ ನಮ್ಮ ಉಜ್ವಲ ಭವಿಷ್ಯ

ಅಡಗಿದೆ ಎಂಬ ಸತ್ಯವನ್ನು ಅರಿಯದೆ ಹೋಗುವುದು ವಿಪರ್ಯಾಸ. ವಿಪರ್ಯಾಸ ಎನ್ನುವುದಕ್ಕಿಂತ ಜೈನ ಕಥೆಗಳ ಗುಚ್ಛದಲ್ಲಿ ಕಂಡುಕೊಂಡ ಸಂದೇಶ ಮತ್ತು ತಂತ್ರ ಎನ್ನಬಹುದು. ವಾಯುಭೂತಿ ಕೌಸಂಬಿಗೆ ಬಂದು ತುಂಬಿದ ಸಭೆಯಲ್ಲಿ ಎಲ್ಲರ ಮನ ಗೆದ್ದು ತನ್ನ ಅಸ್ತಿತ್ವವನ್ನು ಮತ್ತು ಪರಂಪರಾಗತವಾಗಿ ಬರುವ ಅಪ್ಪನ ಮಂತ್ರಿಸ್ಥಾನವನ್ನು ಪಡೆದುಕೊಂಡು ಇದ್ದಿದ್ದರೆ ಏನೂ ಆಗುತ್ತಿರಲಿಲ್ಲ. ಮುಂದೊಂದು ದಿನ ಸೂರ್ಯಮಿತ್ರ ಸೂರ್ಯಮಿತ್ರಾಚಾರ್ಯರಾಗಿ ಕೌಸಂಬಿಗೆ ಬಂದಾಗ ಅಗ್ನಿಭೂತಿ ಪ್ರೀತಿಯಿಂದ ಬರಮಾಡಿಕೊಂಡು ಸತ್ಕರಿಸುತ್ತಾನೆ. ಅಗ್ನಿಭೂತಿ, "ಆಚಾರ್ಯರೇ, ವಾಯುಭೂತಿಯ ಬಳಿ ಹೋಗೋಣ" ಎಂದಾಗ ಪ್ರೀತಿಯಿಂದ ಒಪ್ಪಿಕೊಳ್ಳುತ್ತಾರೆ.

ಪಾರ್ವರ ಸಭೆಯಲ್ಲಿ ವಾಯುಭೂತಿ ಸೂರ್ಯಮಿತ್ರಾಚಾರ್ಯರನ್ನು ಗೌರವಿಸುವುದಿರಲಿ ನಿಷ್ಠುರ ಮಾತುಗಳಿಂದ ನಿಂದಿಸುತ್ತಾನೆ. ಜೈನಧರ್ಮದ ಸಾಕಷ್ಟು ಕಥೆಗಳಲ್ಲಿ ವೈದಿಕ ಧರ್ಮವನ್ನು ಖಂಡಿಸಿರುವುದು ಕಂಡುಬರುತ್ತದೆ. ಹೀಗಿರುವಾಗ ಪಾರ್ವರ ಸಭೆಯಲ್ಲಿ ಒಬ್ಬ ಜೈನ ಯತಿಯನ್ನು ನಿಂದಿಸುವುದರ ಪ್ರತಿಫಲವಾಗಿ ನಾಯಿಯಾಗಿ, ನರಿಯಾಗಿ, ಹಂದಿಯಾಗಿ, ಅಂಗವಿಕಲನಾಗಿ ಜನ್ಮಾಂತರ ಪಡೆಯುವುದು ಒಂದು ಧಾರ್ಮಿಕ ನೆಲೆಯಲ್ಲಿ ಬಹಳ ಮುಖ್ಯವಾದುದು ಮತ್ತು ಜೈನರನ್ನು, ಜೈನಧರ್ಮವನ್ನು ನಿಂದಿಸಿದರೆ ಏನಾಗುತ್ತದೆ ಎಂಬ ಸಂದೇಶವನ್ನು ರವಾನಿಸಿದಂತಿದೆ. ಈ ಕಾರಣಕ್ಕೆ ಮಾದಿಗರ ಮನೆಯಲ್ಲಿ ವಾಯುಭೂತಿ ಹೆಣ್ಣಾಗಿ ಹುಟ್ಟುವುದು.

ಹೌದು, ರಾಜಗೃಹದಲ್ಲಿರುವ ಸಮಯವಷ್ಟು ಸೂರ್ಯಮಿತ್ರ ಕೊಟ್ಟ ಕಷ್ಟಗಳು (ನಿರ್ಬಂಧಗಳು) ವಾಯುಭೂತಿಗೆ ಕಷ್ಟ ಎನಿಸಲಿಲ್ಲ. ಏಕೆಂದರೆ 'ನೀವಾರೋದೊಡೇಂ' ಎಂದುಕೊಂಡು, ಶಿಷ್ಯರಾಗಿ ತಮ್ಮನ್ನು ಸ್ವೀಕರಿಸಿದ್ದೇ ಮಹಾಪ್ರಸಾದ ಎಂದು ಯೋಚನೆ. ಒಬ್ಬ ಗುರುವಿನ ಬಳಿ ಶಿಷ್ಯ ಹೇಗಿರಬೇಕಿತ್ತೋ ಹಾಗೆ ಇದ್ದ. ಸಮಸ್ಯೆ ಬಂದಿದ್ದು ಆತ ನಾನೇ ನಿಮ್ಮ ಮಾವ ಎಂದು ಒಪ್ಪಿಕೊಂಡಾಗ. ಒಪ್ಪಿಕೊಳ್ಳದೇ ಇರಬಹುದಿತ್ತು; ಆದರೆ ಸೂರ್ಯಮಿತ್ರನ ಮನಸ್ಸು ಅಷ್ಟು ಕಠೋರವಲ್ಲ. ಕಲಿಯುವ ಹಂತದಲ್ಲಿ ಗುರುವೇ ಆಗಿದ್ದ ಸೂರ್ಯಮಿತ್ರ ಈಗ ಮಾವನಾಗಿ ಏನನ್ನು ಕೊಡಬೇಕು ಅದೆಲ್ಲವನ್ನೂ ಕೊಟ್ಟು ಸತ್ಯವನ್ನು ಹೇಳಿದ್ದಾನೆ. ಗುರುವೊಬ್ಬನ ಮೇಲ್ನೋಟದ ಕಾಠಿಣ್ಯವನ್ನು ವರವೆಂದು ಭಾವಿಸುವ ಅದೇ ಸಂದರ್ಭದಲ್ಲಿ ಅದನ್ನು ಶಾಪ ಎಂದು ಯೋಚಿಸುವ ವಿದ್ಯಾರ್ಥಿಗಳು ಇರುತ್ತಾರೆ. ಆದರೆ ಸೂರ್ಯಮಿತ್ರ ಪ್ರೀತಿ ತೋರಿಸಿದ್ದರೆ ಇಂದು ವಾಯುಭೂತಿ ಪಾರ್ವರ ಸಭೆಯಲ್ಲಿ ಕೂರುವ ಸ್ಥಿತಿಯೂ ಬರುತ್ತಿರಲಿಲ್ಲ.

ಸೂರ್ಯಮಿತ್ರ ಹೊರಡುವಾಗಲೂ ಹೇಳದೇ ಇದ್ದರೆ ವಾಯುಭೂತಿ ಕೌಸಂಬಿಗೆ ಬಂದಮೇಲೆ ತಾಯಿಯಿಂದ ಸತ್ಯ ಗೊತ್ತಾದಾಗ ಇನ್ನಷ್ಟು ದ್ವೇಷಿಸುತ್ತಿದ್ದ. ಏನೇ ಇರಲಿ ವಾಯುಭೂತಿಯ ಕೋಪ ನಮ್ಮ ಕರುಳಸಂಬಂಧವನ್ನು ಆಗ ಹೊರಹಾಕಲಿಲ್ಲ ಎಂದು. ಸೂರ್ಯಮಿತ್ರ ಬಳಿ ಕಲಿತ ವಿದ್ಯೆ ಅಗ್ನಿಭೂತಿಗೆ ವಿನಯ ಕಲಿಸಿದೆ, ವಾಯುಭೂತಿಗೆ...?! ಒಂದೇ ತಾಯಿಯ ಮಕ್ಕಳಾದರೂ ಭಿನ್ನ ಆಲೋಚನೆ ಬಂದದ್ದು ಗಮನಿಸಿ. ಮನೋವೈಜ್ಞಾನಿಕವಾಗಿ ಕೆಲವೊಮೆ ಹೀಗಾಗುತ್ತದೆ. ಸೂರ್ಯಮಿತ್ರ ಒಬ್ಬ ಆದರ್ಶ ಶಿಕ್ಷಕನಾಗಿ ಗಮನ ಸೆಳೆಯುತ್ತಾನೆ. 'ಅಗ್ನಿಭೂತಿ ಮತ್ತು ವಾಯುಭೂತಿ' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಂದ ಆದಿಯಾಗಿ ಪದವಿ

ತರಗತಿಯವರೆಗೆ ಇದೊಂದು ಪಠ್ಯವಾಗಿ ಬೋಧನೆಗೊಳ್ಳುತ್ತಲೇ ಬಂದಿದೆ.

ಈ ಪಾಠ ನಿಗದಿಯಾಗಲು ಒಂದು ಕಾರಣ ಹೆಚ್ಚಾಗಿ ಕಾಶ್ಯಪಿ, ಅಗ್ನಿಭೂತಿ, ವಾಯುಭೂತಿ, ಸೂರ್ಯಮಿತ್ರ, ಕೌಸಂಬಿ, ರಾಜಗೃಹ ಇವರುಗಳ/ಇವುಗಳ ನಡುವೆ ನಡೆಯುವ ಒಂದು ಶಿಕ್ಷಣ ಪ್ರಪಂಚ. ಅಗ್ನಿಭೂತಿ ಮತ್ತು ವಾಯುಭೂತಿ ಒಂದೇ ತಾಯಿಯ ಮಕ್ಕಳು. ಒಂದೇ ಪರಿಸರದಲ್ಲಿ ಬೆಳೆದವರು. ಒಟ್ಟಿಗೆ ಸಪ್ತವ್ಯಸನ ಅಭಿಭೂತರಾದವರು. ಅಗ್ನಿಭೂತಿ ಎಚ್ಚೆತ್ತುಕೊಂಡಾಗ ವಾಯುಭೂತಿ ಏಕೆ ಎಚ್ಚೆತ್ತುಕೊಳ್ಳಲಿಲ್ಲ ಎಂಬ ಪ್ರಶ್ನೆ ನಮ್ಮನ್ನು ಮತ್ತೆ ಮತ್ತೆ ಕಾಡುತ್ತದೆ. ವಿದ್ಯಾರ್ಥಿಗೆ ವಿದ್ಯೆಗಿಂತ ವಿನಯ ಮುಖ್ಯ ಎಂಬ ಸಂದೇಶವನ್ನು ಈ ಜೈನ ಕಥೆ ಸಾರುತ್ತದೆ.

ವಿದ್ಯೆ ಕಲಿತ ವಾಯುಭೂತಿ ಏನಾದ, ವಿದ್ಯೆ ಮತ್ತು ಬುದ್ಧಿ ಕಲಿತ ಅಗ್ನಿಭೂತಿ ಏನಾದ ಎಂಬುದನ್ನು ಈ ಕಥೆಯಲ್ಲಿ ಕಂಡಿದ್ದೇವೆ. ಈ ನಿಟ್ಟಿನಲ್ಲಿ ಪರಂಪರೆಯ ಶಿಕ್ಷಣವನ್ನು ಅರಿತು ಕಲಿಯುವುದು ಸಾವಿರವಿದೆ, ಕಲಿಯುವ ಮನಸ್ಸುಗಳು ಎಷ್ಟಿವೆ...?!

**ಪರಾಮರ್ಶನ ಸಾಹಿತ್ಯ**


1. ಅನಂತರಾಮಯ್ಯ ಆರ್.ಎಲ್. ವಡ್ಡಾರಾಧನೆ ಕಥಾಲೋಕ, ಸಾಧನಾ ಪ್ರಕಾಶನ ಬಳೇಪೇಟೆ, ಬೆಂಗಳೂರು (2012)
2. ಕೀರ್ತಿನಾಥ ಕುರ್ತಕೋಟಿ, ಕನ್ನಡ ಸಾಹಿತ್ಯ ಸಂಗಾತಿ, ಪ್ರಸಾರಂಗ ಕನ್ನಡ ವಿ.ವಿ ಹಂಪಿ, (1995)
3. ಪುಟ್ಟಯ್ಯ ಬಿ.ಎಂ. (ಸಂ), ವಡ್ಡಾರಾಧನೆ ಸಾಂಸ್ಕೃತಿಕ ಮುಖಾಮುಖಿ, ಪ್ರಸರಾಂಗ, ಕನ್ನಡ ವಿ.ವಿ.ಹಂಪಿ (2001)
4. ಮುಗಳಿ ರಂ.ಶ್ರೀ. ಕನ್ನಡ ಸಾಹಿತ್ಯ ಚರಿತ್ರೆ, ಉಷಾ ಸಾಹಿತ್ಯ ಮಾಲೆ ಮೈಸೂರು (1984)


❖❖❖

# ತುಳುನಾಡಿನ ಜನಜನಿತ ಪ್ರಸವಾದಿ ದೈವ ಮಾಯಂದಾಲ

**ರತ್ನಮಾಲಾ**
ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ
ಸ್ನಾತಕೋತ್ತರ ಅಧ್ಯಯನ ಕೇಂದ್ರ, ತೆಂಕನಿಡಿಯೂರು, ಉಡುಪಿ–576106

ಪ್ರಾಚೀನ ಕಾಲದಿಂದಲೂ ತುಳುನಾಡು ಕರ್ನಾಟಕದ ಒಂದು ಭಾಗವಾಗಿ ಗುರುತಿಸಿಕೊಂಡಿರುವುದರಿಂದ ಇದರ ಚರಿತ್ರೆಯನ್ನು ಕರ್ನಾಟಕದ ಚರಿತ್ರೆಯಿಂದ ಹೊರತುಪಡಿಸಿ ಅಧ್ಯಯನ ಮಾಡಲು ಸಾಧ್ಯವಿಲ್ಲ. ತುಳುನಾಡು ಭೌಗೋಳಿಕವಾಗಿ, ರಾಜಕೀಯವಾಗಿ, ಭಾಷಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಸಮೃದ್ಧವಾದ ಚರಿತ್ರೆಯನ್ನು ಒಳಗೊಂಡಿದೆ. ದೇಶಿ ವಿದೇಶಿ ವಿದ್ವಾಂಸರುಗಳ ಸಂಶೋಧನೆಯ ತಾಣವಾಗಿದೆ. ತುಳುವರ ತುಳುನಾಡಿನ ಚರಿತ್ರೆಯ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಿದ ವ್ಯಕ್ತಿಗಳೆಂದರೆ ಯಂ. ಗಣಪತಿರಾವ್ ಐಗಳ್, ಮಂಜೇಶ್ವರ ಗೋವಿಂದ ಪೈ, ಡಾ. ಬಿ.ಎ. ಸಾಲೆತ್ತೂರ್ ಮುಂತಾದವರು ಪ್ರಮುಖರಾಗಿದ್ದಾರೆ. ಗೋವಿಂದ ಪೈಗಳು ನಮ್ಮ ನಾಡನ್ನು ಮುಸುಕು ಹಾಕಿದ್ದ ಅಜ್ಞಾನದ ಪರದೆಯನ್ನು ಮೇಲಕ್ಕೆತ್ತಿದವರು. ಅವರ ಅನೇಕ ನಿಬಂಧಗಳಲ್ಲಿ ತುಳುನಾಡು 'ತಾಲವನ', 'ಶಾಂತಿಕ', 'ಸಾತೀಯ', 'ಆಲುಕ–ಆಲುವಖೇಡ'[1] ಎಂಬ ಹೆಸರುಗಳನ್ನು ಧರಿಸಿತ್ತು ಎಂಬುವುದು ತಿಳಿದುಬರುತ್ತದೆ. ಅಶೋಕನ ಎರಡನೆಯ ಶಿಲಾಲೇಖದಲ್ಲಿ ಕಂಡುಬರುವ 'ಸತಿಯ ಪುತ್ರೋ' ಎಂಬುವುದು ನಮ್ಮ ನಾಡಿನ ಜನರಿಗೇನೇ ಉದ್ದೇಶಿಸಿ ಬರೆದುದಾಗಿದೆ. 'ಸತಿಯ ಪುತ್ರೋ'[2] ಎಂದರೆ ಹೆಣ್ಣು ಮೂಲವೇ ಪ್ರಧಾನವಾದ ನಮ್ಮ ನಾಡಿನ ಪುತ್ರರು ಎಂಬ ಅರ್ಥಕ್ಕೆ ಹೆಚ್ಚಿನ ಆಧಾರವಿದೆ ಎನ್ನುವ ಪಿ.ಗುರುರಾಜ ಭಟ್ ಅವರ ಹೇಳಿಕೆಯು ತುಳುನಾಡಿನ ಮಾತೃಮೂಲೀಯ ವ್ಯವಸ್ಥೆಯ ಬಲವರ್ಧನೆಗೆ ಕಾರಣವಾಗಿದೆ.

ತುಳುನಾಡಿನ ಮೇರೆ ಯಾವುದೆಂಬುವುದನ್ನು ನಿರ್ದಿಷ್ಟವಾಗಿ ತಿಳಿಯುವುದು ಕಷ್ಟಸಾಧ್ಯ. ತುಳುನಾಡಿನ ಚರಿತ್ರೆಯನ್ನು ತಿಳಿಯಲು ಬಹುಮುಖ್ಯ ಮೌಖಿಕ ಆಧಾರಗಳಲ್ಲಿ ಒಂದಾದ ಪಾಡ್ದನಗಳಲ್ಲೇ ಈ ಬಗ್ಗೆ ಖಚಿತತೆಯಿಲ್ಲ. ಲೆಕ್ಕೆಸಿರಿ ಪಾಡ್ದನದ ಪ್ರಕಾರ "ಬಡಗು ಅಂಕೋಲೆಯಿಂದ ತೆಂಕು ರಾಮೇಶ್ವರ, ಮೂಡುಗಟ್ಟ ಪಡುಸಮುದ್ರ"ವೆಂತಲೂ, ಇನ್ನೂ ಕೆಲವು ದೈವಗಳು "ಉತ್ತರಕ್ಕೆ ಗಂಗೊಳ್ಳಿ ಹೊಳೆಯೂ ದಕ್ಷಿಣಕ್ಕೆ ಮಲೆಯಾಳವೂ, ಪೂರ್ವಕ್ಕೆ ಗಟ್ಟವೂ, ಪಶ್ಚಿಮಕ್ಕೆ ಸಮುದ್ರವೂ" ಇರುವುದಾಗಿ ತುಳುನಾಡಿನ ಗಡಿಗಳನ್ನು ತಿಳಿಸುತ್ತವೆ. ಯಂ.ಗಣಪತಿರಾವ್ ಐಗಳ್ ಅವರು ತಮ್ಮ 'ತುಳುದೇಶದ ವಿಸ್ತಾರ' ಎಂಬ ಲೇಖನದಲ್ಲಿ "ಕೆಳದಿಯ ನಾಯಕರು ಈ ದೇಶವನ್ನು ಸ್ವಾಧೀನಪಡಿಸಿಕೊಳ್ಳುವವರೆಗೂ ಗೋಕರ್ಣದಿಂದ ಪಯಸ್ವಿನಿ ನದಿಯವರೆಗಿನ ಪ್ರದೇಶವು ತುಳುದೇಶವೆನಿಸಿಕೊಂಡೇ ಇತ್ತು; ಅನಂತರ ಈ ಹೆಸರು ಮಾಯವಾಯ್ತು"[3] ಎಂದಿದ್ದಾರೆ. ಕೇರಳೋತ್ಪತಿಯಲ್ಲಿ "ಸೀತಾನದಿಯಿಂದ ಪಯಸ್ವಿನಿ ನದಿಯವರೆಗೆ ತುಳುರಾಜ್ಯ"ವೆಂದಿದೆ.

ನೆಲಮೂಲದ ಸಂಸ್ಕೃತಿಯನ್ನು ಕಟ್ಟಿಕೊಡುವಲ್ಲಿ, ಅದರ ಜೀವಂತಿಕೆಯನ್ನು

ಉಳಿಸಿಕೊಳ್ಳುವಲ್ಲಿ, ಅದನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸುವಲ್ಲಿ ಪಾಡ್ದನಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ತುಳುವರ ಬದುಕಿನ ಅವಿಭಾಜ್ಯ ಅಂಗದಂತಿರುವ ನಾಗಾರಾಧನೆ, ದೈವಾರಾಧನೆಗಳು ತಲೆತಲಾಂತರಗಳಿಂದ ತುಳುನಾಡಿನಲ್ಲಿ ಆಚರಣೆಯಲ್ಲಿವೆ. ನೆಲ ಮೂಲದ ಸಂಸ್ಕೃತಿಯನ್ನು ಪೋಷಿಸುತ್ತಾ ಬಂದ ಈ ಮಣ್ಣಿನ ಮೂಲನಿವಾಸಿಗರು ಅತಿಮಾನುಷ ಶಕ್ತಿಗಳಾಗಿ ದೈವತ್ವಕ್ಕೇರಿದ ಹಲವಾರು ಉದಾಹರಣೆಗಳು ತುಳುನಾಡಿನಲ್ಲಿವೆ. ದೈವಗಳಲ್ಲಿ ಒಂದಕ್ಕಿಂತ ಒಂದು ಭಿನ್ನವಾಗಿದ್ದು ಅವುಗಳು ಹುಟ್ಟಿದ ರೀತಿ, ಕಾಯಕ, ಕಾರಣಿಕತೆಯಲ್ಲಿಯೂ ಭಿನ್ನತೆಗಳಿವೆ. ದೈವಗಳು ತಾವು ನೆಲೆಸಿದ ಅಥವಾ ಆರಾಧನೆಗೊಂಡ ಸ್ಥಳ, ಪ್ರದೇಶಕ್ಕನುಗುಣವಾಗಿ ವಿವಿಧ ಹೆಸರುಗಳಿಂದ ಕರೆಯಲ್ಪಡುತ್ತದೆ. ದೈವಗಳ ಕಾರಣಿಕವೂ ಜನಪದರ ನಂಬಿಕೆಗನುಗುಣವಾಗಿ ವೈವಿಧ್ಯಮಯವಾಗಿರುತ್ತದೆ.

ಮಾತೃಮೂಲೀಯ ಕುಟುಂಬ ವ್ಯವಸ್ಥೆ ತುಳುನಾಡಿನ ವಿಶೇಷತೆಯಾಗಿದ್ದು ಬಹುಪಾಲು ತುಳುವರು ಈ ಕುಟುಂಬ ವ್ಯವಸ್ಥೆಯಡಿಯಲ್ಲಿ ಬರುತ್ತಾರೆ. ತುಳುನಾಡಿನ ಪ್ರತಿಯೊಂದು ದೈವದ ಉಗಮದ ಹಿಂದೆ ಅದರದ್ದೇ ಆದ ಚರಿತ್ರೆಗಳಿವೆ. ಇದಕ್ಕೆ ಸ್ತ್ರೀ ದೈವಗಳೂ ಹೊರತಲ್ಲ. ತುಳುನಾಡಿನ ಮೂಲ ಸಂಸ್ಕೃತಿಯನ್ನು ಪ್ರತಿಪಾದಿಸುತ್ತಾ ಪ್ರಕೃತಿ ಆರಾಧನೆ, ಶ್ರಮಭರಿತ ದುಡಿಮೆ, ಅಪ್ರತಿಮ ಶೌರ್ಯ, ಸ್ವಾಭಿಮಾನ, ಕೆಚ್ಚು, ಸುಸಂಸ್ಕೃತಿಯ ಹಿನ್ನೆಲೆಯಲ್ಲಿ ಪುರುಷ ಪ್ರಧಾನ ವ್ಯವಸ್ಥೆಗೆ ಸೆಡ್ಡು ಹೊಡೆದ ಹಲವಾರು ಮಹಿಳೆಯರ ರೂಪಕಗಳಾಗಿ ತುಳುನಾಡ ಸಿರಿ, ಬಾಲೆಮಾನಿ, ಕಚ್ಚೂರ ಮಾಲ್ದಿ, ಕಲ್ಲುರ್ಟಿ, ಪರತಿ ಮಂಗಣೆಯಂತಹ ಸ್ತ್ರೀಯರು ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ.

ವಿಶಿಷ್ಟ ಹೆಸರಿನಲ್ಲಿ ಗುರುತಿಸಲ್ಪಡುವ ಬೆರ್ಮೆರ್ ಬೈದೇರ್ ಗರೋಡಿಗಳು ತುಳುನಾಡಿನ ಅವಳಿವೀರರ ಶಕ್ತಿಕೇಂದ್ರಗಳು. ಬೈದೇರುಗಳ ಜೀವನ ಇತಿಹಾಸಕ್ಕೆ ನೇರ ಸಂಬಂಧವಿರುವ ಮೂರ್ತಿಗಳು ಬೆರ್ಮೆರ ಗುಂಡದ ಒಳಗಿದ್ದರೆ, ಇನ್ನುಳಿದಂತೆ ಮಾಯಂದಾಲ, ಜೋಗಿಪುರುಷ ಇನ್ನಿತರ ಶಕ್ತಿದೈವಗಳನ್ನು ಗುಂಡದ ಹೊರಗೆ ಆರಾಧಿಸುತ್ತಿರುವುದು ಕಂಡುಬರುತ್ತದೆ. ತುಳುನಾಡ ಮಾಯಂದಾಲವೆಂದೇ ಜನಜನಿತವಾದ ಬಾಲೆಮಾನಿ (ಮಾಯಂದಾಲ) ಗರಡಿಗಳಲ್ಲಿ, ಕೆಲವೊಂದು ಕುಟುಂಬಗಳಲ್ಲಿ ಆರಾಧನೆಗೊಳ್ಳುತ್ತಿರುವ ಕಾರಣಿಕದ ಸ್ತ್ರೀ ದೈವವಾಗಿದೆ. ಮಾತೃಪ್ರಧಾನ ಸಂಸ್ಕೃತಿ ರೂಢಿಯಲ್ಲಿರುವ ತುಳುವ ಜನಾಂಗದಲ್ಲಿ ಕುಟುಂಬದ ವಂಶ, ಆಸ್ತಿ, ಪರಂಪರೆ, ಉತ್ತರಾಧಿಕಾರಿತನ ಆನುವಂಶೀಯವಾಗಿ ತಾಯಿಯಿಂದ ಮಗಳಿಗೆ ವರ್ಗಾಯಿಸಲ್ಪಡುತ್ತದೆ.

ತುಳುವ ಬಂಧುತ್ವ ವ್ಯವಸ್ಥೆಯಲ್ಲಿ ಹೆಣ್ಣು–ಗಂಡಿನ ಸಂಬಂಧವು ರಕ್ತ ಸಂಬಂಧದ ಚೌಕಟ್ಟಿನೊಳಗೆ ಬಂಧಿಯಾಗಿದ್ದು ಅವರು ಅಣ್ಣ–ತಂಗಿ, ಸೋದರಮಾವ–ಸೋದರಸೊಸೆಯರಾಗಿರುತ್ತಾರೆ. ಕೂಡು ಕುಟುಂಬದಲ್ಲಿ ಹುಟ್ಟಿದ ಹೆಣ್ಣುಮಗಳೊಬ್ಬಳು ತಾಯಿ ಮೂಲದ ಮನೆತನಕ್ಕೆ ಸಂಪತ್ತಿದ್ದಂತೆ ಎಂಬುವುದು ತುಳುವರ ಅಚಲ ನಂಬಿಕೆ. ಹಾಗಾಗಿ ಹೆಣ್ಣುಮಕ್ಕಳ ಕೂದಲು ಕೊಂಕದ ರೀತಿಯಲ್ಲಿ ಅತ್ಯಂತ ಜತನದಿಂದ ಅವಳನ್ನು ರಕ್ಷಿಸಿಕೊಂಡು ಬರುತ್ತಿದ್ದರು. ಕುಟುಂಬದ ಗಂಡುಮಕ್ಕಳು ಅವಳ ಶೀಲರಕ್ಷಣೆ ಮಾಡಲು 'ಸರ್ಪಗಾವಲು' ಇರುತ್ತಿದ್ದರು. ಆ ಕಾರಣಕ್ಕಾಗಿ ಹೆಣ್ಣುಮಕ್ಕಳು ಋತುಮತಿಯಾದ ಬಳಿಕ ಮದುವೆಯಾಗುವವರೆಗೆ ಪಾಸಾಡಿಯು

ಅವಳ ಜೊತೆಗಾತಿಯಾಗಿರುವುದು ಕಂಡುಬರುತ್ತದೆ. ಅದೇ ರೀತಿ ಕುಟುಂಬದ ಪ್ರತಿಷ್ಠೆಗೆ ಕುಂದು ಬರುವ ಸಂದರ್ಭದಲ್ಲಾಗಲೀ, ಕುಟುಂಬ ಸದಸ್ಯರ ಪ್ರಾಣಕ್ಕೆ ಕುಂದುಂಟಾಗುವ ಸಂದರ್ಭದಲ್ಲಾಗಲೀ ರಕ್ಷಣೆಗೆ ಧಾವಿಸುವವಳು, ಬಲಿದಾನ ಮಾಡುವವಳು ಆ ಕುಟುಂಬದ ಹೆಣ್ಣುಮಗಳು ಎಂಬುವುದನ್ನು ನಮ್ಮ ಪಾಡ್ದನಗಳು ಸಾಬೀತುಪಡಿಸಿವೆ. ಅಂತಹ ಬಲಿದಾನದ ಚಿತ್ರಣವನ್ನು ಮಾಯಂದಾಲ ಪಾಡ್ದನ ನಮಗೆ ನೀಡುತ್ತದೆ.

ತುಳುವರ ಶ್ರದ್ಧಾಭಕ್ತಿಯನ್ನೇ ದಾಳವಾಗಿ ಬಳಸಿಕೊಂಡು, ದೈವ ದೇವರ ನೆಪವೊಡ್ಡಿ ಸರ್ವಾಧಿಕಾರಿ ಧೋರಣೆಯ ಮೂಲಕ ಯಾಜಮಾನ್ಯ ಪದ್ಧತಿಯನ್ನು ಹೇರಲು ಹೊರಟ ಊರಿನ ಯಜಮಾನನ ವಿರುದ್ಧ ಪ್ರತಿಕಾರದ ಪ್ರತಿರೋಧವನ್ನು ಒಡ್ಡಿದ ತುಳುನಾಡ ಮಾಯಂದಾಲ ಪಾಳೆಗಾರಿಕೆಯ ಪ್ರತಿರೋಧಕಳಾಗಿ ಕಂಡುಬರುತ್ತಾಳೆ. ದೈವಾರಾಧನೆಯ ವಿವಿಧ ಮಜಲುಗಳಲ್ಲಿ ಕೋಲ ನೇಮ ಕೊಡುವ ಪದ್ಧತಿಯೂ ಒಂದು. ಪಾಂಗುಲ್ಲ ಬನ್ನಾರನಿಗೆ ಕನಸಿನಲ್ಲಿ ಕಾಣಿಸಿಕೊಂಡ ಮಲೆಜುಮಾದಿಯು ಊರಿನಲ್ಲಿ ತನಗೆ ಸ್ಥಾನ ಕಟ್ಟಿಸಬೇಕೆಂದು ತಿಳಿಸಿದಾಗ ಬನ್ನಾರನು ಸರ್ವಸಿದ್ಧತೆಗಳನ್ನು ಮಾಡಿಕೊಂಡನು. ಊರಿನವರೆಲ್ಲ "ಮನೆಗೊಂದು ಸಿರಿ; ಒಂದು ಸೀಯಾಳ" ಕೊಡಬೇಕೆಂದು ಅಪ್ಪಣೆ ಮಾಡಿದಾಗ ಗುಡ್ಡೆಯ ಅಲಿಬಾಲಿ ನಾಯಕ ವಿರೋಧಿಸುತ್ತಾನೆ. ಕಾಡಿನಲ್ಲಿದ್ದ ಕಾಟುಭೂತಕ್ಕೆ ಸಿರಿಬೊಂಡ ಕೊಡಲು ನಿರಾಕರಿಸಿ, "ಸಿರಿ ಕಡಿಯಲು ನನ್ನದು ತಾಳೆಯ ಮರವಲ್ಲ; ಸೀಯಾಳ ಕೊಯಿಸಲು ಅದು ಕಾವೇರ (ಕಾಸರ್ಕನ) ಕಾಯಿಯಲ್ಲ" ಎನ್ನುತ್ತಾ, ಅಲಿಬಾಲಿ ನಾಯಕ ಪಾಂಗುಲ್ಲ ಬನ್ನಾರನ ಅಪ್ಪಣೆಯನ್ನು ಸಾರಾಸಗಟಾಗಿ ತಿರಸ್ಕರಿಸುತ್ತಾನೆ. ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಪಾಂಗುಲ್ಲ ಬನ್ನಾರನಷ್ಟೇ ಸದೃಢನಾಗಿದ್ದ ಅಲಿಬಾಲಿ ನಾಯಕನನ್ನು ಸಾಮಾಜಿಕವಾಗಿ ಬಹಿಷ್ಕರಿಸುವ ಅಥವಾ ಶಿಕ್ಷಿಸುವ ಧೈರ್ಯ ಪಾಂಗುಲ್ಲ ಬನ್ನಾರನಲ್ಲಿ ಇಲ್ಲವಾಗಿ ಅವನು ದೈವದ ಮೊರೆ ಹೋಗುತ್ತಾನೆ. ದೈವ ತೀರ್ಮಾನದಲ್ಲೂ ಸಹಜ ನ್ಯಾಯದ ಉಲ್ಲಂಘನೆಯಾಗಿದೆ. ಕಾಡಿನಲ್ಲಿದ್ದ ದೈವ ಊರಿನಲ್ಲಿ ನೆಲೆನಿಂತ ನಂತರ ಬನ್ನಾರನ ದೂರಿನಂತೆ ನ್ಯಾಯ ನೀತಿ ಧರ್ಮವನ್ನು ಮೀರಿ ಅಲಿಬಾಲಿ ನಾಯಕನ ಸೋದರಸೊಸೆ ಬಾಲೆಮಾನಿಯನ್ನು ಮಾಯ ಮಾಡಿರುವುದು ಖೇದಕರ. ಮಾತೃಮೂಲೀಯ ಕುಟುಂಬ ವ್ಯವಸ್ಥೆಯಿರುವ ತುಳುನಾಡಿನಲ್ಲಿ ಹೆಣ್ಣು ಅಧಿಕಾರದಿಂದ ವಂಚಿತಳಾಗಿದ್ದು, ಕುಟುಂಬದ ಘನತೆ-ಗೌರವ, ಮಾನ-ಅಭಿಮಾನದ ವಿಚಾರಗಳು ಬಂದಾಗ ಅಲ್ಲಿ ಬಲಿಯಾಗುವವಳು ಹೆಣ್ಣು. ಇಲ್ಲಿ ಯಾರೇ ತಪ್ಪು ಮಾಡಿದರೂ ಶಿಕ್ಷೆಯನ್ನು ಅನುಭವಿಸಬೇಕಾದವಳು ಹೆಣ್ಣು ಎಂಬುವುದನ್ನು ದೈವ ಚರಿತ್ರೆಯೂ ಸಾಬೀತುಪಡಿಸಿದೆ.

ತುಳುನಾಡಿನಲ್ಲಿ ಚಾಲ್ತಿಯಲ್ಲಿರುವ ಅಳಿಯಕಟ್ಟು ಪದ್ಧತಿಯಲ್ಲಿ ಸೋದರಳಿಯ, ಸೋದರಸೊಸೆಗೆ ಮಹತ್ವದ ಸ್ಥಾನವಿದೆ. "ಒಂದು ಸಿರಿ ಒಂದು ಬೊಂಡಕ್ಕಾಗಿ ಜುಮಾದಿ ನನ್ನನ್ನು ಮಾಯಮಾಡಿದ"[4] ಎಂಬ ಸೋದರಸೊಸೆಯ ನೋವಿನ ಮಾತುಗಳು ಅಲಿಬಾಲಿ ನಾಯಕನನ್ನು ಕಂಗೆಡಿಸುತ್ತದೆ. ಅಂತಸ್ತು, ಸ್ವಾಭಿಮಾನ ಮರೆತು ಸೋದರಸೊಸೆಯನ್ನು ಮತ್ತೆ ಮರುಪಡೆಯಲು ದೈವಕ್ಕೆ ಶರಣಾಗುತ್ತಾನೆ. ಇದ್ಯಾವುದೂ ಕೈಗೂಡದ ಸಂದರ್ಭದಲ್ಲಿ ಮಾನಸಿಕ ವೇದನೆಗೆ ಒಳಗಾಗುತ್ತಾನೆ. ಕಾಯ ಬಿಟ್ಟು ಮಾಯ ಸೇರಿದ ಬಾಲೆಮಾನಿಯು ಬನ್ನಾರನ ವಿರುದ್ಧ ಪ್ರತಿಕಾರದ ಪ್ರತಿಕ್ರಿಯೆಯನ್ನು ನೀಡುತ್ತಾಳೆ. ಪಾಂಗುಲ್ಲ ಬನ್ನಾರನ ಸೋದರ ಸೊಸೆ ದುಗ್ಗಮೆಯ

ಸಾವಿಗೆ ಕಾರಣವಾಗುವುದರ ಮೂಲಕ ಬಾಲೆಮಾನಿ ತನ್ನ ಸೇಡಿನ ಜ್ವಾಲೆಯನ್ನು ಶಮನಗೊಳಿಸುತ್ತಾಳೆ. ಇದು ಕೂಡ ಸಹಜ ನ್ಯಾಯಕ್ಕೆ ವಿರುದ್ಧವಾದುದು. ಬಾಲೆಮಾನಿಯ ದೃಷ್ಟಿಯಲ್ಲಿ ತಾನು ತನ್ನ ಸೋದರಮಾವನಿಗೆ ಒದಗಿಸಿದ ನ್ಯಾಯವಾದರೂ, ಇಲ್ಲೂ ಕೂಡಾ ಆಪತ್ತಿಗೊಳಗಾಗುವವಳು ಒಬ್ಬ ಅಮಾಯಕ ಹೆಣ್ಣುಮಗಳು.

ಎರಡು ಪುರುಷ ರಾಜಕಾರಣದ ಒಣಪ್ರತಿಷ್ಠೆಗೆ ಮೂರು ಮುಗ್ಧ ಜೀವಗಳ ಬಲಿಯಾಗಬೇಕಾಯಿತು. ಮಲೆಯಲ್ಲಿದ್ದ ಜುಮಾದಿ ಬನ್ನಾರರ ಬೀಡಿನಲ್ಲಿ ನೆಲೆನಿಂತ ನಂತರ ತನ್ನನ್ನು ನಂಬಿದವನ ರಕ್ಷಕನಾಗಿ ಕೆಲಸ ಮಾಡುತ್ತದೆ. ಅಲಿಬಾಲಿ ನಾಯಕನ ಸಾಂಸ್ಕೃತಿಕ ನಿಯಾಮಕತೆಯ ಮೀರುವಿಕೆ ಬನ್ನಾರರ ಪ್ರತಿಷ್ಠೆಗೆ ಧಕ್ಕೆಯುಂಟುಮಾಡಿ ಆತನನ್ನು ತಾನು ಶಿಕ್ಷಿಸಲಾರದೆ ದೈವದ ಮೊರೆ ಹೊಕ್ಕಬೇಕಾಯಿತು. ಜೋಗದಿಂದ ಮಾಯಕ್ಕೆ ಸಂದ ಬಾಲೆಮಾನಿ ಶಕ್ತಿಶಾಲಿ ದೈವವಾಗಿ ಸೋದರಮಾವನ ಸಂರಕ್ಷಣೆಗೆ ನಿಂತು ಬನ್ನಾರನನ್ನು ಶಿಕ್ಷಿಸುವ ಪರಿ ತುಳುವ ಬಂಧುತ್ವ ವ್ಯವಸ್ಥೆಯೊಳಗಣ ಸಂರಕ್ಷಣಾ ನೆಲೆಯನ್ನು ತೋರಿಸುತ್ತದೆ. ವಂಶದ ಏಕಮಾತ್ರ ಕುಡಿಯ ಅಗಲುವಿಕೆಗೆ ಕಾರಣ ತಿಳಿದ ಅಲಿಬಾಲಿ ನಾಯಕನಲ್ಲಿ ಅಪರಾಧ ಪ್ರಜ್ಞೆ ಜಾಗೃತವಾಗಿ ರಾಶಿ ರಾಶಿ ಸಿರಿ ಬೊಂಡಗಳನ್ನು ತಂದು ಬನ್ನಾರರ ಮುಂದಿಟ್ಟು ಪರಿಪರಿಯಾಗಿ ಬೇಡಿದಾಗ ಬನ್ನಾರನು ತೋರಿದ ಉದ್ಧಟತನ ಬಾಲೆಮಾನಿಯಲ್ಲಿ ಪ್ರತೀಕಾರದ ಜ್ವಾಲೆಯನ್ನು ಎಬ್ಬಿಸಿ ಅವನ ಸೋದರ ಸೊಸೆ ದುಗ್ಗಮೆಯ ಮೇಲೆ ಸೇಡು ತೀರಿಸಿಕೊಳ್ಳಲು ಕಾರಣವಾಯಿತು. ಒಂದು ಸಿರಿ ಒಂದು ಬೊಂಡಕ್ಕೆ ಬಲಿಯಾದ ಬಾಲೆಮಾನಿ ಸಾಮಾಜಿಕ ರಾಜಕೀಯ ಪ್ರಭುತ್ವವನ್ನು ಹೊಂದಿದ ಬನ್ನಾರರ ದರ್ಪವನ್ನು ಸದೆ ಬಡಿಯುವ ಶಕ್ತಿಯಾಗಿ ಅವನಿಂದಲೇ ಪೂಜಿಸಲ್ಪಡುತ್ತಾಳೆ.

ಇಂದು ಮಾಯಂದಾಲ ತುಳುನಾಡಿನೆಲ್ಲೆಡೆ ಪ್ರಸವಾದಿ ದೈವವೆಂದೇ ಜನಜನಿತಳಾಗಿದ್ದಾಳೆ. ಹೆಣ್ಣುಮಕ್ಕಳ ಅದರಲ್ಲೂ ಗರ್ಭಿಣಿಯರ ಆರಾಧ್ಯ ದೈವವಾಗಿ ಆರಾಧನೆಗೊಳ್ಳುತ್ತಿದ್ದಾಳೆ. ಕುಟುಂಬದ ಯಜಮಾನ ಇಲ್ಲವೇ ಹಿರಿಯ ಸದಸ್ಯರು ಮನೆಯಲ್ಲಿರುವ ಗರ್ಭಿಣಿ ಹೆಣ್ಣುಮಕ್ಕಳ ಸುಖಪ್ರಸವಕ್ಕಾಗಿ ಇಲ್ಲವೆ ಮಕ್ಕಳ ಆರೋಗ್ಯಕ್ಕಾಗಿ ಈ ದೈವಕ್ಕೆ ಹರಕೆಕಟ್ಟಿಕೊಳ್ಳುವುದು ಸರ್ವೇಸಾಮಾನ್ಯ. ಗರೋಡಿಗಳಲ್ಲಿ ಬೈದೇರುಗಳ ಜೊತೆ ಸಹೋದರಿ ಸಮಭಾವದಲ್ಲಿ ನೆಲೆನಿಂತ ಮಾಯಂದಾಲ ಹೆಣ್ಣುಮಕ್ಕಳ ಆರಾಧ್ಯ ಶಕ್ತಿಯಾಗಿದ್ದಾಳೆ. ಕೆಲವೊಂದು ಕಡೆ ಈ ದೈವ ಇನ್ನಿತರ ಪುರುಷ ದೈವಗಳಾದ ಜಾರಂದಾಯ, ಒಡಿಲ್ದಾಯ, ಗಂಗನಾಡಿ ಕುಮಾರನ ಜೊತೆ ಸಹೋದರಿ ಸಮಭಾವದಲ್ಲಿ ನೆಲೆನಿಂತಿರುವುದು ಕಂಡುಬರುತ್ತದೆ.

ಬೈದೇರುಗಳ ನೇಮದ ತರುವಾಯ ಮಾಯಂದಾಲ್ ದೈವಕ್ಕೆ ಕೋಲಗಳು ನಡೆಯತ್ತದೆ. ಕೆಲವು ಗರೋಡಿಗಳಲ್ಲಿ ಬೈದೇರುಗಳ ನೇಮದೊಂದಿಗೆ ಬಾಲೆಮಾನಿಗೆ ನೇಮ ನಡೆಯುವ ರೂಢಿಯಿದೆ. ಆಯಪ್ರಮಾಣದ ಗರೋಡಿಯ ಚಾವಡಿಯಲ್ಲಿ (ಬೈದೇರುಗಳ ಗರ್ಭಗುಡಿಯನ್ನು ಹೊರತುಪಡಿಸಿ) ಸಹೋದರಿ ಸಮಭಾವದಲ್ಲಿ ಸ್ಥಾನ ಪಡೆದ ಮಾಯಂದಾಲ್ ಶಕ್ತಿಗೆ ಇತ್ತೀಚಿನ ದಿನಗಳಲ್ಲಿ ಪ್ರತ್ಯೇಕವಾದ ಗುಡಿಯನ್ನು ನಿರ್ಮಿಸುತ್ತಿದ್ದಾರೆ. ಕೆಲವು ಗರೋಡಿಗಳಲ್ಲಿ ಕೊಡಿ ತಿಂಗಳಲ್ಲಿ ನೇಮ ಹಾಗೂ ವಾರ್ಷಿಕ ನೇಮಗಳು ನಡೆಯುವ ಕ್ರಮ ಇದ್ದು, ಈ ಸಂದರ್ಭದಲ್ಲಿ ಕೊಡಿ ತಿಂಗಳ ನೇಮದಲ್ಲಿ ಮಾಯಂದಾಲ್ ದೈವಕ್ಕೆ ಕೋಲ ನಡೆಯುತ್ತದೆ. ವಾರ್ಷಿಕ ನೇಮೋತ್ಸವ ಸಂದರ್ಭದಲ್ಲಿ

ಮತ್ತೆ ಮಾಯಂದಾಲ್‌ಗೆ ಕೋಲಗಳು ನಡೆಯುವುದಿಲ್ಲ. ಈ ದೈವದ ವಿಸ್ತರಣೆ ಹೆಚ್ಚಾಗಿ ಗರೋಡಿಗಳಲ್ಲಿ ಇದ್ದು, ಕೆಲವು ರಾಜನ್ ದೈವದ ದೈವಸ್ಥಾನದಲ್ಲಿಯೂ ಕಂಡುಬರುತ್ತದೆ. ಕೋಟಿ ಚೆನ್ನಯರು ಈ ದೈವಕ್ಕೆ ಸಹೋದರಿ ಸ್ಥಾನಕೊಟ್ಟು ತಮ್ಮ ಜೊತೆ ನೆಲೆನಿಲ್ಲಲು ಅವಕಾಶಮಾಡಿಕೊಟ್ಟ ಕಾರಣದಿಂದ ಗರೋಡಿಗಳಲ್ಲಿ ಈ ದೈವದ ಆರಾಧನೆ ಹೆಚ್ಚಾಗಿ ಕಂಡುಬರುವುದಲ್ಲದೆ, ಇನ್ನುಳಿದಂತೆ ಗರೋಡಿಗೆ ಸಂಬಂಧಪಟ್ಟ ಮನೆಗಳಲ್ಲಿ ಕಾಣಬಹುದು.

ಆರಾಧನಾ ವಲಯದಲ್ಲಿ ಸ್ತ್ರೀ ಸಮುದಾಯದ ಪಾಲುದಾರಿಕೆ ತೀರಾ ವಿರಳವಾಗಿದ್ದು, ಸ್ತ್ರೀ ದೈವಗಳ ಆರಾಧನೆಯೂ ಪುರುಷ ಕೇಂದ್ರಿತ ನೆಲೆಯಲ್ಲಿ ನಡೆಯುತ್ತಿದೆ. ತುಳುನಾಡಿನ ಆಡಳಿತ ಪರಂಪರೆಯಲ್ಲಿ ಶಕ್ತಿ ದೈವಗಳ ಪ್ರಭಾವವಿದೆ. ದೈವಗಳ ಉತ್ಸವದಲ್ಲಿ ಮಹಿಳೆಯರು ನೇರವಾಗಿ ಭಾಗವಹಿಸುವುದಿಲ್ಲ. ಶಕ್ತಿ ದೈವಗಳು ಸ್ತ್ರೀಶಕ್ತಿಯೇ ಆಗಿದ್ದರೂ, ಅವರು ದೈವದ ಬಳಿಗೆ ಹೋಗುವಂತಿಲ್ಲ. ಮಹಿಳೆಯರಿಗೆ ನಿಷೇಧವಿದೆ. ಅಮೆ-ಸೂತಕದಂತೆ ಮುಟ್ಟಿನ ಮೈಲಿಗೆಯ ನೆಪವೊಡ್ಡಿ ಹೆಣ್ಣನ್ನು ಗೌರವಯುತವಾದ ಸ್ಥಾನದಿಂದ ವಂಚಿಸಲಾಗಿದೆ. ಜೋಗದಿಂದ ಮಾಯಕ್ಕೆ ಸಂದು ದೈವತ್ವಕ್ಕೇರಿದ ಸಂದರ್ಭದಲ್ಲಿ ಶ್ರದ್ಧಾಭಕ್ತಿಗಳಿಂದ ಆರಾಧನೆಗೊಳಪಟ್ಟರೂ, ಆರಾಧನಾ ರಂಗದಲ್ಲಿ ಸ್ತ್ರೀ ಸಮುದಾಯದ ನೇರ ಪಾಲುದಾರಿಕೆಗೆ ಅವಕಾಶವಿಲ್ಲದಿರುವುದು ಮಾತ್ರ ಸೋಜಿಗದ ಸಂಗತಿಯಾಗಿದೆ.

ಇಂದು ಆರಾಧನಾರಂಗದಲ್ಲಿ ಬಹಳಷ್ಟು ಬದಲಾವಣೆಗಳು ನಡೆಯುತ್ತಿವೆ. ದೈವಾರಾಧನೆಯು ತನ್ನ ಮೂಲಸ್ವರೂಪವನ್ನು ಕಳೆದುಕೊಳ್ಳುತ್ತಿರುವುದು ಖೇದದ ವಿಚಾರವಾಗಿದೆ. ಇತ್ತೀಚಿನ ದಿನಗಳಲ್ಲಿ ಈ ದೈವವನ್ನು 'ದೇವಿ' ಎಂದು ಸಂಬೋಧಿಸುತ್ತಿರುವುದನ್ನು ಮಾಧ್ಯಮಗಳಲ್ಲಿ ಕಾಣುತ್ತೇವೆ. ತುಳುವರ ಮಾಯಂದಾಲ 'ಅಪ್ಪೆ ಮಾಯಂದಾಲ'ವೇ ಹೊರತು 'ಮಾಯಂದಾಲ ದೇವಿ'ಯಲ್ಲ ಎಂಬ ವಾಸ್ತವ ಪ್ರಜ್ಞೆ ತುಳುವರಲ್ಲಿ ಜಾಗೃತಗೊಂಡಾಗ ಮಾತ್ರ ನಮ್ಮ ಮೂಲ ಆಚರಣೆಗೆ ಧಕ್ಕೆಯಾಗುವುದಿಲ್ಲ. ನೆಲಮೂಲದ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕಾದದ್ದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ಒಟ್ಟಿನಲ್ಲಿ ಮಾತೃಮೂಲೀಯ ಕುಟುಂಬದ ಪ್ರೇರಕ ಶಕ್ತಿಯಾಗಿ, ಹೆಣ್ಣು ಮಕ್ಕಳ ಪಾಲಿನ ಮಾತೃಸ್ವರೂಪಿಯಾಗಿ, ಬಹುಸಂಖ್ಯೆಯಲ್ಲಿ ಹೆಣ್ಣುಮಕ್ಕಳಿಂದ ಆರಾಧನೆಗೊಳ್ಳುತ್ತಿರುವ ಮಾಯಂದಾಲ ತುಳುನಾಡಿನ ಜನಮಾನಸದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡ ಒಂದು ಸ್ತ್ರೀ ಶಕ್ತಿಯಾಗಿದೆ.

**ಕೊನೆ ಟಿಪ್ಪಣಿ**

1. ಡಾ. ಪಾದೂರು ಗುರುರಾಜ ಭಟ್, ತುಳುನಾಡು, 2009, ಪು. 7
2. ಪೂರ್ವೋಕ್ತ, ಅದೇ ಪುಟ
3. ಪೂರ್ವೋಕ್ತ, ಪುಟ 4

**ಪರಾಮರ್ಶನಗ್ರಂಥಗಳು**

1. ತುಳುನಾಡು, ಡಾ. ಪಿ. ಗುರುರಾಜ ಭಟ್, ಡಾ. ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್ (ರಿ) 2009
2. ತುಳುನಾಡು ಕನ್ನಡ ನುಡಿ, ಡಾ. ಕೆ. ಮೋಹನಕೃಷ್ಣ ರೈ, ಡಾ. ಎ. ಸುಬ್ಬಣ್ಣ ರೈ, ನಿರ್ದೇಶಕರು,

ಪ್ರಸಾರಾಂಗ, ಹಂಪಿ, 2012.
3. ತುಳು ಪೊಲಿ, ಪ್ರೊ. ಎ. ವಿ. ನಾವಡ, ಶೋಧನ ಪ್ರಕಾಶನ, ಮಂಗಳೂರು, 2013
4. ತುಳು ಪಾಡ್ದನ ಸಂಪುಟ, ಸಂ: ಅಮೃತ ಸೋಮೇಶ್ವರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997
5. ತುಳುವರ ಮೂಲತಾನ ಆದಿ ಆಲಡೆ ಪರಂಪರೆ ಮತ್ತು ಪರಿವರ್ತನೆ, ಡಾ. ಇಂದಿರಾ ಹೆಗ್ಗಡೆ, ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈ.ಲಿ., 2012
6. ಪುಟ್ಟುಬಳಕೆಯ ಪಾಡ್ದನಗಳು, ಸಂ: ಡಾ. ಬಿ.ಎ. ವಿವೇಕ ರೈ, ಯದುಪತಿ ಗೌಡ, ರಾಜಶ್ರೀ, ಕೋ ಆರ್ಡಿನೇಟರ್ ಎಸ್.ಡಿ.ಎಂ ತುಳು ಚೇರ್, ಮಂಗಳೂರು ವಿಶ್ವವಿದ್ಯಾಲಯ, 2004
7. ಒಕ್ಕಲಕುಲು/ಬಂಟರು ಸಾಂಸ್ಕೃತಿಕ ಅಧ್ಯಯನ – ಡಾ. ಇಂದಿರಾ ಹೆಗ್ಗಡೆ
8. ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು, ಡಾ. ಗಾಯತ್ರೀ ನಾವಡ, ಅಸ್ಮಿತೆ ಪ್ರಕಾಶನ, ಮಂಗಳೂರು, 1999
9. ತುಳುನಾಡ ಗರೊಡಿಗಳ ಸಾಂಸ್ಕೃತಿಕ ಅಧ್ಯಯನ, ಬನ್ನಂಜೆ ಬಾಬು ಅಮೀನ್, ಮೋಹನ್ ಕೋಟ್ಯಾನ್, ಶ್ರೀ ಬ್ರಹ್ಮ ಬೈದರ್ಕಳ ಸಾಂಸ್ಕೃತಿಕ ಅಧ್ಯಯನ ಪ್ರತಿಷ್ಠಾನ (ರಿ), ಉಡುಪಿ, 1990

❖❖❖

ದೈವವಿತ್ತಿಹ
ಕೊರಳ ದನಿಯಲಿ
ಗಾಳಿ ಗಾನವು ಮೂಡಿದೇ।
ರಾಗ ನುಡಿಸಲು
ಶ್ರುತಿಯ ಮಾಡಿದ
ತಂತಿ ಗಾಳಿಗೆ ಮಿಡಿದಿದೇ॥

# ಹಂಪೆಯ ಶಾಸನೋಕ್ತ ಬಾವಿಗಳು

**ಡಾ. ಸರಸ್ವತಿದೇವಿ ಎಸ್. ಭಗವತಿ**
ಸಹ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯ, ಧಾರವಾಡ

ವಿಜಯನಗರ ಸಾಮ್ರಾಜ್ಯದ ಬಹುಪಾಲು ಭೂ ಪ್ರದೇಶವು ಅಲ್ಪಾವಧಿಯ ಮುಂಗಾರು ಮಳೆಯ ಮೇಲೆ ಅವಲಂಬಿಸಿದುದಾಗಿತ್ತು. ತುಂಗಭದ್ರೆ ಹಾಗೂ ಕಾವೇರಿ ಎರಡೇ ಸರ್ವಋತುನದಿಗಳಾಗಿದ್ದು, ಮಿಕ್ಕ ನದಿಗಳು, ಹಳ್ಳಗಳು ಕೇವಲ ಮಳೆಗಾಲದಲ್ಲಿ ಹರಿಯುತ್ತಿದ್ದವು. ಈ ಕಾರಣದಿಂದಾಗಿ ನೀರಾವರಿ ಕಾರ್ಯಗಳಿಗಾಗಿ ಅಂದಿನವರು ಅಂತರ್ಜಲ ಮೂಲಗಳನ್ನು ಅವಲಂಬಿಸಬೇಕಾಯಿತು. ಪ್ರಾದೇಶಿಕ ವೈಶಿಷ್ಟ್ಯಗಳಿಗೆ ಅನುಗುಣವಾಗಿ ಬಾವಿಗಳನ್ನು ಅಗೆದು ಬೇಸಾಯಕ್ಕೆ ಬಳಸಿಕೊಂಡರು. ಈ ವಿಧವಾದ ಬಾವಿ ನೀರಾವರಿಯಿಂದ ಒಂದರಿಂದ ಇಪ್ಪತ್ತು ಎಕರೆ ಭೂಮಿಗೆ ನೀರುಣಿಸಬಹುದಾಗಿತ್ತು. ಹೀಗಾಗಿ ನದಿ ಮತ್ತು ಕಾಲುವೆಗಳಿಂದ ದೂರದಲ್ಲಿರುವ ಪ್ರದೇಶಗಳಲ್ಲಿ ನೂರಾರು ಬಾವಿಗಳು ತಲೆ ಎತ್ತಿದವು.

ಬಾವಿ ಕಟ್ಟಿಸುವುದು ಪುಣ್ಯದ ಕೆಲಸವೆಂಬ ಭಾವನೆ ಅಂದಿನ ಜನರಲ್ಲಿತ್ತು. ಅದಕ್ಕಾಗಿ ಲಕ್ಷ್ಮೀಧರಾಮಾತ್ಯನ ಶಾಸನದಲ್ಲಿ "ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿ ಸಜ್ಜೆರೆಯೊಳ್ ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗಿಂಬು ಕೆಯ್ ನಂಬಿದ..."ಎಂಬ ಮಾತಿದೆ.1 ಈ ಮಾತಿಗೆ ಅನುಗುಣವಾಗಿ ಜನರ ಉಪಯೋಗಕ್ಕಾಗಿ ಇಲ್ಲಿ ಹಲವಾರು ಬಾವಿಗಳು ನಿರ್ಮಾಣವಾಗಿವೆ. ಬಾವಿಗಳ ರಚನೆಯ ಉದ್ದೇಶ: (1) ನೀರಾವರಿಗೆ (2) ಜನರಿಗೆ ಕುಡಿಯಲು (3) ದೇವರ ಪೂಜೆಗೆ.

(1) ನೀರಾವರಿ: ವ್ಯವಸಾಯಕ್ಕಾಗಿ ಹಂಪೆ ಪ್ರದೇಶದಲ್ಲಿ ಬಾವಿಗಳು ನಿರ್ಮಾಣಗೊಂಡಿರುವುದನ್ನು ಅಲ್ಲಿನ ಶಾಸನಗಳು ಹೀಗೆ ಉಕ್ತ ಮಾಡಿವೆ :

ಏತದ ಬಾವಿ/ ಹೊಲ ಸೀಮೆಬಾವಿ : ಕಪಿಲೆಯ ಇನ್ನೊಂದು ರೂಪ ಏತ. ಇವು ಹಲವಾರು ರೂಪದಲ್ಲಿ ವ್ಯವಸಾಯಕ್ಕೆ ನೀರುಣಿಸುವ ಕಾರ್ಯ ಮಾಡುತ್ತಿದ್ದವು. ಹೀಗಾಗಿ ಬಾವಿ ನೀರಾವರಿಯ ವ್ಯವಸ್ಥೆಯಲ್ಲಿ ಏತಗಳು ಅನಿವಾರ್ಯವಾಗಿದ್ದವು.[2] ವಿಜಯನಗರ ಕಾಲದಲ್ಲಿಯೂ ಏತಗಳ ಮೂಲಕ ನೀರಾವರಿ ಚಟುವಟಿಕೆಗಳು ನಡೆಯುತ್ತಿದ್ದವೆಂಬುದನ್ನು ಕಪಿಲಾಶ್ರಮದ ಬಳಿಯ ಒಂದು ಶಾಸನ ತಿಳಿಸುತ್ತದೆ. ಈ ತ್ರುಟಿತ ಶಾಸನದಲ್ಲಿ '...ದೆಸೆಯಲು ಮಲ್ಲನ ಮೆದೆ ಯೇತದ ಭಾವಿ...'[3] ಎಂಬುದು ಮೇಲಿನ ಮಾತಿಗೆ ಪುಷ್ಟಿಯನ್ನೀಯುತ್ತದೆ. ಈ ಶಾಸನದಲ್ಲಿ ಏತದ ಬಾವಿಯಲ್ಲದೆ ಹೊಲ ಸೀಮೆಯ ಬಾವಿ, ಕಪಿಲೆಯ ಬಾವಿ ಮತ್ತು ಇನ್ನೂ ಕೆಲವು ಹೆಸರಿಲ್ಲದ ಬಾವಿಗಳ ಉಲ್ಲೇಖ ಕಂಡುಬರುತ್ತವೆ; ಈ ಬಾವಿಗಳಿಂದ ನೀರನ್ನು ವ್ಯವಸಾಯಕ್ಕೆ ಬಳಸುತ್ತಿದ್ದರೆಂದು ತಿಳಿಯುತ್ತದೆ. ಆದರೆ ಈ ಬಾವಿಗಳು ಈಗ ಅಸ್ತಿತ್ವದಲ್ಲಿಲ್ಲ.

(2) ಕುಡಿಯುವ ನೀರಿಗಾಗಿ: ಸಾರ್ವಜನಿಕರ ಉಪಯೋಗಕ್ಕಾಗಿ ಹಂಪೆ ಪ್ರದೇಶದಲ್ಲಿ ಕೆಲವು ಬಾವಿಗಳು ನಿರ್ಮಾಣಗೊಂಡಿದ್ದವು. ಅಲ್ಲಿಯ ಶಾಸನಗಳು ಅವುಗಳನ್ನು ಪ್ರಸ್ತಾಪಿಸಿವೆ. ಅವು :

ಮಹಾದೇವಿಯಕ್ಕ ಬಾವಿ: ವಿರೂಪಾಕ್ಷ ಪೇಟೆಯ ಕೊನೆ; ನಂದಿಮಂಟಪದ ದಕ್ಷಿಣಕ್ಕೆ ಬಂಡೆಯ ಮೇಲಿನ ಒಂದು ಶಾಸನ[4] "ಮಹಾದೇವಿಯಕ್ಕ ಬಾವಿ" ಮತ್ತು "ಕೆಳಬಾವಿಯನ್ನು ಉಲ್ಲೇಖಿಸಿದೆ. "ದೊಡ್ಡ ಗುಂಡೊಂದು ಈ ಬಾವಿಯನ್ನು ಭಾಗಶಃ ಮುಚ್ಚಿದೆ"[5] ಎಂದು ಹೇಳಲಾಗಿದೆಯಾದರೂ ಈಗ ಈ ಬಾವಿ ಪೂರ್ತಿ ಮುಚ್ಚಿಹೋಗಿದೆ. ಮೊದಲ ಬಾವಿಯನ್ನು ಮಹಾದೇವಿಯಕ್ಕ ಎಂಬವಳು ಕಟ್ಟಿಸಿರಬೇಕು. ಆದ್ದರಿಂದ ಅದಕ್ಕೆ ಆ ಹೆಸರು ಬಂದಿರಬಹುದು. ಇದರ ಕೆಳಗೆ ಇದ್ದಿರಬಹುದಾದ ಬಾವಿಯನ್ನು 'ಕೆಳಬಾವಿ' ಎಂದು ಶಾಸನದಲ್ಲಿ ಕರೆಯಲಾಗಿದೆ. ಇದು ಇಂದು ಕಾಣಸಿಗುವುದಿಲ್ಲ.

ಬಿಳಿಯ ಬಾವಿ: ವಿಠಲಸ್ವಾಮಿದೇವಾಲಯದ ಮುಂದಿರುವ ಮಂಟಪದ ದಕ್ಷಿಣ ಗೋಡೆಯಲ್ಲಿ ಕ್ರಿ.ಶ.1513ರ ಒಂದು ಶಾಸನ[6] '....ಕಂಪಿಲೆಯ ಮಾಗಣೆಯಲೂ ಸಾಯಣಾಪುರದ ಗ್ರಾಮ 1 ಗುಡದ ಸೀಮೇಲೂ ಬಿಳಿಯ ಬಾ[ವಿ]ಯ....' ಎಂದು ಉಲ್ಲೇಖಿಸುತ್ತದೆ ಈ ಬಾವಿ ಇಂದು ಕಾಣಸಿಗುವುದಿಲ್ಲ.

ನಾಡದ ಬಾವಿ/ಕಪಿಲೆಯ ಬಾವಿ: ಕಮಲಾಪುರದಲ್ಲಿರುವ ಕೇಂದ್ರ ಪ್ರಾಚ್ಯವಸ್ತು ಸಂಗ್ರಹಾಲಯದ ಬಳಿ ರಸ್ತೆ ಬದಿಯಲ್ಲಿರುವ ಗುಂಡಿನಲ್ಲಿರುವ ಕ್ರಿಶ. 1531ರ ಒಂದು ಶಾಸನ[7] "......ಕುಂತೂರ ಎತಿರಾಯ ದೇವಗಳ ಮಕ್ಕಳು ವಲ್ಲಭಯಗಳೂ ಅಗಸಿದ ನಾಡದ ಬಾವಿ ಕೊಂಡ[ಮರ] ಸಯನವರು ಅಗಸಿದ ಕಪಿಲೆಯ ಭಾವಿ....." ಎಂದಿದೆ. ಇದರಿಂದ 'ನಾಡದ ಬಾವಿ ಯನ್ನು ಕುಂತೂರ ಯತಿರಾಜ ದೇವನ ಮಗ ವಲ್ಲಭಯ ಕಟ್ಟಿಸಿದರೆ; 'ಕಪಿಲೆಯ ಬಾವಿ'ಯನ್ನು ಕೊಂಡಮರಸಯ್ಯ ಕಟ್ಟಿಸಿದನೆಂದು ತಿಳಿಯುತ್ತದೆ. ಕಪಿಲಾಶ್ರಮ ಬಳಿಯ ಶಾಸನ[8]ವು ಕೂಡಾ 'ಕಪಿಲೆಯ ಬಾವಿ'ಯನ್ನು ಉಲ್ಲೇಖಿಸುತ್ತದೆ. ಬಹುಶಃ ಈ ಬಾವಿ ಕಪಿಲಾಶ್ರಮದ ಪಕ್ಕದಲ್ಲೇ ಇದ್ದಿರಬೇಕು. ಹೀಗಾಗಿ ಆಶ್ರಮದ ಹೆಸರೇ ಈ ಬಾವಿಗೆ ಬಂದಿರಬಹುದು. ಈ ಬಾವಿಯೂ ಈಗ ಕಾಣಸಿಗುವುದಿಲ್ಲ.

**ಅಗಸರ ಬಾವಿ:** ಕ್ರಿ.ಶ.1559ರ ಒಂದು ಶಾಸನ (ಹಂಪಿ 191) "...ವಿಠಲಕ್ಕೆ ಬಹದಾರಿ ಮೇರೆ ಪಡವಲೂ ತೇರಬೀದಿ ಮೇರೆ ಬಡಗಲೂ ಅಗಸರ ಬಾವಿ ಬಳಿಯ......" ಎಂದು ಉಲ್ಲೇಖಿಸಿದೆ. ವಿಠಲ ದೇವಾಲಯದ ತೇರು ಬೀದಿಯ(ಬಡಗಲೂ) ಉತ್ತರಕ್ಕೆ ಈ ಬಾವಿ ಇತ್ತೆಂದು ಶಾಸನದಿಂದ ತಿಳಿದುಬರುತ್ತದೆ. ಬಹುಶಃ ಅಗಸರು ಬಟ್ಟೆಯನ್ನು ತೊಳೆಯಲು ಈ ಬಾವಿ ನೀರನ್ನು ಬಳಸುತ್ತಿದ್ದರೆಂದು ತೋರುತ್ತದೆ. ಹೀಗಾಗಿ ಈ ಬಾವಿಗೆ ಅಗಸರ ಬಾವಿ ಎಂಬ ಹೆಸರು ಬಂದಿರಬಹುದು. ಆದರೆ ಈ ಬಾವಿ ಈಗ ಕಾಣ ಸಿಗುವುದಿಲ್ಲ.

(3) ದೇವರಪೂಜೆಗೆ ಬೇಕಾಗುವ ನೀರಿಗಾಗಿ ಹಲವು ಬಾವಿಗಳು ಹಂಪೆ ಪ್ರದೇಶದಲ್ಲಿ ನಿರ್ಮಾಣಗೊಂಡಂತೆ ತೋರುತ್ತವೆ. ಅವುಗಳಲ್ಲಿ ಕೆಲವನ್ನು ಇಲ್ಲಿಯ ಶಾಸನಗಳು ಪ್ರಸ್ತಾಪಿಸುತ್ತವೆ.

ಅಶ್ವತ್ಥ ಬಾವಿ: ಈಗಿನ ಗಾಯತ್ರಿಪೀಠದ ದಕ್ಷಿಣಕ್ಕಿರುವ ದಾರಿಯ ಪಕ್ಕದಲ್ಲಿರುವ ಗುಂಡಿನ ಮೇಲಿನ ಕ್ರಿ.ಶ.1390ರ ಒಂದು ಶಾಸನ[9] '...ಕ್ರಿಯಾಶಕ್ತಿವೊಡೆಯರ ಸಿಷ್ಯ ಭಕ್ತರ ನಾಗಪ್ಪಗಳು ಮಾಡಿಸಿದಂಥಾ ವಿನಾಯಕ ಅಶ್ವತ್ಥ ಬಾವಿಯನೂ..." ಎಂದಿದೆ. ಈ ಬಾವಿಯನ್ನು ಕ್ರಿಯಾಶಕ್ತಿವೊಡೆಯರ ಶಿಷ್ಯ ಭಕ್ತರ ನಾಗಪ್ಪ ಎಂಬುವವನು ಕಟ್ಟಿಸಿದನೆಂದು ಶಾಸನ ಹೇಳುತ್ತದೆ. ಈ ಬಾವಿಯಲ್ಲದೆ ಇವನು ವಿನಾಯಕನ ಮೂರ್ತಿಯನ್ನು ಮಾಡಿಸಿದನೆಂದು ತಿಳಿಸುತ್ತದೆ. ಈ ಬಾವಿ ವಿನಾಯಕನ ಪೂಜೆಗಾಗಿ ಭಕ್ತರ ನಾಗಪ್ಪ ಮಾಡಿಸಿರಬಹುದು ಆದರೆ ಈ ಬಾವಿ ಈಗ ಕಾಣಸಿಗುವುದಿಲ್ಲ.

ಅರೆ ಶಂಕರ ಬಾವಿ: ಈತ ತಳವಾರ ಘಟ್ಟ ಬಾಗಿಲೆಂದು ಕರೆಯುವ ಬಾಗಿಲಿನ ಮೂಲ ಹೆಸರು 'ಅರೆಶಂಕರ ಬಾಗಿಲು', ವಿಠಲದೇವಾಲಯದ ಗರ್ಭಗೃಹದ ಪಶ್ಚಿಮ ಅಧಿಷ್ಠಾನದಲ್ಲಿರುವ ಕ್ರಿಶ. 1559ರ ಒಂದು ಶಾಸನ10 '...ವಿಜಯ ನಾಗರಕ್ಕೆ ಬಹ ದಾರಿ ಮೇರೆ ತೆಂಕಲೂ' ಅರೆ ಶಂಖರನ ಬಾವಿ ಬಾಗಿಲಿಂದ...' ಎಂದಿದೆ. ಮೇರೆಯನ್ನು ಹೇಳುವ ಸಂದರ್ಭದಲ್ಲಿ ಈ ಬಾವಿಗಳ ಪ್ರಸ್ತಾಪ ಬಂದಿದೆ. ಅರೆಶಂಕರನ ಪೂಜೆಗಾಗಿ ಈ ಬಾವಿ ನಿರ್ಮಿತವಾಗಿರಬೇಕು. ಈ ಬಾವಿಗೆ ಬಾಗಿಲಿತ್ತೆಂದು ಶಾಸನ ಹೇಳುತ್ತದೆ. ಆದರೆ ಇಂದು ಈ ಬಾವಿ ಕಂಡುಬರುವುದಿಲ್ಲ.

ಬೆನಕನ ಬಾವಿ: ಅರಮನೆಯ ಪ್ರದೇಶದಿಂದ ಮಾತಂಗ ಪರ್ವತಕ್ಕೆ ಹೋಗುವ ಕಾಲುದಾರಿಯ ಕಣಿವೆಯಲ್ಲಿ ದೇವಾಲಯದ ಹಿಂಬದಿಗೆ ದೊಡ್ಡ ಗುಂಡಿನಲ್ಲಿರುವ ಕ್ರಿ.ಶ. 1411ರ ಒಂದು ಶಾಸನ[11] '...ರುಕು ಶಾಖೆಯ ಭಾರದ್ವಾಜ ಗೋತ್ರದ ನಿರಾಕಾರದ ನರಹರಿದೇವಗಳ ಮಕ[ಳು] ದೇವರಾಯರು ಕಟಿಸಿದ ಬ್ಯನಕನ ಬಾವಿ ಧರ್ಮಾ..." ಎಂದು ಉಲ್ಲೇಖಿಸಿದೆ. ಈ ಬಾವಿ ಚಿಕ್ಕದಿದ್ದು, ಮೆಟ್ಟಿಲುಗಳನ್ನು ಹೊಂದಿದೆ. ಶಾಸನದ ಪಕ್ಕದಲ್ಲಿ ಗಣೇಶನ ಅಪೂರ್ಣವಾದ ಶಿಲ್ಪವಿದೆ. ಹೀಗಾಗಿ ಈ ದೇವರ ಹೆಸರೇ ಈ ಬಾವಿಗೆ ಬಂದಿರಬೇಕು. ಈ ಬಾವಿ ಬೆನಕನ ಪೂಜೆಗಾಗಿ ನೀರು ತರಲು ನಿರ್ಮಾಣವಾಗಿರಬೇಕು. ಈಗ ಈ ಬಾವಿ ಜೀರ್ಣಾವಸ್ಥೆಯಲ್ಲಿ ಇಂದಿಗೂ ಅಸ್ತಿತ್ವದಲ್ಲಿದೆ.

ಲಿಂಗ ಬಾವಿ: ಬೇಟೆಕಾರರ ಹೆಬ್ಬಾಗಿಲಿನ ಈಶಾನ್ಯಕ್ಕೆ ಶಿಥಿಲವಾದ ದೇವಸ್ಥಾನದ ಉತ್ತರಗೋಡೆಯಲ್ಲಿರುವ ಗುಂಡಿನ ಮೇಲಿರುವ ತೆಲುಗು ಭಾಷೆಯ ಒಂದು ಶಾಸನ[12] 'ಲಿಂಗ್ಗಬಾವಿ ಬಸವಂಣೊಡೆಯಲಸ್ಥರಂ ಸ್ವರಜನಲಕುಂನು ಮೇಲುಕೊರು ಕಟಿಪಾದ' ಎಂದು ಲಿಂಗ ಬಾವಿಯನ್ನು ಉಲ್ಲೇಖಿಸುತ್ತದೆ. ಇದೇ ಶಾಸನದ ಹತ್ತಿರ ಬಾವಿಗೆ ಕಟ್ಟಲಾದ ಕಲ್ಲಿನ ಮೇಲಿರುವ ಶಾಸನವು ಕೂಡಾ 'ಲಿಂಗ ಬಾವಿ'ಯನ್ನು ಉಲ್ಲೇಖಿಸುತ್ತದೆ. ಬಹುಶಃ ಈ ಬಾವಿ ತಾನು ಹೊಂದಿದ ದೇವರನ್ನು ಸೂಚಿಸುತ್ತದೆ. ಈ ಬಾವಿ ಈಗ ಕಾಣಸಿಗುವುದಿಲ್ಲ.

ರಂಗನಾಥ ಬಾವಿ: ಮಾಲ್ಯವಂತ ದೇವಾಲಯದ ಉತ್ತರಕ್ಕಿರುವ ಗುಂಡಿನ ಮೇಲಿನ ಒಂದು ತೆಲಗು ಶಾಸನ[13] 'ರುದಿರೋದ್ಗಾ ತಿರಿವಿದಿ ಚೆಟಿನಾಗಿನೆನಿ ಕೊಮಾರುಂಡು ಚಿಂನಪನಾಯಂಡು ಕಟಿಂಚಿನ ರಂಗನಾತನಿ ಬಾವಿ ಶ್ರೀ' ಎಂದು "ರಂಗನಾಥನ ಬಾವಿ"ಯನ್ನು ಉಲ್ಲೇಖಿಸುತ್ತದೆ. ಇದನ್ನು ತಿರಿವಿದಿ ಚಿಟನಾಗಿನೇನಿಯ ಮಗ ಚಿನ್ನನಾಯಂಡು ಕಟ್ಟಿಸಿದನೆಂದು ಆ ಶಾಸನ ಹೇಳುತ್ತದೆ. ಈ ಶಾಸನದ ಆಗ್ನೆಯಕ್ಕಿರುವ ಬಾವಿಯೇ 'ರಂಗನಾಥ ಬಾವಿ·ಯಾಗಿರಬೇಕು.[14] ಬಹುಶಃ ಈ ಬಾವಿ ರಂಗನಾಥ ದೇವರ ಪೂಜೆ ಪುನಸ್ಕಾರಕ್ಕಾಗಿಯೇ ಕಟ್ಟಿಸಿದುದಾಗಿರಬೇಕು. ಈಗ ಈ ಬಾವಿ ಸಂಪೂರ್ಣವಾಗಿ ಹಾಳಾಗಿದೆ. ಅದರ ಅವಶೇಷಗಳು ಮಾತ್ರ ಕಾಣಸಿಗುತ್ತವೆ.

ಈ ಮೇಲ್ಕಾಣಿಸಿದ ಹೆಸರುಳ್ಳ ಬಾವಿಗಳಲ್ಲದೆ ಇನ್ನೂ ಕೆಲವು ಹೆಸರಿಲ್ಲದ ಬಾವಿಗಳು ಹಂಪೆಯ ಶಾಸನಗಳಲ್ಲಿ ಕಂಡುಬರುತ್ತವೆ. ಅಹಮದ್‌ಖಾನ್ ಧರ್ಮಶಾಲೆಯ ಮುಂಭಾಗದ ತೊಲೆಯ ಮೇಲಿನ ಒಂದು ಶಾಸನವು ಧರ್ಮ ಶಾಲೆ ಮತ್ತು ಪಕ್ಕದಲ್ಲಿರುವ ಬಾವಿಯನ್ನು ಉಲ್ಲೇಖಿಸುತ್ತದೆ.[15] ಈ ಧರ್ಮ ಶಾಲೆ ಹಾಗೂ ಬಾವಿಯ ಕಾರ್ಯಕ್ಕೆ ದಾನ ನೀಡಿದವನು ಅಹಮದಖಾನ್ ಎಂಬ ಓರ್ವ ಮುಸ್ಲಿಂ ಅಧಿಕಾರಿ. ಇದನ್ನು ಸಾರ್ವಜನಿಕ ಸೌಖ್ಯಕ್ಕಾಗಿ ಹಾಗೂ ಅವನ ಒಡೆಯನಾದ

ಎರಡನೆಯ ದೇವರಾಯನ ಪುಣ್ಯಸ್ಮರಣೆಗಾಗಿ ಕ್ರಿ.ಶ.1439ರಲ್ಲಿ ನಿರ್ಮಿಸಿದ. ಈ ಬಾವಿ ಇಂದಿಗೂ ಅಸ್ತಿತ್ವದಲ್ಲಿದೆ.

ಅಹಮದ್‌ಖಾನ್ ಧರ್ಮಶಾಲೆಯ ಪಶ್ಚಿಮಕ್ಕೆ ಬೆಟ್ಟದ ಮೇಲಿರುವ ಬಾವಿಯನ್ನು ದೇವರಪಲ್ಲಿ ಮುಮ್ಮಡಿಸೆಟ್ಟಿಗೆ ಪುಣ್ಯವಾಗಲೆಂದು ನಂಜೆದೇವರ ನಿರಾಸಿಮಠಕ್ಕೆ ದಾನ ಮಾಡಿದ್ದು ಬಾವಿಯ ಪಕ್ಕದಲ್ಲಿರುವ ಶಾಸನದಿಂದ ತಿಳಿಯುತ್ತದೆ.[16]

ಅಹಮದ್‌ಖಾನ್ ಧರ್ಮಶಾಲೆ ಮತ್ತು ಕೃಷ್ಣ ದೇವಾಲಯದ ದಾರಿ ಮಧ್ಯದ ಬಂಡೆಯ ಮೇಲಿನ ಶಾಸನವು ಮತ್ತೊಂದು ಬಾವಿಯನ್ನು ಕಬಿರಾವುತನ ಮಗ ಪಿಲಿಕುಂಚಲಕನು ಬಯಿರಾವುತನಿಗೆ ಕೊಟ್ಟದ್ದನ್ನು ಉಲ್ಲೇಖಿಸುತ್ತದೆ.[17]

ಮಾಲ್ಯವಂತ ಪರ್ವತದ ಈಶಾನ್ಯಕ್ಕೆ ತುರ್ತುಕಾಲುವೆಯ ಬಲದಂಡೆಯ ಒಡ್ಡಿನ ಮೇಲಿನ ಗುಂಡಿನ ಮೇಲಿರುವ ಶಾಸನ,[18](ಕ್ರಿ.ಶ.1558) ಒಂದು ಬಾವಿಯನ್ನು ಉಲ್ಲೇಖಿಸುತ್ತದೆ.

ಒಟ್ಟಾರೆ, ಹಂಪೆ ಪ್ರದೇಶದ ಬಾವಿಗಳು ನೀರಾವರಿಗಾಗಿ, ಕುಡಿಯುವ ನೀರಿಗಾಗಿ, ದೇವರ ಪೂಜಾದಿಗಳಿಗಾಗಿ ನಿರ್ಮಿಸಲಾಗಿದ್ದವು. ಹಂಪೆಯ ಗಣೇಶ ಗುಡಿಯ ಮುಂಭಾಗದ ಮಂಟಪದಲ್ಲಿ ನಿಲ್ಲಿಸಿರುವ ಶಾಸನವು ಬಾವಿಗಳನ್ನು ಕಟ್ಟಿಸುವುದು ಒಂದು ಪುಣ್ಯ ಕಾರ್ಯವೆಂದೇ ನಿರೂಪಿಸಿದೆ.

**ಆಧಾರಸೂಚಿ ಮತ್ತು ಟಿಪ್ಪಣಿಗಳು**

1. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ. 3. (ಹಂಪಿ ಶಾಸನಗಳು), ದೇವರಕೊಂಡಾರೆಡ್ಡಿ (ಸಂ.) ಶಾ.ಸಂ. 69. ಸಾಲು : 46–47
2. ಸಿ.ಟಿ.ಎಂ. ಕೊಟ್ರಯ್ಯ(ಮೂಲ), ಎಂ. ಧ್ರುವ ನಾರಾಯಣ(ಅನು): ವಿಜಯನಗರ ಸಾಮ್ರಾಜ್ಯ ನೀರಾವರಿ ವ್ಯವಸ್ಥೆ, ಪುಟ. 91.
3. ದೇವರಕೊಂಡಾರೆಡ್ಡಿ (ಸಂ): ಅದೇ, ಪುಟ. 282, ಶಾ.ಸಂ. 398.
4. ಅದೇ ಪುಟ. 93, ಶಾ.ಸಂ. 106.
5. ವಿಜಯನಗರ ಅಧ್ಯಯನ ಸಂಪುಟ 1, (ಸಂ.) ಡಾ. ಡಿ. ವಿ. ದೇವರಾಜ್, ಡಾ. ಸಿ. ಎಸ್. ಪಾಟೀಲ ಪು. 68
6. ಪೂರ್ವೋಕ್ತ, ಪುಟ. 12. ಶಾ.ಸಂ. 208.
7. ಅದೇ, ಪುಟ. 233, ಶಾ.ಸಂ. 322.
8. ಅದೇ.
9. ಅದೇ ಪುಟ. 52. ಶಾ.ಸಂ.61.
10. ಅದೇ. ಪುಟ. 146. ಶಾ.ಸಂ. 191.
11. ಅದೇ ಪುಟ. 217. ಶಾ.ಸಂ. 296.
12. ಅದೇ, ಪುಟ. 262. ಶಾ.ಸಂ. 366.
13. ಅದೇ. ಪುಟ. 263, ಶಾ.ಸಂ. 369.
14. D.V. Devaraj: Vijayanagar Progress of Research. 1984-87. I.No:110. P.No. 51. (To the south-east of the inscription is a small well, which can be identified as the well of Ranganath.)
15. ಪೂರ್ವೋಕ್ತ, ಪುಟ. 224, ಶಾ. ಸಂ. 311.
16 ಅದೇ., ಪುಟ. 249, ಶಾ, ಸಂ. 342.
17. ಅದೇ., ಪುಟ. 223, ಶಾ. ಸಂ. 309.
18. ಅದೇ., ಪುಟ. 269. ಶಾ. ಸಂ. 382.

❖❖❖

# ಆಧ್ಯಾತ್ಮದ ಮೇರು ಶಿಖರ
# ಕೂಡಲೂರು ಬಸವಲಿಂಗ ಶರಣರು

**ಡಾ. ಶಿವಲಿಂಗಪ್ಪ ಆಯ್. ಭಂಡಾರಿ**
ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ವಿಭಾಗ, ಜಿ.ಪಿ. ಪೋರವಾಲ ಕಲಾ,
ವಾಣಿಜ್ಯ ಹಾಗೂ ವ್ಹಿ.ವ್ಹಿ. ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ

**ಪ್ರಸ್ತಾವನೆ**

ಕೂಡಲೂರು ಬಸವಲಿಂಗ ಶರಣರು ಕನ್ನಡ ನಾಡು ಕಂಡ ಶ್ರೇಷ್ಠ ಅನುಭಾವಿ ಕವಿಗಳು. ಕಲ್ಯಾಣ ಕರ್ನಾಟಕದ ಮುಕುಟವೆಂದು ಹೇಳಲಾದ ಯಾದಗಿರಿ ಜಿಲ್ಲೆಯ ಮೈಲಾಪೂರ ಸಮೀಪದ 'ಬಳಿಚಕ್ರ' ಗ್ರಾಮದ ಲಿಂಗಾಯತ ಬಣಜಿಗ ಸಮುದಾಯದ ಮಹಾದೇವಪ್ಪ ಮತ್ತು ಗಂಗವ್ವ ದಂಪತಿಯ ಮಗನಾಗಿ ಬಸವಲಿಂಗಪ್ಪ ಜನಿಸಿದರು. ಇವರ ಹುಟ್ಟು ಮತ್ತು ಬದುಕಿನ ಕುರಿತು ಖಚಿತವಾದ ಯಾವುದೇ ಮಾಹಿತಿ ಲಭ್ಯವಾಗಿಲ್ಲ. 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ' ಸಂಪುಟ–5ರಲ್ಲಿ ಕ್ರಿ.ಶ.1700 ರಲ್ಲಿದ್ದರೆಂದು ಉಲ್ಲೇಖಿಸಿದ್ದರೆ, ಶ್ರೀ ರಾಜಶೇಖರ ಎಂಬವರು ಕ್ರಿ.ಶ.1750 ಎಂದು ಹೇಳಿದ್ದರಿಂದ, ಅಪ್ಪಟ ಬ್ರಹ್ಮಚಾರಿಯಾಗಿ ಬದುಕಿ–ಬಾಳಿದ ಬಸವಲಿಂಗ ಶರಣರು ಆಧ್ಯಾತ್ಮದ ಮೇರು ಶಿಖರಕ್ಕೇರಿದ್ದರು ಎಂಬುದನ್ನು ಅವರ ವಚನ ಮತ್ತು ತತ್ವಪದಗಳಿಂದ ತಿಳಿದು ಬರುತ್ತದೆ. ದಾಸೋಹ ಸೇವೆಯಿಂದಾಗಿ ಕಲಬುರಗಿಯ ಶರಣ ಬಸವೇಶ್ವರರ ಹೆಸರು ಚಿರಸ್ಥಾಯಿಯಾಗಿದ್ದರೆ, ತಾತ್ವಿಕ ವಿಚಾರಗಳಿಂದಾಗಿ ಕಡಕೋಳದ ಮಡಿವಾಳಪ್ಪನವರು ಪ್ರಖ್ಯಾತಿಯನ್ನು ಪಡೆದಿದ್ದರು. ಈವರೀರ್ವರ ಸಮಕಾಲೀನರಾಗಿ ಬದುಕಿ ಬಾಳಿದ ಬಸವಲಿಂಗಪ್ಪನವರು 18ನೇ ಶತಮಾನದಲ್ಲಿ ಬದುಕಿದ್ದರೆಂದು ಹಿರಿಯ ಕವಿಗಳಾದ ಶಾಂತರಸರು 'ಕೂಡಲೂರು ಬಸವಲಿಂಗ ಶರಣರ ಸ್ವರವಚನಗಳು' ಕೃತಿಯ ಪ್ರಸ್ಥಾವನೆಯಲ್ಲಿ ದಾಖಲಿಸಿದ್ದಾರೆ. ಅಯ್ಯನವರಲ್ಲಿ ಅಕ್ಷರ ಅಭ್ಯಾಸ ಕಲಿತರಾದರೂ ಈತನ ಮನಸ್ಸು ಆಧ್ಯಾತ್ಮದೆಡೆಗೆ ಸೆಳೆಯುತಿದ್ದರಿಂದ ಕಲಿತದ್ದು ಬಹಳ ಕಡಿಮೆ. ಹೀಗಿದ್ದು, ಶಬರಶಂಕರ ವಿಳಾಸ, ರಾಜಶೇಖರ ವಿಳಾಸ, ಚೆನ್ನಬಸವ ಪುರಾಣ, ಜೈಮಿನಿ ಭಾರತ, ವ್ಯಾಕರಣ, ಛಂದಸ್ಸು, ಗಣಿತ, ಜ್ಯೋತಿಷ್ಯ, ಜಮಾ–ಖರ್ಚು, ಧನಂಜಯ ನಿಘಂಟು ಹಾಗೂ ಅಮರಕೋಶವನ್ನು ಅಧ್ಯಯನ ಮಾಡಿದ್ದರು. ನಿಜಾಮನ ಆಳ್ವಿಕೆಯ ರಾಜ್ಯಭಾಷೆಯಾದ ಉರ್ದು, ಫಾರಸಿ ಮತ್ತು ಅರಬ್ಬೀ ಭಾಷೆಗಳನ್ನು ಕಲಿತು ಓರಿಗೆಯ ಗೆಳೆಯರಲ್ಲಿ ಪ್ರತಿಭಾವಂತರೆನಿಸಿದ್ದರು. ಆದರೆ ಕುಟುಂಬ ಅನುಸರಿಸಿಕೊಂಡು ಬಂದ ದನಗಳನ್ನು ಮೇಯಿಸುವ ವೃತ್ತಿಯನ್ನು ಕಾಯಕವನ್ನಾಗಿಸಿಕೊಂಡಿದ್ದರು. ಬಳಿಚಕ್ರದ ಸಮೀಪದಲ್ಲಿ ಸಿದ್ದೇಶ್ವರ ಎಂಬ ಹೆಸರಿನ ಬೆಟ್ಟವಿದೆ. ಈ ಬೆಟ್ಟದೆಡೆಗೆ ದನಗಳನ್ನು ಕರೆದುಕೊಂಡು ಹೋಗುತಿದ್ದರು. ಪವಾಡ ಸದೃಶ ಎಂಬಂತೆ ಒಂದು ದಿನ ಆಕಳನ್ನು ಬೆನ್ನಟ್ಟಿಕೊಂಡು ಹೋಗಿ ಸಂನ್ಯಾಸಿಗಳಿರುವ ಗುಹೆಯೊಂದನ್ನು ಸೇರಿ, ಅವರಿಂದ ಆಶೀರ್ವಾದ ಪಡೆದು ಆಧ್ಯಾತ್ಮ ಚಿಂತನೆಗೆ ವಾಲಿದರು. ಬಸವಲಿಂಗ ಶರಣರು ಆಡಿದ ಮಾತುಗಳು ಹಾಡುಗಳಾಗಿ ಜನರ

ಅಂತರಂಗವನ್ನು ಬೆಳಗತೊಡಗಿದವು. ಭಕ್ತಿ, ವೈರಾಗ್ಯದಲ್ಲಿ ಮಿಂದೆದ್ದ ಯೋಗಿಯಾಗಿ ಕಾಣಿಸುತಿದ್ದುದನ್ನು ಗಮನಿಸಿದ ತಂದೆ-ತಾಯಿಗಳು, ಸಾಧು-ಸಂತರರ ಸಂಘದಿಂದ ವಿಮುಖನಾಗಲೆಂದು ದನಗಳ ಮೇಯುಸುವಿಕೆಯನ್ನು ಬಿಡಿಸಿ ಕಾಯಿಪಲ್ಲೆ ಮಾರಾಟ ಮಾಡಿಕೊಂಡು ಬರಲು ನೇಮಿಸಿದರು.

**ಸಿದ್ದರ ದರ್ಶನದ ಅಪರೂಪದ ಗಳಿಗೆ**

ತಂದೆ-ತಾಯಿಗಳ ಅಣತಿಯಂತೆ ದನಗಳನ್ನು ಮೇಯಿಸಿಕೊಂಡು ಬರುವ ಕೆಲಸದಲ್ಲಿ ನಿರತನಾಗಿರುವಾಗ, ಬೇರೊಂದು ಆಕಳು ಬಂದು ತಮ್ಮ ದನಗಳ ಜೊತೆ ಮೇಯ್ದು ಹೋಗುತ್ತಿದ್ದುದನ್ನು ಗಮನಿಸಿದ ಬಸವಲಿಂಗಪ್ಪ, ಒಂದು ದಿನ ಇದನ್ನು ಪತ್ತೆ ಹಚ್ಚಲೇಬೇಕೆಂದು ಕಾದು ಕುಳಿತು, ಆಕಳನ್ನು ಬೆನ್ನಟ್ಟಿಕೊಂಡು ಹೋಗಿ ಗುಡ್ಡದ ಹತ್ತಿರವಿರುವ ಗವಿಯನ್ನು ಹೊಕ್ಕನು. ಸಿದ್ದರ ಗುಂಪನ್ನು ಕಂಡು "ನಾನು ನಿಮ್ಮ ಹಸುವನ್ನು ಕಾಯ್ದಿದ್ದೇನೆ, ಕಾಯ್ದ ಕೂಲಿ ಹಣವನ್ನು ಕೊಡಿ" ಎಂದು ಕೇಳಿದ ಬಸವಲಿಂಗಪ್ಪನ ಧೈರ್ಯ, ಸ್ಥೈರ್ಯ ಮತ್ತು ತೇಜಸ್ಸನ್ನು ಕಂಡ ಸಿದ್ದರು ಹತ್ತಿರ ಕರೆದು, ಮಸ್ತಕದ ಮೇಲೆ ಹಸ್ತವನಿಟ್ಟು ಆಶೀರ್ವಾದ ಮಾಡಿದ್ದು, ಒಂದು ಅಪರೂಪದ ಗಳಿಗೆ. ಸಿದ್ದನ ಹಸ್ತಸ್ಪರ್ಶದಿಂದ ಬಸವಲಿಂಗಪ್ಪನ ಮನದಲ್ಲಿ ಮಿಂಚೊಂದು ಮೂಡಿದಂತಾಯಿತು. ಮೂರು ದಿನಗಳ ಕಾಲ ಸಿದ್ದರೊಂದಿಗೆ ಇದ್ದು ಹೊರಬಂದರೆಂಬ ಸಂಗತಿ ನರಸಿಂಹಗುಪ್ತರ ಶಂಕರಲಿಂಗ ಪುರಾಣದಿಂದ ತಿಳಿದು ಬರುತ್ತದೆ.[1] ಸಿದ್ಧರಿಂದ ಶಿವ ತತ್ವದ ಉಪದೇಶ ಪಡೆದು ಗವಿಯಿಂದ ಹೊರ ಬರುವಾಗ ಬಸವಲಿಂಗಪ್ಪನವರು ಈ ಕೆಳಗಿನ ಪದವನ್ನು ಹಾಡಿದರೆಂಬುದು ಜನರ ಪ್ರತೀತಿ :

**'.. .. .. .. .. .. .. .. ...**
**ಹನ್ನೆರಡು ವರುಷದ ಕನ್ಯೆನಾನಿರಲಿಕ್ಕೆ**
**ಎನ್ನ ನೋಡಲು ಬಂದರು ಅವರು**
**ಇನ್ನು ಸಾಮುದ್ರಿಕ ಲಕ್ಷಣವ ನೋಡಿ ಕೈಪಿಡಿದು**
**ಬಣ್ಣ ಬಿಳಿದುಗಳ ಮಾಡಿ ಪಾಡಿದರು**
**ಸದಮಲ ಸುಜ್ಞಾನಿಗಳು ಶಾಸಿಯನಿಡುತಿರಲು**
**ಅದರೊಳಗೆ ಮಗನ ಹಡೆದೆ ಪಡೆದೆ'**[2]

ಇಲ್ಲಿರುವ ತಾತ್ವಿಕ ಅಂಶಗಳನ್ನು ಗಮನಿಸಿದರೆ ಶಿವನ ಜೊತೆ ವಗತನ ಮಾಡಿಕೊಂಡೇ ಎಂಬುದರ ಹಿಂದೆ 'ಶರಣಸತಿ ಲಿಂಗಪತಿ' ತತ್ವವನ್ನು ಕಾಣುತ್ತೇವೆ. ಕೇವಲ ಹನ್ನೆರಡನೆಯ ವಯಸ್ಸಿಗೆ ಬ್ರಹ್ಮಜ್ಞಾನವನ್ನು ಅರಿತವನಂತೆ ಮಾತನಾಡುವ ಬಸವಲಿಂಗಪ್ಪನವರು ತನ್ನನ್ನು ಕನ್ಯೆಗೆ ಹೋಲಿಸಿಕೊಂಡು ತನ್ನ ನೋಡ ಬಂದವರು ಬೇರಾರು ಅಲ್ಲ; ಅವರು ಶಿವನ ಸಾಧಕರು, ಸುಜ್ಞಾನಿಗಳು ಎಂದು ಕರೆದುಕೊಳ್ಳುತ್ತಾರೆ. ಇಷ್ಟಲ್ಲದೆ, ಶಿವನೆಂಬ ಸುಜ್ಞಾನಿಯೊಂದಿಗೆ ಮದುವೆ ಮಾಡಿದರು, ಅವನ ಅಂಗ-ಸಂಗದಿಂದ ಬಸಿರು ಬಯಕೆಯಾಗಿ, ಭವಿಯಾಗಿ ಹುಟ್ಟಿದ ಬಸವಲಿಂಗಪ್ಪನವರಿಗೆ ಅನುಭಾವ ಎಂಬ ಮಗುವಾಗಿ ತತ್ವಭರಿತವಾಗಿ ಪದಗಳು ಹೊರಬರಲು ಸಾಧ್ಯವಾಯಿತು ಎಂಬುದನ್ನು ತತ್ವರೂಪದಲ್ಲಿ ತಿಳಿಸುತ್ತಾರೆ.

ಹದಿನೆಂಟರ ಹರೆಯದ ಮಗನಿಗೆ ಮದುವೆ ಮಾಡಬೇಕೆಂಬ ಆಸೆ ಎಲ್ಲ ತಂದೆ-

ತಾಯಿಗಳಿಗೂ ಸಹಜವೇ. ಆದರೆ ಹನ್ನೆರಡಕ್ಕಾಗಲೇ ಶಿವನನ್ನು ಪತಿಯಾಗಿಸಿಕೊಂಡು ಜೀವನವನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳಲು ಹೊರಟು, ಅನುಭಾವಿ ಎಂಬ ಮಗನನ್ನು ಹಡೆದು ಸಂತೃಪ್ತ ಬದುಕನ್ನು ಬದುಕುತ್ತಿದ್ದ ಬಸವಲಿಂಗಪ್ಪನವರಿಗೆ ಲೌಖಿಕ ಬದುಕಿನ ಮದುವೆ ಇಷ್ಟವಾಗಲೇ ಇಲ್ಲ. ಕಾಯಿಪಲ್ಯೆ ಮಾರಾಟ ಮಾಡಲು ಕೂಡಲೂರಿಗೆ ಬಂದಾಗ, ಅನುಭಾವಿ ಅಕ್ಕಸಾಲಿಗ ಈಶ್ವರಪ್ಪನೊಂದಿಗೆ ವ್ಯಾಪಾರದ ನಡು ನಡುವೆ ಜ್ಞಾನ–ತತ್ವಜ್ಞಾನ–ವೇದಾಂತದ ಮಾಡುತಿದ್ದರು. ಹೀಗಾಗಿ ಈರ್ವರಲ್ಲೂ ಒಂದು ರೀತಿ ಬಾಂಧವ್ಯ ಬೆಳೆಯಿತು. ಅಯ್ಯನವರಿಂದ ಪಡೆದ ಅಕ್ಷರಾಭ್ಯಾಸದ ಓದು ಮತ್ತು ಗುಡ್ಡದ ಸಾಧುಗಳಿಂದ ಅರಿತುಕೊಂಡ ವೇದಾಂತ ಜ್ಞಾನ ಇದರ ಮುಂದುವರೆದ ಭಾಗವೆಂಬಂತೆ ಈಶ್ವರಪ್ಪನೊಂದಿಗೆ ನಡೆಯುವ ತತ್ವಜ್ಞಾನದ ಚರ್ಚೆ ಬಸವಲಿಂಗಪ್ಪನವರಿಗೆ ಹೆಚ್ಚಿನ ಸ್ಫೂರ್ತಿಯನ್ನು ನೀಡಿದವು. ಬಸವಲಿಂಗಪ್ಪನವರ ವಿಚಾರಗಳಿಂದ ಇಡೀ ಕೂಡಲೂರಿನ ಜನ ಪ್ರಭಾವಿತರಾಗಿದ್ದರು.

ಇಪ್ಪತ್ತೈದು ವಯಸ್ಸು ಮೀರುವವರೆಗೂ ಬಸವಲಿಂಗಪ್ಪನವರ ಜೀವನ ಸರಾಗವಾಗಿ ಮುನ್ನಡೆದಿತ್ತು. ಒಂದೊಂದು ದಿನ ಕೂಡಲೂರಿನಲ್ಲಿಯೇ ತಂಗಿದ್ದು ಸದಾಚಾರಗೋಷ್ಠಿಯನ್ನು ನಡೆಸುತ್ತಿದ್ದರು. ಮದುವೆಯ ಕುರಿತಾಗಿ ತಂದೆ–ತಾಯಿಗಳು ಮಾಡಿದ ಪ್ರಯತ್ನಗಳೆಲ್ಲವು ವಿಫಲವಾದವು. ಇದೇ ಸಂದರ್ಭದಲ್ಲಿ ಬಸವಲಿಂಗಪ್ಪನವರು ಹಾಡಿದರೆಂದು ಹೇಳಲಾದ ಪದ್ಯ :

> **'ಇನ್ಯಾಕೆ ಎನ ಮದುವೆ ಚಿಂತಿ ನಿಮಗೆ**
> **ಎನ್ನ ಗುರು ತಂದೆ ಲಿಂಗವನು ಕೊಟ್ಟ ಬಳಿಕ'**
> ಎಂದು ಪ್ರಶ್ನಿಸುತ್ತಲೇ ಮುಂದುವರೆದು
> **'.. .. .. .. ತಂದ ಮನೆಯೊಳಗಾಕಿ ಯಜಮಾನಳೆನಿಸಿ**
> **ಕಣ್ಣು ಮೂಗಿಲೆ ಚೆಲುವೆ ಕಾಮವಿರಹತಳೆಂದು**
> **ತನಗೊಲಿದ ಬಾಲೆಗೆ ತಾಳಿಕಟ್ಟಿದ ಬಳಿಕ'**[3]

ಹೀಗೆ ತಾತ್ವಿಕವಾದ ವಿಚಾರಗಳನ್ನು ಹೊರಹಾಕುವ ಬಸವಲಿಂಗಪ್ಪನವರು ಲಿಂಗಾಯತ ಧರ್ಮದ ಆಚರಣೆಯ ಪ್ರಕಾರ ತನಗೆ ಲಿಂಗದೀಕ್ಷೆಯಾಗಿದೆ ಎಂಬುದನ್ನು ಸ್ಪಷ್ಟಪಡಿಸಿದರು. ಲಿಂಗದೀಕ್ಷೆ ಮಾಡಿಕೊಂಡಿರುವುದಾಗಿ ಹೇಳುವ ಬಸವಲಿಂಗಪ್ಪನವರಿಗೆ ಆಚರಣೆ ಎಂಬುದು ಬದುಕಿನ ಒಂದು ಭಾಗವಾಗಿತ್ತು. ವಿನಃ ಬದುಕಿಗೆ ವಿಮುಖವಾಗಿ ಬದುಕಲಿಲ್ಲ. ಅಂತೆಯೆ ಕುಟುಂಬ ನಿರ್ವಹಣೆಗಾಗಿ ಕಾಯಿಪಲ್ಯೆ ಮಾರಾಟದ ಕಾಯಕದಲ್ಲಿ ಸದಾ ನಿರತರಾಗಿರುತ್ತಿದ್ದರು. ಇವರ ಸದಚಾರವನ್ನು ಕಂಡಿದ್ದ ಗ್ರಾಹಕರು ಪ್ರಾಮಾಣಿಕವಾಗಿ ತೂಗಿಕೊಂಡು ನ್ಯಾಯಯುತವಾದ ಬೆಲೆಯನ್ನು ಕೊಟ್ಟು ಹೋಗುತ್ತಿದ್ದರು. ಬಂದ ಲಾಭದ ಹಣವನ್ನು ತಂದೆ–ತಾಯಿಗೆ ನೀಡುತ್ತಿದ್ದ ಬಸವಲಿಂಗಪ್ಪನವರು ಸಮಯ ಸಿಕ್ಕಾಗಲೆಲ್ಲ ಸ್ವಅಧ್ಯಯನದಲ್ಲಿ ತೊಡಗಿಕೊಳ್ಳುತ್ತಿದ್ದರು. ಸಾಲದ್ದಕ್ಕೆ ಕಲಬುರ್ಗಿಯ ಶರಣಬಸವೇಶ್ವರರನ್ನು ಮತ್ತು ಕಡಕೋಳದ ಅನುಭಾವಿ ಕವಿ ಮಡಿವಾಳಪ್ಪನವರನ್ನು ಕಂಡು ತತ್ವಜ್ಞಾನದ ಕುರಿತು ಚರ್ಚಿಸಿ ಕೊಡಲೂರಿಗೆ ಮರಳಿದ್ದರು.

**ಅಧ್ಯಾತ್ಮದ ಮೇರು ಶಿಖರವಾಗಿ ಬಸವಲಿಂಗಪ್ಪ**

ಸುಮಾರು ಮೂವತ್ತೈದು ವಯಸ್ಸು ಮೀರಿರಬಹುದು; ಯೋಗ ಧ್ಯಾನದಲ್ಲಿ

ತಕ್ಕಮಟ್ಟಿನ ಜ್ಞಾನ ಹೊಂದಿದ್ದ ಬಸವಲಿಂಗಪ್ಪನವರು ತುಂಗಭದ್ರಾ ನದಿ ತೀರದ ಏಕಾಂತವಾದ ನಿರ್ಜನ ಪ್ರದೇಶದ ಗುಹೆಯೊಂದರಲ್ಲಿ ಧ್ಯಾನ ಮಾಡಿ ಸಿದ್ಧಿಯ ಶಿಖರವನ್ನು ಏರಿದನೆಂದು ಅಲ್ಲಿದ್ದಾಗಲೇ ಈ ತಪಸ್ಸಿನ ಸಾಧನೆಯಿಂದ ಪರುಷ ಬಟ್ಟಲು ದೊರೆತು ಬಸವಲಿಂಗ ಶರಣರಾಗಿ ಮಾರ್ಪಟ್ಟರೆಂದು ಒಂದೆಡೆ ತಿಳಿದು ಬರುತ್ತದೆ.[4] ಇನ್ನೊಂದೆಡೆ ಹಂಪಿಯ ಯಾತ್ರೆಗೆ ಹೊರಟ ಜನ ಬಸವಲಿಂಗಪ್ಪನನ್ನು ಕರೆದೊಯ್ದರು. ಯೋಗ ಧ್ಯಾನಕ್ಕೆ ಪ್ರಶಸ್ತವಾದ ಸ್ಥಳವೆಂದು ಭಾವಿಸಿದ ಬಸವಲಿಂಗಪ್ಪ ಗುಹೆಯೊಂದನ್ನು ಒಳಹೊಕ್ಕು ಒಂದು ವರ್ಷದ ಬಳಿಕ ಊರಿಗೆ ಮರಳಿದನೆಂದು ಪ್ರತೀತಿ.[5] ಇದಕ್ಕೆ ಹಿನ್ನೆಲೆಯಾಗಿ ಹಂಪಿಯ ಗುಹೆಗಳಲ್ಲಿ ದೊಡ್ಡ ದೊಡ್ಡ ಯೋಗಿಗಳು ಧ್ಯಾನ ಮಾಡಿ ಸಾಧಕರಾಗಿ ಹೆಸರು ಮಾಡಿದ್ದರೆಂಬುದು ಸತ್ಯ. ಹಂಪಿಯಲ್ಲಿದ್ದಾಗಲೇ,

**'ಕಂಡಿರ್ರ್ಯಾ ಸದ್ಗುರುವಿನ ನೀವು .. .. ..**

**ಕಂಡು ಕಾಣದಂತಾದ ಹಂಪಿ ವಿರುಪಾಕ್ಷನ'**

ಎಂದು ಹಾಡಿಕೊಂಡಿರಬಹುದಾದ ಸಾಧ್ಯತೆಗಳಿವೆ. ಮುಂದುವರೆದು

**'ಕಂಡು ಕಾಣದಂತಾದ ಹಂಪಿ ವಿರುಪಾಕ್ಷನ .. .. ..**

**ಮೂಜಗ ತುಂಬಿದ ಶಿವರೂಪಿ ಗುರುವರನ'**[6]

ಎಂದಿರುವಲ್ಲಿ ಸಾಕ್ಷಾತ್ ವೀರೂಪಾಕ್ಷನ ಸನ್ನಿದಿಯಲ್ಲಿರುವಾಗ ಶಿವರೂಪಿ ವೀರೂಪಾಕ್ಷನ ಸಾಕ್ಷಾತ್ಕಾರ ಆಗಿರಬಹುದೆಂದು ಹೇಳುವುದಕ್ಕೆ ಈ ಮೇಲಿನ ಪದ್ಯ ಪುಷ್ಠಿ ಕೊಡುತ್ತದೆ.

ನಂತರದ ದಿನಗಳಲ್ಲಿ ಬಸವಲಿಂಗಪ್ಪನವರು ಕೂಡಲೂರೀಶನ ಎಂಬ ನಾಮದೊಂದಿಗೆ ತಳುಕು ಹಾಕಿಕೊಂಡು ಕೂಡಲೂರಿನ ಬಸವಲಿಂಗ ಶರಣರಾಗಿ ಒಂದೆಡೆ ನಿಲ್ಲದೆ ಸನ್ನತಿ, ಚಂದ್ರಲಾಂಭಾ, ಮೈಲಾಪೂರದ ಮಲ್ಲಯ್ಯ, ಕೊಡೆಕಲ್ಲಿನ ಬಸವಣ್ಣ, ಪರ್ವತಗಿರಿಯ ಶ್ರೀಶೈಲ, ಪಾತಾಳಗಂಗೆ, ಜ್ಯೋರ್ತಿಲಿಂಗ, ಕಾಶಿರಾಮೇಶ್ವರ, ಹರಿಹರ, ಶಿವಪುರ, ಕುಂಬಕೋಣ, ತಿರುಪತಿ ತಿಮ್ಮಪ್ಪ ಮುಂತಾದ ಪ್ರದೇಶಗಳಿಗೆ ಯಾತ್ರೆ ಕೈಗೊಂಡು ಲೋಕಜ್ಞಾನದ ಜೊತೆಗೆ ಆಧ್ಯಾತ್ಮದ ಉನ್ನತಜ್ಞಾನವನ್ನು ಪಡೆದುಕೊಂಡಿದ್ದಾಗಿ ಅವರ ಸ್ವರವಚನಗಳಿಂದ ತಿಳಿದು ಬರುತ್ತದೆ.

ಕೂಡಲೂರು ಬಸವಲಿಂಗಪ್ಪನವರ ಬದುಕಿನ ಪರಿಯೇ ವಿಶಿಷ್ಟ ಸಮಾಜದೊಳಗೆ ಬದುಕಿದ್ದರೂ ಮದುವೆಯಾಗಲಿಲ್ಲ. ಬ್ರಹ್ಮಚಾರಿಯಾಗಿ ಜೀವಿಸಿದನಾದರೂ ಸಮಾಜಕ್ಕೆ ವಿಮುಖವಾಗಿ ಬದುಕಲಿಲ್ಲ. ಬಸವಲಿಂಗ ಶರಣರ ರಚನೆಗಳು ಅತೀಂದ್ರಿಯ ಜ್ಞಾನದ ಕುರುಹುಗಳಾಗಿ ಕಾಣಿಸುತ್ತವೆ. ಬಸವಲಿಂಗ ಶರಣರ ಅತೀಂದ್ರಿಯ ಜ್ಞಾನದ ಶಕ್ತಿ ಎಂಥದ್ದು ಎಂದರೆ, ಲೌಖಿಕ ಜೀವನದ ಸಾರಸಾರವೆಲ್ಲವನ್ನು ಆಧ್ಯಾತ್ಮದ ತತ್ವಗಳಿಗೆ ಅನ್ವಯಿಸಿಕೊಂಡು ಹೇಳುವ ರೀತಿ ಹೊಚ್ಚ ಹೊಸದಾಗಿದೆ.

ಸ್ವತಃ ಬಾಲ ಬ್ರಹ್ಮಚಾರಿಯಾಗಿ ಜೀವನಾನುಭವವುಳ್ಳ ಬಸವಲಿಂಗ ಶರಣರು ಸಮಾಜಮುಖಿಯಾಗಿ ಬದುಕನ್ನು ಸವಿದರು. ತಮ್ಮ ಅಂತರ್‌ದೃಷ್ಠಿಯ ಮೂಲಕ ಕಂಡುಕೊಂಡ ಸತ್ಯವನ್ನು ಸಮಾಜಕ್ಕೆ ಸಾರಿದರು. ಶರಣರು ಭಾವಿಸಿದ ಹಾಗೆ, 'ಶರಣಸತಿ ಲಿಂಗಪತಿ' ಎಂಬ ಭಾವನೆ ಬಸವಲಿಂಗ ಶರಣರದು. ಸ್ವತಃ ಶರಣಸತಿ ಎಂದು ಆರೋಪಿಸಿಕೊಂಡು ಲಿಂಗವನ್ನು ಪತಿಯಾಗಿಸಿಕೊಳ್ಳುವ ಕ್ರಮ ಈ ಕೆಳಗಿನ ತತ್ವಪದದಲ್ಲಿ ಕಾಣಬಹುದು.

**'ಹೆಣ್ಣೇ ಬಾ ನೀನೆಂದು ಎಣ್ಣೆ ಹರಿಸಿಣ ಹಚ್ಚಿ**
**ತನ್ನ ನಿರಾಕಾರ ನೀರನೆರೆದು**
**ಬಣ್ಣ ಬಿಳಿದುಡಿಸಿ ಬಾಸಿಂಗವನು ತಂದು**
**ಕಣ್ಣಿಗೆ ಗೋಚರವಾಗಿ ಕಟ್ಟಿದ ಬಳಿಕ .. ..**
**.. .. .. .. .....**
**ನಿಶ್ಚಿಂತನಾಗೆಂದು ಹಾಡಿ ಹರಿಸಿದ ಬಳಿಕ'**[7]

ಲಿಂಗ ದೀಕ್ಷೆಗೆ ತನ್ನನ್ನು ತಾನು ಅರ್ಪಿಸಿಕೊಂಡ ರೀತಿಯನ್ನು ಹೊಸದಾಗಿ ಕಾಣಿಸುತ್ತದೆ. ಎಣ್ಣಿ, ಅರಿಷಿಣ, ನಿರಾಕಾರದ ನೀರ, ಬಿಳಿಬಣ್ಣದ ಉಡುಗೆ, ಬಾಸಿಂಗ ಇವೆಲ್ಲವೂ ಲೌಖಿಕ ಬದುಕಿಗೆ ಹೆಜ್ಜೆಯನ್ನಿಡುವ ಮಂಗಳಮಯ ವಸ್ತುಗಳೆಂದು ಕಂಡು ಬಂದರೂ ತಾತ್ವಿಕ ದೃಷ್ಟಿಯಿಂದ ಅವು ಭಕ್ತನೊಬ್ಬನು ಸ್ವತಃ ಲಿಂಗ ದೀಕ್ಷೆ ಪಡೆದು ಜೀವನ ಸಾಕ್ಷಾತ್ಕಾರಗೊಳಿಸಿಕೊಳ್ಳಲು ನಿರಾಕಾರದ ನೀರಲ್ಲಿ ಮುಳುಗಿ ಶೂಭ್ರವಾದ ಬಿಳಿಬಣ್ಣದ ಉಡುಗೆ ಧರಿಸಿ, ಮಂಗಳಮಯ ಸಂಕೇತವಾದ ತಿಲಕವನ್ನು ಹಣೆಯಲ್ಲಿ ಇಟ್ಟುಕೊಂಡು ಮೋಕ್ಷ ಸಾಧನೆಗೆ ಸಿದ್ಧನಾಗಿರುವ ಸಂಗತಿಯನ್ನು ಅರಹುತ್ತವೆ. ಭಕ್ತ ಎಂಬುದು ಭಕ್ತಿಯ ರೂಪದಲ್ಲಿ ಸತ್ಯ, ಶುದ್ಧ ಕಾಯಕದ ಪ್ರತೀಕವಾದ ಸರ್ವಾಂಗ ಸುಂದರ ಕನ್ಯೆ, ಕಾಮವಿರಹಿತ ಬಾಲೆ, ಈ ಬಾಲೆಗೆ ತಾಳಿ ಕಟ್ಟುವುದು ಶಿವನನ್ನು ಪತಿಯನ್ನಾಗಿಸಿಕೊಂಡ ಭಕ್ತಿಯ ಪರಿ ಕೂಡಲೂರ ಬಸವಲಿಂಗ ಶರಣರ ಅಂತಃಶಕ್ತಿಗೆ ಮಾತ್ರ ನಿಲುಕುವಂಥದ್ದು.

ಲಿಂಗದೀಕ್ಷೆಯನ್ನು ಪಡೆದುಕೊಂಡ ಭಕ್ತನೊಬ್ಬನ ಜೀವನವನ್ನು ಮಧುಚಂದ್ರಕೆ ಹೋಲಿಸುವ, ಈ ದಿಶೆಯಲ್ಲಿ ಶಿವನ ಸಾಕ್ಷಾತ್ಕಾರವನ್ನು ಕಾಣಬಯಸುವ ಬಯಕೆ ಹೊಚ್ಚ ಹೊಸದು. ಅಂತೆಯೆ ಕೂಡಲೂರು ಬಸವಲಿಂಗ ಶರಣರು :

'ಹ್ಯಾಗೆ ಬಿಡಬೇಕಮ್ಮ ನಾನಿವನ/ ಇೊಗಸಿನ ಪ್ರಿಯನ/ ಭೋಗರತಿ ಕಲೆ ಶಿಲೆಯ ಬಲ್ಲವನ/ ಸುಗುಣ ಸುಂದರನ!'[8]

ಎಂದು ಹಳಹಳಿಸುವುದು ಸಾಂಸಾರಿಕ ಲೋಕದ ಜೀವನ ವಿಧಾನ. ಹೆಣ್ಣು-ಗಂಡು ಪ್ರೀತಿಸಿ, ಪ್ರೇಮಿಸಿ ಹಾಗೆಯೇ ಮೆಚ್ಚಿ ಕೂಡುವುದು ಸುಖ ದಾಂಪತ್ಯದ ಸವಿ ಬದುಕಾದರೆ, ಅದರಲ್ಲೂ ರತಿಸುಖದಂತಹ ಉತ್ಕೃಷ್ಟ ಕಲೆಯನ್ನು ಕರಗತ ಮಾಡಿಕೊಂಡ ಪ್ರಿಯನನ್ನು ಬಿಟ್ಟು ಬದುಕುವುದು ಸಹಜ ಕೆಲಸವೇ? ಇಲ್ಲಿ ಬಸವಲಿಂಗ ಶರಣರು ಬಳಸುವ ಲೌಖಿಕ ಭೋಗ ಸುಖದ ಎಲ್ಲಾ ಮಜಲುಗಳನ್ನು ಅಧ್ಯಾತ್ಮದ ಉತ್ತುಂಗ ಶಿಖರಕ್ಕೇರಿರುವ ಭಕ್ತನೊಬ್ಬನ ಪರಮಾನಂದದ ಕ್ಷಣಕ್ಕೆ ಹೋಲಿಸಿ, ಭಕ್ತ ಮತ್ತು ದೇವನ ಅವಿನಾಭಾವ ಸಂಬಂಧವನ್ನು ಸ್ಪಷ್ಟಪಡಿಸುತ್ತಾರೆ.

ಕೂಡಲೂರು ಬಸವಲಿಂಗ ಶರಣರು ತಮ್ಮ ಸಾಧನೆಯಿಂದ ಕಂಡುಕೊಂಡ ಸತ್ಯದ ಮಾರ್ಗವನ್ನು ಬಳಸಿ, ಏಕಾಂತವಾಸದಲ್ಲಿ ಮೋಕ್ಷ ಸಾಧನೆಯ ಪಯಣಿಗನಾಗಿ ಇರಬಹುದಾಗಿತ್ತು. ಆದರೆ, ಹಾಗೇ ಮಾಡುವದಕ್ಕೆ ಮನಸ್ಸು ಒಪ್ಪದೇ, ಲೋಕ ಜೀವನದ ಸಾಗರದಲ್ಲಿ ಧುಮುಕಿ, ಅದರ ಎಲ್ಲ ಆಳ-ಅಗಲಗಳನ್ನು ಅಳೆದು ಜೀವನ ಧರ್ಮದರ್ಶನ ಪಡೆದು ಲೋಕದ ಒಳತಿಗಾಗಿ ಜನರ ಮಧ್ಯದೊಳಗಿದ್ದು, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಜೀವನವನ್ನು ಸವೆಸಿದ ಮೇರು ಅನುಭಾವಿ. ತನಗಾದ ಎರಡು ರೀತಿಯ ಲಾಭಗಳನ್ನು ಕುರಿತು :

**'ವ್ಯಾಪಾರ ಎನಗಾಯಿತೋ ಕೂಡ್ಲೂರು ಸಂತೆಯಲಿ**
**ವ್ಯಾಪಾರ ಎನಗಾಯಿತೋ**
**ವ್ಯಾಪಾರ ಎನಗಾಯ್ತು ಶ್ರೀಪತಿ ದಯೆಯಿಂದ**
**ಆ ಪರಬ್ರಹ್ಮನು ತಾನೇ ತಾನಾಗಿದ್ದು.. .. ..**[9]

ತನ್ನ ಕಾಯಕದಲ್ಲಿ ತೊಡಗಿಕೊಂಡ ಲೋಕ ರೀತಿಯ ವ್ಯಾಪಾರ ತನ್ನಷ್ಟಕ್ಕೆ ಸಾಂಗವಾಗಿ ನಡೆದುಕೊಂಡು ಹೋಗುತ್ತಿದ್ದರೆ. ಇನ್ನೊಂದೆಡೆ ಅಧ್ಯಾತ್ಮಿಕ ಚಿಂತನೆ, ಅನುಭಾವ ಗೋಷ್ಠಿಗಳು ಯಾವ ಸಮಸ್ಯೆಗಳಿಲ್ಲದೆ ನಡೆಯುತ್ತಿದ್ದವು. ಅಂತೆಯೆ 'ಆ ಪರಬ್ರಹ್ಮ ತಾನೇ ತಾನಾದ ವ್ಯಾಪಾರವದು' ಎಂದು ಹೇಳಿದ್ದರಲ್ಲಿ ಸಹಜವಾಗಿ ಒಂದೇ ಕ್ಷಣಕ್ಕೆ 'ಕಾಯಕ ಧರ್ಮ ಮತ್ತು ವೃತ್ತಿ ಧರ್ಮ' ಎರಡನ್ನು ಪ್ರತಿಪಾದಿಸುತ್ತದೆ.

ತನ್ನ ಕಾಯಕದ ಪರಿಣಾಮವಾಗಿ ಅಧ್ಯಾತ್ಮದ ಮೇರು ಶಿಖರವನ್ನು ಏರಿದ್ದ "ಹೊನ್ನು ಹಾಕುವ ಚೀಲದ ಐದು ಪದರುಗಳು ಮಾನವನ ಭೌತಿಕ ದೇಹದ ಅನ್ನಮಯದಿಂದ ಆನಂದಮಯದವರೆಗಿನ ಪಂಚಕೋಶಗಳೇ ಆಗಿವೆ. ಈ ಹೊತ್ತಿಗಾಗಲೇ ಅನ್ನಮಯದ ಆನಂದಮಯದ ಸ್ಥಿತಿಯವರೆಗಿನ ಅನುಭವ ಪಡೆದಿದ್ದ"[10] ಸ್ವತಃ ಬಸವಲಿಂಗ ಶರಣರು ತಮ್ಮ ಶರೀರವನ್ನು ಚೀಲಕ್ಕೆ ಹೋಲಿಸಿಕೊಂಡು ಇಪ್ಪತ್ತೈದು ವರ್ಷಗಳ ವಯಸ್ಸಿಗೆ ಮುಕ್ತಿಪಥವನ್ನು ಕಂಡು ಕೊಂಡ ಪರಿ ಅಚ್ಚರಿ ಪಡುವಂಥದ್ದು.

**ಆಧಾರ ಗ್ರಂಥಗಳು**


1. ನರಸಿಂಹ ಗುಪ್ತರ : ಶಂಕರಲಿಂಗ ಪುರಾಣ, 9ನೇ ಸಂಧಿ–ಪದ್ಯ–29–30
2. ಡಾ. ಎಂ.ಜಿ. ಶಾಸ್ತ್ರಿಮಠ : ಕೂಡಲೂರು ಬಸವಲಿಂಗ ಶರಣರು, ಪ್ರಸಾರಾಂಗ–ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಪುಟ–29
3. ಶಾಂತರಸ (ಸಂ) : ಕೂಡಲೂರು ಬಸವಲಿಂಗ ಶರಣರ ಸ್ವರವಚನಗಳು, ಪುಟ–29
4. ಶಾಂತರಸ (ಸಂ) : ಕೂಡಲೂರು ಬಸವಲಿಂಗ ಶರಣರ ಸ್ವರವಚನಗಳು, ಪ್ರಸ್ತಾವನೆ–ಪುಟ–10
5. ಶಂಕರಲಿಂಗ ಪುರಾಣ–ಸಂಧಿ–9
6. ಶಾಂತರಸ (ಸಂ) : ಕೂಡಲೂರು ಬಸವಲಿಂಗ ಶರಣರ ಸ್ವರವಚನಗಳು, ಪುಟ–24
7. ಅದೆ, ಪುಟ–29
8. ಅದೆ, ಪುಟ–30
9. ಅದೆ, ಪುಟ–75
10. ಡಾ. ಎಂ.ಜಿ.ಶಾಸ್ತ್ರೀಮಠ : ಕೂಡಲೂರ ಬಸವಲಿಂಗ ಶರಣರ ಒಂದು ಅಧ್ಯಯನ ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪುಟ–106


❖❖❖

# ಕುವೆಂಪು ಅವರ ಕವಿತೆಗಳಲ್ಲಿ ವರ್ತಮಾನದ ತಲ್ಲಣಗಳ ಚಿತ್ರಣ

**ಡಾ. ಪ್ರತಿಮಾ ಕೆ.ಪಿ.**
ಸಹಪ್ರಾಧ್ಯಾಪಕರು, ಕನ್ನಡ ವಿಭಾಗ, ಸ.ಪ್ರ.ದ.ಮಹಿಳಾ ಕಾಲೇಜು, ಕೆ.ಆರ್. ಪೇಟೆ–571426

ಯಾವುದೇ ನಾಡಿನಲ್ಲಿ ಕವಿಯೊಬ್ಬ ಹಲವು ವರ್ಗಗಳು ಮತ್ತು ಸಮುದಾಯಗಳಿಗೆ ಸೇರಿದ ಜನರ ಸಾಂಸ್ಕೃತಿಕ ಬದುಕನ್ನು ಆವರಿಸಿಕೊಂಡು ಚಿಂತನೆಗೆ ಹಚ್ಚಬಲ್ಲ ಮಟ್ಟಕ್ಕೆ ಬೆಳೆದು ನಿಂತದ್ದು ವಿರಳವೇ ಎನ್ನಬಹುದು. ಅದರಲ್ಲೂ ಸಾಂಸ್ಕೃತಿಕ–ರಾಜಕೀಯ ಬಿಕ್ಕಟ್ಟಿನ ಕಾಲದಲ್ಲಿ, ಅಂತಹ ಸಾಹಿತಿಯೊಬ್ಬ ಬಿಟ್ಟು ಹೋದ ಬರಹಗಳಿಗೆ ತಡಕುವ, ಅವುಗಳಿಂದ ಪರಿಹಾರ ಹುಡುಕಿ ಹುಮ್ಮಸ್ಸು ಪಡೆಯುವ ಧೀಶಕ್ತಿ ಕರುಣಿಸಿದ ಬೆರಳೆಣಿಕೆಯಷ್ಟು ಮಂದಿ ಬದುಕಿ ಹೋಗಿದ್ದಾರೆ.

ಕುವೆಂಪು ಅವರ ಸಾಹಿತ್ಯದಲ್ಲಿ ಪ್ರಸ್ತುತ ಸಂದರ್ಭದಲ್ಲಿನ ಅನೇಕ ತಲ್ಲಣಗಳ ಛಾಪು ಹಾಗೂ ಅದಕ್ಕೆ ಪರಿಹಾರವನ್ನು ಗುರುತಿಸಬಹುದಾಗಿದೆ. “ಮನುಜ ಮತ, ವಿಶ್ವ ಪಥ, ವಿಜ್ಞಾನ ದೃಷ್ಟಿ, ವಿಚಾರ ಬುದ್ಧಿ – ಇವು ನಮ್ಮ ಹೃದಯದ ನಿತ್ಯಮಂತ್ರಗಳಾಗಬೇಕು”[1] ಎಂದು ಅವರು ಹೇಳಿದುದನ್ನು ನೆನಪು ಮಾಡಿಕೊಳ್ಳಬಹುದು.

ಜಾತೀಯತೆ, ಮತಾಂಧತೆ, ಮತೀಯ ವ್ಯಾಮೋಹ, ಮತಾಂತರ, ಅಪವಿತ್ರ, ಅಪ್ರಾಮಾಣಿಕ ಹಾಗೂ ಅಶುದ್ಧ ರಾಜಕಾರಣ, ಭ್ರಷ್ಟಾಚಾರ, ಮೌಢ್ಯ, ಯುವಜನತೆಯ ದಾರಿತಪ್ಪಿದ ನಡೆ, ಸಾಮಾಜಿಕ ಅಸಮಾನತೆ, ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯ, ಅತ್ಯಾಚಾರ– ಇವೆಲ್ಲವನ್ನೂ ನಾವು ಸಮಾಜದಲ್ಲಿ ಕಾಣುತ್ತೇವೆ. ಇವುಗಳಲ್ಲಿ ಕೆಲವು ವಿಷಯಗಳನ್ನು ಮಾತ್ರ ಈ ಲೇಖನದಲ್ಲಿ ಚರ್ಚೆಗೆ ತೆಗೆದುಕೊಂಡಿದ್ದೇನೆ.

ಕುವೆಂಪು ಕಾವ್ಯಗಳಲ್ಲಿ ಸಾಮಾಜಿಕ ಅಸಮಾನತೆಯ ವಿರುದ್ಧದ ಧ್ವನಿ, ಅನ್ಯಶಕ್ತಿಯ ಆಕ್ರಮಣದ ವಿರುದ್ಧ ಸಮಾಜ ಒಗ್ಗೂಡಬೇಕೆಂಬ ಆದರ್ಶ, ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಎಲ್ಲರೂ ಒಂದಾಗಿ ಹೋರಾಡಬೇಕೆಂಬ ನಿಲುವು ಕಾಣಿಸುತ್ತದೆ. ರಾಷ್ಟ್ರೀಯತೆಯ ಪರಿಕಲ್ಪನೆಯೇ ಸಮಾಜದಲ್ಲಿ ಕೆಲವು ಆಶಯಗಳನ್ನು ರೂಪಿಸುತ್ತದೆ. ಕುವೆಂಪು ಅವರು ತಮ್ಮ ಕಾವ್ಯದ ಮೂಲಕವೇ ಸ್ಪಷ್ಟವಾಗಿ ರಾಷ್ಟ್ರನಿರ್ಮಾಣದ ಬಗ್ಗೆ ಹೇಳಿದರು.

**“ನಾಳೆ ನಾನಳಿವೆ ನೀನಳಿವೆ**
**ನಮ್ಮೆಲುಬುಗಳ ಮೇಲೆ**
**ಮೂಡುವುದು ಮೂಡುವುದು**
**ನವಭಾರತದ ಲೀಲೆ”**[2]

ಜಾತಿ ಮುಂತಾದ ಹೆಸರಿನಲ್ಲಿ ಅಸಮಾನತೆಯಿರುವ ಬಗ್ಗೆ ಕುವೆಂಪು ಅವರಿಗೆ ಆಕ್ರೋಶವಿತ್ತು.

**ಹೋಗುತಿದೆ ಹಳೆಬಾಳು, ಹೊಸಬಾಳು ಬರುತಲಿದೆ**
**ಬರುತಲಿದೆ ಕುದಿಗೊಂಡ ತರುಣರೆದೆಗಳಲಿ**
**ತರುಣರಿರ ಎದ್ದೇಳಿ! ಎಚ್ಚರಗೊಳ್ಳಿ! ಕೇಳಿ!**[3]

ಎನ್ನುವ ಕರೆಯಲ್ಲಿ ತರುಣಜನಾಂಗ ಜಾಗೃತಗೊಳ್ಳಬೇಕು. ತರುಣರು

ಎಚ್ಚರಗೊಂಡು ಸಿದ್ಧರಾಗಬೇಕು ಎಂಬುದು ಕವಿಯ ಬೇಡಿಕೆ. ಅದಕ್ಕಾಗಿ ರಾಷ್ಟ್ರಕವಿ ಕುವೆಂಪು ದಶಕಗಳ ಹಿಂದೆಯೇ ತರುಣರಿಗೆ ಕೊಟ್ಟ ಕರೆ:

**"ಹಳೆಮತದ ಕೊಳೆಯೆಲ್ಲ ಹೊಸಮತಿಯ ಹೊಳೆಯಲ್ಲಿ**
**ಕೊಚ್ಚಿಹೋಗಲಿ; ಬರಲಿ ವಿಜ್ಞಾನ ಬುದ್ಧಿ**
**ವೇದ ಪ್ರಮಾಣತೆಯ ಮರು ಮರೀಚಿಕೆಯಲ್ಲಿ**
**ನೀರರಸಿ ಕೆಡದಿರಲಿ ಸ್ವಾತಂತ್ರ್ಯ ಸಿದ್ಧಿ**
**ತರುಣರಿರ ಎದ್ದೇಳಿ! ಎಚ್ಚರಗೊಳ್ಳಿ! ಬಾಳಿ!"**[4]

ಇದು ತರುಣರಿಗೆ ಕುವೆಂಪು ನೀಡಿದ ಸ್ವಾತಂತ್ರ್ಯ ದೀಕ್ಷಾಮಂತ್ರ.

ಜಾತಿ, ಮತ, ವರ್ಣ ಸಮಸ್ಯೆ– ಇವುಗಳ ಬಗ್ಗೆ ಕುವೆಂಪು ಅವರ ಮಾತುಗಳು ಇಂತಿವೆ: "ವರ್ಣ ಜಾತಿ ವರ್ಗಗಳನ್ನು ಆ ದೇವರೇ ಸೃಷ್ಟಿ ಮಾಡಿದ್ದರೂ ಅವನ್ನೆಲ್ಲ ಇಂದು ಸರ್ವೋದಯಕ್ಕಾಗಿ ನಾವು ಧ್ವಂಸ ಮಾಡಬೇಕಾಗುತ್ತದೆ. ಕಾಲರಾ, ಪ್ಲೇಗು, ಮಲೇರಿಯಾಗಳನ್ನು ದೇವರೇ ಸೃಷ್ಟಿ ಮಾಡಿದ್ದು ಅಂತಾ ಹೇಳಿ ನಾವು ಸುಮ್ಮನಿರುವುದಕ್ಕೆ ಆದೀತೆ? ಅನಾರೋಗ್ಯಕರವೂ ಮೃತ್ಯುಕರವೂ ಆಗಿರುವ ಅವನ್ನೆಲ್ಲ ನಾಶಪಡಿಸಿ ನಮ್ಮ ಆರೋಗ್ಯವನ್ನು ನಾವು ರಕ್ಷಿಸಿಕೊಳ್ಳುವಂತೆ ವರ್ಣ, ಜಾತಿ, ವರ್ಗ ಮೊದಲಾದ ದುರ್ಭಾವನೆಗಳನ್ನೆಲ್ಲ ಧ್ವಂಸ ಮಾಡಿ ಸಮಾಜ ಕ್ಷೇಮವನ್ನು ಸಾಧಿಸಬೇಕು. ವರ್ಣಾಶ್ರಮ, ಜಾತಿಪದ್ಧತಿ ಮೇಲು ಕೀಳು ಭಾವನೆ ಮುಂತಾದ ಮಧ್ಯಯುಗದ ಕ್ರೂರ ಕರಾಳ ತತ್ವಗಳೆಲ್ಲ ವೈಜ್ಞಾನಿಕ ದೃಷ್ಟಿಯ ಅಗ್ನಿಕುಂಡದಲ್ಲಿ ಭಸ್ಮೀಕೃತವಾಗಬೇಕು."[5]

ಮತದ ಬದಲು ಮತಿಯ ಬಗ್ಗೆ ಕುವೆಂಪು ಅವರ ಒಲವು ಇದೆ.

**"ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ;**
**ಮತಿಯಿಂದ ದುಡಿಯಿರೈ ಲೋಕಹಿತಕೆ.**
**ಆ ಮತದ ಈ ಮತದ ಹಳೆಮತದ ಸಹವಾಸ**
**ಸಾಕಿನ್ನು ಸೇರಿರೈ ಮನುಜ ಮತಕೆ.**
**ಓ, ಬನ್ನಿ, ಸೋದರರೆ, ವಿಶ್ವಪಥಕೆ!"**[6]

"ಜನ ತಾವೇ ನೇರವಾಗಿ, ದಳ್ಳಾಳಿಯ ನೆರವಿಲ್ಲದೆಯೇ ಪೂಜೆ ಮಾಡಿಕೊಳ್ಳು ವಂತಿರಬೇಕು. ಕಾಲಕ್ರಮೇಣ ದೇವಾಲಯ ವ್ಯವಸ್ಥೆಯಲ್ಲಿ ಕ್ರಾಂತಿಯಾಗಬೇಕು"[7] ಎನ್ನುತ್ತಾರೆ.

ಕುವೆಂಪು ಅವರದು ಸಮಾಜವಾದಿ ನಿಲುವಿನ ಘೋಷಣೆ. 'ಸರ್ವರಿಗೂ ಸಮಬಾಳು। ಸರ್ವರಿಗೆ ಸಮಪಾಲು' ಎಂಬ ನವಯುಗವಾಣಿಯ ಘೋಷಣೆ. ಇದು ಅವರ ನವಭಾರತದ ಹೊಸಬಾಳಿನ ಸಾರ. ಇಲ್ಲಿ ಅವರು ಸ್ಪಷ್ಟವಾಗಿ ಶೋಷಿತರ ಪರವಾಗಿ ನಿಂತು ಬದಲಾವಣೆಗೆ ಕರೆಕೊಡುತ್ತಾರೆ.

**ಯುಗಯುಗದ ದಾರಿದ್ರ್ಯಭಾರದಿಂ ಬೆನ್ ಬಾಗಿ**
**ಗೋಳಿಡುವ ಬಡಜನರೇ, ಏಳಿರೈ ಏಳಿ!**
**ಶ್ರೀಮಂತರಡಿಗಳಡಿ ಹುಡಿಯಲ್ಲಿ ಹೊರಳಾಡಿ**
**ಕುಸಿದು ಕುಗ್ಗಿದವರೆಲ್ಲ ಸಂತಸವ ತಾಳಿ**[8]

ಶೋಷಣೆಗೆ ಒಳಗಾಗಿರುವ ಜನರು ಜಾಗೃತರಾಗಬೇಕು. ಕ್ರಾಂತಿಕಾಳಿ ಬರುತ್ತಿದ್ದಾಳೆ. ಬದಲಾವಣೆಯ ಗಾಳಿ ಬಿಸುತ್ತಿದೆ; ಈಗ ತುಳಿತಕ್ಕೊಳಗಾದ ಜನ ಎಚ್ಚತ್ತುಕೊಂಡರೆ

ಜಡಗೊಂಡ ಈ ಸಮಾಜದಲ್ಲಿ ಚಲನೆಯುಂಟಾಗುತ್ತದೆ. ಅದಕ್ಕಾಗಿ ಕವಿ ಉತ್ಸಾಹ ತುಂಬಲು ಪ್ರಯತ್ನಿಸುತ್ತಾರೆ. ಎಚ್ಚರದ ಪ್ರಜ್ಞೆಯಾಗಿ ಕರೆ ನೀಡುತ್ತಾರೆ. ಜಡಗೊಂಡ ಸಮಾಜಕ್ಕೆ ಚಲನೆಯ ಕರೆಕೊಡುವ ಇಲ್ಲಿನ ಕವಿತೆ ಸಾಮಾಜಿಕ ಸುಧಾರಕನಾಗಿ ಮತ್ತು ಸಮಾಜದ ಬದಲಾವಣೆಯ ಹರಿಕಾರನಾಗಿ ಪಾತ್ರ ವಹಿಸುತ್ತದೆ.

ಶಾಸ್ತ್ರಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆಯನ್ನು ತೀವ್ರವಾಗಿ ಖಂಡಿಸುತ್ತಾರೆ.

**ನೀರಡಿಸಿ ಬಂದ ಸೋದರನಿಗೆ ನೀರು ಕೊಡಲು**
**ಮನುಧರ್ಮಶಾಸ್ತ್ರವೆನಗೊರೆಯ ಬೇಕೇನು?**
**ನೊಂದವರ ಕಂಬನಿಯನೊರಸಿ ಸಂತೈಸುವೊಡೆ**
**ಶಾಸ್ತ್ರಪ್ರಮಾಣವದಕಿರಲೆ ಬೇಕೇನು?**[9]

ಇಂತಹ ಸಾಲುಗಳ ಮೂಲಕ ಕುವೆಂಪು ಒಂದು ಸಾಮಾಜಿಕ ಎಚ್ಚರವನ್ನು ಮೂಡಿಸಲು ಪ್ರಯತ್ನಿಸುತ್ತಾರೆ.

ಕುವೆಂಪು ಅವರಿಗೆ ಕನ್ನಡ ಭಾಷೆಯಂತೆಯೆ ಕರ್ನಾಟಕದ ಬಗೆಗೂ ಅಪಾರ ನಿಷ್ಕಲ್ಮಶವಾದ ಅಭಿಮಾನ. ಈ ದೇಶದ ಸ್ವಾತಂತ್ರ್ಯ ಚಳುವಳಿಯ ಜೊತೆಗೆ ಅದರೊಂದು ಭಾಗವಾಗಿ ಹುಟ್ಟಿಕೊಂಡದ್ದು ಕರ್ನಾಟಕ ಏಕೀಕರಣ ಕಲ್ಪನೆ. ಸ್ವಾತಂತ್ರ್ಯ ಚಳುವಳಿಯ ಮೂಲಕ ಈ ದೇಶ ಪರಕೀಯ ಪ್ರಭುತ್ವದಿಂದ ಬಿಡುಗಡೆ ಪಡೆಯುವುದು ಎಷ್ಟು ಮುಖ್ಯವಾಗಿತ್ತೋ, ವಸಾಹತುಶಾಹಿ ಕಾರಣದಿಂದ ಹರಿದು ಹಂಚಿ ಹೋಗಿದ್ದ ಕರ್ನಾಟಕ ಏಕೀಕೃತ ಕರ್ನಾಟಕವಾಗುವುದು ಅಷ್ಟೇ ಮುಖ್ಯವಾಗಿತ್ತು. ಇದು ರಾಜಕಿಯವಾದುದ್ದಲ್ಲ; ಸಾಂಸ್ಕೃತಿಕವಾದದ್ದು. ಕರ್ನಾಟಕ ಮಾತೆಯನ್ನು ಭಾರತ ಜನನಿಯ ತನುಜಾತೆ ಎಂದು ಪರಿಭಾವಿಸುತ್ತಾ ಆಕೆಗೆ ಕವಿ ಭರವಸೆ ನೀಡುತ್ತಾರೆ. ಅವರ ದೃಷ್ಟಿಯಲ್ಲಿ ಕರ್ನಾಟಕವೆಂದರೆ,

**ಕಾವ ಕೊಲುವ ಒಲವ ಬಲವ**
**ಪಡೆದ ಚಲದ ಚಂಡಿ ಕಣಾ**
**ಋಷಿಯ ಕಾಣ್ಬ ಕಣ್ಣಿಗೆ!** [10]

ಕುವೆಂಪು ಅವರ ಸಾಮಾಜಿಕ ಆಸಕ್ತಿ ಅನೇಕ ಮೂಲಗಳಿಂದ ಪ್ರೇರಣೆ ಪಡೆದು ಅನೇಕ ನೆಲೆಗಳಲ್ಲಿ ವ್ಯಕ್ತವಾಗಿದ್ದರೂ ಅದರ ಕೇಂದ್ರದಲ್ಲಿ ಇರುವುದು ಕನ್ನಡ-ಕರ್ನಾಟಕ-ರೈತ. "ಕನ್ನಡ ಅಳಿಸೆವು, ಕರ್ನಾಟಕ ಬಿಡೆವು, ಈ ಇಡೀ ಕರ್ನಾಟಕಕ್ಕೆ ರೈತನೇ ಯಜಮಾನ" ಎನ್ನುವ ದಾಟಿ ಕುವೆಂಪು ಅವರದು. ಕರ್ಮಜೀವಿಯಾದ ರೈತ ಎಂತಹ ಸನ್ನಿವೇಶದಲ್ಲೂ ತನ್ನ ಕಾಯಕ ನಿಲ್ಲಿಸುವುದಿಲ್ಲ. ಆತನದು ನಿರಂತರ ದುಡಿಮೆ. ಆತನ ಬೆವರಿನ ಫಲವೇ ರಾಜ್ಯದ ಶಕ್ತಿ. ಸಂಸ್ಕೃತಿಯ ಆಸಕ್ತಿ.

ಹಸಿವಿನ ಮುಂದೆ ಎಲ್ಲಿಯ ಶೌರ್ಯ, ಎಲ್ಲಿಯ ಸಂಸ್ಕೃತಿ, ಎಲ್ಲಿಯ ಸೃಜನಶೀಲತೆ? ಅನೇಕ ಸಂದರ್ಭಗಳಲ್ಲಿ ಮನುಷ್ಯನು ಎತ್ತರಕ್ಕೆ ಹೋಗದಂತೆ ಮಾಡುವುದೇ ಈ ಅನ್ನದ ಸಮಸ್ಯೆ. ಅದಕ್ಕಾಗಿ ಅನ್ನವನ್ನೀವ ನೇಗಿಲಯೋಗಿಯೇ ಜನರಿರುವ ಇಡೀ ವಿಶ್ವಕ್ಕೆ ಶಕ್ತಿಯನ್ನು ದೃಢತೆಯನ್ನು ತಂದುಕೊಡುವ ಅನ್ನದಾತ. ಶ್ರಮಸಂಸ್ಕೃತಿಯೇ ಬದುಕಿನ ಮೂಲಾಧಾರ. ಅಂತಹ ಶ್ರಮ ಸಂಸ್ಕೃತಿಯ ಪ್ರತೀಕವಾದ ರೈತನನ್ನು ಕಾವ್ಯರಂಗದ ಪ್ರಧಾನಭೂಮಿಕೆಗೆ ತಂದು ಆತನಿಗೆ 'ನೇಗಿಲಯೋಗಿ' ಎಂದು ಕರೆದ ಮೊಟ್ಟ ಮೊದಲಿಗರು ಕವಿಯೋಗಿ ಕುವೆಂಪು.

ಎಲ್ಲಾ ತಲೆಮಾರುಗಳು ತಮ್ಮ ತಳಮಳಗಳು ಹಾಗೂ ತುರ್ತಿನ ಅನುಗುಣವಾಗಿ ಕುವೆಂಪುರವರನ್ನು ಆವಿಷ್ಕಾರ ಮಾಡಿಕೊಳ್ಳುತ್ತಲೇ ಬಂದಿರುವುದರಿಂದ ಅವರು ಎಲ್ಲರಿಗೂ ಸಮಕಾಲೀನರಾಗಿದ್ದಾರೆ. ನಮ್ಮ ಕಾಲದ ತೀವ್ರವಾದ ಬಿಕ್ಕಟ್ಟೆಂದರೆ, ಅದನ್ನು ಕುವೆಂಪು ಅವರ ಮಾತುಗಳಲ್ಲೇ ಹೇಳುವುದಾದರೆ ಮತಿಯ ಬದಲಾಗಿ ಮತವನ್ನು ಅತಾರ್ಕಿಕವಾಗಿ, ಆಕ್ರಮಣಕಾರಿಯಾಗಿ ಹಾಗೂ ಹಿಂಸಾತ್ಮಕವಾಗಿ ಬೆನ್ನುಹತ್ತಿರುವುದು. 'ನೂರು ಮತಗಳ ನೂಕಾಚೆ ದೂರ' ಎಂದಾಗ ಕುವೆಂಪು ಮತವೆಂದರೆ ಕೇವಲ ಧರ್ಮವೆಂದು ವ್ಯಾಖ್ಯಾನಿಸಲಿಲ್ಲ. ಯಾವುದರ ಬಗ್ಗೆ ಕುರುಡು ನಂಬಿಕೆಯನ್ನು ಬೆಳೆಸಿಕೊಳ್ಳುತ್ತೇವೆಯೋ, ನಮ್ಮ ವಿವೇಕವನ್ನು ಬದಿಗಿಟ್ಟು ತೀವ್ರ ಭಾವುಕತೆಯ ಭ್ರಮೆಯಲ್ಲಿ ಒಪ್ಪಿಕೊಳ್ಳುತ್ತೇವೆಯೋ ಅದನ್ನೇ ಅವರು ಮತವೆಂದು ಕರೆದಿದ್ದರು. ವಿಜ್ಞಾನ ದೀವಿಗೆಯೆಂದು ಅವರು ಕರೆದದ್ದು ಪೊಳ್ಳು ಘೋಷಣೆಯಾಗಿರಲಿಲ್ಲ. ಅವರ ಮಾತಿನಲ್ಲಿ ಅದು ಮತಿಯಾಗಿತ್ತು.

ಇಂದು ಕುವೆಂಪು ಅವರು ಹಾಕಿಕೊಟ್ಟ ವಿಶ್ವಮಾನವತೆಯೆಡೆಗೆ ನಡೆಯುವುದೊಂದೇ ವಿಶ್ವದ ಎಲ್ಲ ನಾಗರಿಕರಿಗೂ ಇರುವ ದಾರಿ. ಇದಕ್ಕೆ ಕುವೆಂಪು ಹಾಕಿಕೊಟ್ಟ ಮಾರ್ಗಗಳನ್ನು ಇಂದಿನ ಅಗತ್ಯ ಮತ್ತು ಬಿಕ್ಕಟ್ಟುಗಳಿಗೆ ತಕ್ಕಂತೆ ಸ್ವೀಕರಿಸಿ ಅನುಸರಿಸಿ ನಡೆಯಬೇಕಿದೆ. ಮತ್ತೆ ಮತ್ತೆ ಅವರ ಬರಹಗಳನ್ನು ಎಡತಾಕಿ ಮುಂದುವರೆದು ಸಮಸಮಾಜವನ್ನು ಕಟ್ಟಿಕೊಳ್ಳಬೇಕಿದೆ.

**ಕೊನೆ ಟಿಪ್ಪಣಿಗಳು**

1. ಮನುಜ ಮತ ವಿಶ್ವ ಪಥ–ಕುವೆಂಪು, ಉದಯರವಿ ಪ್ರಕಾಶನ ಮೈಸೂರು–2004, ಪುಟ19
2. ಪಾಂಚಜನ್ಯ – ಕುವೆಂಪು, ಉದಯರವಿ ಪ್ರಕಾಶನ ಮೈಸೂರು– 1933, ಪುಟ 18
3. ತರುಣರಿರ ಎದ್ದೇಳಿ, ಕೋಗಿಲೆ ಮತ್ತು ಸೋವಿಯತ್ ರಷ್ಯಾ– ಕುವೆಂಪುಪುಟ 23
4. ತರುಣರಿರ ಎದ್ದೇಳಿ, ಕೋಗಿಲೆ ಮತ್ತು ಸೋವಿಯತ್ ರಷ್ಯಾ,, ಪುಟ 24 – ಕುವೆಂಪು
5. ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ–2 – ಕುವೆಂಪು
6. ಓ, ಬನ್ನಿ, ಸೋದರರೆ, ಬೇಗ ಬನ್ನಿ! ಪದ್ಯ, ಪುಟ 24 – ಕುವೆಂಪು
7. ಕುವೆಂಪು ನುಡಿತೋರಣ – ಬಿ.ಅರ್. ಸತ್ಯನಾರಾಯಣ, ರಾಷ್ಟ್ರಕವಿ ಕುವೆಂಮ ಪ್ರತಿಷ್ಠಾನ, ಶಿವಮೊಗ್ಗ, 2008
8. ಹೊಸಬಾಳಿನ ಗೀತೆ, ಕೋಗಿಲೆ ಮತ್ತು ಸೋವಿಯತ್ ರಷ್ಯಾ, ಪುಟ 24
9. ಯಾವ ಕಾಲದ ಶಾಸ್ತ್ರವೇನು ಹೇಳಿದರೇನು, ಕೋಗಿಲೆ ಮತ್ತು ಸೋವಿಯತ್ ರಷ್ಯಾ,ಪುಟ27
10. ಅಖಂಡ ಕರ್ನಾಟಕ, ಇಕ್ಷ್ಮ ಗಂಗೋತ್ರಿ, ಕವನ ಸಂಕಲನ, 1957, ಪುಟ23

**ಪರಾಮರ್ಶನ ಗ್ರಂಥಗಳು**


1. ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ – ಕುವೆಂಪು, ಉದಯರವಿ ಪ್ರಕಾಶನ ಮೈಸೂರು,2014
2. ಕೋಗಿಲೆ ಮತ್ತು ಸೋವಿಯಟ್ ರಷ್ಯಾ–ಕುವೆಂಪು ಉದಯರವಿ ಪ್ರಕಾಶನ ಮೈಸೂರು,2012
3. ವಿಚಾರ ಕ್ರಾಂತಿಗೆ ಆಹ್ವಾನ–ಕುವೆಂಪು ಕುವೆಂಪು, ಉದಯರವಿ ಪ್ರಕಾಶನ, ಮೈಸೂರು–2004
4. ಕುವೆಂಪು ನುಡಿತೋರಣ – ಬಿ.ಅರ್. ಸತ್ಯನಾರಾಯಣ, ರಾಷ್ಟ್ರಕವಿ ಕುವೆಂಮ ಪ್ರತಿಷ್ಠಾನ, ಶಿವಮೊಗ್ಗ, 2008


❖❖❖

# ಸುಬ್ರಹ್ಮಣ್ಯ ಭಾರತಿಯಾರ್ ಮತ್ತು ಕುವೆಂಪು

**ಡಾ. ಎಂ. ರಂಗಸ್ವಾಮಿ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮದ್ರಾಸು ವಿಶ್ವವಿದ್ಯಾಲಯ,
ಮರೀನಾ ಆವರಣ, ಚೆನ್ನೈ – 600 005

ಆಧುನಿಕ ತಮಿಳು ಸಾಹಿತ್ಯದ ಲೇಖಕರಲ್ಲಿ ಸುಬ್ರಹ್ಮಣ್ಯ ಭಾರತಿಯಾರ್ ಅವರು ಪ್ರಮುಖರಾಗಿದ್ದಾರೆ. ಸುಬ್ರಹ್ಮಣ್ಯ ಭಾರತಿಯವರು 1882ನೆಯ ಡಿಸೆಂಬರ್ 11ರಂದು ತಿರುನೆಲ್ವೇಲಿ ಜಿಲ್ಲೆಯ 'ಎಟ್ಟಿಯಪುರಂ' ಎಂಬ ಊರಲ್ಲಿ, ಚಿನ್ನಸ್ವಾಮಿ ಅಯ್ಯರ್, ಲಕ್ಷ್ಮಿ ಅಮ್ಮಾಳ್ ದಂಪತಿಯ ಮಗನಾಗಿ ಜನಿಸಿದರು. ಇವರಿಗೆ ತಾಯಿ ತಂದೆಯರು ಇಟ್ಟ ಹೆಸರು ಸುಬ್ರಮಣಿಯನ್. ಇವರು ಏಳನೆಯ ವಯಸ್ಸಿನಲ್ಲೇ ಕವಿತೆ ಬರೆಯುವ ಸಾಮರ್ಥ್ಯವನ್ನು ಪಡೆದರು. ಸುಬ್ರಹ್ಮಣ್ಯ ಅವರಿಗೆ ಹದಿನೈದು ವರ್ಷ ತುಂಬಿತೋ ಇಲ್ಲವೋ ಅಷ್ಟರಲ್ಲೇ ಅವರಿಗೆ ಮದುವೆಯಾಯಿತು. ಅವರ ಧರ್ಮಪತ್ನಿಯ ಹೆಸರು ಚೆಲ್ಲಮ್ಮಾಳ್. ಮುಂದಿನ ವರ್ಷಗಳಲ್ಲಿ ಕೇವಲ ಚಿಕ್ಕಂದಿನಲ್ಲೇ ಹೊಮ್ಮಿದ ಅಕಾಲ ಪ್ರೌಢಿಮೆ ವಿದ್ವತ್ತುಗಳಿಂದ ಅವರು ಎಟ್ಟಿಯಪುರದ ಗಣ್ಯರಲ್ಲೆಲ್ಲಾ ಜನಪ್ರಿಯ ವ್ಯಕ್ತಿಯಾದರು. ಒಮ್ಮೆ ಆಸ್ಥಾನದ ಒಂದು ಸಮಾರಂಭದಲ್ಲಿ ಅವರು ಪ್ರದರ್ಶಿಸಿದ ಅದ್ಭುತ ಕವಿತಾಸಾಮರ್ಥ್ಯಕ್ಕಾಗಿ ಅವರಿಗೆ 'ಭಾರತಿ' ಎಂಬ ಬಿರುದು ದೊರೆಯಿತು. ಇದು ಅವರ ಜೀವನದಲ್ಲಿ ಒಂದು ಚಿರಸ್ಮರಣೀಯವಾದ ಕ್ಷಣ. ಅದುವರೆಗೆ 'ಎಟ್ಟಿಯಪುರಂ ಸುಬ್ಬಯ್ಯ' ಎಂದು ಕರೆಸಿಕೊಳ್ಳುತ್ತಿದ್ದ ಹುಡುಗ, ಅಲ್ಲಿಂದ ಮುಂದೆ 'ಭಾರತಿ' ಎಂಬ ಹೆಸರನ್ನು ಪಡೆದರು. ಅಂದಿನಿಂದ ಜನರು ಅವರನ್ನು ಪ್ರೀತಿಯಿಂದ ಸುಬ್ರಹ್ಮಣ್ಯ ಭಾರತಿಯೆಂದೂ ಕರೆದರು. ಈಗ ಅವರು ಪ್ರಪಂಚದಲ್ಲೆಲ್ಲಾ ಹರಡಿರುವ ಲಕ್ಷಾಂತರ ಜನ ತಮಿಳುಪ್ರಿಯರಿಗೆ 'ಭಾರತಿ' ಆಗಿದ್ದಾರೆ.

ಕಾಲಕ್ರಮೇಣ 1904ರ ನವೆಂಬರಿನಲ್ಲಿ ಭಾರತಿಯವರು 'ಸ್ವದೇಶ ಮಿತ್ರನ್' ಎಂಬ ಪತ್ರಿಕೆಯ ಉಪಸಂಪಾದಕರಾಗಿ ಸೇರಿದರು. ಈ ಪತ್ರಿಕೆಯ ಮೂಲಕ ಸಾಹಿತ್ಯ ಕೃಷಿಯಲ್ಲಿ ತೊಡಗಿದರು. 'ಸ್ವದೇಶ ಗೀತಂಗಳ್', 'ಜನ್ಮ ಭೂಮಿ' ಎಂಬ ದೇಶಭಕ್ತಿ ಕವಿತೆಗಳನ್ನು ಬರೆದರು. 'ಕಣ್ಣನ್ ಪಾಟ್ಟು (ಕೃಷ್ಣನ ಹಾಡು)', 'ಪಾಂಚಾಲೀ ಶಪಥಮ್(ಪಾಂಚಾಲಿಯ ಶಪಥ)', 'ಕುಯಿಲ್‌ಪಾಟ್ಟು (ಕೋಗಿಲೆಯ ಹಾಡು)' ಮೊದಲಾದ ಸುಪ್ರಸಿದ್ಧ ಗೀತರೂಪಗಳನ್ನೂ ಭಾವಗೀತಗಳನ್ನೂ ರಚಿಸಿದರು. 'ಚಂದ್ರಿನ್ ಕತ್ತೆ(ಚಂದ್ರಿಕೆಯ ಕಥೆ)' ಎಂಬ ಕಾದಂಬರಿಯನ್ನೂ 'ಸ್ವರ್ಣಕುಮಾರಿ', 'ಚಂದ್ರದೀವು(ಚಂದ್ರದ್ವೀಪ)', 'ಆರನೆಯ ಒಂದು', 'ಜ್ಞಾನರಥ' ಎಂಬ ಸಣ್ಣ ಕಥೆಗಳನ್ನೂ ರಚಿಸಿದ್ದಾರೆ. ಇವುಗಳಲ್ಲದೆ 'ಕುಳ್ಳಸ್ವಾಮಿಯರ್', 'ನವತಂತ್ರ ಕತೈಗಳ್'ಗಳನ್ನೂ ಬರೆದಿದ್ದಾರೆ. ಇವರ 'ಪಾಂಚಾಲಿ ಶಪಥಮ್' ಪ್ರಾಚೀನ ಕಥೆಗಳ ಮರು ವ್ಯಾಖ್ಯಾನದಲ್ಲಿ ಹೊಸಮಾರ್ಗ ಕಲ್ಪಿಸಿತು. ಹಾಗಾಗಿ ಭಾರತಿಯಾರ್ ಅವರು ಕವಿ, ಪ್ರಬಂಧಕಾರ, ರಾಜಕೀಯ ಪತ್ರಿಕೋದ್ಯಮಿ, ಅನುವಾದಕ, ಸಣ್ಣಕತೆಗಾರ, ಕಾದಂಬರಿಕಾರ – ಹೀಗೆ ಅವರು ತಮಿಳು ಸಾಹಿತ್ಯ ಕ್ಷೇತ್ರದಲ್ಲಿ ಬಹುಮುಖ ಪ್ರತಿಭೆಯುಳ್ಳವರಾಗಿದ್ದರು. ಒಟ್ಟಿನಲ್ಲಿ ಅವರೊಬ್ಬ ಪರಿಪೂರ್ಣ

ವಿದ್ವಾಂಸರೂ ಲೇಖನಿಯ ಮಂತ್ರವಾದಿಯೂ ಆಗಿದ್ದರು. ಅವರ ಪ್ರತಿಭೆಯು ತಾನು ಮುಟ್ಟಿದ ಎಲ್ಲಾ ಸಾಹಿತ್ಯರೂಪಗಳಿಗೂ ಪರಿವರ್ತನ ದೀಪ್ತಿಯನ್ನು ಒದಗಿಸಿತ್ತು. ಅವರನ್ನು ಹಿಂಬಾಲಿಸಿ ಆಧುನಿಕ ತಮಿಳಿನಲ್ಲಿ ಲೇಖಕರ ಒಂದು ಪೀಳಿಗೆಯೇ ಉದಯಿಸಿತು.

ಸುಬ್ರಹ್ಮಣ್ಯ ಭಾರತಿಯಾರ್ ಅವರು ಆಧುನಿಕ ತಮಿಳು ಕಾವ್ಯದ ಪಿತಾಮಹ. ಕಟ್ಟುಪಾಡುಗಳನ್ನೂ ಸಂಪ್ರದಾಯಗಳನ್ನೂ ಮೀರಿ, ಕವನಗಳನ್ನು ರಚಿಸಿದ ವೀರರು. ಭಾವನೆಯೂ ವಿಷಯವೂ ಕವನಗಳ ಮುಖ್ಯ ಅಂಶಗಳೆಂದು ಭಾವಿಸಿದವರು. ಆದುದರಿಂದ ವ್ಯಾಕರಣ ವಿಧಿಗಳನ್ನು ಮೀರಿ ಜನರ ಭಾಷೆಯನ್ನು ಕಾವ್ಯದ ಭಾಷೆಯಾಗಿ ಬಳಸಿದರು. ಅನಂತರ ಬಂದವರೆಲ್ಲರೂ ಭಾರತೀಯಾರ್ ಅವರ ಮಾರ್ಗವನ್ನೂ ಅನುಸರಿಸಿ ಕವಿತೆಗಳನ್ನು ರಚಿಸಿದರು. ಆದುದರಿಂದ ಭಾರತಿ ಹೊಸ ಪರಂಪರೆಯ ಹರಿಕಾರರೆಂದು ಗೌರವಿಸಲ್ಪಟ್ಟರು.

ಭಾರತಿಯಾರರಂತೆಯೇ ಕುವೆಂಪುರವರು ಕನ್ನಡದ ಶ್ರೇಷ್ಠ ಸಾಹಿತಿಗಳಲ್ಲಿ ಒಬ್ಬರು. 1929ರಲ್ಲಿ ಅವರು ಮೊಟ್ಟಮೊದಲ ಕವನ ಸಂಕಲನ 'ಕೊಳಲು' ಪ್ರಕಟಪಡಿಸಿದರು. ಅನಂತರ 1936ರಲ್ಲಿ 'ಚಿತ್ರಾಂಗದ' ಎಂಬ ಕಾವ್ಯವನ್ನು ರಚಿಸಿದರು. 1938ರಲ್ಲಿ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಎಂಬ ಬೃಹತ್ ಕಾದಂಬರಿಯನ್ನು ರಚಿಸಿದರು. ಹೀಗೆ ಕವಿ, ಕಾದಂಬರಿಕಾರ, ನಾಟಕಕಾರ, ವಿಮರ್ಶಕ ಎಂಬ ಸಾಹಿತ್ಯದ ಬಹು ಪ್ರಕಾರಗಳಲ್ಲಿ ಮಹತ್ವಪೂರ್ಣವಾದ ಸಾಧನೆಯನ್ನು ಮಾಡಿದವರು. ತಮ್ಮ ಸಮೃದ್ಧ ಸಾಹಿತ್ಯದಿಂದ ಕನ್ನಡ ಸಾಹಿತ್ಯದ ದಿಗಂತವನ್ನು ವಿಸ್ತರಿಸಿದವರು. ಕನ್ನಡ, ಕರ್ನಾಟಕ ಕುವೆಂಪು ಅವರ ಸಾಹಿತ್ಯದ ಪ್ರಮುಖ ವಸ್ತುಗಳಾಗಿವೆ, ಶಕ್ತಿಗಳಾಗಿವೆ. ಇವರ ಸಾಹಿತ್ಯದಲ್ಲಿ ಕನ್ನಡ ನಾಡು ಮತ್ತು ನುಡಿ ಆರಾಧ್ಯ ವಸ್ತುಗಳಾದವು. ಈ ಹಿನ್ನೆಲೆಯಲ್ಲಿ ಭಾರತಿಯಾರ್ ಮತ್ತು ಕುವೆಂಪುರವರು ದೇಶಪ್ರೇಮ ಮತ್ತು ಭಾಷಾಪ್ರೇಮವನ್ನು ತಂತಮ್ಮ ಕವಿತೆಗಳಲ್ಲಿ ಹೇಗೆ ವ್ಯಕ್ತಪಡಿಸಿದ್ದಾರೆಂಬದನ್ನು ಅವರಿಬ್ಬರ ಕವಿತೆಗಳ ಮೂಲಕ ಗಮನಿಸಬಹುದು.

ಭಾರತಿಯಾರ್ ಅವರು ಅನುವಾದಿಸಿರುವ 'ವಂದೇ ಮಾತರಂ' 'ಜಯ ಭಾರತ' ಗೀತಗಳೆರಡೂ ತಂತಮ್ಮ ರೀತಿಯಲ್ಲಿ ಸ್ವಂತ ರಚನೆಗಳೇ ಆಗಿವೆ. 'ವಂದೇ ಮಾತರಂ' ಗೀತದಲ್ಲಿ

**'ಮಾತೆಯೆ, ವಂದಿಸುವೆವು ನಿನಗೆ**
**ವಿಜಯದ ಮಾತೆಯೆ,**
**ವಂದಿಸುವೆವು ನಿನಗೆ!**
**ಜಯ ಹಿಂದ್! ಜಯ ಭಾರತ!**
**ಜಯ ಭಾರತ!**
**ಜಯ! ಜಯ!**
**ವಂದೇ ಮಾತರಂ**
**ಆರ್ಯಾವರ್ತದ**
**ಗಂಡು, ಹೆಣ್ಣು, ದಿವಿಜರು**
**ಸಾಲುಗಟ್ಟಿ ಹಾಡುವರು**
**ಜಯೋನ್ಮತ್ತ ಮಂತ್ರವನು**

**ವಂದೇ ಮಾತರಂ**

**ಮನದ ತುಂಬ ನೋವಿನಲ್ಲಿ**

**ಸುರುಟಿಕೊಂಡ ದೇಹದಲ್ಲಿ**

**ರಾಷ್ಟ್ರಭಕ್ತರೀಗಲೂ**

**ಆಳದಿಂದ ಗರ್ಜಿಸುವರು**

**ವಂದೇ ಮಾತರಂ**

**ಜಯವೆ ನಮ್ಮದಾಗಲಿ**

**ಸೋಲೆ ಸಾವೆ ನಮಗಿರಲಿ**

**ನಿಲ್ಲುವೆವು ಒಂದುಗೂಡಿ**

**ಹಾಡುವೆವು ಮಂತ್ರವನು**

**ವಂದೇ ಮಾತರಂ**

ಎನ್ನುವಲ್ಲಿ ತನ್ನ ಮಕ್ಕಳ ರಕ್ಷಣೆಯ ಭಾರವನ್ನು ಹೊತ್ತಿರುವ ತಾಯಿಯಾಗಿದ್ದಾಳೆ. ಏಕೀಕೃತ ಭಾರತ ಎನ್ನುವ ಕಲ್ಪನೆ ಭಾರತಕ್ಕೆ ಹೊಸತೇನಲ್ಲ. ವೇದಗಳ ಕಾಲದಲ್ಲೂ ಇಂಥಾ ಕಲ್ಪನೆಯೇ ಇತ್ತು ಎಂಬುದು ಈ ಕವಿತೆಯ ಸಾಲುಗಳಿಂದ ತಿಳಿದು ಬರುತ್ತದೆ. ಮಾತ್ರವಲ್ಲದೆ, ಭಾರತಿಯಾರ್ ಅವರು 'ಸ್ವದೇಶ ಗೀತಂಗಳ್', 'ಜನ್ಮಭೂಮಿ' ಎಂಬ ದೇಶಭಕ್ತಿ ಕವಿತೆಗಳನ್ನು ಸ್ವತಂತ್ರವಾಗಿ ರಚಿಸಿ ದೇಶಾಭಿಮಾನವನ್ನು ಮನೋಜ್ಞವಾಗಿ ವ್ಯಕ್ತಪಡಿಸಿದ್ದಾರೆ.

ಕುವೆಂಪು ಅವರು ವಿದ್ಯಾರ್ಥಿಯಾಗಿದ್ದಾಗಲೇ 'ಕರ್ನಾಟಕ ರಾಷ್ಟ್ರಗೀತೆ' ಎಂಬ ಕವನವನ್ನು ರಚಿಸಿದರು. ಮುಂದೆ ಅದು ಪರಿಷ್ಕಾರಗೊಂಡು 'ಜಯ ಹೇ ಕರ್ನಾಟಕ ಮಾತೆ' ಎಂಬ ನಾಡಗೀತೆಯಾಗಿ ಪರಿಣಮಿಸಿತು. ಕುವೆಂಪು ಅವರ 'ಕರ್ನಾಟಕ ಪ್ರೇಮ'ವು ಭಾರತದ ಭಾವೈಕ್ಯಕ್ಕೆ ಭಂಗತರುವಂಥದಲ್ಲ; ಕರ್ನಾಟಕತ್ವ ಭಾರತೀಯತ್ವಕ್ಕೆ ಎಂದಿಗೂ ಎದುರು ನಿಲ್ಲುವುದಿಲ್ಲವೆಂದು ಘೋಷಿಸಿದರು. ಅವರು ರಚಿಸಿದ ರಾಷ್ಟ್ರಗೀತೆಯಲ್ಲಿರುವುದಾದರೂ ಅದೆ:

**'ಜಯ್ ಭಾರತ ಜನನಿಯ ತನುಜಾತೆ**

**ಜಯ ಹೇ ಕರ್ಣಾಟಕ ಮಾತೆ!'**

ಈ ಕವಿತೆಯ ಬಗ್ಗೆ ಕುವೆಂಪು ಅವರೇ ತನ್ನ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದ್ದಾರೆ. "ಕೇರಳಾಭಿಮಾನ, ಕರ್ನಾಟಕಾಭಿಮಾನ, ಆಂಧ್ರಾಭೀಮಾನ ಇತ್ಯಾದಿ ದೇಶಭಾಷಾ ಕ್ಷೇತ್ರಾಭಿಮಾನಗಳು ದ್ವೇಷಕ್ಕಾಗಲೀ, ಅಸಹನೆಗಾಗಲೀ ಅನ್ಯಾಯಕ್ಕಾಗಲೀ ಆಕ್ರಮನ ಬುದ್ಧಿಗಾಗಲೀ ಎಡೆಗೊಡದೆ ಭಾರತಾಭಿಮಾನದ ಆಶ್ರಯದಲ್ಲಿ, ವೈಯಕ್ತಿಕವಾದ ಮತ್ತು ಅನುಚಿತವಾದ ಸ್ವಾರ್ಥತೆಗಳನ್ನು ತ್ಯಜಿಸಿ ತಂತಮ್ಮ ಏಳಿಗೆಯನ್ನು ಸಾಧಿಸಬೇಕು. ಏಕೆಂದರೆ ಸರ್ವಕ್ಷೇಮದ ಪ್ರಣಾಳದಲ್ಲಿಯೇ ಸರ್ವಕ್ಷೇಮವೂ ಹರಿದು ಬರುತ್ತದೆ... ಕರ್ನಾಟಕ ಮಾತೆಗೆ ಸಲ್ಲುವ ಜಯಕಾರ ಆಕೆ ಭಾರತ ಜನನಿಯ ತನುಜಾತೆಯಾಗಿರುವುದರಿಂದಲೆ. ಅಂಗೋದ್ಭವೆಯಾಗಿ ವಿನಾ ಕರ್ನಾಟಕಕ್ಕೆ ಬೇರೆಯ ಅಸ್ತಿತ್ವವೆಲ್ಲಿ?... ನಾನು ರಾಜ್ಯದ ದೃಷ್ಟಿಯಿಂದ ಕರ್ನಾಟಕದವನು; ಭಾಷಾದೃಷ್ಟಿಯಿಂದ ಕನ್ನಡಿಗನು; ಆದರೆ ಸಂಸ್ಕೃತಿ ದೃಷ್ಟಿಯಿಂದ ಮತ್ತು ರಾಷ್ಟ್ರದೃಷ್ಟಿಯಿಂದ ಭಾರತೀಯನು. ನನ್ನ ಕರ್ನಾಟಕ ಭಾರತೀಯತ್ವಕ್ಕೆ ಎಂದಿಗೂ ಎದುರು ನಿಲ್ಲುವುದಿಲ್ಲ"

ಇನ್ನು ಭಾಷಾಭಿಮಾನದ ಇವರಿಬ್ಬರ ನಿಲುವುಗಳನ್ನು ಗಮನಿಸಬಹುದು. ಭಾರತಿಯಾರ್ ಅವರ ಕವನಗಳ ಜೀವನಾಡಿಯಾಗಿ ಭಾಷಾಭಿಮಾನ ಕಂಡು ಬರುತ್ತದೆ. "ತಮಿಳು ಭಾಷೆಯನ್ನು ಕುರಿತು ಹೇಳುವಾಗ ನಾನು ಅರಿತಿರುವ ಭಾಷೆಗಳಲ್ಲಿ ತಮಿಳು ಭಾಷೆಯಂತೆ ಸವಿಯಾದ ಭಾಷೆಯನ್ನು ಎಲ್ಲೂ ಕಂಡಿಲ್ಲ" ಎಂದು ತಮಿಳು ಭಾಷೆ ಉತ್ತಮವಾದ ಭಾಷೆಯೆನ್ನುತ್ತಾರೆ. ಇಷ್ಟೊಂದು ಉತ್ತಮವಾದ ತಮಿಳು ಭಾಷೆ ಇಂದು ಅಭಿವೃದ್ಧಿ ಇಲ್ಲದೆ ಸೊರಗಿ ಸಾಯುವ ಸ್ಥಿತಿಯಲ್ಲಿರುವುದನ್ನು ಕಂಡು ತಮಿಳರನ್ನು ಎಚ್ಚರಿಸುತ್ತಾರೆ. ಅವರ ಎಚ್ಚರಿಕೆಯಲ್ಲಿ ತಮಿಳಿನ ಅಂದಿನ ಪರಿಸ್ಥಿತಿಯನ್ನು ಅದರಿಂದ ಆಗಿರುವ ಕೇಡುಗಳನ್ನು ವಿವರಿಸುವುದಲ್ಲದೆ ಆ ಅನಾಹುತದಿಂದ ತಮಿಳು ಭಾಷೆಯನ್ನು ಕಾಪಾಡುವ ಮಾರ್ಗವನ್ನೂ ಸೂಚಿಸುತ್ತಾರೆ. ತಮಿಳಿನ ಅಂದಿನ ಪರಿಸ್ಥಿತಿಯನ್ನು ಕುರಿತು ಹೇಳುವಾಗ ವಿಪಶ್ಚಿಮ ದೇಶದ ಭಾಷೆಗಳಲ್ಲಿ ಪಂಚಭೂತಗಳ ಸೂಕ್ಷ್ಮತೆಯನ್ನು ವಿವರಿಸುವ ಹೊಚ್ಚ ಹೊಸ ಕೃತಿಗಳು ದಿನೇ ದಿನೇ ಬರುತ್ತಿವೆ. ಅಂತಹ ಕೃತಿಗಳು ತಮಿಳು ಭಾಷೆಯಲ್ಲಿ ಇಲ್ಲ. ಆದುದರಿಂದ ಅವುಗಳನ್ನು ತಮಿಳು ಭಾಷೆಯಲ್ಲಿ ವಿವರಿಸುವುದಕ್ಕೆ ಆಗುವುದಿಲ್ಲ. ಯಾಕೆಂದರೆ ಅವುಗಳನ್ನು ವಿವರಿಸುವ ಶಕ್ತಿ ತಮಿಳು ಭಾಷೆಗೆ ಇಲ್ಲಹಿ ಎಂದು ವಿವರಿಸುತ್ತಾರೆ.

ಇಂತಹ ಪರಿಸ್ಥಿತಿಯಿಂದ ತಮಿಳು ಭಾಷೆಗೆ ಆಗುವ ಕೇಡುಗಳನ್ನು ಗುರುತಿಸುವಾಗ "ಈ ಪರಿಸ್ಥಿತಿಯೇ ಮುಂದುವರಿದರೆ ಮುಂದೆ ತಮಿಳು ಭಾಷೆ ಮೆಲ್ಲನೆ ಸಾಯುವುದೆಂದೂ, ಅದರ ಸ್ಥಾನವನ್ನು ಪಶ್ಚಿಮ ದೇಶದ ಭಾಷೆಗಳು ಆಕ್ರಮಿಸಿಕೊಳ್ಳುವವು ಎಂದೂ ವಿವರಿಸಿ ಇದನ್ನು ತಡೆಯುವದಕ್ಕೆ ತಮಿಳರು ಎಂಟು ದಿಕ್ಕುಗಳಿಗೂ ಹೋಗಿ ಅಲ್ಲಿರುವ ಕಲಾ ಸಂಪತ್ತನ್ನು ಇಲ್ಲಿಗೆ ತಂದು ತಮಿಳು ಭಾಷೆಯನ್ನು ಶ್ರೀಮಂತ ಭಾಷೆಯಾಗಿ ಮಾಡಬೇಕೆಂದು" ತಿಳಿಸುತ್ತಾರೆ. ಮತ್ತೆ ಅವರು ತಮಿಳು ಭಾಷೆಯನ್ನು ಕಾಪಾಡುವ ಮಾರ್ಗವನ್ನು ಕುರಿತು ವಿವರಿಸುವಾಗ "ಹೊರದೇಶದ ಪ್ರಸಿದ್ಧವಾದ ವಿದ್ವಾಂಸರ ಕೃತಿಗಳನ್ನು ತಮಿಳು ಭಾಷೆಗೆ ಅನುವಾದಿಸಬೇಕು; ಸಾಯದ ಶ್ರೇಷ್ಠವಾದ ಹೊಸ ಸೃಜನಶೀಲ ಕೃತಿಗಳನ್ನು ತಮಿಳು ಭಾಷೆಯಲ್ಲಿ ರಚಿಸಬೇಕು" ಎಂದು ಸ್ಪಷ್ಟಪಡಿಸುತ್ತಾರೆ.

ಭಾರತಿಯಾರವರಂತೆಯೇ ಕನ್ನಡ ನುಡಿಯ ಬಗ್ಗೆ ಅಪಾರವಾದ ಅಭಿಮಾನ ಕುವೆಂಪು ಅವರಲ್ಲಿ ಅಭಿವ್ಯಕ್ತಗೊಂಡಿದೆ. ಕುವೆಂಪು ಅವರ ಎಲ್ಲಾ ಸಾಹಿತ್ಯದ ಒಳ ಧ್ವನಿಗಳು ಕನ್ನಡಿಗರ ಒಳಿತು ಉದ್ಧಾರಗಳನ್ನೇ ಒಳಗೊಂಡಿರುವುದು ಅರ್ಥಪೂರ್ಣವಾಗಿದೆ.

**"ತನ್ನ ನಾಡಿನ ನಡೆನುಡಿ,–ತನ್ನ ತಾಯ್ನುಡಿ**
**ಎಂದು ಹಿಗ್ಗದ ಮಾನವನಿದ್ದರೆ**
**ತಾವಿಲ್ಲವನಿಗೆ ನಾಕದಲಿ–ವೀರ ಲೋಕದಲಿ"**

ತನ್ನ ದೇಶ, ತನ್ನ ಭಾಷೆಗಳ ಬಗ್ಗೆ ಹೆಮ್ಮೆ ಪಡದವನಿಗೆ ನರಕದಲ್ಲೂ ಸ್ಥಾನವಿಲ್ಲ ಎಂಬುದು ಕುವೆಂಪು ಅವರ ಅಭಿಮತವಾಗಿದೆ. ತಾಯ್ನುಡಿಗಾಗಿ ದುಡಿದು ಮಡಿಯುವಂತೆ ಕನ್ನಡಿಗರಿಗೆ ಕವಿ ಕುವೆಂಪು ಪ್ರಾರ್ಥಿಸುತ್ತಾರೆ. ಪಂಪ–ರನ್ನರ, ಬಸವ–ಹರಿಹರರ, ನಾರಣಪ್ಪ–ಲಕ್ಷ್ಮೀಶರ ಹಿರಿಮೆಯನ್ನು ಮರೆತೆಯಾದರೆ, ಅವರ ಕನ್ನಡವನ್ನು ಮರೆತೆಯಾದರೆ ಅದು ಸಾವಿಗೆ ಸಮಾನ ಎನ್ನುತ್ತಾರೆ ಕುವೆಂಪು.

**"ಎಲ್ಲಾದರು ಇರು; ಎಂತಾದರು ಇರು;**

**ಎಂದೆಂದಿಗು ನೀ ಕನ್ನಡವಾಗಿರು**

.. .. .. .. .. .. .. .. .. .. .. .. .. .. ..

**ಎಂದೆಂದಿಗು ತಾನ್– ಕನ್ನಡವೇ ಸತ್ಯ ।**

**ಕನ್ನಡವೇ ನಿತ್ಯ ।"**

ಹೊಟ್ಟೆ ಬಟ್ಟೆಗಳ ಪೂರೈಕೆಯೊಂದೇ ಮಾನವನ ಸಾಧನೆಯಾಗಬಾರದು. ನಾಡು–ನುಡಿ ನೆಲ, ಜಲ, ಸಂಸ್ಕೃತಿ, ಆಚಾರ–ವಿಚಾರಗಳ ಕುರಿತಾದ ಅಭಿಮಾನ ಆತನಲ್ಲಿ ಮೂಡಬೇಕು. "ಒಬ್ಬ ಕನ್ನಡಿಗ ಅಂಡೀಸ್ ಪರ್ವತವನ್ನು ಏರುವಾಗ ಸಹ್ಯಾದ್ರಿ ಸುಖವನ್ನು ಅನುಭವಿಸಬೇಕು; ಥೇಮ್ಸ್ ನದಿಯ ನೀರು ಕಾವೇರಿಯ ನೆನಪು ತರಬೇಕು" ಜಗತ್ತಿನ ಯಾವ ಮೂಲೆಯಲ್ಲಿ ಇದ್ದರೂ ಸಹ ಕನ್ನಡಿಗ ಕನ್ನಡ ಪ್ರಜ್ಞೆಯಿಂದ ವಂಚಿತನಾಗಬಾರದು ಎಂಬುದು ಕವಿಯ ಆಶಯವಾಗಿದೆ.

**"ಕನ್ನಡಕೆ ಹೋರಾಡು  ಕನ್ನಡದ ಕಂದಾ**

**ಕನ್ನಡವ ಕಾಪಾಡು ನನ್ನ ಆನಂದಾ"**

ಹುಟ್ಟುತ್ತಲೇ ಬರುವ ಗುಣ ಕೊನೆಯವರೆಗೂ ಶಾಶ್ವತವಾಗಿ ಉಳಿಯುತ್ತದೆ. ಹಾಗಾಗಿ ಕವಿ ಕುವೆಂಪು ಅವರು ಹಸುಗೂಸಿಗೆ ಹಾಲೆರೆಯುವಾಗ, ಜೋಗುಳ ಹಾಡಿ ಮಲಗಿಸುವಾಗ ಕನ್ನಡ ಹಾಡನ್ನು ಹಾಡಬೇಕು ಎನ್ನುತ್ತಾರೆ. ಮಕ್ಕಳ ಧಮನಿ ಧಮನಿಗಳಲ್ಲಿ ಕನ್ನಡ ಡಿಂಡಿಮ ಪ್ರತಿಬಿಂಬಿಸಬೇಕು; ಅವರ ಅಂಗಾಂಗಗಳಲ್ಲಿ ಕನ್ನಡ ಶಕ್ತಿ ಪ್ರವಹಿಸಬೇಕು; ಅವರ ಕನಸ್ಸು ನನಸ್ಸುಗಳಲ್ಲಿ ಕನ್ನಡದ ಕೆಚ್ಚು ಮೂಡಬೇಕು. ಅಂಥವರು ಮಾತ್ರ ಮುಂದೆ ಕನ್ನಡ ಸೇನಾನಿಯಾಗುತ್ತಾರೆ ಎಂಬುದು ಕುವೆಂಪು ಅವರ ಅಭಿಪ್ರಾಯವಾಗಿತ್ತು. "ಕನ್ನಡನಾಡು ಬೇಕಾಗಿರುವುದು ಕನ್ನಡ ಜನತೆಗಾಗಿ. ಕನ್ನಡ ಜನರ ಉದ್ಧಾರವಿರುವುದು ಕನ್ನಡ ನುಡಿಯಲ್ಲಿ. ಕನ್ನಡ ಭಾಷೆ ಮತ್ತು ಜನರು ಇವರ ಸಂಬಂಧದಿಂದ ಕನ್ನಡ ನಾಡು ಸಮೃದ್ಧವಾಗುತ್ತದೆ. ಕರ್ನಾಟಕವೆಂದರೆ ಅದೊಂದು ಹೆಸರಲ್ಲ; ಅದರಲ್ಲಿ ಚೈತನ್ಯ ಅಡಗಿದ್ದು ಅದೇ ಭಾಷೆಯಾಗಿದೆ. ನುಡಿಯೊಲ್ಮೆಯೊಂದಿದ್ದರೆ ದೇಶದೇವಿಯ ಕಟ್ಟಡದ ಕಲ್ಲುಗಳ ಬೆಸುಗೆಗೆ ವಜ್ರಗಾರೆಯಾಗುತ್ತದೆ. ಆ ಬಲ್ಮೆ ಮಡಿದಂದು ಕಟ್ಟಡದ ಕಲ್ಲುಗಳು ಸಡಿಲಗೊಂಡು ಗುಡಿ ಕೆಳಕ್ಕುರುಳಿ ನೆಲಸಮವಾಗುತ್ತದೆ" ಎಂದು ಕನ್ನಡ ಭಾಷೆಯ ಬಗ್ಗೆ ಮನಮುಟ್ಟುವಂತೆ ಕುವೆಂಪುರವರು ಹೇಳುತ್ತಾರೆ.

ಹೀಗೆ ಸುಬ್ರಹ್ಮಣ್ಯ ಭಾರತಿಯಾರ್ ಮತ್ತು ಕುವೆಂಪು ಇವರಿಬ್ಬರೂ ಹೆಚ್ಚು ಕಡಿಮೆ ಒಂದೇ ರೀತಿಯ ಕಾಲಘಟ್ಟದ ಪರಿಸ್ಥಿತಿಯಲ್ಲಿ ಬಾಳಿ ಬದುಕಿದವರು. ಇವರಿಬ್ಬರನ್ನೂ ಪ್ರಭಾವಿಸಿದ್ದ ಭಾರತದ ರಾಜಕೀಯ, ಸಾಮಾಜಿಕ ಸಂದರ್ಭವು ವಿಶಿಷ್ಟವಾಗಿತ್ತು. ಭಾರತಿಯಾರ್ ಮತ್ತು ಕುವೆಂಪುರವರು ಭಾರತ ದೇಶದ ರಾಷ್ಟ್ರಕವಿಗಳೆನಿಸಿಕೊಂಡವರು. ಮಾತ್ರವಲ್ಲದೆ, ಭಾರತ ಸ್ವಾತಂತ್ರ್ಯದ ಜ್ವಾಲೆಯನ್ನು ದೇಶದ ಉದ್ದಕ್ಕೂ ಪಸರಿಸಿದವರು. ಕೆಂಡದಂತಹ ಕವಿತೆಗಳಿಂದ ನಿದ್ರಿಸುತ್ತಿರುವ ಜನರು ತಂತಮ್ಮ ಮೈಚಳಿಯನ್ನು ಬಿಟ್ಟು ಎಚ್ಚರಗೊಳ್ಳುವಂತೆ ಮಾಡಿದವರು. ಜನರ ಮನಸ್ಸಿನಲ್ಲಿ ಸ್ವಾತಂತ್ರ್ಯದ ದಾಹವನ್ನುಂಟುಮಾಡಿ, ಎದ್ದೇಳುವಂತೆ ಮಾಡಿದವರು. ಸ್ವಾತಂತ್ರ್ಯವೆಂಬ ಯಾಗವನ್ನು ಪೂರೈಸುವುದಕ್ಕೆ ಜನರ ಒಗ್ಗಟನ್ನು ಒತ್ತಿ ಹೇಳಿದವರು. ದೇಶದ ಹಿಂದಿನ ಹಿರಿಮೆಯನ್ನೂ ಇಂದಿನ ಅವನತಿಯನ್ನೂ ಕಂಡು ಮನಸ್ಸು ನೊಂದು ಕವಿತೆಗಳನ್ನು

ರಚಿಸಿದವರು. ಮಾತೃಭಾಷಾ ಶಿಕ್ಷಣವನ್ನು ಒತ್ತಾಯಿಸಿದವರು. ಸ್ತ್ರೀಯರ ಏಳಿಗೆಯನ್ನು ಬಯಸಿದವರು. ಮಾತ್ರವಲ್ಲದೆ, ಇವರಿಬ್ಬರೂ ದೇಶಪ್ರೇಮ ಮತ್ತು ಭಾಷಾಪ್ರೇಮವನ್ನು ತಂತಮ್ಮ ಕವಿತೆಗಳಲ್ಲಿ ಮನೋಜ್ಞವಾಗಿ ವ್ಯಕ್ತಪಡಿಸಿದ್ದಾರೆ

**ಗ್ರಂಥ ಋಣ**


1. ಹ.ಕ.ರಾಜೇಗೌಡ(ಸಂ.), ಕುವೆಂಪು ಸಾಹಿತ್ಯ ಲೋಕ–3, ಕುವೆಂಪು ಅಧ್ಯಯನ ಕೇಂದ್ರ, ಬೆಂಗಳೂರು, 1984.
2. ಕುವೆಂಪು, ವಿಚಾರ ಕ್ರಾಂತಿಗೆ ಆಹ್ವಾನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1987.
3. ಎನ್.ಬೋರಲಿಂಗಯ್ಯ(ಸಂ.), ಕ್ರಾಂತಿ ಕಹಳೆ, ಪೃಥ್ವಿ ಪ್ರಕಾಶನ, ಮೈಸೂರು, 1977.
4. ಕೆ.ಎಸ್.ನರಸಿಂಹಸ್ವಾಮಿ(ಅನು.), ಸುಬ್ರಹ್ಮಣ್ಯ ಭಾರತಿ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ನವದೆಹಲಿ, 1971.
5. ನ.ಮುನಿಸ್ವಾಮಿ, ಮು. ಪಸುಮಲೈ ಅರಸು(ಅನು.) ಮಹಾಕವಿ ಸುಬ್ರಹ್ಮಣ್ಯ ಭಾರತಿಯವರ ಕವಿತೆಗಳು,
   ಬೆಂಗಳೂರು ತಮಿಳು ಸಂಘ, ಬೆಂಗಳೂರು, 1981.
6. ಡಾ.ಎಂ.ರಂಗಸ್ವಾಮಿ, ತಮಿಳು ಸಾಹಿತ್ಯ : ಒಂದು ವಾರೆನೋಟ, ವಿಷ್ಣುಪ್ರಿಯಾ ಪ್ರಕಾಶನ, ಗೋಪಿನಾಥಂ, 2011.


❖❖❖

.

ಆತ ಬರುವನೆ
ರಾಗದೊಡೆಯನು
ಮಾತು ಚರ್ಚೆಯು ನಡೆದಿದೆ।
ಬಾರದುಳಿದರೆ
ನಷ್ಟವೇನಿದೆ
ಗಾನ ಎಲರಲಿ ಬೆರೆತಿದೆ॥

# ಒಗಟುಗಳ ಉಗಮ, ವಿಕಾಸ ಹಾಗೂ ಲಕ್ಷಣ

**ಡಾ. ರಂಗಲಕ್ಷ್ಮಿ ಪಿ.ಎ.**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಲಾಲ್ ಬಹದ್ದೂರ್ ಶಾಸ್ತ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆರ್.ಟಿ.ನಗರ, ಬೆಂಗಳೂರು

ಜನಪದ ಸಾಹಿತ್ಯದ ಪ್ರಮುಖ ರೂಪಗಳಾದ ಹಾಡು, ಹಾಡ್ಗತೆ, ಕಥೆ, ಗಾದೆಗಳಿದ್ದಂತೆ ಒಗಟುಗಳು ಕೂಡ ಒಂದು ಸ್ವತಂತ್ರ್ಯ ಅಸ್ತಿತ್ವವುಳ್ಳ ಪ್ರಕಾರ. ದೇಸೀ ಪರಂಪರೆಯಲ್ಲಿ ಅದರ ಸ್ಥಾನ ಗಟ್ಟಿಯಾದುದು. ಅದರ ಜನಪ್ರಿಯತೆಯಿಂದಾಗಿಯೇ ಅದು ಹಲವು ಸಂವಾದಿ ಪದಗಳನ್ನು ಹೊಂದಿದೆ. ಸಂಸ್ಕೃತದಲ್ಲಿ ಬ್ರಹ್ಮೋದ್ಯ, ಪ್ರಶ್ನೆ, ಕೂಟ, ಪ್ರಹೇರಿಕಾ, ವಿವಾದ, ಸಮಸ್ಯಾ ಮುಂತಾದ ಪದಗಳು ಈ ಅರ್ಥದಲ್ಲಿ ಪ್ರಚುರವಾಗಿವೆ. ಇಂಗ್ಲೀಷಿನಲ್ಲಿ Riddle ಎಂದು ಹೆಸರಿದೆ. ಅದೇ ರೀತಿ ಕನ್ನಡದಲ್ಲಿ, ಒಗಟನ್ನು ಸೂಚಿಸಲು ಅನೇಕ ಶಬ್ದಗಳನ್ನು ಬಳಸಲಾಗುತ್ತಿದೆ. ಒಗಟು, ಒಗಟೆ, ಒಂಟು, ಒಡಪು, ಒಡಗತೆ, ಒಡಚುಕಥೆ ಮುಂತಾದ ಪದಗಳು ಬಳಕೆಯಲ್ಲಿವೆ. 'ಒಂಟು' ಒಗಟಿನ ಗ್ರಾಮ್ಯ ರೂಪ, ಒಗೆ ಅಥವಾ ಎಸೆ (to throw) ಎಂಬರ್ಥದಲ್ಲಿ ಒಗಟು, ಒಡೆ–ಒಡೆಸು–ಬಿಡಿಸು ಎಂಬರ್ಥದಲ್ಲಿ ಒಡಪು ಬಂದಿರಬೇಕೆಂದು ಊಹೆ.

ವಾಸ್ತವವಾಗಿ ಒಗಟು ಶಬ್ದ ಒಗೆ ಎಂಬ ಕನ್ನಡ ಧಾತುವಿನಿಂದ ನಿಷ್ಪನ್ನವಾದುದು. ಇದಕ್ಕೆ ಹೊಸ ಹುಟ್ಟು ಪಡೆ, ಜನ್ಮ ತಾಳು ಎಂಬ ಅರ್ಥಗಳೂ ಇವೆ. ಒಗಟನ್ನು ಬಿಡಿಸು ಎಂಬ ಅರ್ಥದಲ್ಲಿ ಒಗಟ ಬಿಡಿ, ಒಗಟ ವಡಚು ಎಂಬ ನುಡಿಗಳನ್ನು ಉತ್ತರ ಹಾಗೂ ದಕ್ಷಿಣ ಕರ್ನಾಟಕದ ಜನರು ಬಳಸುತ್ತಿರುವುದರ ಹಿನ್ನೆಲೆಯಲ್ಲಿ ಒಗಟು ಶಬ್ದದ ಅರ್ಥ ಹೇಳದೆ ಸೂಚಿಸಲಾಗಿರುವ ಸಂಗತಿಯನ್ನು ಕಂಡುಕೊಳ್ಳುವುದು ಎಂದರ್ಥವಾಗುತ್ತದೆ ಒಡಚುವ ಕ್ರಿಯೆಯನ್ನು ಸೂಚಿಸುತ್ತದೆ. ಒಗಟಿನ ಸಮಾನಾರ್ಥ ಸೂಚಕ ಪದಗಳು ಎಂದೇ ಪರಿಗಣಿತವಾಗಿರುವ ಮುಂಡಿಗೆ ಮತ್ತು ಮುಡಿಗೆ ಪದಗಳು ಕೂಡ ಗಮನಾರ್ಹವಾದವು. ಒಂದು ರೀತಿಯ ಸವಾಲನ್ನು ಇವು ಹೇಳುತ್ತವೆ.

ಭಾಷೆಯ ಮುಖಾಂತರವೇ ಅಭಿವ್ಯಕ್ತಗೊಳ್ಳುವ ಒಗಟು ಸಾಹಿತ್ಯ ಮತ್ತು ಸಂಸ್ಕೃತಿಗಳ ಜೀವನಾಡಿ. ಭಾಷೆಯಿಲ್ಲದೆ ಸಂಸ್ಕೃತಿಗೆ ನೆಲೆ ಬೆಲೆಗಳೇ ಇಲ್ಲ. ಬುದ್ಧಿ ಬಾವನೆಗಳನ್ನು ಅತ್ಯುತ್ತಮ ಮಟ್ಟದಲ್ಲಿ ಬೆಳೆಸಿಕೊಂಡು ಬಂದ ಒಗಟು ಜನಪದ ಸಾಹಿತ್ಯ ರೂಪಗಳ ಪೈಕಿ ಇತ್ತೀಚಿನ ಸೃಷ್ಟಿ ಎಂದು ಕೆಲವು ವಿದ್ವಾಂಸರ ಅಭಿಪ್ರಾಯ. ಮಾನವ ಸಮಾಜದ ಶೈಸವಾವಸ್ಥೆಯಲ್ಲಿಯೇ ಒಗಟು ಹುಟ್ಟಿಕೊಂಡಿರಬಹುದು ಎಂದು ಹಲವಾರು ವಿದ್ವಾಂಸರ ಅಭಿಪ್ರಾಯ. ಅದು ಸಾಮೂಹಿಕವಾಗಿ ರೂಪಿತವಾದುದು ಎಂಬುದನ್ನು ಗಮನಿಸಬೇಕು. ಇದರ ರಚನಾಕಾರರು ಅನಾಮಧೇಯರು. ಆದ್ದರಿಂದ ಒಗಟು, ಅದರ ನಿಜವಾದ ಅರ್ಥದಲ್ಲಿ ಜನವಾಣಿ. ಮಾನವನ ನಾಗರೀಕತೆಯ ಹೊಸ್ತಿಲಿನಲ್ಲಿ ಒಗಟಿನ ಸೃಷ್ಟಿ ಆಗಿರಬೇಕು ಎಂಬ ಅಭಿಪ್ರಾಯವನ್ನು ರಾಗೌ ಅವರು ವ್ಯಕ್ತಪಡಿಸಿದ್ದಾರೆ.

ಪ್ರಪಂಚದೊಡನೆ ಹೊಂದಿಕೊಳ್ಳುತ್ತಿರುವ ಪುರಾತನ ಮನಸ್ಸಿನ ಪ್ರಾಥಮಿಕ

ಅಭ್ಯಾಸದ ಫಲವೇ ಒಗಟು. ಪ್ರಕೃತಿಗೂ ಮಾನವನಿಗೂ ಇರುವ ಸಂಬಂಧ ಮಾತ್ರ ಅಳೆಯಲಾಗುವುದಿಲ್ಲ. ಸಹಜವಾಗಿಯೇ ಮಾನವ ಮೊದಲಿನಿಂದಲೂ ಪ್ರಕೃತಿ ಮತ್ತು ಜೀವನದ ವಿಷಯದಲ್ಲಿ ಕುತೂಹಲ ತಾಳಿರಬೇಕೆಂದು ತೋರುತ್ತದೆ. ಒಗಟುಗಳಲ್ಲಿ ದೊರೆಯುವ ಪ್ರಕೃತಿಪರ ಚಿತ್ರಗಳು ಇದಕ್ಕೆ ನಿದರ್ಶನಗಳಾಗಿ ಬರುತ್ತವೆ. ಎಂದು ರಾಗೌ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ.

ಒಗಟಿನ ಪುರಾತನ ರೂಪಗಳನ್ನು ಶೋಧಿಸಲು ವಿದ್ವಾಂಸರು ಗ್ರೀಕ್, ಸೆಮೆಟಿಕ್ ಮತ್ತು ವೇದಕಾಲೀನ ಜನಜೀವನವನ್ನು ಸಮಗ್ರವಾಗಿ ಪರಿಶೀಲಿಸಿದ್ದಾರೆ. ಗೂಡಾರ್ಥ ರೂಪದ ಸಮಸ್ಯೆಗಳಾಗಿದ್ದ ಅವು ಕೇವಲ ವಿನೋದಾತ್ಮಕವಾಗಿಯೋ, ಸಾಹಿತ್ಯಕವಾಗಿಯೋ ಇರದೆ ಅವು ಧಾರ್ಮಿಕವಾಗಿದ್ದವು ಎಂಬ ಸಂಗತಿಯನ್ನು ಅವರು ಕಂಡುಕೊಂಡಿದ್ದರು. ಬೆಬಿಲೋನಿಯಾ ಸಂಸ್ಕೃತಿಯಲ್ಲೂ ಒಗಟುಗಳು ಎಂದೇ ಅವು ಪ್ರಸಿದ್ದವಾಗಿವೆ. ಒಗಟುಗಳು ಮೊದಲಿನಿಂದಲೂ ಗಹನವಾದ ಪ್ರಕೃತಿ ರಹಸ್ಯವನ್ನು ಅಸ್ಪಷ್ಟ ಭಾಷೆಯಲ್ಲಿ ಅಭಿವ್ಯಕ್ತಗೊಳಿಸುತ್ತಾ ಬಂದಿವೆ. ಆ ಕಾರಣಕ್ಕಾಗಿಯೇ ಬಹು ಹಿಂದಿನಿಂದಲೂ ಒಗಟು ತತ್ವಜ್ಞಾನಿಗಳನ್ನು ಆಕರ್ಷಿಸುತ್ತಾ ಬಂದಿವೆ. ಒಟ್ಟಿನಲ್ಲಿ ಜಾಗತಿಕ ಮಟ್ಟದಲ್ಲಿ ನೋಡಿದಾಗ ಒಗಟುಗಳಿಗೆ ಸುಧೀರ್ಘ ಇತಿಹಾಸವಿದೆ ಎನ್ನಬಹುದು.

ಜೀವನವೇ ಮುಖ್ಯ ಆಧಾರವಾಗಿ ಜೀವನದಲ್ಲಿಯ ಸಮಸ್ಯೆಗಳನ್ನು ಬಿಡಿಸುವ ಒಂದು ಪ್ರಯತ್ನವಾಗಿ, ಮನುಷ್ಯ ಮಾಡುವ ಪ್ರಯತ್ನವೇ ಪ್ರೇರಣೆಯಾಗಿ ಬುದ್ಧಿಕುಶಲತೆಗೆ ಒಂದು ಪರೀಕ್ಷೆಯಾಗಿ ಒಗಟುಗಳು ಅವತರಿಸಿದವು. ಒಗಟು ಲೋಕಕ್ಕೆ ಹೊರತಾದ ವಸ್ತು ವಿಷಯಗಳು ಯಾವವೂ ಇಲ್ಲ ಎಂದು ವಿದ್ವಾಂಸರ ಅಭಿಪ್ರಾಯ. ರಾಗೌ ಅವರು ಒಗಟನ್ನು ಈ ರೀತಿ ಹೇಳುವರು: 'ಇವು ಸಾಮನ್ಯವಾಗಿ ಊಹನೆಯ ಮೇಲೆ ಉತ್ತರವನ್ನು ಹುಡುಕುವ, ಕೇಳಿದ ಕೂಡಲೆ ದಿಗ್ಭ್ರಮೆ ಹಿಡಿಸುವ, ರಹಸಾರ್ಥವುಳ್ಳ ಪ್ರಶ್ನಾರ್ಥಕ ಹೇಳಿಕೆಗಳು. ಪ್ರತಿಯೊಂದರಲ್ಲೂ ಸಮಸ್ಯೆಯೊಂದಿದ್ದು, ಸುಲಭವಾಗಿ ಬಿಡಿಸಲಾರದ ರೀತಿಯಲ್ಲಿ ಸಂಯೋಜಿತವಾಗಿರುತ್ತದೆ.'

ಈ ರೀತಿಯ ಒಗಟುಗಳಲ್ಲಿ ಎರಡು ಭಾಗಗಳಿರುತ್ತವೆ; ಗುಪ್ತವಾಗಿರುವ ಮೊದಲನೆಯದನ್ನು ಎರಡನೆಯದು ವ್ಯಕ್ತಗೊಳಿಸಬೇಕಾಗುತ್ತದೆ. ಮೊದಲನೆಯದು ಸಾಮಾನ್ಯವಾಗಿ ಪ್ರಶ್ನೆ ರೂಪದಲ್ಲಿದ್ದರೆ ಎರಡನೆಯದು ಉತ್ತರ ರೂಪದಲ್ಲಿರುತ್ತದೆ. ಪ್ರಶ್ನೆ ರೂಪಕಾತ್ಮಕವಾಗಿದ್ದು ಗೋಪನಗೊಂಡ ಅರ್ಥವನ್ನು ಶೋಧಿಸಲು ಕೇಳುಗನನ್ನು ಕೆರಳಿಸುವುದೇ ಇದರ ಆಶಯ. ಒಗಟುಗಳಲ್ಲಿ ವಸ್ತು ಗೂಢವಾಗಿರುವುದು ವಿಶೇಷ. 'ಗೂಢೋಕ್ತಿ' ಎಂದು ಹೆಸರಿಸಿ ಒಗಟಿನ ಸೂತ್ರವನ್ನು ಹೇಳಲು ವಿದ್ವಾಂಸರು ಶ್ರಮಿಸಿರುವುದುಂಟು. ಇದು ಒಂದು ದೃಷ್ಟಿಯಿಂದ ಬುದ್ಧಿಗೆ ವ್ಯಾಯಾಮ. ಇನ್ನೊಂದು ದೃಷ್ಟಿಯಿಂದ ಒಂದು ಮನೋರಂಜಕ ವ್ಯಾಪಾರ, ಉತ್ತರ ತಿಳಿಯದವರನ್ನು ಕಂಗೆಡಿಸುವುದಕ್ಕೆ ಬುದ್ಧಿಶಕ್ತಿಯನ್ನು ಪರೀಕ್ಷಿಸುವುದಕ್ಕೆ ರೂಪಿಸಿದ ಗೂಢೋಕ್ತಿಗಳು ಎಂಬ ಅಭಿಪ್ರಾಯವಿದೆ. ಒಗಟುಗಳೆಂದರೆ ಸಾಮಾನ್ಯವಾಗಿ ವಿನೋದಕ್ಕಾಗಿ ಪದಗಳ ಮೇಲೆ ನಿರ್ಮಿತವಾದ ಸಮಸ್ಯೆಯೆಂಬ ವಿವರಣೆಯೂ ಇದೆ.

ಒಗಟುಗಳಲ್ಲಿ ರಹಸ್ಯಾಂಶವೇ ಪ್ರಧಾನ. ಈ ಗುಣವೇ ಒಗಟಿಗೆ ಸೌಂದರ್ಯವನ್ನು ಗಂಭೀರತೆಯನ್ನೂ ತಂದುಕೊಟ್ಟಿರುವುದು. ಗಂಭೀರತೆಯು ಒಗಟಿನ ಪ್ರಧಾನ ಲಕ್ಷಣವಾಗಿದೆ. ವಸ್ತುವಿನ ಅಥವಾ ವ್ಯಕ್ತಿಯ ಪೂರ್ಣ ವಿವರಣೆ ಇದ್ದು, ಪ್ರತಿಯೊಂದು

ಪದವೂ ನಿಖರವೂ ಆದ ತರ್ಕಬದ್ಧ ಸೂತ್ರಗಳಿಂದ ಘಟಿತವಾಗಿರುತ್ತದೆ. ಈ ಕಾರಣದಿಂದಲೇ ಒಗಟು ಕೇಳುಗನ ಆಸಕ್ತಿಯನ್ನು ಸೆಳೆದುಕೊಳ್ಳುವುದಲ್ಲದೆ ತಾನು ಹೇಳಬೇಕಾದುದನ್ನು ಅತ್ಯಂತ ನಿಜ ಎನ್ನುವಂತೆ ಮಾಡುವುದು. ಊಹಾತೀತವಾಗಿ ಕಾಣೀಸುತ್ತಾ ಗೂಢವಾಗಿರುವ ವಸ್ತು ತಿಳಿದಾಗ ದಿಗ್ಭ್ರಮೆಯನ್ನುಂಟು ಮಾಡುವುದು ಒಗಟುಗಳ ಜಾಯಮಾನ.

ಒಗಟಿನ ಗಮನಾರ್ಹವಾದ ಲಕ್ಷಣವೆಂದರೆ ರೂಪಕ ಶಕ್ತಿ. ಕೇವಲ ವಿನೋದಕ್ಕಲ್ಲ ಒಗಟು ಯಾವುದೋ ಒಂದು ವಸ್ತುವಿಗೆ ಅಥವಾ ವ್ಯಕ್ತಿಗೆ ಸಂಕೇತವಾಗಿರುತ್ತದೆ. ಈ ಗುಣದಿಂದಾಗಿ ಒಗಟನ್ನು ವ್ಯಾಜ್ಯೋಕ್ತಿ ಗೂಡೋಕ್ತಿ ಎನ್ನಬಹುದು. ಎಂದು ಹಲವಾರು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ರೂಪಕ ಮತ್ತು ಸಾಂಕೇತಿಕತೆಗಳನ್ನು ಸಮರ್ಪಕವಾಗಿ ಬಳಸಿಕೊಂಡಿರುವುದರಿಂದ ಒಗಟು ಕೂಡ ಕಾವ್ಯಕಲೆಗಳಲ್ಲಿ ಒಂದಾಗಿದೆ ಎಂದರೂ ತಪ್ಪಾಗಲಾರದು. ಅಲಂಕಾರಿಕ ಗುಣಗಳು ಒಗಟುಗಳನ್ನು ಚಮತ್ಕಾರಜನಕವಾಗಿರುವಂತೆ ಮಾಡುವುದು ಸ್ವಾಭಾವಿಕ. ಪದಗೂಢತೆ, ವಸ್ತುಗೂಢತೆಗಳು ಒಗಟುಗಳಲ್ಲಿ ಸಾಮಾನ್ಯ. ಒಗಟುಗಳಲ್ಲಿ ಉಪಮಾನ ಮತ್ತು ಉಪಮೇಯಗಳಿರುವುದನ್ನು ನೋಡಬಹುದು. ಇಲ್ಲಿ ಉಪಮಾನಗಳ ಸಹಾಯದಿಂದ ಉಪಮೇಯಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ಉಪಮಾನಗಳಿಗೆ ಜನಪದರು ತಮ್ಮ ಜೀವನದಲ್ಲಿ ಪರಿಚಿತವಾಗಿರುವ ವಸ್ತುಗಳನ್ನೇ ತೆಗೆದುಕೊಳ್ಳುತ್ತಾರೆ. ಹೇಳಬೇಕಾಗಿರುವ ವಸ್ತುವೊಂದನ್ನು ಹೋಲಿಕೆಯ ಮೂಲಕ ಅರ್ಥಪೂರ್ಣವಾಗಿ ಹೇಳುವುದು ಒಗಟಿನ ಕ್ರಮ. ಆದ್ದರಿಂದ ಒಗಟಿನ ರೂಪಕವನ್ನಷ್ಟೇ ಪರಿಭಾವಿಸಲಾಗದು. ಅದರ ಅಂತರಾರ್ಥ ತೆರೆದ ಮೇಲೆ ಅನಾಮಧೇಯ ಕರ್ತೃವಿನ ಪ್ರತಿಭಾ ಕೌಶಲಕ್ಕೆ ಬೆರಗಾಗುತ್ತೇವೆ. ಇದನ್ನು ಅನಾವರಣಗೊಳಿಸಲು ಈ ಉದಾಹರಣೆಯನ್ನು ನೋಡೋಣ–

"ಅಕ್ಕ ತವರಿಗೆ ಹೋಗುವಾಗ ಸರ್ರನೆ ಹೋಗ್ತಾಳೆ. ಗಂಡನ ಮನೆಗೆ ಬರುವಾಗ ಹೆಜ್ಜೆ ಹೆಜ್ಜೆಗೂ ಕಣ್ಣೀರು ಸುರಿಸುತ್ತಾ ನಿಧಾನವಾಗಿ ಬರುತ್ತಾಳೆ." ಇದು ತವರಿಗೂ ಹೆಣ್ಣಿಗೂ ಇರುವ ಅವಿನಾಭಾವ ಸಂಬಂಧವನ್ನು ತಿಳಿಸುವ ಸುಂದರವಾದ ರೂಪಕವಾಗಿದೆ. ಇದು ನೀರು ಸೇದಲು ಬಾವಿಗೆ ಬಿಟ್ಟ ಬಿಂದಿಗೆಯನ್ನು ಕುರಿತದ್ದು. ಒಂದೇ ಒಗಟು ಹಲವು ಅಂಶಗಳನ್ನು ಧ್ವನಿಸುತ್ತದೆ. ತವರಿಗೆ ಹೋಗುವಾಗ ಆಗುವ ಆನಂದವನ್ನು ಒಂದೆಡೆ ಸೂಚಿಸಿದರೆ, ತವರಿನಿಂದ ಬರುವಾಗ ಚೈತನ್ಯವನ್ನು ತುಂಬಿಕೊಂಡು ಬರುತ್ತಾಳೆ ಎಂಬ ಸೂಚನೆಯೂ ಇದೆ.

ಈ ಒಗಟನ್ನು ಗಮನಿಸಿದಾಗ ಒಗಟು ರಚನಾಕಾರನು ಇಲ್ಲಿ ಹೋಲಿಕೆಗಾಗಿ ವಸ್ತುವನ್ನು ತಡಕಾಡಿಲ್ಲ. ಹೆಚ್ಚು ಪ್ರಯಾಸವಿಲ್ಲದೆ ಪರಿಚಿತವಿರುವ ವಸ್ತುವನ್ನೇ ಒಳಗೊಂಡಿರುವುದು ಗಮನಾರ್ಹ. ಒಟ್ಟಿನಲ್ಲಿ ಒಗಟಿನಲ್ಲಿ ಕಾವ್ಯಕಲೆ ಎದ್ದು ಕಾಣುವುದು ಅದರ ರೂಪಕ ಗುಣದಿಂದ ಎಂಬುದು ದೃಢವಾಗುವ ಅಂಶ. ಆಲಂಕಾರಿಕವಾಗಿ ಒಗಟು ರೂಪಕದೊಡನೆ ಅತ್ಯಂತ ನಿಕಟವೂ ಅನನ್ಯವೂ ಆದ ಸಂಬಂಧವನ್ನು ಸಾಧಿಸುವುದು ವಿಶೇಷ. ಹಾಗೆ ನೋಡಿದರೆ ಮೌಖಿಕ ಪರಂಪರೆಯ ಸಾಹಿತ್ಯ ಪ್ರಕಾರಗಳ ಪೈಕಿ ರೂಪಕವನ್ನು ಬಳಸಿಕೊಂಡು ಜನಮನ್ನಣೆಗೆ ಪಾತ್ರವಾಗಿರುವ ಪ್ರಕಾರವೆಂದರೆ ಒಗಟೇ ಆಗಿದೆ.

ಹಾಸ್ಯ ಗುಣ ಒಗಟಿನ ಇನ್ನೊಂದು ಬಹು ಮುಖ್ಯ ಲಕ್ಷಣ. ಮಾನವನಲ್ಲಿ

ಸ್ವಾಭಾವಿಕವಾಗಿಯೇ ಇರುವ ಹಾಸ್ಯ ವಿಡಂಬನೆಗಳು ಒಗಟುಗಳ ರಚನೆಗೆ ಕಾರಣವಾದವು. ಬಹುಪಾಲು ಒಗಟುಗಳು ಹಾಸ್ಯದ ಸಿಡಿನುಡಿಗಳು, ಹಾಸ್ಯದ ಫಲ ಎಂದೆಲ್ಲಾ ವಿದ್ವಾಂಸರು ಹೇಳಿರುವುದುಂಟು. ಹೋಲಿಕೆಯ ಚಿತ್ರದ ಮೂಲಕ ಹೋಲಿಸಿಕೊಳ್ಳುವ ವಸ್ತುವನ್ನು ರೂಪಿಸಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ–

"ಮೊಗ್ಗಾಗಿ ಅರಳುವುದು; ಪುಷ್ಪವಲ್ಲ, ಸೂರ್ಯಕಿರಣಕೂ ಅದು ಬಾಡುವುದಿಲ್ಲ."

ಕೊಡೆ ಮಡಿಸಿದಾಗ ಮೊಗ್ಗಿನಂತಿರುತ್ತದೆ. ಬಿಚ್ಚಿದಾಗ ಹೂವಿನ ಹಾಗೆ ಅರಳುತ್ತದೆ ಎಂದರ್ಥ. ಹೂವಿಗೂ ಕೊಡೆಗೂ ಇರುವ ಸಮಾನ ಗುಣವನ್ನು ಇದು ಹೇಳುತ್ತದೆ. ಆದರೆ ಕೊಡೆಯನ್ನು ಹೂವು ಎಂದು ಭಾವಿಸಲಾಗುವುದಿಲ್ಲ. ಸೂರ್ಯಕಿರಣಕ್ಕೆ ಅದು ಬಾಡುವುದಿಲ್ಲ ಎಂಬುದು ಕಾರಣ. ಆದುದರಿಂದಲೇ ಅದರ ಅರ್ಥ ಹೂವು ಎಂದಾಗದೆ ಕೊಡೆ ಎಂದಾಗಿಯೇ ಉಳಿದುಕೊಳ್ಳುತ್ತದೆ. ಹೀಗೆ ಕೊಟ್ಟಿರುವ ವಸ್ತುವಿನ ಚಿತ್ರದ ಮೂಲಕ ಕೊಡದಿರುವ ವಸ್ತುವಿನ ಚಿತ್ರವನ್ನು ಊಹನೆಯ ಆಧಾರದ ಮೇಲೆ ರಚಿಸಲಾಗುತ್ತದೆ.

ಒಗಟುಗಳು ಸಾರ್ವತ್ರಿಕವಾದುವು, ಈ ಸಾರ್ವತ್ರಿಕತೆ ಇಡೀ ಜಾನಪದಕ್ಕೆ ಅನ್ವಯಿಸುವ ಗುಣ. ಒಂದು ಕಡೆ ಕಾಣಬರುವ ಒಗಟುಗಳು ಇನ್ನೊಂದೆಡೆಯಲ್ಲೂ ಕಾಣಬರುತ್ತವೆ ಎನ್ನುವ ಕಾರಣಕ್ಕಾಗಿ ಒಗಟುಗಳಲ್ಲಿ ಸಾರ್ವತ್ರಿಕತೆಯನ್ನು ಕಾಣಲಾಗಿದೆ. ಜಗತ್ತಿನ ಎಲ್ಲಾ ಭಾಷೆಗಳಲ್ಲೂ ಕಾಣಬರುವ ಈ ಸಮಾನತೆ ಒಗಟಿನ ವ್ಯಾಪಕ ವಿಸ್ತರಣೆಯನ್ನು ಹೇಳುತ್ತದೆ. ಮನುಷ್ಯ ಎಲ್ಲೇ ಇರಲಿ, ಅವನು ಒಂದೇ ರೀತಿಯಲ್ಲಿ ಆಲೋಚಿಸಬಲ್ಲ ಎಂಬುದನ್ನು ಇವು ದೃಢೀಕರಿಸುತ್ತವೆ.

ಒಟ್ಟಿನಲ್ಲಿ ಒಗಟಿನ ಆಸಕ್ತಿ ಅತ್ಯಂತ ಮೂಲಭೂತವಾದುದು ಎಂಬುದು ನಮ್ಮ ಅರಿವಿಗೆ ಬರುತ್ತದೆ. ಪುರಾತನ ಕಾಲದಿಂದಲೂ ರೂಢಿಯಲ್ಲಿರುವ ಬುದ್ಧಿಪ್ರಧಾನವಾದ ಒಂದು ಚಟುವಟಿಕೆ. ಮನೋರಂಜನೆ ಮತ್ತು ಬೋಧನಾತ್ಮಕತೆ ಅದರ ಎರಡು ಪ್ರಮುಖ ಗುಣಗಳು. ಯುವ ಪೀಳಿಗೆ ಮನೋರಂಜನೆಗಾಗಿ ಒಗಟುಗಳನ್ನು ನೆಚ್ಚಿಕೊಂಡರೆ ವಯಸ್ಕರು ಅವುಗಳ ಬೋಧನಾ ಗುಣಗಳಿಂದಾಗಿಯೇ ಅವು ಸಾಮಾಜಿಕ ಮಹತ್ವವನ್ನು ಪಡೆದುಕೊಂಡಿವೆ.

**ಪರಾಮರ್ಶನ ಗ್ರಂಥಗಳು**


1) ದೇ. ಜವರೇಗೌಡ – ಜನಪದ ಅಧ್ಯಯನ, ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು
2) ಜೀ.ಶಂ. ಪರಮಶಿವಯ್ಯ – ಕನ್ನಡ ಒಗಟುಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು
3) ನಂ. ತಪಸ್ವೀ ಕುಮಾರ್ – ಕನ್ನಡ ಒಗಟುಗಳ ಸಮೀಕ್ಷೆ, ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು
4) ಹೆಚ್.ಜೆ. ಲಕ್ಕಪ್ಪಗೌಡ (ಸಂ) – ಒಗಟುಗಳು, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು
5) ರಾಗೌ, ನಮ್ಮ ಒಗಟುಗಳು, ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು


❖❖❖

# ಶೋಷಣೆಯ ನೆಲೆ : ಪೆಣ್ಬುಯ್ಯಲ್ ಮತ್ತು ಮಹಾಸತಿ

**ರಾಜೇಶ್ವರಿ ವಿ.ಪಿ.**
ಸಂಶೋಧನಾ ವಿದ್ಯಾರ್ಥಿ, ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು –572103

'ಪೆಣ್ಬುಯ್ಯಲ್' ಮತ್ತು 'ಮಹಾಸತಿ' ಎರಡೂ ಶಾಸನ ಪ್ರಭೇದಗಳೇ ಆಗಿದ್ದು, ಹೆಣ್ಣಿನ ಅಸಹಾಯಕತೆಯನ್ನು ಬಳಸಿಕೊಂಡು ಧಾರ್ಮಿಕ ಆಚರಣೆಯ ಅಡಿಯಲ್ಲಿ ಆಕೆಯ ಅಸ್ತಿತ್ವವನ್ನೇ ನಾಶ ಮಾಡುವುದು ಮಹಾಸತಿ ಆಚರಣೆಯಾದರೆ, ಹೆಣ್ಣನ್ನು ಪಶುವಿನಂತೆ ನಡೆಸಿಕೊಂಡು ಆಕೆಯ ಮೇಲೆ ದೈಹಿಕ ಹಲ್ಲೆ ಮಾಡಿ ಅವಮಾನ ಮಾಡುವುದರ ಮೂಲಕ ಅಮಾನವೀಯವಾಗಿ ಬಳಸಿಕೊಂಡಿರುವುದು ಪೆಣ್ಬುಯ್ಯಲ್ ಶಾಸನಗಳಿಂದ ತಿಳಿದುಬರುತ್ತದೆ. ಮಹಾಸತಿ ಆಚರಣೆ ಉದ್ದೇಶಿತ ಆಚರಣೆಯಾದರೆ, ಪೆಣ್ಬುಯ್ಯಲ್ ಘಟನೆಗಳು ಆಕಸ್ಮಿಕವಾಗಿರುತ್ತವೆ. ಪೆಣ್ಬುಯ್ಯಲ್ ಮತ್ತು ಸತಿ ಪದ್ಧತಿ ಈ ಎರಡು ಘಟನೆಗಳ ಮೂಲ ವಸ್ತು ಹೆಣ್ಣೇ ಆಗಿದ್ದು, ಈ ಘಟನೆಗಳು ಯುದ್ಧಕ್ಕೆ ಪೂರ್ವವಾಗಿ ಅಥವಾ ಯುದ್ಧ ನಂತರದಲ್ಲಿ ನಡೆದಿದ್ದು ಹೆಣ್ಣನ್ನು ರಕ್ಷಣೆ ಮಾಡುವುದೇ ಇದರ ಮೂಲ ಉದ್ದೇಶವಾಗಿದೆ. ಯುದ್ಧವೆಂಬುದು ವೀರನ ಶೌರ್ಯದ ಪ್ರದರ್ಶನವಾಗಿರದೆ, ಅದು ಊರಿನ, ದನ–ಕರುಗಳ ಮತ್ತು ಹೆಣ್ಣಿನ ರಕ್ಷಣೆಯ ಹೊಣೆ ಎಂಬುದು ಮೇಲ್ನೋಟಕ್ಕೆ ಕಂಡು ಬಂದರೂ ಕೂಡ, ಹೆಣ್ಣು ತನ್ನ ಒಂಟಿತನ ಹಾಗೂ ಬಲಹೀನತೆಯಿಂದಾಗಿ ಬೇಗ ಆಕ್ರಮಣಕಾರರ ವಶವಾಗುತ್ತಿದ್ದಳು.

ಕ್ಷತ್ರಿಯ ಕುಲದ ಸ್ತ್ರೀಯರನ್ನು ಗಂಡು ತನ್ನ ಹಕ್ಕಿನ ಉಪಭೋಗದ ವಸ್ತುವೆಂದು ಭಾವಿಸಿ ಅದನ್ನು ಸ್ಥಾಪಿಸಿಕೊಳ್ಳಲು ಮಾಡಿದ ಪ್ರಯತ್ನಗಳು ಜೊತೆಗೆ ಇಂತಹ ಒತ್ತಾಯದ ಮತ್ತು ಅಧೀನತೆಯನ್ನು ಸಹಿಸಲು ಅಸಾಧ್ಯವಾದಾಗ ದ್ವೇಷದ ಮೂಲಕ ಅಥವಾ ಹಿಂಸೆಯ ಮೂಲಕ ಅದನ್ನು ಗುಪ್ತವಾಗಿ ವಿರೋಧಿಸಿದ ರಾಣಿವರ್ಗದ ಪ್ರಯತ್ನಗಳು ಈ ಎರಡು ನೆಲೆಗಳ ಜೊತೆಗೆ ಧಾರ್ಮಿಕ ಕಲ್ಪನೆಗಳಾದ ಸ್ವರ್ಗ ಮತ್ತು ನರಕದ ಅಲೌಕಿಕ ನಂಬಿಕೆಯಿಂದ ಸತಿ ಪದ್ಧತಿ ಬೆಳೆದಿದೆಯೇ ಹೊರತು ಯಾವುದೇ ಧಾರ್ಮಿಕ ಗ್ರಂಥಗಳು ಈ ಪದ್ಧತಿಗೆ ಶಾಸ್ತ್ರಸಮ್ಮತಿಯ ಒಪ್ಪಿಗೆಯನ್ನು ನೀಡಿಲ್ಲ ಎಂದು ಹೇಳಬಹುದು.

ಎಂ.ಎಂ. ಕಲ್ಬುರ್ಗಿ ಅವರ ಅಭಿಪ್ರಾಯದಂತೆ– "ಪತಿಯ ಮರಣದ ತರುವಾಯ ತನ್ನ ಸತಿ ಮನಸ ಇಲ್ಲವೇ ಮನಸ್ಸಿಲ್ಲದೆ ಅನ್ಯರಿಗೆ ವಶವಾಗಬಹುದೆಂಬ ಪುರುಷನ ಪ್ರತಿಷ್ಠೆ ಈ ಸಂಪ್ರದಾಯವನ್ನು ರೂಪಿಸಿರಬಹುದು, ಪತಿಯ ಮರಣದ ತರುವಾಯ ತನ್ನ ಇರುವಿಕೆ ಮತ್ತು ಪಾವಿತ್ರ್ಯತೆಗಳ ಅನಿಶ್ಚಿತತೆ ಕಾರಣವಾಗಿ ಸ್ತ್ರೀ ವರ್ಗವೇ ಇದನ್ನು ರೂಪಿಸಿಕೊಂಡಿರಬಹುದು"[1] ಇಲ್ಲವೇ "ಪತಿಯ ಮರಣದ ತರುವಾಯ ಸತಿಯನ್ನು ಮರಣ ಕೂಪಕ್ಕೆ ತಳ್ಳಿ ಅವಳ ಆಸ್ತಿಯನ್ನು ಪಡೆಯಲು ಪ್ರಭು ವರ್ಗ ಇಲ್ಲವೆ ಪುರೋಹಿತ ವರ್ಗ ಈ ಯೋಜನೆಯನ್ನು ರೂಪಿಸಿಕೊಂಡಿರಬಹುದು ಮೇಲಿನ ಮೂರು ಅಂಶಗಳನ್ನು ಗಮನಿಸಿದಾಗ ಇವೆಲ್ಲವೂ ಕೂಡ ಸ್ತ್ರೀ ಶೋಷಣೆಯ ಒಂದು

ಅಂಶವಾಗಿ ಸತಿ ಪದ್ಧತಿಯ ಉಗಮಕ್ಕೆ ಕಾರಣವಾಗಿವೆ"[2] ಎಂದು ಹೇಳಿದ್ದಾರೆ.

ಪೆಣ್ಬುಯ್ಯಲ್ ಮುಖ್ಯವಾಗಿ ತುರುಗಾಳಗ ಮತ್ತು ಊರಳಿವಿನ ಸಂದರ್ಭಗಳನ್ನು ಮೂಲವಾಗಿಟ್ಟುಕೊಂಡು ರಚಿಸಲ್ಪಟ್ಟಿದ್ದು, ತುರುಗಳನ್ನು ಮತ್ತು ಊರಿನ ರಕ್ಷಣೆಯ ಜೊತೆಗೆ ಹೆಣ್ಣಿನ ರಕ್ಷಣೆಯನ್ನು ಮಾಡುವಲ್ಲಿ ಹೋರಾಟ ಮಾಡಿ ಮಡಿದ ಪುರುಷನ ಶೌರ್ಯದ ವರ್ಣನೆಯನ್ನು ತಿಳಿಸುತ್ತದೆಯೇ ಹೊರೆತು ಉಡೆ ಉರ್ಚಿಗೆ ಒಳಗಾದ ಹೆಣ್ಣಿನ ಹೆಸರಾಗಲಿ, ಆ ಕೆಟ್ಟ ಘಟನೆಯು ನಡೆದ ನಂತರ ಆಕೆಯ ಜೀವನದ ಪರಿಸ್ಥಿತಿ ಹೇಗಿತ್ತು, ಆಕೆ ಬದುಕಿದ್ದಳೆ, ಬದುಕಿದ್ದರೆ ಸಮಾಜ ಆಕೆಯನ್ನು ಹೇಗೆ ನಡೆಸಿಕೊಳ್ಳುತ್ತಿತ್ತು. ಎಂಬ ಬಗ್ಗೆ ಯಾವ ಶಾಸನದಲ್ಲೂ ಹೇಳದೆ ಇರುವುದು ವಿಪರ್ಯಾಸ. ತುರುಗೊಳ್ ಶಾಸನಗಳನ್ನು ಗಮನಿಸಿದಾಗ ಪೆಣ್ಬುಯ್ಯಲ್ ಮತ್ತು ಸತಿ ಪದ್ಧತಿ ನಡೆಯಲು ಮುಖ್ಯ ಕಾರಣವಾಗಿ ಗೋ–ರಕ್ಷಣೆ ಮತ್ತು ಊರಳಿವಿನ ಸಂದರ್ಭದಲ್ಲಿ ನಡೆದಿರುವ ಕೆಲವು ಘಟನಾವಳಿಗಳನ್ನು ಪ್ರಸ್ತುತ ಲೇಖನದಲ್ಲಿ ಗುರುತಿಸಬಹುದಾಗಿದೆ.

ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಕುರಕೋಡು ಗ್ರಾಮದ ಕಲ್ಲೇಶ್ವರ ದೇವಾಲಯದ ಮುಂಭಾಗದಲ್ಲಿರುವ ಶಾಸನವು "ಕ್ರಿ.ಶ. 1155ರ ಕಾಲಘಟ್ಟಕ್ಕೆ ಸೇರಿದೆ. ಇದು ಶಕ ವರ್ಷ ಸಾವಿರದ 1977ನೆಯ ಯುವ ಸಂವತ್ಸರದ ಸಮಯದಲ್ಲಿ ಚಕ್ರವರ್ತಿಯಾಗಿದ್ದ ಕಲ್ಯಾಣದ ಚಾಲುಕ್ಯ ದೊರೆ ತ್ರೈಲೋಕ್ಯಮಲ್ಲ ಸೋಮೇಶ್ವರನು ರಾಜ್ಯ ಆಳುತ್ತಿದ್ದಾಗ, ಅವನ ಆಡಳಿತಕ್ಕೆ ಒಳಪಟ್ಟಂತೆ ಅಧಿಕಾರ ನಿರ್ವಹಿಸುತ್ತಿದ್ದ ಮಹಾಮಂಡಲೇಶ್ವರ ಜಗದೇವರಸನು ಆಜ್ಞೆ ಮಾಡಿದನೆಂದು ಅವನ ಆದೇಶದ ಮೇರೆಗೆ ಮದಸಾಲೆಯ ಕಾಳರಸ ಎಂಬುವವನು ತನ್ನ ಸಮಸ್ತ ಸೈನ್ಯದೊಡನೆ ಕುಪ್ಪಗಡ್ಡೆ ಅಗ್ರಹಾರಕ್ಕೆ ಸೇರಿದ ಕುರಕೋಡು ಗ್ರಾಮದ ಮೇಲೆ ಆಕ್ರಮಣ ಮಾಡಿ ತುರುಗಳನ್ನು ವಶಪಡಿಸಿಕೊಂಡು ಅಲ್ಲಿನ ಹೆಣ್ಣು ಮಕ್ಕಳ ಉಡೆ ಉರ್ಚುವ ಪ್ರಸಂಗವು ಇಲ್ಲಿ ದಾಖಲಾಗಿದೆ. ಅದೇ ಊರಿನ ದೇವಗಾವುಂಡ ಮತ್ತು ಮಲ್ಲಗಾವುಂಡರು ಶತ್ರುಗಳ ವಿರುದ್ಧ ಹೋರಾಟ ಮಾಡಿ ತುರುಗಳನ್ನು ಮತ್ತು ಹೆಣ್ಣು ಸೆರೆ ಬಿಡಿಸಿರುವ ಶಿಲ್ಪವು ತುಂಬಾ ಸ್ಪಷ್ಟತೆಯಿಂದ ಕೂಡಿದೆ"[3].

ಕೃಷ್ಣರಾಜಪೇಟೆ ತಾಲೂಕಿನ ಹೊಸ ಹೊಳಲು ಗ್ರಾಮದ "ಹುಣಸೇಶ್ವರ ದೇವಾಲಯದ ಬಳಿ ಇರುವ ಮೂರು ವೀರಗಲ್ಲುಗಳು ತುರುಗೋಳ್ ಹಾಗೂ ಪೆಣ್ಬುಯ್ಯಲ್ ದೃಶ್ಯವನ್ನು ಒಳಗೊಂಡಿದ್ದು ತುರುಗಳನ್ನು ಹಾಗೂ ಸ್ತ್ರೀಯರನ್ನು ಒಂದು ಭಾಗದಲ್ಲಿ ಬಿಡಿಸಲಾಗಿದ್ದು ವೀರನು ಇವರ ಮುಂದೆ ನಿಂತಿರುವ ಶತ್ರುವಿನೊಂದಿಗೆ ಹೋರಾಡುತ್ತಿದ್ದಾನೆ"[4] ಇಲ್ಲಿನ ಸ್ತ್ರೀ ಚಿತ್ರದಲ್ಲಿ ಅವರು ಮಕ್ಕಳನ್ನು ಎತ್ತಿಕೊಂಡಿದ್ದು ಆ ಮಕ್ಕಳು ಶತ್ರುಗಳತ್ತ ಭಯದಿಂದ ಕೈ ತೋರಿಸುತ್ತಿರುವುದು ಸಂದರ್ಭದ ಭೀಕರತೆಯನ್ನು ಚಿತ್ರಿಸುತ್ತದೆ. ಹೋರಿಗಳ ನಿರಿದು ತುರುವ ಕೊಣ್ಡು ಹೆಂಡಿರವುಡೆವುರ್ಚುವ ವಿಷಯವಿರುವ ಈ ಶಾಸನಗಳು ತುರುಗಳನ್ನು ಅಪಹರಿಸಲು ಬಂದವರು ಸ್ತ್ರೀಯರನ್ನು ಅಪಹರಿಸುತ್ತಿದ್ದರು ಎಂಬ ಅಂಶ ಸ್ಪಷ್ಟವಾಗಿ ಹೇಳುತ್ತಾ ಅವರು ಕೇವಲ ಅಪಹರಿಸುತ್ತಿದ್ದೇ ಅಲ್ಲದೆ ಆ ಹೆಣ್ಣು ಮಕ್ಕಳನ್ನು ಮಾನಭಂಗ ಮಾಡುವುದರ ಮೂಲಕ ಅವಮಾನಕ್ಕೆ ಒಳಗೂ ಮಾಡುತ್ತಿದ್ದರು ಎಂಬ ವಿಷಯವನ್ನು ಸ್ಪಷ್ಟಪಡಿಸುತ್ತದೆ.

ತುರುಗಳನ್ನು ಆಕ್ರಮಣಕಾರರು ಅಥವಾ ಕಳ್ಳರು ಕದ್ದೊಯ್ಯುವಾಗ ಅವರನ್ನು ತಡೆದು ತುರುಗಳನ್ನು ರಕ್ಷಿಸಿ ಅವುಗಳನ್ನು ಮರಳಿ ತರುವ ಬಹಳಷ್ಟು ಸನ್ನಿವೇಶಗಳಲ್ಲಿ

ಹೋರಾಟ ಮಾಡಿದ ವೀರರು ವಿಜಯ ಶಾಲಿಗಳಾಗುತ್ತಿದ್ದರು. ಇಲ್ಲವೇ ಮರಣ ಹೊಂದುತ್ತಿದ್ದರು. ಹೀಗೆ ಮರಣ ಹೊಂದಿದ ವೀರನ ಪತ್ನಿಯು ಆ ವೀರನ ಹಿಂದೆ ಸಹಗಮನ ಮಾಡಿರುವ ಹಲವು ಉದಾಹರಣೆಗಳು ದೊರಕುತ್ತವೆ. "ಚವುಡನಾಯಕನ ಮಗ ಕರಿಯ ನಾಯಕನು ಸಿರಿಹೊನ್ನೆಯ ತುರು ಹುಯಿಲಿನಲ್ಲಿ ಬರುವಾಗ ಕಾದಿ ಮಡಿದು ಸ್ವರ್ಗಸ್ತನಾದ. ಅವನ ಮದುವಳಿಗೆ ತಂಬಾಯಮ್ಮ ಅವನ ಜೊತೆ ಕೂಡಿ ಸ್ವರ್ಗಕ್ಕೆ ಹೋಗುತ್ತಾಳೆ".[5] "ನಿಜಗಲ್ ಕೆಂಪೋಹಳ್ಳಿಯ ಒಂದು ವೀರಗಲ್ಲಿನಲ್ಲಿ ಒಂದೇ ಹಂತದಲ್ಲಿ ತುರುಗಳನ್ನು ಮತ್ತು ವೀರನನ್ನು ಹಾಗೂ ಅವನ ಪತ್ನಿ ಸತಿಯಾಗುತ್ತಿರುವ ಸನ್ನಿವೇಶವನ್ನು ಚಿತ್ರಿಸಲಾಗಿದೆ".[6] ಸೊರಬದ ಒಂದು ಶಾಸನ ತುರುಗಾಳಗದ ಸಂದರ್ಭದಲ್ಲಿ ಹೋರಾಡಿ ಮಡಿದ ವೀರನ ಪತ್ನಿಯು ಪತಿಯನ್ನು ಕೂಡಿ ಸತಿಯಾದ ವಿಷಯ ತಿಳಿಸುತ್ತದೆ.

**"ವಿಕ್ರಮ ಸಂವತ್ಸರದ ಆಶ್ವಿಜ 12ನೇ ಸೋಲು ಯಿಂಚಿ,,**
**ಯಹಳ್ಳಿಯವರೂ ಮತ್ತೆಯವರು ಪಡುತುರುವ ಹೋದಲ್ಲಿ...**
**ರಸ ಊರಲಿ ಬಗಂಡರ(?) ಬಂದು ಬೀಳಲು ದುಪ್ಪನಾ,,**
**ಯಕನೂ ತುರುವ ತಿರಿಹಿಬಿದ್ದನು ಇವನ ಸತಿ,,**
**ಕೂಡೆ ಹೋದಳು"** [7]

ಮೇಲಿನ ಸಂದರ್ಭಗಳಲ್ಲಿ ತುರುಗಳ ರಕ್ಷಣೆಗೆ ಹೋದ ಗಂಡನು ಶತ್ರುಗಳೊಂದಿಗೆ ಹೋರಾಡಿ ಮಡಿದಾಗ ಆತನ ಹೆಂಡತಿಯು ಆ ವೀರನ ಹಿಂದೆಯೇ ಸಹಗಮನ ಮಾಡಿರುವ ಸನ್ನಿವೇಶಗಳನ್ನು ತಿಳಿಯಬಹುದಾಗಿದೆ.

ಊರಳಿವು ಎಂದರೆ ಯುದ್ಧದ ನಂತರ ಗೆದ್ದ ಪಕ್ಷದವರು ಸೋತ ಪಕ್ಷದವರ ಗ್ರಾಮಗಳ ಮೇಲೆ ದುರಾಕ್ರಮಣ ಮಾಡುವ ಒಂದು ವಿಷಮ ಪರಿಸ್ಥಿತಿಯಾಗಿದೆ.

ಕ್ರಿ.ಶ.1128ರಲ್ಲಿ ತೈಲಪ್ಪ ದೇವನ ಮಹಾ ಪ್ರಧಾನಿ ಮಸಣಯ್ಯನು ತನ್ನ ಸಮಸ್ತ ಸೈನ್ಯವನ್ನು ಈಸಾಪುರದ ಮೇಲೆ ದಾಳಿ ಇಡಲು ಸೂಚಿಸುತ್ತಾನೆ. ಪೆರ್ಮಾಡಿ ಸಾನ್ತರು ಕೋಟೆಯನ್ನು ಮುತ್ತಿ, ಪೆಂಡಿರುಡೆ ಉರ್ಚ್ಚುವಾಗ ಇದನ್ನು ಕಂಡ ಕಾಳಿಗ ನಾಯಕನ ಗಂಧವಾರಣನಾದ "ಬಮ್ಮಸಾನ್ತನು ಕೋಪದಿಂದ ಕಡಿತಲೆ, ಪಲಗೆ ಮುಂತಾದ ಆಯುಧಗಳನ್ನು ಬಳಸಿ ಶತ್ರುಗಳನ್ನು ಕಡಿಖಂಡವಾಗಿ ಪೊಯ್ದುಡೆ ಕಡೆದುದು ಧಾರಣಿಯ ಮೇಲೆ ವೈರಿ ಸಮೂಹಂ"[8] ತಕ್ಷಣವೇ ಶತ್ರುಗಳು ಪ್ರಯೋಗಿಸಿದ ಬಾಣಗಳು ಮೈಯನ್ನು ಚುಚ್ಚಲು ಬಸವಳಿದ ಬಮ್ಮ ಸಾಂತನು ರಣರಂಗದಲ್ಲೇ ಬಿದ್ದು ಪ್ರಾಣ ಬಿಟ್ಟನು. ಆಗ ಇವನ ಶೌರ್ಯಕ್ಕೆ ಮೆಚ್ಚಿದ ದೇವರುಗಳು ದುಂದುಂಬಿಯನ್ನು ಮೊಳಗಿಸಿದಂತೆ ಇಡೀ ಶಾಸನವು ಹೇಳುತ್ತದೆ. ಹಳೇಬೀಡಿನ ಕೆರೆಯ ಕಟ್ಟೆಯ ಮೇಲೆ ಇರುವ ಶಾಸನದಲ್ಲಿ "ಮುದ್ದನೆಂಬುವನು ತಾಗರ್ತಿಯ ಕೋಟೆಯನ್ನು ಹತ್ತಿ ಹೆಂಗಳಿರ್ಕ್ಕೊಡೆ ಹೇರಾಳವ ಮಾಡುತ್ತವಿರಲು ಇದನ್ನು ಕಂಡು ಹೊಯ್ಸಣದೇವನು ವರುಡೆ ಚಾಮಯ ನಾಯಕನನ್ನು ಕರೆದು ಅವನನ್ನು ನಿಗ್ರಹಿಸಲು ಆದೇಶಿಸುತ್ತಾನೆ"9 ಇಲ್ಲಿ ಉಲ್ಲೇಖವಾದ ಹೆಂಗಳೆಯರೊಡನೆ ಹೇರಾಳವಾ ಮಾಡುತ್ತಿದ್ದನೆಂಬ ಪದವು ಅವರೊಡನೆ ಅಸಭ್ಯವಾಗಿ ನಡೆದುಕೊಳ್ಳುತ್ತಿದ್ದ ಅಥವಾ ಅವರಿಗೆ ಕಾಟ ಕೊಡುತ್ತಿದ್ದನೆಂದು ಅರ್ಥೈಸುತ್ತದೆ.

ಊರಳಿವಿನ ಸಂದರ್ಭದಲ್ಲಿ ಸತ್ತ ಗಂಡನ ಜೊತೆಗೆ ಸಹಗಮನ ಮಾಡಿದ

ಸನ್ನಿವೇಶಗಳನ್ನು ನೋಡಬಹುದು– "ಎಚಗ ಉಡ ಎನ್ನುವವ ಕಳ್ಳರು ಊರನ್ನು ಕೊಳ್ಳೆ ಹೊಡೆದು ಹೋಗುವಾಗ ಅವರನ್ನು ಇರಿದು ಸತ್ತು ಹೋಗಲು ಅವನ ಹೆಂಡತಿ ಸಹಗಮನ ಮಾಡುತ್ತಾಳೆ"[10] ಹೀಗೆ ಪತಿಯ ವೀರಮರಣದ ನಂತರ ಹೆಂಡತಿಯು ಸತಿಯಾಗಿರುವುದನ್ನು ಗುರುತಿಸಬಹುದು.

ಅಲ್ಲಾವುದ್ದೀನ್ ಖಿಲ್ಜಿಯಿಂದ ಪ್ರಾರಂಭವಾಗಿ(ಕ್ರಿ.ಶ.1296) ಮಹಮ್ಮದ್ ಬಿನ್ ತುಘಲಕ್‌ನ ಸೇನಾಪತಿ ಮಲ್ಲಿಕಾಫರ್‌ನಿಂದ ಮುಂದುವರೆದ ಅನೇಕ ಸಲದ ಆಕ್ರಮಣಗಳಿಂದ ದಕ್ಷಿಣದ ಮೂರು ಮುಖ್ಯ ಸಾಮ್ರಾಜ್ಯಗಳಾದ ಮಹಾರಾಷ್ಟ್ರದಲ್ಲಿನ ದೇವಗಿರಿಯ ಯಾದವರು, (ಕ್ರಿ.ಶ.1307) ಆಂಧ್ರಪ್ರದೇಶದಲ್ಲಿನ ಓರಂಗಲ್ಲು ಕಾಕತೀಯರು, (ಕ್ರಿ.ಶ.1309) ಕರ್ನಾಟಕದಲ್ಲಿನ ದ್ವಾರಸಮುದ್ರದ ಹೊಯ್ಸಳರು (ಕ್ರಿ.ಶ.1312) ಹೋರಾಟ ಮಾಡಲಾಗದೆ ಕುಸಿದು

ಹೋಗುತ್ತಾರೆ. ಆಗ ಹೊಸಮಲೆದುರ್ಗ ಕಮ್ಮಟಗಳ ಕಂಪಿಲ ದೇವರಾಯನ ಮಗ ಕುಮಾರರಾಮ ಈ ದಕ್ಷಿಣದ ರಕ್ಷಣೆಗೆ ನಿಲ್ಲುತ್ತಾನೆ. ದೇವಗಿರಿ ಯಾದವರ ಸಾಮಂತರಾಗಿದ್ದ ಇವರು ಹೊಯ್ಸಳ ಕಾಕತೀಯರನ್ನು ನಾಶಮಾಡಿ ಬಳಿಕ ದಕ್ಷಿಣದ ಏಕೈಕ ರಕ್ಷಕರೆಂಬಂತೆ ಉತ್ತರದಲ್ಲಿನ ತುಘಲಕರೊಂದಿಗೆ ಹೋರಾಡಲು ಮುಂದಾಗುತ್ತಾನೆ. ಆಗ ಸುರಿತಾಳ ಸಿಟ್ಟಿಗೆ ಗುರಿಯಾಗಿ ಅವಳು ಮಾದಗಿತ್ತಿಯ ನೇತೃತ್ವದಲ್ಲಿ ಕಳುಹಿಸಿದ ಸೈನ್ಯವನ್ನು ಹೆದುರಿಸಬೇಕಾಗುತ್ತದೆ. ಜೊತೆಗೆ ನೇಮಿಖಾನನು ಕೂಡ ಕೈಜೋಡಿಸಿದ್ದು, ಅಷ್ಟೇ ಅಲ್ಲದೆ ರಾಮನ ಸೈನ್ಯದಲ್ಲಿದ್ದ ತೆಲುಗು ನಾಯಕರು ಮಾದಗಿತ್ತಿ ಪರವಾಗಿ ಕೋಟೆ ಬಾಗಿಲು ತೆರೆಯುತ್ತಾರೆ. ಆಗ ಒಳಕೋಟೆ ಕೈಬಿಡುವ ಮುನ್ಸೂಚನೆ ದೊರೆತ ರಾಮನು ತನ್ನ ಹೆಂಡತಿಯರಿಂದ 'ಮಾಸ್ತಿ' ಆಗುವ ಭರವಸೆ ಪಡೆದು ಯುದ್ಧಕ್ಕೆ ಹೊರಡುತ್ತಾನೆ. ಮಾದಗಿತ್ತಿಯನ್ನು ಹತ್ತಿಕ್ಕುತ್ತಿದ್ದ ರಾಮನು ಸಂಗ್ರಾಮದಲ್ಲಿ ಕಾದಿ ಹೆಂಗಸನ್ನು ಕೊಂದರೆ ಭಂಗ ತಪ್ಪದು ಸ್ವರ್ಗದೊಳಗೆ ಎಂದು ಅವಳನ್ನು ಕೊಲ್ಲದೇ ಬಿಟ್ಟು ತಪ್ಪು ಮಾಡುತ್ತಾನೆ. ತುರುಕರು ದಾಳಿ ಮಾಡಿ ರಾಮಯ್ಯನ ಮೇಲೆ ಬಾಣದ ಮಳೆಯನ್ನೇ ಸುರಿಸುತ್ತಾರೆ. ಬದುಕುವ ಭರವಸೆ ಕಳೆದುಕೊಂಡ ರಾಮಯ್ಯ ತನ್ನ ಸಹಚರ ಕಾಟಣ್ಣನಿಗೆ ಹೀಗೆ ಹೇಳುತ್ತಾನೆ. ಅರಮನೆಗೆ ಹೋಗಿ ಮಡದಿಯರನ್ನು ಕೊಂದು ಬರಲು ಆದೇಶಿಸುತ್ತಾನೆ. ಅಂತೆಯೇ ಕಾಟಣ್ಣ ಬಂದು ವಿಷಯ ಹೇಳಲು ನಾರಿಯರೆಲ್ಲ ಮಳೆಲಗೌರಿಯನ್ನು ಪೂಜಿಸಿ ಓಡಿಬಂದು ಕೊಂಡ ಸುತ್ತಿ, ಕಟ್ಟೆ ಹತ್ತಿ, ರಾಮನನ್ನು ನೆನೆದು ಹಾಡುತ್ತ ಹೋಗಳುತ್ತಾ ಕಿಚ್ಚಿನಲ್ಲಿ ಧುಮುಕುತ್ತಾರೆ.

**"ಮಳಲ ಗೌರಿಯ ನೋಂತರು ಹೇಳು ಜಲ್ಮಕೆ**

... .. .. .. .. .. .. .. .. .. .. .. .. .. .. .. ..

**ರೋಡೀಶ ಕಾಟಣ್ಣ ನೋಡುತ ನಿಂದನು**

**ಪಾಡುತ ಧುಮುಕಿದರಾಗ ॥ 200 ॥**

**ಮತ್ಸ್ಯ ಗಂಗಳೆಯರಿಗೆ ಕಿಚ್ಚು ಕಾಣಿಸಿ ಕಾಟ**

**ನಿಶ್ಚಯಿಸಿ ತಿರುಗಿದನಾಗ ॥ 201 ॥"**[11]

ಹೀಗೆ ಕುಮಾರರಾಮನ ಹೆಂಡತಿಯರು ಸತಿಯಾಗಿರುವುದನ್ನು ಗುರುತಿಸಬಹುದು.

ಪುರುಷನ ಪೌರುಷತ್ವದ ಒತ್ತಡಕ್ಕೆ ಸಿಲುಕಿ ತನ್ನದಲ್ಲದ ತಪ್ಪಿಗೆ ಆಕ್ರಮಣಕಾರರ ಕೈಯಲ್ಲಿ ಮಾನಭಂಗಕ್ಕೆ ಒಳಗಾದ ಅಸಹಾಯಕ ಹೆಣ್ಣಿನ ವೇಧನೆಯ ಕೂಗು

ಪೆಣ್ಬುಯ್ಯಲ್ ಆದರೆ, ಗಂಡಿನ ವೀರತ್ವದ ತ್ಯಾಗ ಮತ್ತು ಅಸಹಾಯಕತೆಯ ಅಂತ್ಯದಲ್ಲಿ ಬಲಿಯಾಗಿ ಧಾರ್ಮಿಕತೆಯ ಮುಖವಾಡದ ಹಿಂದೆ ಬೆಂದವಳು ಸತಿ. ಇಲ್ಲಿ ಹೆಣ್ಣಿನ ಶೋಷಣೆಯ ಎರಡು ನೆಲೆಗಳನ್ನು ಗುರುತಿಸಬಹುದಾಗಿದೆ.

**ಕೊನೆ ಟಿಪ್ಪಣಿಗಳು**

1. ಕಲ್ಬುರ್ಗಿ ಎಂ. ಎಂ., ಸಮಾಧಿ ಬಲಿದಾನ ವೀರಮರಣ ಸ್ಮಾರಕಗಳು, ಪುಟ–24.
2. ಅದೇ, ಪುಟ–24.
3. ಕೊರಕೋಡು ಶಾಸನ, ಇ ಅ –೧೫೫೫ ಸೊರಬ 175, ಕ್ರಿ.ಶ. 1155–56.
4. ಎ ಕ– 6. ಕೆ ಆರ್ ಪೇಟೆ 78 ಕ್ರಿ. ಶ. 1224.
5. ಒಂಖ 1923, ಸಾಗರ ಕುಗ್ವೆಹಳ್ಳಿ 80. ಕಾಲ. 1451.
6. ನಿಜಗಲ್ ಕೆಂಪೋಹಳ್ಳಿಯ ನೆಲಮಂಗಲ (ತಾ) ಬೆಂಗಳೂರು ಗ್ರಾ.
7. ಇಅ ಗಿ೦ಟ–೧೫೫೫, ಸೊರಬ 482.
8. ಉದ್ರಿ. ಎಕ–8 ಸೊರಬ. 141 ಕ್ರಿ. ಶ. 1128.
9. ಹಳೇಬೀಡು ಎ. ಕ. 9 ಹೊ. ಬೇಲೂರು 348.
10. ಒಂಖ 1928 ಸೊರಬ–95.
11. ಹೊಸಕುಮಾರ ರಾಮನ ಸಾಂಗತ್ಯ, ಸಂಧಿ– 12/347, ಪುಟ–346.

**ಪರಾಮರ್ಶನ ಗ್ರಂಥಗಳು**


1. ಚಿದಾನಂದಮೂರ್ತಿ ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಸಪ್ನ ಬುಕ್ ಹೌಸ್, ಬೆಂಗಳೂರು, 2020.
2. ಕಲಬುರ್ಗಿ ಎಂ ಎಂ ಮತ್ತು ವೀರಣ್ಣ ರಾಜೂರ, ಹೊಸ ಕುಮಾರ ರಾಮನ ಸಾಂಗತ್ಯ, ಕನ್ನಡ ವಿಶ್ವವಿದ್ಯಾಲಯ ಹಂಪಿ, 2000.
3. ಕಲಬುರ್ಗಿ ಎಂ ಎಂ, ಸಿರುಮನ ಸಾಂಗತ್ಯ, ಸಪ್ನ ಬುಕ್ ಹೌಸ್, ಬೆಂಗಳೂರು.
4. ಕಲ್ಗುಡಿ ಬಸವರಾಜ, ಮಹಾಸತಿ ಆಚರಣೆ, ಅಭಿನವ ಪ್ರಕಾಶನ, ಬೆಂಗಳೂರು, 2019.
5. ಕಲ್ಬುರ್ಗಿ ಎಂ ಎಂ, ಸಮಾಧಿ ಬಲಿದಾನ ವೀರಮರಣ ಸ್ಮಾರಕಗಳು, ಸಪ್ನ ಬುಕ್ ಹೌಸ್, 2011.
6. ನರಸಿಂಹಮೂರ್ತಿ ಎ ಎನ್, ಕರ್ನಾಟಕದ ಸೇವಣರ ಇತಿಹಾಸ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆ, ಗೋಕುಲಂ, ಮೈಸೂರು, 2010.
7. ಪರಮಶಿವಮೂರ್ತಿ ಡಿ ವಿ, ಕನ್ನಡ ಶಾಸನ ಶಿಲ್ಪ. ಕನ್ನಡ ವಿ ವಿ, ಹಂಪಿ. 1999.
8. ಪರಮಶಿವಮೂರ್ತಿ ಡಿ ವಿ, ತುರುಗೊಳ್ ಸಂಕಥನ, ಕನ್ನಡ ವಿ ವಿ, ಹಂಪಿ. 2011.
9. ಪರಮಶಿವಮೂರ್ತಿ ಡಿ ವಿ, ಪೆಣ್ಬುಯ್ಯಲ್, ಕನ್ನಡ ವಿ ವಿ, ಹಂಪಿ. 2020.
10. ಶ್ರೀಧರ ಎಚ್ ಜಿ, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧ ಕಲೆ, ಶಿವರಾಮ ಕಾರಂತ ಅಧ್ಯಯನ ಕೇಂದ್ರ. ಪುತ್ತೂರು. ದ.ಕ. 2002.
11. ಶೆಟ್ಟರ್ ಷ, ಮೊದಲ ಸಹಸ್ರಮಾನದ ಕನ್ನಡ ಶಾಸನಗಳು, ಸಂಪುಟಗಳು, ಅಭಿನವ ಪ್ರಕಾಶನ, ಬೆಂಗಳೂರು, 2022.
12. ಸಂಧ್ಯಾ ವಿ, ಕರ್ನಾಟಕದ ಮಹಿಳಾ ಲೋಕ, ಕದಂಬ ಪ್ರಕಾಶನ, ಬೆಂಗಳೂರು. 2018.
13. ವರದರಾಜರಾವ್ ಜಿ, ಕುಮಾರ ರಾಮನ ಸಾಂಗತ್ಯಗಳು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, 1966.


❖❖❖

# ಕುವೆಂಪು ಕಥನ ವಾಙ್ಮಯ ದರ್ಶಿಸುವ ಮಹಿಳಾ ಜಗತ್ತು

**ಪ್ರೊ. ಕವಿತಾ ರೈ**
ಪ್ರಾಧ್ಯಾಪಕರು, ಕನ್ನಡ ವಿಭಾಗ, ಕ.ರಾ.ಮು.ವಿ.ವಿ. ಮೈಸೂರು

ಕುವೆಂಪು ಅವರ ಕೃತಿಗಳಲ್ಲಿ ಅಭಿವ್ಯಕ್ತಗೊಂಡಿರುವ ಮಲೆನಾಡಿನ ಚಿತ್ರಣಕ್ಕೆ ವಿಸ್ತಾರವಾದ ಸಾಂಸ್ಕೃತಿಕ ಸಾಧ್ಯತೆಗಳನ್ನು ಅನಾವರಣಗೊಳಿಸುವ ಶಕ್ತಿ ಇದೆ. ಇದಕ್ಕಿರುವ ಕಾರಣಗಳೇನು ಎಂಬುದನ್ನು ಅಧ್ಯಯನಕ್ಕೊಳಪಡಿಸಿದರೆ, ರವೀಂದ್ರನಾಥ ಟಾಗೋರ್ ಅವರು 'ತಪೋವನ್'ನಲ್ಲಿ ನೀಡಿದ ವಿವರಣೆಯು ಮುಖ್ಯವೆನಿಸುತ್ತದೆ. "ಸಮಕಾಲೀನ ಪಾಶ್ಚಿಮಾತ್ಯ ನಾಗರಿಕತೆಗಳು ಇಟ್ಟಿಗೆ ಮತ್ತು ಮರಗಳಿಂದ ಕಟ್ಟಲ್ಪಟ್ಟಿವೆ. ಅವು ನಗರಾಧಾರಿತ. ಆದರೆ, ಭಾರತೀಯ ನಾಗರಿಕತೆಯ ಪುನರುತ್ಥಾನದ ಮೂಲಕಾಡು. ಭಾರತೀಯರ ಅತ್ಯುತ್ತಮ ಚಿಂತನೆಗಳು ಅವರು ಕಾನನ, ನದಿ ಮತ್ತು ಸರೋವರಗಳ ಜೊತೆ ಇದ್ದಾಗ ಹೊರಬಿದ್ದಿವೆ..."[1] ಕುವೆಂಪು ಅವರಿಗೆ ಜೀವ ಸಂಕುಲದ ಮೂಲವಾದ ಪ್ರಕೃತಿ ಪವಿತ್ರ. ಅವರು ಪ್ರಕೃತಿಯೊಡನೆ ಬೌದ್ಧಿಕವಾಗಿ, ಭಾವನಾತ್ಮಕವಾಗಿ ಹಾಗು ಆಧ್ಯಾತ್ಮಿಕವಾಗಿ ಮೇರು ರೂಪಾಂತರವನ್ನು ಸಾಧಿಸಬಲ್ಲವರೆಂಬುದಕ್ಕೆ ಅವರ ದರ್ಶನ ರೂಪದ ಬರಹಗಳೇ ಸಾಕ್ಷಿ.

'ಕಾನೂರು ಹೆಗ್ಗಡಿತಿ'ಯ ಗಂಡು-ಹೆಣ್ಣಿನ ಸಂಬಂಧದ ಸಂಘರ್ಷ ಬೆರಗು ಹುಟ್ಟಿಸುವಂಥದ್ದು. ಸಂಬಂಧಗಳ ಸೂಕ್ಷ್ಮಾತಿಸೂಕ್ಷ್ಮ ಶೋಷಣೆಯ ಸ್ವರೂಪವನ್ನು ಕಾದಂಬರಿ ಅದರ ಮುಖ್ಯ ಭೂಮಿಕೆಗಳಿಂದಲೇ ನಿರೂಪಿಸುತ್ತ ಸಾಗುತ್ತದೆ. ಹೆಂಗಸಿನ ನೆಲೆಯಿಂದ ಚಿತ್ರಣಗೊಂಡಿರುವ ಅವಕಾಶಗಳಲ್ಲಿ ಅಧಿಕಾರ ಇರುವುದಿಲ್ಲ. ಸುಬ್ಬಮ್ಮನಿಗೆ ಚಂದ್ರಯ್ಯಗೌಡನಂತೆ ಗೌಡಿಕೆಯನ್ನು ಮಾಡುವ ಅವಕಾಶವಿದೆ. ಆದರೆ, ಅಧಿಕಾರಕ್ಕೆ ಸಮಾಜದ ಸಮ್ಮತಿ ಇಲ್ಲ. ಸಮ್ಮತಿಯ ಅಗತ್ಯವಿಲ್ಲವೆಂದು ಸುಬ್ಬಮ್ಮ ಗಟ್ಟಿಯಾಗಿ ನಿಂತಾಗಲೆಲ್ಲ ತಳ ಬಿರುಕು ಬಿಡುತ್ತದೆ. ಪುರುಷನಿಷ್ಠ ವ್ಯವಸ್ಥೆಯ ಹುಸಿಗಾಂಭೀರ್ಯ ಎಲ್ಲವೂ ಕುಸಿದುಬಿದ್ದ ಅರಾಜಕ ಸ್ಥಿತಿಯಲ್ಲಿಯೂ ಅದರ ವಿಲಕ್ಷಣ ಸ್ಥಿರತೆ ಮತ್ತು ಸಾತತ್ಯ ಪೂರ್ವಾನ್ವಯಕ್ಕೆ ಕಾದಂಬರಿಯ ಒಳಗೆ ಬೀಳುವ ಒತ್ತು ಕಥೆಯ ಚೌಕಟ್ಟನ್ನು ಬಿಗಿದು ಕಟ್ಟುವಲ್ಲಿ ಸಫಲವಾಗಿದೆ. ಕುವೆಂಪು ಅವರ ಲೋಕದೃಷ್ಟಿ ಗಂಡು-ಹೆಣ್ಣು 'ಸ್ವ' ಮತ್ತು 'ಅನ್ಯ'ಗಳ ನಡುವೆ ಕಂದರವಿಲ್ಲದ ಒಂದು ಅಖಂಡ ಸಮುದಾಯವನ್ನು ಚಿತ್ರಿಸುತ್ತದೆ. ಅಖಂಡ ಸಮುದಾಯದ ಕಲ್ಪನೆ ಕುವೆಂಪು ಅವರ ಪಾಲಿಗೆ ನೆನಪೂ ಹೌದು, ಕನಸೂ ಹೌದು.

ಲಿಂಗಾಧಾರಿತ ಶೋಷಣೆಯ ಎಲ್ಲಾ ಒಳಸುಳಿಗಳನ್ನು ಸೂಕ್ಷ್ಮಾತಿಸೂಕ್ಷ್ಮ ವಿವರಗಳಲ್ಲಿ ಕಟ್ಟಿಕೊಡುವ ಕುವೆಂಪು ಅವರ ಕಾದಂಬರಿ 'ಮಲೆಗಳಲ್ಲಿ ಮದುಮಗಳು'. ಎಲ್ಲ ನೆಲೆಯಿಂದಲೂ ಸೂಕ್ಷ್ಮಜ್ಞರಾದ ಕುವೆಂಪು ವ್ಯವಸ್ಥೆಯ ಒಳಗಿನ ಸ್ತ್ರೀ-ಪುರುಷರ ನಡುವಿನ ಅಸಮಾನತೆಯ ರೋಗವನ್ನು ಶಕ್ತವಾಗಿ ಗುರುತಿಸಿದವರು. 'ಕಾನೂರು ಹೆಗ್ಗಡಿತಿ' ಮತ್ತು "ಮಲೆಗಳಲ್ಲಿ ಮದುಮಗಳು" ಈ ಎರಡು ಕಾದಂಬರಿಗಳು ಕಥಾವಸ್ತುವಿನ ದೃಷ್ಟಿಯಿಂದ ಪರಸ್ಪರ ಪೂರಕವಾದ ರಚನೆಗಳು ಮತ್ತು ಇವು 'ದೇಶ'

‘ಕಾಲ’ಗಳ ನಿರಂತರತೆಯನ್ನು ಕಥನದಲ್ಲಿ ಶಕ್ತವಾಗಿ ಸಾಧಿಸಿದವು. ತುಂಗಾನದಿಯ ಆಚೆಯ ಬದುಕಿನ ಚಿತ್ರಣ ‘ಕಾನೂರು ಹೆಗ್ಗಡಿತಿ’ಯಲ್ಲೂ, ತುಂಗಾ ನದಿಯ ಈಚೆಗಿನ ಜೀವನಕ್ರಮ ‘ಮಲೆಗಳಲ್ಲಿ ಮದುಮಗಳು’ ಕೃತಿಯಲ್ಲಿ ಚಿತ್ರಿತಗೊಂಡಿರುವುದು ಅಖಂಡವಾದ ಮಲೆನಾಡಿನ ಸಂಸ್ಕೃತಿಯ ಆವರಣವನ್ನು ನಿರ್ಮಿಸಿಕೊಳ್ಳುವ ನೆಲೆಯಿಂದ ಆಗಿದೆ.

ಕುವೆಂಪು ಲೌಕಿಕವನ್ನು ಕಂಡರಿಸಿದ ರೀತಿ ಅನನ್ಯವಾದದ್ದು. ಅವರ ಪ್ರಕೃತಿಯ ಪರಿಕಲ್ಪನೆಯೆ ಪ್ರಕೃತಿಯನ್ನು ಯಾವುದೇ ರೀತಿಯಿಂದಲೂ ಶೋಷಿಸುವುದನ್ನು ವಿರೋಧಿಸುವ ಸಾಂಸ್ಕೃತಿಕ ಗ್ರಹಿಕೆಯಾಗಿದೆ. ಕುವೆಂಪು ಅವರ ಕಾದಂಬರಿಗಳನ್ನು ಅಧ್ಯಯನ ನಡೆಸಿದರೆ ಪುರುಷ ಪ್ರಧಾನವಾದ ಸಾಮಾಜಿಕ ವ್ಯವಸ್ಥೆ ಮತ್ತು ವಿಜ್ಞಾನವು ಹೇಗೆ ಪರಿಸರ ಹಾಗೂ ಮಹಿಳೆಯರನ್ನು ಹತ್ತಿಕ್ಕಿ ಲಿಂಗಾಧಾರಿತ ಧ್ರುವೀಕರಣಕ್ಕೆ ಬೆಂಬಲ ನೀಡಿದವು ಎಂಬುದು ಸ್ಪಷ್ಟವಾಗುತ್ತದೆ.

ಪಾತ್ರಗಳು ಸಜೀವವಾಗಿ ಕಂಡಷ್ಟು ಕಾದಂಬರಿ ಓದುಗರಲ್ಲಿ ಬೀರುವ ಪರಿಣಾಮವು ಕೂಡ ಶಕ್ತವಾಗಿದೆ. ಕಾನೂರು ಹೆಗ್ಗಡಿತಿ ಸುಬ್ಬಮ್ಮ ಮತ್ತು ಹೂವಯ್ಯನನ್ನು ಮನಸಾರೆ ಪ್ರೀತಿಸುವ ಸೀತೆ, ಖಳನಾಯಕಿಯಂತೆ ಚಿತ್ರಣಗೊಂಡಿರುವ ಗಂಗೆ, ಹಳ್ಳಿಯ ಹೆಂಗಸರ ಎಲ್ಲಾ ಸರಳತೆಗಳನ್ನು ಮೈಗೂಡಿಸಿಕೊಂಡಿರುವ ನಾಗಮ್ಮ, ಗೌರಮ್ಮನಂಥವರು ಇಡೀ ಕಾದಂಬರಿಯಲ್ಲಿ ವ್ಯಕ್ತಿ–ಸಂಬಂಧಗಳ ವಿಲಕ್ಷಣೆಯನ್ನು ಪ್ರತಿಬಿಂಬಿಸುವವರಾಗಿದ್ದಾರೆ. ಕಾಲದಿಂದ ಕಾಲಕ್ಕೆ ಭಾರತದ ಮಹಿಳೆಯರ ಬದುಕು ಸೋಲುತ್ತಲೇ ಸಾಗಿದೆ. ಈ ಸೋಲಿನ ಪ್ರಯಾಣದ ಚರಿತ್ರೆಯಲ್ಲಿ ಮಹಿಳೆಯರು ಎದುರಿಸುವ ಮತ್ತು ಎದುರಿಸಬೇಕಾದ ಶತ್ರುಗಳು ಅವರ ಬದುಕಿನ ಒಳಗಿದ್ದಾರೆ ಎಂಬುದೇ ನೋವಿನ ಸಂಗತಿ. ಹಳ್ಳಿ, ಪಟ್ಟಣ, ನಗರಗಳಲ್ಲಿ ಮಹಿಳೆಯರ ನಿರ್ಬಂಧಿತ ಬದುಕು, ಶೋಷಣೆಯ ಸ್ವರೂಪ ಒಂದೇ ಆಗಿಲ್ಲ, ಜಾತಿ–ಜಾತಿಗಳ ಒಳಗಿನ ಮಹಿಳೆಯರ ಸ್ಥಿತಿಗತಿಗಳಲ್ಲಿ ಅಗಾಧವಾದ ವ್ಯತ್ಯಾಸಗಳಿವೆ, ವೈರುಧ್ಯಗಳಿವೆ. ಕುವೆಂಪು ಕಥನವು ಹೇಗೆ ಹೆಂಗಸರು ಆಸ್ತಿಯನ್ನು ಹೊಂದುವ, ಚರಬಾರೆ ಮಾಡುವ, ಮಾರಾಟ ಮಾಡುವ ಹಕ್ಕಿನಿಂದ ವಂಚಿತರಾಗಿದ್ದಾರೆ ಎಂಬುದನ್ನು ನಿರೂಪಿಸುವುದರ ಜೊತೆಗೆ ಸ್ತ್ರೀಯರ ಬದುಕಿನಲ್ಲಿ ನಿರ್ಣಯಗಳನ್ನು ಕೈಗೊಳ್ಳುವ ಅಧಿಕಾರ ಹೇಗೆ ಪುರುಷರಲ್ಲಿಯೇ ಅಂತಸ್ಥವಾಗಿವೆ, ಮಾತ್ರವಲ್ಲ ಅವು ಯಾವೆಲ್ಲ ಕಾರಣಗಳಿಂದ ಜೀವ ವಿರೋಧಿಯಾಗಿವೆ ಎಂಬುದನ್ನು ಸ್ತ್ರೀ ಪಾತ್ರಗಳು ಎದುರಿಸುವ ಸನ್ನಿವೇಶಗಳಿಂದ ನಿರೂಪಿಸುತ್ತವೆ.

ಪ್ರತಿಯೊಂದು ಕಾಲಘಟ್ಟಗಳಲ್ಲಿಯೂ ಅದರದರ ಹಿಂಸೆಯ ತಳರೂಪಿಕೆ ಇರುತ್ತದೆ. ನೆಲ್ಲುಹಳ್ಳಿಯ ಜನರಿಂದ ‘ಸುಬ್ಬಿ’ ಎಂದು ಕರೆಸಿಕೊಳ್ಳುವ ತುಂಬು ಬಡತನದ ಕುಟುಂಬದ ಹಿನ್ನೆಲೆಯಿಂದ ಬಂದ ಸುಬ್ಬಮ್ಮಳಿಗೆ ವಿವಾಹದ ಮಾತುಕತೆ ಬಂದಾಗ ಅವಳು ಹೂವಯ್ಯನೇ ವರನೆಂದು ಭಾವಿಸಿಕೊಂಡವಳು. ಒಂದೆರಡು ಮದುವೆಯ ಪ್ರಸಂಗಗಳಲ್ಲಿ ಹೂವಯ್ಯನನ್ನು ಕಂಡು ಒಳಗೊಳಗೆ ಹಗಲುಗನಸನ್ನು ಕಂಡವಳು. ಕಾನೂರಿನ ಚಂದ್ರಯ್ಯ ಗೌಡರು ಹೆಣ್ಣು ಕೇಳಲು ಮನೆಗೆ ಬಂದಾಗ ಹೂವಯ್ಯನಿಗಾಗಿಯೇ ತನ್ನನ್ನು ಕೇಳಲು ಬಂದಿರಬಹುದೆಂದು ಸಂತೋಷಪಟ್ಟವಳು. ಕೊನೆಗೆ, ತಾನು ಮದುವೆಯಾಗಬೇಕಾಗಿರುವುದು ಹೂವಯ್ಯನನ್ನಲ್ಲ ಚಂದ್ರೇಗೌಡರನ್ನು ಎಂದು ತೀರ್ಮಾನಗೊಂಡಾಗ, ಸದ್ದಿಲ್ಲದೆ ಅದನ್ನು ಒಪ್ಪಿ ಸ್ವೀಕರಿಸಿದವಳು.

ತನ್ನತನವನ್ನು ರಕ್ಷಿಸಿಕೊಳ್ಳಲು ಅವಳಿಗಿದ್ದ ಒಂದೇ ಒಂದು ಆಯ್ಕೆ ಅದು ಚಂದ್ರಯ್ಯಗೌಡರ ಮೂರನೆಯ ಹೆಂಡತಿಯಾಗಿ ಕಾನೂರಿನ ಮನೆ ಸೇರುವುದು. ಚಂದ್ರಯ್ಯಗೌಡರ ಹೆಂಡತಿಯಾಗಿ ಬದುಕುವುದು ಸುಬ್ಬಮ್ಮ ಅವಳ ಘಾಸಿಗೊಂಡ ಭಾವನೆಗಳಿಗೆ ಮಾಡಿಕೊಂಡ ಚಿಕಿತ್ಸೆ. ಹೀಗಾಗಿ, ಅವಳಿಗೆ ಬಹಳ ಪ್ರಜ್ಞಾಪೂರ್ವಕವಾಗಿ ಬಡತನದ ಬದುಕಿನಿಂದ ಸಿಕ್ಕ ಮುಕ್ತಿಯಾಗಿ ವಿವಾಹದ ಅವಕಾಶ ಕಾಣಿಸಿದೆ. ತಾನು ಮದುವೆಯಾಗ ಬೇಕಾಗಿರುವುದು ಚಂದ್ರೇಗೌಡರನ್ನು ಎಂಬ ಸತ್ಯವನ್ನು ಸುಬ್ಬಮ್ಮ ಬಹಳ ಸಹಜವಾಗಿಯೆ ಸ್ವೀಕರಿಸುವುದು ವ್ಯವಹಾರ ಜಾಣ್ಮೆಯಿಂದ ಎಂದೆನಿಸಿದರೂ, ಅವಳಿಗೆ ಬದುಕಿನಲ್ಲಿ ಬೇರೆ ಆಯ್ಕೆಗಳಿರಲಿಲ್ಲ ಎಂಬುದನ್ನು ಕಾದಂಬರಿಯ ಸುದೀರ್ಘ ವಿವರಗಳು ಸ್ಪಷ್ಟಪಡಿಸುತ್ತವೆ. ಕಾನೂರಿನಂಥ ದೊಡ್ಡ ಮನೆಗೆ ಯಜಮಾನನಾದ ಚಂದ್ರಯ್ಯಗೌಡನ ಕೈ ಹಿಡಿಯುವುದೂ ಹೆಗ್ಗಡತಿಯಾಗುವುದೂ ಒಂದು ಮಹಾ ಸುಕೃತವೆಂದು ಭಾವಿಸಿ ಸಮಾಧಾನ ಪಟ್ಟುಕೊಂಡವಳು. ಸುಬ್ಬಮ್ಮನ ಪರಿಸ್ಥಿತಿಯನ್ನು ಕೃತಿ ಒಂದು ನಿರ್ಣಾಯಕ ನೆಲೆಯಿಂದಲೇ ಕಟ್ಟಿಕೊಡುತ್ತದೆ.

ಊಳಿಗಮಾನ್ಯ ವ್ಯವಸ್ಥೆಯೊಳಗಿನ ಪುರುಷ ನಿಷ್ಠಪ್ರಧಾನ ಸಂಸ್ಕೃತಿಯ ಎಲ್ಲ ರೀತಿಯ ನೇತ್ಯಾತ್ಮಕವಾದ ಅಂಶಗಳು ಸುಬ್ಬಮ್ಮನ ಪಾತ್ರದಲ್ಲಿ ಘನೀಕರಿಸಿದೆ. ಎಲ್ಲ ಬಗೆಯ ದ್ವಂದ್ವ, ಸಂಕೀರ್ಣತೆಗಳಿಂದ ಈಕೆಯ ವ್ಯಕ್ತಿತ್ವ ರೂಪುಗೊಂಡ ಕಾರಣದಿಂದ ಸಂಸ್ಕೃತಿ–ಅಸಂಸ್ಕೃತಿ, ಸಂಸ್ಕಾರ–ಅಸಂಸ್ಕಾರ ಇಂಥ ಮೌಲ್ಯ ವಿವೇಚನೆಗೆ ಹೂವಯ್ಯನಿಗೆ ವ್ಯತಿರಿಕ್ತವಾಗಿ ಒಂದರ್ಥದಲ್ಲಿ ಸವಾಲಾಗಿ ನಿಲ್ಲುವ ಸ್ತ್ರೀತ್ವವೆಂದರೆ ಅದು ಸುಬ್ಬಮ್ಮನದು. ಅವಳನ್ನು ಆವರಿಸಿರುವ ಸಂಸಾರ ಬಂಧನಗಳ ಒಳಗೆ ಸುಬ್ಬಮ್ಮ ತೀರಾ ಅಸಹಾಯಕಳಾಗಿ ಕಾಣುವುದು ಅವಳ ಬಸಿರಿಗೆ ಸಂಬಂಧಿಸಿದ ಪ್ರಶ್ನೆಯನ್ನು ನಿಭಾಯಿಸುವಲ್ಲಿ ಮಾತ್ರ. ಸುಬ್ಬಮ್ಮ ಪ್ರತಿಭಟನೆಗಿಂತಲೂ ಪರಿಸ್ಥಿತಿಯೊಂದಿಗೆ ರಾಜಿಮಾಡಿಕೊಳ್ಳುತ್ತ, ಅವಕಾಶ ಸಿಕ್ಕಾಗಲೆಲ್ಲ ತನ್ನ ವ್ಯಕ್ತಿತ್ವವನ್ನು ಶಕ್ತವಾಗಿ ಪ್ರಕಟಿಸುತ್ತಾ ಪ್ರಬಲವಾಗಿ ಕಾಣುವುದು ಅವಳ ಸಹಜ ನಡವಳಿಕೆಯಾಗಿದೆ. ಚಂದ್ರಯ್ಯಗೌಡನಿಂದ ಸಂಭವಿಸಬಹುದಾಗಿದ್ದ ಅವಳ ಸಾವಿನಿಂದ ತಪ್ಪಿಸಿಕೊಂಡು ತವರು ಸೇರುವುದು, ತವರಿನ ಅಗತ್ಯಕ್ಕೆ ತಕ್ಕಂತೆ ಮತ್ತೆ ದುಡಿಮೆ ಮಾಡುವುದು, ಕೇವಲ ಅವಳ ಅಸ್ತಿತ್ವಕ್ಕಾಗಿ ನಡೆಸುವ ಹೋರಾಟ ಮಾತ್ರವಾಗಿರದೆ, ಬದುಕುವ ಅವಳ ಆಯ್ಕೆಗಳಿಲ್ಲದ ನೆಲೆಯನ್ನು ಶಕ್ತವಾಗಿ, ಛಲದಿಂದ ಎದುರಿಸುವ ಬಗೆಯಾಗಿದೆ. ವಯಸ್ಸಿನ ಕಾರಣಕ್ಕೆ ಅಶಕ್ತನಾದ ಚಂದ್ರಯ್ಯಗೌಡನ ಸೇವೆಗಾಗಿ ಮರಳಿ ಕಾನೂರಿಗೆ ಬಂದು ಗಂಡನ ವಿಶ್ವಾಸವನ್ನು ಗೆದ್ದು ಆತನ ಮರಣದ ನಂತರ ಅವನ ಅಧಿಕಾರಗಳನ್ನೆಲ್ಲಾ ತಾನು ಪಡೆದು ಅನುಭವಿಸುವುದು ಒಂದು ಅರ್ಥದಲ್ಲಿ ತನ್ನನ್ನು ಹತ್ತಿಕ್ಕಿದ ಭೌತಿಕ ಪರಿಸ್ಥಿತಿಗಳ ವಿರುದ್ಧ ಆಕೆ ಸಾಧಿಸುವ ವಿಜಯವೇ ಆಗಿದೆ.

ಚಂದ್ರಯ್ಯಗೌಡ ಯಜಮಾನಿಕೆ, ಲೈಂಗಿಕ ಸ್ವೇಚ್ಛಾಚಾರ ನಡೆಸಿ ಹೆಂಡತಿಯನ್ನು ಕಸವಾಗಿ ಕಂಡದ್ದಕ್ಕಾಗಿ ಕೊನೆಗಳಿಗೆಯಲ್ಲಿ ಕಣ್ಣೀರಿಟ್ಟು ಗೌರವದ ಮರಣಕ್ಕೆ ಪಾತ್ರನಾಗುತ್ತಾನೆ. ಆದರೆ, ಅದೇ ಬದುಕನ್ನು ಅನುಕರಿಸಿ ಬದುಕಿದ ಸುಬ್ಬಮ್ಮ ವಿಧವೆಯಾಗಿ ಸೇರೆಗಾರನೊಂದಿಗಿನ ಸಂಬಂಧದಿಂದ ಬಸಿರಾಗಿ ಗರ್ಭಪಾತದ ಭೀಕರತೆಯಿಂದ ಅತ್ಯಂತ ಶೋಚನೀಯ ಸಾವನ್ನು ಅನುಭವಿಸಬೇಕಾಗುತ್ತದೆ. ಪುಟ್ಟಣ್ಣ ಅವಳ ಸಾವಿಗೆ ಕಾರಣವಾದ 'ಪಿಂಡ'ವನ್ನು, ರಕ್ತದ ಕಾಲುವೆಯನ್ನು ಯಾರ ಕಣ್ಣಿಗೂ ಕಾಣದಂತೆ ಶುಚಿಗೊಳಿಸುತ್ತಾನೆ. ಹೂವಯ್ಯ ಬಂದು ನೋಡುವ ಸಂದರ್ಭದಲ್ಲಿ

ಸುಬ್ಬಮ್ಮ ಪರಿಶುದ್ಧವಾದ ಶವವಾಗಿರುತ್ತಾಳೆ.

ಮಲೆಗಳಲ್ಲಿ ಮದುಮಗಳು ಕಾದಂಬರಿಯ ಮುನ್ನುಡಿಯಲ್ಲಿ 'ಅವಸರವೂ ಸಾವಧಾನದ ಬೆನ್ನೇರಿದೆ' ಎನ್ನುವ ಮಾತುಗಳು ಅದರ ಅಖಂಡತೆಯ ರಚನಾಸ್ವರೂಪವನ್ನು ಸಂಸ್ಕೃತಿ ಮತ್ತು ಪರಂಪರೆಯ ನೆಲೆಯಿಂದಲೇ ನಿರ್ದೇಶಿಸುತ್ತದೆ. ಮಲೆಗಳಲ್ಲಿ ಮದುಮಗಳು ಕಾದಂಬರಿಯ ವಸ್ತು ಸಂವಿಧಾನ ಮೂರು ಪದರಗಳಿಂದ ಬೆಸೆದದ್ದು. ಮಲೆನಾಡಿನ ಒಕ್ಕಲಿಗರ ಸಂಸ್ಕೃತಿ, ಪರಂಪರೆ ಮತ್ತು ಅವರ ಜೀತದಾಳುಗಳ ಜೀವನ ಚಿತ್ರಣ, ಮೇಲ್ವರ್ಗದ ಸಮಾಜದ ಪ್ರೇರಣೆ ಮತ್ತು ಪ್ರಭಾವಗಳು ಹಾಗೆಯೇ ಹೊರಗಿನವರಾದ ಕ್ರೈಸ್ತರ ಮತಾಂತರ ಪ್ರಕ್ರಿಯೆ ಇವು ಮೂಲ ಪ್ರಧಾನ ಎಳೆಗಳಾಗಿ ಚಿತ್ರಣಗೊಂಡಿವೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ವ್ಯಕ್ತವಾಗುವುದು 'ರಾಮಾಯಣ ದರ್ಶನದ ಮಂದರಸ್ವರ' ಎನ್ನುತ್ತಾರೆ ವಿಮರ್ಶಕ ಸುಜನ.[2] ಅವರ ಹೇಳಿಕೆ ಈ ಕಾದಂಬರಿ ಪಠ್ಯದ ಹಿಂದಿನ ಜೀವನ ದರ್ಶನವನ್ನು ಅರ್ಥೈಸಿಕೊಳ್ಳಲು ಅತ್ಯಂತ ಮುಖ್ಯವಾಗುವ ವ್ಯಾಖ್ಯಾನವಾಗಿದೆ. ತತ್ತ್ವಜ್ಞಾನಿ ಕುವೆಂಪು ಅವರಿಗೆ ಐತ–ಪೀಂಚಲು, ಮುಕುಂದಯ್ಯ–ಚಿನ್ನಮ್ಮ ಒಂದೇ ರೀತಿಯ ಜೋಡಿಗಳಾಗಿ ಅವರ ಪ್ರೇಮದ ಒಳಸತ್ವದ ಕಾರಣಕ್ಕೆ ಕಾಣಿಸಿಕೊಳ್ಳುತ್ತಾರೆ.

ಒಂದೇ ಸಾಂಸ್ಕೃತಿಕ ವ್ಯವಸ್ಥೆಯನ್ನು ಹಲವು ಆಯಾಮಗಳಿಂದ ದರ್ಶಿಸುವ ಸಮಗ್ರ ಪ್ರಯತ್ನ ಕುವೆಂಪು ಅವರ ಎರಡು ಕಾದಂಬರಿಗಳ ಚೌಕಟ್ಟಾಗಿದೆ. ಸ್ತ್ರೀ–ಪುರುಷ ಶ್ರೇಣೀಕರಣದ ವ್ಯವಸ್ಥೆಯಲ್ಲಿ ಪರ–ವಿರೋಧ ಎಂಬ ಸಂಗತಿಗಳು ಅನಗತ್ಯ ಹಾಗೂ ಅಸಹಜವಾದ ರಚನೆಗಳು. ಮಾನವ ಜನಾಂಗದ ಒಳಿತನ್ನು ಅಪೇಕ್ಷಿಸುವ ಸ್ತ್ರೀ–ಪುರುಷರು ಈ ಶ್ರೇಣೀಕರಣದ ವ್ಯತ್ಯಾಸವನ್ನು ನಿರಾಕರಿಸುತ್ತಾರೆ. ಏಕೆಂದರೆ ಇಲ್ಲಿ ಹುಟ್ಟುವ ಘರ್ಷಣೆಯ ಪರಿಣಾಮಗಳನ್ನು, ಅಧಿಕಾರವನ್ನು ಸ್ಥಾಪಿಸಲು ಯತ್ನಿಸುವ ಅಥವಾ ಅದನ್ನು ಪ್ರತಿಭಟಿಸಲು ಹೊರಡುವ ಎರಡೂ ಪಕ್ಷಗಳು ಒಟ್ಟಿಗೆ ಅನುಭವಿಸಬೇಕಾಗುತ್ತದೆ. ಅಂದರೆ, ತಾನು ಎದುರಾಳಿ ಎಂದು ಭಾವಿಸಿದವರ ಸೋಲು, ನೋವು ಹಾಗೂ ಅವಮಾನಗಳು ತನ್ನ ಸೋಲು ಅವಮಾನಗಳೇ ಆಗಿರುತ್ತವೆ. ಈ ಹಿನ್ನೆಲೆಯಲ್ಲಿ ದೇವಯ್ಯ ಮತ್ತು ದೇವಮ್ಮನ ಸಂಬಂಧವನ್ನು ಅರ್ಥಮಾಡಿಕೊಳ್ಳಬೇಕೆನಿಸುತ್ತದೆ. ದೇವಯ್ಯ ಆತನ ಹೆಂಡತಿಯ ಮೇಲೆ ಹೊಂದಿರುವ ನಿಯಂತ್ರಣ, ದೇವಮ್ಮ ಆತನ ಕ್ರಿಯೆಗೆ ಪ್ರತಿಕ್ರಿಯಿಸುವ ರೀತಿ ಇದು ಕಾಣಿಸುವುದು ದಾಂಪತ್ಯದಲ್ಲಿನ ಸೋಲು–ಗೆಲುವಿನ ನಿಷ್ಕರ್ಷೆಯಲ್ಲಿ ಅಲ್ಲ. ವಾಸ್ತವವಾಗಿ, ಅಂತಹ ಒಂದು ನಿಷ್ಕರ್ಷೆ ಸಾಧ್ಯವೂ ಇಲ್ಲ. ಕುಟುಂಬದ ಒಳಗೆ ಸ್ತ್ರೀ–ಪುರುಷರ ಸಂಬಂಧಗಳ ಘರ್ಷಣೆಯಲ್ಲಿನ ಸಂದರ್ಭ ಸರಳವಲ್ಲ. ಉಳಿದ ಬಗೆಗಿನ ಶ್ರೇಣೀಕರಣಕ್ಕೆ ಸಮಾಜ ರಚನೆಯಲ್ಲಿನ ದೋಷಗಳೇ ಕಾರಣ ಎಂಬುದನ್ನು ವಿವರಿಸುವಷ್ಟು ಸುಲಭವಾಗಿ ಸರಳವಾಗಿ ಹೆಣ್ಣು–ಗಂಡಿನ ಶ್ರೇಣೀಕರಣದ ಕಾರಣಗಳನ್ನು ವಿವರಿಸಲು ಸಾಧ್ಯವಾಗುವುದಿಲ್ಲ. ಗಂಡು–ಹೆಣ್ಣಿನ ದೇಹ ರಚನೆ, ಅವರ ಪರಿಸರ, ಮನೋಭಾವ, ಶಿಕ್ಷಣ ಹಾಗೂ ಅವಕಾಶಗಳನ್ನು ಆಧರಿಸಿದ ಬಲಾಬಲಗಳ ಕಾರಣವನ್ನು ಇಲ್ಲಿನ ತರ್ಕವಾಗಿ ಬಳಸಬಹುದಾಗಿದೆ. ಈ ಹಿನ್ನೆಲೆಯಲ್ಲಿಯೆ ದೇವಯ್ಯ ಮತ್ತು ದೇವಮ್ಮನಂತಹ ಪಾತ್ರಗಳ ಬೌದ್ಧಿಕ ಮಟ್ಟದ ವ್ಯತ್ಯಾಸಗಳನ್ನು ಗಮನಿಸುವುದು ಮುಖ್ಯ.

ಕುವೆಂಪು ಕಾದಂಬರಿಗಳು ಊಳಿಗಮಾನ್ಯ ವ್ಯವಸ್ಥೆಯ ಅವನತಿಯ

ಚಿತ್ರಣಗಳೆಂದು ಚರ್ಚಿಸಿರುವ ಬಸವರಾಜ ಕಲ್ಗುಡಿಯವರು ಸೂಚಿಸುವಂತೆ.[3] ಈ ಎರಡೂ ಕಾದಂಬರಿಗಳಲ್ಲಿ ಹೆಣ್ಣಿನ ಬಗ್ಗೆಯೇ ಗಂಡಸರಿಗೆ ಅಪನಂಬಿಕೆಯಿರುವುದು ಮತ್ತು ಮನೆತನಸ್ಥ ಗಂಡಸರು ತಮ್ಮ ತಮ್ಮ ಸ್ತರಗಳ ಒಳಗೇ ಹೆಣ್ಣು ಕೊಡುವ – ತರುವ ತರಾತುರಿ ನಡೆಸುವುದನ್ನು ಈ ಅವನತಿಯ ಮುಖ್ಯ ಲಕ್ಷಣವೆಂದು ಗುರುತಿಸುತ್ತಾರೆ. ಆದರೆ, ಹೆಣ್ಣುತನದ ಅಪನಂಬಿಕೆ ಎನ್ನುವುದು (ಉದಾ: ಚಂದ್ರಯ್ಯಗೌಡ – ಸುಬ್ಬಮ್ಮನ ಸಂಬಂಧದಲ್ಲಿ ಐತ – ಪೀಂಚಲುವಿನ ವಿಷಯದಲ್ಲಿ, ಇತ್ಯಾದಿ) ಒಂದು ತಳಪಾಯದ ಮೇಲಿನ ರಚನೆಯೆ ವಿನಹ ಅದೇ ನಿರ್ಣಾಯಕವಲ್ಲ. ಈ ತಳಪಾಯದ ನೆಲೆಯಲ್ಲಿ ಹೆಣ್ಣು ಸ್ವತ್ತಾಗಿಸಲ್ಪಟ್ಟ ಚಾರಿತ್ರಿಕ ವಾಸ್ತವಾಂಶವಿದೆ. ಜಟ್ಟಮ್ಮನಂಥ ದೃಢಕಾಯದ ಆರೋಗ್ಯಪೂರ್ಣ ಪತ್ನಿಯಿದ್ದೂ ಗಂಡು ಸಂತಾನದ ನೆಪದಿಂದ ಇನ್ನೊಬ್ಬ ಹೆಣ್ಣನ್ನು ಮದುವೆಯಾಗಲು ಗುಹ್ಯರೋಗಿ ಭರಮಯ್ಯ ಹೆಗಡೆ ಪಡುವ ಪಾಡಿನ ಹಿಂದೆ ಹೆಣ್ಣಿನ ಬಗೆಗಿನ ಅಪನಂಬಿಕೆಗಿಂತ ಹೆಚ್ಚಾಗಿ ತನ್ನ ಪೌರುಷವನ್ನು ಸಾಬೀತು ಪಡಿಸುವ ಹಪಾಹಪಿಯೇ ತೋರುತ್ತದೆ. ಈ ಹಪಾಹಪಿ ಭಾವನಾತ್ಮಕವಾದದ್ದಲ್ಲ ಆದ್ದರಿಂದಲೇ ಈತನಿಗೆ ಕೈಹಿಡಿದ ಹೆಣ್ಣು ಯಾರಾದರೂ ಆಗಬಹುದು; ಆದರೆ, ಆಕೆ ತನ್ನ ಪ್ರತಿಷ್ಠೆಗೆ ತಕ್ಕಂತೆ ಸಮಾನ ನೆಲೆಯಲ್ಲಿರಬೇಕು. ಇದೇ ರೀತಿ ಕುರೂಪಿಯಾದ್ದರಿಂದ, ಅತ್ಯಂತ ಒರಟನಾದ್ದರಿಂದ ಹೆಣ್ಣು ಕೊಡಲು ಯಾರೂ ಮುಂದೆ ಬರದೆ, ಪಡ್ಡೆ ಹೋರಿಯಂತಹ ವರ್ತನೆಯಿರುವ ತಿಮ್ಮಪ್ಪ ಹೆಗ್ಗಡೆಗೆ, ಲೈಂಗಿಕ ನೆಲೆಯಲ್ಲಿ ಯಾರೋ ಒಬ್ಬ ಹೆಣ್ಣಾದರೆ ಸಾಕು. ಆದರೆ, ಮದುವೆ ಒಂದು ಪ್ರತಿಷ್ಠೆಯ ವಿಷಯ. ಆದ್ದರಿಂದ ಮನೆತನದ ಹೆಣ್ಣಾಗಿರಬೇಕು. ಭರಮಯ್ಯ ಹೆಗ್ಗಡೆಯ ತಂಗಿ ಲಕ್ಕಮ್ಮನನ್ನು ಬಿಟ್ಟರೆ ಬೇರೆ ಕುಲಸ್ತ ಹೆಣ್ಣು ದೊರೆಯದೆಂಬ ಅಸಹನೀಯತೆಯಲ್ಲಿ ಈತ ನಡೆಸುವ ಹುನ್ನಾರವೂ ಇಂತಹುದೇ. ಇದು ಹೆಣ್ಣನ್ನು ಒಂದು ಆಸ್ತಿಯಾಗಿ ಗುರುತಿಸಲ್ಪಡುವ ಮೂಲ ಸಾಂಸ್ಕೃತಿಕ ರಚನೆಯಿಂದಲೇ ಹುಟ್ಟಿದ ವಿಚಾರಧಾರೆಗಳ ಪರಿಣಾಮವಾಗಿದೆ. ಮದುವೆಯೊಂದರಿಂದ ಬದುಕಿಡೀ ಹದಗೆಟ್ಟ ಗಂಗೆಯು ಸಾಂಸಾರಿಕವಾದ ಪ್ರೀತಿ, ಭದ್ರತೆಗಳಿಲ್ಲದ ಕೊರತೆಯನ್ನು ಪುರುಷರ ವಶೀಕರಣದ ಮೂಲಕ ಪೂರೈಸಿಕೊಳ್ಳಲು ಸುಬ್ಬಮ್ಮನಂಥವರನ್ನು ಸಾಧನವಾಗಿಸಿಕೊಂಡರೆ, ದೇವಮ್ಮ ಗಂಡನ ಅನ್ಯಸ್ತ್ರೀಸಂಬಂಧಗಳ ಬಗ್ಗೆ ಚಕಾರವೆತ್ತದೆ ಸಹಿಸಿದರೂ, ಜಾತಿ ಬಿಡಬೇಕಾದಾಗ ಬದುಕು ಬೇರೇ ಕಿತ್ತುಬಂದಂತೆ ಹೆದರುವುದು; ದಾನಮ್ಮ ಹೆಗ್ಗಡಿತಿಯು ಜಾತಿಯ ಮೇಲು – ಕೀಳು ತಾರತಮ್ಯವನ್ನು ಸಮರ್ಥಿಸುವುದು; ಅದೇ ರೀತಿ ಹೊಲತಿ ಅಕ್ಕಣಿ ರೋಗಿಷ್ಠ ಗಂಡನಿಗಾಗಿ ಚೀಂಕ್ರನನ್ನು ಸಹಿಸಿಕೊಳ್ಳುವುದು ಗಂಡನ ಆತ್ಮಹತ್ಯೆಯ ನಂತರ ಚೀಂಕ್ರನ ದೌರ್ಜನ್ಯದಿಂದ ತಪ್ಪಿಸಿಕೊಳ್ಳಲು ಅವನನ್ನು ಪ್ರತಿಭಟಿಸಲು ಸಿದ್ಧವಾಗುವುದು. ಆದರೆ, ಅದೇ ಆಕ್ರಮಿಸುವ ವ್ಯಕ್ತಿ ಜಮೀನುದಾರ ರಂಗಪ್ಪಗೌಡರಾದರೆ, ಅವಳಿಗೆ ಅಂಥ ವಿರೋಧ ಇಲ್ಲದಿರುವುದು ಇದು ಬೇರೆ ದಾರಿಯಿಲ್ಲದ ಆರ್ಥಿಕ ಅಸಹಾಯಕತೆ ಎಂಬಂತೆಯು ಕಾಣುತ್ತದೆ. ಅಂತಕ್ಕಸೆಟ್ತಿಯ ಮಗಳು ಕಾವೇರಿ, ತಾಯಿಯ ಆರ್ಥಿಕ ಸ್ವಾವಲಂಬಿತ ಸ್ಥಿತಿಯಿಂದಾಗಿ ಕೆಲಮಟ್ಟಿನ ಸ್ವಾತಂತ್ರ್ಯ ಮತ್ತು ಬದುಕಿನ ಬಗ್ಗೆ ತನ್ನದೇ ಅಭಿಪ್ರಾಯ ಹೊಂದಿದವಳು. ಬಳಗದವನನ್ನು ಕುರೂಪಿಯೆಂಬುದಕ್ಕಾಗಿ ಮದುವೆಯಾಗಲು ಒಪ್ಪದ ಅವಳಿಗೆ ರೂಪ, ಅಂತಸ್ತು, ಜಾತಿಗಳಿಂದ ಮೇಲಿನವನಾದ ದೇವಯ್ಯಗೌಡನಿಗೆ ಇಟ್ಟುಕೊಂಡವಳಾಗುವುದರಲ್ಲಿ ಅವಹೇಳನ ಎಣಿಸುವುದಿಲ್ಲ.

ವ್ಯವಸ್ಥೆಯು ಹೇರುವ ಅನ್ಯಾಯಕರ ಅಂಶಗಳನ್ನು ಈ ಕಾದಂಬರಿಗಳ ಹಲವಾರು ಸ್ತ್ರೀಯರು ತಮ್ಮದೇ ಆದ ರೀತಿಯಲ್ಲಿ ವಿರೋಧಿಸುತ್ತಾರೆ. ಬಹಳಷ್ಟು ಸಲ ಈ ವಿರೋಧ ಪ್ರಜ್ಞಾಪೂರ್ವಕ ಆಯ್ಕೆಯಾಗಿರದೆ, ಅಳಿವು–ಉಳಿವಿನ ಪ್ರಶ್ನೆ ಬಂದಾಗ ನಡೆಯುವ ಅಸ್ತಿತ್ವದ ಹೋರಾಟದ ರೀತಿಯದಾಗಿರುತ್ತದೆ. ಇಲ್ಲವೇ ರೂಢಿಸಿಕೊಂಡ ನೈತಿಕ ಮೌಲ್ಯದಿಂದಾಗಿ ಸುಪ್ತಮನಸ್ಸು ತೋರುವ ಪ್ರತಿಭಟನೆಯ ರೀತಿಯಲ್ಲಿರುತ್ತದೆ. 'ಕಾನೂರು ಹೆಗ್ಗಡತಿ'ಯಲ್ಲಿ ಸೀತೆ ರಾಮಯ್ಯನೊಂದಿಗಿನ ಮದುವೆಗೆ ತೋರುವ ರೋಗದ, ಹುಚ್ಚಿನ, ಆವೇಶದ ರೂಪದ ಪ್ರತಿಭಟನೆ ಪ್ರಜ್ಞೆಯ ಸ್ತರದ್ದಾಗಿರದೆ ಸುಪ್ತ ಪ್ರಜ್ಞೆಯ ನೆಲೆಯದಾಗುತ್ತದೆ. ಆದರೆ, ಮದುವೆ ಘಟಿಸಿ, ರಾಮಯ್ಯನೊಂದಿಗೆ ದಾಂಪತ್ಯ ನಡಸಲೇಬೇಕೆಂಬ ಚಂದ್ರಯ್ಯಗೌಡನ ಕ್ರೂರದಬ್ಬಾಳಿಕೆಗೆ ಹೆದರಿ, ಆಕೆ ಪರಾರಿಯಾಗುವ ಮೂಲಕ ಪ್ರತಿರೋಧ ತೋರಿಸುವುದಷ್ಟೇ ಅಲ್ಲ; ಆಮೇಲೆ ರಾಮಯ್ಯನೊಂದಿಗೆ ಬದುಕಲು ಕಾನೂರಿಗೆ ಬರಲು ಬಲವಾಗಿ ನಿರಾಕರಿಸುತ್ತಾಳೆ. ಮುಂದೆ, ಆತ ಸತ್ತ ನಂತರ, ಹೂವಯ್ಯನೊಂದಿಗೆ ಆದರ್ಶ ತಪಸ್ವಿನಿಯಂತೆ ಕಾನೂರಿನಲ್ಲಿ ಬಂದು ನೆಲೆಸುತ್ತಾಳೆ. ಹೂವಯ್ಯನ ಬಗೆಗಿನ ಭಕ್ತಿ, ಗೌರವಗಳೇ ಆತನ ಮೇಲಿನ ಪ್ರೀತಿಗಿಂತ ಹೆಚ್ಚಾದಂತೆ, ಈಕೆಯ ಪ್ರತಿಭಟನೆಯ ಸತ್ವಕೂಡ ಕಾರ್ಯತಃ ವ್ಯಕ್ತವಾಗಿರುವುದನ್ನು ಗಮನಿಸಬೇಕು.

ಕುಟುಂಬದಿಂದ ಹೆಂಗಸರ ಪಲಾಯನ ಒಂದು ಪಾರಾಗುವ ಯತ್ನವಾಗಿಯಷ್ಟೇ ಉಳಿಯದೆ, ಒಂದು ಪ್ರತಿಭಟನೆಯ ರೀತಿಯೂ ಆಗುವುದನ್ನು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ತಿಮ್ಮಿ–ಚೆನ್ನಮ್ಮರ ಪ್ರತೀಕಗಳಲ್ಲಿ ಸೂಚಿತವಾಗುತ್ತದೆ. ಓಡಿಹೋಗುವ ಕ್ರಿಯೆ ತನಗೂ – ಮುಕುಂದಯ್ಯನಿಗೂ ಸಮಾನವೇ ಆಗಿದ್ದರೂ, ಅದರ ಪರಿಣಾಮ ಗಂಡಾದ ಅವನಿಗೂ ಹೆಣ್ಣಾಗಿ ತನಗೂ ಬೇರೆಬೇರೆಯೇ ಎಂಬ ನೈತಿಕ ತಳಮಳ ಚೆನ್ನಮ್ಮನಿಗೆ ಎದುರಾದರೆ; ಸಾಮಾಜಿಕವಾಗಿ ಕೆಳಗಿನವಳಾದ ತಿಮ್ಮಿಗೆ ತಂದೆಯ, ಅವನ ಮೇಲೆ ಹಿಡಿತವಿರುವ ಒಡೆಯರ ಗೂಂಡಾಗಿರಿಯ, ದಬ್ಬಾಳಿಕೆಯ ಭೀತಿಯ ಹಾಗೆ ಗುತ್ತಿಯೊಂದಿಗೆ ಊರು ಬಿಟ್ಟು ಬೇರೊಂದು ಕಡೆ ಆಶ್ರಯ ಪಡೆದರೂ ಚಂದ್ರಯ್ಯಗೌಡನಂಥ ಒಡೆಯರ ಭೀತಿ ತಪ್ಪುವುದಿಲ್ಲ. ಇಂತಹ ಪರಿಸ್ಥಿತಿಯಿದ್ದರೂ, ತಾವು ಬಯಸಿದವರನ್ನೇ ಪಡೆದೆನೆಂಬ ಸಂತೃಪ್ತಿಯಲ್ಲಿ ಇವರು ಭೀಕರ ಭವಿಷ್ಯದೆದುರು ಪಲಾಯನ ಮಾಡುವುದಿಲ್ಲ ಎಂಬುದು ಮುಖ್ಯವಾಗುತ್ತದೆ. ಈ ರೀತಿ ಸೀತೆ ಭಾವೋದೀಪ್ತ ನೆಲೆಯ ಆದರ್ಶದ ಸಮಾನತೆಗೆ ಪ್ರತಿನಿಧಿಯಾದರೆ; ತಿಮ್ಮಿ, ಚೆನ್ನಮ್ಮ, ವಾಸ್ತವ ನೆಲೆಯಲ್ಲಿ ಸಾಮಾನ್ಯರ ಬದುಕಿನಲ್ಲಿ ಈ ಸಮಾನತೆಯ ಅಳವಡಿಕೆಯ ಸಾಧ್ಯತೆಗೆ ಪ್ರತೀಕಗಳಾಗುತ್ತಾರೆ.

ಕುವೆಂಪು ಕಾದಂಬರಿಗಳಲ್ಲಿ, ಸ್ತ್ರೀತ್ವದ ಇನ್ನೊಂದು ಬಹು ಮುಖ್ಯ ಆಯಾಮವನ್ನು ಗಮನಿಸಬೇಕಾದ್ದು ಇದೆ. ಇದು ಪರಂಪರಾಗತ ಮಾತೃ ಆರಾಧನೆಯ ಆಧ್ಯಾತ್ಮಿಕ ನೆಲೆಯಿಂದ ಬಂದದ್ದೂ, ರಾಷ್ಟ್ರೀಯತಾವಾದಿ ಸಂರಚನೆಯೂ ಆಗಿರುವಂಥ ಪ್ರತೀಕಗಳಿಗೆ ಸಂಬಂಧಿಸಿದ್ದು, ಇದು ಕುವೆಂಪು ಅವರ ದಾರ್ಶನಿಕ ನಂಬಿಕೆಯ ಅಂಗವೂ ಆಗಿದೆ.

ಕುವೆಂಪು ಕಥನಗಳಲ್ಲಿ ಬರುವ ದೇವಮ್ಮನಂಥವರು ಪತಿಯೇ ದೇವರೆಂದು ನಂಬಿದ್ದವರು ತಾಳಿ ಭಾಗ್ಯವೇ ಅವರ ಗುರಿ ಎಂಬಂಥ ವ್ಯಾಖ್ಯಾನ ಕೃತಿಯಲ್ಲಿದ್ದರೂ, ಸೀತೆಯ ಆದರ್ಶ ವ್ಯಕ್ತಿತ್ವದ ಬಗ್ಗೆ ಬರೆಯುವಲ್ಲಿ ಆಕೆ ಹೂವಯ್ಯನಿಗೆ ತಾನು ಸಾವಿತ್ರಿಯಂತೆ, ದಮಯಂತಿಯಂತೆ, ಚಂದ್ರಮತಿಯಂತೆ

ಆಗಬೇಕೆಂಬ ಕನಸುಗಾರಿಕೆಯಲ್ಲಿರುವಂತೆ ಚಿತ್ರಿಸುವುದು, ರಾಮಕೃಷ್ಣ ಪರಮಹಂಸ–ಶಾರದಾದೇವಿಯರ ಬದುಕಿನ ಭಾವಸ್ಫೂರ್ತಿಯನ್ನು ಹೂವಯ್ಯ ಸೀತೆಯರ ಬದುಕಿಗೆ ವಿಸ್ತರಿಸಲು ಯತ್ನಿಸುವುದು ಒಂದು ಆದರ್ಶವಾದಿ ಸಂಬಂಧಗಳ ನೆಲೆಯನ್ನು ಸಂಕೇತಿಸುತ್ತದೆ. ಶ್ರೇಣೀಕೃತ ವ್ಯವಸ್ಥೆಯ ಒತ್ತಾಯಗಳಿಗೂ ಮೀರದಂತೆ, ಯಾವುದೇ ತಾರತಮ್ಯಕ್ಕೆ ಒಳಪಡದ ಉನ್ನತ ಆತ್ಮವಿಕಾಸವಿಲ್ಲದ ಜೀವಿಗಳಿಗೂ ಸಾಧ್ಯವೆಂಬುದನ್ನು ನಿದರ್ಶಿಸುವಂತೆ ಪೀಂಚಲು, ಆತನಿಗಿಂತ ಹೆಚ್ಚು ವಿಕಸಿತ ಚೇತನವಾಗಿರುವುದು; ತಿಮ್ಮಿ ಹುಲಿಕಲ್ಲು ನೆತ್ತಿಯಲ್ಲಿ ಅತೀಂದ್ರಿಯ ನೋಟ ಕಾಣುವುದು, ಮತ್ತು ಸುಬ್ಬಮ್ಮನಂಥ ವ್ಯಕ್ತಿಯಲ್ಲೂ ಪ್ರಗತಿಯ ಸಾಧ್ಯತೆ ಇತ್ತೆಂಬುದನ್ನು ಚಿತ್ರಿಸಿರುವುದು ಮುಂತಾದುವನ್ನು ಈ ಸಮಾನತಾ ನಂಬಿಕೆಯ ಫಲವಾದ ಪ್ರತೀಕಗಳೆಂದು ಗಮನಿಸಲು ಸಾಧ್ಯವಿದೆ.

ಸಮಾನತೆಯ ಈ ಆದರ್ಶವಾದಿ ನೆಲೆಗಿಂತ ಭಿನ್ನವಾಗಿ, ಜಗತ್ತಿನ ಮೂಲಭೂತ ಶಕ್ತಿಯ ಅನೂಹ್ಯ ಸಾಮರ್ಥ್ಯ, ನಿಗೂಢತೆಯ ಬಗ್ಗೆ ವಿಸ್ಮಯ ಪಡುವಂಥ ಸನ್ನಿವೇಶದಲ್ಲೂ ಕುವೆಂಪು ಸ್ತ್ರೀ ಪಾತ್ರಗಳನ್ನು ಪ್ರತೀಕವಾಗಿ ಬಳಸಿಕೊಳ್ಳುತ್ತಾರೆ. ಸಣ್ಣ ಕಲ್ಲಯ್ಯಗೌಡರು ಕಂಬಕ್ಕೆ ಕಟ್ಟಿಸಿ ಹೊಡೆಸುವಾಗ, ತಾಯಿ ಸೇಸಿಯು ಮಗನ ಜೀವ ಕಾಪಾಡಲು ಎಲ್ಲ ವಿಧವಾದ ಸಾಮಾಜಿಕ ದಿಗ್ಬಂಧನಗಳನ್ನು ಮೀರಿ ನಿಂತು, ಮಾತೃತ್ವ ಶಕ್ತಿಯ ಪ್ರತೀಕವಾಗಿ ಅದನ್ನು ವಿರೋಧಿಸುವ ಬಗೆಯಲ್ಲಿ ಇಂತಹ ಸಾಂಕೇತಿಕತೆಯಿರುವುದನ್ನು ಕುವೆಂಪು ವ್ಯಾಖ್ಯಾನಿಸುತ್ತಾರೆ. ಅವರ ಕಥನ ನಿರೂಪಣೆಯ ಭಾಷೆಯೂ ಇದನ್ನು ಸೂಚಿಸುವಂತಿರುವುದನ್ನು ಗಮನಿಸಬೇಕು, 'ಹೊಲೆಯಳಾದರೂ ಬಡವಳಾದರೂ ಯಾವ ವಿಧವಾದ ವ್ಯಕ್ತಿತ್ವ ವಿಶೇಷವೂ ಲವಲೇಶವೂ ಇಲ್ಲದವಳಾದರೂ ಸಂಕಟತಪ್ತ ತಾಯ್ತನ ಎಂಥ ಅಲ್ಪ ಸ್ತ್ರೀಯನ್ನಾದರೂ ಭೂಮ ಪಟ್ಟಕ್ಕೇರಿಸಿ ಬಿಡುತ್ತದೆಯೋ ಏನೋ ಎಂಬಂತೆ ಅವಳ ಮಾತೃ ದುಃಖಜನ್ಯ, ಕ್ರೋಧದ ಸಾನ್ನಿಧ್ಯ ಭೀಷಣೆಗೆ ಕ್ಷಣ ಮಾತ್ರ ಭೀತಚೇತನನಾದ ಇಜಾರದ ಸಾಬಿಯು ಗೌಡರ ಆಜ್ಞೆಯನ್ನು ಮರೆತು ಸೇಸಿಯ ಮಾತಿಲ್ಲದ ಆಣತಿಗೆ ಒಳಗಾದವನಂತೆ ಬೇಗಬೇಗನೆ ಸಣ್ಣ ಬೀರನನ್ನು ಬಿಗಿದಿದ್ದ ಹಗ್ಗದ ಕಟ್ಟುಗಳನ್ನೆಲ್ಲ ಬಿಚ್ಚಿಹಾಕಿದನು.'[4] ಮೈಮೇಲೆ ಜಕಣಿ ಬಂದಿತೋ ಎಂಬಂತೆ ಗೌಡರನ್ನು ಕಂಡರೆ ನೂರು ದೂರದಲ್ಲಿಯೇ ಕುಗ್ಗಿ ಹೆದರಿ ಹುದುಗಿಕೊಳ್ಳುವ ಸ್ವಭಾವದ ಸಹಜಭೀರು, ಆ ಹೊಲತಿ ಈಗ ಗೌಡರಿಗೆ ಎದುರಾಗಿ ಕೈಮುಗಿದು ಗಂಡ, ಮಗನ ಬಿಡುಗಡೆಗಾಗಿ ಗೌಡರನ್ನು ಬೇಡುವಷ್ಟು ದಿಟ್ಟತನ ತೋರುತ್ತಾಳೆ. ಇದೊಂದು ಅತೀತ–ಅಸಾಧಾರಣ, ಆವೇಶ ರೀತಿಯ ಶಕ್ತಿಯ ಪ್ರಕಟಣೆಯ ಅಂಶವಾಗಿದ್ದು, ರಕ್ಷಕಳಾದ ಮಾತೆಯ ಆಂಶಿಕ ಪ್ರತೀಕತೆಯನ್ನು ಇಲ್ಲಿ ಗುರುತಿಸಬಹುದು.

ಕಾದಂಬರಿಗಳ ಒಳಗೆ ಯಾವ ಸಂದರ್ಭದಲ್ಲಿಯೂ ಸ್ತ್ರೀ–ಪುರುಷರ ಸಮಾನತೆಯ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ, ಅವರ ಇರುವಿಕೆಯ ನೆಲೆ ಆತ್ಮಗೌರವ, ಅಳಿವು–ಉಳಿವಿನ ಪ್ರಶ್ನೆಯನ್ನು ಎರಡೂ ಕಾದಂಬರಿಗಳು ಸೂಕ್ಷ್ಮವಾಗಿ ಚರ್ಚಿಸಿವೆ. ಬಡತನದ ಪರಿಣಾಮಗಳೇ ಆದ ಶಿಕ್ಷಣದ ಅಭಾವ, ರೋಗ ರುಜಿನಗಳು, ಪುರುಷರ ದಬ್ಬಾಳಿಕೆ, ಅಸಹಕಾರ ಎಲ್ಲವೂ ಮಹಿಳೆಯರ ಮೇಲೆ ಕೌಟುಂಬಿಕ ಒತ್ತಡಕ್ಕೆ ಕಾರಣವೆಂಬುದನ್ನು ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಈ ಎರಡೂ ಪಠ್ಯಗಳು ಪ್ರಧಾನ ಭೂಮಿಕೆಯಲ್ಲಿ ಚರ್ಚಿಸಿವೆ. ನಾಲ್ಕು ಗೋಡೆಗಳ ನಡುವೆಯಷ್ಟೇ ಸೀಮಿತವಾಗಿರುವ ಕೌಟುಂಬಿಕ ಶೋಷಣೆಯ ಬಹುರೂಪತೆಯನ್ನು ಅನಾವರಣಗೊಳಿಸಿವೆ.

ಸುಬ್ಬಮ್ಮನಂತಹ ಪಾತ್ರಗಳು ಪುರುಷನನ್ನು, ಅವನ ಅಧಿಕಾರವನ್ನು ಅನುಕರಿಸಲು ಹೊರಟಾಗಲೆಲ್ಲ ಹೆಚ್ಚಿನ ಸೋಲು, ಅವಮಾನ ದುರಂತಗಳಿಗೆ ಗುರಿಯಾಗುತ್ತಾರೆ ಎಂಬುದು ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಕೃತಿಗಳ ತಾತ್ವಿಕ ಚಿಂತನೆಯಾಗಿದೆ. ವ್ಯಕ್ತಿಗಳ ವರ್ತನೆಯ ಕಾರಣಗಳು ಅವರ ಪರಿಸರದಲ್ಲೇ ಹೆಚ್ಚಾಗಿ ಇರುತ್ತವೆ ಎಂದೂ ಇವುಗಳ ಪರಿಶೀಲನೆ ಅತ್ಯಂತ ಮುಖ್ಯವೆಂಬುದನ್ನು ಕುವೆಂಪು ಅವರ ಕಾದಂಬರಿ ಪಠ್ಯ ಬಲವಾಗಿ ಪ್ರತಿಪಾದಿಸುತ್ತವೆ.

ಆದರೆ, ಇಷ್ಟು ಹೇಳಿದ ನಂತರ ಕೃತಿಕಾರ ಅನಾವರಣಗೊಳಿಸುವ ಸಂಸ್ಕೃತಿಯಲ್ಲಿ ಸಮಾಜದ ಮನೋಭಿತ್ತಿಗಳಲ್ಲಿ ಮಹಿಳೆಯರ ಸಹಜ ಸ್ವಭಾವ ಗುಣಗಳನ್ನು ಕುರಿತಂತೆ ಹಲವು ರೂಢಿಗತ ಗ್ರಹೀತಗಳು ಅದರಷ್ಟಕ್ಕೆ ಮತ್ತು ಸಹಜವೆಂಬಂತೆ ಪ್ರಕಟಗೊಂಡಿವೆ. ಮಹಿಳೆಯರು ಚಂಚಲತೆ, ಅಶಕ್ತತೆ, ದುರ್ಬಲ ಹಾಗೂ ಅಸ್ಥಿರ ಮನಸ್ಕರು, ಆತ್ಮವಿಶ್ವಾಸದ ಕೊರತೆಯಿಂದ ಬಳಲುತ್ತಿರುವವರು. ಅವರಲ್ಲಿ ಉತ್ಪಾದನಾ ಸಾಮರ್ಥ್ಯಕ್ಕಿಂತ ಪಾಲನಾ ಸಾಮರ್ಥ್ಯವೇ ಸಹಜ ಗುಣವಾಗಿವೆ. ಅವರಲ್ಲಿ ಪ್ರಕೃತಿ ಸಹಜ ಜ್ಞಾನ ಮತ್ತು ಕಲ್ಪನಾ ಪ್ರತಿಭೆಗಳು ಚುರುಕಾಗಿರುತ್ತವೆಯೇ ಹೊರತು. ಬುದ್ಧಿಶಕ್ತಿ ಕಡಿಮೆಯೇ. ಅಷ್ಟಿಷ್ಟು ಬುದ್ಧಿಶಕ್ತಿ, ಮನೆ, ಕುಟುಂಬ, ಮಕ್ಕಳು ಎಂಬ ದೆಸೆಯಲ್ಲಷ್ಟೇ ಇರುವಂಥವರು. ಮನೆಯೇ ತಮ್ಮ ಸರ್ವಸ್ವ ಎಂದು ಒಪ್ಪಿ ಬಾಳುವ ಹೆಂಗಸರು ಅತ್ಯಂತ ಮುಗ್ಧರು, ಸಂತೋಷಚಿತ್ತರು, ಪ್ರೀತಿ, ಗೌರವ, ಮನ್ನಣೆಗಳಿಗೆ ಪಾತ್ರರಾಗುವವರಾಗಿದ್ದಾರೆ. ಆದರೆ, ವಾಸ್ತವದಲ್ಲಿ ಇದು ವಿಧೇಯ ಆಳಿಗೆ ನೀಡುವ ಪ್ರೋತ್ಸಾಹಕರ ಬಹುಮಾನವೇ ಹೊರತು ನೈಜವಾದ ಮನ್ನಣೆಯಲ್ಲ ಎಂಬುದನ್ನು ಕುವೆಂಪು ಕಥನ ಸೂಕ್ಷ್ಮವಾಗಿ ಸ್ಫುಟವಾಗಿ ಕಾಣಿಸುತ್ತದೆ ನಿಜ. ಅವರ ಕಥನಗಳ ತಾಯಿಯಂದಿರು ಜೀವನ ಶ್ರದ್ಧೆಯ ಸಂಕೇತ. ಲೋಕದಲ್ಲಿ ಗೆಲ್ಲಬೇಕಾದದ್ದು ಇಂಥ ಹೆಂಗರುಳು ಎಂಬುದು ಕುವೆಂಪು ಕಥನಗಳು ನಿರೂಪಿಸುವ ಗಾಢವಾದ ನಂಬಿಕೆಯಾಗಿದೆ. ಎಲ್ಲವನ್ನು ತನಗನುಕೂಲವಾಗಿ ಬಳಸಿಕೊಳ್ಳುವುದು ಹೇಗೆ ಎಂದು ಹೊಂಚುವ ಪುರುಷ ಅಹಂಕಾರಕ್ಕೆ ಪರ್ಯಾಯವಾಗಿ ಹೂವಯ್ಯ, ಮುಕುಂದಯ್ಯನಂಥ ಹೆಂಗರುಳಿನ ಗಂಡಸರು ಬದುಕಿನಲ್ಲಿ ಅಪೂರ್ವವಾದ ಆಧ್ಯಾತ್ಮಿಕ ಸಮೃದ್ಧಿಯನ್ನು ಅನುಭವಿಸುವವರಾಗಿ ಕಾಣಿಸುತ್ತಾರೆ.

**ಟಿಪ್ಪಣಿಗಳು**

1. ರವೀಂದ್ರನಾಥ ಟಾಗೋರ್: ತಪೋವನ್(ಹಿಂದಿ) (1989) ಐಕಮ್ ಘರ್: ಗಾಂಧೀ ಭವನ (ಪುಟ 1.2)
2. ಅರವಿಂದ ಮಾಲಗತ್ತಿ(2006) ಕುವೆಂಪು ಕೃತಿ ವಿಮರ್ಶೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ ಮೈಸೂರು.
3. ಶಿವರುದ್ರಪ್ಪ ಜಿ.ಎಸ್ (1990): ಕನ್ನಡದ ಕೆಲವು ಪ್ರಮುಖ ಕಾದಂಬರಿಗಳು: ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ಪು.ಸ.89.
4. ಕುವೆಂಪು(2013) ಕುವೆಂಪು ಸಮಗ್ರ ಗದ್ಯ ಸಂಪುಟ–4 ಮಲೆಗಳಲ್ಲಿ ಮರುಮಗಳು:ರಾಷ್ಟ್ರೀಯ ಕವಿ ಕುವೆಂಪು ಪ್ರತಿಷ್ಠಾನ(ರಿ) ಕುಪ್ಪಳಿ, ಶಿವಮೊಗ್ಗ ಜಿಲ್ಲೆ.
5. ಕುವೆಂಪು(2013) ಕುವೆಂಪು ಸಮಗ್ರ ಗದ್ಯ ಸಂಪುಟ–2 ಕಾನೂರು ಹೆಗ್ಗಡಿತಿ: ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ(ರಿ) ಕುಪ್ಪಳಿ, ಶಿವಮೊಗ್ಗ ಜಿಲ್ಲೆ.

❖❖❖

# ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯದ ಸಾಂಸ್ಕೃತಿಕ ಅಧ್ಯಯನ

**ಡಾ. ಕುಮಾರ ಬೆಳಲೆ,** ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ಧಾರ್ಥನಗರ, ಮೈಸೂರು
**ಡಾ. ಸುರೇಶ ಬಿ.ಸಿ.,** ಸಹ ಪ್ರಾಧ್ಯಾಪಕರು
ಇತಿಹಾಸ ವಿಭಾಗ, ಶ್ರೀ ಡಿ.ದೇವರಾಜ ಅರಸು ಸ.ಪ್ರ.ದ.ಕಾಲೇಜು, ಹುಣಸೂರು, ಮೈಸೂರು
**ಡಾ. ಮೋಹನ್ ಕೆ.ಎನ್.,** ಪ್ರಾಧ್ಯಾಪಕರು
ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಕೃಷ್ಣರಾಜನಗರ

ಕಿಕ್ಕೇರಿಯು ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನ ಹೋಬಳಿ ಕೇಂದ್ರವಾಗಿದೆ. ಈ ಗ್ರಾಮವು ಕೃಷ್ಣರಾಜಪೇಟೆಯಿಂದ ಸುಮಾರು 8 ಕಿ.ಮೀ. ದೂರದಲ್ಲಿದೆ. ಇಲ್ಲಿ ಕೀಕ ಎಂಬುವವನು ಆಡಳಿತ ನಡೆಸುತ್ತಿದ್ದುದರಿಂದ ಈ ಗ್ರಾಮಕ್ಕೆ ಕಿಕ್ಕೇರಿ ಎಂದು ಹೆಸರು ಬಂದುದಾಗಿ ಐತಿಹ್ಯವಿದೆ. ಗ್ರಾಮದಲ್ಲಿ ಬಹಳ ವಿಸ್ತಾರವಾದ ಕೆರೆಯಿದ್ದುದರಿಂದ ಬಹುಶಃ ಶಬ್ದಾರ್ಥದ ಭಾವದಿಂದ ಕಿಕ್ಕೇರಿ ಎಂದು ಬಂದಿರಬಹುದು. ಇಲ್ಲಿ ಹೊಯ್ಸಳರ ಕಾಲದ ಬ್ರಹ್ಮೇಶ್ವರ, ಲಕ್ಷ್ಮೀನರಸಿಂಹ ಮತ್ತು ಜನಾರ್ಧನ ದೇವಾಲಯಗಳಿವೆ. ಹಾಗೂ ವಿಜಯನಗರ ಕಾಲದಲ್ಲಿ ನಿರ್ಮಾಣವಾದ ಯೋಗನರಸಿಂಹ ದೇವಾಲಯವಿದೆ. ಕ್ರಿ.ಶ. 18–19ನೆಯ ಶತಮಾನದಲ್ಲಿ ನಿರ್ಮಾಣವಾಗಿರುವ ಗ್ರಾಮ ದೇವತೆಯಾದ ಕಿಕ್ಕೇರಮ್ಮ ದೇವಾಲಯವಿದೆ ಹಾಗೂ ಇಲ್ಲಿ ಭಗ್ನವಾಗಿರುವ ಕೋಟೆಯು ಇದೆ. ಈ ಗ್ರಾಮವು ಹೊಯ್ಸಳರ ಕಾಲದಲ್ಲಿ ಅಗ್ರಹಾರವಾಗಿತ್ತು, ಶಾಸನಗಳಲ್ಲಿ ಗ್ರಾಮಕ್ಕೆ ಕಿಕ್ಕೇರಿ ಸ್ಥಳ, ಕಿಕ್ಕೇರಿಪುರ ಎಂದು ಉಲ್ಲೇಖಿಸಲಾಗಿದೆ.

## ಬ್ರಹ್ಮೇಶ್ವರ ದೇವಾಲಯ

ಬ್ರಹ್ಮೇಶ್ವರ ದೇವಾಲಯವು ಗ್ರಾಮದ ಕೆರೆಯ ಪಶ್ಚಿಮ ದಡದಲ್ಲಿದೆ. ಇದು ಪೂರ್ವಾಭಿಮುಖವಾಗಿದ್ದು ಏಕಕೂಟ ದೇವಾಲಯವಾಗಿದೆ. ಇದು ಗರ್ಭಗೃಹ, ಸುಕನಾಸಿ, ನವರಂಗ ಹಾಗು ನಂದಿಮಂಟಪವನ್ನು ಹೊಂದಿದೆ. ನಂದಿ ಮಂಟಪದ ಕೆಲವು ಕಂಭಗಳನ್ನು ಮಾತ್ರ ಗ್ರಾನೈಟ್ ಶಿಲೆಯಿಂದ ನಿರ್ಮಿಸಿದ್ದಾರೆ. ಉಳಿದಂತೆಲ್ಲವು ಸೋಪುಗಲ್ಲಿನಿಂದ ಕಟ್ಟಲಾಗಿದೆ. ಇದು ಏಕಕೂಟ ದೇವಾಲಯವಾಗಿದ್ದು ಜಗತಿಯಿಲ್ಲದೆ ಅಲಂಕೃತ ಅದಿಷ್ಠಾನವನ್ನು ಹೊಂದಿದೆ. ಹಾಗೂ ಭಿತ್ತಿಶಿಲ್ಪಗಳನ್ನು ಹೊಂದಿದ್ದು ಇದು ದೇವಾಲಯದ ಸೌಂದರ್ಯಕ್ಕೆ ಹೆಚ್ಚು ಒತ್ತು ನೀಡಿದೆ. ದೇವಾಲಯವು ಸಂಪೂರ್ಣವಾಗಿ ದ್ರಾವಿಡ ವಾಸ್ತು ಶೈಲಿಯನ್ನು ಹೊಂದಿದೆ. ದೇವಾಲಯವನ್ನು ಕ್ರಿ.ಶ.1095–96ರಲ್ಲಿ ಗಂಗ ಮಂಡಲವನ್ನು ಆಳುತ್ತಿದ್ದಂತಹ ಹೊಯ್ಸಳದೇವನು ಗಂಗ ಮಂಡಲವನ್ನು ಆಳುತ್ತಿದ್ದಾಗ ಇಲ್ಲಿಯ ಬ್ರಹ್ಮರಾಶಿ ಪಂಡಿತನ ಮಗ ಪೆರ್ಗಡೆ ಮಲ್ಲಿಯಣ್ಣನು ಬ್ರಹ್ಮೇಶ್ವರ ದೇವಾಲಯವನ್ನು ನಿರ್ಮಾಣ ಮಾಡಿದನು. ಇದರ ಪಕ್ಕದಲ್ಲಿ ಕೆರೆಯೊಂದನ್ನು ನಿರ್ಮಿಸಿ ದೇವಾಲಯಕ್ಕೆ ದಾನ ನೀಡಿದನು. ಕ್ರಿ.ಶ.12ನೆಯ ಶತಮಾನದಲ್ಲಿ ಹೊಯ್ಸಳ ನರಸಿಂಹನ ಕಾಲದಲ್ಲಿ ದೇವಾಲಯಕ್ಕೆ ಸುಂಕದ ಧರಣಿದೇವ

ಚೌಡಯ್ಯ ಮತ್ತು ಕಾಮತಮ್ಮನವರುಗಳು ಬ್ರಹ್ಮೇಶ್ವರನಿಗೆ ದಾನ ನೀಡಿದ್ದಾರೆ. ಈ ದೇವಾಲಯವು ಹೊಯ್ಸಳರ ಕಾಲದಲ್ಲಿ ನಿರ್ಮಾಣವಾಗಿದ್ದರೂ ಸಹ ಮುಖಮಂಟಪ, ಸುಕನಾಸಿಯ ದ್ವಾರ, ಮುಖಮಂಟಪದ ಕೆಲವು ಭಾಗ ಹಾಗು ನಂದಿಮಂಟಪಗಳನ್ನು ಕ್ರಿ.ಶ.16–17ನೆಯ ಶತಮಾನದಲ್ಲಿಯೂ ಸಹ ಜೀರ್ಣೋದ್ಧಾರ ಕೆಲಸಗಳನ್ನು ಮಾಡಿದ್ದಾರೆ. ಈ ದೇವಾಲಯವನ್ನು ಮಾಡಿದ ರೂವಾರಿಗಳಾದ ನಕರಾಚಾರಿ, ಮಸಣ, ಹರಿಮಲ್ಲವರಿ ವಜ್ರದಣ್ಣ ಎಂಬ ಶಿಲ್ಪಿಗಳ ಹೆಸರುಗಳನ್ನು ದೇವಾಲಯದ ಕೆಲವು ಭಾಗಗಳಲ್ಲಿ ಕಂಡರಿಸಿದ್ದಾರೆ.

ದೇವಾಲಯವು ಜಗತಿಯಿಲ್ಲದೆ ಅದಿಷ್ಠಾನದ ಮೇಲಿದೆ. ಇದರ ತಳವಿನ್ಯಾಸವು 'ಆಮೆ' ದೇಹದ ರಚನೆಯನ್ನು ಹೋಲುತ್ತದೆ. ಅದಿಷ್ಠಾನವು ಸುಮಾರು 4 ಅಡಿ ಎತ್ತರವಿದ್ದು ಇಲ್ಲಿ ಉಪಾನ, ಕಂಪ, ಚೂಪಾದ ತ್ರಿಪಟ್ಟ ಕುಮುದ, ಕೆಳಮುಖ ಪದ್ಮ, ದಂತಪಕ್ತಿ ಹಾಗೂ ಪದ್ಮ ಪಟ್ಟಿಕೆಯನ್ನು ಹೊಂದಿದೆ. ದಂತ ಪಂಕ್ತಿಯ ಪಟ್ಟಿಕೆಯನ್ನು ಮುಂದಕ್ಕೆ ಚಾಚಿರುವಂತೆ ಕೆತ್ತಲಾಗಿದೆ. ಪ್ರತಿಯೊಂದು ದಿಂಡಿನ ಮೇಲೂ ಸಹ ವ್ಯಾಘ್ರದ ಚಿತ್ರವನ್ನು ಕೆತ್ತಲಾಗಿದೆ, ಕೆಲವು ದಿಂಡುಗಳಲ್ಲಿ ಮಿಥುನ ಶಿಲ್ಪವನ್ನು ಸಹ ಕೆತ್ತಿದ್ದಾನೆ. ಮಿಥುನ ಶಿಲ್ಪಗಳು ದೇವಾಲಯಕ್ಕೆ ಬಿಡಿಸಿದ ಅಲಂಕಾರದ ಒಂದು ಭಾಗವಾಗಿರುತ್ತವೆ. ಜನತೆಗೆ ಲೈಂಗಿಕ ಶಿಕ್ಷಣ ದೊರಕಲೆಂದೆ ಇಲ್ಲವೆ ದೇವಾಲಯದ ಸೌಂದರ್ಯಕ್ಕೆ ದೃಷ್ಠಿ ತಾಗದಿರಲೆಂಬ ಉದ್ದೇಶದಿಂದ ಇವುಗಳನ್ನು ಬಿಡಿಸಿರಬಹುದು. ಹೊಯ್ಸಳರ ಕಾಲದಲ್ಲಿ ನಿರ್ಮಾಣವಾದ ಕೆಲವು ದೇವಾಲಯಗಳ ಅಧಿಷ್ಠಾನಗಳು ಸಾಮಾನ್ಯ ಅಲಂಕರಣವಾಗಿರುತ್ತವೆ. ಸಿಂಹ ಪಟ್ಟಿಕೆಯ ದಕ್ಷಿಣ ಭಾಗದ ಪಟ್ಟಿಕೆಯಲ್ಲಿ ನೃತ್ಯತಾಂಡವ ಶಿವ, ನಾಟ್ಯ ಸರಸ್ವತಿ, ನೃತ್ಯ ಭೇತಾಳ, ಮಿಥುನಶಿಲ್ಪ, ನೃತ್ಯಗಾರ್ತಿಯರು, ಕಾಳಭೈರವ, ಅನಂತಶಾಯಿ ವಿಷ್ಣು, ಡಮರುಗವನ್ನು ಧಾರಿಸುತ್ತಿರುವವರು, ವಾದ್ಯವಾದಕರು, ನಾಟ್ಯಗಣಪತಿ, ಹೀಗೆ ಹಲವಾರು ಶಿಲ್ಪಗಳನ್ನು ಬಹಳ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಆದರೆ ಅಲ್ಲಲ್ಲಿ ಕೆಲವು ಶಿಲ್ಪಗಳು ಭಗ್ನವಾಗಿವೆ. ಪೂರ್ವ ಭಾಗದಲ್ಲಿ ಸಣ್ಣದಾದ ಮುಖಮಂಟಪವಿದೆ. ಇದು ಸುಮಾರು ಐದು ಅಡಿ ಎತ್ತರದ ಜಗತಿಯನ್ನು ಹೊಂದಿದೆ. ಇದರ ಉತ್ತರ ಮತ್ತು ದಕ್ಷಿಣ ಭಾಗದಲ್ಲೂ ಕಟಾಂಜನವಿದೆ. ಇಲ್ಲಿಯೂ ಸಹ ಎರಡು ಹಂತದ ಶಿಲ್ಪಗಳನ್ನು ಕೆತ್ತಲಾಗಿದೆ. ಕೆಳಪಟ್ಟಿಕೆಯಲ್ಲಿ ನೃತ್ಯಗಾರ್ತಿಯರು ಹಾಗೂ ವಾದ್ಯವಾದಕರನ್ನು ಚಿತ್ರಿಸಲಾಗಿದೆ.

ದೇವಾಲಯದ ಹೊರಭಾಗದ ಭಿತ್ತಿಯನ್ನು ಶಿಲ್ಪಗಳಿಂದ ಅಲಂಕರಿಸಿದ್ದಾರೆ. ಪ್ರತಿಯೊಂದು ಶಿಲ್ಪದ ಅಂತರಗಳಲ್ಲಿ ತೆಳುವಾಗಿ ಸಣ್ಣದಾಗಿ ಎತ್ತರವಾಗಿರುವ ಅರೆಕಂಭಗಳನ್ನು ಕಾಣಬಹುದು. ಕಂಭದ ಮೇಲ್ಭಾಗದಲ್ಲಿ ಹಾಗೂ ಎರಡು ಕಂಭಗಳ ಮಧ್ಯಭಾಗದಲ್ಲಿ ಪದ್ಮದ ಚಿತ್ರವನ್ನು ರಚಿಸಿದ್ದಾರೆ. ಹೊಯ್ಸಳರ ಕಾಲದಲ್ಲಿಯ ಹಲವು ದೇವಾಲಯಗಳಲ್ಲಿ ಭಿತ್ತಿಶಿಲ್ಪಗಳನ್ನು ಕೆತ್ತಿರುವುದು ಸಾಮಾನ್ಯವಾಗಿದೆ. ಅದರಲ್ಲಿಯೂ ಸಹ ಹೊಯ್ಸಳ ಸ್ಥಪತಿಗಳು ಏನಾದರೂ ವಿಶೇಷತೆಯನ್ನು ತೋರಿಸಿರುವುದು ಅವರ ಕಲಾಪ್ರೌಢಿಮೆಗೆ ಸಾಕ್ಷಿಯಾಗಿದೆ. ಈ ದೇವಾಲಯದ ಭಿತ್ತಿಯ ಶಿಲ್ಪಗಳು ಬೇಲೂರು, ಹಳೇಬೀಡು, ಸೋಮನಾಥಪುರದ ದೇವಾಲಯಗಳ ರೀತಿಯಲ್ಲಿ ಒತ್ತೊತ್ತಾಗಿ ಅಲಂಕರಣವನ್ನು ಹೊಂದಿರದಿದ್ದರೂ ಸಹ ಭಿತ್ತಿಯ ಒಂದೊಂದು ಸಣ್ಣ ಭಾಗದಲ್ಲಿ ಒಂದು ಶಿಲ್ಪವನ್ನು ಕೆತ್ತಿದ್ದಾರೆ.

ಶಿಖರ: ದೇವಾಲಯದ ಶಿಖರವು ಹೊಯ್ಸಳರ ಕಾಲದ ವೇಸರ ಶೈಲಿಯನ್ನು ಹೊಂದಿದೆ. ಶಿಖರವು ಮೂರು ಹಂತಗಳಲ್ಲಿ ಶಾಲಾ, ಭದ್ರಶಾಲಾವನ್ನು ಹೊಂದಿದೆ. ಪ್ರತಿಯೊಂದು ಹಂತದಲ್ಲಿಯೂ ಸಹ ದಂತಪಂಕ್ತಿಯ ಅಲಂಕರಣೆಯಿದೆ. ಶಿಖರದ ಕೊನೆಯ ಭಾಗದಲ್ಲಿ ಅಮಲಕದ ರೀತಿಯ ಸ್ತೂಪಿಯಿದ್ದು ಇದೂ ಸಹ ನಕ್ಷತ್ರಾಕಾರವನ್ನು ಹೊಂದಿದ್ದು ಪ್ರತಿಯೊಂದು ದಿಕ್ಕಿನಲ್ಲಿಯೂ ಸಹ ವ್ಯಾಳದ ಬಾಯಿಂದ ಹೊರಟಿರುವ ಲತಾ ಸುರುಳಿಗಳನ್ನು ಅಲಂಕರಿಸಲಾಗಿದೆ. ಮೇಲ್ಭಾಗದಲ್ಲಿ ಕಳಸವಿದೆ. ಅಮಲಕದ ಮೇಲೆ ಆಗ್ನೇಯ ಮೂಲೆಯನ್ನು ಹೊರತುಪಡಿಸಿ ಉಳಿದ ಮೂರು ಮೂಲೆಗಳಲ್ಲಿಯೂ ಸಹ ಶಿವನ ವಾಹನವಾದ ನಂದಿಯ ಶಿಲ್ಪವಿದೆ. ಆಗ್ನೇಯ ದಿಕ್ಕಿನಲ್ಲಿದ್ದ ನಂದಿ ಬಹುಶಃ ಮುರಿದುಹೋಗಿರಬಹುದು. ದಕ್ಷಿಣ ಭಾಗದ ಭದ್ರಶಾಲಾದಲ್ಲಿ ಉಗ್ರನರಸಿಂಹ, ತ್ರಿಮುಖ ಬ್ರಹ್ಮ, ನಾಟ್ಯಸರಸ್ವತಿಯರ ಶಿಲ್ಪಗಳಿವೆ. ಪಶ್ಚಿಮ ಭಾಗದಲ್ಲಿ ಪಾರ್ವತಿ, ಕಾಳಭೈರವ, ನಾಟ್ಯಸರಸ್ವತಿಯ ಶಿಲ್ಪಗಳಿವೆ. ಈ ಭಾಗದಲ್ಲಿರುವ ಅಲಂಕರಣೆಯು ಅಪೂರ್ಣವಾಗಿವೆ. ಉತ್ತರ ಭಾಗದಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಪಾರ್ವತಿ, ಸಮಭಂಗಿಯಲ್ಲಿರುವ ಶಿವ, ನೃತ್ಯ ತಾಂಡವ ಶಿವನ ಶಿಲ್ಪಗಳಿವೆ. ಶಿಖರದ ಮುಂಭಾಗದಲ್ಲಿ ಶುಕನಾಸವಿದ್ದು ಇದು ಶಿಖರದ ಎರಡನೆ ಹಂತದ ಸಮಕ್ಕೆ ಇದೆ. ಇದರ ಮುಂಭಾಗದಲ್ಲಿ ವ್ಯಾಳ ಮುಖದಿಂದ ಹರಡಿರುವ ಲತಾಬಳ್ಳಿಗಳ ಅಲಂಕರಣವನ್ನು ರಚಿಸಲಾಗಿದೆ.

ನಂದಿಮಂಟಪ: ದೇವಾಲಯದ ಮುಂಭಾಗದಲ್ಲಿ ಹೊರಭಾಗ ಚೌಕಾಕಾರವಾಗಿದ್ದು ಒಳಭಾಗವು ಘನಾಕೃತಿಯನ್ನು ಹೊಂದಿದೆ. ಮಧ್ಯದಲ್ಲಿ ಸುಮಾರು 4 ಅಡಿ ಎತ್ತರದ ನಂದಿಶಿಲ್ಪವಿದೆ. ಇದನ್ನು ಬಹಳ ಸುಂದರವಾಗಿ ಅಲಂಕರಿಸಲಾಗಿದೆ. ಇದರ ಅಕ್ಕ ಪಕ್ಕದಲ್ಲಿ ಒಂದು ಅಡಿ ಎತ್ತರದ ಎರಡು ನಂದಿ ಶಿಲ್ಪಗಳಿವೆ. ನಂದಿಯ ಹಿಂಭಾಗದಲ್ಲಿ ಅಂದರೆ ನಂದಿಮಂಟಪದ ಒಳಭಾಗಕ್ಕೆ ಹೊಂದಿಕೊಂಡಂತೆ ನವರಂಗದಲ್ಲಿರುವ ದೇವಕೋಷ್ಠದಲ್ಲಿ ಇರುವಂತೆ ಇಲ್ಲಿಯೂ ಸಹ ವಿಮಾನ ಅಲಂಕರಣವಿರುವ ದೇವಕೋಷ್ಠವಿದೆ. ಕೋಷ್ಠದಲ್ಲಿ ಸಮಭಂಗಿಯಲ್ಲಿರುವ ಸೂರ್ಯನ ಶಿಲ್ಪವಿದೆ. ಸೂರ್ಯನು ಏಳುಕುದುರೆಗಳ ಚಿತ್ರವಿರುವ ಪೀಠದ ಮೇಲ್ಭಾಗದಲ್ಲಿ ನಿಂತಿದ್ದಾನೆ. ಎರಡು ಕೈಗಳಲ್ಲಿ ಪದ್ಮದ ಮೊಗ್ಗನ್ನು ಹಿಡಿದಿದ್ದಾನೆ. ಸೂರ್ಯನಿಗೆ ಕಿರೀಟವನ್ನು ಧರಿಸಿದ್ದು ಕಂಠಾಭರಣಗಳಿಂದ ಹಾಗೂ ಸೂಕ್ಷ್ಮ ಕೆತ್ತನೆಯಿರುವ ಅಲಂಕಾರಿಕ ವಸ್ತ್ರದಿಂದ ಅಲಂಕರಿಸಿದ್ದಾರೆ. ಇದಕ್ಕೆ ಸುಂದರವಾದ ಪ್ರಭಾವಳಿಯಿದ್ದು ಕೆಳಭಾಗದಲ್ಲಿ ಬಿಲ್ಲು ಬಾಣವನ್ನು ಹಿಡಿದಿರುವ ಉಷೆ ಹಾಗೂ ಪ್ರತ್ಯುಷೆಯರನ್ನು ಸಣ್ಣದಾಗಿ ಚಿತ್ರಿಸಲಾಗಿದೆ. ಒಳಸುತ್ತಲೂ ಸ್ವಲ್ಪ ಎತ್ತರವಾದ ಒಳಜಗತಿಯಿದೆ. ಸುತ್ತಲೂ ಕಂಭಗಳಿದ್ದು ಇವುಗಳಲ್ಲಿ ಕೆಲವು ದುಂಡಗಿವೆ, ಕೆಲವು ಅಷ್ಟಕೋನಾಕೃತಿಯನ್ನು ಮತ್ತೆ ಕೆಲವು ಷೋಡಶಾಕೃತಿಯಲ್ಲಿವೆ. ಭುವನೇಶ್ವರಿಯು ಮೂಲೆ ಕಲ್ಲುಗಳಗಳಿಂದ ಅಲಂಕೃತವಾಗಿದ್ದು ಮಧ್ಯದಲ್ಲಿ ಪದ್ಮದ ಅಲಂಕರಣವಿದೆ.

ಗರ್ಭಗೃಹ: ಚೌಕಾಕಾರವಾಗಿರುವ ಗರ್ಭಗೃಹದಲ್ಲಿ ಸುಮಾರು 2 ಅಡಿ ಎತ್ತರದ ಪೀಠದ ಮೇಲೆ 1 ಅಡಿ ಎತ್ತರದ ಲಿಂಗವಿದೆ. ಭುವನೇಶ್ವರಿಯು ಪದ್ಮದ ಅಲಂಕರಣೆಯನ್ನು ಹೊಂದಿದೆ. ಇಲ್ಲಿನ ದ್ವಾರಬಂಧವನ್ನು ಬಹಳ ಚೆನ್ನಾಗಿ ಅಲಂಕರಿಸಲಾಗಿದೆ. ಇದು ಏಳು ಅಲಂಕರಣ ಪಟ್ಟಿಕೆಯನ್ನು ಹೊಂದಿದೆ. ಒಂದು ಪಟ್ಟಿಕೆಯಲ್ಲಿ ಹೆಚ್ಚಿನ ರೀತಿಯಲ್ಲಿ ಉಬ್ಬಿರುವ ಅರೆಕಂಭಗಳ ರಚನೆಯಿದೆ. ಉಳಿದ

ಪಟ್ಟಿಕೆಗಳನ್ನು ಲತಾ ಸುರುಳಿ ಬಳ್ಳಿ ಹಾಗೂ ಇನ್ನಿತರ ಅಲಂಕರಣದಿಂದ ಚಿತ್ರಿಸಲಾಗಿದೆ. ಅರೆಕಂಭಗಳ ಮೇಲ್ಭಾಗದಲ್ಲಿ ಎರಡು ಬದಿಯಲ್ಲೂ ಸಹ ಸಣ್ಣದಾದ ಮದನಿಕೆಯರ ಶಿಲ್ಪಗಳನ್ನು ಕೆತ್ತಲಾಗಿದೆ. ಇದು ನವರಂಗದಲ್ಲಿರುವ ಮದನಿಕ ಶಿಲ್ಪದ ರೀತಿಯಲ್ಲಿಯೇ ಇದೆ. ದ್ವಾರದ ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರ ಚಿತ್ರಗಳಿವೆ. ದ್ವಾರ ಪಾಲಕರ ಪಕ್ಕದಲ್ಲಿ ರತಿ–ಮನ್ಮಥರ ಚಿತ್ರಗಳಿವೆ, ಮನ್ಮಥನು ಕೈಯಲ್ಲಿ ಕಬ್ಬಿನ ಜಲ್ಲೆಯನ್ನು ಹಿಡಿದಿದ್ದಾನೆ, ಪಕ್ಕದಲ್ಲಿ ನಂದಿಯ ಮುಖ ಮನುಷ್ಯನ ದೇಹವನ್ನು ಹೊಂದಿರುವ ಶಿಲ್ಪವಿದೆ. ಈ ರೀತಿಯ ಶಿಲ್ಪಗಳನ್ನು ದ್ವಾರದ ಎರಡು ಬದಿಯಲ್ಲೂ ಕಾಣಬಹುದು.

ಸುಖನಾಸಿ: ಸುಖನಾಸಿಯು ಗರ್ಭಗೃಹದಷ್ಟೇ ವಿಸ್ತೀರ್ಣವನ್ನು ಹೊಂದಿದೆ. ಇದು ಹೆಚ್ಚಿನ ಅಲಂಕರಣವನ್ನು ಹೊಂದಿಲ್ಲದ್ದಾಗಿದೆ. ಭುವನೇಶ್ವರಿಯಲ್ಲಿ ಚೌಕಾಕಾರದ ಪಟ್ಟಿಕೆಯ ಒಳಗೆ ಒಂಭತ್ತು ಪದ್ಮದ ಅಲಂಕರಣೆಯನ್ನು ಹೊಂದಿದೆ. ಶುಕನಾಸಿಯ ನಾಲ್ಕು ಮೂಲೆಗಳಲ್ಲಿ ಭಿತ್ತಿಗೆ ಹೊಂದಿಕೊಂಡಂತೆ ಮೂವತ್ತೆರಡು ಅಲಗುಗಳಿಂದ ರಚಿತವಾದ ಕೆಳಮುಖ ಬೋದಿಗೆಯ ಅಲಂಕರಣವಿರುವ ಕಂಭಗಳಿವೆ. ಇಲ್ಲಿನ ಮೂಲ ದ್ವಾರಬಂದವು ಶಿಥಿಲವಾಗಿದ್ದು ನಂತರದಲ್ಲಿ ಜೀರ್ಣೋದ್ದಾರ ಮಾಡಲಾಗಿದೆ ಆದುದರಿಂದ ಇಲ್ಲಿ ಯಾವುದೇ ಅಲಂಕರಣವಿಲ್ಲ.

ನವರಂಗ: ನವರಂಗವು ಒಂಭತ್ತು ಅಂಕಣವಿದೆ. ನವರಂಗದಲ್ಲಿ ಏಳು ದೇವಕೋಷ್ಠಗಳಿದ್ದು ಪ್ರತಿಯೊಂದು ಕೋಷ್ಠದಲ್ಲಿಯೂ ಸಹ ಬಿಡಿ ಶಿಲ್ಪಗಳನ್ನು ಇಡಲಾಗಿದೆ. ಕೋಷ್ಠಗಳನ್ನು ಸಣ್ಣದಾದ ತೆಳು ಕಂಭಗಳ ರಚನೆಯೊಂದಿಗೆ ರಚಿಸಲಾಗಿದೆ. ಮೇಲ್ಭಾಗದಲ್ಲಿ ಸುಂದರವಾದ ವಿಮಾನದ ರಚನೆಯನ್ನು ಮಾಡಿದ್ದಾರೆ ಪ್ರತಿಯೊಂದು ಕೋಷ್ಠಗಳಲ್ಲೂ ಸಹ ವಿಮಾನದ ರಚನೆಯಿದೆ. ಬಲಭಾಗದಲ್ಲಿ ದೇವಕೋಷ್ಠದಲ್ಲಿ ಗಣಪತಿಯ ಶಿಲ್ಪವಿದೆ. ಗಣಪತಿಯು ನಾಲ್ಕು ಕೈಗಳನ್ನು ಹೊಂದಿದ್ದು ಬಲಭಾಗದ ಹಿಂಭಾಗದ ಕೈಯಲ್ಲಿ ಪರಶು, ಮುಂಭಾಗದ ಕೈಯಲ್ಲಿ ಅರ್ಧದಂತವನ್ನು ಹಿಡಿದಿದ್ದು ಅಭಯ ಹಸ್ತವನ್ನು ಹೊಂದಿದೆ. ಎಡಭಾಗದ ಹಿಂಬದಿಯ ಕೈಯಲ್ಲಿ ಪಾಶವಿದ್ದು ಮುಂಭಾಗದ ಕೈಯಲ್ಲಿ ಮೋಧಕ ಪಾತ್ರೆಯನ್ನು ಹಿಡಿದಿದ್ದಾನೆ. ಸೊಂಡಿಲಿನಲ್ಲಿ ಹೂಗುಚ್ಚವನ್ನು ಹಿಡಿದಿದೆ. ಚಿಕ್ಕ ಕಾಲುಗಳು ಮತ್ತು ಚಿಕ್ಕ ಕೈಗಳನ್ನು ಹೊಂದಿದೆ. ದೊಡ್ಡದಾದ ದುಂಡನೆಯ ಹೊಟ್ಟೆ, ಹೊಟ್ಟೆಯ ಸುತ್ತಲೂ ಉಧರಬಂಧವಾಗಿ ಸರ್ಪವನ್ನು ಚಿತ್ರಿಸಲಾಗಿದೆ. ತಲೆಯಲ್ಲಿ ಕಿರೀಟವನ್ನು ಚಿತ್ರಿಸಲಾಗಿದೆ. ಯಜ್ಞೋಪವೀತ, ಉದರಬಂಧ, ಕೇಯೂರ ಇವುಗಳು ಗಣೇಶನನ್ನು ಅಲಂಕರಿಸಿವೆ. ಇದಕ್ಕೆ ಸುಂದರವಾದ ಪ್ರಭಾವಳಿಯನ್ನು ಕೆತ್ತಲಾಗಿದೆ. ಇದರ ಪಕ್ಕದಲ್ಲಿ ಸಪ್ತಮಾತೃಕೆಯರಾದ ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವರಾಹಿ, ಇಂದ್ರಾಣಿ ಮತ್ತು ಚಾಮುಂಡಿಯ ಶಿಲ್ಪಗಳಿದ್ದು ಪಕ್ಕದಲ್ಲಿ ಗಣಪತಿ ಮತ್ತು ಭೈರವನನ್ನು ಚಿತ್ರಿಸಿರುತ್ತಾರೆ. ಎಡ ಭಾಗದ ಕೋಷ್ಠದಲ್ಲಿ ಮಹಿಷಮರ್ಧಿನಿಯ ಶಿಲ್ಪವಿದೆ. ಇವಳು ಅಷ್ಠ ಭುಜಗಳನ್ನು ಹೊಂದಿದ್ದು ಕೈಯಲ್ಲಿ ಖಡ್ಗ, ಬಿಲ್ಲು, ಬಾಣ, ಘಂಟಾ, ಗುರಾಣಿ, ಶಂಖ ಮತ್ತು ಚಕ್ರವನ್ನು ಹಿಡಿದಿದ್ದಾಳೆ. ಶಿಲ್ಪದ ಕೆಳಗೆ ಕೋಣನನ್ನು ಚಿತ್ರಿಸಿದ್ದು ಕೋಣನ ಮೇಲಿರುವ ರಾಕ್ಷಸನ ಎದೆಗೆ ಭರ್ಜಿಯಿಂದ ಚುಚ್ಚಿದ್ದಾಳೆ. ಎಡಕಾಲನ್ನು ಮಹಿಷನ ಮೇಲೆ ಇಟ್ಟಿದ್ದಾಳೆ ಇದಕ್ಕೆ ಸುಂದರವಾದ ಪ್ರಭಾವಳಿಯಿದೆ. ಇವಳ ಮುಖಭಾವವು ಸೌಮ್ಯವಾಗಿದ್ದು ದೇಹವನ್ನು ಅಲಂಕರಣ ವಸ್ತುಗಳಿಂದ ಅಲಂಕರಿಸಿದ್ದಾರೆ. ತಲೆಯಲ್ಲಿ ಕಿರೀಟವನ್ನು ಚಿತ್ರಿಸಲಾಗಿದೆ.

ಇದರ ಪಕ್ಕದ ಕೋಷ್ಠದಲ್ಲಿ ತ್ರಿಮುಖ ಸುಬ್ರಹ್ಮಣ್ಯನ ಶಿಲ್ಪವಿದೆ. ಸುಬ್ರಹ್ಮಣ್ಯನು ನವಿಲಿನ ಮೇಲೆ ಕುಳಿತಿದ್ದು, ನಾಲ್ಕು ಕೈಗಳನ್ನು ಹೊಂದಿದ್ದಾನೆ. ಕೈಯಲ್ಲಿ ಚಕ್ರ, ಪಾಶ, ಹಾಗೂ ಬಹುಬೀಜ ಫಲವನ್ನು ಹಿಡಿದಿದ್ದಾನೆ. ಬಲಗೈಯನ್ನು ಅಭಯ ಮದ್ರೆಯಲ್ಲಿ ತೋರಿಸಿದ್ದಾನೆ. ನವಿಲಿನ ಬಾಯಲ್ಲಿ ಹಣ್ಣಿನ ಗೊಂಚಲನ್ನು ಚಿತ್ರಿಸಿದ್ದಾನೆ. ಸಾಮಾನ್ಯವಾಗಿ ನವಿಲನ್ನು ಎದುರಾಗಿರುವಂತೆ ಇರುವ ಬಿಡಿಶಿಲ್ಪಗಳು ಹೆಚ್ಚಾಗಿವೆ. ಆದರೆ ಈ ಶಿಲ್ಪದಲ್ಲಿ ನವಿಲಿನ ಮೇಲೆ ಒಂದು ಬದಿಗೆ ತಿರುಗಿಕೊಂಡು ಕುಳಿತಿರುವಂತೆ ಚಿತ್ರಿಸಲಾಗಿದೆ. ಉತ್ತರ ಕೋಷ್ಠದಲ್ಲಿ ಚೆನ್ನಕೇಶವನ ಶಿಲ್ಪವಿದೆ. ಸಮಭಂಗಿಯಲ್ಲಿರುವ ಕೇಶವನು ಕೈಯಲ್ಲಿ ಶಂಖ, ಚಕ್ರ, ಗದ, ಪದ್ಮವನ್ನು ಹಿಡಿದಿದ್ದಾನೆ. ಪೀಠದಲ್ಲಿ ಗರುಡನು ವೀರಾಸನದಲ್ಲಿ ಕುಳಿತಿರುವಂತೆ ಚಿತ್ರಿಸಲಾಗಿದೆ. ಇದಕ್ಕೆ ಸುಂದರವಾದ ಪ್ರಭಾವಳಿಯಿದ್ದು ಇಕ್ಕೆಲಗಳಲ್ಲಿ ಶ್ರೀದೇವಿ ಭೂದೇವಿಯರನ್ನು ಚಿತ್ರಿಸಲಾಗಿದೆ. ದಕ್ಷಿಣ ಕೋಷ್ಠದಲ್ಲಿ ಒಂದು ಅಡಿ ಎತ್ತರದ ಲಿಂಗವಿದೆ. ಇದರ ಶಿಖರದ ಪಟ್ಟಿಕೆಯಲ್ಲಿ ಹಿಂದಿ? ಅಕ್ಷರದಲ್ಲಿ ಅರ್ಜುನೇಶ್ವರ ಎಂದು ಕೆತ್ತಲಾಗಿದೆ. ಸ್ಥಳೀಯರು ಸಹ ಅರ್ಜುನೇಶ್ವರ ಎಂದೇ ಪೂಜಿಸುತ್ತಿದ್ದಾರೆ. ಪ್ರತಿಯೊಂದು ಕೋಷ್ಠವನ್ನು ಸಹ ಅಲಂಕಾರಿಕವಾಗಿ ಚಿತ್ರಿಸಲಾಗಿದೆ.

ನವರಂಗದ ಮಧ್ಯಭಾಗದಲ್ಲಿ ಸುಮಾರು ಅರ್ಧ ಅಡಿ ಎತ್ತರದ ಚೌಕಾಕಾರದ ಡಯಾಸ್ ಅನ್ನು ಹೊಂದಿದ್ದು ಅದರ ಮೇಲ್ಭಾಗದಲ್ಲಿ ಮತ್ತೆ ವೃತ್ತಾಕಾರದ ಡಯಾಸ್ ಇದೆ. ಆದುದರಿಂದ ಇದನ್ನು ರಂಗಸ್ಥಳವೆಂದು ಸಹ ಕರೆಯಬಹುದು. ಇಲ್ಲಿ ನಾಲ್ಕು ಸ್ವತಂತ್ರ ಕಂಭಗಳಿವೆ ಇವು ಸುಮಾರು ಒಂಭತ್ತು ಅಡಿಯಷ್ಟು ಎತ್ತರವಾಗಿವೆ. ಇವುಗಳು ಚೌಕಾಕಾರದ ಪೀಠದ ಮೇಲಿವೆ. ಕೆಳಭಾಗವು ಚೌಕಾಕಾರವಾಗಿದ್ದು ನಂತರದಲ್ಲಿ ದುಂಡಗಿದ್ದು ಮೇಲ್ಭಾಗದಲ್ಲಿ ವೃತ್ತಾಕಾರದ ಮುಚ್ಚಳದ ರೀತಿಯಿದೆ. ಈ ಕಂಭಗಳನ್ನು ಕಡೆತ ಯಂತ್ರದಿಂದ ದುಂಡಗೆ ಕಡೆಯಲ್ಪಟ್ಟಿದೆ. ಕಂಭಗಳ ಮಧ್ಯಭಾಗದಿಂದ ಮೇಲ್ಭಾಗದವರೆಗೂ ಸಹ ಸಣ್ಣ ಸಣ್ಣ ಮಣಿ ಸರಗಳಿಂದ ಕೂಡಿದ ಸೂಕ್ಷ್ಮ ಕೆತ್ತನೆಯನ್ನು ಮಾಡಿದ್ದಾರೆ. ಭಿತ್ತಿಗೆ ಹೊಂದಿಕೊಂಡಂತೆ ಒಳ ಸುತ್ತಲೂ ಸಹ ಹನ್ನೆರಡು ನಕ್ಷತ್ರಾಕಾರದ ಕಂಭಗಳಿವೆ. ಇವುಗಳು ಭಿತ್ತಿಗೆ ಹೊಂದಿಕೊಂಡಿದ್ದು ಹೊರ ಮುಖ ಮಾತ್ರ ಅಲಂಕರಣದಿಂದ ಕೂಡಿದ್ದು ಭಿತ್ತಿಗೆ ಹೊಂದಿಕೊಂಡಿರುವ ಭಾಗವು ಯಾವುದೇ ಅಲಂಕರಣವಿಲ್ಲದೆ ಸರಳವಾಗಿವೆ. ಹೊರಭಾಗದಿಂದ ನವರಂಗಕ್ಕೆ ಒಳಪ್ರವೇಶದ ದ್ವಾರದ ಒಳ ಬದಿಯಲ್ಲಿ ಕಡೆತ ಯಂತ್ರದಿಂದ ದುಂಡಗೆ ಕಡೆಯಲ್ಪಟ್ಟಿರುವ ಎರಡು ಕಂಭಗಳಿವೆ. ಇವುಗಳು ಅಷ್ಟೇನು ಅಲಂಕರಣವನ್ನು ಹೊಂದಿಲ್ಲದೆ ಸ್ವಲ್ಪ ಭಾಗವು ಗೋಡೆಗೆ ಹೊಂದಿಕೊಂಡಂತೆಯೇ ಇದೆ. ಪೂರ್ವ ಭಾಗದಲ್ಲಿ ಎರಡು ಬದಿಯಲ್ಲೂ ಸಹ ವಿಶಾಲವಾದ ಜಾಲಂದ್ರವನ್ನು ಮಾಡಲಾಗಿದೆ. ಇವು ಚೌಕಾಕಾರವಾಗಿ ಅಷ್ಟಕೋನಕೃತಿಯನ್ನು ಹೊಂದಿವೆ.

ಪ್ರತಿಯೊಂದು ಕಂಭದಲ್ಲಿ ಬೋದಿಗೆಯಿಂದ ತೊಲೆಗೆ ಹೊಂದಿಕೊಂಡಂತೆ ಮದನಿಕ ಶಿಲ್ಪಗಳನ್ನು ಕೆತ್ತಿದ್ದಾರೆ ಇವುಗಳು ಈ ದೇವಾಲಯದ ನವರಂಗದಲ್ಲಿನ ಒಳ ಭಾಗದ ಸೌಂದರ್ಯವನ್ನು ಹಿಮ್ಮಡಿಗೊಳಿಸಿವೆ. ನವರಂಗದ ನಾಲ್ಕು ಕಂಭಗಳ ಭೋದಿಗೆಯ ಮೇಲೆ ಕಡೆದಿರುವ ಸುಮಾರು 3 ಅಡಿ ಎತ್ತರದ ಹದಿನಾರು ವಿವಿಧ ಭಂಗಿಯ ಮದನಿಕೆಯರ ಶಿಲ್ಪಗಳಿದ್ದವು. ಆದರೆ ಪ್ರಸ್ತುತ ಐದು ಮದನಿಕೆಯರ ಶಿಲ್ಪಗಳು ಕಣ್ಮರೆಯಾಗಿವೆ. ಉಳಿದ ಹನ್ನೊಂದು ಮದನಿಕೆಯರ ಶಿಲ್ಪಗಳಿವೆ. ಹೊಯ್ಸಳರ

ಕಾಲದಲ್ಲಿ ನಿರ್ಮಾಣವಾದಂತಹ ಕೆಲವೇ ಕೆಲವು ದೇವಾಲಯಗಳಲ್ಲಿ ಈ ರೀತಿಯ ಮದನಿಕ ಶಿಲ್ಪಗಳನ್ನು ಕಾಣಬಹುದು. ಪ್ರತಿಯೊಂದು ಮದನಿಕ ಶಿಲ್ಪಗಳ ಕೆಳಭಾಗದಲ್ಲಿ ಪದ್ಮದ ಅಲಂಕರಣದ ಪೀಠವನ್ನು ಸಹ ಕೆತ್ತಲಾಗಿದೆ.

ವಾಯುವ್ಯ ಭಾಗದಲ್ಲಿನ ಕಂಭದಲ್ಲಿ ಒಟ್ಟು ಮೂರು ಮದನಿಕೆ ಶಿಲ್ಪಗಳಿವೆ. ಪಶ್ಚಿಮ ಭಾಗದಲ್ಲಿ ಮಾತ್ರ ಶಿಲ್ಪವಿಲ್ಲ. ದಕ್ಷಿಣ ದಿಕ್ಕಿನಲ್ಲಿರುವ ಶಿಲ್ಪವು ನಾಟ್ಯಭಂಗಿಯಲ್ಲಿದೆ. ಸುಂದರವಾದ ಅಲಂಕರಣದಿಂದ ಕೂಡಿದ್ದು ಕೈಯಲ್ಲಿ ಕಡಗ, ಕಾಲಿಗೆ ಕಡಗ ಗೆಜ್ಜೆ ಕೊರಳಲ್ಲಿ ಹೊಟ್ಟೆಯತನಕ ಇಳಿಬಿಟ್ಟ ಹಾರ ಇದಲ್ಲದೆ ಸಣ್ಣ ಸಣ್ಣ ಕಂಠಿಹಾರಗಳನ್ನು ಧರಿಸಿದ್ದಾಳೆ. ಇವಳು ಧರಿಸಿರುವ ವಸ್ತ್ರವು ಅತಿ ಹೆಚ್ಚು ಸೂಕ್ಷ್ಮ ಕುಸುರಿಯನ್ನು ಹೊಂದಿದ್ದು ವಸ್ತ್ರದ ಪೂರ್ತಿ ಭಾಗವು ಸೂಕ್ಷ್ಮ ಕುಸುರಿ ಕೆತ್ತನೆಯನ್ನು ಹೊಂದಿದೆ. ತಲೆಯು ಗುಂಗುರು ಕೂದಲಿನ ಅಲಂಕರಣೆಯನ್ನು ಹೊಂದಿದ್ದು ತಲೆಯ ಹಿಂಬದಿಯಲ್ಲಿ ವೃತ್ತಾಕಾರದ ಅಲಂಕರಣೆಯನ್ನು ಮಾಡಲಾಗಿದೆ. ಇದಕ್ಕೆ ಸುಂದರವಾದ ಪ್ರಭಾವಳಿಯಿದ್ದು, ಪ್ರಭಾವಳಿಯನ್ನು ಲತಾ ಸುರುಳಿಬಳ್ಳಿಯಿಂದ ಅಲಂಕರಿಸಲಾಗಿದ್ದು ಸಣ್ಣ ಹಣ್ಣಿನ ಗೊಂಚಲನ್ನು ಸಹ ಕೆತ್ತಲಾಗಿದೆ. ಬಲಕಾಲನ್ನು ಕೆಳಗೆ ಇಟ್ಟು ಎಡದ ಕಾಲನ್ನು ಬಲಕ್ಕೆ ತಿರುಗಿಸಿದೆ ಬಲದ ಕೈಯನ್ನು ಇಳಿಬಿಟ್ಟು ಎಡದ ಕೈಯನ್ನು ಮೇಲಕ್ಕೆ ಎತ್ತಲಾಗಿದೆ. ಇವಳನ್ನು ನೃತ್ಯಭಂಗಿಯಲ್ಲಿ ತೋರಿಸಿದ್ದಾನೆ. ಇಕ್ಕೆಲಗಳಲ್ಲಿ ಇಬ್ಬರು ಮೃದಂಗವನ್ನು ಬಾರಿಸುತ್ತಿದ್ದಾರೆ. ಅವರ ತಾಳಕ್ಕೆ ಇವಳು ಕುಣಿಯುವಂತೆ ಶಿಲ್ಪಿಯು ಈ ನೃತ್ಯಗಾತಿಯನ್ನು ಚಿತ್ರಿಸಿದ್ದಾನೆ. ಪೂರ್ವ ಭಾಗದಲ್ಲಿರುವ ಮದನಿಕೆಯ ಶಿಲ್ಪವು ಸಹ ಮೇಲಿನ ಶಿಲ್ಪದಂತೆ ಅಲಂಕರಣೆಯನ್ನು ಹೊಂದಿದೆ. ಎಡಗಾಲನ್ನು ಕೆಳಗೆ ಇಟ್ಟುಕೊಂಡು ಬಲಗಾಲನ್ನು ಎಡಕ್ಕೆ ತಿರುಗಿಸಿದ್ದಾಳೆ. ಯುವತಿಯು ಬಲಗೈಯನ್ನು ಮೇಲಕ್ಕೆ ಎತ್ತಿದ್ದು, ಎಡಗೈಯನ್ನು ಕಟಿ ಪ್ರದೇಶದಲ್ಲಿ ಅಂಗೈಯನ್ನು ಕೆಳಗೆ ಬಿಟ್ಟಿದ್ದಾಳೆ. ಇವಳು ಅತಿಭಂಗಿಯಲ್ಲಿ ನಿಂತಿದ್ದಾಳೆ. ಇವಳಿಗೂ ಸಹ ಮಕರತೋರಣದ ಅಲಂಕರಣವಿದ್ದು ಇಕ್ಕೆಲಗಳಲ್ಲಿ ಇಬ್ಬರು ಮೃದಂಗವನ್ನು ಭಾರಿಸುತ್ತಿರುವ ಸಣ್ಣ ಶಿಲ್ಪಗಳನ್ನು ಕೆತ್ತಲಾಗಿದೆ. ಬಲಭಾಗದಲ್ಲಿರುವ ವ್ಯಕ್ತಿಯು ಒಂದು ಕಾಲನ್ನು ಮಡಿಚಿಕೊಂಡು ವೀರಾಸನದಲ್ಲಿ ಕುಳಿತಂತೆ ಇದ್ದು ಮತ್ತೊಂದು ಬದಿಯಲ್ಲಿರುವವನು ಮೃದಂಗವನ್ನು ಅವನ ಅರ್ಧಭಾಗದಷ್ಟು ಮೇಲಕ್ಕೆತ್ತಿಕೊಂಡು ಬಾರಿಸುತ್ತಿರುವಂತೆ ಚಿತ್ರಿಸಲಾಗಿದೆ. ಉತ್ತರ ಭಾಗದಲ್ಲಿರುವ ಮದನಿಕೆಯ ಶಿಲ್ಪವು ದ್ವಿಭಂಗಿಯಲ್ಲಿದೆ. ಇದು ಸಹ ಬಹಳ ಅಲಂಕಾರಿಕವಾಗಿದ್ದು ಕೈಯನ್ನು ಅಭಯ ಹಾಗೂ ವರದ ಹಸ್ತವನ್ನು ಹೊಂದಿರುವ ನಾಟ್ಯಭಂಗಿಯಲ್ಲಿರುತ್ತದೆ. ಮೇಲೆ ತಿಳಿಸಿದ ಎರಡು ಶಿಲ್ಪಗಳಷ್ಟೆ ಅಲಂಕರಣವನ್ನು ಇದು ಸಹ ಹೊಂದಿದ್ದು ತೋರಣವು ಮಾತ್ರ ಉಳಿದೆರಡು ಶಿಲ್ಪಗಳಿಗಿಂತ ಹೆಚ್ಚಿನ ಅಲಂಕರಣವನ್ನು ಹೊಂದಿದೆ. ವಸ್ತ್ರವನ್ನು ಕೆಳಕ್ಕೆ ಇಳಿಬಿಟ್ಟಂತೆ ಚಿತ್ರಿಸಲಾಗಿದೆ. ಇಕ್ಕೆಲಗಳಲ್ಲಿ ಡಮರನ್ನು ಬಾರಿಸುತ್ತಿರುವ ವ್ಯಕ್ತಿಗಳನ್ನು ಕೆತ್ತಲಾಗಿದೆ.

ಈಶಾನ್ಯ ಭಾಗದಲ್ಲಿರುವ ಕಂಭದಲ್ಲಿ ಮೂರು ಮದನಿಕೆ ಶಿಲ್ಪಗಳಿವೆ. ಪಶ್ಚಿಮ ಭಾಗದಲ್ಲಿ ಮಾತ್ರ ಶಿಲ್ಪವಿಲ್ಲ. ಉತ್ತರ ದಿಕ್ಕಿನಲ್ಲಿರುವ ಮದನಿಕೆಯ ಶಿಲ್ಪವು ದ್ವಿಭಂಗಿಯಲ್ಲಿದೆ. ಇವಳು ಸಹ ಕೈ, ಕಾಲುಗಳಿಗೆ ಕಡಗಗಳನ್ನು ಧರಿಸಿದ್ದಾರೆ. ಸುಂದರವಾದ ಕೇಶವಿನ್ಯಾಸ ತಲೆಯ ಹಿಂಭಾಗದಲ್ಲಿ ವೃತ್ತಾಕಾರದ ಅಲಂಕರಣೆ ಹಾಗೂ ಸುಂದರವಾದ

ಪ್ರಭಾವಳಿಯನ್ನು ಹೊಂದಿದೆ. ಕೈಯಲ್ಲಿ ತಾಳಗಳನ್ನು ಹಿಡಿದಿದೆ. ಮುಖದ ಭಾವವು ಬಹಳ ಸೌಮ್ಯತೆಯಿಂದ ಕೂಡಿದೆ. ಕೆಳಭಾಗದ ಎರಡು ಬದಿಯಲ್ಲಿ ಕೊಳಲನ್ನು ಬಾರಿಸುತ್ತಿರುವ ಯುವಕರ ಸಣ್ಣ ಶಿಲ್ಪಗಳನ್ನು ಕೆತ್ತಲಾಗಿದೆ. ಪೂರ್ವಭಾಗದ ಮದನಿಕೆ ಶಿಲ್ಪವು ತ್ರಿಭಂಗಿಯಲ್ಲಿದೆ. ಇದು ಸಹ ಹೆಚ್ಚಿನ ಅಲಂಕರಣವನ್ನು ಹೊಂದಿದೆ. ಕಾಲಿಗೆ ದಪ್ಪನೆಯ ಕಡಗಗಳನ್ನು ಧರಿಸಿದ್ದು ನಡುವಿನಿಂದ ಕೆಳಕ್ಕೆ ಇಳಿಬಿಟ್ಟ ದೋತಿಯನ್ನು ಕುಸುರಿ ಕೆತ್ತನೆಯಿಂದ ಅಲಂಕರಿಸಲಾಗಿದೆ. ಮಧ್ಯದಲ್ಲಿ ಇಳಿಬಿಟ್ಟ ಅಲಂಕಾರಿಕ ದಪ್ಪನೆಯ ಹೂಗುಚ್ಚವನ್ನು ಚಿತ್ರಿಸಲಾಗಿದೆ. ಎಡ ಭಾಗದ ಕೈಯಲ್ಲಿ ದರ್ಪಣವನ್ನು ಹಿಡಿದಿದ್ದು ಅವಳ ಸೌಂದರ್ಯವನ್ನು ಸವಿಯುತ್ತಾ ಅಲಂಕರಣೆಯನ್ನು ಮಾಡಿಕೊಳ್ಳುತ್ತಿದ್ದಾಳೆ. ಬಲಗೈಯ ತರ್ಜನಿ ಹಸ್ತವು ಸ್ವಲ್ಪ ಬಗ್ಗಿ ಹಣೆಗೆ ತಿಳಕವನ್ನಿಟ್ಟುಕೊಳ್ಳಲು ಪ್ರಯತ್ನಿಸುವಂತಿದೆ. ವಿಶ್ವಸೌಂದರ್ಯ ದರ್ಪಣ ದೃಶ್ಯಮಾನವಾದಂತಿದೆ. ಇವಳು ಒಂದು ರೀತಿಯಲ್ಲಿ ಕಾಮಾಕರ್ಷಿಣೀ ಶಕ್ತಿಯಾಗಿಯೂ ಕಾಣುತ್ತಾಳೆ. ಇಲ್ಲಿಯು ಸಹ ಮಕರತೋರಣದ ಅಲಂಕರಣೆಯಿದ್ದು ಇಕ್ಕೆಲಗಳಲ್ಲಿ ಒಬ್ಬ ಯುವತಿಯು ಹೂಗುಚ್ಚವನ್ನು ಮತ್ತೊಬ್ಬಳು ಒಂದು ರೀತಿಯ ಕಡ್ಡಿಯನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ. ಸಾಮಾನ್ಯವಾಗಿ ಹೊಯ್ಸಳರ ಕಾಲದ ಶಿಲ್ಪಗಳಲ್ಲಿ ದರ್ಪಣ ಸುಂದರಿಯರನ್ನು ಕೆತ್ತಲಾಗುತ್ತಿತ್ತು ಅದೇ ರೀತಿಯ ಶಿಲ್ಪವನ್ನು ಶಿಲ್ಪಿಯು ಇಲ್ಲಿ ಕಂಡರಿಸಿದ್ದಾನೆ. ದಕ್ಷಿಣ ದಿಕ್ಕಿನಲ್ಲಿ ಅತಿಭಂಗಿಯಲ್ಲಿರುವ ನೃತ್ಯಗಾರ್ತಿಯನ್ನು ಚಿತ್ರಿಸಲಾಗಿದೆ. ಇವಳೂ ಸಹ ಹೆಚ್ಚಿನ ಅಲಂಕರಣೆಯನ್ನು ಹೊಂದಿದ್ದಾಳೆ. ಆದರೆ ಉಳಿದ ಶಿಲ್ಪಗಳಲ್ಲಿ ಇರುವ ದೊಡ್ಡದಾದ ಕಂಠಿಹಾರವನ್ನು ಮಾತ್ರ ಇಲ್ಲಿ ಕೆತ್ತಲಾಗಿಲ್ಲ. ಉಳಿದಂತೆ ಎಲ್ಲ ಅಲಂಕರಣವನ್ನು ಮಾಡಲಾಗಿದೆ. ಇಕ್ಕೆಲಗಳಲ್ಲಿ ಡಮರನ್ನು ಭಾರಿಸುತ್ತಿರುವ ಸಣ್ಣ ಶಿಲ್ಪಗಳಿವೆ. ಇವಳ ಎಡ ಭಾಗದ ಮೊಣಕೈ ಮಾತ್ರ ಭಗ್ನವಾಗಿದೆ.

ಆಗ್ನೇಯ ಭಾಗದಲ್ಲಿರುವ ಕಂಭದಲ್ಲಿ ನಾಲ್ಕು ದಿಕ್ಕಿನಲ್ಲಿಯೂ ಸಹ ಮದನಿಕ ಶಿಲ್ಪಗಳಿವೆ. ಉತ್ತರ ಭಾಗದಲ್ಲಿನ ಮದನಿಕೆಯು ಸಹ ಹೆಚ್ಚಿನ ಅಲಂಕರಣವನ್ನು ಹೊಂದಿದ್ದಾಳೆ. ಬಲಭಾಗದ ಭುಜಕ್ಕೆ ಡಮರನ್ನು ನೇತುಹಾಕಿಕೊಂಡಿದ್ದು ಎಡ ಕೈಯನ್ನು ಡಮರಿನ ಮೇಲ್ಕಟ್ಟಿನ ಒಳಕ್ಕೆ ತೂರಿಸಿದ್ದು ಬಲಕೈಯಿಂದ ಸಣ್ಣದಾದ ಒಂದು ಕಡ್ಡಿಯಿಂದ ಡಮರನ್ನು ಬಾರಿಸುತ್ತಿರುವಂತೆ ಚಿತ್ರಿಸಲಾಗಿದೆ. ತೋರಣದ ಇಕ್ಕೆಲಗಳಲ್ಲಿಯೂ ಸಹ ಇಬ್ಬರು ಡಮರನ್ನು ಭಾರಿಸುತ್ತಿರುವ ವ್ಯಕ್ತಿಗಳ ಸಣ್ಣ ಶಿಲ್ಪಗಳಿವೆ. ಪೂರ್ವ ಭಾಗದ ಮದನಿಕೆಯು ಅತಿಭಂಗಿಯಲ್ಲಿದೆ. ಇದು ಸಹ ಹೆಚ್ಚಿನ ಅಲಂಕರಣವನ್ನು ಹೊಂದಿದೆ. ಬಲಕಾಲನ್ನು ಕೆಳಕ್ಕೆ ಇಟ್ಟುಕೊಂಡು ಎಡಕಾಲನ್ನು ಬಲಕ್ಕೆ ತಿರುಗಿಸಿ ಪಾದವು ಮೇಲಕ್ಕೆ ಕಾಣುವಂತೆ ಚಿತ್ರಿಸಲಾಗಿದೆ. ತೋರಣದ ಇಕ್ಕೆಲದಲ್ಲಿ ಡಮರನ್ನು ಬಾರಿಸುತ್ತಿರುವ ವ್ಯಕ್ತಿಗಳ ಸಣ್ಣ ಶಿಲ್ಪಗಳಿವೆ. ಇವಳು ಆ ತಾಳಕ್ಕೆ ಕುಣಿಯುತ್ತಿರುವಂತೆ ಚಿತ್ರಿಸಿದ್ದು ಅವಳ ಬಟ್ಟೆಯು ಗಾಳಿಗೆ ತೂರುವ ಹಾಗೆ ಚಿತ್ರಿಸಲಾಗಿದೆ. ಆದುದರಿಂದ ಇವಳು ನೃತ್ಯದಲ್ಲಿ ಎಷ್ಟು ಮೈಮರೆತು ಕುಣಿಯುತ್ತಿದ್ದಾಳೆ ಎಂದು ತಿಳಿಯಬಹುದು.

ದಕ್ಷಿಣ ಭಾಗದಲ್ಲಿರುವ ಮದನಿಕೆಯು ದ್ವಿಭಂಗಿಯಲ್ಲಿದ್ದು ಇವಳನ್ನೂ ಸಹ ಅಲಂಕರಣದಿಂದ ಕೂಡಿದ್ದಂತೆ ಚಿತ್ರಿಸಲಾಗಿದೆ. ತೋರಣದ ಇಕ್ಕೆಲಗಳಲ್ಲಿ ಡಮರನ್ನು ಬಾರಿಸುತ್ತಿರುವ ವ್ಯಕ್ತಿಗಳ ಚಿತ್ರಗಳಿವೆ. ತೋರಣದಲ್ಲಿ ಲತಾಸುರುಳಿ ಬಳ್ಳಿಗಳಿಂದ ಅಲಂಕರಿಸಲಾಗಿದೆ. ಕೆಳಭಾಗದಲ್ಲಿ ಪದ್ಮಪೀಠದ ಅಲಂಕರಣೆಯಿಲ್ಲದೆ ವೃತ್ತಾಕಾರದ

ಕಲ್ಲನ್ನು ಹಾಕಲಾಗಿದೆ. ಉಳಿದ ಶಿಲ್ಪಗಳಿಗಿಂತ ಇದರ ದೇಹವು ಸ್ವಲ್ಪ ಸಣ್ಣದಾಗಿದೆ. ಪಶ್ಚಿಮ ಭಾಗದಲ್ಲಿರುವ ಮದನಿಕೆಯ ಶಿಲ್ಪವು ತ್ರಿಭಂಗಿಯಲ್ಲಿದ್ದು ಸುಂದರವಾದ ಅಲಂಕರಣವನ್ನು ಹೊಂದಿದೆ. ಇವಳಿಗೆ ಹೆಚ್ಚಾಗಿ ಇಳಿಬಿಟ್ಟ ದೋತಿಯನ್ನು ಹಾಕಲಾಗಿದೆ. ಕೊರಳಿನಿಂದ ಮಂಡಿಯವರೆಗೆ ಇಳಿಬಿಟ್ಟಿರುವ ಹಾರ ಒಂದು ಕಂಠಿಹಾರ, ಎರಡು ಸ್ತನಹಾರಗಳನ್ನು ಚಿತ್ರಿಸಲಾಗಿದೆ. ಕಿವಿಯಲ್ಲಿ ದೊಡ್ಡದಾದ ಕರ್ಣಕುಂಡಲವನ್ನು ಚಿತ್ರಿಸಲಾಗಿದೆ. ಬಲಗೈಯನ್ನು ವಿಸ್ಮಯದ ರೀತಿಯಲ್ಲಿ ಚಿತ್ರಿಸಲಾಗಿದೆ. ಎಡಗೈಯನ್ನು ಮೇಲಕ್ಕೆ ಎತ್ತಿರುವಂತೆ ಚಿತ್ರಿಸಿದ್ದು ಮುಂಗೈ ಮುರಿದಿದೆ. ಬಹುಶಃ ಈ ಕೈಯಲ್ಲಿ ದರ್ಪಣವನ್ನು ಹಿಡಿದಿದ್ದಿರಬೇಕು. ಏಕೆಂದರೆ ಇವಳ ಎರಡು ಬದಿಯಲ್ಲಿ ಇರುವ ಸಣ್ಣ ಸ್ತ್ರೀ ಶಿಲ್ಪಗಳಲ್ಲಿ ಒಬ್ಬಳು ಕೈಯಲ್ಲಿ ದೋತಿಯನ್ನು ಮತ್ತೊಬ್ಬಳು ಒಂದು ಕೈಯಲ್ಲಿ ಸಣ್ಣದಾದ ಪೆಟ್ಟಿಗೆಯನ್ನು ಮತ್ತೊಂದು ಕೈಯಲ್ಲಿ ಹೂವನ್ನು ಹಿಡಿದುಕೊಂಡು ಮದನಿಕೆಗೆ ಕೊಡುತ್ತಿರುವಂತೆ ಚಿತ್ರಿಸಲಾಗಿದೆ. ಆದುದರಿಂದ ಈ ಶಿಲ್ಪ ಲಕ್ಷಣವನ್ನು ಗಮನಿಸಿದಾಗ ಇದು ಸೌಂದರ್ಯವನ್ನು ಮಾಡಿಕೊಳ್ಳುತ್ತಿರುವ ಮದನಿಕ ಶಿಲ್ಪದ ಲಕ್ಷಣವನ್ನು ಹೊಂದಿದೆ. ಇಲ್ಲಿಯು ಸಹ ಸುಂದರವಾದ ತೋರಣವನ್ನು ಚಿತ್ರಿಸಲಾಗಿದೆ.

ನೈರುತ್ಯ ಭಾಗದಲ್ಲಿರುವ ಕಂಭದಲ್ಲಿ ಉತ್ತರ ದಿಕ್ಕಿಗೆ ಮಾತ್ರ ಮದನಿಕ ಶಿಲ್ಪವಿದೆ. ಉಳಿದ ಭಾಗದವು ಭಗ್ನವಾಗಿವೆ. ದ್ವಿಭಂಗಿಯಲ್ಲಿರುವ ನಿಂತಿರುವ ಈ ಶಿಲ್ಪವು ಬೇರೆ ಶಿಲ್ಪಗಳಷ್ಟೇ ಅಲಂಕರಣವನ್ನು ಹೊಂದಿದೆ. ಮುಖದ ಭಾವವು ವಿಸ್ಮಯವನ್ನುಂಟು ಮಾಡುವಂತಿದೆ. ಈಕೆಯ ಕೈಯಲ್ಲಿ ತಾಳಗಳನ್ನು ಹಿಡಿದಿದ್ದಾಳೆ ಇಕ್ಕೆಲಗಳಲ್ಲಿ ಡಮರನ್ನು ಬಾರಿಸುತ್ತಿರುವ ಮತ್ತು ಕೊಳಲನ್ನು ನುಡಿಸುತ್ತಿರುವ ವ್ಯಕ್ತಿಗಳ ಸಣ್ಣ ಶಿಲ್ಪಗಳಿವೆ. ತೋರಣದಲ್ಲಿ ಇಳಿಬಿಟ್ಟ ಹಣ್ಣಿನ ಗೊಂಚಲನ್ನು ಸಹ ಚಿತ್ರಿಸಿದ್ದು ಇಡೀ ತೋರಣದ ಸೌಂದರ್ಯಕ್ಕೆ ಇದು ಪುಷ್ಟಿ ನೀಡುತ್ತದೆ.

ಮೇಲೆ ವಿವರಿಸಿದ ಮದನಿಕೆಯರ ಶಿಲ್ಪಗಳು ದೇವಾಲಯದ ಒಳಭಾಗದ ಅಲಂಕರಣವನ್ನು ಇಮ್ಮಡಿಗೊಳಿಸಿವೆ. ಇವುಗಳಲ್ಲಿ ಎರಡು ದರ್ಪಣಸುಂದರಿಯರ ಶಿಲ್ಪಗಳು, ತಾಳವನ್ನು ಬಾರಿಸುತ್ತಿರುವ ಎರಡು ಶಿಲ್ಪಗಳು. ಡಮರನ್ನು ಬಾರಿಸುತ್ತಿರುವ ಒಂದು ಶಿಲ್ಪ, ಉಳಿದ ಆರು ಶಿಲ್ಪಗಳು ನೃತ್ಯಭಂಗಿಯಲ್ಲಿವೆ. ಹೊಯ್ಸಳರ ಕಾಲದ ಶಿಲ್ಪಗಳು ಸ್ತ್ರೀಯ ಶಿಲ್ಪಗಳನ್ನು ಕೆತ್ತುವಾಗ ತುಸು ಹೆಚ್ಚಿನ ಆಸಕ್ತಿಯನ್ನು ತೋರಿಸಿದಂತೆ ಕಾಣುತ್ತದೆ. ಏಕೆಂದರೆ ಸ್ತ್ರೀಯ ದೇಹ ಸೌಂದರ್ಯಕ್ಕೆ ಹೆಚ್ಚು ಹೊತ್ತು ನೀಡುವ ಸೂಕ್ಷ್ಮ ಕುಸುರಿಯ ಚಿತ್ರಗಳಿರುವ ವಸ್ತ್ರಗಳು, ಆಭರಣಗಳು, ಕೇಶವಿನ್ಯಾಸ, ಉಬ್ಬಿದ ಸ್ತನಗಳು, ಸಣ್ಣದಾದ ಸೊಂತದ ಭಾಗ, ಮುಖದ ಭಾವನೆ, ಅರ್ಧ ಮುಚ್ಚಿದ ಕಣ್ಣುಗಳು ಈ ರೀತಿಯಲ್ಲಿ ಅವುಗಳ ಭಾವಕ್ಕೆ ಹೆಚ್ಚು ಹೊತ್ತು ನೀಡಿ ಶಿಲ್ಪಿಯು ಈ ಶಿಲ್ಪಗಳ ಕೆತ್ತನೆಯನ್ನು ಮಾಡಿದ್ದಾನೆ.

ನವರಂಗವು ಒಂಭತ್ತು ಅಂಕಣವಿದ್ದು ಪ್ರತಿಯೊಂದು ಅಂಕಣದಲ್ಲೂ ಸಹ ಭುವನೇಶ್ವರಿಗಳನ್ನು ಕೆತ್ತಲಾಗಿದೆ. ಇಲ್ಲಿಯ ಮಧ್ಯದ ಭುವನೇಶ್ವರಿ ಮಾತ್ರ ತುಸು ವಿಶಾಲವಾಗಿದ್ದು ಹೆಚ್ಚಿನ ಅಲಂಕರಣೆಯನ್ನು ಹೊಂದಿದೆ. ಇದು ಚೌಕಾಕಾರದ ಅಲಂಕರಣವನ್ನು ಹೊಂದಿದೆ. ಮಧ್ಯದಲ್ಲಿ ನೃತ್ಯತಾಂಡವ ಶಿವನಿದ್ದಾನೆ. ಒಂದು ಬದಿಯಲ್ಲಿ ಗಣೇಶ ಮತ್ತೊಂದು ಬದಿಯಲ್ಲಿ ಕಾರ್ತಿಕೇಯ ಪಕ್ಕದಲ್ಲಿ ಸಣ್ಣದಾದ ನಂದಿಯನ್ನು ಚಿತ್ರಿಸಲಾಗಿದೆ. ಅಕ್ಕ ಪಕ್ಕದ ಪಟ್ಟಿಕೆಯಲ್ಲಿ ವಿಷ್ಣು ಮತ್ತು ಬ್ರಹ್ಮನ ಶಿಲ್ಪವನ್ನು

ಕೆತ್ತಲಾಗಿದೆ. ಉಳಿದ ಪಟ್ಟಿಕೆಯಲ್ಲಿ ಸಂಗೀತಗಾರರು ಮತ್ತಿತರರನ್ನು ಚಿತ್ರಿಸಲಾಗಿದೆ. ನಂತರದ ಕೆಳ ಪಟ್ಟಿಕೆಯಲ್ಲಿ ವಿಷ್ಣುವಿನ ಅವತಾರ ಮೂರ್ತಿಗಳನ್ನು ಕೆತ್ತಲಾಗಿದೆ. ಮೂರ್ತಿಗಳ ಅಕ್ಕ ಪಕ್ಕದಲ್ಲಿ ಸಂಗೀತಗಾರರು, ನೃತ್ಯಗಾರರನ್ನು ಚಿತ್ರಿಸಲಾಗಿದೆ. ಅದರ ಕೆಳ ಪಟ್ಟಿಕೆಯಲ್ಲಿ ಶಿವನ ವಿವಿಧ ರೂಪಗಳನ್ನು ಕೆತ್ತಲಾಗಿದೆ. ಈ ಮೂರ್ತಿಗಳ ಅಕ್ಕ ಪಕ್ಕದಲ್ಲಿ ಭೂತ, ಗಣ, ಪಿಶಾಚಗಳನ್ನು ನೃತ್ಯಭಂಗಿಯಲ್ಲಿ ಕೆತ್ತಲಾಗಿದೆ. ಅಲ್ಲಲ್ಲಿ ಪದ್ಮದ ಅಲಂಕರಣೆ ಹಾಗೂ ಪದ್ಮದ ದಳಗಳ ಅಲಂಕರಣೆಯನ್ನು ಮಾಡಲಾಗಿದೆ. ಉಳಿದ ಎಂಟು ಭುವನೇಶ್ವರಿಗಳಲ್ಲಿಯೂ ಸಹ ತುಸು ವ್ಯತ್ಯಾಸಗಳೊಂದಿಗೆ ಪದ್ಮದ ಅಲಂಕರಣೆಯೊಂದಿಗೆ ರಚಿಸಲಾಗಿದೆ. ಆಯಾ ದಿಕ್ಕಿಗೆ ಅನುಗುಣವಾಗಿ ಇರುವಂತೆ ಅಷ್ಟದಿಕ್ಪಾಲಕರನ್ನು ಅವರ ವಾಹನದ ಮೇಲೆ ಕುಳಿತಂತೆ ಚಿತ್ರಿಸಲಾಗಿದೆ. ಅವುಗಳ ಸುತ್ತಲೂ ಪದ್ಮದ ಅಲಂಕರಣೆಯನ್ನು ಮಾಡಲಾಗಿದೆ. ಇವುಗಳನ್ನು ವೃತ್ತಾಕಾರವಾಗಿ, ಚೌಕಾಕಾರವಾಗಿ, ಘನಾಕೃತಿಯಲ್ಲಿ, ನಕ್ಷತ್ರಾಕಾರದಲ್ಲಿ, ಕೆತ್ತಲಾಗಿದೆ. ಎಲ್ಲವೂ ಸಹ ಪದ್ಮದ ಅಲಂಕರಣೆಯನ್ನು ಹೊಂದಿದ್ದು ಮಧ್ಯದಲ್ಲಿ ಮಾತ್ರ ಅಷ್ಟ ದಿಕ್ಪಾಲಕರನ್ನು ಕೆತ್ತಲಾಗಿದೆ.

ನವರಂಗದ ದ್ವಾರದಲ್ಲಿ ಸುಮಾರು ಐದು ಅಡಿ ಎತ್ತರದ ಶೈವ ದ್ವಾರಪಾಲಕರನ್ನು ಕೆತ್ತಲಾಗಿದೆ. ಇವನ್ನು ಬಹಳ ಸುಂದರವಾಗಿ ಅಲಂಕರಿಸಲಾಗಿದೆ. ಬಲಭಾಗದಲ್ಲಿರುವ ದ್ವಾರ ಪಾಲಕನ ಹಿಂಬದಿಯ ಕೈಯಲ್ಲಿ ತ್ರಿಶೂಲ, ಡಮರು ಇದ್ದು ಮುಂಭಾಗದ ಎಡಕೈಯಲ್ಲಿ ಗದೆಯನ್ನು ಹಿಡಿದಿದ್ದು ಬಲಗೈ ಅಭಯ ಹಸ್ತವನ್ನು ಹೊಂದಿದೆ. ಸುಂದರವಾದ ಕಿರೀಟವನ್ನು ಸಹ ಹೊಂದಿದೆ. ಎಡಭಾಗದಲ್ಲಿರುವ ದ್ವಾರಪಾಲಕನ ಹಿಂಬದಿಯ ಕೈಯಲ್ಲಿ ಡಮರು ಹಾಗೂ ಮೂರು ಹೆಡೆಯ ಸರ್ಪವನ್ನು ಕೆತ್ತಲಾಗಿದೆ. ಮುಂಬದಿಯ ಬಲ ಕೈಯಲ್ಲಿ ಗದೆಯನ್ನು ಹಿಡಿದಿದ್ದು ಎಡಕೈಯು ಅಭಯ ಹಸ್ತವನ್ನು ಹೊಂದಿದೆ. ಎರಡು ದ್ವಾರ ಪಾಲಕರ ಪಕ್ಕದಲ್ಲಿಯೂ ಸಹ ಎರಡು ಕಂಭಗಳಿವೆ. ಲಲಾಟ ಬಿಂಬದಲ್ಲಿ ಕುಳಿತಿರುವ ಶಿವನನ್ನು ಕೆತ್ತಲಾಗಿದೆ. ಇದು ಸಹ ಬಹಳ ಅಲಂಕಾರಿಕವಾಗಿದೆ. ಶಿವನು ಬಲಕಾಲನ್ನು ಕೆಳಗೆ ಇಳಿಬಿಟ್ಟು ಎಡಕಾಲನ್ನು ಮಡಿಚಿಕೊಂಡಿರುವಂತೆ ಕೆತ್ತಲಾಗಿದೆ. ಕಾಲಿನ ಕೆಳಗೆ ಅಪಸ್ಮಾರಪುರುಷನನ್ನು ಕೆತ್ತಲಾಗಿದೆ. ಶಿವನ ಎರಡು ಬದಿಯಲ್ಲೂ ವ್ಯಾಳದ ಅಲಂಕರಣೆಯಿದೆ.

ದೇವಾಲಯದ ವಾಯುವ್ಯ ಭಾಗದಲ್ಲಿ ಅಮ್ಮನವರ (ಪಾರ್ವತಿ) ಗುಡಿಯಿದೆ. ಇದನ್ನು ಬಹುಶಃ ತದನಂತರದ ಕಾಲದಲ್ಲಿ ಕಟ್ಟಲಾಗಿದೆ. ದೇವಾಲಯವು ವಾಸ್ತು ಶೈಲಿಯ ದೃಷ್ಟಿಯಿಂದ ಅಷ್ಟೇನು ಮುಖ್ಯವಾದುದಲ್ಲ. ಇದು ಸಹ ಗರ್ಭಗೃಹ, ಸುಖನಾಸಿ ಹಾಗೂ ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ಪಾರ್ವತಿ ಶಿಲ್ಪವಿದೆ. ಇದು ಸಮಭಂಗಿಯಲ್ಲಿದ್ದು ಕಂಠಿಹಾರ, ಆಭರಣಗಳಿಂದ ಅಲಂಕೃತವಾಗಿದೆ. ಇದಕ್ಕೆ ಸುಂದರವಾದ ಪ್ರಭಾವಳಿಯಿದೆ. ಗರ್ಭಗೃಹದಷ್ಟೇ ಅಳತೆಯ ಸುಖನಾಸಿಯಿದೆ. ನಂತರದ ನವರಂಗವು ಒಂಭತ್ತು ಅಂಕಣವಿದ್ದು ಇಲ್ಲಿ ಕಡೆತದಿಂದ ದುಂಡಗೆ ಕಡೆಯಲ್ಪಟ್ಟ ನಾಲ್ಕು ಸ್ವತಂತ್ರ ಕಂಭಗಳಿವೆ. ಆದರೆ ಬ್ರಹ್ಮೇಶ್ವರ ದೇವಾಲಯದಲ್ಲಿರುವ ಕಂಭದ ರೀತಿಯಲ್ಲಿ ಅಲಂಕೃತವಾಗಿಲ್ಲ. ಭಿತ್ತಿಗೆ ಹೊಂದಿಕೊಂಡಂತೆ ನಕ್ಷತ್ರಾಕಾರದ ಹನ್ನೆರಡು ಕಂಭಗಳಿವೆ. ಇಲ್ಲಿರುವ ಕಂಭಗಳೆಲ್ಲವೂ ಸಹ ಹೊಯ್ಸಳರ ಕಾಲದ ಲಕ್ಷಣಗಳನ್ನು ಹೊಂದಿವೆ. ಇದನ್ನು ಬಿಟ್ಟರೆ ಉಳಿದಂತೆ ಅದಿಷ್ಠಾನ, ಭಿತ್ತಿ ಹಾಗೂ

ಮೇಲ್ಚಾವಣಿಯನ್ನು ಸೋಪುಗಲ್ಲಿನಿಂದ ಹಾಗೂ ಕೆಲವು ಗ್ರಾನೈಟ್ ಚಪ್ಪಡಿಗಳಿಂದ ಇದನ್ನು ಕಟ್ಟಲಾಗಿದೆ. ಆದುದರಿಂದ ಬಹುಶಃ ಇದನ್ನು ಹೊಯ್ಸಳರ ಕಾಲದ ನಂತರದ ಕಾಲವಾದ ವಿಜಯನಗರದ ಕಾಲದಲ್ಲಿ ಕಟ್ಟಿರಬಹುದು. ಇಲ್ಲಿಯ ಕಂಭಗಳು ಹಾಗೂ ಇನ್ನಿತರ ಕಲ್ಲು ಚಪ್ಪಡಿಗಳನ್ನು ಯಾವುದೋ ಭಗ್ನವಾದ ದೇವಾಲಯಗಳಿಂದ ತಂದು ಕಟ್ಟಿರಬಹುದು. ಮತ್ತೊಂದು ಗಮನಿಸಬೇಕಾದ ವಿಷಯವೆಂದರೆ ಇಡಿ ಗ್ರಾಮದಲ್ಲಿ ಪ್ರಸ್ತುತ ಕಡೆತ ಯಂತ್ರದಿಂದ ದುಂಡಗೆ ಕಡೆಯಲ್ಪಟ್ಟಿರುವ ಹೊಯ್ಸಳರ ಕಾಲದ ಸುಮಾರು ಆರು ಕಂಭಗಳು ಅಲ್ಲಲ್ಲಿ ಬಿದ್ದಿವೆ. ಕೆಲವು ಕಂಭಗಳ ಮೇಲೆ ತುಳಸಿಕಟ್ಟೆಯನ್ನು ಮಾಡಿಕೊಂಡಿದ್ದರೆ ಮತ್ತೆ ಕೆಲವು ಕಂಭಗಳ ಮೇಲೆ ಚಪ್ಪಡಿಯನ್ನು ಹಾಕಿ ಸೆಗಣಿಯನ್ನು ಒಣಗಿಸಲು ಬಳಸಿಕೊಂಡಿದ್ದಾರೆ. ಇದನ್ನು ಗಮನಿಸಿದಾಗ ಬಹುಶಃ ಹೊಯ್ಸಳರ ಕಾಲದ ದೇವಾಲಯವೊಂದು ಭಗ್ನವಾಗಿರಬಹುದೆಂದು ಊಹಿಸಬಹುದು. ಬ್ರಹ್ಮೇಶ್ವರ ದೇವಾಲಯವಲ್ಲದೆ ಇಲ್ಲಿ ಶಿಥಿಲವಾಗಿರುವ ಜನಾರ್ಧನ ಹಾಗೂ ಮಲ್ಲೇಶ್ವರ ದೇವಾಲಯವಿರುವುದು ಗಮನಾರ್ಹವಾದ ವಿಷಯ.

ದೇವಾಲಯದ ಪಶ್ಚಿಮ ಭಾಗದಲ್ಲಿ ಒಂದು ಸಣ್ಣದಾದ ಗುಡಿಯಿದ್ದು ಅಲ್ಲಿ ಸುಮಾರು ಐದು ಅಡಿ ಎತ್ತರದ ವೀರಭದ್ರ ಶಿಲ್ಪವಿದೆ. ಇದು ಕ್ರಿ.ಶ. 17–18ನೆಯ ಶತಮಾನದ ಶಿಲ್ಪವಾಗಿದೆ. ದೇವಾಲಯದ ನೈರುತ್ಯ ದಿಕ್ಕಿನಲ್ಲಿ ಒಂದು ಖಾಲಿ ಮಂಟಪವಿದೆ. ದೇವಾಲಯದ ಈಶಾನ್ಯಭಾಗದಲ್ಲಿ ಕಾಳಭೈರವನ ಸಣ್ಣದಾದ ಗುಡಿಯಿದೆ. ಚೇಳಿನ ಪೀಠದ ಮೇಲೆ ಸುಮಾರು ಐದು ಅಡಿ ಎತ್ತರದ ಕಾಳಭೈರವನ ಶಿಲ್ಪವಿದೆ. ಈ ಗುಡಿಯು ಚಿಕ್ಕದಾದರೂ ಸಹ ಇಲ್ಲಿ ಹೊಯ್ಸಳರ ಕಾಲದ ಕಂಭಗಳಿವೆ. ವಾಸ್ತು ಶೈಲಿಯ ದೃಷ್ಠಿಯಿಂದ ಅಷ್ಟೇನು ಪ್ರಾಮುಖ್ಯವಲ್ಲದಿದ್ದರೂ ಸಹ ಇದು ಹೊಯ್ಸಳರ ಕಾಲದ ವಾಸ್ತುವನ್ನು ಹೊಂದಿದೆ. ದೇವಾಲಯದ ಸುತ್ತಲೂ ಪ್ರಾಕಾರವಿದೆ. ಮುಖ್ಯದ್ವಾರವು ದಕ್ಷಿಣಭಾಗದಲ್ಲಿದೆ. ಇಲ್ಲಿ ಒಳಜಗತಿಯಿದ್ದು ಸುಮಾರು ಹನ್ನೆರಡು ಸ್ವತಂತ್ರ ಕಂಭಗಳಿವೆ. ಮೇಲ್ಭಾಗದಲ್ಲಿ ಇತ್ತೀಚೆಗೆ ನಿರ್ಮಿಸಿರುವ ನಂದಿಶಿಲ್ಪವಿದೆ.

**ಆಕರ ಗ್ರಂಥಗಳು**


1. ಹೊಯ್ಸಳ ಟೆಂಪಲ್ಸ್ ಇನ್ ಮಂಡ್ಯ ಅಂಡ್ ತುಮಕೂರು ಡಿಸ್ಟ್ರಿಕ್ಟ್–ಡಾ.ಎನ್.ಎಸ್. ರಂಗರಾಜು
2. ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ – ತೈಲೂರು ವೆಂಕಟಕೃಷ್ಣಯ್ಯ
3. ಹೊಯ್ಸಳ ವಾಸ್ತುಶಿಲ್ಪ – ಶ್ರೀಕಂಠಶಾಸ್ತ್ರಿ ಎಸ್, ಮೈಸೂರು, 1965
4. ಇಂಡಿಯನ್ ಆರ್ಕಿಟೆಕ್ಚರ್ ಅಕಾರ್ಡಿಂಗ್ ಟು ಮಾನಾಸಾರ ಶಿಲ್ಪಶಾಸ್ತ್ರ – ಆಚಾರ್ಯ, ಪಿ.ಕೆ., ಮದ್ರಾಸ್, 1927
5. ದ ಹೊಯ್ಸಳ ವಂಶ – ವಿಲಿಯಂ ಕೊಹಿಲೋ, ಬಾಂಬೆ, 1950
6. ಹೊಯ್ಸಳ ಟೆಂಪಲ್ಸ್, ಸಂ– ೧ & ೧೧, – ಶೆಟ್ಟರ್, ಎಸ್
7. ಮಂಡ್ಯ ಜಿಲ್ಲಾ ಗೆಜೆಟಿಯರ್
8. ಎ.ಕ.ಸಂ – 6, ಕೃ,ರಾ –24, 28, 30, 33, 34, 37
9. ಎಂ.ಎ.ಆರ್– 1915, ಪು. 21–25
10. ಎಂ.ಎ.ಆರ್ – 1920 – ಪು.18–22


❖❖❖

# ‘ಮಿತಾಕ್ಷರ ಸಂಹಿತೆ’ಯಲ್ಲಿ ವಿಜ್ಞಾನೇಶ್ವರ ಖಾತ್ರಿಗೊಳಿಸಿರುವ ಮಹಿಳಾ ಹಕ್ಕುಗಳು

**ಡಾ. ಕಾವ್ಯಶ್ರೀ ಜಿ.**
ಸಹ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ

ಇತಿಹಾಸ ಹಾಗೂ ಕಾಲದ ದೃಷ್ಟಿಯಿಂದ ಹಿಂದೂ ನ್ಯಾಯಾಂಗ ವ್ಯವಸ್ಥೆಯ ಬೆಳವಣಿಗೆಯನ್ನು ವಿದ್ವಾಂಸರು ಹಲವು ಘಟ್ಟಗಳಲ್ಲಿ ವಿಂಗಡಿಸಿ ಅಧ್ಯಯನ ಮಾಡಿದ್ದಾರೆ. ವೇದಗಳಿಂದ ಹಿಡಿದು ಆಧುನಿಕ ನ್ಯಾಯನಿರ್ಣಯ ಪದ್ಧತಿಯವರೆಗೆ ಹಲವಾರು ನ್ಯಾಯದಾನ ಪದ್ಧತಿಯ ಘಟ್ಟಗಳನ್ನು ಗುರುತಿಸಲಿಕ್ಕೆ ಸಾಧ್ಯತೆ ಇದೆ. ಆದರೆ ಪ್ರಮುಖವಾಗಿ ಕಾನೂನುಶಾಸ್ತ್ರದ ಸಾಹಿತ್ಯವನ್ನು ಸ್ಥೂಲವಾಗಿ ಎರಡು ವಿಭಾಗಗಳನ್ನಾಗಿ ಗುರುತಿಸಬಹುದು.

1. ಕಾನೂನು ಹಾಗೂ ನ್ಯಾಯಶಾಸ್ತ್ರಕ್ಕೆ ಸಂಬಂಧಿಸಿದಂತೆ ತತ್ವಗಳನ್ನು ಒಳಗೊಂಡ ಧಾರ್ಮಿಕ ಗ್ರಂಥಗಳು ರಚಿತಗೊಂಡಿದ್ದವು. ಇದರಲ್ಲಿನ ನ್ಯಾಯ ನೀತಿ–ಶಾಸನಕ್ಕೆ ಸಂಬಂಧಿಸಿದ ಈ ತತ್ವಗಳೇ ಮುಂದೆ ಕಾನೂನುಗಳಾಗಿ ಬೆಳೆದು ಬಂದವು.
2. ಸ್ಮೃತಿಗಳು, ಧರ್ಮಶಾಸ್ತ್ರಗಳು ಮತ್ತು ವ್ಯಾಖ್ಯಾನಗಳು, ಇವು ನಿರ್ದಿಷ್ಟವಾಗಿ ನಾಗರಿಕ ಮತ್ತು ಅಪರಾಧ ಸಂಹಿತೆಯ ಅಂಶಗಳನ್ನು ಒಳಗೊಂಡಿವೆ.

ಸ್ಮೃತಿಗಳು, ವೇದಗಳು ಪ್ರಾಚೀನ ಕಾಲದ ಮಹತ್ವದ ಗ್ರಂಥಗಳು. ಇದರಲ್ಲಿ ಸ್ಮೃತಿಗಳು ನ್ಯಾಯಶಾಸ್ತ್ರದ ಪ್ರಮುಖ ಆಧಾರಗಳಾಗಿದ್ದರೂ ಅವು ತಮ್ಮಷ್ಟಕ್ಕೆ ತಾವೇ ನ್ಯಾಯಶಾಸ್ತ್ರ ಗ್ರಂಥಗಳಾಗಲಾರವು. ಈ ಹಿನ್ನೆಲೆಯಲ್ಲಿಯೇ ಜನಸಮುದಾಯ ಕಾಲಾನುಕಾಲದಿಂದ ಅನುಸರಿಸಿಕೊಂಡು ಬಂದ ರೂಢಿ, ಸಂಪ್ರದಾಯ, ಪದ್ಧತಿ, ನಂಬುಗೆ, ಆಚರಣೆ ಇತ್ಯಾದಿಗಳಿಗೆ ಶಾಸ್ತ್ರಕಾರರು ಶೃತಿ, ಸ್ಮೃತಿಗಳ ಅನಂತರದ ಸ್ಥಾನವನ್ನು ನೀಡಿದ್ದಾರೆ. ಆತ್ಮಸಾಕ್ಷಿಯ ನಡವಳಿಕೆ ಮತ್ತು ಜ್ಞಾನಿಗಳ ಸದ್ವಿವೇಕವೂ ನ್ಯಾಯಶಾಸ್ತ್ರದ ವ್ಯಾವಹಾರಿಕ ಅನುಷ್ಠಾನದಲ್ಲಿ ತಮ್ಮದೇ ಆದ ಪಾತ್ರ ವಹಿಸಿವೆ.

‘ಮಿತಾಕ್ಷರ ಸಂಹಿತೆ’ಯ ಕರ್ತೃ ವಿಜ್ಞಾನೇಶ್ವರ ಭಾರತದ ಯಾವ ಪ್ರದೇಶದವನು, ಯಾವ ಪ್ರಾಂತ್ಯಕ್ಕೆ ಸೇರಿದವನು ಎಂಬುದು ಯಾರಿಗೂ ತಿಳಿದಿರಲಿಲ್ಲ. ಅವರ ದೇಶ, ಭಾಷೆ, ಕುಲ, ಗೋತ್ರ ಇತ್ಯಾದಿ ಅವರ ವೈಯಕ್ತಿಕ ಜೀವನ ಕುರಿತಾದ ಯಾವೊಂದು ಮಾಹಿತಿಯೂ ಲಭ್ಯವಿರಲಿಲ್ಲ. ವಿಜ್ಞಾನೇಶ್ವರರನ್ನು ಮೊಟ್ಟಮೊದಲು ಬಾರಿಗೆ ಆಧುನಿಕ ಜಗತ್ತಿಗೆ ಪರಿಚಯಸಿದ ಶ್ರೇಯಸ್ಸು ಖ್ಯಾತ ಇತಿಹಾಸ ಸಂಶೋಧಕರಾದ ಡಾ.ಪಿ.ಬಿ.ದೇಸಾಯಿ ಅವರಿಗೆ ಸಲ್ಲುತ್ತದೆ. ಮರತೂರಿನಲ್ಲಿ ದೊರೆತ ಶಾಸನದ ವಿವರಗಳನ್ನು ಮೊಟ್ಟಮೊದಲ ಬಾರಿಗೆ ತಮ್ಮ ನಿಯತಕಾಲಿಕೆ “ಪ್ರಾಚೀನ ಕರ್ನಾಟಕ–ಹೊಸಬೆಳಕು” ದಿನಾಂಕ 01.02.1932ರ ಸಂಚಿಕೆಯಲ್ಲಿ ಪ್ರಕಟಪಡಿಸಿದರು. ಈ ಶಾಸನ ಕುರಿತು ಡಾ.ವಿ.ಎಸ್. ಕುಲಕರ್ಣಿಯವರು 1981ರಲ್ಲಿ ಕರ್ನಾಟಕ ಇತಿಹಾಸ ಆಕಾಡೆಮಿಯ ‘ಇತಿಹಾಸ ದರ್ಶನ’ದಲ್ಲಿ ವಿವರಗಳನ್ನು ಪ್ರಕಟಿಸಿದರು. ಡಾ.ಜೆ.ಎಂ.ನಾಗಯ್ಯ ಅವರು ಬೆಂಗಳೂರು ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆಯಾದ “ಸಾಧನೆ”ಯಲ್ಲಿ (ಸಂಪುಟ 18, ಸಂಚಿಕೆ–1 ಮತ್ತು 2, ಜನವರಿ–ಜೂನ್ 1989) “ವಿಜ್ಞಾನೇಶ್ವರನ ಚರಿತ್ರೆಯ ಮೇಲೆ ಹೊಸ ಬೆಳಕು” ಎಂಬ ಸಂಶೋಧನಾ ಲೇಖನವನ್ನು ಪ್ರಕಟಿಸಿದರು.

ಡಾ. ಜೆ.ಎಂ ನಾಗಯ್ಯ ತಮ್ಮ ಸಂಶೋಧನಾ ಲೇಖನದಲ್ಲಿ ವಿಜ್ಞಾನೇಶ್ವರನ ಜನ್ಮ ಸ್ಥಳ ಕುರಿತು ಹೀಗೆ ಹೇಳುತ್ತಾರೆ.

"ಇದೇ(ಮರತೂರು) ಶಾಸನದಿಂದ ಅವನ(ವಿಜ್ಞಾನೇಶ್ವರನ) ವೈಯಕ್ತಿಕ ವಿವರಗಳು ತಿಳಿದು ಬರುತ್ತಿದ್ದು ಅವು ಹೀಗಿವೆ: ಅಟ್ಟಳೆನಾಡಿನ 'ಮಾಸೆಯಮಡು' ಗ್ರಾಮದಲ್ಲಿದ್ದ ಸೋಮರಾಜ ಮತ್ತು ಆತನ ಹೆಂಡತಿಗೆ ಕೌಶಿಕ ಗೋತ್ರಲಲಾಮನೆನಿಸಿ ಈ ವಿಜ್ಞಾನೇಶ್ವರನು ಜನಿಸುತ್ತಾನೆ... ಇವನ ಹೆಂಡತಿ ಕೇತಿಕಬ್ಬೆ. ಈ ದಂಪತಿಗಳಿಗೆ ಕ್ರಮವಾಗಿ ಕಾಮದೇವ, ಸೋಮದೇವ, ಮಾರಸಿಂಹ ಮತ್ತು ಬೀಚಿರಾಜರು ಜನಿಸುತ್ತಾರೆ...." "ಒಟ್ಟಾರೆ ಶಾಸನದಿಂದ ವಿಜ್ಞಾನೇಶ್ವರನ ನಿಜನಾಮ, ಜನ್ಮ ಸ್ಥಳ, ತಂದೆ, ಹೆಂಡತಿ, ಪುತ್ರರ ಬಗ್ಗೆ ಮಾಹಿತಿ ಸಿಗುತ್ತದೆ."

"...ಇಲ್ಲಿ ವಿಜ್ಞಾನೇಶ್ವರನನ್ನು 'ಕಂಚ' ಎಂದು ಕರೆಯಲಾಗಿದೆ. ಶಾಸನದ ಆಂತರಿಕ ಆಧಾರಗಳಿಂದ 'ಕಂಚ' ಎನ್ನುವುದೇ ನಿಜನಾಮವಾಗಿದ್ದು 'ವಿಜ್ಞಾನೇಶ್ವರ' ಎನ್ನುವುದು ಕಾವ್ಯನಾಮವಾಗಿರುವುದು ತಿಳಿದುಬರುತ್ತದೆ..." ಡಾ. ಎಂ.ಎಂ.ಕಲಬುರ್ಗಿ ಅವರ ಪ್ರಕಾರ ಶಾಸನೋಕ್ತ ವಿಜ್ಞಾನೇಶ್ವರನ ಗ್ರಾಮ ಮರತೂರು ಅಲ್ಲ. ಅಟ್ಟಳೆನಾಡಿನ ಮಾಸೆಯಮಡು ಊರಿನ ಪೆರ್ಗಡೆಯಾಗಿದ್ದ ಬೀಚರಸನು ಅಲಂದೆ ಸಾಸಿರದ ಗೊಂಕನಾಡಿನ ಮರತೂರಿನಲ್ಲಿ ಕಟ್ಟಿಸಿದ ದೇವಾಲಯಕ್ಕೆ ಈ ಗೊಂಕನಾಡನ್ನು ಆಳುತ್ತಿದ್ದ ಮಂಡಳೇಶ್ವರರಾದ ಬಿಬ್ಬರಸ, ಗೊಂಕರಸರು ದಾನ ನೀಡಿದರು. ಒಂದು ವಿಭಾಗದ ಆಳರಸರು ಇನ್ನೊಂದು ವಿಭಾಗದಲ್ಲಿ ದೇವಾಲಯ ಕಟ್ಟಿಸಿದುದಕ್ಕೆ ಸ್ಥಳೀಯ ವಿಭಾಗದ ಅರಸರು ದಾನ ನೀಡಿದುದಕ್ಕೆ ಕರ್ನಾಟಕದಲ್ಲಿ ನೂರಾರು ಉದಾಹರಣೆಗಳಿವೆ. ವಸ್ತುಸ್ಥಿತಿ ಹೀಗಿರುವುದರಿಂದ, ಬೀಚರಸನು ಮರತೂರಿನಲ್ಲಿ ದೇವಾಲಯ ಕಟ್ಟಿಸಿದ ಮಾತ್ರಕ್ಕೆ ಅದು ಅವನ ಸ್ವಗ್ರಾಮವಾಗಿರಬೇಕಾಗಿಲ್ಲ ಎನ್ನುವ ಸಕಾರಣ ನೀಡಲಾಗಿದೆ. ಆತನ ಮೂಲಕ್ಕಿಂತ ಮುಖ್ಯವಾಗಿ ಮಹಿಳಾ ಹಕ್ಕುಗಳ ಕುರಿತ ಆತನ ಚಿಂತನೆ, ಮಾರ್ಗದರ್ಶನಗಳನ್ನು ಈ ಪ್ರಬಂಧದಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

'ಮಿತಾಕ್ಷರ'ವಿಲ್ಲದ ಹಿಂದು ನ್ಯಾಯಶಾಸ್ತ್ರ ಹಾಗೂ ಭಾರತೀಯ ನ್ಯಾಯಪದ್ಧತಿಯ ಬೆಳವಣಿಗೆಯನ್ನು ಊಹಿಸುವುದು ಕಷ್ಟ. ಇಂದಿಗೂ ಯಾವುದೇ ಧರ್ಮಸೂಕ್ಷ್ಮದ ಸಂಘರ್ಷ ಏರ್ಪಟ್ಟಾಗ, ವಿಷಯಗಳ ಪ್ರತಿಪಾದನೆಯನ್ನು ಅರ್ಥೈಸುವಲ್ಲಿ ಗೊಂದಲ ಉಂಟಾದಾಗ ಭಾರತದ ನ್ಯಾಯವ್ಯವಸ್ಥೆ ಸಾಮಾನ್ಯವಾಗಿ ಮೊರೆ ಹೋಗುವುದು ಮಿತಾಕ್ಷರಕ್ಕೆ. ಈ ಸಂಹಿತೆ ತನ್ನ ಜನಪರ ಕಾಳಜಿ, ಪ್ರಗತಿಪರ ಧೋರಣೆಯಿಂದಾಗಿ, ಸಂಕೀರ್ಣ ವಿಷಯಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ, ಮನವರಿಕೆಯಾಗುವಂತೆ ವ್ಯಾಖ್ಯಾನಿಸುವ ವಿಶೇಷ ಕೌಶಲ್ಯದಿಂದಾಗಿಯೇ ಮಿತಾಕ್ಷರವು ಭಾರತೀಯ ನ್ಯಾಯಶಾಸ್ತ್ರಕ್ಕೆ ಅಸ್ತಿಭಾರ ಹಾಕಲು ಕಾರಣವಾಯಿತು.

ಧರ್ಮಶಾಸ್ತ್ರಗಳಿಗೆ ಅನೇಕ ನಿಬಂಧಗಳನ್ನು ಬರೆಯಲಾಗಿದ್ದರೂ, ಅವುಗಳಲ್ಲಿ ಕೆಲವು ಮಾತ್ರ ಮಹತ್ವದ ಸ್ಥಾನ ಪಡೆದಿದ್ದು, ಸಮಾಜ ಒಪ್ಪಿ ಅನುಸರಿಸಿಕೊಂಡು ಬಂದಿದ್ದಷ್ಟೇ ಅಲ್ಲ, ಭಾರತದ ನ್ಯಾಯಲಯಗಳು ಪ್ರಾಚೀನ ಕಾಲದಲ್ಲಿಯೂ ಮತ್ತು ಆಧುನಿಕ ಯುಗದಲ್ಲಿಯೂ ಅವುಗಳನ್ನು ವ್ಯಾಪಕ ರೀತಿಯಲ್ಲಿ ಅನುಷ್ಠಾನಗೊಳಿಸಿವೆ. ಅಂತಹ ಕೆಲವು ಮಹತ್ವಪೂರ್ಣ ವ್ಯಾಖ್ಯಾನಗಳೆಂದರೆ: ವಿಜ್ಞಾನೇಶ್ವರನ 'ಮಿತಾಕ್ಷರ', ಜೀಮೂತವಾಹನನ 'ದಾಯಭಾಗ', ದೇವಣ್ಣ ಭಟ್ಟನ 'ಸ್ಮೃತಿ ಚಂದ್ರಿಕಾ',

ಚಂದೇಶ್ವರನ 'ವಿವಾದ ರತ್ನಾಕರ', ಮಾಧವಾಚಾರ್ಯರ 'ಪರಾಶರ ಮಾಧವೀಯ', ವಾಚಸ್ಪತಿ ಮಿಶ್ರನ 'ವಿವಾದ ಚಿಂತಾಮಣಿ', ಲಕ್ಷ್ಮೀದೇವಿಯ 'ವಿವಾದ ಚಂದ್ರ', ಪ್ರತಾಪರುದ್ರದೇವನ 'ಸರಸ್ವತಿ ವಿಲಾಸ', ರಘುನಂದನನ 'ದಾಯತತ್ವ', ವರದರಾಜರ 'ವ್ಯವಹಾರ ನಿರ್ಣಯ', ನೀಲಕಂಠಭಟ್ಟನ 'ವ್ಯವಹಾರ ಮಯೂಖ', ಮಿಶ್ರಮಿಶ್ರನ 'ವೀರಮಿತ್ರೋದಯ', ಕಮಲಾಕರನ 'ನಿರ್ಣಯ ಸಿಂಧು', ಅಪರಾರ್ಕನ 'ಯಾಜ್ಞವಲ್ಕ್ಯ ಧರ್ಮಶಾಸ್ತ್ರ', ನಂದಪಡಿತನ 'ದತ್ತನ ಮೀಮಾಂಸ', ಕುಬೇರನ 'ದತ್ತಕ ಚಂದ್ರಿಕಾ', ಶ್ರೀಕೃಷ್ಣ ತರ್ಕಾಲಂಕಾರನ 'ದಾಯಕರ್ಮ ಸಂಗ್ರಹ' ಇವುಗಳು.

ಈ ವ್ಯಾಖ್ಯಾನಗಳ ಪೈಕಿ ಹಲವು ಭಾರತದ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಅಥವಾ ಒಂದಕ್ಕಿಂತ ಹೆಚ್ಚಿನ ಪ್ರದೇಶದಲ್ಲಿ ಜಾರಿಯಲ್ಲಿದ್ದವು ಮತ್ತು ಮಾನ್ಯತೆ ಪಡೆದಿದ್ದವು. ಆದರೆ ಭಾರತದ ತುಂಬೆಲ್ಲ ಜಾರಿಯಲ್ಲಿ, ಬಳಕೆಯಲ್ಲಿದ್ದ ಏಕೈಕ ಧರ್ಮಶಾಸ್ತ್ರ ನಿಬಂಧವೆಂದರೆ ವಿಜ್ಞಾನೇಶ್ವರನ 'ಮಿತಾಕ್ಷರ' ಎಂಬುದು ಗಮನಾರ್ಹ.

ವಿಜ್ಞಾನೇಶ್ವರರು ಯಾಜ್ಞವಲ್ಕ್ಯ ಸ್ಮೃತಿಯನ್ನು ಬಹು ದೀರ್ಘವಾಗಿ ಪರಾಮರ್ಶಿಸಿದ್ದಾರೆ. ಮಹಿಳೆಯರ ಹಕ್ಕುಗಳು ಮತ್ತು ಪಿತ್ರಾರ್ಜಿತ ಆಸ್ತಿಯ ಉತ್ತರಾಧಿಕಾರ ಹಾಗೂ ವಿತರಣೆ ವಿಚಾರಗಳ ಜೊತೆಗೆ ಖಚಿತವಾದ ದಾಖಲೆಗಳ ಸೃಷ್ಟಿ, ಭೋಗಕ್ಕೆ ಸಂಬಂಧಪಟ್ಟ ಕಾಯ್ದೆ, ಪಾಲುಗಾರಿಕೆ, ಸಂಯುಕ್ತ ಒಡೆತನದ ವ್ಯಾಪಾರ ಇತ್ಯಾದಿ ವಿಷಯಗಳ ಕುರಿತಾಗಿ ಯಾಜ್ಞವಲ್ಕ್ಯ ಸ್ಮೃತಿ ವಿವರವಾಗಿ ಚರ್ಚಿಸುತ್ತದೆ. ಆಸ್ತಿ ವಿಭಾಗ ಮಾಡುವಾಗ ಪತ್ನಿ ಮತ್ತು ಗಂಡುಮಕ್ಕಳಿಗೆ ಸಮಾನ ಹಕ್ಕು ಇದೆ. ಆದರೆ ಗಂಡನಿಂದ ಅಥವಾ ಮಾವನಿಂದ ಕೊಡಲ್ಪಟ್ಟ ಸ್ತ್ರೀ ಧನವು ಅವರ ಸ್ವಾಧೀನದಲ್ಲಿದ್ದರೆ ಅಷ್ಟನ್ನು ಮಾತ್ರ ಗಂಡನ ಆಸ್ತಿ ವಿಭಜನೆಯ ಸಂದರ್ಭದಲ್ಲಿ ಕಡಿಮೆ ಮಾಡಬಹುದು. ಪತ್ನಿಗೆ ಆಸ್ತಿಯಲ್ಲಿ ಹಕ್ಕನ್ನು ಕೊಟ್ಟಿರುವ ಯಾಜ್ಞವಲ್ಕ್ಯ ಸ್ಮೃತಿಯ ಪ್ರಕಾರ ಒಬ್ಬ ವ್ಯಕ್ತಿಗೆ ಒಬ್ಬಳಿಗಿಂತ ಹೆಚ್ಚು ಹೆಂಡಂದಿರಿದ್ದರೆ ಅವರೆಲ್ಲರಿಗೂ ಪತಿಯ ಆಸ್ತಿಯ ಮೇಲೆ ಹಕ್ಕು ಲಭಿಸುತ್ತದೆ. ಆದರೆ ಗಂಡನಿಂದ ಅಥವಾ ಮಾವನಿಂದ ಕೊಡಲ್ಪಟ್ಟ ಸ್ತ್ರೀ ಧನವನ್ನು ಮಾತ್ರ ಕಳೆಯಬೇಕೆಂಬುದು ಇದರ ಅರ್ಥ. ಆದರೆ ಗಮನಾರ್ಹ ವಿಷಯವೆಂದರೆ, ಆಕೆಗೆ ತನ್ನ ತಂದೆ, ಸಹೋದರರು, ಸೋದರಮಾವ ಇತ್ಯಾದಿ ಬಂಧುಗಳಿಂದ ಕೊಡಲಾದ ಆಸ್ತಿ ಇದ್ದರೆ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳುವ ಹಾಗಿಲ್ಲ. ಇದು ಸ್ತ್ರೀ ಧನಕ್ಕೆ ನೀಡಲಾಗಿದ್ದ ವಿಶೇಷ ರಕ್ಷಣೆಯಾಗಿದೆ.

ಕೇವಲ ಯಾಜ್ಞವಲ್ಕ್ಯಸ್ಮೃತಿಯನ್ನಲ್ಲದೆ ವಿಜ್ಞಾನೇಶ್ವರರು ಇನ್ನಿತರ ಹಲವಾರು ಸ್ಮೃತಿ, ಧರ್ಮಸೂತ್ರ ಇತ್ಯಾದಿ ಗ್ರಂಥಗಳನ್ನು ದೀರ್ಘವಾಗಿ ಅಭ್ಯಸಿಸಿ, ಅನುಸರಿಸಿರುವುದು ಸ್ಪಷ್ಟವಾಗಿ ಅನುಭವಕ್ಕೆ ಬರುತ್ತದೆ. ಒಂದು ಅಂದಾಜಿನ ಪ್ರಕಾರ ಮಿತಾಕ್ಷರದಲ್ಲಿ ಸುಮಾರು ತೊಂಬತ್ತು ಪ್ರಾಚೀನ ಗ್ರಂಥಗಳ ಪ್ರಸ್ತಾಪ ಬರುತ್ತದೆ. ಅಂತೆಯೇ ಮಿತಾಕ್ಷರಕ್ಕೆ ಬಂದಿರುವಷ್ಟು ಸಮಗ್ರತೆ, ಪರಿಪೂರ್ಣತೆಯು ಬೇರಾವ ಧರ್ಮಶಾಸ್ತ್ರ, ನಿಬಂಧ ಗ್ರಂಥಕ್ಕೂ ಪ್ರಾಪ್ತವಾಗಿಲ್ಲ. ಒಂದು ನಿರ್ದಿಷ್ಟ ವಿಷಯದಲ್ಲಿ ಯಾವ ಸ್ಮೃತಿಕಾರನ, ಧರ್ಮಸೂತ್ರ ಕರ್ತೃವಿನ, ಮತ್ತಿತರ ಗ್ರಂಥಕರ್ತರ ಪ್ರತಿಪಾದನೆಗಳು, ವಿವರಣೆಗಳು, ಪ್ರಸ್ತುತವಾಗಿಯೋ, ಸಮುಚಿತವಾಗಿವೆಯೋ ವಿಜ್ಞಾನೇಶ್ವರ ಅವುಗಳನ್ನು ಎತ್ತಿ ಹಿಡಿಯುವುದರಲ್ಲಿ ಹಿಂದೇಟು ಹಾಕುವುದಿಲ್ಲ. ಹೀಗಾಗಿ ಮಿತಾಕ್ಷರದಲ್ಲಿ ಔದಾರ್ಯದ ಗುಣ ಅಂತರ್ಗತವಾಗಿಯೇ ಇದೆ.

ಮಿತಾಕ್ಷರವು ಮಲತಾಯಿಗೆ ಉತ್ತರಾಧಿಕಾರದ ಹಕ್ಕು ಕೊಟ್ಟಿಲ್ಲವಾದರೂ ಜೀವನಾಂಶಕ್ಕೆ ಅವರಿಗೆ ಅಧಿಕಾರ ನೀಡಿದೆ. ಮಗನ ಉತ್ತರಾಧಿಕಾರಿಯಾಗುವ ತಾಯಿಯ ಅಧಿಕಾರವೂ ಪರಿಮಿತವಾಗಿದೆ. ನ್ಯಾಯವಾದ ಕಾರಣಗಳಿಲ್ಲದೆ ಆಕೆ ಸ್ವತ್ತನ್ನು ಬೇರೆಯವರಿಗೆ ಕೊಡಲು ಬರುವುದಿಲ್ಲ. ಆದರೆ ಮಿತಾಕ್ಷರದ ಪ್ರಕಾರ ಮಗನಿಂದ ಉತ್ತರಾಧಿಕಾರ ರೂಪವಾಗಿ ತಾಯಿಗೆ ಬಂದ ಸ್ವತ್ತು ಕೂಡ ಸ್ತ್ರೀಧನದ ವ್ಯಾಪ್ತಿಗೆ ಒಳಪಡುತ್ತದೆ. ಅಂದರೆ ಉತ್ತರಾಧಿಕಾರ ಪಡೆದ ತಾಯಿ ಆ ಸ್ವತ್ತಿನ ವಿಷಯದಲ್ಲಿ ಸ್ವತಂತ್ರಳಾಗಿದ್ದಳು ಎಂಬುದು ಇದರ ತಾತ್ಪರ್ಯ.

ಮೃತನ ಸ್ವತ್ತಿನ ಉತ್ತರಾಧಿಕಾರದಲ್ಲಿ ಅಣ್ಣತಮ್ಮಂದಿರು ಮತ್ತು ಅವರ ಗಂಡು ಮಕ್ಕಳಿಗಿಂತಲೂ ತಂದೆ-ತಾಯಿಗೆ ಮೊದಲ ಪ್ರಾಶಸ್ತ್ಯವೆಂದು ಮಿತಾಕ್ಷರ ಪ್ರತಿಪಾದಿಸುತ್ತದೆ. ಅದರಿಂದೀಚೆಗಿನ ಎಲ್ಲ ವ್ಯಾಖ್ಯಾನಕಾರರು, ನಿಬಂಧಕಾರರು ಇದನ್ನೇ ಒಪ್ಪಿಕೊಂಡಂತಿದೆ. ಗಂಡನಾಗಲೀ ಅಥವಾ ಮಾವನಾಗಲೀ ಹೆಣ್ಣಿಗೆ ಸ್ತ್ರೀಧನ ನೀಡದೇ ಇದ್ದಾಗ ಹೆಂಡತಿಯಾದವಳಿಗೂ ಪಿತ್ರಾರ್ಜಿತ ಆಸ್ತಿಯಲ್ಲಿ ಮಕ್ಕಳೊಂದಿಗೆ ಸಮಪಾಲು ದೊರೆಯುತ್ತದೆ.

ತಾಯಿಯ ಆಸ್ತಿ ಆಕೆಯ ಪುತ್ರಿಯರಿಗೆ ಮಾತ್ರ ಲಭಿಸುತ್ತದೆ. ತಾಯಿ ಮಾಡಿರಬಹುದಾದ ಯಾವುದೇ ಸಾಲ ಸೋಲವನ್ನು ಆಕೆಯ ಗಂಡು ಮಕ್ಕಳು ತೀರಿಸಬೇಕಲ್ಲದೆ ಹೆಣ್ಣು ಮಕ್ಕಳಲ್ಲ. ಸ್ತ್ರೀಧನಕ್ಕೆ ನ್ಯಾಯಬದ್ಧ ವಾರಸುದಾರರು ಆಕೆಯ ಸ್ತ್ರೀ ಸಂತಾನವೇ ಆಗಿರುತ್ತಾರೆ. ಸ್ತ್ರೀಧನದ ಹಂಚಿಕೆಯಲ್ಲಿ ಮದುವೆಯಾಗದ ಪುತ್ರಿಗೆ ಆದ್ಯತೆ ಇದೆ. ಮದುವೆಯಾದ ಹೆಣ್ಣು ಮಕ್ಕಳು ಒಬ್ಬರಿಗಿಂತ ಹೆಚ್ಚು ಇದ್ದಲ್ಲಿ ಅವರಲ್ಲಿ ಯಾರು ಆರ್ಥಿಕವಾಗಿ ದುರ್ಬಲರೋ ಅವರಿಗೆ ತಾಯಿಯ ಆಸ್ತಿ ಸೇರತಕ್ಕದು. ಹೆಣ್ಣು ಮಕ್ಕಳು ಇಲ್ಲದಿದ್ದ ಪಕ್ಷದಲ್ಲಿ ಆಸ್ತಿ ಗಂಡುಮಕ್ಕಳ ಪಾಲಾಗುತ್ತದೆ.

ಇದು ಮಿತಾಕ್ಷರದಲ್ಲಿ ವ್ಯಕ್ತವಾಗುವ ಮಹಿಳಾ ಕಾಳಜಿಯ ಮತ್ತೊಂದು ನಿದರ್ಶನ. ಮಹಿಳೆಯರ ರಕ್ಷಣೆಗೆ ಸುರಕ್ಷತೆಯ ಕವಚ. ವಿಧವಾ ಸ್ತ್ರೀಯ ಒಡವೆಗಳಿಗೆ ಕೈಹಾಕದ ಹಾಗೆ ಧರ್ಮಶಾಸ್ತ್ರಗಳು ತಾಕೀತು ಮಾಡಿರುವುದು ಅನನ್ಯವಾಗಿದೆ. ಸ್ತ್ರೀಪರ ಕಾಳಜಿಗೆ ಈ ಧರ್ಮಶಾಸ್ತ್ರ ಸಾಕ್ಷಿಯಾದಂತಿದೆ. ಅಂತಹ ಆಭರಣಗಳನ್ನು ವಿಧವಾ ಸ್ತ್ರೀಯಿಂದ ಪಡೆಯುವ ವ್ಯಕ್ತಿಗಳನ್ನು ಅಂದಿನ ಸಮಾಜ ಅತ್ಯಂತ ನಿಕೃಷ್ಟವಾಗಿ ಕಾಣುತ್ತಿತ್ತು. ವಿಧವೆಯರ ಸ್ವತ್ತನ್ನು ಕಬಳಿಸಿಕೊಂಡವರಿಗೆ ಕೆಡಕು ತಪ್ಪಿದ್ದಲ್ಲವೆಂಬ ನೈತಿಕ ಭೀತಿಯೂ ಸಮಾಜದಲ್ಲಿ ಬೇರೂರಿತ್ತು. ಇಂತಹ ಒಂದು ನೈತಿಕ ಹೆದರಿಕೆಗೆ ಮಿತಾಕ್ಷರ ಸಂಪ್ರದಾಯ ತಕ್ಕಮಟ್ಟಿಗೆ ಕಾರಣವಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು.

ಗಂಡನ ನೈಜ, ಸಹಜ ವಾರಸುದಾರಳೆಂದರೆ ಆತನ ಪತ್ನಿ ಎಂಬುದನ್ನು ಮಿತಾಕ್ಷರ ಪ್ರಣಾಳಿಕೆಯಲ್ಲಿ ಸ್ಪಷ್ಟ ಪಡಿಸಲಾಗಿದೆ. ಈಗ ಪ್ರಚಲಿತದಲ್ಲಿರುವ ಕಾನೂನು ವ್ಯವಸ್ಥೆಯಲ್ಲೂ ಕೂಡ ಇದನ್ನು ಒಪ್ಪಲಾಗಿದೆ. ಗಂಡು ಸಂತಾನವಿಲ್ಲದೆ ಪತಿ ಮರಣ ಹೊಂದಿದಾಗ ಆತನ ಎಲ್ಲ ಆಸ್ತಿ-ಸಂಪತ್ತು ಹೆಂಡತಿಗೇ ಹೋಗತಕ್ಕದ್ದು. ಗಂಡನ ಹತ್ತಿರದ ಬಂಧುಗಳು ಅನೇಕರಿದ್ದರೂ ಮೃತ ಪತಿಯ ಆಸ್ತಿಗೆ ವಿಧವಾ ಪತ್ನಿಯೇ ಬಾಧ್ಯಸ್ಥಳಾಗಿರುತ್ತಾಳೆ.

ಹೆಣ್ಣು ಮಕ್ಕಳು ಧಾರ್ಮಿಕ ಕ್ರಿಯೆಗಳನ್ನು ಕೈಕೊಳ್ಳುವ ಹೋಮ, ಹವನಾದಿ ಶ್ರಾದ್ಧಕರ್ಮಗಳಲ್ಲಿ ಪಾಲ್ಗೊಳ್ಳುವ ಅಧಿಕಾರ ಹೊಂದಿಲ್ಲದ ಕಾರಣ ವಿಧವಾ ಸ್ತ್ರೀಗೆ

ಗಂಡನ ಆಸ್ತಿಯ ಮೇಲೆ ಹಕ್ಕು ಬರುವುದಿಲ್ಲವೆಂಬ ಅಶಾಸ್ತ್ರೀಯ, ಅಲೌಕಿಕ ಮತ್ತು ಅಮಾನವೀಯ ನಿಲುವನ್ನು ವಿಜ್ಞಾನೇಶ್ವರ ಖಂಡಿಸಿದ್ದಾನೆ. ಈ ಸಂಬಂಧ ಕೆಲ ಸ್ಮೃತಿಕಾರರು ಹೇಳುವ ವಿಚಾರಗಳನ್ನು ಆತ ಸಾರಾಸಗಟಾಗಿ ತಿರಸ್ಕರಿಸಿದ್ದಾನೆ. ಪತ್ನಿಯ ಧಾರ್ಮಿಕ ವಿಧಿಗಳಲ್ಲಿ ನೇರವಾಗಿ ಪಾಲ್ಗೊಳ್ಳದಿರಬಹುದು. ಆದರೆ ಅಂತಹ ಕ್ರಿಯೆಗಳಲ್ಲಿ ಪರೋಕ್ಷವಾಗಿ, ಭಾವನಾತ್ಮಕವಾಗಿ ಭಾಗವಹಿಸುವ ಹಕ್ಕು ಅವಳಿಗಿದ್ದೇ ಇದೆ.

ಪುತ್ರ ಸಂತಾನವಿಲ್ಲದ ವಿಧವಾ ಸ್ತ್ರೀಗೆ ಪತಿಯ ಆಸ್ತಿಯ ಮೇಲಿನ ಹಕ್ಕನ್ನು ಕೆಲವು ಸ್ಮೃತಿಗಳಲ್ಲಿ ನಿರಾಕರಿಸಿರುವುದನ್ನು ವಿಜ್ಞಾನೇಶ್ವರ ವಿರೋಧಿಸಿದ್ದಾನೆ. ವಿಧವೆಯಾಗಿದ್ದರೂ ಚಿಂತೆ ಇಲ್ಲ, ಅವಳು ಸಪಿಂಡ, ಸಗೋತ್ರರಿಂದ ಗಂಡು ಸಂತಾನ ಪ್ರಾಪ್ತಿ ಹೊಂದಿದ ಮೇಲೆಯೇ ಅವಳ ಗಂಡನ ಆಸ್ತಿ ಆ ಗಂಡು ಮಗುವಿಗೆ ಲಭಿಸುತ್ತದೆ ಎಂದು ವಿಚಿತ್ರ ಸಮಾಜೋ–ಧಾರ್ಮಿಕ ಕಟ್ಟಳೆಯನ್ನು ವಿಜ್ಞಾನೇಶ್ವರ ಧಿಕ್ಕರಿಸುತ್ತಾನೆ. ಇಂಥ ಪ್ರಗತಿಪರ ನಿಲುವು ಅಂದೇ ಪ್ರತಿಪಾದಿಸಿರುವುದು ಪ್ರಶಂಸನಾರ್ಹ.

ಗಂಡು ಸಂತಾನವಿಲ್ಲದ ವಿಧವಾ ಸ್ತ್ರೀಗೆ ಗಂಡನ ಆಸ್ತಿಯಲ್ಲಿ, ಗಳಿಕೆಯಲ್ಲಿ ಪಾಲು ದೊರೆಯುವುದಿಲ್ಲವೆಂದೂ, ಆಕೆಯ ಜೀವನ ನಿರ್ವಹಣೆಗೆ ಸಾಕಾಗುವಷ್ಟು ವ್ಯವಸ್ಥೆಯನ್ನು ಗಂಡನ ಸಹೋದರರು, ಸಪಿಂಡ ಸಂಬಂಧಿಕರು ಮಾಡಬೇಕೆಂದು ತಾಕೀತು ಮಾಡುವ ಕಟ್ಟಳೆಗಳಿಂದ ಪುತ್ರ ಸಂತಾನವಿಲ್ಲದ ಸಹಸ್ರಾರು ವಿಧವಾ ಸ್ತ್ರೀಯರು ಬೀದಿ ಪಾಲಾಗುವ ಸಾಧ್ಯತೆ ಇತ್ತು. ಸಮಾಜದಲ್ಲಿ, ಕುಟುಂಬದಲ್ಲಿ ಧರ್ಮ–ಕರ್ಮಕ್ಕನುಗುಣವಾಗಿ ಯಾರೂ ಕೂಡ ಸದಾಕಾಲ ನಡೆಯಲಾರರು. ಒಣ ಅನುಕಂಪ, ದಯೆಯಿಂದ ವಿಧವೆಯ ಜೀವನ ಸುಗಮವಾಗಲಾರದು. ಗಂಡನ ಸಹೋದರರು, ಅತ್ತೆ–ಮಾವ ಅಥವಾ ಸಪಿಂಡರು ಅವಳಿಗೆ ಜೀವನ ಪರ್ಯಂತ ನಿರ್ವಹಣಾ ವೆಚ್ಚ ನೀಡುತ್ತಾರೆನ್ನುವುದಕ್ಕೆ ಯಾವುದೇ ಖಾತರಿ ಇರಲಾರದು. ವಿಧವೆಯ ಸ್ವಾಯತ್ತ ಸ್ವತಂತ್ರ ಮತ್ತು ಸ್ವಾಭಿಮಾನದ ಜೀವನಕ್ಕಾಗಿ ಅವಳಿಗೆ ತನ್ನದೇ ಆದ ಪೂರ್ಣ ಒಡೆತನದ ಸ್ವತ್ತು ಇದ್ದಾಗಲೇ ಸಾಧ್ಯವಾದೀತು. ಸಾಮಾಜಿಕವಾಗಿ, ಧಾರ್ಮಿಕವಾಗಿ ವಿಧವೆಯರನ್ನು ಕ್ಷುಲ್ಲಕವಾಗಿ ಕಾಣುತ್ತಿದ್ದ ಸಮಾಜದಲ್ಲಿ ವಿಧವೆಯರಿಗೆ ಆಸ್ತಿ ಹಕ್ಕನ್ನು ಅಪ್ರತಿಬಂಧವಾಗಿ ನೀಡುವ ಮೂಲಕ ಮಿತಾಕ್ಷರ ಪದ್ಧತಿ ಭಾರತೀಯ ಸಮಾಜಕ್ಕೆ ಒಂದು ಉದಾತ್ತವಾದ ಕೊಡುಗೆಯನ್ನೇ ನೀಡಿದೆ.

**ಪುತ್ರಿಯ ಹಕ್ಕು**

ಮಿತಾಕ್ಷರದ ಪ್ರಕಾರ ತಂದೆಯ ಆಸ್ತಿ ಮೇಲಿನ ಮಗಳ ಹಕ್ಕು ಕೇವಲ ರಕ್ತ ಸಂಬಂಧದ ಆಧಾರದ ಮೇಲೆ ಪ್ರಾಪ್ತವಾಗುತ್ತದೆಯೇ ಹೊರತು ಬೇರೆ ಯಾವುದೇ ಧಾರ್ಮಿಕ ಅಥವಾ ಸಾಮಾಜಿಕ ಅರ್ಹತೆ–ಅನರ್ಹತೆಗಳಿಂದಲ್ಲ. ಆದರೆ ವಿಜ್ಞಾನೇಶ್ವರ ಮಗಳಿಗೆ ತಂದೆಯ ಆಸ್ತಿಯ ಮೇಲೆ ಹಕ್ಕನ್ನು ಧಾರಾಳವಾಗಿ ನೀಡಿರುವುದು ಅವನ ಮಹಿಳಾ ಕಾಳಜಿಗೆ ಹಿಡಿದ ಮತ್ತೊಂದು ಕೈಗನ್ನಡಿಯಾಗಿದೆ. ಮನುಷ್ಯ ಜೀವನಕ್ಕೆ ಸಂಬಂಧಿಸಿದ ವಾಸ್ತವ ನೆಲೆಗಟ್ಟಿನ ಮೇಲೆ ಮಾತ್ರ ವಿಜ್ಞಾನೇಶ್ವರ ಯೋಚಿಸುವುದರಿಂದ ಆತನ ವಿಚಾರಧಾರೆಡ ಎರಡು ಮಾತಿಲ್ಲದೆ ಅಂಗೀಕಾರಾರ್ಹವಾಗಿದೆ.

**ತಾಯಿ ಮೊದಲು**

ಒಬ್ಬ ವ್ಯಕ್ತಿ ತನ್ನ ಕಾನೂನುಬದ್ಧ ವಾರಸುದಾರರು, ಅಂದರೆ ಹೆಂಡತಿ, ಮಕ್ಕಳು

ಇಲ್ಲದೆ ಅಕಾಲಿಕವಾಗಿ ತೀರಿಕೊಂಡರೆ ಅವನ ಆಸ್ತಿಯೆಲ್ಲವೂ ಅವನ ತಾಯಿ–ತಂದೆಗೆ ಹೋಗುತ್ತದೆ. ಇಲ್ಲಿ ವಿಜ್ಞಾನೇಶ್ವರನ ಪ್ರತಿಪಾದನೆ ಗಮನಾರ್ಹ. ತಾಯಿ–ತಂದೆಯ ಪೈಕಿ ವಾರಸುದಾರಿಕೆಯ ಹಕ್ಕು ಪಡೆಯಲು ತಾಯಿಗೆ ಪ್ರಥಮ ಆದ್ಯತೆ ನಂತರ ತಂದೆಗೆ. ಜೈವಿಕ ಅಣು ಮತ್ತು ಅದು ಎಲ್ಲಕ್ಕಿಂತಲೂ ಪವಿತ್ರವಾದ ಸಂಬಂಧ. ಅವಳು ಜನ್ಮದಾತೆ. ತಾಯಿಯ ಋಣ ತೀರಲಾರದು.

ಮಿತಾಕ್ಷರ ಪ್ರಕಾರ ಶುಲ್ಕ ಮತ್ತು ಇತರ ಸ್ತ್ರೀಧನಗಳ ಉತ್ತರಾಧಿಕಾರ ಕ್ರಮವು ಬೇರೆ ಬೇರೆಯಾಗಿವೆ. ಶುಲ್ಕವು ಮೊದಲು ಎಲ್ಲ ಅಣ್ಣ–ತಮ್ಮಂದಿರಿಗೆ ಆಮೇಲೆ ತಾಯಿಗೆ, ಸೇರಬೇಕು. 'ಸುಬೋಧಿನಿ', 'ದೀಪಕಾಲಿಕ' ಕರ್ತೃಗಳ ಪ್ರಕಾರವೂ ಸ್ತ್ರೀಧನಗಳ ಉತ್ತರಾಧಿಕಾರತ್ವ ತಾಯಿಗೆ ಮೊದಲು ನಂತರ ಅಣ್ಣ ತಮ್ಮಂದಿರಿಗೆ ಸೇರುತ್ತದೆ. 'ಸ್ಮೃತಿ ಚಂದ್ರಿಕಾ' ಮತ್ತು 'ಪರಾಶರ ಮಾಧವೀಯ' ವ್ಯಾಖ್ಯಾನಕಾರರು ಮಿತಾಕ್ಷರದ ಕ್ರಮವನ್ನೇ ಸಮರ್ಥಿಸಿರುವುದು ಕಂಡುಬರುತ್ತದೆ.

ಹೆಚ್ಚು ಕಡಿಮೆ ದೇಶದ ಎಲ್ಲ ಭಾಗಗಳಲ್ಲಿ ಪ್ರಚಲಿತವಿರುವ ಮಿತಾಕ್ಷರ ಸಂಪ್ರದಾಯದಲ್ಲಿ ಶುಲ್ಕ ಮತ್ತು ಕುಮಾರಿಯರ ಸ್ತ್ರೀಧನವನ್ನುಳಿದು ಉಳಿದೆಲ್ಲ ಪ್ರಕಾರದ ಸ್ತ್ರೀಧನದ ಉತ್ತರಾಧಿಕಾರ ಪ್ರಧಾನವಾಗಿ ಹೆಣ್ಣು ಮಕ್ಕಳಿಗೆ ಇದೆ. ಸ್ತ್ರೀಧನ ಯಾರ್‍ಯಾರಿಗೆ ಹೋಗಬೇಕೆಂಬುದನ್ನು ವಿಜ್ಞಾನೇಶ್ವರ ಸ್ಪಷ್ಟಪಡಿಸಿದ್ದು ಅದು ಕ್ರಮಬದ್ಧ ರೀತಿಯಲ್ಲಿ ಹೀಗಿದೆ: ಅವಿವಾಹಿತ ಹೆಣ್ಣುಮಕ್ಕಳು, ಬಡವರಾದ ವಿವಾಹಿತ ಹೆಣ್ಣುಮಕ್ಕಳು, ಸುಸ್ಥಿತಿಯಲ್ಲಿರುವ ಹೆಣ್ಣುಮಕ್ಕಳು, ಮಗಳ ಹೆಣ್ಣುಮಕ್ಕಳು, ಮಗಳ ಗಂಡುಮಕ್ಕಳು, ಗಂಡುಮಕ್ಕಳು, ಗಂಡುಮಕ್ಕಳ ಗಂಡುಮಕ್ಕಳು, ಗಂಡ, ಸಾಮಿಪ್ಯದ ಆಧಾರದ ಮೇಲೆ ಗಂಡನ ಸಪಿಂಡರು ಹೀಗೆ.

ಗಂಡನ ಸಪಿಂಡರು ದೊರೆಯದಿರುವಾಗ ತಾಯಿಗೆ, ಆಮೇಲೆ ತಂದೆಗೆ, ಆಮೇಲೆ ತಂದೆಯ ಸಪಿಂಡರಿಗೆ, ಇದು ಕ್ರಮ. ಇವರಾರೂ ಇಲ್ಲದಾಗ ಅದು ರಾಜ್ಯಕ್ಕೆ ಸೇರಬೇಕು. ಮಿತಾಕ್ಷರ ಪ್ರಣಾಳಿಕೆಯ ಉಪಪದ್ಧತಿಗಳು ಜಾರಿಯಲ್ಲಿದ್ದ ಕೆಲವು ಪ್ರದೇಶಗಳಲ್ಲಿ ಸ್ತ್ರೀ ಧನದ ಉತ್ತರಾಧಿಕಾರದ ನಿರ್ಣಯದ ವಿಜ್ಞಾನೇಶ್ವರನ ಕ್ರಮದಲ್ಲಿ ಕೆಲವು ಪ್ರಾದೇಶಿಕ ವ್ಯತ್ಯಾಸಗಳೂ ಇದ್ದವು.

**ಇತರ ವಿಷಯಗಳು**

ಅಪರಾಧಗಳ ವಿಷಯದಲ್ಲಿ ಮಹಿಳೆಯರಿಗೆ ನ್ಯಾಯ ಒದಗಿಸುವ ಅನೇಕ ವಿಚಾರಗಳು ಮಿತಾಕ್ಷರದಲ್ಲಿ ಕಂಡುಬರುತ್ತವೆ. ಯಾವುದೇ ಒಂದು ವ್ಯಾಜ್ಯಕ್ಕೆ ದೂರು ಕೊಟ್ಟ ಸಂದರ್ಭದಲ್ಲಿ ಕುಲೀನ ಸ್ತ್ರೀ ಮತ್ತು ಬಾಣಂತಿ ಪ್ರತಿವಾದಿಗಳಾಗಿದ್ದರೂ ಅವರನ್ನು ವಿಚಾರಣೆಗಾಗಿ ಕರೆಯಬಾರದು. ಮಹಿಳೆಯರು ಅನ್ಯಾಯಕ್ಕೊಳಗಾದ ಪ್ರಕರಣಗಳನ್ನು ಗಂಭೀರ ಪ್ರಕರಣಗಳೆಂದು ಪರಿಗಣಿಸಲಾಗುತ್ತಿತ್ತು. ಅಂತಹ ಪ್ರಕರಣಗಳಲ್ಲಿ ಶೀಘ್ರ ನ್ಯಾಯಕ್ಕೆ ಅವಕಾಶವಿತ್ತು. ಮಹಿಳೆಯರ ಮೇಲಿನ ಹಲ್ಲೆ, ದೌರ್ಜನ್ಯ, ಇತ್ಯಾದಿ ಪ್ರಕರಣಗಳಲ್ಲಿ ಕಾಲಹರಣಕ್ಕೆ ಅವಕಾಶ ನೀಡದೆ ಪ್ರತಿವಾದಿಗಳಿಂದ ಹೇಳಿಕೆಗಳನ್ನು ಪಡೆಯಬೇಕೆಂದು ತಾಕೀತು ಮಾಡಲಾಗಿದೆ.

ತಂದೆ ಮಾಡಿದ ಸಾಲವನ್ನು ಹೆಂಡತಿ ಮತ್ತು ಮಕ್ಕಳು ತೀರಿಸುವುದು ವಾಡಿಕೆಯಷ್ಟೆ, ಆದರೆ ಜೂಜು, ವ್ಯಸನ, ವ್ಯಭಿಚಾರ ಮತ್ತು ವಿಲಾಸೀ ಕಾರಣಗಳಿಂದಾಗಿ ತಂದೆ ಮಾಡಿದ ಸಾಲವನ್ನು ಮಗನಾಗಲೀ, ಗಂಡ ಮಾಡಿದ ಸಾಲವನ್ನು ಹೆಂಡತಿಯಾಗಲೀ ತೀರಿಸಬೇಕಾದ

ಅಗತ್ಯವಿಲ್ಲ ಎಂದು ಹೇಳುವ ಮೂಲಕ ಸಾಲ ನೀಡುವ ಲೇವಾದೇವಿಗಾರರಿಗೆ ಸಾಲ ಕೊಡುವುದು ದುಡಿಮೆ ಮಾಡಲಿಕ್ಕಾಗಿಯೇ ಹೊರತು ದುರ್ವಸನಗಳಿಗಲ್ಲ ಎಂಬ ಮುನ್ನೆಚ್ಚರಿಕೆಯನ್ನು ನೀಡಿರುವುದು ಗಮನಿಸಬೇಕಾದ ಸಂಗತಿ.

ಪಿತ್ರಾರ್ಜಿತ ಆಸ್ತಿಯ ಪಾಲುದಾರಿಕೆಯಿಂದ ಕೆಲವು ನಿರ್ದಿಷ್ಟ ವ್ಯಕ್ತಿಗಳನ್ನು ಅನರ್ಹಗೊಳಿಸಲಾಗಿತ್ತು. ಅವರೆಂದರೆ ನಪುಂಸಕರು, ಹುಟ್ಟು ಕುರುಡರು, ಕುಂಟರು, ಮನೋವೈಕಲ್ಯಕ್ಕೆ ಒಳಗಾದವರು, ಬಹಿಷ್ಕೃತರು, ಗುಣಪಡಿಸಲಾಗದ ರೋಗದಿಂದ ನರಳುವವರು. ಇವರನ್ನೆಲ್ಲ ಆಸ್ತಿಯ ಪಾಲುದಾರಿಕೆಯಿಂದ ದೂರ ಇಡುವುದಕ್ಕೆ ಲಿಂಗಭೇದವಿರಲಿಲ್ಲ. ಆದರೆ ಈ ಎಲ್ಲ ವರ್ಗದವರಿಗೆ ಅವರ ಜೀವನ ಪರ್ಯಂತ ಆಹಾರ, ಬಟ್ಟೆ, ವಸತಿ, ಚಿಕಿತ್ಸೆ, ಇತ್ಯಾದಿಗಳನ್ನು ಕಲ್ಪಿಸಿಕೊಡುವುದು ಕಡ್ಡಾಯವಾಗಿತ್ತು. ಹಾಗೆ ಮಾಡದವರನ್ನು ಪಾಪಿಷ್ಟರೆಂದು ದೂಷಿಸಲಾಗುತ್ತಿತ್ತು ಮತ್ತು ಅಂತಹವರಿಗೆ ತಕ್ಕ ದಂಡನೆಯೂ ಇತ್ತು. ಈ ಅನರ್ಹ ವರ್ಗದ ಪುತ್ರಿಯರನ್ನು ಅನಾಥರನ್ನಾಗಿ ಮಾಡಲಿಕ್ಕೆ ಅವಕಾಶವಿರಲಿಲ್ಲ. ಈ ವರ್ಗದವರಿಗೆ ಜನಿಸಬಹುದಾದ ಹೆಣ್ಣು ಮಕ್ಕಳಿಗೆ ಸಂಪೂರ್ಣ ರಕ್ಷಣೆ ಕೊಡುವ ಜವಾಬ್ದಾರಿಯೂ ಅವಿಭಕ್ತ ಕುಟುಂಬದ ಹಿರಿಯರ ಮೇಲೆ ಇತ್ತು. ಈ ಹೆಣ್ಣು ಮಕ್ಕಳನ್ನು ತಕ್ಕ ವರನೊಂದಿಗೆ ಮದುವೆ ಮಾಡಿಕೊಡಬೇಕು ಮತ್ತು ಮದುವೆ ಆಗುವವರೆಗೆ ಅವರಿಗೆ ಪಾಲನೆ, ಪೋಷಣೆ, ರಕ್ಷಣೆ ನೀಡಬೇಕು. ಈ ವಿಶಿಷ್ಟ ವರ್ಗಕ್ಕೆ ಸೇರಿದ ಗಂಡು ಸಂತಾನವಿಲ್ಲದ ಹೆಂಡಂದಿರನ್ನು ಸಂಪೂರ್ಣವಾಗಿ ರಕ್ಷಿಸುವ ಭರವಸೆ ಮಿತಾಕ್ಷರದಲ್ಲಿದೆ.

**ಗ್ರಂಥಋಣ**


1. ಜ್ಯೋತಿ ವಿಶ್ವನಾಥ್, ರಿಲೆವೆನ್ಸ್ ಆಫ್ ಮಿಥಾಕ್ಷರ ಆ್ಯಂಡ್ ಇಟ್ಸ್ ಕಾಂಟ್ರಿಬ್ಯೂಷನ್ ಟು ದಿ ಹಿಂದೂ ಲಾ ಆಫ್ ಸಕ್ಸೆಸನ್: ಆ್ಯನ್ ಅಸೆಸ್‌ಮೆಂಟ್, ಇಂಟರ್ ನ್ಯಾಷನಲ್ ರಿಸರ್ಚ್ ಜರ್ನಲ್ ಆಫ್ ಹುಮಾನಿಟೀಸ್ ಆ್ಯಂಡ್ ಎನ್‌ವಿರಾನ್ಮೆಂಟಲ್ ಇಸ್ಸ್ಯೂಸ್ (ಐಆರ್‌ಜೆಹೆಚ್‌ಇಐ) ಸಂಪುಟ–3 ಸಂಚಿಕೆ 10(1), ಜನೆವರಿ 2015, ಪು.66–70, ಜೈ ಹಿಂದ್ ಎಡುಕೇಶನ್ ಸೊಸೈಟಿ, ಪುಣೆ
2. ಸಿರನೂರಕರ್ ಶ್ರೀನಿವಾಸ, ವಿಜ್ಞಾನೇಶ್ವರ ಮಿತಾಕ್ಷರ, ಪು. 54–68, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ, 2007
3. ನಂದನ್ ದಿಯೋಕಿ, ಹಿಂದೂ ಲಾ: ಮ್ಯಾರೇಜ್ ಆ್ಯಂಡ್ ಡಿವೋರ್ಸ್, ಯೂನಿವರ್ಸಿಟಿ ಬುಕ್ ಏಜೆನ್ಸಿ, ಅಲಹಾಬಾದ್, 1989
4. ಬಾಶಮ್ ಎ ಎಲ್, ವಂಡರ್ ದಟ್ ವಾಸ್ ಇಂಡಿಯಾ (ಮೂಲ), ಮಿರ್ಜಿ ಡಿ.ಆರ್, ಪ್ರಾಚೀನ ಭಾರತವೆಂಬ ಅದ್ಭುತ, (ಕನ್ನಡ) ಐಬಿಹೆಚ್ ಪ್ರಕಾಶನ, ಬೆಂಗಳೂರು, 2012
5. ಅರವಿಂದ ಕುಮಾರ್, ವಿಜ್ಞಾನೇಶ್ವರ ಆ್ಯಂಡ್ ಹಿಸ್ ಮಿಥಾಕ್ಷರ, 2011ರ ಜನವರಿ 28 ರಿಂದ 30 ರವರೆಗೆ ಕಡಪಾದಲ್ಲಿ ಜರುಗಿದ ಸೌತ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ 31ನೇ ಅಧಿವೇಶನ ಪ್ರೊಸೀಡಿಂಗ್ಸ್, 2012 ಪು.646–648
6. ಪೂಜಾರ ವ್ಹಿ.ಜಿ., ಸಂಶೋಧನಾ ಲೇಖನಗಳು, ಪ್ರಾತಿನಿಧಿಕ ಸಂಕಲನ, ಮೈಖೇಲ್ ಅವರ ಲೇಖನ 'ವಿಜ್ಞಾನೇಶ್ವರನ ಮಿತಾಕ್ಷರಾ' ಪು.65–70, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, 2005


❖❖❖

# ಕನ್ನಡದ ಲೋಹಿಯಾವಾದಿ ಸಾಹಿತ್ಯಕ್ಕೆ ಡಿ.ಎಸ್. ನಾಗಭೂಷಣರ ಕೊಡುಗೆ

**ಗಂಗಾಧರ ಬಿ.ಎಂ.**

ಸಂಶೋಧನಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು ವಿ.ವಿ.

ಪ್ರವೇಶಿಕೆ: ಕರ್ನಾಟಕದ ಲೋಹಿಯಾವಾದಿ ಚಿಂತಕರು ಮತ್ತು ಬರಹಗಾರರ ಪಟ್ಟಿಯಲ್ಲಿ ಡಿ.ಎಸ್. ನಾಗಭೂಷಣರವರಿಗೆ ವಿಶೇಷ ಸ್ಥಾನವಿದೆ. ಇವರು ಕನ್ನಡದಲ್ಲಿ ರಾಮಮನೋಹರ ಲೋಹಿಯಾ ಕುರಿತ ಸಾಹಿತ್ಯ ಮತ್ತು ಚಿಂತನೆಗಳ ಪ್ರಮುಖ ಪ್ರಚಾರಕರೆನಿಸಿದ್ದಾರೆ. ಡಿ.ಎಸ್. ನಾಗಭೂಷಣರು ವಿದ್ಯಾರ್ಥಿದೆಸೆಯಲ್ಲಿಯೇ ಲೋಹಿಯಾರವರ ಚಿಂತನೆಗಳಿಂದ ಪ್ರೇರಣೆ ಪಡೆದವರು. ಇವರು ಕರ್ನಾಟಕದಲ್ಲಿ ಹಲವಾರು ಪ್ರಮುಖ ಲೋಹಿಯಾವಾದಿಗಳೊಡನೆ ಒಡನಾಟ ಹೊಂದಿದ್ದರು. ತಮ್ಮ ಕೊನೆಯ ದಿನಗಳವರೆಗೆ ಕನ್ನಡದಲ್ಲಿ ಲೋಹಿಯಾ ಸಮಾಜವಾದದ ವಕ್ತಾರರಂತೆ ಕಾರ್ಯನಿರ್ವಹಿಸಿದರು. ಎಲ್ಲಾ ಲೋಹಿಯಾವಾದಿಗಳಂತೆ ವಾದಗಳಲ್ಲಿ ತೀವ್ರ ಆಸಕ್ತಿ ಮತ್ತು ವ್ಯಕ್ತಿ ಭಿನ್ನತೆಯನ್ನು ಕಾಯ್ದುಕೊಂಡಿದ್ದ ಡಿ.ಎಸ್.ಎನ್ ರವರು ಸಮಕಾಲೀನ ವಿಚಾರಗಳ ಕುರಿತಂತೆ ನಿಷ್ಠೂರ ಮಾತುಗಳನ್ನು ಆಡಬಲ್ಲ ಕನ್ನಡದ ಕೆಲವೇ ಬರಹಗಾರರಲ್ಲಿ ಒಬ್ಬರಾಗಿದ್ದರು.

ಆಕಾಶವಾಣಿಯಲ್ಲಿ ವೃತ್ತಿನಿರತರಾಗಿದ್ದ ಡಿ.ಎಸ್.ಎನ್.ರವರು ಅಸಂಖ್ಯ ಸಮಾಜವಾದಿ ಆಶಯಗಳುಳ್ಳ ಕಾರ್ಯಕ್ರಮಗಳನ್ನು ತಮ್ಮ ವೃತ್ತಿ ಬದುಕಿನ ಭಾಗವಾಗಿ ಆಯೋಜಿಸಿದ್ದಾರೆ. ರೇಡಿಯೋ ನಾಟಕಗಳು, ಸಂದರ್ಶನಗಳು ಮತ್ತು ಕಾರ್ಯಕ್ರಮಗಳು ಈ ನಿಟ್ಟಿನಲ್ಲಿ ರಚನೆಯಾಗಿವೆ.. ಅವರು 2010 ರಿಂದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ ರಚಿಸುವುದರ ಮೂಲಕ ಕನ್ನಡದಲ್ಲಿ ಲೋಹಿಯಾ ಕುರಿತ ಹತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಹಾಗೆಯೇ ಹಲವು ಕಾರ್ಯಕ್ರಮಗಳನ್ನು ಸಹ ಆಯೋಜಿಸಿದ್ದಾರೆ.

ರಾಮಮನೋಹರ ಲೋಹಿಯಾ, ಗಾಂಧಿ, ರಮಣ ಮಹರ್ಷಿ, ಜಯಪ್ರಕಾಶ ನಾರಾಯಣ ಕುರಿತ ಅವರ ಆಸಕ್ತಿಗಳು ಅವರ ಬದುಕಿನ ಗತಿಯನ್ನು ನಿರ್ಧರಿಸಿವೆ. ಸರಳತೆ, ನೇರನಡೆ–ನುಡಿ, ಜಾತ್ಯಾತೀತತೆ, ಆಧ್ಯಾತ್ಮಿಕತೆ ವಿಚಾರಗಳಲ್ಲಿ ಅವರನ್ನು ಅನುಸರಿಸಿರುವುದನ್ನು ಕಾಣಬರುತ್ತದೆ.

ರಾಮಚಂದ್ರ ಗುಹಾ ಅವರೊಡನೆ ನಾಗಭೂಷಣರ ಪತ್ರ ಸಮರ ಹಲವು ಹೊಸ ವಿಚಾರಗಳ ಜಿಜ್ಞಾಸೆಗೆ ವೇದಿಕೆಯಾಗಿತ್ತು. ಇಂತಹ ಸಾಹಿತ್ಯಿಕ ಜಗಳಗಳಿಗೆ ಸದಾ ಸಿದ್ದವಾಗಿರುತ್ತಿದ್ದರು. ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಕಡ್ಡಾಯ ಮಾಡದ ಸರ್ಕಾರದ ಕ್ರಮವನ್ನು ವಿರೋಧಿಸಿ 2017 ರ ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆಯಲು ನಿರಾಕರಿಸಿದ್ದರು. ಅದು ಅವರ ಕನ್ನಡಪ್ರೇಮದ ದ್ಯೋತಕವೆನಿಸಿದೆ. ನಾಗಭೂಷಣರ ಸಾಹಿತ್ಯ ಕೃಷಿಯನ್ನು ಗಮನಿಸಿದರೆ, ಅವರು ಸೃಜನಶೀಲ ಸಾಹಿತ್ಯಕ್ಕಿಂತ ವಿಮರ್ಶೆ, ಸಂಪಾದನೆ, ವ್ಯಕ್ತಿಚಿತ್ರ, ಅನುವಾದ, ತೌಲನಿಕ ಅಧ್ಯಯನಗಳೆಡೆಗೆ ಗಮನ ನೀಡಿದ್ದಾರೆ.

ಇವೆಲ್ಲವೂ ಸಮಾಜವಾದದ ಪರಿಮಿತಿಯಲ್ಲಿಯೇ ಇವೆ. ಹಲವು ಸಮಾಜವಾದಿ ಅಧ್ಯಯನ ಶಿಬಿರಗಳನ್ನು ಸಂಘಟಿಸಿ ಯುವಕರಿಗೆ ಮಾರ್ಗದರ್ಶನ ನೀಡಿರುವುದು ಇವರ ಹೆಗ್ಗಳಿಕೆ.

ಲೋಹಿಯಾ ಚಿಂತನೆಗಳ ಪ್ರಚಾರಕ: ಲೋಹಿಯಾ ಚಿಂತನೆಗಳನ್ನು ತಮ್ಮ ಸಮಕಾಲೀನ ರಾಜಕಾರಣ ಮತ್ತು ಸಂಸ್ಕೃತಿಯ ವಿಶ್ಲೇಷಣೆಗೆ ಅವರು ಬಳಸುತ್ತಿದ್ದರು. ಲೋಹಿಯಾ ಸಂಬಂಧಿತ ಹಲವಾರು ಕೃತಿಗಳನ್ನು ಅವರು ರಚನೆ, ವಿಶ್ಲೇಷಣೆ ಮತ್ತು ಸಂಪಾದನೆ ಮಾಡಿದ್ದಾರೆ. ಸರ್ಕಾರೇತರ ನೆಲೆಯಲ್ಲಿ ಲೋಹಿಯಾ ಸಾಹಿತ್ಯವನ್ನು ದೊಡ್ಡಮಟ್ಟದಲ್ಲಿ ಪರಿಚಯಿಸಿರುವ ಕನ್ನಡದ ಸಾಹಿತಿ ಅವರಾಗಿದ್ದಾರೆ. ಇದಕ್ಕೆ ಸಂಬಂಧಿಸಿದ ಕೆಲವು ಕೃತಿಗಳ ಪರಿಚಯ ಈ ಮುಂದಿನಂತಿದೆ.

'ಲೋಹಿಯಾ: ವ್ಯಕ್ತಿ–ವಿಚಾರ–ವಿಮರ್ಶೆ : ಕೃತಿಯು ಲೋಹಿಯಾ ಕುರಿತು ಹಲವು ಮಹನೀಯರ ಲೇಖನ ಸಂಗ್ರಹವೆನಿಸಿದೆ. ಅದರ ಪರಿಷ್ಕೃತ ಕೃತಿ ಲೋಹಿಯಾ:ವ್ಯಕ್ತಿ–ವಿಚಾರ–ವಿಮರ್ಶೆ ಕೃತಿಯಾಗಿದೆ. ಲೋಹಿಯಾ ಜನ್ಮಶತಾಬ್ಧಿ ವರ್ಷದಲ್ಲಿ ಇದು ವಿಸ್ತೃತವಾಗಿ ಪ್ರಕಟವಾಗಿದೆ.

'ಲೋಹಿಯಾ ಸಮಾಜವಾದ ದರ್ಶನ': ನಾಗಭೂಷಣರ ಈ ಕೃತಿಯು ಕನ್ನಡದಲ್ಲಿ ಲೋಹಿಯಾವಾದವನ್ನು ಸಮರ್ಥವಾಗಿ ತಿಳಿಸಿಕೊಡುತ್ತದೆ. 2006ರಲ್ಲಿ ಮೊದಲ ಪ್ರಕಟವಾದ ನೂರು ಪುಟಗಳ ಈ ಕೃತಿಯಲ್ಲಿ ಐದು ಅಧ್ಯಾಯಗಳಿವೆ. ಈ ಕೃತಿಯು ಜಗತ್ತಿನಲ್ಲಿ ಸಮಾಜವಾದಿ ತತ್ವ ವಿಕಾಸದ ಕ್ರಮವನ್ನು ಕಟ್ಟಿಕೊಡುತ್ತಲೇ ಅದರಲ್ಲಿ ಲೋಹಿಯಾ ಅವರ ಪ್ರವೇಶದ ಬಗೆಯನ್ನು ತಿಳಿಸಿಕೊಡುತ್ತದೆ.

ಇದರಲ್ಲಿ ಲೋಹಿಯಾರವರ ವ್ಯಕ್ತಿತ್ವದ ಪರಿಚಯದೊಂದಿಗೆ ಭಾರತದಲ್ಲಿ ಸಮಾಜವಾದದ ವಿಕಾಸವನ್ನು ಗುರುತಿಸಲಾಗಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಲೋಹಿಯಾ ಅವರ ಪಾತ್ರ ಮತ್ತು ಮಹಾತ್ಮ ಗಾಂಧಿಯವರ ನೆರಳಿನಲ್ಲಿ ಸಮಾಜವಾದಿಗಳ ಕಾರ್ಯವನ್ನು ವಿವರಿಸಲಾಗಿದೆ. ಈ ಪುಸ್ತಕದ ಕೇಂದ್ರ ಚಿಂತನೆಯಾದ ಲೋಹಿಯಾ ಸಮಾಜವಾದಿ ತತ್ವಚಿಂತನೆಯು ನಾಲ್ಕನೆಯ ಅಧ್ಯಾಯದಲ್ಲಿ ಅಡಕವಾಗಿದೆ. ಲೋಹಿಯಾ ಅವರ ಹೋರಾಟಗಳು, ಅವುಗಳ ಫಲಶೃತಿಗಳ ಸಂಕ್ಷಿಪ್ತ ವರದಿ ಇಲ್ಲಿದೆ. ಲೋಹಿಯಾವಾದಕ್ಕೆ ಸಂಬಂಧಿಸಿದಂತೆ, ಲೋಹಿಯಾರವರು ಮಾರ್ಕ್ಸ್‌ವಾದದ ವಿಮರ್ಶೆ ಮಾಡಿದ ಸ್ವರೂಪ ಮತ್ತು ಸಮಾನತೆಗೆ ನೀಡಿದ ಹೊಸ ಅರ್ಥವನ್ನು ನಿರೂಪಿಸಲಾಗಿದೆ. ಲೋಹಿಯಾವಾದವನ್ನು ಮಾರ್ಕ್ಸವಾದಕ್ಕಿಂತ ಭಿನ್ನವಾಗಿ ಗ್ರಹಿಸಬೇಕಾದ ಅಗತ್ಯ ತಿಳಿಸುತ್ತದೆ. ಸಮಾಜವಾದದ ಅನಾವರಣದಲ್ಲಿ ಲೋಹಿಯಾರವರ ಬದ್ದತೆ, ನಾಯಕತ್ವ ಮತ್ತು ಅದರ ವಿಕಾಸವನ್ನು ಇಲ್ಲಿನ ಅಧ್ಯಾಯಗಳಲ್ಲಿ ವಿಶ್ಲೇಷಿಸಲಾಗಿದೆ.

'ಲೋಹಿಯಾ ಜೊತೆಯಲ್ಲಿ' ಎಂಬ ಕೃತಿಯು ಬಿ.ಆರ್. ಅಂಬೇಡ್ಕರ್, ಮಹಾತ್ಮ ಗಾಂಧೀಜಿ, ಕಾರ್ಲ್‌ಮಾರ್ಕ್ಸ್ ಮತ್ತು ಲೋಹಿಯಾರ ಕುರಿತ ಲೇಖನ ಸಂಗ್ರಹವೆನಿಸಿದೆ. ಸದರಿ ಕೃತಿಯಲ್ಲಿ ಲೋಹಿಯಾ ಕುರಿತ ಲೇಖನಗಳೆಂದರೆ, 1. ಲೋಹಿಯಾ ಅವರ ಲೋಕ ಗ್ರಹಿಕೆಯ ನೆಲೆಗಳು. 2. ಲೋಹಿಯಾ; ಮಿತಿಗಳುಳ್ಳ ಬದುಕಿನ ಸೌಂದರ್ಯ ಮೀಮಾಂಸಕ. 3.ಲೋಹಿಯಾ ಸಮಾಜವಾದ: ಮುಂದೇನು? 4. ಲೋಹಿಯಾವಾದದ ಮರು ವಿಮರ್ಶೆ: ಶಿವಸುಂದರ್ ಗೊಂದು ಪತ್ರ. 5. ಕರ್ನಾಟಕದ ಲೋಹಿಯಾವಾದಿ

ಸಾಂಸ್ಕೃತಿಕ ಪರಂಪರೆಯೂ ರಹಮತ್ ತರೀಕೆರೆಯವರ ಮೆಳ್ಳೆಕಣ್ಣಿನ ನೋಟವೂ.. 6. ಮಾರ್ಕ್ಸ್, ಗಾಂಧೀ, ಲೋಹಿಯಾ–ಅಂಬೇಡ್ಕರ್: ಆಧುನಿಕ ಭಾರತವನ್ನು ರೂಪಿಸಿದ ಚಿಂತಕರು: ಒಂದು ಮರುನೋಟ. ಹೀಗೆ ಲೋಹಿಯಾರವರ ತತ್ವ ಚಿಂತನೆಯನ್ನು ಒರೆಗೆ ಹಚ್ಚುವ ಇತರೆ ಸಮಾಜವಾದಿಗಳ ವಿಚಾರಗಳೊಂದಿಗೆ ಹೋಲಿಸುವ ಕೆಲಸವನ್ನು ನಾಗಭೂಷಣರು ನಿರ್ವಹಿಸಿದ್ದಾರೆ. ಲೋಹಿಯಾ ವಿಚಾರಗಳ ಕುರಿತ ಟೀಕೆಗಳಿಗೆ ಉತ್ತರ ನೀಡುವ ಪ್ರಯತ್ನ ಸಹ ಇಲ್ಲಿನ ಲೇಖನಗಳಲ್ಲಿದೆ.

'ರಸಿಕ ರುದ್ರ ತಪಸ್ವಿ ಲೋಹಿಯಾ': ಈ ಸಂಪಾದಿತ ಕೃತಿಯು ಲೋಹಿಯಾ ಅವರನ್ನು ಕುರಿತ ಅನುವಾದಿತ ಲೇಖನಗಳ ಸಂಗ್ರಹವೆನಿಸಿದೆ. ಇದರಲ್ಲಿ ಪಿ.ಲ.ದೇಶಪಾಂಡೆ, ಧರ್ಮವೀರ ಭಾರತಿ, ಎಸ್.ಆರ್. ನೆನೆ, ಮಸ್ತ್ ರಾಂ ಕಪೂರ್, ಜಯಾ ಶ್ರೀವಾಸ್ತವ, ನ್ಯಾ.ಸುದರ್ಶನ ರೆಡ್ಡಿ, ರಜನಿ ಭಕ್ಷಿ, ಯೋಗೇಂದ್ರ ಯಾದವ್‌ರ ಲೇಖನಗಳಿವೆ. ಇವರಲ್ಲಿ ಬಹುತೇಕರು ಲೋಹಿಯಾರನ್ನು ಹತ್ತಿರದಿಂದ ಬಲ್ಲವರು.

ನಾಗಭೂಷಣರ ಮೊದಲ ವಿಮರ್ಶಾ ಸಂಕಲನ ಗಮನ. 1990ರಲ್ಲಿ ಪ್ರಕಟವಾಗಿರುವ 'ಗಮನ' ದಲ್ಲಿ ಲೋಹಿಯಾ ಕುರಿತ ಲೇಖನಗಳು ಸೇರಿವೆ. 1. ಕನಸು ಬಂಡಾಯಗಳ ನಾಯಕ:ಲೋಹಿಯಾ. 2. ಲೋಹಿಯಾ ತತ್ವಚಿಂತನೆ : ಕರ್ನಾಟಕದ ಪ್ರತಿಕ್ರಿಯೆ. 3. ಲೋಹಿಯಾ ಮತ್ತು ಅಂಬೇಡ್ಕರ್ : ಐಕ್ಯತೆಯ ಪ್ರಶ್ನೆ. ಎಂಬ ಮೂರು ಲೇಖನಗಳು ಲೋಹಿಯಾರ ಚಿಂತನೆ ಮತ್ತು ಕರ್ನಾಟಕದ ಸಂಬಂಧವನ್ನು ಪರಿಚಯಿಸಿಕೊಡುತ್ತವೆ.

ಡಿ.ಎಸ್.ನಾಗಭೂಷಣ ಅವರು ಲೋಹಿಯಾ ಸಾಹಿತ್ಯ ಪ್ರಸಾರದ ಸಲುವಾಗಿ 'ಲೋಹಿಯಾವಾಣಿ' ಮತ್ತು 'ಲೋಹಿಯಾ ಕೈಪಿಡಿ' ಎಂಬ ಎರಡು ಕಿರು ಹೊತ್ತಿಗೆಗಳನ್ನು ರಚಿಸಿದ್ದಾರೆ. ಇವು ವಿದ್ಯಾರ್ಥಿಗಳ ಓದಿಗಾಗಿ ರಚಿಸಲ್ಪಟ್ಟಿವೆ.

ಸಮಾಜವಾದಿ ನಾಯಕರುಗಳೊಂದಿಗೆ ಒಡನಾಟ: ಡಿ.ಎಸ್. ನಾಗಭೂಷಣರಿಗೆ ಲೋಹಿಯಾ ಅವರ ಚಿಂತನೆಗಳ ಓದಿನೊಂದಿಗೆ ಕಿಷನ್ ಪಟ್ನಾಯಕ್, ಮಧು ಲಿಮಯೆರಂತಹ ಪ್ರಮುಖ ಸಮಾಜವಾದಿಗಳ ಒಡನಾಟ ದೊರಕಿತ್ತು. ಹಲವಾರು ಲೋಹಿಯಾವಾದಿಗಳೊಡನೆ ಕಳೆದ ನಿಕಟ ನೆನಪುಗಳು ನಾಗಭೂಷಣರ ಬರಹಗಳಲ್ಲಿವೆ. ಜಯಪ್ರಕಾಶ ನಾರಾಯಣ, ಅಂಬೇಡ್ಕರ್, ಮಾರ್ಕ್ಸ್, ಗಾಂಧೀಜಿ ಅವರುಗಳನ್ನು ಲೋಹಿಯಾ ಅವರೊಡನೆ ಇಟ್ಟು ಚರ್ಚೆ ಮಾಡಿರುವುದರಲ್ಲಿ ಡಿ.ಎಸ್.ಎನ್ ಅವರಿಗೆ ವಿಶೇಷ ಸ್ಥಾನವಿದೆ. ಲೋಹಿಯಾ ಚಿಂತನೆಗಳಿಂದ ಅವರು, ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಒಳನೋಟಗಳನ್ನು ಪಡೆದಿರುವುದನ್ನು ಅವರ ಬರಹಗಳಲ್ಲಿ ಕಾಣಬಹುದು. ಜಯಪ್ರಕಾಶ ನಾರಾಯಣರ ಜೀವನ ಸಾಧನೆಗಳನ್ನು ವಿಶ್ಲೇಷಿಸುವ 'ಒಂದು ಅಪೂರ್ಣ ಕ್ರಾಂತಿಯ ಕತೆ' ವಿಶಿಷ್ಟವಾದ ಕೃತಿ. ತುರ್ತುಪರಿಸ್ಥಿತಿ ಕಾಲದ ಪ್ರಸಿದ್ಧ ಕೃತಿಯಾದ ಜೆ.ಪಿ ಅವರ 'ಸೆರೆಮನೆಯ ದಿನಚರಿ'ಯ ಕನ್ನಡ ಅನುವಾದಕರು ಇವರೇ ಆಗಿದ್ದಾರೆ

'ಹೊಸ ಮನುಷ್ಯ': ಎಪ್ಪತ್ತರ ದಶಕದಲ್ಲಿ ಮೈಸೂರಿನಲ್ಲಿ 'ಸಮಾಜವಾದಿ ಯುವಜನ ಸಭಾ'ದ ಮುಖವಾಣಿಯಾಗಿ 'ಮಾನವ' ಪತ್ರಿಕೆಯನ್ನು ಪ್ರಕಟಿಸಲಾಗುತ್ತಿತ್ತು. ಇದು ಲೋಹಿಯಾರವರು ಇಂಗ್ಲಿಷಿನಲ್ಲಿ ಪ್ರಕಟಿಸುತ್ತಿದ್ದ 'ಮ್ಯಾನ್ ಕೈಂಡ್' ಪತ್ರಿಕೆಯ ಕನ್ನಡದ ಅವತರಿಕೆಯಾಗಿತ್ತು. ಇದರಲ್ಲಿ ಮಾನವನ ಪೂರ್ಣತೆಯ ಅನ್ವೇಷಣೆಯ ಪ್ರಯತ್ನದಲ್ಲಿ

ವೈವಿಧ್ಯಮಯ ಆಸಕ್ತಿಯ ಬಗೆಗಿನ ಲೇಖನಗಳು, ವರದಿಗಳು ಮತ್ತು ವಿಶ್ಲೇಷಣೆಗಳನ್ನು ಒಳಗೊಂಡಿರುತ್ತಿತ್ತು. "ಜೆ.ಪಿ. ಚಳವಳಿಯ ಅಂತಿಮ ಪರಿಣಾಮವಾಗಿ ಸಮಾಜವಾದಿ ಚಳುವಳಿ ಹಿನ್ನೆಲೆಗೆ ಸರಿಯುತ್ತಿದ್ದಂತೆ, ಈ ಪತ್ರಿಕೆಯು ಕಣ್ಮರೆಯಾಯಿತು"(ಪುಟ–11. ಕಾಲಕ್ರಮ) 1979ರಲ್ಲಿ ದೇವನೂರು ಮಹಾದೇವ, ನೆಲಮನೆ ದೇವೇಗೌಡ ಅವರ ಒತ್ತಾಸೆಗಳೊಂದಿಗೆ ಡಿ.ಎಸ್.ನಾಗಭೂಷಣ ಅವರ ಸಂಪಾದಕತ್ವದಲ್ಲಿ ಪತ್ರಿಕೆ ಒಂದು ವರ್ಷ ಕಾಲ ನಡೆಯಿತು. 2010ರಲ್ಲಿ ಮತ್ತೆ ಒಂದು ವರ್ಷಗಳ ಕಾಲ ಖಾಸಗಿ ಆವೃತ್ತಿಯಾಗಿ 'ಮಾನವ' ಪತ್ರಿಕೆಯನ್ನು 'ನವಮಾನವ' ಎಂಬ ಹೆಸರಿನಲ್ಲಿ ಪ್ರಾರಂಭಿಸಲಾಯಿತು. 2011 ಆಗಸ್ಟ್‌ನಿಂದ 'ಹೊಸ ಮನುಷ್ಯ' ಎಂಬ ಹೆಸರಿನಲ್ಲಿ ಹತ್ತು ವರ್ಷಗಳ ಕಾಲ ಪತ್ರಿಕೆಯು ಮಾಸಿಕವಾಗಿ ಪ್ರಕಟವಾಗುತ್ತಿತ್ತು." 'ಹೊಸ ಮನುಷ್ಯ' ಸಮಾಜವಾದಿ ವಿಚಾರಗಳ ಪ್ರಸ್ತುತಿ, ಚರ್ಚೆ, ಪರಾಮರ್ಶೆಗೆಂದೇ ಆರಂಭವಾದ ಪತ್ರಿಕೆಯಾದ್ದರಿಂದ ಮುಖಪುಟ ಸಂಪಾದಕೀಯಗಳಲ್ಲಿ ಅಂದಂದಿನ ರಾಜಕೀಯ ಬೆಳವಣಿಗೆಗಳ ಪ್ರಸ್ತಾಪ, ವಿಶ್ಲೇಷಣೆ ಮತ್ತು ವಿಮರ್ಶೆಗಳೇ ಹೆಚ್ಚು. ಈ ಅರ್ಥದಲ್ಲಿ ಈ ಸಂಪಾದಕೀಯಗಳು ತನ್ನ ಅವಧಿಯ ರಾಜಕೀಯ ಇತಿಹಾಸವನ್ನು ಸಮಾಜವಾದಿ ದೃಷ್ಟಿಕೋನದಿಂದ ಕಟ್ಟುವ ಅಥವಾ ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಮುರಿದು ಕಟ್ಟುವ ಉದ್ದೇಶದಿಂದ ಬರೆಯಲ್ಪಟ್ಟಿವೆ ಎಂದೇ ಹೇಳಬೇಕಿದೆ.

'ಹೊಸ ಮನುಷ್ಯ'ವು ಕನ್ನಡದ ಸಮಾಜವಾದಿ ಮಾಸಿಕವಾಗಿ ಸಾಧಿಸಿದ ಎತ್ತರ ವಿಶಿಷ್ಟವಾದುದು. ನಾಡಿನ ಬಹುತೇಕ ಸಾಹಿತಿಗಳಿಗೆ ಪ್ರಿಯವಾದ ಪತ್ರಿಕೆಯಾಗಿ ಅದು ಮಾರ್ಪಾಡಾಗಿತ್ತು. ಲಂಕೇಶ್ ಪತ್ರಿಕೆಯ ನಂತರ ಕನ್ನಡದ ಸಮಾಜವಾದಿ ಆಶಯದ ಪತ್ರಿಕೆ ಇದಾಗಿತ್ತು. ಎಪ್ಪತ್ತರ ದಶಕದ ಸಮಾಜವಾದಿ ಯುವಜನ ಸಭಾದ 'ಮಾನವ'ಪತ್ರಿಕೆಯ ಆಶಯಗಳನ್ನು ಇದು ಒಳಗೊಂಡಿತ್ತು. ಅದರ ಹಣಕಾಸಿನ ನಿರ್ವಹಣೆ ಅಪರೂಪದ ಮಾದರಿ ಕ್ರಮದಲ್ಲಿತ್ತು. ಪ್ರತಿ ವರ್ಷದ ಮಾರ್ಚ್ ನಲ್ಲಿ ಮಹಿಳಾ ವಿಶೇಷಾಂಕಗಳನ್ನು ಪ್ರಕಟಿಸಲಾಗುತ್ತಿತ್ತು. ಈ ಪತ್ರಿಕೆಯು 'ಲೋಹಿಯಾ ಟುಡೆ' ವೆಬ್ ಸೈಟಿನಲ್ಲಿಯೂ ಪ್ರತಿ ತಿಂಗಳು ತಪ್ಪದೆ ಉಚಿತವಾಗಿ ಪ್ರಕಟವಾಗುತ್ತಿತ್ತು. ಆ ಮೂಲಕ 'ಲೋಹಿಯ ಟುಡೆ' ವೆಬ್ನ ಕನ್ನಡದ ಏಕೈಕ ಪ್ರತಿನಿಧಿ ಪತ್ರಿಕೆಯಾಗಿ ಸ್ಥಾನ ಪಡೆದಿತ್ತು.

'ನಮ್ಮ ಸಮಾಜವಾದಿಗಳು' ಮತ್ತು 'ಸಮಾಜವಾದದ ಸಾಲುದೀಪಗಳು': ಇವೆರಡು ಕೃತಿಗಳು ನಾಗಭೂಷಣರ ಸಂಪಾದಿತ ಕೃತಿಗಳು. ಇವುಗಳಲ್ಲಿ ಕ್ರಮವಾಗಿ ಕರ್ನಾಟಕದ ಪ್ರಮುಖ ಸಮಾಜವಾದಿಗಳು ಮತ್ತು ಭಾರತದ ಪ್ರಮುಖ ಸಮಾಜವಾದಿ ವ್ಯಕ್ತಿ ಪರಿಚಯದ ಲೇಖನಗಳಿವೆ. 'ನಮ್ಮ ಸಮಾಜವಾದಿಗಳು' ಕೃತಿಯಲ್ಲಿ ನಲವತ್ತೂರು ಜನ ಸಮಾಜವಾದಿಗಳ ಚಿತ್ರಣವಿದೆ. ಹಲವು ಹಿರಿಯ ಮತ್ತು ಕಿರಿಯ ಲೇಖಕರ ಶ್ರಮ ಇದಕ್ಕಿದೆ. ಚಾಮರಾಜನಗರದ ಸಮತಾ ಪ್ರಕಾಶನ ಇದನ್ನು 2015ರಲ್ಲಿ ಪ್ರಕಟಿಸಿದೆ. ಕರ್ನಾಟಕದ ಸಮಾಜವಾದಿ ಇತಿಹಾಸ ಅರಿಯುವಲ್ಲಿ ಇದು ಬಹಳ ಸಹಕಾರಿಯಾಗುತ್ತದೆ. ಲೋಹಿಯಾ ಪ್ರಕಾಶನದಿಂದ 2021ರಲ್ಲಿ ಪ್ರಕಟವಾಗಿರುವ 'ಸಮಾಜವಾದದ ಸಾಲುದೀಪಗಳು' ಕೃತಿಯಲ್ಲಿ ಇಪ್ಪತ್ತೆರಡು ಜನ ಭಾರತೀಯ ಸಮಾಜವಾದಿಗಳ ಕಿರು ಪರಿಚಯವಿದೆ.

**ಅಂಕಣಕಾರರಾಗಿ**

ಇದು ಭಾರತ! ಇದು ಭಾರತ: ನಾಗಭೂಷಣರು ತಮ್ಮ ಅಂಕಣ ಮತ್ತು ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ನೆಲೆಯ ವೈಚಾರಿಕ ಬರಹಗಳನ್ನು 'ಸಮಾಜವಾದಿ ಸಂಕಥನ'ಗಳೆಂದು ಕರೆದುಕೊಂಡಿದ್ದಾರೆ. 'ಬೇರು ಬಿಳಲು' ಈ ಸರಣಿಯ ಮೊದಲ ಕೃತಿ. 'ಇದು ಭಾರತ ಇದು ಭಾರತ!!' ಎಂಬುದು ಎರಡನೆಯದು. ಇದರಲ್ಲಿ ಸಮಾಜವಾದಿ ನೋಟಕ್ರಮದಿಂದ ಸಮಕಾಲೀನ ಘಟನೆಗಳನ್ನು ವಿಮರ್ಶಿಸುವ ಮತ್ತು ವಿಶ್ಲೇಷಿಸುವ ಪ್ರಯತ್ನವಿದೆ.

'ವಶಿಷ್ಟರು ಮತ್ತು ವಿಶ್ವಾಮಿತ್ರರು': ಇದೇ ಹೆಸರಿನ ಪುಸ್ತಕವನ್ನು ಲೋಹಿಯಾ ರಚಿಸಿದ್ದಾರೆ. ಅದೇ ಹೆಸರಿನಲ್ಲಿ ನಾಗಭೂಷಣರು 'ವಶಿಷ್ಟರು ಮತ್ತು ವಿಶ್ವಾಮಿತ್ರರು' ಎಂಬ ಕೃತಿಯನ್ನು ನಾಗಭೂಷಣರು ಸಮಕಾಲೀನ ಚಿಂತನೆ ಮತ್ತು ಚರ್ಚೆಗಳನ್ನು ಒಳಗೊಂಡ ಲೇಖನಗಳ ಪುಸ್ತಕವಾಗಿಸಿದ್ದಾರೆ. ಇದರಲ್ಲಿ ದೇಶದ ರಾಜಕೀಯ, ಸಾಂಸ್ಕೃತಿಕ, ಆರ್ಥಿಕ ವಿಚಾರಗಳ ಲೇಖನಗಳಿವೆ. ಅವರ 'ಬಹುಮುಖ' ಕೃತಿಯು ವೈವಿಧ್ಯಮಯ ಲೇಖನಗಳ ಸಂಗ್ರಹ. ಇದರಲ್ಲಿ ಅವರ ಕೌಟುಂಬಿಕ ನೆನಪುಗಳು ಇವೆ. ಅವರ ಸಂದರ್ಶನ ಮತ್ತು ಹಿನ್ನೆಲೆಗಳನ್ನು ಅರಿಯಲು ಇದು ತುಂಬಾ ಸಹಕಾರಿಯಾಗಿದೆ. 'ಆ ಗಣರಾಜ್ಯ, ಈ ಕರ್ನಾಟಕ' ಎಂಬ ಕೃತಿಯು ಸಹ ಒಂದು ಸಂಪಾದಿತ ಕೃತಿಯಾಗಿದ್ದು, ಭಾರತದಲ್ಲಿ ಕರ್ನಾಟಕದ ಹಿರಿಮೆಯನ್ನು ಭಿನ್ನವಾಗಿ ಕಟ್ಟಿಕೊಡುತ್ತದೆ. ಕನ್ನಡ ಮನಸ್ಸು ಮತ್ತು ಇತರ ಲೇಖನಗಳು ಕೃತಿಯಲ್ಲಿ ಸಮಕಾಲೀನವಾದ ಹಲವು ಬರಹಗಳಿವೆ.

ಲೋಹಿಯಾವಾದಿ ಚಳವಳಿಗಳಲ್ಲಿ ಮತ್ತು ಜಾತಿ ವಿರೋಧಿ ಸಮ್ಮೇಳನಗಳಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಿದ್ದರು. ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಅಡಿಯಲ್ಲಿ ಹಲವು ರಚನಾತ್ಮಕ ಕೆಲಸಗಳನ್ನು ನಾಗಭೂಷಣರು ನಿರ್ವಹಿಸಿದ್ದಾರೆ. ಜಾತಿ ವಿರೋಧಿ ಸಮ್ಮೇಳನ, ಪತ್ರಿಕೋದ್ಯಮ, ಪುಸ್ತಕ ಪ್ರಕಟಣೆ, ಸಮಾಜವಾದದ ಅಧ್ಯಯನ ಶಿಬಿರ ಹೀಗೆ ಹಲವು ಕಾರ್ಯಕ್ರಮಗಳಿಗೆ ಈ ಪ್ರತಿಷ್ಠಾನ ಕಾರಣವಾಗಿದೆ.

ಗಾಂಧಿ ಕಥನ': 'ಇಂದಿಗೆ ಬೇಕಾದ ಗಾಂಧಿ' ಎಂಬ ಪುಟ್ಟ ಕೃತಿಯನ್ನು ಈಗಾಗಲೇ ರಚಿಸಿರುವ ನಾಗಭೂಷಣರ ಬೃಹತ್ ಗಾಂಧಿ ಕೃತಿ 'ಗಾಂಧಿ ಕಥನ'. ಇದು ಕನ್ನಡದಲ್ಲಿ ಹೊಸ ದಾಖಲೆಗೆ ಪಾತ್ರವಾಗಿದೆ. ಏಳು ನೂರು ಪುಟಗಳ ಈ ಪುಸ್ತಕವು ಇಪ್ಪತ್ತೈದು ಬಾರಿ ಪುನರ್ ಮುದ್ರಣಗೊಂಡು ಜನಪ್ರಿಯವಾಗಿದೆ. ಗಾಂಧಿಯವರನ್ನು ಹೊಗಳದೆ ಇಲ್ಲವೇ ತೆಗಳದೆ ಸಮಚಿತ್ತದಿಂದ ಅವರನ್ನು ಒಬ್ಬ ವ್ಯಕ್ತಿಯಾಗಿ ಮತ್ತು ಶಕ್ತಿಯಾಗಿ ಈ ಕೃತಿಯಲ್ಲಿ ನಿರೂಪಿಸಲಾಗಿದೆ. ಇದರಲ್ಲಿ ಮೊದಲ ಬಾರಿಗೆ ಗಾಂಧೀಜಿ ಮತ್ತು ಭಾರತೀಯ ಸಮಾಜವಾದಿಗಳ ನಡುವಿನ ಸಂಬಂಧವನ್ನು ವಿವರಿಸಲಾಗಿದೆ..

ಹೀಗೆ ನೂರಕ್ಕೂ ಹೆಚ್ಚು ಕೃತಿಗಳ ಬರಹಗಾರರು ಡಿ.ಎಸ್.ನಾಗಭೂಷಣ. ಅನಾರೋಗ್ಯ ಕಾಡುತ್ತಿದ್ದರೂ ಬರವಣಿಗೆ ನಿಲ್ಲಿಸಿರಲಿಲ್ಲ. ಅಪ್ಪಟ ಲೋಹಿಯಾವಾದಿಯಾದ ಇವರು ಬಿನ್ನಮತದ ಸೊಗಸನ್ನು ಕಾಯ್ದಿಟ್ಟುಕೊಂಡವರು. ಪ್ರಾಮಾಣಿಕತೆ, ಆಧ್ಯಾತ್ಮಿಕತೆ ಸರಳತೆಗೆ ಹಂಬಲಿಸಿದವರು. 2022 ಮೇ 19 ರಂದು ಶಿವಮೊಗ್ಗದಲ್ಲಿ ನಿಧನರಾದರು.

**(ಸದರಿ ಲೇಖನವನ್ನು ಡಿ.ಎಸ್.ನಾಗಭೂಷಣರ ಕೃತಿಗಳು, ರೇಡಿಯೋ ಮತ್ತು ಯೂಟ್ಯೂಬ್ ಸಂದರ್ಶನಗಳನ್ನು ಆಧರಿಸಿ ರಚಿಸಲಾಗಿದೆ.)**

❖❖❖

# ಹೌಸ್ ಆಫ್ ಬರ್ನಾಡಾ ಆಲ್ಬಾ
# ಅನುವಾದಿತ ನಾಟಕದ ಒಂದು ವಿಶ್ಲೇಷಣೆ

**ಡಾ. ಚಂದ್ರಕಲಾ ಹೆಚ್.ಆರ್.**
ಸಹಪ್ರಾಧ್ಯಾಪಕರು ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು

ಸ್ಪ್ಯಾನಿಶ್ ಕವಿ ಗಾರ್ಸಿಯ ಲೋರ್ಕಾ ಬರೆದ ನಾಟಕವನ್ನು ಜೆ.ಎನ್. ಕೌಸಲ ಅವರು ಹಿಂದಿಗೆ ಅನುವಾದಿಸಿದ್ದು ಅದನ್ನು ಚಂದ್ರಕಾಂತ ಕುಸನೂರ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಇದರ ರಂಗಪ್ರಯೋಗವನ್ನು ನೋಡಿ ಬರೆದಿರುವ ವಿಮರ್ಶೆ ಇಲ್ಲಿದೆ. ಹೆಣ್ಣು ಮಕ್ಕಳ ಮೇಲೆ ಹೇರಲ್ಪಟ್ಟ ಮನೆತನದ ಘನತೆ ಗೌರವದ ಹುಸಿ ನಂಬಿಕೆಗಳಿಗೆ ಜೋತುಬಿದ್ದ ತಾಯಿಯೊಬ್ಬಳು ಶಿಸ್ತನ್ನು ಮುಂದಿಟ್ಟುಕೊಂಡು ತನ್ನ ಮಕ್ಕಳನ್ನು ನಿಯಂತ್ರಿಸಲು ಯತ್ನಿಸುವುದು ಈ ನಾಟಕದಲ್ಲಿ ಮುಖ್ಯವಾಗಿ ಕಾಣುವ ಒಂದು ಅಂಶ. ಮನುಷ್ಯ ಸಂಬಂಧಗಳ ಸೂಕ್ಷ್ಮಾತಿಸೂಕ್ಷ್ಮ ಎಳೆಗಳು ಒಂದಕ್ಕೊಂದು ಹೆಣೆದುಕೊಂಡು ಸುಲಭವಾಗಿ ಬಿಡಿಸಿಕೊಳ್ಳಲಾಗದ, ಇದ್ದಕ್ಕಿದ್ದಂತೆ ಗೋಜಲಾಗುವ, ಅರಿವಿಗೆ ಬಾರದಂತೆ ಗಟ್ಟಿಯಾಗುವ, ಎಲ್ಲವೂ ಸರಿಯಾಯಿತು ಎಂದುಕೊಳ್ಳುವಷ್ಟರಲ್ಲಿ ತಟಕ್ಕನೆ ಸಡಿಲವಾಗುವ ಕ್ರಿಯೆ ಈ ನಾಟಕದಲ್ಲಿದೆ. ಸಾಮಾಜಿಕ ಬದುಕಿನಲ್ಲಿ ಶಿಸ್ತನ್ನು ಪಾಲಿಸುವ, ಸಾಂಪ್ರದಾಯಿಕ ಅಂಧ ಕಟ್ಟುಪಾಡುಗಳಿಗೆಲ್ಲ ಒಳಗಾಗುತ್ತ ಭಯ ಮತ್ತು ಆತಂಕದಲ್ಲೇ ಕೊಳೆಯುತ್ತಾ ಒದ್ದಾಡುವ ಮಹಿಳೆಯರ ಸ್ವಭಾವದ ಪ್ರತಿರೂಪದಂತಿದೆ ಈ ನಾಟಕ.

ಈ ನಾಟಕದಲ್ಲಿ ಗಂಡಸಿನ ಅಸ್ತಿತ್ವ ಮತ್ತು ಪ್ರಭಾವವನ್ನು ಎಷ್ಟೋ ದೂರ ಇಟ್ಟಿದ್ದರೂ ಗಂಡಸಿನ ಕಾಮದಾಹದ ಕರಿನೆರಳು ಮತ್ತೆ ಮತ್ತೆ ಆ ಮನೆಯನ್ನು ಕಾಡುತ್ತಲೇ, ಪೀಡಿಸುತ್ತಲೇ ಇರುತ್ತದೆ. ಈ ನಾಟಕ ಪುರುಷನ ಸಾವಿನಿಂದ ಆರಂಭವಾಗಿ ಹೆಣ್ಣಿನ ಸಾವಿನಿಂದ ಕೊನೆಯಾಗುತ್ತದೆ. ಜಾಗತೀಕರಣದ ಸಂದರ್ಭದಲ್ಲಿಯೂ ಸಾಂಪ್ರದಾಯಿಕ ಧಾರ್ಮಿಕ ಕಟ್ಟುಪಾಡುಗಳ ಆವರಣದಲ್ಲಿ ಸಿಲುಕುವ ಸ್ತ್ರೀ ತನ್ನನ್ನು ತಾನೆ ಶೋಷಿಸಿಕೊಳ್ಳುವ ಸಂದರ್ಭಗಳು ಪ್ರಜ್ಞಾವಲಯವನ್ನು ಕಾಡುತ್ತವೆ.

ಒಂದು ಮುಸ್ಲಿಂ ಕುಟುಂಬದ ಈ ಕಥೆಯಲ್ಲಿ ಮುಖ್ಯಪಾತ್ರದಲ್ಲಿ ಕುದುಸಿಯ ಇದ್ದು ಎರಡನೇ ಪತ್ನಿಯಾಗಿ ವಿಧವೆಯಾಗಿರುತ್ತಾಳೆ. ಇವಳ ತಾಯಿ ಅವಿವಾಹಿತೆಯಾಗಿದ್ದು ಕುದುಸಿಯಾಳಿಗೆ ಜನ್ಮ ಕೊಟ್ಟಿರುತ್ತಾಳೆ. ಕುದುಸಿಯಳ ಗಂಡನ ಮೊದಲ ಪತ್ನಿಯ ಮಗಳು ಫಾತಿಮಾ. ಈಕೆ ಅವಿವಾಹಿತೆ. ತಂದೆಯ ಆಸ್ತಿಯಲ್ಲಿ ಇವಳಿಗೂ ಪಾಲಿರುತ್ತದೆ. ಕುದುಸಿಯಾಳಿಗೆ ಮೂವರು ಹೆಣ್ಣು ಮಕ್ಕಳು ಇವರ ಹೆಸರುಗಳು ಮಾಸುಮ, ಮುಮ್ತಾಜ್, ಆಯೇಷಾ. ಕುದುಸಿಯ ನಾಲ್ವರು ಹೆಣ್ಣು ಮಕ್ಕಳ ಪೋಷಕಿ. ಆದರೆ ಹಿರಿಯ ಹೆಂಡತಿಯ ಮಗಳಾದ ಫಾತಿಮಾಳಿಗೆ ಹೆಚ್ಚು ಆಸ್ತಿ ಬಂದಿರುತ್ತದೆ. ಇವಳನ್ನು ಹೆತ್ತ ಮಕ್ಕಳಿಗಿಂತ ಹೆಚ್ಚಾಗಿ ಕುದುಸಿಯ ಪ್ರೀತಿ ಮಾಡುತ್ತಾಳೆ. ಕಾರಣ ತನ್ನ ಅತೃಪ್ತಿಯ ನಡುವೆಯೂ ತಾಯಿ ಇಲ್ಲದ ಫಾತಿಮಾಳಿಗೆ ವಯಸ್ಸಾದರೂ ಮದುವೆಯಾಗದ ಕಾರಣ ಮತ್ತು ಆಸ್ತಿ ಇರುವ ಕಾರಣದಿಂದ ವಿಶೇಷ ಕಾಳಜಿ ವಹಿಸುತ್ತಾಳೆ.

ಈ ಕಥೆಯಲ್ಲಿ ಜೈನಬಿ ಎಂಬ ಪಾತ್ರವಿದೆ. ಈಕೆ ಕುದುಸಿಯ ಮನೆಯ ಕೆಲಸದಾಕೆ. ಈಕೆಗೂ ಕುದುಸಿಯಳ ಗಂಡನಿಗೂ ಅನೈತಿಕ ಸಂಬಂಧವಿದ್ದು ಇದು ಕುದುಸಿಯಗೆ ಗೊತ್ತಿದ್ದರೂ ಗಂಡನನ್ನು ಪ್ರಶ್ನಿಸಲಾಗದೆ ಅನಿವಾರ್ಯವಾಗಿ ಈ ಸಂಬಂಧವನ್ನು ಒಪ್ಪಿಕೊಂಡು ಮೌನವಾಗಿರುತ್ತಾಳೆ. ಪತಿಯ ಮರಣಾನಂತರವೂ ಕೆಲಸದಾಕೆಯನ್ನು ತನ್ನೊಂದಿಗೆ ಇಟ್ಟುಕೊಳ್ಳುವುದು ವಿಶೇಷವೆನಿಸುತ್ತದೆ. ಗಂಡ ಬದುಕಿರುವಾಗ ಭಯದಿಂದ, ಮೌನದಿಂದ ಸಹಿಸಿಕೊಂಡಿದ್ದ ಕುದುಸಿಯ ಅವನ ಮರಣಾನಂತರ ತಾನು ಕುಟುಂಬದ ಯಜಮಾನಿ ತನ್ನ ಮಾತೇ ನಡೆಯಬೇಕು ಎಂದೆಲ್ಲ ಮಕ್ಕಳ ಮೇಲೆ ಹತೋಟಿ ಸಾಧಿಸಲು ಪ್ರಯತ್ನಿಸುತ್ತಾಳೆ. ಅಲ್ಲದೆ ಬಹು ಮುಖ್ಯವಾಗಿ ಪುರುಷನ ನೆರಳನ್ನು ದ್ವೇಷಿಸುವ ಹಂತಕ್ಕೆ ತಲುಪುತ್ತಾಳೆ ಅಲ್ಲದೆ ಪುರುಷನ ನೆರವಿಲ್ಲದೆ ಹೆಣ್ಣು ಮಕ್ಕಳು ಬದುಕಬೇಕೆಂಬ ಆಶಯವನ್ನು ಇಡೀ ಕಥೆಯುದ್ಧಕ್ಕೂ ಬಹಳ ಗಟ್ಟಿಯಾಗಿ ಪ್ರತಿಪಾದಿಸುತ್ತಾಳೆ. ಆ ಮೂಲಕ ತಾನು ಪುರುಷನೆಂದು ಬೀಗುವ ಪರಿಯಲ್ಲಿ ಹೆಣ್ಣು ಗಂಡಾಗುವ ತನ್ನೊಳಗಿನ ಆಸೆಯನ್ನು ತೀರಿಸಿಕೊಳ್ಳುತ್ತಾಳೆ. ಇಲ್ಲಿ ಕುದುಸಿಯಳಂತೆ ಇವಳ ತಾಯಿಯು ಹುಚ್ಚಿಯಂತೆ ಒಮ್ಮೊಮ್ಮೆ ಗಂಡಿನ ಪ್ರೀತಿಗಾಗಿ ಹಾತೊರೆಯುವ ಮನಸ್ಥಿತಿಯಲ್ಲಿರುವುದು ಅವಳೊಳಗಿನ ಪ್ರೇಮದ ನಶೆ ಇನ್ನೂ ಇಳಿದಿಲ್ಲವೆಂಬಂತೆ ಕಾಣಿಸುತ್ತದೆ. ಆದರೆ ಕುದುಸಿಯ ಮಾತ್ರ ತನ್ನ ಹೆಣ್ಣು ಮಕ್ಕಳು ಯಾರನ್ನು ಪ್ರೀತಿ ಮಾಡಬಾರದು ಮತ್ತು ಹೆಚ್ಚಾಗಿ ನಗಬಾರದು ಎಂದೇ ನಾಲ್ಕು ಗೋಡೆಗಳ ನಡುವೆ ಹೆಣ್ಣುಮಕ್ಕಳನ್ನು ಬೆಳೆಸುವ ರೀತಿ ಅವಳೊಳಗಿನ ನೋವನ್ನು ಹತಾಶೆಯನ್ನು ಬಿಂಬಿಸುತ್ತದೆ.

ಇಲ್ಲಿ ಕುದುಸಿಯ ರಕ್ಕಸಿಯಂತೆ ಕಂಡರೂ ಅತೃಪ್ತಳಂತೆ ವರ್ತಿಸಿದರು ಅವಳ ಎದೆಯಲ್ಲೊಂದು ಧರ್ಮವಿದೆ ನ್ಯಾಯವಿದೆ. ಪತಿಯ ಮೊದಲ ಹೆಂಡತಿಯ ಮಗಳಾದ ಫಾತಿಮಾಳಿಗೆ ವಯಸ್ಸಾಗುತ್ತಿರುವ ಕಾರಣದಿಂದ ಅವಳಿಗೆ ಮದುವೆಯಾಗದ ಹೊರತು ತನ್ನ ಮಕ್ಕಳಿಗೆ ಮದುವೆ ಮಾಡಬಾರದೆಂದು ತೀರ್ಮಾನಿಸಿರುತ್ತಾಳೆ ಇದು ಅವಳು ಮಹಾಪೋಷಕಿಯಾಗಿ ತೆಗೆದುಕೊಳ್ಳುವ ತೀರ್ಮಾನದಲ್ಲೊಂದು ಧರ್ಮವಿದೆ. ಕುದುಸಿಯ ತನ್ನ ಗಂಡನ ಮೊದಲನೇ ಪತ್ನಿಯ ಮಗಳಾದ ಫಾತಿಮಾಳಿಗೆ ನೂರುದ್ದೀನ್ ಎಂಬ ಹುಡುಗನನ್ನು ಹುಡುಕಿ ಮದುವೆ ನಿಶ್ಚಯ ಮಾಡುತ್ತಾಳೆ. ನೂರುದ್ದಿನ್ ಫಾತಿಮಾಳ ಆಸ್ತಿಗಾಗಿ ಹಂಬಲಿಸಿ ಮದುವೆಯಾಗುವ ತೀರ್ಮಾನಕ್ಕೆ ಬಂದರೆ, ಇನ್ನೊಂದು ಕಡೆ ತನ್ನ ತಡವಯಸಿನಲ್ಲಿ ಮದುವೆಯಾಗುತ್ತಿರುವ ಫಾತಿಮಾ ತನ್ನ ಕನಸುಗಳಿಗೆ ಬಣ್ಣ ಬಳಿದು ಆಕಾಶದಲ್ಲಿ ವಿಹರಿಸುವ ಹಕ್ಕಿಯಂತೆ ಹಾರಾಡುತ್ತಾಳೆ. ಗಂಡಿಗಾಗಿ ಹಪಹಪಿಸುವ ಫಾತಿಮಾ ತನ್ನ ಎದುರಿಗೆ ನಡೆಯುತ್ತಿರುವ ನೂರುದ್ದಿನನ ವಂಚನೆಯನ್ನು ಅರಿಯುವುದಿಲ್ಲ. ಗಂಡಿನ ಮೋಹಪಾಶದಲ್ಲಿ ಸಿಲುಕುವವಳಿಗೆ ಮುಂದಿನ ಅಪಾಯಗಳ ಅರಿವಿಲ್ಲ.

ಕುದುಸಿಯಾಳ ಮಕ್ಕಳಾದ ಮಾಸುಮ, ಮುಮ್ತಾಜ್ ಹಾಗೂ ಆಯೇಶ ಪರಸ್ಪರ ಒಬ್ಬರಿಗೊಬ್ಬರು ತಿಳಿಯದಂತೆ ನೂರುದ್ದೀನನ್ನು ಪ್ರೀತಿಸುತ್ತಿರುತ್ತಾರೆ. ಇಲ್ಲಿ ಕುತೂಹಲಕಾರಿ ಸಂಗತಿ ಎಂದರೆ ನೂರುದ್ದಿನ್ ಈ ಎಲ್ಲ ಹೆಣ್ಣು ಮಕ್ಕಳಲ್ಲೂ ಪ್ರೀತಿ ಹುಟ್ಟುವಂತೆ ಮತ್ತು ವಿವಾಹದ ಭರವಸೆಯನ್ನು ಕೊಡುವ ಮೂಲಕ ಪ್ರೀತಿಯನ್ನು ಹಂಚುವ ಅಥವಾ ಮೋಸದ ಸಾಧನವಾಗಿ ಬಳಸುವ ತಂತ್ರಗಾರಿಕೆ ಈ ನಾಟಕದಲ್ಲಿ

ವಿಶಿಷ್ಟವಾಗಿದೆ. ಒಬ್ಬ ಗಂಡಿಗಾಗಿ ಹಲವು ಹೆಣ್ಣುಗಳ ತಾಕಲಾಟ ಪ್ರೇಮದ, ಕಾಮದ ವೈಕಲ್ಯದಂತೆ ಕಾಣುತ್ತದೆ.

ಕೃಶ ದೇಹದ, ವಯಸ್ಸಾಗಿರುವ ಫಾತಿಮಾಳನ್ನು ನೂರುದ್ದೀನ್ ತಿರಸ್ಕರಿಸುತ್ತಾನೆ. ತನ್ನನ್ನೇ ಮದುವೆಯಾಗುತ್ತಾನೆಂದು ಆಯೇಷಾ ಭ್ರಮೆಯಲ್ಲಿ ತೇಲುತ್ತಿರುತ್ತಾಳೆ. ಕುದುಸಿಯಳ ಶಿಸ್ತಿನ ಕೋಟೆಯಲ್ಲಿ ಯಾವ ಪುರುಷನ ಸುಳಿವು ಇರಲಿಲ್ಲ. ಆದರೆ ಇದರ ವಾಸನೆ ಕುದುಸಿಯ ಮತ್ತು ಜೈನಬಿಗೆ ತಿಳಿದು ಕಂಗಾಲಾಗುತ್ತಾರೆ. ಒಮ್ಮೆ ಆಯೇಷಾ ಗರ್ಭಿಣಿಯಾಗಿರುವ ವಿಚಾರ ತಿಳಿದು ಹತಾಶಳಾಗುತ್ತಲೇ ಕೂಗಿಕೊಳ್ಳುತ್ತಾಳೆ. ತನ್ನ ಶಿಸ್ತಿನ ಕೋಟೆಯನ್ನು ಭೇಧಿಸಿದವನು ಯಾರೆಂದು ಕಂಗಲಾಗಿರುವಾಗಲೇ ಕೊಠಡಿಯಲ್ಲಿ ಯಾರದೋ ಪುರುಷನ ಕಳ್ಳಾಟದ ಸುಳಿವು ಸಿಕ್ಕಿ ಆತನನ್ನು ಅಟ್ಟಾಡಿಸಿಕೊಂಡು ಹೋಗುವ ಕುದುಸಿಯಳಿಗೆ ನೂರುದ್ದೀನ್‌ನ ಮೋಸ ಗೊತ್ತಾಗುತ್ತದೆ. ಆದರೆ ಅಲ್ಲಿಂದ ನೂರುದ್ದೀನ್ ಪರಾರಿಯಾಗುತ್ತಾನೆ. ರೋಷಾವೇಶದಲ್ಲಿ ಕುದುಸಿಯ ಒಳಗೆ ಬಂದರೆ ಅಲ್ಲಿ ಆಯೇಷ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ. ಕುದುಸಿಯ ಈ ಸಂದರ್ಭದಲ್ಲಿಯೂ ತನ್ನ ಮಗಳು ಕುಮಾರಿಯಾಗಿಯೇ ಸತ್ತಿದ್ದಾಳೆಂದು ಕೂಗುತ್ತಾಳೆ. ಮಗಳು ಸತ್ತರೂ ಕುಮಾರಿಯಾಗಿ ಸತ್ತಿದ್ದಾಳೆಂದು ಕಿರುಚುವ ಮೂಲಕ ನಾಟಕ ಕೊನೆಯಾಗುತ್ತದೆ.

ಇಲ್ಲಿ ಹೆಣ್ಣಿನ ಆಕ್ರೋಶಗಳಿಗೆ ಮೂಲ ಕಾರಣ ಪ್ರೀತಿಯ ಕೊರತೆ ಮತ್ತು ಪ್ರೀತಿಯ ವಂಚನೆ. ಇಡೀ ಜಗತ್ತು ಚಲನಶೀಲವಾಗಿರುವುದೇ ತೃಪ್ತ ಮತ್ತು ಅತೃಪ್ತ ಮನಸ್ಸಿನ ವಿಕಾರಗಳಿಂದ. ಈ ನಾಟಕ ಈ ಸತ್ಯಗಳನ್ನು ಮನೋಜ್ಞವಾಗಿಸಿದೆ. ಈ ನಾಟಕದಲ್ಲಿನ ತಿರುವುಗಳಿಗೆ ಬಡತನ, ಆಸ್ತಿಯ ಮೇಲೆ ಆಸೆ ಪುರುಷ ಪ್ರೀತಿಗಾಗಿ ಹಾತೊರೆಯುವುದೇ ಕಾರಣಗಳಾಗಿವೆ. ಧರ್ಮಾಧರ್ಮಗಳಾಚೆಗೂ ಪ್ರೇಮ ಮತ್ತು ಕಾಮ ಒಮ್ಮುಖತೆಯೆಡೆಗೆ ಸಾಗುವುದೆಂಬ ಸತ್ಯ ಸಾರ್ವಕಾಲಿಕವಾದುದು.

**ಆಕರ**

1. ಚಂದ್ರಕಾಂತ ಕುಸನೂರ ಅನುವಾದಿತ ನಾಟಕದ ರಂಗ ಪ್ರಯೋಗ

❖❖❖

# ಲಿಂಗಘನ ಘಟ್ಟಿಯಾದ ಶರಣ ಘಟ್ಟಿವಾಳಯ್ಯ

**ಡಾ. ಗಿರೀಶ ದೇಸೂರ**
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಧಾರವಾಡ-580001

ಕನ್ನಡ ನಾಡಿನಲ್ಲಿ 12ನೆಯ ಶತಮಾನದಲ್ಲಿ ನಡೆದ ಸಾಮಾಜಿಕ ಹಾಗೂ ಧಾರ್ಮಿಕ ಕ್ರಾಂತಿಯಲ್ಲಿ ಭಾಗಿಯಾಗಿ ತನ್ನದೇ ಆದ ವಿಶಿಷ್ಟ ಕೊಡುಗೆ ನೀಡಿರುವ ದಿಟ್ಟ ಶರಣ ಘಟ್ಟಿವಾಳಯ್ಯ. ಶರಣ ಸಮುದಾಯದ ಹಿರಿಯ ಅನುಭಾವಿ ಚೇತನ ಹಾಗೂ ವಚನಕಾರ.

ಘಟ್ಟಿವಾಳಯ್ಯ ಖಂಡತುಂಡವಾದಿ; ಸ್ಪಷ್ಟವಾದಿ; ಅನುಭಾವಿ, ಶರಣಶ್ರೇಷ್ಠ. ಈತ ಸ್ವಧರ್ಮದಲ್ಲಿ ಕಾಣುವ ಗುಣದೋಷಗಳನ್ನು ಸಮದೃಷ್ಟಿಯಿಂದ ಕಂಡುಕೊಳ್ಳುವ ಸಾಮರ್ಥ್ಯ ಹೊಂದಿದವನು. ಘಟ್ಟಿವಾಳಯ್ಯನನ್ನು ಅನೇಕ ಜನ ಶರಣರು ಲಿಂಗಘನ ಘಟ್ಟಿಯಾದ ಘಟ್ಟಿವಾಳಯ್ಯ ಎಂದು ಕರೆದಿರುವುದು ಹೆಚ್ಚು ಅರ್ಥಪೂರ್ಣವೆನಿಸುತ್ತದೆ.

ಘಟ್ಟಿವಾಳಯ್ಯ 'ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ' ಎಂಬ ಅಂಕಿತ ಇಟ್ಟುಕೊಂಡು 147 ವಚನಗಳನ್ನು ಬರೆದಿದ್ದಾನೆ. ಅದೃಶ್ಯ ಕವಿಯ ಪ್ರೌಢರಾಯನ ಕಾವ್ಯ, ಶಿವಶರಣ ಕಥಾರತ್ನಕೋಶ, ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ, ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆಗಳಲ್ಲಿ ಘಟ್ಟಿವಾಳಯ್ಯನ ಜೀವನ ವೃತ್ತಾಂತಕ್ಕೆ ಸಂಬಂಧಿಸಿದ ಕೆಲವು ಅಂಶಗಳು ಇವೆ. ಸಮಕಾಲೀನಶರಣರ ವಚನಗಳಲ್ಲಿಯೂ ಘಟ್ಟಿವಾಳಯ್ಯನ ಸ್ತುತಿ, ಗುಣಶೀಲಗಳ ವಿವರಣೆ ಮೊದಲಾದವುಗಳ ಪ್ರಸ್ತಾಪ ಇದೆ. ಕವಿಚರಿತೆಕಾರರು ಈತನ ಕಾಲ ಕ್ರಿ.ಶ.ಸುಮಾರು 1160 ಎಂದು ಅಭಿಪ್ರಾಯಪಟ್ಟಿದ್ದಾರೆ.

ಇದುವರೆಗೂ ದೊರೆತ ಆಕರಗಳಲ್ಲಿ ಘಟ್ಟಿವಾಳಯ್ಯನ ತಂದೆ-ತಾಯಿಗಳ ಕುರಿತು, ಆತನ ಊರನ್ನು ಕುರಿತು ಎಲ್ಲಿಯೂ ಉಲ್ಲೇಖವಾಗಿರುವುದು ಕಂಡುಬಂದಿಲ್ಲ. ಆತನು ಶರಣರ ಸಮಕಾಲೀನನಾಗಿದ್ದು, ನರ್ತನ ಕಾಯಕವನ್ನು ಕೈಗೊಂಡಿದ್ದನೆಂದು ಕೆಲವು ಕೃತಿಗಳಲ್ಲಿ ಕಂಡುಬರುತ್ತದೆ.ಆದಯ್ಯ, ಹಡಪದ ರೇಚಣ್ಣ, ಪುರದ ನಾಗಣ್ಣ ಮೊದಲಾದ ವಚನಕಾರರು ಈತನನ್ನು'ಘಟ್ಟಿವಾಳ ಮುದ್ದಣ್ಣ', 'ಘಟ್ಟಿವಾಳ ಮುದ್ದಯ್ಯ' ಎಂದು ಹೆಸರಿಸಿದ್ದಾರೆ. ಈತನ ವಚನಗಳಲ್ಲಿ ಪ್ರಭುದೇವರ, ಬಸವಣ್ಣನವರ ಹೆಸರು ಹೆಚ್ಚು ಪ್ರಸ್ತಾಪವಾಗಿದೆ. ಅಲ್ಲದೆ, ಅನೇಕ ಶರಣ-ಶರಣೆಯರು ಈತನ ಮಹಿಮಾನ್ವಿತ ವ್ಯಕ್ತಿತ್ವವನ್ನು ತಮ್ಮ ವಚನಗಳ ಮೂಲಕ ವ್ಯಕ್ತಪಡಿಸಿದ್ದಾರೆ.

ಈತನ ಕಾಯಕ ಮದ್ದಳೆ ನುಡಿಸುತ್ತ ನರ್ತನ ಮಾಡುವದು. ಮದ್ದಳೆ ನುಡಿಸುತ್ತ, ನರ್ತಿಸುತ್ತ ಶಿವಾನುಭವವನ್ನು ಸಾರಿ ಹೇಳುತ್ತಾ ವೈರಾಗ್ಯವೇ ಗಟ್ಟಿಗೊಂಡ ಘಟ್ಟಿವಾಳ ಮುದ್ದಣ್ಣನು ದೊರೆತಷ್ಟರಲ್ಲಿಯೇ ತೃಪ್ತಿಪಡೆದು ದಾಸೋಹ ನಡೆಸುತ್ತಿದ್ದ. ಈತ ಕಡುತರವಾದ ಆಚರಣೆಗಳನ್ನು ಪಾಲಿಸುತ್ತಿದ್ದರಿಂದ ಈತನಿಗೆ 'ಘಟ್ಟಿವಾಳಯ್ಯ' ಎಂದು ಹೆಸರಾಯಿತು ಈತನ ಮಡದಿ ಸಂಪತ್ತಿಗೆ, ಸುಖಭೋಗ, ಉಲ್ಲಾಸ, ವಿಲಾಸಗಳಿಗೆ ಮನಸೋತಿದ್ದರಿಂದ ಅವಳು ಈತನ ಈ ಆಧ್ಯಾತ್ಮ ವೃತ್ತಿಯಿಂದ ಬೇಸರ ಹೊಂದಿ ಹದಿಬದೆಯ ಹಾದಿಯಿಂದ ಜಾರಿ ಜಾರೆಯಾದಳು. ಇವಳ ಗೊಡವೆ ತನಗೆ ಬೇಡವೆಂದು ತೀರ್ಮಾನಿಸಿ ಘಟ್ಟಿವಾಳಯ್ಯ ತನ್ನಲ್ಲಿಯೇ ನಿಷ್ಪ್ರಪಂಚಿಯಾದನು.

ಬಸವಣ್ಣನವರೇ ಮೊದಲಾದ ಮಹಾನುಭಾವಿ ಶರಣರಿದ್ದ ಕಲ್ಯಾಣಕ್ಕೆ ನಡೆಯುತ್ತಾನೆ. ಕೇವಲ ಕಾಮಾತುರತೆಗೆ, ಭೋಗಾಭಿಲಾಷೆಗೆ ಮುಖ ಮಾಡಿದ್ದ ಹೆಂಡತಿಯನ್ನು ತೊರೆದು ಘಟ್ಟಿವಾಳಯ್ಯ ವೈರಾಗ್ಯಪರನಾಗಿ ಕಾಲಜ್ಞಾನವನ್ನು ಸಾರುತ್ತ ಕಲ್ಯಾಣಕ್ಕೆ ಬಂದ ಸಂಗತಿಯನ್ನು ಅದೃಶ್ಯ ಕವಿಯ ಪ್ರೌಢರಾಯನ ಕಾವ್ಯ ಹೇಳುತ್ತದೆ.

ಕ್ರಾಂತ ದೃಷ್ಟಿಯುಳ್ಳವನೂ, ಉನ್ನತ ಧ್ಯೆಯ ಸಾಧನೆಗಾಗಿ ಜೀವಿಸ ಬಯಸುವ ಹಂಬಲವುಳ್ಳವನೂ ಆದ ಘಟ್ಟಿವಾಳಯ್ಯ ಸಂಸಾರಿಕ ಗೊಂದಲಗಳಿಂದ ವಿಚಲಿತನಾಗಲಿಲ್ಲ. ಬದುಕನ್ನು ಧನಾತ್ಮಕ ದೃಷ್ಟಿಯಿಂದ ನೋಡಿದ. ವ್ಯಕ್ತಿಯ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಆಂದೋಲನ ಬಸವಣ್ಣನವರ ನೇತೃತ್ವದಲ್ಲಿ ಕಲ್ಯಾಣದಲ್ಲಿ ನಡೆದಿತ್ತು. ನೊಂದ ಬದುಕಿಗೆ ಸಾಂತ್ವನ ನೀಡಿ ಮನಸ್ಸಿಗೆ ಅನುಭಾವದ ತಂಪನ್ನೆರೆಯುವ ಶರಣರ ದಿವ್ಯಜೀವನ ಘಟ್ಟಿವಾಳಯ್ಯನನ್ನು ಆಕರ್ಷಿಸಿತು. ಶರಣರ ಸಾಮಿಪ್ಯದಿಂದ ಉನ್ನತ ಜೀವನ ಸಾಗಿಸಬೇಕೆಂಬ ಧ್ಯೇಯದಿಂದ ಉತ್ಸುಕನಾಗಿ ಕಲ್ಯಾಣದತ್ತ ಸಾಗಿದ ಘಟ್ಟಿವಾಳಯ್ಯ. ಆದರೆ, ಘಟ್ಟಿವಾಳಯ್ಯ ಕಲ್ಯಾಣಕ್ಕೆ ಬಂದಾಗ ಆತ ಅಲ್ಲಿ ಕಂಡದ್ದಾದರೂ ಏನು? ಬಸವಣ್ಣನವರ ಮಹಾಮನೆಯ ಮುಂದೆ ದಾಸೋಹದ ಆಸೆಗಾಗಿ ನೆರೆದಿದ್ದ ಕಳ್ಳ ಜಂಗಮರನ್ನು. ಅವರನ್ನು ಕಂಡೊಡನೆಯೇ ಅಪಾದಮಸ್ತಕದಿಂದ ಉರಿಯುತ್ತಾನೆ ಘಟ್ಟಿವಾಳ ಮುದ್ದಣ್ಣ. ಕಳ್ಳ ಜಂಗಮದ ಹುಸಿವೇಷವನ್ನು ಕಂಡು ಸಹಿಸದೇ 'ಬಸವಣ್ಣನ ಮನೆಯ ಮುಸುರೆ ಗಡಿಗೆಗೆ ಇವರೇ ನೊಣಗಳು' ಎಂದು ಖಂಡಿತವಾಗಿ ನುಡಿಯುತ್ತಾನೆ. ಆಗ, ಹಲವಾರು ವೇಷಧಾರಿ ಜಂಗಮರು ಕೋಪದಿಂದ ಘಟ್ಟಿವಾಳನನ್ನು ಬಡಿದು, ನೋಯಿಸಿ, ಆತನ ಇಷ್ಟಲಿಂಗವನ್ನು ಕಿತ್ತುಕೊಂಡರು. ಆತನ ವಚನವೊಂದನ್ನು ಗಮನಿಸಿದರೆ ಇದು ಸತ್ಯ ಎಂದು ಸ್ಪಷ್ಟವಾಗುತ್ತದೆ.

**"ಅಂಗವ ಬಂಧಿಸಿದಲ್ಲಿ ನಾನೊಂದುದಿಲ್ಲ**
**ಅದು ಮಲದೇಹ, ಮಾಯೆಯ ಸೋಮ್ಮು**
**ಲಿಂಗವ ತೆಗೆಹೆನೆಂದೆಡೆ ಅದು ಜಗದ ಕುರುಹು"**

ಘಟ್ಟಿವಾಳಯ್ಯ ಕಲ್ಯಾಣಕ್ಕೆ ಬಂದಾಗ ಸಮಯ (ಅಂದರೆ ಜಂಗಮ ಸಮೂಹ) ಮತ್ತು ಘಟ್ಟಿವಾಳಯ್ಯರ ಮಧ್ಯೆ ನಡೆದ ಚರ್ಚೆ, ವಾದ, ಸಂಭಾಷಣೆಗಳ ಪ್ರಸಂಗವನ್ನು ಅದೃಶ್ಯ ಕವಿಯ ಪ್ರೌಢರಾಯನ ಕಾವ್ಯ, ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆಗಳು ಕಟ್ಟಿಕೊಡುತ್ತವೆ. 'ಸಮಯ' ಕ್ಕೂ ಘಟ್ಟಿವಾಳನಿಗೂ ನಡೆದ ಸಂಭಾಷಣೆ, ಚರ್ಚೆ ಅಪರೂಪವಾಗಿದೆ. ಘಟ್ಟಿವಾಳಯ್ಯ ತನ್ನ ಹರಿತವಾದ ಮಾತಿನಿಂದ ಜಂಗಮ ಸಮೂಹವನ್ನು ಅಗ್ನಿಪರೀಕ್ಷೆಗೆ ಒಡ್ಡುತ್ತಾನೆ.

ದೇಹವನ್ನು, ಅದರೊಳಗಿರುವ ಆತ್ಮನನ್ನು ಅರಿತೆವೆಂದು ಹೇಳುವ ಈ ವೇಷಜಂಗಮರು ವಿವೇಕದಪ್ಪಿ ಹೋದರಲ್ಲಾ. ಹೊನ್ನು, ಹೆಣ್ಣು, ಮಣ್ಣಿಗಾಗಿ ಕಚ್ಚಾಡುತ್ತಿರುವಿರಲ್ಲಾ. ಬಸವಣ್ಣನ ದಾಸೋಹದ ಬಾಗಿಲಿಗೆ ಕಟ್ಟಿಸಿಕೊಂಡು ಬಂಧಿತರಾಗಿ ನೊಂದ ನಿಮಗೆಲ್ಲಿಯ ಲಿಂಗ? ನಿಮ್ಮಂಥ ಆಶಾಪಾಶದಿಂದ ಬಂಧಿತರಾದ ಜಂಗಮರಿಗೆ 'ಚಿಕ್ಕಯ್ಯಪ್ರಿಯ ಸಿದ್ಧಲಿಂಗ! ಇಲ್ಲ ಇಲ್ಲ' ಎನ್ನುತ್ತಾನೆ ಘಟ್ಟಿವಾಳಯ್ಯ.

ಹೀಗೆ ಘಟ್ಟಿವಾಳಯ್ಯನು ತನ್ನ ಕರ್ಕಶವಾದ ನುಡಿಯಿಂದ ಆ ಜಂಗಮ ಸಮೂಹವನ್ನು ವಿಡಂಬಿಸುತ್ತಿದ್ದಾಗ ಆ ಜಂಗಮದೇವರುಗಳು ಘಟ್ಟಿವಾಳಯ್ಯನನ್ನು ನೋಯಿಸಿ ಅವನ ಇಷ್ಟಲಿಂಗವನ್ನು ಕಿತ್ತುಕೊಳ್ಳುತ್ತಾರೆ.

**"ವೇಷಧಾರಿಗಳು ಘಾಸಿಮಾಡಿದರೆನ್ನುವ ಜಗದೀಶ ನೀನೆ ಬಲ್ಲೆ**
**ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ."**

ಇಲ್ಲಿ ಘಟ್ಟಿವಾಳಯ್ಯ ಜಂಗಮರನ್ನು ಗೋವುಗಳ ಹಿಂಡಿಗೆ ಹೋಲಿಸುತ್ತಾನೆ. ಹಸಿದು ನಾನು ಬೇಡಿದರೆ ಗುಂಪುಕಟ್ಟಿ ಬಡಿದರು. ಸಾಕಾರ ಲಿಂಗವೇ ನೀನೂ ಧಾತುಗೆಟ್ಟೆಯಲ್ಲಾ ಎಂದು ತನ್ನ ಲಿಂಗವನ್ನೇ ಪ್ರಶ್ನಿಸುತ್ತಾನೆ.

ಘಟ್ಟಿವಾಳಯ್ಯ ತನ್ನ ಲಿಂಗವನ್ನು ತೆಗೆದುಕೊಂಡು ತನ್ನನ್ನು ಜಂಗಮರ ಗುಂಪು ಬಡಿದರೂ ನೊಂದುಕೊಳ್ಳುವುದಿಲ್ಲ. ಆತನಿಗೆ ತನ್ನ ಇಷ್ಟಲಿಂಗ ಅಗಲಿತಲ್ಲ ಎಂಬ ಭಯವೂ ಇಲ್ಲ. ಜಂಗಮರನ್ನು ಇನ್ನಷ್ಟು ಬಯ್ದು ಭಂಗಿಸುತ್ತಾನೆ. ಹಿಂಸೆ, ಕ್ರೂರತೆ, ಕಠೋರತೆ, ಕರ್ಕಶಗಳು, ಆಣವ-ಮಾಯಾ-ಕಾರ್ಮಿಕ ಮಲಗಳನ್ನುಳ್ಳ ಮಲದೇಹಿಗಳಿಗಲ್ಲದೆ, ಇವುಗಳನ್ನು ಪರಿಹರಿಸಿಕೊಂಡ ನಿರ್ಮಲದೇಹಿಗಳಿಗುಂಟೆ? ಎಂದು ಪ್ರಶ್ನಿಸುತ್ತಾನೆ. ಸಮಯ (ಜಂಗಮ ಸಮೂಹ) ಸಮುದ್ರದಂತೆ ಎಲ್ಲವನ್ನೂ ತನ್ನೊಳಗೆ ಇಂಬಿಟ್ಟುಕೊಳ್ಳುವಂಥ ವಿಶಾಲ ಮನಸ್ಸನ್ನು ಹೊಂದಿರಬೇಕು. ಇವರಿಗೆ ಆ ಪರಶಿವನ ವೇಷವಿದೆಯೇ ಹೊರತು ಆತನ ನಿಜರೂಪವಿಲ್ಲ. ಇಂಥವರಿಗೆ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎನ್ನುತ್ತಾನೆ.

ಘಟ್ಟಿವಾಳಯ್ಯನ ವಿಡಂಬನೆಯ ಈ ಮಾತುಗಳು ಸ್ವಲ್ಪ ಕಟುವಾಯಿತು ಅನ್ನಿಸಿರಬೇಕು ಇತರ ಶರಣರಿಗೆ. ಆಗ, ಪ್ರಭುದೇವರು 'ಸಮಯ' ಮತ್ತು ಘಟ್ಟಿವಾಳಯ್ಯಗಳಲ್ಲಿ ನಡೆದ ಈ ವಾಗ್ವಾದವನ್ನು ಗಮನಿಸಿ, ಮಹಾಜ್ಞಾನಿಗಳಿಗೆ ಸಮಯ ಅನ್ಯವಲ್ಲ, ಬಿರುನುಡಿ ಸಲ್ಲದೆಂದು ಘಟ್ಟಿವಾಳಯ್ಯನಿಗೆ ಬುದ್ಧಿ ಹೇಳಿ ಆತನನ್ನು ಶಾಂತಗೊಳಿಸಲು ಹವಣಿಸುತ್ತಾರೆ.

**"ಅರಿವ ಬಲ್ಲೆನೆಂದು ಬಿರುನುಡಿಯ ನುಡಿವರೆ?**

---------------------

**ಗೋಹೇಶ್ವಲಿಂಗಕ್ಕೆ ತಥ್ಯ-ಮಿಥ್ಯವಿಲ್ಲ ಘಟ್ಟಿವಾಳಯ್ಯ"**

ಅರಿವನ್ನು ಅರಿತಿಹನೆಂದು ಇಂಥ ಒರಟು ಮಾತುಗಳನ್ನು ಆಡುವುದೆ? 'ಸಮಯ'ದಲ್ಲಿ ಸಮಾಜದಲ್ಲಿ ಗುಣದೋಷಗಳಿರಬಹುದು. ಆದರೆ, ಹಿರಿ-ಕಿರಿಯದನ್ನು ಸಮಗಾಣುವ ಬ್ರಹ್ಮಭಾವದಲ್ಲಿ 'ತಥ್ಯಮಿಥ್ಯ' ಎಂಬ ಉಭಯಭಾವ ಮೂಡುವುದು ಹೇಗೆ? ಏನಿದ್ದರೂ ವ್ಯಕ್ತಿಗೆ 'ಸಮಯ'ವೆಂಬುದು ಒಂದು ಸಂಪತ್ತು. ಅದಕ್ಕೆ ನೀನು ಹೊರತಲ್ಲ. ನಿನಗೆ ಅದು ಹೊರತಲ್ಲ ಎನ್ನುತ್ತಾರೆ. ಇನ್ನೂ ಮುಂದುವರೆದು ಸರ್ವಾಂಗವೂ ಗುಹೇಶ್ವರನ ನಿಜರೂಪವನ್ನು ಹೊಂದಿದ್ದರೆ ಅಲ್ಲಿ ತಥ್ಯ, ಮಿಥ್ಯವಿಲ್ಲ ಘಟ್ಟಿವಾಳಯ್ಯ ಎಂದು ಹೇಳುತ್ತಾರೆ ಪ್ರಭುದೇವರು.

ಹೀಗೆ ಪ್ರಭುದೇವರು ನಿರೂಪಿಸಿದಾಗ ಘಟ್ಟಿವಾಳಯ್ಯ ಉತ್ತರಿಸುತ್ತಾ- ನನಗೆ ಹೆಚ್ಚು ಕಡಿಮೆಯೆಂಬ ತಥ್ಯ-ಮಿಥ್ಯಭಾವವಿಲ್ಲ. ಚಿನ್ನವನ್ನು ಕೊಳ್ಳುವಾಗ ಅದನ್ನು ಒರೆಗೆ ಹಚ್ಚಿ ಅದು ಚೆನ್ನಾಗಿದ್ದರೆ ತೆಗೆದುಕೊಳ್ಳುತ್ತಾರೆ. ಇಲ್ಲವಾದರೆ, ಇಲ್ಲ. ಅದರಂತೆಯೇ ಜಂಗಮರನ್ನು ಒರೆಗೆ ಹಚ್ಚಿ ಒಳಹೊರಗೆ ಪರೀಕ್ಷಿಸುತ್ತಿದ್ದೆನೆಂದು ಹೇಳುತ್ತಾನೆ.

ಶಿವಗಣ ಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆಯಲ್ಲಿ ಇಲ್ಲದೇ ಇರುವ ಅನೇಕ ಪ್ರಸಂಗಗಳನ್ನು ಸಿದ್ಧವೀರಣ್ಣೊಡೆಯರು ತಮ್ಮ ಸಂಪಾದನೆಯಲ್ಲಿ ಸೃಷ್ಟಿಸಿದ್ದಾರೆ. ಇವುಗಳಲ್ಲಿ ಘಟ್ಟಿವಾಳಯ್ಯನ ಸಂಪಾದನೆಯೂ ಒಂದು. ಬಹುಶಃ

ಸಿದ್ಧವೀರಣ್ಣೊಡೆಯನ ಕಾಲದಲ್ಲಿ ಶರಣಧರ್ಮದ ಸಾಂಸ್ಥೀಕರಣ ಕ್ರಿಯೆ ಭರದಿಂದ ಸಾಗಿತ್ತೆಂಬುದಕ್ಕೆ ಅನೇಕ ಹೊಳಹುಗಳು ಈತನ ಸಂಪಾದನೆಯಲ್ಲಿ ದೊರೆಯುತ್ತವೆ. ಘಟ್ಟಿವಾಳಯ್ಯನ ಸಂಪಾದನೆಯಲ್ಲಿ ಘಟ್ಟಿವಾಳಯ್ಯ – ಪ್ರಭುದೇವರ ನಡುವೆ ನಡೆಯುವ ಸಂಭಾಷಣೆಯಲ್ಲಿ 'ಸಮಯ'ದ ಅಗತ್ಯತೆಯ ಕುರಿತಾದ ಚರ್ಚೆ ನಡೆದಿದೆ. ಇಲ್ಲಿ ಕೆಲವು ವಚನಗಳು ಪ್ರಕ್ಷಿಪ್ತದಿಂದ ಸೇರಿರಬಹುದಾಗಿವೆ.

ಪ್ರಭುದೇವರು, ಸಿದ್ಧರಾಮಯ್ಯ, ಚೆನ್ನಬಸವಣ್ಣ ಮುಂತಾದ ಶರಣರೆಲ್ಲಾ ನೋಡು–ನೋಡುತ್ತಿರುವಂತೆ ಸಮಯದವರು ಕೊಟ್ಟ ತನ್ನ ಇಷ್ಟಲಿಂಗವನ್ನು ಪರಮಾನಂದದಿಂದ ತನ್ನ ಕರಸ್ಥಲಕ್ಕೆ ಬರಮಾಡಿಕೊಳ್ಳುತ್ತಾನೆ. ಇಂಥ ಮಹಾಶರಣನಾದ ಘಟ್ಟಿವಾಳಯ್ಯನು ನರ್ತನ ಕಾಯಕದಲ್ಲಿ ತೊಡಗಿರುವಾಗಲೇ ಕಲ್ಯಾಣದ ನಡುಬೀದಿಯಲ್ಲಿ ಲಿಂಗೈಕ್ಯನಾಗುತ್ತಾನೆ.

**ಘಟ್ಟಿವಾಳಯ್ಯ – ಸಮಕಾಲೀನ ಶರಣರು ಕಂಡಂತೆ**

ಅನೇಕ ಶರಣರು ಘಟ್ಟಿವಾಳಯ್ಯನ ಮಹಿಮಾನ್ವಿತ ವ್ಯಕ್ತಿತ್ವವನ್ನು ತಮ್ಮ ವಚನಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಸಮಕಾಲೀನ ಶರಣಗಣದ ಈ ಸ್ತೋತ್ರ ವಚನಗಳ ಮೂಲಕ ಘಟ್ಟಿವಾಳಯ್ಯನ ಹಿರಿಮೆ–ಗರಿಮೆಗಳನ್ನು ನಿರ್ಧರಿಸಿಕೊಳ್ಳಬಹುದಾಗಿದೆ. ಅಲ್ಲದೆ, ಆತನ ಗುಣಸ್ವಭಾವಗಳನ್ನು ಅರಿತುಕೊಳ್ಳಬಹುದಾಗಿದೆ.

**ಅಲ್ಲಮಪ್ರಭು ದೇವರು**

ಪ್ರಭುದೇವರು ಮತ್ತು ಘಟ್ಟಿವಾಳಯ್ಯರ ನಡುವೆ ನಡೆದ ಸಂವಾದ ವಿಶಿಷ್ಟವಾದುದು. ಘಟ್ಟಿವಾಳಯ್ಯ ಪ್ರಭುದೇವರ ಜ್ಞಾನಜಂಗಮಸ್ಥಲಕ್ಕೆ ಮಾರುಹೋಗಿದ್ದ. ಪ್ರಭುದೇವರ 5 ವಚನಗಳಲ್ಲಿ ಘಟ್ಟಿವಾಳಯ್ಯನ ಪ್ರಸ್ತಾಪವಿದೆ. ಪ್ರಭುದೇವರು ಘಟ್ಟಿವಾಳಯ್ಯನ ಘನವ್ಯಕ್ತಿತ್ವವನ್ನರಿತು ತಮ್ಮ ಒಂದು ವಚನದಲ್ಲಿ ಅತಿಮಾರ್ಮಿಕ ರೀತಿಯಲ್ಲಿ ಆತನ ಗುಣಗಾನ ಮಾಡಿದ್ದಾರೆ –

**"ಅಶನಕ್ಕಂಜಿ ವೇಷವನೆ ಹೊತ್ತು ದೇಶವ ತೊಳಲುವ ಹಿರಿಯರ ಗಂಡ––**

**––ಗುಹೇಶ್ವರಾ ನಿಮ್ಮ ಶರಣಘಟ್ಟಿವಾಳ ಅಲ್ಲಮನಂತಿಂತೆಂಬರ ಗಂಡ ?"**

ಘಟ್ಟಿವಾಳಯ್ಯನ ಅಮೋಘ ವ್ಯಕ್ತಿತ್ವ ಈ ಒಂದು ವಚನದಲ್ಲಿ ಹರಳುಗಟ್ಟಿದೆ. ಆತನ 'ಗಂಡಿಕೆ' ಎಂತಹದೆಂಬುದನ್ನು ಪ್ರಭುದೇವರು ತಮ್ಮ ಜ್ಞಾನದ ಹಿರಿಮೆಯಲ್ಲಿ ಅಭಿವ್ಯಕ್ತಿಸುತ್ತಾರೆ. ಘಟ್ಟಿವಾಳಯ್ಯ ಭೌತಿಕ ಶರೀರಿಯಲ್ಲ, ಲಿಂಗಶರೀರಿ. ಕಾಲ, ಕರ್ಮ, ದೇಶಗಳನ್ನು ಮೀರಿದವನು. ಕುರುಹಿನ ಹಂಗನ್ನು ಕಳೆದಾತನು. ಅಷ್ಟೇ ಅಲ್ಲ ಸ್ವತಃ ಪ್ರಭುದೇವರು ತಮ್ಮನ್ನೂ ಮಿರಿಸಿದವನು ಈ ಘಟ್ಟಿವಾಳಯ್ಯ ಎಂಬುದನ್ನು 'ಅಲ್ಲಮನಂತಿಂತೆಂಬವರ ಗಂಡ' ಎನ್ನುವುದರ ಮೂಲಕ ಸಾರಿ ಹೇಳುತ್ತಾರೆ. ವೈರಾಗ್ಯದ ಉತ್ತುಂಗ ಶಿಖರಕ್ಕೇರಿದ ಪ್ರಭುದೇವರೇ ಈತನ ಕುರಿತು ಹೀಗೆ ಹೇಳುತ್ತಾರೆಂದ ಮೇಲೆ ಆತನ ಹಿರಿಮೆ ಎಂತಹದೆಂಬುದನ್ನು ನಾವು ಊಹಿಸಬಹುದು.

**ಚೆನ್ನಬಸವಣ್ಣನವರು :**

**"ಅರಿವರಿತುಕುರುಹು ನಷ್ಟವಾದ ಬಳಿಕ**

**ಕುರುಹಿನ ಬಣ್ಣ ಅಂಗದ ಮೇಲೇಕೊ ಘಟ್ಟಿವಾಳಂಗೆ ?"**

‘ಅರಿವ’ನ್ನು ಅರಿತು ‘ಅರಿವೇ’ ತಾನಾದ ಬಳಿಕ, ಕುರುಹಿನ ಹಂಗು ಘಟ್ಟಿವಾಳನಿಗೇಕೆ? ಘಟ್ಟಿವಾಳಯ್ಯನ ಇರವು ಬರಿಯ ಬಯಲು ಎಂದು ಈ ಶರಣಶ್ರೇಷ್ಠನನ್ನು ಕೊಂಡಾಡುತ್ತಾರೆ.

**ಪುರದ ನಾಗಣ್ಣ :**

**“ಎನ್ನ ನೇತ್ರದಲ್ಲಿ ಶಿವಲಿಂಗವಾಗಿ ಬಂದು**

**ರೂಪ ಪದಾರ್ಥವ ಕೈಕೊಂಡನಯ್ಯಾ ಘಟ್ಟಿವಾಳ ಮುದ್ದಯ್ಯ”**

ಪುರದ ನಾಗಣ್ಣನ ಷಡ್ವಿಧ ಲಿಂಗ ಪ್ರಸಾದದ ಅರ್ಪಣೆಯ ಕ್ರಿಯೆಯಲ್ಲಿ ಘಟ್ಟಿವಾಳಯ್ಯ, ಆತನ ನೇತ್ರದಲ್ಲಿ ಶಿವಲಿಂಗವಾಗಿ ಬಂದು ರೂಪ ಪದಾರ್ಥವ ಕೈಕೊಳ್ಳುತ್ತಾನೆ. ಅಂದರೆ, ಪುರದ ನಾಗಣ್ಣನ ಅಭಿಪ್ರಾಯದಲ್ಲಿ ಘಟ್ಟಿವಾಳಯ್ಯನ ದೃಷ್ಟಿ ಲಿಂಗದೃಷ್ಟಿಯಾಗಿತ್ತು.

**ಅಕ್ಕಮಹಾದೇವಿ :**

**“ಘಟ್ಟಿವಾಳಯ್ಯನ ಪ್ರಸಾದವ ಕೊಂಡು**

**ನಿರಾಕಾರ ಪರಬ್ರಹ್ಮಸ್ವರೂಪನಾದೆನಯ್ಯಾ”**

ಬಯಲಬ್ರಹ್ಮನೇ ಆದ ಘಟ್ಟಿವಾಳಯ್ಯನಿಂದ ಪ್ರಸಾದ ಸ್ವೀಕರಿಸಿದ್ದರಿಂದ ನಿರಾಕಾರ ಪರಬ್ರಹ್ಮ ಸ್ವರೂಪವೇ ಆದಳು ಅಕ್ಕ.

**ನಾಗಲಾಂಬಿಕೆ :**

ನಾಗಲಾಂಬಿಕೆ ವಿವಿಧ ಶರಣರ ಸ್ಥಲ ಸಂಬಂಧಗಳನ್ನು ಹೇಳುತ್ತಾ ಶರಣಸಂಬಂಧಿ ಘಟ್ಟಿವಾಳಯ್ಯನು” ಎಂದು ಹೇಳುತ್ತಾರೆ.

ಹೀಗೆ ಅನೇಕ ಶರಣ–ಶರಣೆಯರು ಘಟ್ಟಿವಾಳಯ್ಯನ ಉನ್ನತ ವ್ಯಕ್ತಿತ್ವವನ್ನು ತಮ್ಮ ವಚನಗಳಲ್ಲಿ ಕೊಂಡಾಡಿದ್ದಾರೆ.

**ಘಟ್ಟಿವಾಳಯ್ಯನ ವಚನಗಳ ವಿವೇಚನೆ :**

12ನೆಯ ಶತಮಾನದ ಪ್ರಮುಖ ವಚನಕಾರರಲ್ಲಿ ಒಬ್ಬನಾದ ಘಟ್ಟಿವಾಳಯ್ಯ ವಚನ ರಚನೆಯ ಮೂಲಕ ತನ್ನ ಅನುಭಾವದೆತ್ತರವನ್ನು ಬಿತ್ತರಿಸಿದ್ದಾನೆ. ಈವರೆಗೆ ಘಟ್ಟಿವಾಳಯ್ಯನ 147 ವಚನಗಳು ಲಭ್ಯವಾಗಿವೆ.

ಘಟ್ಟಿವಾಳಯ್ಯನ ವಚನಗಳು ಅತ್ಯಂತ ಗಂಭೀರ ಚಿಂತನೆಯಿಂದ ನಳನಳಿಸುತ್ತಿವೆ.

**“ಲೇಸ ಮರೆದು ಕಷ್ಟಕ್ಕೆ ಕಡಿದಾಡುವ**

**ಭಾಷೆಹೀನರ ಕಂಡು ನಾಚಿಕೆಯಾಯಿತ್ತು”**

ತನು–ಮನ–ಧನವನ್ನು ಲಿಂಗಕ್ಕರ್ಪಿಸಬೇಕೆಂದು ಭಕ್ತನಿಗೆ ಹೇಳಿ ತಾವು ಅದೇ ರೀತಿ ನಡೆಯದೆ ಕೇವಲ ನುಡಿಯಲ್ಲಿಯೇ ವಾಗದ್ವೈತವನ್ನು ಹೇಳುವ ನಡೆ–ನುಡಿ ಶುದ್ಧವಿಲ್ಲದ ಭಾಷೆಯ ಭಂಡರನ್ನು ಕಂಡು ಘಟ್ಟಿವಾಳಯ್ಯ ಅಸಹ್ಯ ಪಡುತ್ತಾನೆ. ಏಕೆಂದರೆ, ಆತನ ಪ್ರಕಾರ ನಡೆ–ನುಡಿ ಒಂದಾಗಿರಬೇಕು.

**ಅರಿವು – ಕುರುಹು**

ಘಟ್ಟಿವಾಳಯ್ಯನ ಪ್ರಕಾರ ಅರಿವು ಎಂದರೆ ಪರವಸ್ತು (ಪರಶಿವ)ವಿನ ಸ್ವರೂಪವೇ ತಾನಾಗುವುದು. ಅದಕ್ಕೆ ಕುರುಹು ಒಂದು ಸಾಧನ ಮಾತ್ರ. ಅರಿವನ್ನು ಅರಿತು ಅರಗಿಸಿಕೊಂಡ ಬಳಿಕ ಕುರುಹಿನ ಹಂಗು ಇಲ್ಲ ಎನ್ನುತ್ತಾನೆ ಘಟ್ಟಿವಾಳಯ್ಯ.

**"ಅರಿವೆಂಬ ಅಲಗಿಂಗೆ ಕುರುಹಿನ ಮೋಹಳನೋಡಾ**

**ಒರೆ ಹರಿದು ಒಳಗನರಿಯಲು ಬಲ್ಲವರಿಲ್ಲ"**

ಈ ವಿಕಾರಗಳೆಂಬ ಕವಚ (ಆವರಣ) ವನ್ನು ಹರಿದು ಅರಿವೆಂಬ ಜ್ಞಾನ ಪ್ರಕಾಶವನ್ನು ತನ್ನದಾಗಿಸಿಕೊಳ್ಳಬಲ್ಲವನೇ ನಿಜವಾದ ಸೇನಾನಿ. ಆದರೆ ಇದನ್ನು ಮರೆತು, ಹೊಳೆವ ಅಲಗಿನಿಂದ ಇರಿವುದರ ಬದಲು ಕೇವಲ ಅದರ ಹಿಡಿಕೆಯನ್ನು ಹಿಡಿದುಕೊಂಡು ನಿಂತಿದ್ದರೆ ಲಿಂಗಾಂಗ ಸಾಮರಸ್ಯ ಎಂಬ ಯುದ್ಧವನ್ನು ಗೆಲ್ಲಲು ಆಗುವುದಿಲ್ಲ.

**ದೇವರ ಸ್ವರೂಪ :**

ಘಟ್ಟಿವಾಳಯ್ಯನ ದೇವರ ಕಲ್ಪನೆ ವಿಶಿಷ್ಟವಾದುದು. ಯಾವ ಮೂಢತೆಗೂ ಒಳಗಾಗದ ಘಟ್ಟಿವಾಳಯ್ಯ ವೈಜ್ಞಾನಿಕ ಮತ್ತು ವೈಚಾರಿಕ ತಳಹದಿಯ ಮೇಲೆ ಶರಣತತ್ವವನ್ನೊಪ್ಪಿಕೊಂಡವನು. ಆದ್ದರಿಂದ ಆತನ ವಚನಗಳಲ್ಲಿ ವೈಚಾರಿಕತೆ ಎದ್ದು ಕಾಣುತ್ತದೆ.

**"ನಿರಾಳ ನಿರವಯಲು ನಿರಾಕಾರ ಪರವಸ್ತು ತಾನಲ್ಲದೆ ಮತ್ತೇನೂ ಇಲ್ಲ"**

ಪರಮಾತ್ಮ ಸರ್ವವ್ಯಾಪಿ. ಆತನಿಗೆ ಯಾವುದೇ ಒಂದು ಸ್ಥಳ ಮಾತ್ರ ಸೀಮಿತವಲ್ಲ ಎಂದು ಹೇಳುವ ಘಟ್ಟಿವಾಳಯ್ಯ ಆತ ನಿತ್ಯನೂ, ನಿರಂಜನನೂ ಆದ ಪರವಸ್ತು. ಆತನನ್ನು ಬಿಟ್ಟು ಕಾಣುವ ದರ್ಶನ ಬೇರೇನೂ ಇಲ್ಲ.

**ತಾತ್ವಿಕ ಚಿಂತನೆ**

ತಾತ್ವಿಕ ಚಿಂತನೆಯೇ ಘಟ್ಟಿವಾಳಯ್ಯನ ಜೀವಾಳ. ಆತನ ಅನೇಕ ವಚನಗಳು ಲಿಂಗ, ಪರಶಿವನ ಸ್ವರೂಪ, ಪರಮಾನಂದದ ನೆಲೆ, ಆರೂಢಜ್ಞಾನ, ಸಾಧಕರಿಗೆ ಬೇಕಾದ ಮಾರ್ಗದರ್ಶನ ಮೊದಲಾದ ತಾತ್ವಿಕ ವಿವೇಚನೆ ಮಾಡುತ್ತವೆ.

**"ಕಂಡು ಕಂಡು ಕಾಣಲುಂಟೆ ಅಯ್ಯಾ**

**ಕೇಳಿ ಕಂಡಿಹೆನೆಂದಡೆ ಮನಸ್ಸು ನಾಚಿತ್ತು"**

ಪರಶಿವನನ್ನು ದೃಷ್ಟಿ, ಮನ, ಭಾವಗಳ ಮೂಲಕ ಅನುಸಂಧಾನಗೈದು ನಾನು ಶರಣ, ಇದು ಲಿಂಗ ಎಂಬ ಉಭಯ ಭಾವದ ಲಜ್ಜೆಯಳಿದು ಭಾವ ನಿರ್ಭಾವವಾಗಬೇಕು. ಹೀಗೆ ಭಾವ ಬತ್ತಲೆಯಾಗದಿದ್ದರೆ ಅಲ್ಲಿಯವರೆಗೆ ಸತ್ಯದರ್ಶನ ಅಸಾಧ್ಯ ಎಂದು ಹೇಳುತ್ತಾನೆ ಘಟ್ಟಿವಾಳಯ್ಯ.

ಒಟ್ಟಿನಲ್ಲಿ ಮನುಷ್ಯನ ಜ್ಞಾನ ಮತ್ತು ವ್ಯಕ್ತಿತ್ವ ಶುದ್ಧಿಗೆ ಆತ ಕೊಟ್ಟ ಮಹತ್ವ ಅಪಾರವಾದುದು. ಅರಿವಿನ ಜಾಗೃತಿಯ ಕುರಿತು ಆತ ತನ್ನ ಸಾತ್ವಿಕ ಕೋಪದ ಮೂಲಕ ನೀಡುವ ಎಚ್ಚರಿಕೆ ಆಳದಲ್ಲಿ ಮನುಷ್ಯನ ಬೌದ್ಧಿಕ ಉದ್ಧಾರವನ್ನು ಕುರಿತದ್ದು. ಇನ್ನೂ ಕೆಲವು ಸಲ ಸ್ವಯಂ ಅನುಭವದ ವಿವರಣೆಯ ಮೂಲಕ ಶಬ್ದಾತೀತವಾದ

ಆಧ್ಯಾತ್ಮಿಕ ಪರಮಾನಂದ ಸುಖವನ್ನು ತನ್ನ ಉನ್ನತ ಅನುಭಾವದಿಂದ ಶಬ್ದಗಳಲ್ಲಿ ವಿವರಿಸುತ್ತಾನೆ. ಕಿರಿದಾದುದರಲ್ಲಿ ಹಿರಿದಾದ ಅರ್ಥವನ್ನು ತುಂಬುವ ಆತನ ಬೌದ್ಧಿಕ ಮತ್ತು ಅನುಭಾವಿಕ ಕಸರತ್ತು ಘನವಾದುದು.

ಕೊನೆ ಟಿಪ್ಪಣಿಗಳು

- ಡಾ. ಎಸ್. ವಿದ್ಯಾಶಂಕರ(ಸಂ): ಸಂಕೀರ್ಣ ವಚನ ಸಂಪುಟ–2, ಪುಟ–140. ವ.ಸಂ.–403.
- 'ಸಮಯ' ಎಂದರೆ ಒಂದು ಮತಧರ್ಮದ ಆಚಾರದ ಅಚ್ಚಿನಲ್ಲಿ ರೂಪುಗೊಂಡಿರುವ ಜನರ ಗುಂಪು. (ಜಂಗಮ ಸಮೂಹ)
- ಡಾ.ಎಲ್. ಬಸವರಾಜು (ಸಂ) : ಶೂನ್ಯಸಂಪಾದನೆ : (ಸಂ.), ಪುಟ–300.
- ಪ್ರೊ.ಸಂ.ಶಿ.ಭೂಸನೂರಮಠ(ಸಂ) : ಶೂನ್ಯಸಂಪಾದನೆ, ಪುಟ–309. ವ.ಸಂ.–18.
- ಡಾ. ಬಿ.ವ್ಹಿ.ಮಲ್ಲಾಪುರ(ಸಂ.) ಅಲ್ಲಮಪ್ರಭುದೇವರ ವಚನ ಸಂಪುಟ, ಪುಟ–250. ವ.ಸಂ.– 851.
- ಡಾ. ಬಿ.ವ್ಹಿ. ಮಲ್ಲಾಪುರ(ಸಂ.) :ಚನ್ನಬಸವಣ್ಣನವರ ವಚನ ಸಂಪುಟ, ಪುಟ–302, ವ.ಸಂ.– 943.
- ಡಾ. ಬಿ. ಆರ್. ಹಿರೇಮಠ (ಸಂ) : ಸಂಕೀರ್ಣ ವಚನ ಸಂಪುಟ–3, ಪುಟ– 2. ವ.ಸಂ.–3.
- ಡಾ. ವಿರಣ್ಣ. ರಾಜೂರ (ಸಂ) : ಶಿವಶರಣೆಯರ ವಚನ ಸಂಪುಟ, ಪು.96–97. ವ.ಸಂ.–321.
- ಅದೇ, ಪುಟ–254. ವ.ಸಂ.–794.
- ಡಾ. ಎಸ್.ವಿದ್ಯಾಶಂಕರ (ಸಂ) : ಸಂಕೀರ್ಣ ವಚನ ಸಂಪುಟ–2, ಪುಟ–160, ವಚನ ಸಂಖ್ಯೆ–472
- ಅದೇ,ಪುಟ–144, ವ.ಸಂ.413.
- ಅದೇ,ಪುಟ–167, ವ.ಸಂ.–502.
- ಅದೇ, ಪುಟ–152. ವ.ಸಂ.–444.

❖❖❖

# ಕನ್ನಡ ಭಾಷಾ ಬೋಧನೆಯಲ್ಲಿ ಕಲಿಕಾ ಸಾಮಾಗ್ರಿಗಳ ಅಗತ್ಯತೆ

**ಡಾ . ಲೋಕೇಶ ಆರ್.**
ಕನ್ನಡ ಸಹಾಯಕ ಪ್ರಾಧ್ಯಾಪಕ, ಮಾದರಿ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಹರದನಹಳ್ಳಿಹಾಸನ (ಜಿಲ್ಲೆ)

**ಡಾ. ಪ್ರವೀಣ್ ಕುಮಾರ್. ಎಸ್.**
ಕನ್ನಡ ಸಹಾಯಕ ಪ್ರಾಧ್ಯಾಪಕ, ಪ್ರಾದೇಶಿಕ ಶಿಕ್ಷಣ ಸಂಸ್ಥೆ (NCERT) ಮೈಸೂರು

**ಪೀಠಿಕೆ**

ಶಿಕ್ಷಣ ಕ್ರಮ ಇಂದು ನಾಲ್ಕು ಗೋಡೆಗಳ ಮಧ್ಯೆ ಕಲಿಯುವ ಸಾಧನವಾಗಿ ಉಳಿದಿಲ್ಲಿವೆಂಬುದು ಸಾರ್ವತ್ರಿಕವಾದ ಸಂಗತಿ. ಇಪ್ಪತ್ತೊಂದನೆಯ ಶತಮಾನ ವೈಜ್ಞಾನಿಕಯುಗವಾಗಿ ವಿಜ್ಞಾನ ಮತ್ತು ಆಧುನಿಕತೆ ಶಿಕ್ಷಣದ ಎಲ್ಲಾ ಮಜಲುಗಳನ್ನು ಆವರಿಸಿಬಿಟ್ಟಿವೆ. ಸಾಂಪ್ರದಾಯಿಕ ಶಿಕ್ಷಣ ಪದ್ಧತಿಗಳೆಲ್ಲಾ ಮೂಲೆ ಗುಂಪಾಗಿ ಆಧುನಿಕ ಸಂವಹನ ಮಾಧ್ಯಮಗಳು ಮನೆ ಮತ್ತು ಶಾಲೆ ಎರಡರಲ್ಲೂ ಪ್ರಯೋಗಾತ್ಮಕವಾಗಿ ಬಳಕೆಯಾಗುತ್ತಿದ್ದು ವಿದ್ಯಾರ್ಥಿಗಳ ಮೇಲೆ ನೇರ ಪರಿಣಾಮ ಬೀರುತ್ತಿದೆ. ನೀರಸ ಪಠ್ಯ ಬೋಧನೆ ವಿದ್ಯಾರ್ಥಿಗಳಲ್ಲಿ ಕಲಿಕಾ ಮಟ್ಟವನ್ನು ಕ್ಷೀಣಿಸುತ್ತದೆ. ಸರ್ಕಾರಿ ಶಾಲೆಗಳ ಪ್ರವೇಶಾತಿ ಕುಂಠಿತಗೊಂಡು ಸಾವಿರಾರು ಶಾಲೆಗಳನ್ನು ಮುಚ್ಚುತ್ತಿರುವುದಾಗಿ ಸರ್ಕಾರ ಘೋಷಿಸುವ ಬೆನ್ನಲ್ಲೆ ವಿದ್ಯಾರ್ಥಿಗಳ ಕಲಿಕಾ ಮಟ್ಟ ಕೂಡ ಕ್ಷೀಣಿಸಿದೆ ಅರ್ಥಾತ್ ಖಾಸಗಿ ಶಿಕ್ಷಣ ಸಂಸ್ಥೆಗಳ ಬೆಳವಣಿಗೆ ಹೆಚ್ಚಾಗಿ ವಿದ್ಯಾರ್ಥಿಗಳು ಆ ಕಡೆ ಮುಖ ಮಾಡಲು ನಿಂತಿರುವುದಕ್ಕೆ ಕಾರಣ ಅವು ಬಳಸುತ್ತಿರುವ ಶಿಕ್ಷಣದ ಉಪಕ್ರಮಗಳು. ಅಂದರೆ ಆಧುನಿಕ ಬೋಧನಾ ಸಲಕರಣೆಗಳು. ಅವು ಮಕ್ಕಳಲ್ಲಿ ಕಲಿಕಾ ಆಸಕ್ತಿಯನ್ನು ಹೆಚ್ಚಿಸಿ ಬಹು ಬೇಗ ಕಲಿಕೆಯಲ್ಲಿ ತೊಡಗಿಕೊಳ್ಳುವಂತೆ ಮಾಡುತ್ತಿರುವುದು. ಪ್ರಾಥಮಿಕ ಶಾಲೆಯಿಂದ ವಿಶ್ವವಿದ್ಯಾನಿಲಯದವರೆಗೆ ಕಲಿಕೆಯ ಮತ್ತು ಬೋಧನೆಯ ಎಲ್ಲಾ ರಂಗವೂ ಬಹು ಮಾಧ್ಯಮಗಳ ಬಳಕೆಯೊಂದಿಗೆ ಕಲಿಕೆಯನ್ನು ಉತ್ತಮಗೊಳಿಸುತ್ತಿವೆ. ಹಾಗಾಗಿ ಪ್ರಾಯೋಗಿಕ ಮತ್ತು ದೃಶ್ಯ ಮಾಧ್ಯಮಗಳು ಕಲಿಕೆಯನ್ನು ಬಹಳ ದಿನಗಳವರೆಗೆ ಹಿಡಿದಿಡುವುದರಿಂದ ವಿದ್ಯಾರ್ಥಿಗಳಿಗೂ ಇದು ಅನುಕೂಲ. ಇಂದು ಭಾಷಾ ಬೋಧನೆಯು ಒಂದು ಸವಾಲಿನ ಸಂಗತಿಯಾಗಿದ್ದು ಭಾಷೆಯನ್ನು ಆಸಕ್ತಿದಾಯಕ ವಿಷಯವಾಗಿ ಕಲಿಸದೇ ಹೋದರೆ ಅಭಿವ್ಯಕ್ತಿ ಸಾಮರ್ಥ್ಯವೇ ಇಲ್ಲದ ತಲೆಮಾರು ರೂಪುಗೊಳ್ಳಬಹುದು.

**ಉದ್ದೇಶಗಳು**

"ಪ್ರಾಥಮಿಕ ಶಿಕ್ಷಣದ ಸೋಲು ಪದವಿ ತರಗತಿಗಳಲ್ಲಿ" ಎನ್ನುವ ಮಾತುಗಳನ್ನು ಇಲ್ಲಿ ಉದ್ದೇಶಪೂರ್ವಕಾವಾಗಿಯೇ ಬಳಸಲಾಗಿದೆ ಕಾರಣ ಪದವಿ ತರಗತಿಯ ಸಾಕಷ್ಟು ಮಂದಿ ವಿದ್ಯಾರ್ಥಿಗಳಿಗೆ ಇಂದು ಕನ್ನಡ ವರ್ಣಮಾಲೆಯನ್ನು ಸಂಪೂರ್ಣವಾಗಿ

ಬರೆಯಲು ಬಾರದಿರುವುದು ಜ್ವಲಂತ ಸಮಸ್ಯೆಯಾಗಿ ಕಂಡುಬರುತ್ತಿದೆ. ಇನ್ನು ಓದುವ ಮತ್ತು ಬರೆಯುವ ಮಾತಂತು ದೂರದ್ದಾಗಿದೆ, ಹೀಗಿದ್ದರೂ ವಿದ್ಯಾರ್ಥಿಗಳು ಪದವಿ ಮಟ್ಟಕ್ಕೆ ಏರುತ್ತಿರುವುದನ್ನು ಸೋಜಿಗವೆಂದು ಕರೆಯಬೇಕೆ ಅಥವಾ ಶಿಕ್ಷಣದ ಸೋಲು ಎಂದು ಕರೆಯಬೇಕೆ? ಎನ್ನುವ ಪ್ರಶ್ನೆ ಏಳುತ್ತದೆ. ಒಟ್ಟಾರೆಯಾಗಿ ಭಾಷಾ ಕಲಿಕೆಯನ್ನು ಉತ್ತಮಪಡಿಸಬೇಕಾದ್ದು ಇಂದು ಪ್ರತಿಯೊಬ್ಬ ಶಿಕ್ಷಕನ ಆದ್ಯ ಜವಾಬ್ದಾರಿಯಾಗಿದೆಯಲ್ಲದೆ, ಜರೂರು ವಿಷಯವೂ ಆಗಿದೆ. ಪರಿಣಾಮಕಾರಿಯಾದ ಸಂವಹನ ಮಾಧ್ಯಮ ವಿದ್ಯಾರ್ಥಿಯ ಸರ್ವತೋಮುಖ ಬೆಳವಣಿಗೆಗೆ ಸಹಾಯಕವಾದುದು.

ಬೋಧನೆಯು ಒಂದು ಕಲೆ. ಕಲಿಕಾ ಸಾಮಗ್ರಿಗಳು ಇದಕ್ಕೆ ಪೂರಕವಾಗುತ್ತವೆ. ಬೋಧನೆ ಮತ್ತು ಕಲಿಕೆ ಒಟ್ಟೊಟ್ಟಿಗೇ ಆಗಬೇಕು. ಕಲಿಕಾ ಸಾಮಗ್ರಿಗಳು ಕಲಿಕೆಯ ಉದ್ದಿಷ್ಟತೆಯನ್ನು ಮೇಲೆ ಕೊಂಡೊಯ್ಯುತ್ತವೆ ಎನ್ನಬಹುದು.

*******

ಶಿಕ್ಷಣದ ಗುಣಾತ್ಮಕ ಬೆಳೆವಣಿಗೆಗೆ ರಾಷ್ಟ್ರೀಯ ಮತ್ತು ರಾಜ್ಯ ಸರ್ಕಾರದ ಕಾರ್ಯಕ್ರಮಗಳು ಹೊಸ ಹೊಸ ಉಪಕ್ರಮಗಳನ್ನು ಜಾರಿಗೆ ತರುತ್ತವೆ. ಅವುಗಳಲ್ಲಿ "ನಲಿ–ಕಲಿ" ಕಾರ್ಯಕ್ರಮವು ಬಹು ಮುಖ್ಯವಾದುದಾಗಿದ್ದು ಪ್ರಾಥಮಿಕ ಶಾಲೆಯ ಮಕ್ಕಳು ತಮ್ಮದೇ ಆದ ವೇಗದಲ್ಲಿ ಕಲಿಯುವಂತೆ ಬೋಧನೆ– ಕಲಿಕೆ ಸಾಮಗ್ರಿಗಳು ರೂಪುಗೊಂಡಿವೆ. ಪ್ರತಿ ಕಲಿಕೆಯ ಘಟಕಕ್ಕೆ ಕಲಿಕೆಯ ಸಾಮಗ್ರಿ ಮತ್ತು ವಿವಿದ ಚಟುವಟಿಕೆಗಳನ್ನು ರೂಪಿಸಲಾಗಿದೆ ಎಂದು ಸಾರುತ್ತಾ ಒಂದನೇ ತರಗತಿಯಲ್ಲಿ ಭಾಷೆಯನ್ನು ಹತ್ತು ಘಟಕಗಳಾಗಿ ವಿಂಗಡಿಸಿ ಕಲಿಕಾ ಚಟುವಟಿಕೆಯಲ್ಲಿ ತೊಡಗುವಂತೆ ಮಾಡಿತು. ಈ ಚಟುವಟಿಕೆಗಳು ಸರಳತೆಯಿಂದ ಸಂಕೀರ್ಣತೆಯಡೆಗೆ ಸಾಗಿ ಭಾಷೆಯಲ್ಲಿ ಒಂದು ಹಂತದಲ್ಲಿನ ಅಕ್ಷರಗಳನ್ನು ಕಲಿತ ನಂತರ ಆ ಅಕ್ಷರಗಳನ್ನು ಬಳಸಿ ಮಾಡಬಹುದಾದ ಪದಗಳು ಮತ್ತು ಸರಳ ವಾಕ್ಯಗಳನ್ನು ಮಕ್ಕಳು ಓದಿ–ಬರೆಯಬಲ್ಲವರಾಗಿ ಮಾರ್ಪಾಡಾಗುತ್ತಾರೆ. ಇದಕ್ಕಾಗಿ ಪೂರ್ಣ ವರ್ಣಮಾಲೆ ಕಲಿಯುವವರೆಗೆ ಕಾಯಬೇಕಾದ ಪ್ರಮೇಯವಿಲ್ಲ ಎಂಬುದನ್ನು ಕಂಡುಕೊಳ್ಳಲಾಯಿತು ಪರಿಣಾಮವಾಗಿ ಹುಟ್ಟಿಕೊಂಡ ಅಕ್ಷರ ಮಾಲಿಕೆಯೇ ರಾಗಸದ ಮಾಲಿಕೆ.

ಭಾಷಾ ವಿಕಾಸದ ಹಂತಗಳ ಮೇಲೆ ಹಲವಾರು ಮನೋವಿಜ್ಞಾನಿಗಳು ಅಧ್ಯಯನ ಮಾಡಿದ್ದಾರೆ. ಪಿಯಾಜೆಯ ಜ್ಞಾನಾತ್ಮಕ ವಿಕಾಸದ ವಿವಿಧ ಹಂತಗಳಲ್ಲಿ ಭಾಷೆ ಯಾವ ರೀತಿ ವಿಕಾಸಗೊಳ್ಳುತ್ತದೆ ಎಂಬುದನ್ನು ಬಹು ವಿಸ್ತಾರವಾಗಿಯೇ ಚರ್ಚಿಸುತ್ತಾನೆ. ಹೆರಾಲ್ಡ್ ವೆಟ್ಟರ್, ರಿಚಡ್ ಹೊವೆಲ್ ಹಾಗೂ ಎಲಿಜಬೆತ್. ಬಿ. ಹರ್ಲಾಕ್ ಮೊದಲಾದವರು ಮಕ್ಕಳ ಭಾಷಾ ವಿಕಾಸದ ಮೇಲೆ ಆಳವಾದ ಅಧ್ಯಯನ ನಡೆಸಿದ್ದಾರೆ. ಪ್ರಾರಂಭಿಕ ಹಂತದಲ್ಲಿ ಮಗುವಿನ ಅಳುವಿಕೆಯಿಂದ ಆರಂಭವಾದ ಭಾಷೆ ಮಗುವಿನ ವಯಸ್ಸು ಆರರಿಂದ ಎಂಟನೇ ವಯಸ್ಸಿಗೆ ಬರುವ ಹೊತ್ತಿಗೆ ಸುಸಂಸ್ಕೃತ ಮಾತುಗಳ ಬಳಕೆ ಮತ್ತು ವಾಕ್ಯರಚನಾ ನಿಯಮಗಳ ಮೇಲೆ ಪ್ರಭುತ್ವ ಸ್ಥಾಪನೆಗೆ ಬಂದು ತಲುಪುತ್ತದೆ. ಈ ವಿಕಾಸ ಪ್ರಕ್ರಿಯೆಯಲ್ಲಿ ಕಲಿಕಾ ಸಾಮಗ್ರಿಗಳ ಕೊಡುಗೆ ಅಪಾರವಾದುದು.

ಮಾಹಿತಿ ಸಿಂಧು, ಕ್ಲಾಸ್ ಪ್ರಾಜೆಕ್ಟ್, ಚೈತನ್ಯ, ಕೇಳಿ– ಕಲಿ, ಬಾನ್ದನಿ, ಚೈತನ್ಯ ತರಿಣಿ ಹಾಗೂ ಸರ್ವ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿನ ಇನ್ನಿತರ ಉಪಕ್ರಮಗಳು ಕೂಡ

ಭಾಷಾ ಕಲಿಕೆಗೆ ಮಹತ್ವ ಕೊಟ್ಟಿರುವುದು ಗಮನಿಸಬೇಕಾದ ಸಂಗತಿ. 1968ರ ಶಿಕ್ಷಣ ನೀತಿಯು ಪುಸ್ತಕಗಳು ಮತ್ತು ಗ್ರಂಥಾಲಯಗಳು ಬೋಧನೆಯ ಭಾಗವಾಗಬೇಕೆಂದು ಒತ್ತಿ ಹೇಳಿದೆ.

ಭಾಷಾ ಕಲಿಕೆಗೆ ಕಲಿಕಾ ಸಾಮಗ್ರಿಗಳು ಅಂದ-ಚಂದವಾಗಿ ಕಂಗೊಳಿಸಬೇಕು. ಅದು ಕನ್ನಡ ಭಾಷೆಗೂ ಅನ್ವಯ. 1986ರ ರಾಷ್ಟ್ರೀಯ ಶಿಕ್ಷಣ ನೀತಿ ಮೊದಲಬಾರಿಗೆ ಕಲಿಕೆಯ ಕನಿಷ್ಠ ಮಟ್ಟದ ಬಗ್ಗೆ ಪ್ರಸ್ತಾಪಿಸಿ ಚಟುವಟಿಕೆ ಆಧಾರಿತ ಕಲಿಕೆಗೆ ಮಾನ್ಯತೆ ನೀಡಿತು. ಅದರಂತೆ ಕಲಿಕೆಯ ಚೌಕಿಯನ್ನು ನಿರ್ಮಾಣ ಮಾಡುವಂತೆ ಸಲಹೆ ನೀಡಿತು ಅಂದರೆ ಒಂದು ನಿರ್ದಿಷ್ಟ ವಿಷಯವನ್ನು ಕಲಿಸುವ ಬೋಧನೆಯ ಕಲಿಕಾ ಸಾಮಾಗ್ರಿಗಳು ಇರುವಂತಹ ಸ್ಥಳವನ್ನು ಕಲಿಕಾ ಚೌಕಿ ಎಂದು ಕರೆದು ಗ್ರಂಥಾಲಯ ಮತ್ತು ಕಂಪ್ಯೂಟರ್ ಗಳನ್ನು ಈ ಪರಿಕಲ್ಪನೆಯಲ್ಲಿ ಸೇರಿಸಿತು.

ಭಾಷೆ ಬರುವ ಮುನ್ನ ಮಗು ಸನ್ನೆಗಳ ಮೂಲಕ ತನ್ನ ಇಂಗಿತವನ್ನು ವ್ಯಕ್ತಪಡಿಸುತ್ತದೆ. ಅನಂತರ ಬಾಲ ಭಾಷೆ ಅಸ್ಪಷ್ಟವಾಗಿ ಅರ್ಥವಾಗದೇ ಹೋಗಬಹುದು. ಇದು ಪ್ರಾರಂಭದ ಹಂತವಾಗಿ ಕಾಣಿಸಿಕೊಳ್ಳುತ್ತದೆ. ಮಗುವಿನ ಸ್ನಾಯು ಮತ್ತು ನರತಂತುಗಳು ಬಲಿತು ಪಕ್ವವಾದಾಗ ನವೀನ ಶಬ್ದಗಳ ಕಲಿಕೆ ಪ್ರಾರಂಭವಾಗುತ್ತದೆ. ಇದು ಕನ್ನಡ ಭಾಷಾ ಕಲಿಕೆಗೂ ಮಾದರಿಯಾದುದು. ಅದುದರಿಂದ ಶತ-ಶತಮಾನಗಳ ಹಳತಾದ ಭಾಷೆಯನ್ನು ಇಂದು ಬೋಧಿಸಬೇಕಾದರೆ ಕಲಿಕಾ ಸಾಮಗ್ರಿಗಳ ಪರಿಣಾಮಕಾರಿ ಬಳಕೆಯ ಅಗತ್ಯತೆ  ಹೆಚ್ಚು ಎಂಬುದನ್ನು ಒತ್ತಿ ಹೇಳುತ್ತದೆ.

**ಕನ್ನಡ ಭಾಷಾ ಕಲಿಕಾ ಮಾದರಿಗಳ ಸ್ವರೂಪ**

ಯಾವುದೇ ಕಲಿಕೆ ಒಬ್ಬ ವ್ಯಕ್ತಿಗೆ ತಲುಪಬೇಕಾದರೆ ಸಂವಹನ ಮಾಧ್ಯಮ ಅತ್ಯಂತ ಪರಿಣಾಮಕಾರಿಯಾಗಿರಬೇಕು. ಬೋಧನಾವಧಿಯಲ್ಲಿ ಶಿಕ್ಷಕ ಯುಕ್ತಮಾಧ್ಯಮವನ್ನು ಆಯ್ಕೆ ಮಾಡಿಕೊಳ್ಳಬೇಕು. ಶಿಕ್ಷಕನ ಮಾತು, ಹಾವಭಾವ, ಕಪ್ಪುಹಲಗೆ ಮೇಲಿನ ಅಂಧವಾದ ಬರೆವಣಿಗೆ, ನಟನಾ ಕೌಶಲ ಮತ್ತು ಹಾಡುಗಾರಿಕೆ ಇವೆಲ್ಲವು ಭಾಷಾ ಬೋಧನೆಯಲ್ಲಿ ಬಹುಮುಖ್ಯವಾದ ಪಾತ್ರ ನಿರ್ವಹಿಸುವುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೂ ಭಾಷಾ ಬೋಧನೆ ಒಂದು ಸಂಕೀರ್ಣ ಪ್ರಕ್ರಿಯೆ ಆದುದರಿಂದ ಈ ಕೆಳಕಂಡ ಕಲಿಕಾ ಮಾದರಿಗಳನ್ನು ಅನುಸರಿಸುವುದರಿಂದ ಬೋಧನೆಯಲ್ಲಿ ಗುಣಾತ್ಮಕತೆಯನ್ನು ಕಂಡುಕೊಳ್ಳಬಹುದು.

ಕಪ್ಪು ಹಲಗೆ : ಶಿಕ್ಷಕನ ಗೆಳೆಯನೆನಿಸಿರುವ ಕಪ್ಪು ಹಲಗೆ ಪ್ರಾಥಮಿಕ ಶಾಲೆಯಿಂದ ಪ್ರೌಢ ಶಾಲೆಯವರೆಗೆ ಅನಿವಾರ್ಯ ಸಾಮಗ್ರಿ. ವರ್ಣಮಾಲೆ, ಪದಗಳ  ವಿನ್ಯಾಸ ಕಲಿಸಲು, ಬರೆವಣಿಗೆ ಕೌಶಲ ಬೆಳೆಸಲು, ವಾಕ್ಯ ರಚನೆ ಮತ್ತು ಲೇಖನ ಚಿನ್ಹೆಗಳನ್ನು ಬರೆಯಲು ಇರುವ ಪ್ರಾಥಮಿಕ ಸಾಮಗ್ರಿಯಾಗಿದೆ.

1. ಶ್ರವ್ಯ ಮಾಧ್ಯಮಗಳಾದ ಧ್ವನಿ ಲಾಡಿ, ಧ್ವನಿ ತಟ್ಟೆ ಮತ್ತು ರೇಡಿಯೋ ಭಾಷಾ ಕಲಿಕಾ ಮಾದರಿಯ ಅತ್ಯುತ್ತಮ ಮಾದರಿಗಳಾಗಿ ಪರಿಣಮಿಸುವವು.
2. ಆಕರ್ಷಕ ಚಿತ್ರಪಟಗಳನ್ನೊಳಗೊಂಡ ಪಠ್ಯಪುಸ್ತಕಗಳ ಬಳಕೆ ಭಾಷಾ ಕಲಿಕೆಯನ್ನು ಇಮ್ಮಡಿಗೊಳಿಸುವುದು.
3. ಮುದ್ರಣ ಮಾದ್ಯಮಗಳಾದ ಪುಸ್ತಕಗಳು, ಕಾರ್ಯಪುಸ್ತಕಗಳು,  ಕೈಪಿಡಿಗಳು,

ವಿಶ್ವಕೋಶಗಳು, ಚಿತ್ರಪಟಗಳು, ಎರವಲು ಪದಕೋಶಗಳು ಮತ್ತು ನಿಘಂಟುಗಳು ಇತ್ಯಾದಿಗಳು ಕಲಿಕೆಯನ್ನು ಉನ್ನತಿಕರಿಸುವವು.

4. ಶ್ರವ್ಯ ಮತ್ತು ಮುದ್ರಣ ಮಾಧ್ಯಮಗಳಾದ ಲಿಂಗ್ವಾಫೋನ್ ಭಾಷಾ ಕಲಿಕಾ ಮಾದರಿಯ ಅತ್ಯುತ್ತಮ ಸಾಮಗ್ರಿಯಾಗಿ ಪರಿಣಮಿಸಿದೆ.
5. ಪ್ರಕ್ಷೇಪಿತ ಸ್ತಬ್ದ ದೃಶ್ಯ ಮಾಧ್ಯಮಗಳಾದ ಜಾರು ಚಿತ್ರ ಫಲಕ (ಸ್ಲೈಡ್), ಚಿತ್ರ ಪಟ್ಟಿ (ಫಿಲ್ಮ್ ಸ್ಕ್ರಿಪ್ಟ್) ಮತ್ತು ಧ್ವನಿ ತಟ್ಟೆಯ ಬಳಕೆ ಇಂದಿನ ಅಗತ್ಯವಾಗಿದೆ.
6. ಶ್ರವ್ಯ ಚಲನೆಯ ಮಾಧ್ಯಮವಾದ ಮೂಕ ಮತ್ತು ವಾಕ್ ಚಲನಚಿತ್ರದ ಬಳಕೆ ಪರಿಣಾಮಕಾರಿಯಾದ ಮಾಧ್ಯಮಬಳಕೆಯ ಸಾಮಗ್ರಿ.
7. ಸೂತ್ರ ಪಟ್ಟಿಕೆಗಳ ಬಳಕೆ : ಫ್ರಾನ್ಸಿಸ್ ಬೇಕನ್ ಪ್ರತಿಪಾದಿಸಿದ ಅನುಗಮನ ಪದ್ಧತಿಯು ಭಾಷಾ ಕಲಿಕೆಯಲ್ಲಿ ಪರಿಣಾಮಕಾರಿಯಾದ ಬೋಧನಾ ಮಾದರಿಯಾಗುವುದು. ಇಲ್ಲಿ ಬಳಕೆಯಾಗುವ ಸೂತ್ರದ ಪಟ್ಟಿಕೆಗಳು ಬಹುವಾಗಿ ಭಾಷಾ ಕಲಿಕೆಯ ಮೇಲೆ ಪರಿಣಾಮ ಬೀರುವವು. ಅಂದರೆ ನಿರ್ದಿಷ್ಟ ವಿಚಾರಗಳಿಂದ ಒಂದು ಸಾಮಾನ್ಯ ತೀರ್ಮಾನದತ್ತ ತಾರ್ಕಿಕವಾಗಿ ಯೋಚಿಸುವ ವಿಧಾವವೇ ಅನುಗಮನ ಪದ್ಧತಿಯಾಗಿದೆ. ಇಲ್ಲಿ ಬಳಸುವ ಮಾದರಿ ಸಾಮಗ್ರಿ ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಪಡಿಸುವುದು
8. ಜೋಡಣಾ ಸಾಮಗ್ರಿಗಳ ಬಳಕೆ : ಭೌತಿಕ ವಸ್ತು ಮಾಧ್ಯಮವಾದ ನಿಜ ವಸ್ತುಗಳು, ಮಾದರಿಗಳು, ನಮೂನೆಗಳು ಇತ್ಯಾದಿಗಳ ಬಳಕೆ. ಚಿತ್ರಗಳನ್ನು ಅನುಕ್ರಮವಾಗಿ ಜೋಡಿಸುವ ಪಟ್ಟಿಕೆಗಳು ಚಿತ್ರಗಳಿಗೆ ಸಂಬಂಧಿಸಿದಂತೆ ಅಕ್ಷರಗಳನ್ನು ಹೊಂದಿಸುವ ಪಟ್ಟಿಕೆಗಳು, ಕಾಗುಣಿತದ ಕಲಿಕಾ ಪಟ್ಟಿಗಳ ಜೊಡಣೆಯ ಪಟ್ಟಿಕೆಗಳು, ಫ್ಲಾಶ್ ಕಾರ್ಡ್ ತಯಾರಿಸಿ ಅವುಗಳ ಮೇಲೆ ಪದಗಳನ್ನು ಬರೆಸುವ ಪಟ್ಟಿಕೆಗಳು ಇತ್ಯಾದಿ
9. ಪ್ರದರ್ಶನಾ ಫಲಕಗಳು : ವಿವಿಧ ರೀತಿಯ ಪ್ರದರ್ಶನಾ ಫಲಕಗಳನ್ನು ಮತ್ತು ಬೋರ್ಡ್‌ಗಳನ್ನು ಸಿದ್ಧಪಡಿಸಿ ಪ್ರದರ್ಶಿಸುವುದು. ಗಣಕ ಕಾರ್ಯಕ್ರಮಗಳ ಬಳಕೆ
10. ಆಧುನಿಕ ಶೈಕ್ಷಣಿಕ ಸಾಧನಗಳಾದ ಗಣಕ ವಿಜ್ಞಾನದ ಬಳಕೆ. ಕಂಪ್ಯೂಟರ್ ಶಿಕ್ಷಣದ ಆಧುನಿಕ ಬಳಕೆ ಹಳೆಗನ್ನಡ ಮತ್ತು ಭಾಷಾ ಕಲಿಕೆಗೆ ಇಂದು ಬಹು ಮುಖ್ಯ ಸಾಧನವಾಗಿದೆ. ಪಿ.ಪಿ.ಟಿ ಬಳಕೆಯ ಮೂಲಕ ಭಾಷಾ ಕಲಿಕಾ ಸೌಂದರ್ಯವನ್ನು ವೃದ್ಧಿಸಬಹುದು, ಕೀಲಿ ಮಣೆಯ ಬಳಕೆಯಿಂದ ಅಕ್ಷರ ಕಲಿಕೆಯನ್ನು ಬಹು ಬೇಗ ಕಲಿಸಬಹುದಾಗಿದೆ.
11. ಗಮಕ ವಾಚನ ನಮ್ಮ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಗಳಲ್ಲಿ ಬಹುಮುಖ್ಯವಾದುದು. ಹಳಗನ್ನಡ ಕಾವ್ಯಭಾಗವು ಹಾಡುಗಬ್ಬವಾದ್ದರಿಂದ ಗಮಕದ ಬಳಕೆ ಬೋಧನೆಗೆ ಹೆಚ್ಚು ಉಪಯಿಕ್ತವಾದುದಾಗಿದೆ.
12. ಎನ್.ಸಿ.ಇ.ಆರ್.ಟಿ. ರೂಪಿಸಿರುವ ಜಾದೂಯಿ ಪಿಟಾರಾ ಉಪಕ್ರಮವು ಮಕ್ಕಳ ಕಲಿಕೆಯಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತಿದೆ. ಇದು ಪ್ರಸ್ತುತ 13 ಭಾಷೆಗಳಲ್ಲಿ ಲಭ್ಯವಿದ್ದು ಭಾಷೆ, ಸಾಮಾಜಿಕ ಸಂದರ್ಭ, ಸ್ಥಳೀಯ ಸಂಸ್ಕೃತಿಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಆ ಮೂಲಕ ಕಲಿಕಾ ಚಟುವಟಿಕೆಯಲ್ಲಿ ಸಕ್ರಿಯವಾಗಿದೆ.
13. ಕರ್ನಾಟಕದ ಚನ್ನಪಟ್ಟಣದ ಗೊಂಬೆಗಳು ಮತ್ತು ಆಂಧ್ರಪ್ರದೇಶದ ಕೊಂಡಪಲ್ಲಿ

ಗೊಂಬೆಗಳು ಮೊದಲಾದವು ಪ್ರಾಥಮಿಕ ಹಂತದ ಮಕ್ಕಳಿಗೆ ಪರಿಣಾಮಕಾರಿಯಾಗಿ ವಿಷಯವನ್ನು ಬೋಧಿಸಲು ಅನುಕೂಲವಾದ ಕಲಿಕಾ ಸಾಮಾಗ್ರಿಗಳಗಿವೆ. ಉದಾ: ರಾಮಾಯಣ ಮತ್ತು ಮಾಹಾಭಾರತದ ವಸ್ತುವನ್ನು ಪ್ರತಿನಿಧಿಸುವ ಆಟಿಕೆಗಳು.

**ಉಪಸಂಹಾರ**

ಆಧುನಿಕ ಶಿಕ್ಷಣವು ಹೊಸಹೊಸ ಗುರಿ ಮತ್ತು ಉದ್ದೇಶಗಳೊಂದಿಗೆ ರಾಷ್ಟ್ರೀಯ ಕಾಳಜಿಯಾಗಿ ಇಂದು ಪರಿಣಮಿಸುತ್ತಿದೆ. ಸಾಂಪ್ರದಾಯಿಕ ಶಿಕ್ಷಣ ಪದ್ಧತಿಗಳು ಕಣ್ಮರೆಯಾಗಿ ಇಂದು ನವೀನ ಶಿಕ್ಷಣ ನೀತಿಗಳು ರೂಪುಗೊಳ್ಳುತ್ತಿವೆ. ರಾಷ್ಟ್ರೀಯ ಶಿಕ್ಷಣ ನೀತಿ–2020 ವಾಸ್ತವವಾಗಿ ಈ 21ನೆಯ ಶತಮಾನದ ಮೊದಲ ಭಾರತೀಯ ಶಿಕ್ಷಣ ನೀತಿಯಾಗಿದ್ದು. ಭಾರತದ ಪ್ರಾದೇಶಿಕ ಹಾಗೂ ಜಾಗತಿಕ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ರೂಪಿತವಾದ ಬಹುಮುಖ್ಯವಾದ ಯೋಜನೆಯಾಗಿದೆ. ಇದು ಸಾಕಾರಗೊಳ್ಳಬೇಕಾದರೆ ಪ್ರಾಥಮಿಕ ಶಿಕ್ಷಣದಲ್ಲಿನ ಭಾಷೆ ಹದಗೊಳ್ಳಬೇಕು. ಭಾಷೆ ಕಲಿಕೆಯ ಸೋಲು ಇನ್ನಿತರ ಎಲ್ಲಾ ವಿಷಯಗಳ ಮೇಲೂ ಪರಿಣಾಮ ಬೀರುವುದರಿಂದ ಭಾಷಾ ಕಲಿಕೆಗೆ ಇಂದು ಹೆಚ್ಚು ಗಮನ ಹರಿಸಬೇಕಾಗಿದೆ ಆದುದರಿಂದ ಭಾಷಾ ಕಲಿಕೆಗೆ ಪೂರಕ ಸಾಮಗ್ರಿಗಳ ಅಗತ್ಯ ಇದ್ದೇ ಇದೆ.

**ಪರಾಮರ್ಶನಕೃತಿಗಳು**

1. ಅನುಸೂಯ ವಿ. ಪರಗಿ, ಮಾತೃಭಾಷೆ ತತ್ತ್ವ ಮತ್ತು ಬೋಧನಾ ಮಾರ್ಗ, ಅನುಸೂಯ ಪ್ರಕಾಶನ, ಪುರವರ, ಮಧುಗಿರಿ ತಾಲೂಕು–1990
2. ಕೊಂಗವಾಡ ಎನ್ ಬಿ, ಶೈಕ್ಷಣಿಕ ಮನೋವಿಜ್ಞಾನ, ವಿದ್ಯಾನಿಧಿ ಪ್ರಕಾಶನ, ಗದಗ, –ಐದನೇ ಮುದ್ರಣ–2006–07
3. ಗೋವಿಂದರಾವ್ ಎ.ವಿ. ಸೆಕೆಂಡರಿ ಶಿಕ್ಷಣ ಮತ್ತು ಶಿಕ್ಷಕನ ಕಾರ್ಯಗಳು, ಚೇತನ ಬುಕ್ ಹೌಸ್, ಮೈಸೂರು–2006
4. ನಾಗರಾಜ ಪಿ. ಶೈಕ್ಷಣಿಕ ಆಡಳಿತ ಮತ್ತು ಕರ್ನಾಟಕದಲ್ಲಿನ ಶಿಕ್ಷಣದ ನೂತನ ಉಪಕ್ರಮಗಳು, ವಿದ್ಯಾನಿಧಿ ಪ್ರಕಾಶನ, ಗದಗ– 2008
5. ಭರತ್ ಭೂಷಣ್ ಬಿ. ಶಿಕ್ಷಣದಲ್ಲಿ ಪ್ರಕ್ರಿಯೆಗಳು ಹಾಗೂ ವಿಚಾರಗಳು, ನವೀನ ಪ್ರಕಾಶನ, ಹರಿಹರ, –ಚತುರ್ಥ ಮುದ್ರಣ–2000
6. ವಾಮದೇವಪ್ಪ ಹೆಚ್ ವಿ, ಶೈಕ್ಷಣಿಕ ಮನೋವಿಜ್ಞಾನ, ಶ್ರೇಯಸ್ ಪಬ್ಲಿಕೇಷನ್, ದಾವಣಗೆರೆ, ಮೂರನೇ ಮುದ್ರಣ–2011
7. ಶಿವಶಂಕರ ಹೆಚ್.ವಿ, ಭಾರತದಲ್ಲಿ ಶಿಕ್ಷಣ, ಹಂಜಿ ಪ್ರಕಾಶನ, ದಾವಣಗೆರೆ, –2007
8. ಸುರೇಶ ಪಿ.ಎಸ್. ಮತ್ತು ರಾವ್ ಟಿ.ಪಿ. ಎಸ್. ರಾಷ್ಟ್ರೀಯ ಕಾಳಜಿ ಮತ್ತು ಶಿಕ್ಷಣ, ಚಿತ್ತಾರ ಪ್ರಕಾಶನ, ಮೈಸೂರು–2007
9. ರಾಷ್ಟ್ರೀಯ ಶಿಕ್ಷಣ ನೀತಿ–2020(ಕನ್ನಡ ಅನುವಾದ)–ಶಿಕ್ಷಣ ಸಚಿವಾಲಯ, ಭಾರತ ಸರ್ಕಾರ, 2020

❖❖❖

# ಭಾರತೀಯ ಸಂಸ್ಕೃತಿ ಮತ್ತು ರಾಜಕೀಯ ವ್ಯವಸ್ಥೆಯ ಹಿನ್ನೆಲೆಯಲ್ಲಿ ಫೆಡರಲಿಸಂ ಕುರಿತಾದ ಚರ್ಚೆಗಳು : ಒಂದು ಸೈದ್ಧಾಂತಿಕ ವಿಶ್ಲೇಷಣೆ

**ಯುವರಾಜ ಎಂ. ಹಿತ್ಲರ್**
ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ

**ಡಾ. ಉದ್ದಗಟ್ಟಿ ವೆಂಕಟೇಶ**
ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ

**ಪೀಠಿಕೆ**

ಮೂಲಭೂತವಾಗಿ ಭಾರತದ ರಾಜಕೀಯ ವ್ಯವಸ್ಥೆಯ ಸಂದರ್ಭದಲ್ಲಿ ಫೆಡರಲಿಸಂ ಚರ್ಚೆಗಳ ಪ್ರಸ್ತುತತೆ ಮತ್ತು ಅದರ ಚರಿತ್ರೆಯನ್ನು ಆಲೋಚನೆ ಮಾಡುವುದು ಪ್ರಮುಖವಾಗುತ್ತದೆ. ಭಾರತದಲ್ಲಿ ಪ್ರಚಲಿತದಲ್ಲಿರುವ ಫೆಡರಲಿಸಂ ಕುರಿತಾದ ಚರ್ಚೆಗಳನ್ನು ಅರ್ಥಮಾಡಿಕೊಳ್ಳಬೇಕೆಂದರೆ, ಆ ಚರ್ಚೆಗಳು ಏಕೆ ಬಂದವು? ಮತ್ತು ಅವು ಯಾವ ಹಿನ್ನಲೆಯಲ್ಲಿ ಬಂದಿವೆ? ಎಂಬುದನ್ನು ತಿಳಿಯಬೇಕಾಗುತ್ತದೆ. ಹಾಗೆ ನೋಡಿದರೆ ಭಾರತದಲ್ಲಿರುವಂತಹ ರಾಜಕೀಯ ಸಂಸ್ಥೆಗಳು, ರಾಜಕೀಯ ವ್ಯವಸ್ಥೆ ಅಥವಾ ಆಳ್ವಿಕೆ ಎನ್ನುವಂತಹದು ಶತಶತಮಾನಗಳಷ್ಟೂ ಹಳೆಯದಾಗಿದ್ದರೂ ಸಹ, ಸಮಕಾಲೀನ ಭಾರತದ ರಾಜಕೀಯ ಸಾಂಸ್ಥಿಕ ವ್ಯವಸ್ಥೆಗಳು ವಸಾಹತು ಕಾಲಘಟ್ಟದ ನಂತರ ಬ್ರಿಟಿಷ್ ವಸಾಹತುಶಾಹಿಯ ಭಾಗವಾಗಿ ಬಂದಿವೆ. ಅಂದರೆ ಆಧುನಿಕ ಭಾರತದಲ್ಲಿರುವಂತಹ ಬಹುತೇಕ ರಾಜಕೀಯ ಸಂಸ್ಥೆಗಳು ಯುರೋಪಿನ ಸಂಸ್ಕೃತಿಯಿಂದ ಬಂದಂತವುಗಳಾಗಿವೆ. ಹಾಗಾಗಿ ಯಾವ ಸಂಸ್ಕೃತಿಯಲ್ಲಿ ಒಂದು ರಾಜಕೀಯ ಸಂಸ್ಥೆ ರೂಪುಗೊಂಡಿರುತ್ತದೆಯೋ, ಅದೇ ಸಂಸ್ಕೃತಿಯ ಹಿನ್ನಲೆಯಲ್ಲಿ ಅದರ ಸಾಂಸ್ಥಿಕ ವ್ಯವಸ್ಥೆಯ ಉದ್ದೇಶ, ಗುರಿ ಇತ್ಯಾದಿಗಳು ಸಹ ಅರ್ಥಪಡೆದಿರುತ್ತವೆ. ಹಾಗಾಗಿ ಈ ರಾಜಕೀಯ ವ್ಯವಸ್ಥೆಗಳು ಬೆಳೆದುಬಂದ ಸಂಸ್ಕೃತಿ ಮತ್ತು ಅದರ ಸೈದ್ಧಾಂತಿಕ ಹಿನ್ನಲೆಯನ್ನು ಅವುಗಳ ಮೂಲದಿಂದ ಅರ್ಥಮಾಡಿಕೊಂಡು ವಿಶ್ಲೇಷಿಸುವುದು ಅನಿವಾರ್ಯವಾಗುತ್ತದೆ. ಆಗ ಮಾತ್ರವೇ ಭಾರತದ ಸಂದರ್ಭದಲ್ಲೂ ಇರುವ ಅನೇಕ ರಾಜಕೀಯ ಸಮಸ್ಯೆಗಳಿಗೆ ಫೆಡರಲಿಸಂ ಪರಿಹಾರವಾಗಬಲ್ಲದೇ? ಮತ್ತು ಭಾರತೀಯ ರಾಜಕೀಯ ವಿದ್ಯಮಾನಗಳನ್ನು ಫೆಡರಲಿಸಂನ ಪರಿಭಾಷೆಯ ಚೌಕಟ್ಟಿನಲ್ಲಿ ವಿವರಿಸಿಕೊಳ್ಳಬಹುದೇ? ಎಂಬ ಮೂಲಭೂತ ಪ್ರಶ್ನೆಯನ್ನು ಕೇಳಿಕೊಳ್ಳಬಹುದಾಗಿದೆ. ಈ ದೃಷ್ಟಿಯಿಂದ ಫೆಡರಲಿಸಂ ಎಂಬ ಪರಿಕಲ್ಪನೆಯು ಯುರೋಪಿನ ಸಂದರ್ಭದಲ್ಲಿ ಹೇಗೆ ಬೆಳೆದುಬಂದಿತು ಎಂಬುದನ್ನು ಗ್ರಹಿಸಿಕೊಳ್ಳುವುದು ಅತ್ಯನಿವಾರ್ಯ.

## ಫೆಡರಲಿಸಂ ಪರಿಕಲ್ಪನೆಯ ಚಾರಿತ್ರಿಕ ಹಿನ್ನೆಲೆ

ಯುರೋಪಿನಲ್ಲಿ ಫೆಡರಲಿಸಂ ಕುರಿತಾದ ಚರ್ಚೆಗಳನ್ನು ವಿಶ್ಲೇಷಿಸುವುದರ ದೃಷ್ಟಿಯಿಂದ ಬೆಲ್ಜಿಯಂ, ಜೆಕೋಸ್ಲಾವಿಯಾ, ಯುಗೋಸ್ಲಾವಿಯಾ, ಕ್ಯಾಟಲೋನಿಯಾ,

ಸ್ಕಾಟ್‌ಲ್ಯಾಂಡ್ ಹಾಗೂ ಐರಿಷ್ ರಾಷ್ಟ್ರಗಳಲ್ಲಿ ಯಾವ ಅಂಶಗಳ ಭಾಗವಾಗಿ ಫೆಡರಲಿಸಮ್‌ನ ಚರ್ಚೆಗಳು ಹುಟ್ಟಿಕೊಂಡಿವೆ ಎಂಬುದನ್ನು ನೋಡುವುದಾದದರೆ, ಮುಖ್ಯವಾಗಿ 'ಆಸ್ಟ್ರೋ–ಹಂಗೇರಿಯನ್ ಭಾಗವು ಜರ್ಮನ್ನರು, ಹಂಗೇರಿಯನ್ನರು, ಜೆಕ್, ಸ್ಲೋವಾಕ್‌ಗಳು, ಕ್ರೊಯೇಷಿಯನ್ನರು, ಸೆರ್ಬ್ಗಳು, ರೋಮೆನಿಯನ್ನರು, ಉಕ್ರೇನಿಯನ್ನರು ಮತ್ತು ಇತರರನ್ನು ಒಳಗೊಂಡ ಬಹು ಜನಾಂಗೀಯ ಗುಂಪುಗಳ ಸಾಮ್ರಾಜ್ಯವಾಗಿತ್ತು. ಈ ವಿವಿಧ ಜನಾಂಗೀಯ ಗುಂಪುಗಳು ತಮ್ಮದೇ ಪ್ರಭುತ್ವವನ್ನು ರಚಿಸಿಕೊಂಡು ಸ್ವಾತಂತ್ರ್ಯವನ್ನು (ಸ್ವಾಯತ್ತತೆ) ಬಯಸಿದ್ದರ ಪರಿಣಾಮವಾಗಿ ರಾಷ್ಟ್ರೀಯವಾದಿ ಚಳವಳಿಗಳು ಹುಟ್ಟಿಕೊಂಡವು. ಈ ಸಂದರ್ಭದಲ್ಲಿ ಸ್ವಾಯತ್ತತೆ ಎನ್ನುವ ಬೇಡಿಕೆಯು ಜನಾಂಗ, ಭಾಷೆ ಮತ್ತು ನೇಷನ್‌ನ್ನುಗಳನ್ನೊಳಗೊಂಡು ಬರುತ್ತಿರುವಂತಹ ಬೇಡಿಕೆಯಾಗಿವೆ' (Taylor, A. J. P, 1948: Okey, Robin:2001). ಇದೇ ಸಂದರ್ಭದಲ್ಲಿ ಬೆಲ್ಜಿಯಂ ನೆದರಲ್ಯಾಂಡ್‌ನಿಂದ ವಿಭಜನೆಯಾಗುವುದಕ್ಕೆ ಪ್ರಯತ್ನಿಸುತ್ತಿತ್ತು. ಕಾರಣವೇನೆಂದರೆ 'ಉತ್ತರ ನೆದರ್ಲ್ಯಾಂಡ್ಸ್ ಪ್ರಧಾನವಾಗಿ ಪ್ರೊಟೆಸ್ಟೆಂಟ್ ಆಗಿದ್ದರೆ; ಬೆಲ್ಜಿಯಂ ಸೇರಿದಂತೆ ಬಹುಪಾಲು ದಕ್ಷಿಣದ ಪ್ರದೇಶಗಳು ಕ್ಯಾಥೋಲಿಕ್ ಆಗಿದ್ದವು. ಶಿಕ್ಷಣ ಕ್ಷೇತ್ರ ಮತ್ತು ಪಾದ್ರಿಗಳ ನೇಮಕಾತಿಯಲ್ಲಿ ರಿಲಿಜಿಯಸ್ ವಿಷಯಗಳನ್ನು ನಿಯಂತ್ರಿಸುವ ಪ್ರೊಟೆಸ್ಟೆಂಟರ ಪ್ರಯತ್ನಗಳಿಗೆ ಬೆಲ್ಜಿಯನ್ನರು ವಿರೋಧ ವ್ಯಕ್ತಪಡಿಸಿದರು. ಇದರ ಜೊತೆಗೆ ದಕ್ಷಿಣದಲ್ಲಿ ಫ್ರೆಂಚ್ ಪ್ರಬಲ ಭಾಷೆಯಾಗಿತ್ತು. ಆದರೆ ಉತ್ತರ ಮತ್ತು ದಕ್ಷಿಣದಲ್ಲಿ ಡಚ್ ಆಡಳಿತದ ಭಾಷೆಯಾಗಿತ್ತು. ಈ ಭಾಷಾ ಸಮಸ್ಯೆಯೇ ಬೆಲ್ಜಿಯಂ ನೆದರಲ್ಯಾಂಡ್‌ನಿಂದ ಪ್ರತ್ಯೇಕಗೊಳ್ಳಲು ಪ್ರಮುಖ ಕಾರಣವಾಯಿತು' (history of Belgium). ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೇನೆಂದರೆ ಕೇವಲ ಫ್ರೆಂಚ್ ಮತ್ತು ಡಚ್ ವಿಭಿನ್ನ ಭಾಷೆಗಳಾಗಿರಲಿಲ್ಲ, ಇವುಗಳು ಭಾಷೆಯ ಜೊತೆಗೆ ವಿಭಿನ್ನ ಜನಾಂಗೀಯ ಗುಂಪುಗಳು ಸಹ ಆಗಿದ್ದವು. ವಿವಿಧ ಜನಾಂಗೀಯ ಗುಂಪುಗಳಾಗಿರುವ ಕಾರಣದಿಂದಲೇ ಇವುಗಳು ತಮ್ಮ ಅಸ್ಮಿತೆಯ ದೃಷ್ಟಿಯಿಂದ ಪ್ರಭುತ್ವವನ್ನು ರಚಿಸಿಕೊಳ್ಳಲು ನೆದರಲ್ಯಾಂಡ್‌ನಿಂದ ಪ್ರತ್ಯೇಕತೆಯನ್ನು ಬಯಸಿದವು ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ನೆದರಲ್ಯಾಂಡ್‌ನಿಂದ ಬೆಲ್ಜಿಯಂ ಪ್ರತ್ಯೇಕಗೊಂಡರು ಬೆಲ್ಜಿಯಂನಲ್ಲಿ ಪುನಃ ಸ್ವಾಯತ್ತತೆಯ ಬೇಡಿಕೆ ಪ್ರಾರಂಭವಾದವು. ಅದಕ್ಕೆ ಪ್ರಮುಖ ಕಾರಣವೆಂದರೆ, 'ಬೆಲ್ಜಿಯಂ ಪ್ರಭುತ್ವವು ಫ್ಲೇಮಿಶ್ ಮತ್ತು ವಾಲೂನ್‌ಗಳು ಎಂಬ ವ್ಯತಿರಿಕ್ತವಾದಂತಹ ಜನಾಂಗೀಯ ಗುಂಪುಗಳನ್ನು ಒಳಗೊಂಡಿತ್ತು. ಈ ಎರಡು ಗುಂಪುಗಳಲ್ಲಿನ ಭಾಷೆ ವಿಭಿನ್ನವಾಗಿತ್ತು. ಈ ಭಾಷೆ ಮತ್ತು ಜನಾಂಗೀಯ ವ್ಯತ್ಯಾಸಗಳಿರುವ ಕಾರಣಕ್ಕಾಗಿ ತಮ್ಮ ಅಸ್ಮಿತೆಯನ್ನು ಗುರುತಿಸಿಕೊಳ್ಳಲು ಇವುಗಳ ನಡುವೆ ಸ್ವಾಯತ್ತತೆಯ ಬೇಡಿಕೆಗಳು ಹೆಚ್ಚಾದವು' (The Walloon Region - History and Culture). ಈ ಸ್ವಾಯತ್ತತೆಯ ಬೇಡಿಕೆಯ ಸಂದರ್ಭದಲ್ಲಿ ಅಲ್ಲಿನ ಪ್ರಭುತ್ವವು 'ಬೆಲ್ಜಿಯಂನಲ್ಲಿ ಎರಡು ವಿಭಿನ್ನ ಭಾಗಗಳಲ್ಲಿ (ಫ್ಲಾಂಡರ್ಸ್ ಮತ್ತು ವಾಲೋನಿಯಾ) ಹೆಚ್ಚುತ್ತಿರುವ ಜನಾಂಗೀಯ (ಫ್ಲೇಮಿಶ್ ಮತ್ತು ವಾಲೂನ್ಸ್) ಮತ್ತು ಭಾಷಾ (ಡಚ್ ಮತ್ತು ಫ್ರೆಂಚ್) ಉದ್ವಿಗ್ನತೆಗಳನ್ನು ನಿಯಂತ್ರಿಸಲು ಫೆಡರಲ್ ಸರ್ಕಾರದ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಯಿತು. ಈ ಫೆಡರಲ್ ಸರ್ಕಾರದ ಅಡಿಯಲ್ಲಿ ಬೆಲ್ಜಿಯಂ ಪ್ರಭುತ್ವ ಅಥವಾ ಸ್ಟೇಟ್‌ನ ಒಳಗಡೆ ವಿಭಿನ್ನ ಜನಾಂಗ ಮತ್ತು ಭಾಷಾ ಗುಂಪುಗಳಿಗೆ ಫೆಡರಲ್

ರಚನೆಯು ಸ್ವಾಯತ್ತತೆಯನ್ನು ನೀಡಿತು' (Maureen Covell, Kris Deschouwer, Alexander Murphy, Etc).

ಈ ಅಂಶಗಳನ್ನು ಅವಲೋಕಿಸಿದಾಗ ಒಂದು ಪ್ರಭುತ್ವದಡಿಯಲ್ಲಿ ವಿವಿಧ ಜನಾಂಗೀಯ ಗುಂಪುಗಳು ಬದುಕಬೇಕಾಗುವ ಅನಿವಾರ್ಯತೆ ಸೃಷ್ಟಿಯಾದಾಗ ಬೆಲ್ಜಿಯಂನಲ್ಲಿ ಫೆಡರಲಿಸಂನ ಪರಿಕಲ್ಪನೆಯನ್ನು ಹುಡುಕಿಕೊಂಡಿರುವುದು ಸ್ಪಷ್ಟವಾಗುತ್ತದೆ. ಅಂದರೆ ಹಲವು ಜನಾಂಗಗಳು ಸೇರಿ ಒಂದು ಸ್ಟೇಟ್‌ನೊಳಗಡೆ ಇರಬೇಕು; ಅವು ಪ್ರತ್ಯೇಕವಾಗಿ ಇರಲಿಕ್ಕೆ ಸಾಧ್ಯವಿಲ್ಲ ಎನ್ನುವ ಪರಿಸ್ಥಿತಿ ಉಂಟಾದರೆ ಅದಕ್ಕೆ ಫೆಡರಲಿಸಂ ಪರಿಕಲ್ಪನೆಯು ಪರಿಹಾರವಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

ಮುಂದುವರೆದು ಆಸ್ಟ್ರೋ–ಹಂಗೇರಿಯನ್ ಭಾಗವಾಗಿದ್ದ 'ಜೆಕೋಸ್ಲೋವಾಕಿಯಾ ಜೆಕ್, ಸ್ಲೋವಾಕ್, ಜರ್ಮನ್ನರು ಮತ್ತು ಹಂಗೇರಿಯನ್ನರನ್ನು ಸೇರಿದಂತೆ ವಿವಿಧ ಅಲ್ಪಸಂಖ್ಯಾಂತರನ್ನು ಒಳಗೊಂಡಿತ್ತು. ಜೆಕೋಸ್ಲೋವಾಕಿಯಾದ ಎರಡು ಪ್ರಾಥಮಿಕ ಜನಾಂಗೀಯ ಗುಂಪುಗಳೆಂದರೆ ಜೆಕ್ ಮತ್ತು ಸ್ಲೋವಾಕ್. ಆದರೆ ಈ ಎರಡು ಜನಾಂಗಗಳು ಐತಿಹಾಸಿಕ ಮತ್ತು ಸಾಂಸ್ಕೃತಿಕವಾಗಿ ವಿಭಿನ್ನವಾಗಿದ್ದವು. ಜನಾಂಗೀಯ ಅಸ್ಮಿತೆಯನ್ನು ಗಟ್ಟಿಗೊಳಿಸಿಕೊಳ್ಳುವ ಸಂದರ್ಭದಲ್ಲಿ ಕಾಲಕ್ರಮೇಣ ಅಧಿಕಾರ, ಸಾಂಸ್ಕೃತಿಕ ಪ್ರತಿಷ್ಠೆ, ಭಾಷಾ ವಿಷಯಗಳಿಗೆ ಸಂಬಂಧಿಸಿದಂತೆ ಜೆಕ್ ಮತ್ತು ಸ್ಲೋವಾಕ್‌ಗಳ ನಡುವೆ ಉದ್ವಿಗ್ನತೆಗಳು ಪ್ರಾರಂಭವಾದವು. ಕಾರಣ ಜೆಕ್ ಮತ್ತು ಸ್ಲೋವಾಕ್ ಎರಡು ವಿಭಿನ್ನ ಜನಾಂಗೀಯ ಗುಂಪುಗಳಾಗಿದ್ದವು. ಜೆಕ್ ಪ್ರೊಟೆಸ್ಟೆಂಟಾದರೆ, ಸ್ಲೋವಾಕಿಯಾ ಪ್ರದೇಶವು ರೋಮನ್ ಕ್ಯಾಥೋಲಿಕ್ ಆಗಿತ್ತು. ಬೊಹೆಮಿಯಾದಲ್ಲಿ ಹರಡಿದ ಪ್ರೊಟೆಸ್ಟೆಂಟ್ ಸುಧಾರಣೆಗಳು ಹಾಗೂ ಹ್ಯಾಬ್ಸ್‌ಬರ್ಗ್‌ನಲ್ಲಿ ಕ್ಯಾಥೋಲಿಕ್ ರಿಲಿಜನನ್ನು ಬೆಂಬಲಿಸಿದ ರಾಜಕೀಯ ಪ್ರಭಾವಗಳು ಇವೆರೆಡರ ನಡುವಿನ ರಿಲಿಜಸ್ ವ್ಯತ್ಯಾಸಗಳಿಗೆ ಕಾರಣವಾಯಿತು. ಈ ರಿಲಿಜಸ್ ವ್ಯತ್ಯಾಸಗಳ ಕಾರಣಗಳಿಂದಾಗಿ ಜೆಕೋಸ್ಲೋವಾಕಿಯವು ಜೆಕ್ ಮತ್ತು ಸ್ಲೋವಾಕಿಯಾ ಎಂಬ ಎರಡು ಸ್ವತಂತ್ರ ಪ್ರಭುತ್ವಗಳಾಗಿ ವಿಭಜನೆಯಾಯಿತು' (Stein, 1997:88). 'ಈ ವಿಭಜನೆಯಿಂದ ಉಂಟಾಗುವ ಉದ್ವಿಗ್ನತೆಯನ್ನು ಸರಿಪಡಿಸುವ ದೃಷ್ಟಿಯಿಂದ ಜೆಕೋಸ್ಲಾವಾಕಿಯಾವನ್ನು 1968ರಲ್ಲಿ ಜೆಕ್ ಗಣರಾಜ್ಯ ಮತ್ತು ಸ್ಲೋವಾಕ್ ಗಣರಾಜ್ಯವನ್ನೊಳಗೊಂಡ ಸ್ವಾಯತ್ತ ಫೆಡರಲ್ ರಾಜ್ಯವಾಗಿ ಪರಿವರ್ತಿಸಲಾಯಿತು' (Kraus & Stanger, 2000:32).

ಯುಗೋಸ್ಲಾವಿಯಾದ ಸಂದರ್ಭದಲ್ಲಿ ಫೆಡರಲಿಸಂ ಚರ್ಚೆಯನ್ನು ಗಮನಿಸುವುದಾದರೆ 'ಜನಾಂಗೀಯ ವೈವಿಧ್ಯತೆಯನ್ನು ನಿರ್ವಹಿಸುವ ದೃಷ್ಟಿಯಿಂದ ಯುಗೋಸ್ಲಾವಿಯಾವು Serbs, Croats, Slovenes, Bosniaks, Montenegrins, Macedonians ಮತ್ತು ಇತರೆ ದೊಡ್ಡ ಜನಸಂಖ್ಯೆಯನ್ನು ಹೊಂದಿರುವ ಬಹು–ಜನಾಂಗೀಯ ಪ್ರಭುತ್ವವಾಗಿತ್ತು'. 'ಯುಗೋಸ್ಲಾವಿಯಾದಲ್ಲಿನ ವಿವಿಧ ಭಾಷೆ ಮತ್ತು ಜನಾಂಗೀಯ ಗುಂಪುಗಳ ರಿಲಿಜಿಯಸ್ ಆಚರಣೆಗಳು ಒಂದಕ್ಕೊಂದು ಹೊಂದಾಣಿಕೆಯಾಗದೆ ಸಂಘರ್ಷಗಳುಂಟಾದವು. ಈ ಸಂಘರ್ಷಗಳಿಂದ ಜನಾಂಗೀಯ ಗುಂಪುಗಳು ನೇಷನ್ ಎನ್ನುವ ಅಸ್ಮಿತೆಯ ಹೆಸರಿನಲ್ಲಿ ಪ್ರಭುತ್ವವನ್ನು ರೂಪಿಕೊಳ್ಳುವ ಸ್ವಾಯತ್ತತೆಯನ್ನು ಬಯಸುತ್ತವೆ' (History of Yugoslavia). ಈ ಜನಾಂಗೀಯ ಮತ್ತು ಭಾಷಾ ವಿಭಿನ್ನತೆಯಿಂದ ಉಂಟಾಗುವ ಉದ್ವಿಗ್ನತೆಗಳನ್ನು ಸರಿದೂಗಿಸುವ

ದೃಷ್ಟಿಯಿಂದ ಇಲ್ಲಿನ ಎಲ್ಲಾ ವಿವಿಧ ಜನಾಂಗೀಯ ಗುಂಪುಗಳಿಗೆ ಫೆಡರಲ್ ಪರಿಕಲ್ಪನೆಯ ಚೌಕಟ್ಟಿನಲ್ಲಿ ಸ್ವಾಯತ್ತತೆಯನ್ನು ನೀಡಲಾಯಿತು'(Burg:1983:62-73). 'ವಿಭಿನ್ನತೆಯನ್ನು ಹೊಂದಿರುವ ಪ್ರತಿ ಗಣರಾಜ್ಯವು ಯುಗೋಸ್ಲಾವಿಯಾದ ಭಾಗವಾಗಿರುವುದರಿಂದ ಫೆಡರಲಿಸಂ ಚೌಕಟ್ಟಿನಡಿಯಲ್ಲಿ ಪ್ರತಿ ಜನಾಂಗೀಯ ಭಾಗಕ್ಕೂ ಐತಿಹಾಸಿಕವಾಗಿ ಪರಂಪರೆಗಳನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಸ್ವಾಯತ್ತತೆಗೆ ಅವಕಾಶ ಮಾಡಿಕೊಟ್ಟಿತು' (Woodward:1995:116).

ಕ್ಯಾಟಲೋನಿಯಾ ಫೆಡರಲಿಸಂ ಚರ್ಚೆಯ ಸಂದರ್ಭದಲ್ಲಿ 'ಕ್ಯಾಟಲನ್ ಸ್ಪೇನ್‌ನ ಏಕೀಕೃತ ರಾಜ್ಯದ ಭಾಗವಾಗಿದ್ದೂ, ಕ್ಯಾಟಲನ್ ಪ್ರದೇಶವು ಹೊಂದಿರುವಂತಹ ವಿಶಿಷ್ಟ ಭಾಷೆ (ಕ್ಯಾಟಲನ್) ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿನ ಭಿನ್ನತೆಯಿಂದ ಅದು ಏಕೀಕೃತ ರಾಷ್ಟ್ರದೊಳಗೆ ತನ್ನ ಅಸ್ಮಿತೆಯನ್ನು ಗಟ್ಟಿಮಾಡಿಕೊಳ್ಳಲು ಸ್ವಾಯತ್ತತೆಯ ಬೇಡಿಕೆಯನ್ನು ಮುಂದಿಟ್ಟಿತು'(Agranoff, R:1996: 385-401). 'ಕ್ಯಾಟಲೋನಿಯಾದ ಐತಿಹಾಸಿಕ ಅಸ್ಮಿತೆ, ತನ್ನದೇ ಆದ ಭಾಷೆ (ಕ್ಯಾಟಲಾನ್), ವಿಶಿಷ್ಟ ಸಂಸ್ಕೃತಿ ಮತ್ತು ದೀರ್ಘಕಾಲೀನ ರಾಜಕೀಯ ಸಂಪ್ರದಾಯಗಳು ಸ್ಪೇನಿನ ಆಳ್ವಿಕೆಯಲ್ಲಿ ಫೆಡರಲ್ ಚೌಕಟ್ಟಿನೊಳಗಡೆ ಹೆಚ್ಚಿನ ಸ್ವಾಯತ್ತತೆಗಾಗಿ ಒತ್ತಾಯಿಸುವುದು ಪ್ರಮುಖವಾದ ಅಂಶವಾಗಿತ್ತು' (Guibernau:2004:67). 'ಕ್ಯಾಟಲೋನಿಯಾದಲ್ಲಿ ಫೆಡರಲಿಸಂ ಅಥವಾ ಸ್ವಾಯತ್ತತೆಯ ಅಳವಡಿಕೆಯು ಅಲ್ಲಿ ಐತಿಹಾಸಿಕವಾಗಿದ್ದ ಸ್ವಾಯತ್ತತೆಯ ಪರಂಪರೆ, ವಿಭಿನ್ನ ಸಾಂಸ್ಕೃತಿಕ ಮತ್ತು ಭಾಷೆಯ ಮೇಲೆ ರಚನೆಯಾಗಿದ್ದು, ಇವುಗಳನ್ನು ರಕ್ಷಣೆ ಮಾಡುವ ಸಲುವಾಗಿ ಸ್ಪೇನ್ ತನ್ನ ಏಕೀಕೃತ ರಾಷ್ಟ್ರವನ್ನು ಒಗ್ಗೂಡಿಸಿಕೊಂಡಿರಲು ಫೆಡರಲ್ ಚೌಕಟ್ಟಿನೊಳಗಡೆ ಸ್ವಾಯತ್ತತೆಯನ್ನು ನೀಡಿತು'(Guibernau:2004:68).

ಕ್ಯಾಟಲೋನಿಯಾದಲ್ಲಿ ಸ್ವಾಯತ್ತತೆಯು ಅಲ್ಲಿನ ವಿಶಿಷ್ಟ ಸಂಸ್ಕೃತಿ, ಭಾಷೆ ಮತ್ತು ಇತಿಹಾಸದಿಂದ ಹುಟ್ಟಿಕೊಂಡಿದ್ದು, ಇದು ಅಲ್ಲಿ ವಾಸಿಸುತ್ತಿರುವ ಆ ಜನಾಂಗದ ಪ್ರಾದೇಶಿಕ ಅಸ್ಮಿತೆಯ ಭಾಗವಾಗಿ ಸ್ವಾಯತ್ತತೆಯನ್ನು ಸ್ಪ್ಯಾನಿಷ್ ಪ್ರಭುತ್ವದ ವಿಶಾಲ ಸಮಗ್ರತೆಯೊಂದಿಗೆ ಸ್ವಾಯತ್ತತೆಯನ್ನು ನೀಡಲು ಕಾರಣವಾಯಿತು ಎಂಬುದು ಸ್ಪಷ್ಟವಾಗುತ್ತದೆ. ಈ ಮೇಲಿನ ಎಲ್ಲಾ ಅಂಶಗಳನ್ನು ನೋಡಿದಾಗ ನೇಷನ್‌ಸ್ಟೇಟ್ ಹಾಗೂ ಫೆಡರಲಿಸಂ ಇವೆರಡಕ್ಕೂ ಸಂಬಂಧವಿರುವಂತೆ ಕಾಣುತ್ತದೆ.

**ನೇಷನ್ ಸ್ಟೇಟ್ ಮತ್ತು ಫೆಡರಲಿಸಂ**

'ನೇಷನ್–ಸ್ಟೇಟ್ ಮತ್ತು ಫೆಡರಲಿಸಂ ನಡುವಿನ ಸಂಬಂಧವು ರಾಷ್ಟ್ರೀಯ ಅಧಿಕಾರ ಮತ್ತು ಪ್ರಾದೇಶಿಕ ಸ್ವಾಯತ್ತತೆಯನ್ನು ಒಳಗೊಂಡಿದೆ. ನೇಷನ್–ಸ್ಟೇಟ್ ರಾಷ್ಟ್ರದ ಏಕತೆಯನ್ನು ಉತ್ತೇಜಿಸಿದರೆ; ಫೆಡರಲ್ ವ್ಯವಸ್ಥೆಯು ವೈವಿಧ್ಯತೆ ಮತ್ತು ವಿಕೇಂದ್ರೀಕರಣಕ್ಕೆ ಅವಕಾಶವನ್ನು ನೀಡುತ್ತದೆ. ಅಂದರೆ ವಿಭಿನ್ನ ಜನಾಂಗದವರು ವಿಭಿನ್ನ ರಿಲಿಜನ್ನು, ಭಾಷೆಗಳಿಗೆ ಸೇರಿದವರಾಗಿರುವುದರಿಂದ ಅವರ ಸಮಸ್ಯೆಗಳನ್ನು ನಿವಾರಿಸಲು ಫೆಡರಲಿಸಂ ಪರಿಕಲ್ಪನೆಯನ್ನು ಬಳಸಲಾಗುತ್ತದೆ. ಈ ದೃಷ್ಟಿಯಿಂದ ಫೆಡರಲಿಸಂ ಚೌಕಟ್ಟು ಒಂದು ಸ್ಟೇಟ್‌ನೊಳಗಡೆ ವಿಭಿನ್ನ ಜನಾಂಗೀಯ ನೇಷನ್‌ಗಳು ಒಟ್ಟಿಗೆ ಪ್ರಭುತ್ವದೊಳಗಡೆ ಬದುಕಲು ಅವಕಾಶವನ್ನು ನೀಡುವ ಮೂಲಕ ಪ್ರತಿಯೊಂದು ಜನಾಂಗೀಯ ಗುಂಪುಗಳಿಗೆ ಸ್ವಾಯತ್ತತೆಯನ್ನು ನೀಡುತ್ತದೆ' (Moreno. L:2001,

ಸ್ಟೀಫನ್ ಎ:1999, ವಾಟ್ಸ್ ರೋನಾಲ್ಡ್. ಎಲ್:2008).

ಈ ಮೇಲಿನ ಚರ್ಚೆಗಳನ್ನು ಗಮನಿಸಿದರೆ ಫೆಡರಲಿಸಂ ಕುರಿತಾದ ಚರ್ಚೆಯಲ್ಲಿರುವ ಸಂಘರ್ಷಗಳು ಸಂಪೂರ್ಣವಾಗಿ ಯುರೋಪಿನಲ್ಲಿ ಹುಟ್ಟಿಕೊಂಡಿದ್ದು, ಅಲ್ಲಿ ವಿವಿಧ ಜನಾಂಗೀಯ ಮತ್ತು ಭಾಷಾ ಗುಂಪುಗಳಿದ್ದೂ, ಅವುಗಳಿಗೆ ಅದರದೇ ನೇಷನ್, ರಿಲಿಜನ್ನು ಮತ್ತು ಭಾಷೆ ಇರುತ್ತದೆ. ಈ ವಿಭಿನ್ನ ಜನಾಂಗೀಯ ಗುಂಪುಗಳ ನಡುವೆ ಜನಾಂಗೀಯ ಅಸ್ಮಿತೆಗಾಗಿ, ಸ್ವಾಯತ್ತತೆಯ ಬೇಡಿಕೆಗಾಗಿ ಸಂಘರ್ಷಗಳು ನಡೆಯುತ್ತವೆ. ಹಾಗಾಗಿ ಫೆಡರಲಿಸಂ ಚರ್ಚೆಯ ಸಂದರ್ಭದಲ್ಲಿ ಒಂದು ನಿರ್ದಿಷ್ಟ ನೇಷನ್, ರಿಲಿಜನ್ನು ಮತ್ತು ಭಾಷೆ ಇವುಗಳನ್ನು ಎಥ್ನಿಸಿಟಿಯ ಅರ್ಥದಲ್ಲಿ ಗ್ರಹಿಸುತ್ತವೆ. ಅಂದರೆ ಯೂರೋಪಿನಲ್ಲಿ ಫ್ರೆಂಚ್, ಡಚ್, ಜೆಕ್, ಸ್ಲೋವಾಕ್ ಮುಂತಾದ ವಿಭಿನ್ನ ಸಮುದಾಯಗಳಿದ್ದು, ಅವುಗಳ ನಡುವೆ ರಾಜಕೀಯ ಸ್ವಾಯತ್ತತೆಗಾಗಿ ಸಂಘರ್ಷವಾಗುವಾಗ ಅದರ ಪರಿಹಾರ ಮಾರ್ಗವಾಗಿ ಫೆಡರಲಿಸಂ ಚರ್ಚೆ ಇಲ್ಲಿ ಕೇಂದ್ರ ವಿಚಾರವಾಗಿದೆ. ಈ ರೀತಿಯ ಜನಾಂಗೀಯ ಸಮುದಾಯಗಳನ್ನು ಹೊರತುಪಡಿಸಿ ಸ್ವಾಯತ್ತತೆ ಕುರಿತು ಚರ್ಚೆ ಮಾಡಲು ಸಾಧ್ಯವಿಲ್ಲ.

**ಭಾರತೀಯ ಸಂದರ್ಭದಲ್ಲಿ ಫೆಡರಲಿಸಂನ ಚರ್ಚೆ**

ಈಗಾಗಲೇ ನಾವು ಗಮನಿಸಿದಂತೆ ವಿವಿಧ ಎಥ್ನಿಕ್ ಸಮುದಾಯಗಳ ನಡುವೆ ರಾಜಕೀಯ ಸ್ವಾಯತ್ತತೆಗಾಗಿ ಹೋರಾಟವು ನಡೆದಾಗ ಪರಿಹಾರೋಪಾಯವಾಗಿ ಫೆಡರಲಿಸಂ ಯುರೋಪಿನ ಸಂಸ್ಕೃತಿಯಲ್ಲಿ ಬೆಳೆದು ಬಂದಿತು. ಹಾಗಿದ್ದರೆ ಭಾರತದ ಸಂದರ್ಭದಲ್ಲಿ ಫೆಡರಲಿಸಂ ಕುರಿತು ಚರ್ಚೆ ಮಾಡಬೇಕಾದರೆ ಈ ತರಹದ ಜನಾಂಗೀಯ ಸಮುದಾಯಗಳು ಅಸ್ತಿತ್ವದಲ್ಲಿವೆಯೇ? ಭಾರತದ ಸಂದರ್ಭದಲ್ಲಿ ಚರ್ಚೆಯಾಗುತ್ತಿರುವ ಸ್ವಾಯತ್ತತೆಯ ಸ್ವರೂಪವೇನು? ಎಂಬುದನ್ನು ಪರಿಶೀಲಿಸುವುದು ಪ್ರಮುಖವಾಗುತ್ತದೆ.

ಭಾರತಕ್ಕೆ ಸ್ವಾತಂತ್ರ್ಯ ದೊರೆಯುವ ಸಂದರ್ಭದಲ್ಲಿ ಮುಸ್ಲಿಂಲೀಗ್ ಬೇಡಿಕೆಯಂತೆ ದೇಶ ವಿಭಜನೆಗೊಂಡು ಪಾಕಿಸ್ತಾನದ ಉದಯವಾಯಿತು. ಇದರೊಡನೆ ಭಾರತದಲ್ಲಿ ಅಂದು ಅಸ್ತಿತ್ವದಲ್ಲಿದ್ದ ಬ್ರಿಟಿಷ್ ಪ್ರಾಂತ್ಯಗಳು ಮತ್ತು 500ಕ್ಕೂ ಹೆಚ್ಚಿನ ದೇಶಿಯ ಸಂಸ್ಥಾನಗಳನ್ನು ಒಗ್ಗೂಡಿಸುವ ಮೂಲಕ 1947ರ ಭಾರತ ಸ್ವತಂತ್ರ ಕಾಯಿದೆಯ ನಿಬಂಧನೆಗಳು ಭಾರತದ ಐಕ್ಯತೆಗೆ ತೊಡಕಾಗುವಂತೆ ರಚನೆಗೊಂಡಿದ್ದವು. ಈ ಎಲ್ಲಾ ಬೆಳವಣಿಗೆಗಳೊಡನೆ ಭಾಷೆ, ಧರ್ಮ, ಸಂಸ್ಕೃತಿ ಮುಂತಾದವುಗಳಲ್ಲಿ ಭಾರತವು ವೈವಿಧ್ಯಮಯ ದೇಶವಾಗಿದ್ದೂ, ಈ ವೈವಿಧ್ಯತೆಯ ನಡುವೆ ಏಕತೆಯನ್ನು ಕಾಪಾಡಬಲ್ಲ ರಾಜಕೀಯ ವ್ಯವಸ್ಥೆಯನ್ನು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅಳವಡಿಸಲು ಮುಂದಾದಾಗ ಸಂವಿಧಾನ ರಚನಾ ಸಭೆಯು 'ರಾಜ್ಯಗಳ ಒಕ್ಕೂಟ ವ್ಯವಸ್ಥೆ'ಯನ್ನು ಅದರಲ್ಲೂ ಮುಖ್ಯವಾಗಿ 'ಪ್ರಬಲ ಕೇಂದ್ರವಾಗಿರುವ ರಾಜ್ಯಗಳ ಒಕ್ಕೂಟ'ವನ್ನು ಭಾರತದಲ್ಲಿ ಅಳವಡಿಸಲಾಯಿತು. ಕಾಲನಂತರದಲ್ಲಿ ಭಾರತದ ರಾಜಕೀಯ ವ್ಯವಸ್ಥೆಯ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳು ಸ್ವಾಯತ್ತತೆಯ ಹೆಸರಿನಲ್ಲಿ ಬೇಡಿಕೆಗಳನ್ನಿಡಲು ಪ್ರಾರಂಭಿಸಿದವು. ಅಷ್ಟೇ ಅಲ್ಲದೇ ಕೆಲವು ಚಿಂತಕರು ಭಾರತದ ಒಕ್ಕೂಟ ವ್ಯವಸ್ಥೆಯನ್ನು ಫೆಡರಲ್ ವ್ಯವಸ್ಥೆಯೆಂದೇ ಗುರುತಿಸುವ ಮೂಲಕ ರಾಜ್ಯಗಳ ಸ್ವಾಯತ್ತತೆಯನ್ನು ಮುನ್ನೆಲೆಗೆ ತರುತ್ತಿದ್ದಾರೆ.

ಅಂದರೆ ಭಾರತ ಮತ್ತು ವಿದೇಶಿ ಸರ್ಕಾರದ ಕೆಲವು ವಿದ್ವಾಂಸರು ಭಾರತವನ್ನು ಅರೆ ಸಂಯುಕ್ತ ಎಂದು ವರ್ಣಿಸುತ್ತಾರೆ ಮತ್ತೆ ಕೆಲವರು ಅದನ್ನು ಸಂಯುಕ್ತ ವ್ಯವಸ್ಥೆಗಿಂತ ಹೆಚ್ಚು ಏಕೀಕೃತ ಎಂದು ಪರಿಗಣಿಸುತ್ತಾರೆ. ಜಿ.ಎನ್ ಜೋಶಿಯವರು ಹೇಳುವಂತೆ 'ಭಾರತ ಒಕ್ಕೂಟವು ಕಟ್ಟುನಿಟ್ಟಾಗಿ ಒಂದು ಫೆಡರಲ್ ರಾಜನೀತಿಯಲ್ಲ, ಆದರೆ ಏಕತ್ಮಾಕತೆಯ ಕೆಲವು ಪ್ರಮುಖ ಅಂಶಗಳನ್ನು ಹೊಂದಿರುವ ಅರೆ ಫೆಡರಲ್ ರಾಜಕೀಯ ವ್ಯವಸ್ಥೆಯಾಗಿದೆ. ಇದು ಸಾಮಾನ್ಯ ಸಮಯದಲ್ಲಿ ಫೆಡರಲ್ ಸರ್ಕಾರವಾಗಿ ಕೆಲಸ ಮಾಡಲು ವಿನ್ಯಾಸಗೊಳಿಸಲಾಗಿದೆ. ಆದರೆ ತುರ್ತು ಸಂದರ್ಭಗಳಲ್ಲಿ ಏಕೀಕೃತ ಸರ್ಕಾರವಾಗಿ ಕಾರ್ಯನಿರ್ವಹಿಸುತ್ತದೆ'(Joshi:1954:32). ಜೆ.ಪಿ ಸೂಡಾ ಹೇಳುವಂತೆ 'ಭಾರತವು ಒಂದು ಸಂಯುಕ್ತವಾಗಿದ್ದರೂ, ಅದರ ಸಂವಿಧಾನವು ಹಲವಾರು ಪ್ರಮುಖ ಮತ್ತು ಮಹತ್ವದ ಮಾರ್ಗಗಳಲ್ಲಿ ನಿಜವಾದ ಸಂಯುಕ್ತತೆಯ ಆದರ್ಶದಿಂದ ದೂರ ಸರಿಯುತ್ತದೆ ಎಂಬುದನ್ನು ನೆನಪಿನಲ್ಲಿಡಬೇಕು. ಆದರೆ ಭಾರತವು ಏಕೀಕೃತ ರಾಜ್ಯದ ಹಲವಾರು ಲಕ್ಷಣಗಳನ್ನು ಹೊಂದಿರುವ ಅರೆ ಸಂಯುಕ್ತವಾಗಿದೆ' (Suda:1951:523) ಎಂದು ಹೇಳುತ್ತಾರೆ. ಐವರ್ ಜೆನ್ನಿಂಗ್ಸ್ ತಿಳಿಸುವಂತೆ 'ಭಾರತವು ಬಲವಾದ ಕೇದ್ರಿಕೃತ ಪ್ರವೃತ್ತಿಯನ್ನು ಹೊಂದಿರುವ ಒಂದು ಸಂಯುಕ್ತ ವ್ಯವಸ್ಥೆಯನ್ನು ಹೊಂದಿದೆ' (Jennings:1953:1).

ಈ ಮೇಲಿನ ಚಿಂತಕರ ವಾದದ ತಿರುಳೇನೆಂದರೆ ಭಾರತದಲ್ಲಿ ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಅಧಿಕಾರವನ್ನು ನೀಡುವ ಮೂಲಕ ರಾಜ್ಯದ ಸ್ವಾಯತ್ತತೆಯನ್ನು ನಿರ್ನಾಮ ಮಾಡಲಾಗುತ್ತಿದೆ ಎನ್ನುತ್ತಾರೆ. ಒಕ್ಕೂಟ ಸರ್ಕಾರವು ನಿರ್ಣಾಯಕ ಅಧಿಕಾರಗಳನ್ನು ಹೊಂದಿದ್ದರು ಸಹ ಭಾರತವು ಒಂದು ಒಕ್ಕೂಟ ವ್ಯವಸ್ಥೆಯೇ? ಎಂದು ಸಂದೇಹಿಸುತ್ತಾರೆ. ಹಾಗೆಯೇ ಭಾರತೀಯ ಸಂಯುಕ್ತ ವ್ಯವಸ್ಥೆಯಲ್ಲಿ ಕೇಂದ್ರವೇ ಹೆಚ್ಚಿನ ಅಧಿಕಾರವನ್ನು ಪಡೆದುಕೊಂಡಿದೆ ಎಂದು ಕೆಲವರು ಇದನ್ನು 'ಹುಸಿ ಸಂಯುಕ್ತ' ಎಂದು ಕರೆದರೆ ಇನ್ನೂ ಕೆಲವರು 'ಅರೆ ಸಂಯುಕ್ತ' ಎಂದು ಕರೆಯುವುದರ ಮೂಲಕ ಭಾರತವು ಒಂದು ಒಕ್ಕೂಟ ವ್ಯವಸ್ಥೆಯಲ್ಲ ಎನ್ನುವ ರೀತಿಯಲ್ಲಿ ವಿವರಣೆಯನ್ನು ನೀಡುವ ಮೂಲಕ ಮೂಲ ಅರ್ಥದ ದಾರಿ ತಪ್ಪಿಸುವ ಕೆಲಸವನ್ನು ಮಾಡುತ್ತಿದ್ದಾರೆ.

ರಾಜ್ಯಗಳ ಸ್ವಾಯತ್ತತೆಯ ಕುರಿತಾದ ಚರ್ಚೆಯ ವಿಷಯಕ್ಕೆ ಪ್ರವೇಶಿಸುವುದಾದರೆ ಕೆಲವು ಚಿಂತಕರು ಭಾರತದಲ್ಲಿ ರಾಜ್ಯಗಳ ಸ್ವಾಯತ್ತತೆಯ ಕುರಿತು ಈ ಮುಂದಿನಂತೆ ಉಲ್ಲೇಖಿಸುತ್ತಾರೆ. ಅದೇನೆಂದರೆ "ಭಾರತ ಸಂವಿಧಾನದ ಪರಿಚ್ಛೇದ 1ರ ಅನುಸಾರ ಇಂಡಿಯಾ/ ಭಾರತವು ರಾಜ್ಯಗಳ ಒಕ್ಕೂಟವಾಗಿದೆ. ಆಗಿನ ಭಾರತದ ಸಂದರ್ಭದಲ್ಲಿ ಕೇಂದ್ರವೆಂದರೆ ಒಕ್ಕೂಟವೆಂದು ಅರ್ಥೈಸಲಾಗಿತ್ತು. ನಂತರ 1956ರಲ್ಲಿ ಭಾಷೆಯ ಆಧಾರದಲ್ಲಿ ರಾಜ್ಯಗಳನ್ನು ಪುನರ್ವಿಂಗಡಣೆ ಮಾಡಲಾಯಿತು. ಈ ಒಕ್ಕೂಟ ವ್ಯವಸ್ಥೆಯ ವಿಶೇಷತೆಗಳೆಂದರೆ ಕೇಂದ್ರ ಸರ್ಕಾರ/ ರಾಜ್ಯಸರ್ಕಾರ, ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರದ ಹಂಚಿಕೆ (ಸಂವಿಧಾನದ 7ನೇ ಶೆಡ್ಯೂಲ್), ಸಂವಿಧಾನದ ಪರಮಾಧಿಕಾರ (ಅದರ ಮೂಲ ಸಂರಚನೆಯನ್ನು ಶಾಸಕಾಂಗ ಮತ್ತು ಕಾರ್ಯಾಂಗಕ್ಕೆ ಬದಲಿಸಲು ಅಧಿಕಾರವಿಲ್ಲ), ಸ್ವತಂತ್ರ ನ್ಯಾಯಾಂಗ, ಸ್ವತಂತ್ರ ಚುನಾವಣಾ ಆಯೋಗ, ದ್ವಿಸದನ ಮುಂತಾದವು. ಆದರೆ ದಶಕಗಳಿಂದಲೂ ಒಕ್ಕೂಟ ವ್ಯವಸ್ಥೆಯ ಈ ವಿಶೇಷ ಹಂಚಿಕೆಗಳು ನಾಮಾಕವಸ್ತೆಯಾಗಿ ಕಾಗದದ

ಮೇಲೆ ಮಾತ್ರ ಉಳಿದುಕೊಂಡಿವೆ. ಕೇಂದ್ರ ಸರ್ಕಾರವು ಸಂಪೂರ್ಣ ಅಧಿಪತ್ಯವನ್ನು ಪಡೆದುಕೊಂಡಿದೆ. ರಾಜ್ಯಗಳಿಗೆ ಸಂವಿಧಾನಬದ್ಧ ಸ್ವಾಯತ್ತತೆ ಇದ್ದರೂ ಸಹ ವಾಸ್ತವದಲ್ಲಿ ಕೇಂದ್ರದ ಮರ್ಜಿಯಲ್ಲಿ ಆಡಳಿತ ನಡೆಸುವಂತಹ ಪರಿಸ್ಥಿತಿ ಇದ್ದೂ, ಒಕ್ಕೂಟ ವ್ಯವಸ್ಥೆಯು ಮತ್ತಷ್ಟು ದುರ್ಬಲಗೊಂಡು ಕೇಂದ್ರ ಸರ್ಕಾರವೆನ್ನುವುದು ಒಂದು ಸರ್ವಾಧಿಕಾರದ ಆಡಳಿತವಾಗಿ ಮಾರ್ಪಟ್ಟಿದೆ" . "ಭಾರತ ಸಂವಿಧಾನವು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ರಚನೆ, ಅಧಿಕಾರಗಳ ವ್ಯಾಪ್ತಿ ಮತ್ತು ಕಾರ್ಯಗಳನ್ನು ನಿರ್ದಿಷ್ಟಗೊಳಿಸಿರುತ್ತದೆ. ಇಲ್ಲಿ ರಾಜ್ಯ ಸರ್ಕಾರಗಳಿಗೆ ತಮ್ಮದೇ ಆದ ಸ್ವತಂತ್ರ ಸಂವಿಧಾನಗಳಿರುವುದಿಲ್ಲ. ರಾಜ್ಯ ಸರ್ಕಾರಗಳು ಸಂವಿಧಾನಕ್ಕೆ ತಿದ್ದುಪಡಿ ಮಾಡುವ ಮಸೂದೆಗಳನ್ನು ಮಂಡಿಸುವ ಹಕ್ಕನ್ನು ಪಡೆದಿರುವುದಿಲ್ಲ. ಏಕೆಂದರೆ ಕೇವಲ ಸಂಸತ್ತು ಮಾತ್ರ ಸಂವಿಧಾನಕ್ಕೆ ತಿದ್ದುಪಡಿ ಮಾಡುವ ಮಸೂದೆಗಳನ್ನು ಮಂಡಿಸಬಲ್ಲದು. ಸಂಯುಕ್ತವಾದದ ಪ್ರಕಾರ ಕೇಂದ್ರ ರಾಜ್ಯಗಳು ಸಮನಾದ ಅಧಿಕಾರ ಹೊಂದಿರಬೇಕು. ಶೇಷಾಧಿಕಾರಗಳು ರಾಜ್ಯಗಳಿಗೆ ಇರಬೇಕು. ಆದರೆ ಭಾರತದಲ್ಲಿ ಶೇಷಾಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ನೀಡಲಾಗಿದೆ. ಇವುಗಳಲ್ಲದೆ ಏಕೀಕೃತ ನ್ಯಾಯಾಂಗ ವ್ಯವಸ್ಥೆ, ಏಕ ನಾಗರೀಕತ್ವ, ಕೇಂದ್ರ ಸರ್ಕಾರದಿಂದ ರಾಜ್ಯಪಾಲರ ನೇಮಕ, ಅಖಿಲ ಭಾರತ ಲೋಕಸೇವಾ ಆಯೋಗಗಳು, ತುರ್ತು ಪರಿಸ್ಥಿತಿಗಳಲ್ಲಿ 356ನೇ ವಿಧಿಯನ್ವಯ ರಾಜ್ಯ ಸರ್ಕಾರಗಳ ವಜಾ ಮುಂತಾದವುಗಳು ಭಾರತ ಸಂಯುಕ್ತ ಪದ್ದತಿಯಲ್ಲಿ ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಸ್ಥಾನ ಕೊಟ್ಟಂತಾಗಿದೆ. ಇವುಗಳನ್ನು ಗಮನಿಸಿದಾಗ ಭಾರತವು ಕೇಂದ್ರೀಕೃತ ಸಂಯುಕ್ತವಾದಕ್ಕೆ ಉತ್ತಮ ಉದಾಹರಣೆಯಾಗಿದೆ" (ಬಸು. ಡಿ. ಡಿ:1978:ಕಂಪೆರೀಟಿವ್ ಫೆಡರಲಿಸಂ:10) ಎಂದು ತಿಳಿಸುತ್ತಾರೆ.

ಒಂದು ದೇಶ ಒಂದು ಚುನಾವಣೆಯ ಭಾಗವಾಗಿ ರಾಜ್ಯಗಳ ಸ್ವಾಯತ್ತತೆಯ ಚರ್ಚೆಯನ್ನು ಈ ಮುಂದಿನಂತೆ ಉಲ್ಲೇಖಿಸುತ್ತಾರೆ. "ಭಾರತವು ಒಕ್ಕೂಟ ತತ್ವಕ್ಕೆ ವಿರುದ್ಧವಾಗಿ ಏಕೀಕೃತ ವ್ಯವಸ್ಥೆಯಾಗಿ ರೂಪುಗೊಂಡಿದೆ. ಇದನ್ನು ಒಕ್ಕೂಟ ಸರ್ಕಾರವು ವಿವಿಧ ಬಗೆಗಳಲ್ಲಿ ನಡೆಸುತ್ತಿದೆ. ಇದು ಕೇವಲ ರಾಜಕೀಯ ಬೆಳವಣಿಗೆ ಮಾತ್ರವಲ್ಲ. ರಾಜ್ಯಗಳ ವಿತ್ತೀಯ ಸ್ವಾಯತ್ತತೆಯನ್ನು ಕಿತ್ತುಕೊಳ್ಳಲಾಗಿದೆ. ರಾಜ್ಯಗಳ ಸಾಮಾಜಿಕ ಶೈಕ್ಷಣಿಕ ಸ್ವಾತಂತ್ರ್ಯಕ್ಕೆ ಅಂಕುಶ ಹಾಕಲಾಗುತ್ತಿದೆ. ಒಂದು ದೇಶ; ಒಂದು ಮಾರುಕಟ್ಟೆ, ಒಂದು ದೇಶ; ಒಂದು ತೆರಿಗೆ, ಒಂದು ದೇಶ; ಒಂದು ರೇಷನ್ ಕಾರ್ಡ್, ಒಂದು ದೇಶ; ಒಂದು ಶಿಕ್ಷಣ ಮುಂತಾದ ಆಳುವ ಸರ್ಕಾರದ ಘೋಷಣೆಗಳು ನೇರವಾಗಿ ಒಕ್ಕೂಟ ತತ್ವಕ್ಕೆ ಅಪಾಯಕಾರಿಯಾಗಿವೆ. ಒಂದು ದೇಶ; ಒಂದು ಚುನಾವಣೆ ಎನ್ನುವುದು ರಾಜ್ಯಗಳ ರಾಜಕೀಯ ಸ್ವಾಯತ್ತತೆ–ಆರ್ಥಿಕ ಸ್ವಾತಂತ್ರ್ಯಗಳ ಮೇಲೆ ನಿಯಂತ್ರಣ ಹೇರುವ ಕ್ರಮವಾಗಿದೆ. ಈ ಕ್ರಮದ ಮೂಲಕ ರಾಜ್ಯ ಸರ್ಕಾರಗಳ ಚುನಾವಣೆಗಳನ್ನು ಒಕ್ಕೂಟ ಸರ್ಕಾರದ ಅಗತ್ಯಕ್ಕೆ ತಕ್ಕಂತೆ ಬಗ್ಗಿಸಿಕೊಳ್ಳುವ ಒಂದು ರಾಜಕೀಯ ಪಿತೂರಿಯಾಗಿದೆ. ಉದಾ: ರಾಜ್ಯಗಳಲ್ಲಿ ಚುನಾಯಿತ ಸರ್ಕಾರದ ಅವಧಿಯು ಮುಗಿಯಲಿ–ಮುಗಿಯದಿರಲಿ ಅವುಗಳ ಆಯಸ್ಸನ್ನು ಒಕ್ಕೂಟ ಸರ್ಕಾರದ ಚುನಾವಣೆಗೆ ಸಮೀಕರಿಸಲಾಗುತ್ತದೆ. ಆದ್ದರಿಂದ ರಾಜ್ಯಗಳ ಸಂವಿಧಾನಾತ್ಮಕ ರಾಜಕೀಯ ಸ್ವಾತಂತ್ರ್ಯ ಸ್ವಾಯತ್ತತೆಯು ನಾಶವಾಗುತ್ತದೆ. ಈ ವ್ಯವಸ್ಥೆಯಲ್ಲಿ ರಾಜ್ಯಗಳು ಒಕ್ಕೂಟ ಸರ್ಕಾರದ ಅಧೀನಕ್ಕೊಳಗಾಗಬೇಕಾಗುತ್ತದೆ. ರಾಷ್ಟ್ರಮಟ್ಟದ ಪ್ರಶ್ನೆಗಳು ರಾಜ್ಯ

ಮಟ್ಟದ ಪ್ರಶ್ನೆಗಳಿಗಿಂತ ಭಿನ್ನವಾಗಿರುತ್ತವೆ. ಪ್ರತಿ ರಾಜ್ಯಗಳಲ್ಲಿಯೂ ಸಮಸ್ಯೆಗಳೂ ಒಂದೇ ತೆರನಾಗಿರುವುದಿಲ್ಲ. ಏಕಕಾಲದ ಚುನಾವಣೆ ಎನ್ನುವುದು ರಾಜ್ಯಗಳ ಅಸ್ತಿತ್ವವನ್ನೆ ಅಲುಗಾಡಿಸುತ್ತದೆ. ಪ್ರದೇಶ–ನಿರ್ದಿಷ್ಟ ಸಮಸ್ಯೆಗಳು ಇಲ್ಲಿ ನಿರ್ಲಕ್ಷಕ್ಕೆ ಒಳಗಾಗುತ್ತವೆ. ಇದೊಂದು ಪ್ರಜಾಪ್ರಭುತ್ವ ವಿರೋಧಿ ಮತ್ತು ಸರ್ವಾಧಿಕಾರಿ ಕ್ರಮವಾಗುತ್ತದೆ. ರಾಜಕೀಯ ಏಕರೂಪೀಕರಣ ಎನ್ನುವುದು ನಮ್ಮ ಬಹುತ್ವ ಸಂಸ್ಕೃತಿಗೆ, ಬಹುಭಾಷಾ ಸಂಸ್ಕೃತಿಗೆ, ರಾಜ್ಯಗಳ ಸ್ವಾಯತ್ತತೆಗೆ ಧಕ್ಕೆಯುಂಟು ಮಾಡುತ್ತದೆ" ಎಂದು ಹೇಳುತ್ತಾರೆ (ಚಂದ್ರಶೇಖರ್, ಟಿ, ಆರ್:2024:29).

ಒಟ್ಟಾರೆಯಾಗಿ ಭಾರತದ ಸಂದರ್ಭದಲ್ಲಿ ಒಕ್ಕೂಟ ವ್ಯವಸ್ಥೆಯನ್ನು ಫೆಡರಲ್ ವ್ಯವಸ್ಥೆಯೆಂದು ಕರೆದುಕೊಳ್ಳುವ ಮೂಲಕ ರಾಜ್ಯಗಳ ಸ್ವಾಯತ್ತತೆಯ ಚರ್ಚೆಗಳನ್ನು ಮುನ್ನೆಲೆಗೆ ತರುತ್ತಿರುವುದು ಈ ಮೇಲಿನ ಚಿಂತಕರ ವಾದದಿಂದ ಸ್ಪಷ್ಟವಾಗುತ್ತದೆ.

**ಸಮಾರೋಪ**

ಈಗಾಗಲೇ ಲೇಖನದ ಆರಂಭದಲ್ಲೇ ನಾವು ಗಮನಿಸಿದಂತೆ ಮೂಲಭೂತವಾಗಿ ಫೆಡರಲಿಸಂ ಎನ್ನುವ ಪರಿಕಲ್ಪನೆ ಯುರೋಪಿನಲ್ಲಿ ಹುಟ್ಟಿಕೊಂಡಿದ್ದು, ಅಲ್ಲಿ ಫೆಡರಲಿಸಂ ಕುರಿತಾಗಿ ಚರ್ಚೆ ಮಾಡುವಾಗ ನೇಷನ್, ರಿಲಿಜನ್, ಎಥ್ನಿಸಿಟಿ ಹಾಗೂ ಭಾಷೆ ಕೇಂದ್ರದ ವಿಚಾರವಾಗಿದೆ. ಆದರೆ ಅದೇ ಸಂದರ್ಭ ಭಾರತದಲ್ಲಿ ಒಕ್ಕೂಟ ವ್ಯವಸ್ಥೆಯನ್ನು ಫೆಡರಲಿಸಂ ಎಂದು ಅರ್ಥೈಸಿಕೊಂಡು ರಾಜ್ಯಗಳ ಸ್ವಾಯತ್ತತೆಯ ಬೇಡಿಕೆ ಸಂದರ್ಭದ ಚರ್ಚೆಗಳಲ್ಲಿ ರಿಲಿಜನ್, ಎಥ್ನಿಸಿಟಿ ಮತ್ತು ಭಾಷೆ ಇವುಗಳು ಎಲ್ಲಿಯೂ ಸಹ ಚರ್ಚೆಯ ವಿಷಯಗಳಾಗಿ ಕಂಡುಬರುವುದಿಲ್ಲ. ಅಂದರೆ ಯುರೋಪಿನ ಸಂದರ್ಭದಲ್ಲಿ ಎಥ್ನಿಸಿಟಿ, ನೇಷನ್ ಇತ್ಯಾದಿಗಳು ಫೆಡರಲಿಸಂ ಚಿಂತನೆಗೆ ಅತ್ಯನಿವಾರ್ಯವಾದ ಸಂಗತಿಗಳು ಎಂದು ಒಪ್ಪಿಕೊಂಡರೆ, ಭಾರತದಲ್ಲಿ ಫೆಡರಲಿಸಂನ ಹೆಸರಿನಲ್ಲಿ ನಡೆಯತ್ತಿರುವ ರಾಜಕೀಯ ಚಿಂತನೆಗೂ ಏನೂ ಸಂಬಂಧವಿಲ್ಲ ಎನ್ನಬೇಕಾಗುತ್ತದೆ ಅಥವಾ ಭಾರತದ ಸಂದರ್ಭದಲ್ಲಿ ಎಥ್ನಿಸಿಟಿ, ನೇಷನ್ ಇತ್ಯಾದಿ ಯಾವ ಪರಿಕಲ್ಪನೆಗಳೂ ಅನಿವಾರ್ಯವಾಗದೇ ನಡೆದ ರಾಜಕೀಯ ಚಿಂತನೆಗೂ ಫೆಡರಲಿಸಂ ಎನ್ನಬಹುದಾದರೆ, ಯುರೋಪಿನ ಸಂದರ್ಭದಲ್ಲಿ ನಡೆದ ರಾಜಕೀಯ ಚಿಂತನೆಗೆ ಫೆಡರಲಿಸಂನ್ನು ಈ ಪರಿಕಲ್ಪನೆಗಳನ್ನು ಬಿಟ್ಟು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಅಂದರೆ ಭಾರತದ ಸಂದರ್ಭದಲ್ಲಿ ನಾವು ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಅವರ ಚಾರಿತ್ರಿಕ ರಾಜಕೀಯ ಅನುಭವದಿಂದ ಹುಟ್ಟಿದ ಫೆಡರಲಿಸಂ ಪರಿಕಲ್ಪನೆ ಮತ್ತು ಪರಿಭಾಷೆಯ ಚೌಕಟ್ಟಿನಲ್ಲಿ ಭಾರತದ ರಾಜಕೀಯ ವಿದ್ಯಮಾನವನ್ನು ವಿವರಿಸಿಕೊಳ್ಳಲು ಹೊರಟಾಗ ನಮಗೆ ಬಹುಮುಖ್ಯವಾಗಿ ಎರಡು ಸಮಸ್ಯೆಗಳು ಎದುರಾಗುತ್ತವೆ. ಮೊದಲನೆಯದಾಗಿ ಭಾರತದ ರಾಜಕೀಯ ವಿದ್ಯಮಾನವನ್ನು ವಿವರಿಸಲು ಫೆಡರಲಿಸಂ ಎಂಬ ಪರಿಕಲ್ಪನೆಯನ್ನು ಬಳಸಿದಾಗ ಆ ಪರಿಕಲ್ಪನೆಯು ವಿಕೃತಗೊಂಡರೆ; ಎರಡನೆಯದಾಗಿ ಫೆಡರಲಿಸಂನ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಭಾರತದ ರಾಜಕೀಯ ವಿದ್ಯಮಾನದ ವಾಸ್ತವವಾಗಲಿ ಮತ್ತು ಸಮಸ್ಯೆಯಾಗಲಿ ನಮಗೆ ಅರ್ಥವಾಗುವುದಿಲ್ಲ.

ಹೀಗಿರುವಾಗ ನಮಗೆ ಇಲ್ಲಿ ಎದುರಾಗುವ ಬಹುಮುಖ್ಯವಾದ ಪ್ರಶ್ನೆಯೆಂದರೆ ಯುರೋಪಿನಲ್ಲಿ ಫೆಡರಲಿಸಂ ಕುರಿತಾದ ಚರ್ಚೆಗಳು ಭಾರತೀಯ ಸಂದರ್ಭದ

ಚರ್ಚೆಗಳಿಗೆ ಸಮೀಪವಿಲ್ಲದ ಮೇಲೆ ಭಾರತದಲ್ಲಿ ಫೆಡರಲಿಸಂ ಕುರಿತಾದ ಚರ್ಚೆಗಳು ಯಾವುದರ ಕುರಿತಾಗಿವೆ? ಭಾರತ ಅಳವಡಿಸಿಕೊಂಡಿರುವುದು ಸಂಯುಕ್ತ ವ್ಯವಸ್ಥೆಯೋ (ಫೆಡರಲಿಸಂ)? ಅಥವಾ ಒಕ್ಕೂಟ ವ್ಯವಸ್ಥೆಯೋ? ಭಾರತದ ಒಕ್ಕೂಟ ವ್ಯವಸ್ಥೆ ಮತ್ತು ಯುರೋಪಿನ ಫೆಡರಲಿಸಂ ಚರ್ಚೆಯಲ್ಲಿನ ಭಿನ್ನತೆಗೆ ಕಾರಣವೇನು? ಎಂಬ ಪ್ರಶ್ನೆಗಳನ್ನು ಈ ಲೇಖನವು ತೆರೆದಿಡುತ್ತದೆ.

**ಪರಾಮರ್ಶನ:**


- Stein, Eric. 1997. Czecho/Slovakia: Ethnic Conflict, Constitutional Fissure. Negotiated Breakup. Ann Arbor: University of Michigan Press.
- Krapfl, James. 2013. Revolution with a Human Face: Politics, Culture, and Community in Czechoslovakia, 1989–1992. Cornell University Press.
- Burg Steven,L. 1983. Conflict and cohesion in socialist Yugoslavia: Political Decision Making since 1966. Princeton University Press.
- Woodword susan L. 1995. Balkan Tragedy: chaos and Dissolution after the cold war. Brooking Institution Press.
- Guibernau, Montserrat. 2004. Catalan Nationalism: Francoism, Transition, and Democracy. Routledge.
- Agranoff, R. 1996. Federal Evolution in Spain, International Political Science Review, 17(4).
- Keating, M. 2001. Nations Against the State: The New Politics of Nationalism in Quebec, Catalonia, and Scotland, Palgrave Macmillan.
- Anderson, B. 1983. Imagined Communities: Reflections on the Origin and Spread of Nationalism.
- Moreno, L. 2001. The Federalization of Spain. Routledge.
- Stepan, A. 1999. Federalism and Democracy: Beyond the U.S. Model. Journal of Democracy.
- Watts, R. L. 2008. Comparing Federal Systems. McGill-Queen’s University Press.
- Lampe, John R. 2000. Yugoslavia as History: Twice There Was a Country, Cambridge University Press.
- Taylor, A. J. P. 1948. The Habsburg Monarchy 1809–1918. London: Macmillan.
- Okey, Robin. 2001. The Habsburg Monarchy: From Enlightenment to Eclipse. New York: St. Martin's Press.
- Fadia, B. L and Fadia Kuldeep. 2021. Indian Government and Politics. Agra: Sahitya Bhawan.
- Dodwell, H. H. The Cambridge History of India. Valume 6. New Delhi: S Chand And Company Ltd.
- ಸಂವಿಧಾನ ರಚನಾ ಸಭೆಯ ಚರ್ಚೆಗಳು. ನವೆಂಬರ್ 15, 1948. ಸಂಪುಟ 3. ಕುವೆಂಪು ಭಾಷಾಭಾರತಿ ಪ್ರಾಧಿಕಾರ.


❖❖❖

* ಚಿಂತನ ಬಯಲು ತ್ರೈಮಾಸಿಕ ಪತ್ರಿಕೆಯನ್ನು ವೃತ್ತಿಪರವಾಗಿ ನಡೆಸಿಕೊಂಡು ಹೋಗಬೇಕೆಂಬುದು ನಮ್ಮ ಅಪೇಕ್ಷೆ.
* ಈ ಪತ್ರಿಕೆ ISSN ಮಾನ್ಯತೆ ಪಡೆದಿರುತ್ತದೆ. ISSN 2278-2192
* ಯುಜಿಸಿ ಕೇರ್ ಲಿಸ್ಟ್‌ನಲ್ಲಿ ಇದೆ.
* ಗಂಭೀರ ಚಿಂತನೆಯನ್ನೊಳಗೊಂಡ ಲೇಖನಗಳು, ವಿಮರ್ಶಾ ಲೇಖನಗಳು ಹಾಗೂ ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಣೆಗಾಗಿ ಆಹ್ವಾನಿಸುತ್ತಿದ್ದೇವೆ.
* ಇಲ್ಲಿ ಪ್ರಕಟವಾಗುವ ಲೇಖನಗಳ ಗುಣಮಟ್ಟವನ್ನು ಉಳಿಸಿ ಬೆಳೆಸುವುದಕ್ಕಾಗಿ, ಲೇಖನಗಳನ್ನು ಆಯಾ ಕ್ಷೇತ್ರಗಳಲ್ಲಿ ಪರಿಣತರಾದವರಿಂದ ಸಮೀಕ್ಷೆ ಮಾಡಿಸಿ, ಅಂದರೆ, ಅನಾಮಿಕ ಸಂಪಾದಕರಿಂದ ಅಭಿಪ್ರಾಯ ಪಡೆದು ಪ್ರಕಟಿಸಲಾಗುವುದು. ತಜ್ಞರ ಸೂಚನೆಗಳನ್ನು ಅನುಸರಿಸಿ, ಅವಶ್ಯವೆನಿಸಿದರೆ, ಸೂಕ್ತ ಪರಿಷ್ಕರಣೆಗಳನ್ನು ಮಾಡುವಂತೆ ಲೇಖಕರನ್ನು ಕೋರಲಾಗುವುದು.
* ಲೇಖನಗಳಿಗೆ ಬಹಳ ಕಟ್ಟುನಿಟ್ಟಾದ ಪದಗಳ ಮಿತಿ ಇಲ್ಲ.
* ಯಾವುದೇ ಆಧಾರಗಳಿಲ್ಲದೆ, ಕೇವಲ ಹೇಳಿಕೆ, ಅಭಿಪ್ರಾಯ ರೂಪದ ಬರಹಗಳನ್ನು ದಯವಿಟ್ಟು ಕಳುಹಿಸುವುದು ಬೇಡ. ಅಗತ್ಯವಿರುವ ಕಡೆಗಳಲ್ಲಿ ಟಿಪ್ಪಣಿ, ಪರಾಮರ್ಶನ ಗ್ರಂಥಗಳು ಇತ್ಯಾದಿ ಮಾಹಿತಿಗಳನ್ನು ಲೇಖನಗಳು ಹೊಂದಿರಲಿ.
* ಲೇಖನಗಳು ಬೇರೆ ಕಡೆ ಪ್ರಕಟವಾಗಿರಬಾರದು. ಜಾಲಲೇಖ (ಬ್ಲಾಗ್)ಗಳಲ್ಲಿ ಪ್ರಕಟವಾಗಿದ್ದರೆ ವಿವರಗಳನ್ನು ನೀಡಬೇಕು. ಅನುವಾದಿತ ಲೇಖನಗಳಾದರೆ ಮೂಲದ ಬಗ್ಗೆ ಪೂರ್ಣವಿವರ ಹಾಗೂ ಮೂಲಲೇಖಕರ ಅನುಮತಿ ಇತ್ಯಾದಿ ತಾಂತ್ರಿಕ ಆವಶ್ಯಕತೆಗಳನ್ನು ಪೂರೈಸಿರಬೇಕು.
* ಲೇಖನಗಳನ್ನು ನುಡಿ ತಂತ್ರಾಂಶದಲ್ಲಿ ವರ್ಡ್‌ಫೈಲ್‌ನಲ್ಲಿ ಕಳುಹಿಸಬೇಕು. (ಯೂನಿಕೋಡ್ ಬೇಡ)
* ಲೇಖಕರು ತಮ್ಮ ಪೂರ್ಣ ಅಂಚೆ ವಿಳಾಸ, ಮಿಂಚಂಚೆ ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು.
* ಚಂದಾ ಕಳುಹಿಸಿದವರು ದಯವಿಟ್ಟು ಆ ಬಗ್ಗೆ ವಿವರವನ್ನು ಈಮೇಲ್ ಮೂಲಕ ಅಥವಾ ಪತ್ರ ಮೂಲಕ ತಿಳಿಸಬೇಕು. ಈಗಾಗಲೇ ಕೆಲವು ಚಂದಾ ಬಂದುದು ಯಾರಿಂದ ಎಂದು ಗೊತ್ತಾಗದೆ ಪತ್ರಿಕೆ ಕಳುಹಿಸಲು ಸಾಧ್ಯವಾಗುತ್ತಿಲ್ಲ.
* ಸಂಪರ್ಕ ವಿಳಾಸ : ಸಂಪಾದಕರು, ಚಿಂತನ ಬಯಲು, ನಂ. 15–109
  ಮೊಡಂಕಾಪು ಅಂಚೆ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ–574219
  ಮಿಂಚಂಚೆ : chinthanabayalu@gmail.com
  ಜಾಲತಾಣ : www.chinthanabayalu.in

**RNI Reg No. : KARKAN /2012/49251**

**CHINTHANA BAYALU** **A Peer Reviewed Journal** **ISSN 2278-2192**
**Kannada Quarterly, Volume 13, Issue 4, April - June 2025**
Included in UGC - CARE List
Edited, Published, Printed & Owned by

**Reshma G. Bhat**
Door No. 15-109, Modankapu Post
Bantwal Taluk, Dakshina Kannada - 574 219
chinthanabayalu@gmail.com
**www.chinthanabayalu.in**

Printed at
**Aakrithi Prints**
Light House Hill Road, Mangaluru - 575 001
**Pages : 232**

ವಾರ್ಷಿಕ ಚಂದಾ : ರೂಪಾಯಿ ಇನ್ನೂರು
(ಅಂಚೆ ವೆಚ್ಚ ಸೇರಿ)
ಮೂರು ವರ್ಷಗಳಿಗೆ : ರೂಪಾಯಿ ಆರುನೂರು
ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ
ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ
ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ
ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

**ಕರ್ಣಾಟಕ ಬ್ಯಾಂಕ್**

ಬಂಟ್ವಾಳ ಮೂಡ ಶಾಖೆಯಲ್ಲಿ
**ಚಿಂತನ ಬಯಲು** ಹೆಸರಿನಲ್ಲಿರುವ

**ಕರೆಂಟ್ ಅಕೌಂಟ್ ಸಂಖ್ಯೆ : 0712000100041401**

**IFSC : KARB0000071**

**ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444 ಗೆ ಕರೆ ಮಾಡಿರಿ.**

**ಕರ್ಣಾಟಕ ಬ್ಯಾಂಕ್ ಲಿ.**
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com